ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು - ಕೋಲಾರ ಜಿಲ್ಲೆಯ ಒಂದು ಅಧ್ಯಯನ

ಕನ್ನಡ ವಿಶ್ವ ವಿದ್ಯಾಲಯ, ಹಂಪಿಗೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು

ಎಚ್. ಸೋಮಶೇಖರ್

ಮಾರ್ಗದರ್ಶಕರು

ಡಾ. ಶ್ರೀಧರ್ .ಎ

ಅರ್ಥಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ, ವಿದ್ಯಾರಣ್ಯ

ಮಾರ್ಚ್ ೨೦೦೯

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು - ಕೋಲಾರ ಜಿಲ್ಲೆಯ ಒಂದು ಅಧ್ಯಯನ

ಕನ್ನಡ ವಿಶ್ವ ವಿದ್ಯಾಲಯ, ಹಂಪಿಗೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು

ಎಚ್. ಸೋಮಶೇಖರ್

ಮಾರ್ಗದರ್ಶಕರು

ಡಾ. ಶ್ರೀಧರ್ .ಎ

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ, ವಿದ್ಯಾರಣ್ಯ
ಮಾರ್ಚ್ ೨೦೦೯

ದೃಢೀಕರಣ ಪತ್ರ

ಶ್ರೀ ಸೋಮಶೇಖರ್ .ಎಚ್, ಅವರು **ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು-ಕೋಲಾರ ಜಿಲ್ಲೆಯ ಒಂದು ಅಧ್ಯಯನ** ಎಂಬ ವಿಷಯ ಕುರಿತು ಪಿಎಚ್‌ಡಿ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಪಿಎಚ್‌ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ : 17.04.09

ಸ್ಥಳ : ವಿದ್ಯಾರಣ್ಯ

ಡಾ. ಶ್ರೀಧರ್ .ಎ

ಮಾರ್ಗದರ್ಶಕರು,

ಅಭಿವೃದ್ಧಿ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ,

ಹಂಪಿ.

ಪ್ರಮಾಣ ಪತ್ರ

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು- ಕೋಲಾರ ಜಿಲ್ಲೆಯ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿ.ಎಚ್.ಡಿ., ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯದ ಅಭಿವೃದ್ಧಿ ಅಧ್ಯಯನಕ್ಕಾಗಿ ಡಾ. ಶ್ರೀಧರ್.ಎ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಸೋಮಶೇಖರ್ .ಎಚ್
ಸಹಾಯಕ ಪ್ರಾಧ್ಯಾಪಕರು (ಆಯ್ಕೆ ಶ್ರೇಣಿ)
ರೇಷ್ಮೆ ವಿದ್ಯಾಲಯ,
ಚಿಂತಾಮಣಿ - 563125.
ಚಿಕ್ಕಬಳ್ಳಾಪುರ ಜಿಲ್ಲೆ.

ಪರಿವಿಡಿ

ಕೋಷ್ಟಕಗಳ ಪಟ್ಟಿ

ಪರಿಶಿಷ್ಟ-1

ಪರಿಶಿಷ್ಟ-2

<u>ಪರಿಶಿಷ್ಟ-3</u>

ರೇಖಾ ಚಿತ್ರಗಳು

ಪ್ರಸ್ತಾವನೆ

ಅಭಿವೃದ್ಧಿಯ ಅರ್ಥ

ಅಭಿವೃದ್ಧಿ ಎಂಬ ಪದವನ್ನು ನಾನಾ ಸನ್ನಿವೇಶಗಳಲ್ಲಿ ಉಪಯೋಗಿಸುತ್ತಾರೆ. ಅಭಿವೃದ್ಧಿ ಎಂದರೇನು ಎಂಬುದಕ್ಕೆ ಇನ್ನೂ ಸಮಾಧಾನಕರ ವ್ಯಾಖ್ಯಾನ ಸಿಕ್ಕಿಲ್ಲ ಇದನ್ನು ವಿಶ್ವಸಂಸ್ಥೆಯ ಗುಂಪಿನ ತಜ್ಞರು ಖಚಿತಪಡಿಸಿದ್ದಾರೆ. ಅಭಿವೃದ್ಧಿಯನ್ನು ರಾಷ್ಟ್ರದ ಆದಾಯದ ಮೂಲಕ ವಿಶ್ಲೇಷಿಸುವ ಕ್ರಮವನ್ನು ಸಹ ಇಲ್ಲಿ ಹೇಳಿದ್ದಾರೆ ಯಾವ ರಾಷ್ಟ್ರಗಳ ತಲಾ ಆದಾಯ ಯು.ಎಸ್.ಎ., ಕೆನಡಾ, ಆಸ್ಟ್ರೇಲಿಯಾ ಮತ್ತು ಪಶ್ಚಿಮ ಯೂರೋಪ್ ರಾಷ್ಟ್ರಗಳಿಗಿಂತ ಕಡಿಮೆ ಇದೆಯೋ ಆ ರಾಷ್ಟ್ರಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ. ಯಾವ ಯಾವ ರಾಷ್ಟ್ರಗಳು ಯಾವುದೇ ಹೆಚ್ಚಿನ ಆದಾಯ ಪಡೆಯುತ್ತಿವೆಯೊ ಆ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ. ಇಲ್ಲಿ ತಲಾ ಆದಾಯದ ಮೇಲೆ ನಾವು ಕೆಲವು ರಾಷ್ಟ್ರಗಳನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ. ಅಮೇರಿಕಾದ ತಲಾ ಆದಾಯದಲ್ಲಿ ಕಾಲುಭಾಗದ ಆದಾಯ ಪಡೆಯುತ್ತಿರುವ ರಾಷ್ಟ್ರಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳೆಂದು ಕರೆಯಲಾಗುತ್ತಿದೆ.

1993 ರಲ್ಲಿ ವಿಶ್ವಬ್ಯಾಂಕ್ ಎಲ್ಲ ರಾಷ್ಟ್ರಗಳನ್ನು ಅವುಗಳ ಆದಾಯ ಮಟ್ಟಕ್ಕನುಗುಣವಾಗಿ ವರ್ಗೀಕರಿಸಿತು. ಕಡಿಮೆ ಆದಾಯದ ರಾಷ್ಟ್ರಗಳು ಇವುಗಳ ತಲಾ ಆದಾಯ 675 ಡಾಲರ್‌ಗಳು ಮಧ್ಯಮ ಆದಾಯದ ರಾಷ್ಟ್ರಗಳು ತಲಾ ಆದಾಯ 657 ಡಾಲರ್ ಗಳಿಂದ ಹಿಡಿದು 8355 ಡಾಲರ್‌ಗಳ ವರೆಗೆ ಅಧಿಕ ಆದಾಯ ಹೊಂದಿರುವ ರಾಷ್ಟ್ರಗಳೆಂದರೆ ಅಮೇರಿಕ, ಕೆನಡ ,ಆಸ್ಟ್ರೇಲಿಯಾ ಮುಂತಾದವುಗಳು ಈ ರಾಷ್ಟ್ರಗಳ ಆದಾಯ 8355 ಡಾಲರ್ ಗಳಿಗಿಂತ ಅಧಿಕ. ಹೀಗೆ ವಿಶ್ವ ಬ್ಯಾಂಕ್ ಕಡಿಮೆ ಆದಾಯದ ರಾಷ್ಟ್ರಗಳು ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ವರ್ಗೀಕರಿಸುತ್ತದೆ. ಇಲ್ಲಿ ವಿವರವಾಗಿ ಹೇಳಬೇಕೆಂದರೆ ಪ್ರಪಂಚದ ಶೇ. 58.7 ರಷ್ಟು ಕಡಿಮೆ ಆದಾಯದ ರಾಷ್ಟ್ರಗಳ ಜನಸಂಖ್ಯೆ ವಿಶ್ವ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. 5-4 ರಷ್ಟನ್ನು ಮಾತ್ರ ಪಾಲನ್ನು ಹೊಂದಿದೆ. ಹಾಗೆಯೇ ಮಧ್ಯಮ ಆದಾಯದ ರಾಷ್ಟ್ರಗಳು ವಿಶ್ವದ ಜನಸಂಖ್ಯೆಯಲ್ಲಿ ಶೇ. 26 ರಷ್ಟು ಇವೆ. ಆದರೆ ವಿಶ್ವದ ರಾಷ್ಟ್ರೀಯ ಉತ್ಪನ್ನದಲ್ಲಿ ಇವುಗಳ ಪಾಲು ಶೇ. 15.30 ರಷ್ಟು. ಈ ಎರಡೂ ಗುಂಪುಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳು ಎಂದು ವ್ಯಾಖ್ಯಾನಿಸಲಾಗುತ್ತದೆ. ಅಭಿವೃದ್ಧಿ ಶೀಲ ರಾಷ್ಟ್ರಗಳ ಜನಸಂಖ್ಯೆ ವಿಶ್ವದ ಜನಸಂಖ್ಯೆಯಲ್ಲಿ ಶೇ. 85 ರಷ್ಟಿದೆ. ವಿಶ್ವದ ರಾಷ್ಟ್ರೀಯ ಉತ್ಪನ್ನದಲ್ಲಿ (World GNP) ಶೇ. 21 ರಷ್ಟು ಆದಾಯದ ಪಾಲನ್ನು ಹೊಂದಿದೆ. ಈ ಪರಿಸ್ಥಿತಿಯನ್ನು ಏಷ್ಯಾ, ಆಫ್ರಿಕ, ಲಾಟಿನ್ ಅಮೇರಿಕ ರಾಷ್ಟ್ರಗಳಲ್ಲಿ ಕಾಣಬಹುದು.

ಅಧಿಕ ಆದಾಯದ ರಾಷ್ಟ್ರಗಳಾದ ಅಮೇರಿಕ, ಕೆನಡ, ಆಸ್ಟ್ರೇಲಿಯಾ, ಪಶ್ಚಿಮ ಯೂರೋಪ್ ರಾಷ್ಟ್ರಗಳು ಸೇರಿ ವಿಶ್ವದ ಜನಸಂಖ್ಯೆಯಲ್ಲಿ ಶೇ.15 ರಷ್ಟು ಇದೆ; ಇವು ವಿಶ್ವ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.

[illegible]

79 ರಷ್ಟು ಪಾಲನ್ನು ಪಡೆದಿವೆ. 1992 ರ ಅಂಕಿ ಅಂಶಗಳ ಪ್ರಕಾರ 884 ದಶಲಕ್ಷ ಜನಸಂಖ್ಯೆ ಹೊಂದಿರುವ ಭಾರತದ ತಲಾ ಆದಾಯ 310 ಡಾಲರ್ ಗಳು; ವಿಶ್ವ ಜನಸಂಖ್ಯೆಯ ಶೇ. 16.30 ರಷ್ಟು ರ ಜನಸಂಖ್ಯೆಯನ್ನು ಭಾರತವು ಹೊಂದಿದೆ. ವಿಶ್ವದ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. 1 ರಷ್ಟನ್ನು ಭಾರತವು ತನ್ನ ಆದಾಯವಾಗಿ ಹೊಂದಿದೆ.

ಮೇಲೆ ವಿಶ್ಲೇಷಿಸಿರುವ ಅಂಶಗಳು ವಿಶ್ವ ಸಂಸ್ಥೆ (UNO) ಯ ವರ್ಗೀಕರಣ ಆಗಿವೆ. ಇಲ್ಲಿ ಅಧಿಕ ಆದಾಯದ ರಾಷ್ಟ್ರಗಳು ಮತ್ತು ಅಭಿವೃದ್ಧಿ ಶೀಲ ರಾಷ್ಟ್ರಗಳ ಆದಾಯಕ್ಕೂ ಅಜಗಜಾಂತರ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ವಿಶ್ವ ಸಂಸ್ಥೆಯ ವಿಶ್ಲೇಷಣೆ ಪ್ರಕಾರ ಮಧ್ಯ ಪ್ರಾಚ್ಯ ರಾಷ್ಟ್ರಗಳ ಆದಾಯ ಅಧಿಕ ಪ್ರಮಾಣದಲ್ಲಿದ್ದರೂ ಇವು ಅಭಿವೃದ್ಧಿ ಹೊಂದುವಲ್ಲಿ ಸೋತಿವೆ. ಯಾಕೆಂದರೆ ಇವುಗಳ ಆದಾಯ ತೈಲ ನಿಕ್ಷೇಪದಿಂದ ಬರುವ ಆದಾಯ, ಅಭಿವೃದ್ಧಿ ಹೊಂದಿರುವ ಕಾರಣಕ್ಕಾಗಿಯಲ್ಲ. ಆದ್ದರಿಂದ ಅಧಿಕ ತಲಾ ಆದಾಯ ಹೊಂದಿರುವ ರಾಷ್ಟ್ರಗಳಲ್ಲೇ ಇಂತಹ ವೈರುಧ್ಯಗಳನ್ನು ನಾವು ನೋಡುಬಹುದಾಗಿದೆ.

ಇದರ ಜೊತೆಗೆ ಬೇರೆ ವ್ಯಾಖ್ಯಾನಗಳನ್ನು ನಾವು ಗಮನಿಸಬಹುದಾಗಿದೆ. ಪ್ರೊ. ಜಾಕೋಬ್ ವೈನರ್ (Jacob Viner) ಪ್ರಕಾರ ಅಭಿವೃದ್ಧಿ ಶೀಲ ರಾಷ್ಟ್ರವೆಂದರೆ "ಯಾವುದೇ ರಾಷ್ಟ್ರ ಬಂಡವಾಳ ಬಳಕೆಗೆ, ಅಥವಾ ಕಾರ್ಮಿಕ ಶಕ್ತಿಯ ಬಳಕೆಗೆ ಅಥವಾ ಸ್ವಾಭಾವಿಕ ಸಂಪನ್ಮೂಲಗಳ ಬಳಕೆಗೆ ಅಥವಾ ಈ ಎಲ್ಲಾ ಅಂಶಗಳ ಬಳಕೆಗೆ ಬೃಹತ್ ಸಾಮರ್ಥ್ಯ ಹೊಂದಿರುತ್ತದೆ". ಇದು ಈ ರಾಷ್ಟ್ರದ ತಲಾ ಆದಾಯವನ್ನು ಹೆಚ್ಚಿಸುವ ಎಲ್ಲಾ ಅವಕಾಶ ಹಾಗೂ ಸಾಮರ್ಥ್ಯವನ್ನು ಹೊಂದಿರುತ್ತದೆ. 4 ಈ ಅರ್ಥಶಾಸ್ತ್ರಜ್ಞನ ವ್ಯಾಖ್ಯಾನದ ಪ್ರಕಾರ ಬಂಡವಾಳವಾಗಲಿ, ಕಾರ್ಮಿಕ ಶಕ್ತಿಯಾಗಲಿ ಅಥವಾ ಸ್ವಾಭಾವಿಕ ಸಂಪನ್ಮೂಲಗಳಾಗಲಿ ಅಪೂರ್ಣ ಬಳಕೆಯಾಗಿವೆ. ಆದ್ದರಿಂದ ಈ ಎಲ್ಲಾ ಅಂಶಗಳ ಬಳಕೆ ಸಾಮರ್ಥ್ಯವನ್ನು ಹೆಚ್ಚಿಸುವಂತಿರಬೇಕು ಎಂಬುದೇ ಆಗಿದೆ. ಹೀಗಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳೆಂದರೆ ಕಡಿಮೆ ಶಕ್ತಿ ಹಾಗೂ ಸ್ವಾಭಾವಿಕ ಸಂಪನ್ಮೂಲಗಳ ಆಗರ ಎಂಬುದೇ ವಾದ. ಈ ವಾದವನ್ನು ಬಹುತೇಕರು ಮಂಡಿಸಿದ್ದಾರೆ, ಆದರೆ ಈತ ಹೇಳುವುದೇನೆಂದರೆ ಬಂಡವಾಳವು ವಿಪುಲವಾಗಿ ಇಲ್ಲಿ ಇರುತ್ತದೆಂಬುದು; ಆದರೆ ಅಭಿವೃದ್ಧಿ ಶೀಲ ರಾಷ್ಟ್ರಗಳು ಕಾರ್ಮಿಕ ಶಕ್ತಿ ಹಾಗೂ ಸ್ವಾಭಾವಿಕ ಸಂಪನ್ಮೂಲಗಳನ್ನು ವಿಪುಲವಾಗಿ ಹೊಂದಿರುತ್ತವೆ. ಆದರೆ ಬಂಡವಾಳದ ಕೊರತೆ ಇರುತ್ತದೆ ಎಂಬುದು ಅಭಿವೃದ್ಧಿ ಅರ್ಥಶಾಸ್ತ್ರ ಓದಿರುವ ಎಲ್ಲರ ಅಭಿಪ್ರಾಯ ಮತ್ತು ಜಾಕೋಬ್ ವೈನ್ ರ ಮುಂದುವರೆಯುತ್ತ ಹೇಳುವುದೇನೆಂದರೆ ಈ ರಾಷ್ಟ್ರಗಳ ಸಾಮರ್ಥ್ಯ ಬೆಳೆಯುತ್ತಿರುವ ಜನಸಂಖ್ಯೆಗೆ ತಲಾ ಆದಾಯವನ್ನು ಹೆಚ್ಚಿಸುತ್ತದೆ ಅಥವಾ ಈಗಿರುವ ಹಂತದ ತಲಾ ಆದಾಯವನ್ನು ಹಾಗೆ ಮುಂದುವರೆಸುವುದೇ ಎಂಬುದಾಗಿದೆ. ಈ ಅಂಶವನ್ನು ಪರಿಗಣಿಸಿದರೆ ಜಾಕೋಬ್ ವೈನರ್ ಅಭಿವೃದ್ಧಿಶೀಲ ರಾಷ್ಟ್ರಗಳ ತಲಾ ಆದಾಯ ಹೆಚ್ಚು ಏರಿಕೆಯ ಸಿಟ್ಟಿನಲ್ಲಿ ಕೆಲಸ ಮಾಡಬೇಕಾಗಿರುತ್ತದೆ. ತಲಾ ಆದಾಯವನ್ನು ಹೆಚ್ಚಿಸುವ ಎಲ್ಲ ಸಾಮರ್ಥ್ಯವನ್ನು ಈ ರಾಷ್ಟ್ರಗಳು ಹೊಂದಿವೆ ಎಂಬುವನ್ನು ಪೂರ್ವ

ನಿಯೋಜಿತವಾಗಿಯೇ ಪರಿಕಲ್ಪಿಸಿದ್ದಾನೆ, ಇಲ್ಲದೆ ಹೋದರೆ ಹೆಚ್ಚುತ್ತಿರುವ ಜನಸಂಖ್ಯೆಗೆ ತಲಾ ಆದಾಯವನ್ನು ಹೆಚ್ಚಿಸದಿದ್ದರೂ , ಪ್ರಸಕ್ತ ಆದಾಯವನ್ನೇ ಮುಂದುವರಿಸಬಹುದು ಎಂದು ವ್ಯಾಖ್ಯಾನಿಸುತ್ತವೆ. ಈತ ಹೇಳಿದ ಪ್ರಕಾರ ತಲಾ ಆದಾಯವನ್ನು ಹೆಚ್ಚಿಸಲು ಆಗದಿದ್ದರೂ ಪ್ರಸಕ್ತ ತಲಾ ಆದಾಯವನ್ನು ಹಾಗೆ ಮುಂದುವರಿಸಿಕೊಂಡು ಹೋಗಲು ಯಾವುದೆ ಅಡಚಡಣೆಗಳು ಇರುವುದಿಲ್ಲ ಎಂಬ ಅಭಿಪ್ರಾಯ ಸರಿಯೆನಿಸುತ್ತದೆ.

ಎಂ.ಯುಜಿನ್ ಸ್ಟೇಲಿ (M. Eugene Staley) ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ಕುರಿತು ಹೀಗೆ ವ್ಯಾಖ್ಯೆ ಮಾಡುತ್ತಾನೆ. ಬಡ ರಾಷ್ಟ್ರಗಳೆಂದರೆ ವಿಪುಲ ಪ್ರಮಾಣದ ಜನಸಂಖ್ಯೆ ಬಡತನದಲ್ಲಿರುವುದು (Mass Poverty) ಈ ಬಡತನ ನಿರಂತರವಾಗಿ ಮುಂದುವರೆಯುತ್ತಿರುವುದು , ಇದು ಯಾವುದೇ ತಾತ್ಕಾಲಿಕ ನಿರ್ಲಕ್ಷ್ಯದಿಂದ ಉಂಟಾದಲ್ಲಿ ಇದರ ಜೊತೆಗೆ ಹಳೆಯದಾದ ಉತ್ಪಾದನ ವಿಧಾನಗಳು (Obsolete Methods of Production) ಸಾಮಾಜಿಕ ಸಂಘಟನೆ ಸೇರುತ್ತವೆ. ಇದಕ್ಕೆ ಕಾರಣ ಸ್ವಾಭಾವಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳದಿರುವುದು ಹಾಗೂ ಶ್ರೀಮಂತ ರಾಷ್ಟ್ರಗಳಲ್ಲಿ ಹಳೆಯದಾದ ತಂತ್ರಜ್ಞಾನವನ್ನು ಈ ದೇಶಗಳು ಉಪಯೋಗಿಸುತ್ತಿರುವುದು. ಇವನ ವ್ಯಾಖ್ಯಾನವನ್ನು ಪರಿಶೀಲಿಸಿದರೆ ಸ್ಟೇಲಿ ಹೆಚ್ಚಾಗಿ ಯಾವ ರಾಷ್ಟ್ರಗಳು ಹಳೆಯದಾದ ಉತ್ಪಾದನಾ ವಿಧಾನಗಳನ್ನು ಅನುಸರಿಸುತ್ತಿವೆಯೋ. ಆ ರಾಷ್ಟ್ರಗಳು, ಬಡತನದಿಂದ ಹೊರಬರಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾನೆ, ಹಳೆದಾದ ಉತ್ಪಾದನಾ ವಿಧಾನಗಳನ್ನು ಉಪಯೋಗಿಸುವುದಕ್ಕೆ ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಹೂಡಿಕೆ ಇಲ್ಲದಾಗಿರುವುದೇ ಪ್ರಮುಖ ಅಂಶವಾಗುತ್ತದೆ. ಕೃಷಿಯಲ್ಲೆ ತೆಗೆದುಕೊಂಡರೆ ಬಹಳ ಪುರಾತನ ಕಾಲದಿಂದ ಬಂದ ನೇಗಿಲನ್ನೆ ಉಳುಮೆ ಮಾಡಲು ರೈತರು ಉಪಯೋಗಿಸುತ್ತಿದ್ದಾರೆ, ಟ್ರಾಕ್ಟರ್ ಗಳ ಮೂಲಕ ಉಳುಮೆ ಮಾಡುವ ರೈತರ ಸಂಖ್ಯೆ ಬಹಳ ಕಡಿಮೆ ಇದೆ, ಆದ್ದರಿಂದ ಕೃಷಿಯಲ್ಲಿ ಉತ್ಪಾದಕತೆ ಕಡಿಮೆ ಇರುವುದು. ಈ ಉದಾಹರಣೆಯನ್ನು ತೆಗೆದುಕೊಂಡರೆ, ಅಭಿವೃದ್ಧಿ ಶೀಲ ರಾಷ್ಟ್ರಗಳು ಬಹುತೇಕವಾಗಿ ಹಳೆಯದಾದ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಬಂದಿರುವುದು ಖಚಿತವಾದಂತೆ ಆಗಿದೆ. ಹಾಗೆಯೇ ಮುಂದುವರಿದ ರಾಷ್ಟ್ರಗಳಲ್ಲಿ ಹಿಂದೆ ಉಪಯೋಗಿಸಿ, ಈಗ ಚಾಲ್ತಿಯಲಿಲ್ಲದ ತಂತ್ರಜ್ಞಾನವನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳು ಆಮದು ಮಾಡಿಕೊಂಡು ಉಪಯೋಗಿಸುತ್ತಿವೆ. ಇದರಿಂದ ಮುಂದುವರಿದ ರಾಷ್ಟ್ರಗಳಲ್ಲಿ ಬಳಕೆಯಲ್ಲಿಲ್ಲದ ತಂತ್ರಜ್ಞಾನ ಅಭಿವೃದ್ಧಿಯ ಹೆಸರಿನಲ್ಲಿ ಅಭಿವೃದ್ಧಿ ಶೀಲ ರಾಷ್ಟ್ರಗಳು ಆಮದು ಮಾಡಿಕೊಂಡು ಅವನ್ನು ಬಳಸುತ್ತಿವೆ. ಈ ವಿಷಯವನ್ನು ನಾವು ಪರಿಶೀಲಿಸಿದಾಗ ಸ್ಟೇಲಿಯು ಅಭಿವೃದ್ಧಿಯ ಬಗ್ಗೆ ನೀಡಿರುವ ವ್ಯಾಖ್ಯಾನ ಪರಿಪೂರ್ಣವೆನಿಸುತ್ತದೆ. ಇದರ ಜೊತೆಗೆ ಸಾಂಪ್ರದಾಯಿಕವಾಗಿರುವ ಸಾಮಾಜಿಕ ಸಂಘಟನೆಯು ಸಹ ಹೊಸ ಹೊಸ ವಿಜ್ಞಾನದ ಅವಿಷ್ಕಾರಗಳನ್ನು ಪಡೆಯುತ್ತದೆ. ಹೀಗೆ ಹೊಸ ಹೊಸ ಅವಿಷ್ಕಾರಗಳನ್ನು ಪಡೆಯುವುದರೊಂದಿಗೆ ತಂತ್ರಜ್ಞಾನ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿದೆ. ಭಾರತದಲ್ಲೇ ಗ್ರಾಮೀಣ

ಪ್ರದೇಶಗಳಲ್ಲಿರುವ ಸಾಮಾಜಿಕ ಸಂಘಟನೆ ಸಂಪೂರ್ಣವಾಗಿ ಸಾಂಪ್ರದಾಯಿಕವಾದದು, ಇಲ್ಲಿ ಹೆಚ್ಚಾಗಿ ಮೂಢನಂಬಿಕೆಗಳು ಕಲ್ಪನಾ ರಹಿತವಾದ ಉತ್ಪಾದನಾ ಚಟುವಟಿಕೆಗಳು ವ್ಯವಸ್ಥಿತವಾಗಿ ಮುಂದುವರೆದಿವೆ. ಹೀಗೆ ವ್ಯವಸ್ಥಿತವಾಗಿ ಮುಂದುವರಿದಿರುವುದರಿಂದ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಉತ್ಪಾದಕತೆ ಹೆಚ್ಚಾಗಿಲ್ಲ, ಆದ್ದರಿಂದ ಸ್ಟೇಲಿಯ ಅಭಿವೃದ್ಧಿ ಶೀಲ ರಾಷ್ಟ್ರಗಳ ವ್ಯಾಖ್ಯೆಯ ಮೂಲಕ ವರ್ಣಿಸಿರುವ ಅಂಶಗಳು ಸರಿಯಾಗಿಯೇ ಇವೆ ಎಂದು ಅನಿಸುತ್ತದೆ.

ಈ ಚರ್ಚೆಯನ್ನು ಮುಂದುವರಿಸುತ್ತಾ ವಿಪುಲ ಬಡತನ (Mass Poverty) ಇಲ್ಲಿ ಜನ ಸಣ್ಣ ಪ್ರಮಾಣದಲ್ಲಿ ಭೂಮಿ, ಬಂಡವಾಳ, ಮನೆ ಹೊಂದಿರುವುದು ಕಾರಣವಾಗುತ್ತದೆ ಎಂದು ಹೇಳುತ್ತಾನೆ. ವ್ಯಾಪಕ ಬಡತನ, ರಾಷ್ಟ್ರದ ಮೇಲೆ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಸ್ಟೇಲಿಯ ಅಭಿವೃದ್ಧಿ ಶೀಲ ರಾಷ್ಟ್ರಗಳ ವ್ಯಾಖ್ಯಾನ ಪರಿಣಾಮಕಾರಿಯಾಗಿದೆ ವಿಪುಲ ಬಡತನ, ಹಳೆದಾದ ಉತ್ಪಾದನಾ ವಿಧಾನಗಳು, ಮತ್ತು ಸಾಂಪ್ರದಾಯಿಕ ಸಾಮಾಜಿಕ ಸಂಘಟನೆಗಳು ಸ್ಟೇಲಿ ಹೇಳುವ ಅಭಿವೃದ್ಧಿ ಶೀಲ ರಾಷ್ಟ್ರಗಳ ಗುಣಗಳು.

ಅಭಿವೃದ್ಧಿ ಶೀಲ ರಾಷ್ಟ್ರಗಳ ಲಕ್ಷಣಗಳು :

ಭಾರತದ ಉದಾಹರಣೆಯೊಂದಿಗೆ, ಇಲ್ಲಿ ಮುಖ್ಯವಾದ ಚರ್ಚೆಯೆಂದರೆ ಅಭಿವೃದ್ಧಿ ಮತ್ತು ಅನಭಿವೃದ್ಧಿ ಕುರಿತು ಈಗಾಗಲೆ ನಾವು ಅನೇಕ ಅರ್ಥಶಾಸ್ತ್ರಜ್ಞರ ವ್ಯಾಖ್ಯಾನಗಳನ್ನು ಗಮನಿಸಿದ್ದೇವೆ. ಅಭಿವೃದ್ಧಿಯನ್ನು ಕುರಿತು ಖಚಿತವಾಗಿ ಹೇಳಬೇಕಾದರೆ ಇವುಗಳ ಲಕ್ಷಣವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮೊದಲನೆಯದಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳ ಲಕ್ಷಣಗಳನ್ನು ಗಮನಿಸೋಣ.

ಅ) ತಲಾ ಆದಾಯ ಕಡಿಮೆ ಇರುವುದು.

ಆ) ಉದ್ಯೋಗದ ಸ್ವರೂಪ

ಇ) ಅಪಾರ ಪ್ರಮಾಣದ ಜನಸಂಖ್ಯೆಯ ಒತ್ತಡ

ಈ) ಕಡಿಮೆ ಪ್ರಮಾಣದ ಬಂಡವಾಳ ಸಂಗ್ರಹ

ಉ) ಸಂಪತ್ತು ಹಂಚಿಕೆಯಲ್ಲಿ ಅಸಮಾನತೆ

ಊ) ಮಾನವ ಬಂಡವಾಳದ ಅನಭಿವೃದ್ಧಿ

ಋ) ನಿರಂತರ (Chronic) ನಿರುದ್ಯೋಗ

ಮೇಲ್ಕಂಡ ಲಕ್ಷಣಗಳ ಮೂಲಕ ಅಭಿವೃದ್ಧಿಯನ್ನು ನಾವು ವಿಶ್ಲೇಷಿಸಬಹುದು. ಮೇಲ್ಕಂಡ ಲಕ್ಷಣಗಳನ್ನು ಹೊಂದಿಲ್ಲದ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು, ಮೇಲ್ಕಂಡ ಲಕ್ಷಣಗಳನ್ನು ಹೊಂದಿರುವ ರಾಷ್ಟ್ರಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳೆಂದು ವರ್ಗೀಕರಿಸಬಹುದು. ಭಾರತ ಮೇಲ್ಕಂಡ ಲಕ್ಷಣಗಳನ್ನು

ಹೊಂದಿರುವುದರಿಂದ ಅಭಿವೃದ್ಧಿ ಶೀಲ ರಾಷ್ಟ್ರವೆಂದು ಪರಿಗಣಿಸಲಾಗುತ್ತದೆ. ಕಡಿಮೆ ಆದಾಯವುಳ್ಳ ರಾಷ್ಟ್ರಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳೆಂದು ಪರಿಗಣಿಸಲಾಗುತ್ತದೆ. ಇಲ್ಲಿ ಏಷ್ಯಾ, ಆಫ್ರಿಕ, ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳು ಕಡಿಮೆ ಆದಾಯ ಹೊಂದಿರುವಂತಹ ರಾಷ್ಟ್ರಗಳು ಅಭಿವೃದ್ಧಿ ಶೀಲ ರಾಷ್ಟ್ರಗಳಾದ ಭಾರತದ ತಲಾ ಆದಾಯ 310 ಡಾಲರ್ ಗಳು ಇದೆ, ಇದನ್ನು ಅಮೇರಿಕ, ಜರ್ಮನಿಗೆ ಹೋಲಿಸಿದಾಗ ಅನುಕ್ರಮವಾಗಿ ಇವುಗಳ ತಲಾ ಆದಾಯ 23,240 ಡಾಲರ್‌ಗಳು 23030 ಡಾಲರ್‌ಗಳಾಗಿದೆ.. ತಲಾ ಆದಾಯ ಅಸಮಾನತೆಯಲ್ಲಿ ಭಾರತದೊಂದಿಗೆ ಹೋಲಿಸಿದಾಗ ಅಮೇರಿಕದ ತಲಾ ಆದಾಯ 67 ಪಟ್ಟು ಹೆಚ್ಚಿದೆ. ಜರ್ಮನಿಯತಲಾವಾರು ಆದಾಯು 72 ಪಟ್ಟು ಹೆಚ್ಚಿದೆ. ಈ ಅಸಮಾನತೆಗಳಿಗೆ 60,70 ಮತ್ತು 80 ದಶಕಗಳಲ್ಲಿ ಅತ್ಯಂತ ವೇಗವಾಗಿ ಮುಂದುವರೆದ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆ ಬೆಳೆದಿದೆ. ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳು ಆರ್ಥಿಕ ವ್ಯವಸ್ಥೆ ಬೆಳವಣಿಗೆಯಲ್ಲಿ ಹಿಂದೆ ಬಿದ್ದಿವೆ. ತಲಾ ಆದಾಯದ ಸೂಚಿ ಅಭಿವೃದ್ಧಿಯನ್ನು ಅಳೆಯುವಲ್ಲಿ ಅತ್ಯಂತ ಪ್ರಮುಖವಾದದ್ದು, ಆದ್ದರಿಂದ ಎಲ್ಲಾ ಅಭಿವೃದ್ಧಿ ತಜ್ಞರು ಈ ಸೂಚಿಯನ್ನು ಉಪಯೋಗಿಸುತ್ತಾರೆ. ಆದ್ದರಿಂದ ತಲಾ ಆದಾಯ ಹೆಚ್ಚಳಕ್ಕೆ ಅಮೇರಿಕ, ಜರ್ಮನಿ, ವಸಾಹತು ಷಾಹಿ ನೀತಿಗಳನ್ನು ಅನುಸರಿಸಿರುತ್ತಿರುವುದೇ ಕಾರಣವಾಗುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ರಾಷ್ಟ್ರವೊಂದರ ಉದ್ಯೋಗದ ಸ್ವರೂಪದ ಮೂಲಕವೂ ಅಭಿವೃದ್ಧಿ ತತ್ವಗಳನ್ನು ಚರ್ಚಿಸಲಾಗುತ್ತದೆ. ಅಭಿವೃದ್ಧಿ ಹೊಂದಿದಂತಹ ರಾಷ್ಟ್ರಗಳಲ್ಲಿ ಕೃಷಿ ವಲಯದ ಮೇಲೆ ಅವಲಂಬಿತರಾಗಿರುವವರ ಸಂಖ್ಯೆ ಇಂಗ್ಲೇಂಡ್‌ನಲ್ಲಿ ಶೇ. 3, ಯು.ಎಸ್.ಎ. ಶೇ. 4,ಹಾಗೆಯೇ ಭಾರತದಲ್ಲಿ ಶೇ.70 ರಷ್ಟು ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಪಾಕಿಸ್ತಾನದಲ್ಲಿ ಶೇ. 55 ರಷ್ಟು ಜನ ಸಂಖ್ಯೆ ಕೃಷಿಯ ಮೇಲೆ ಅವಲಂಬಿತವಾಗಿದೆ. ಉದ್ಯೋಗದ ಸ್ವರೂಪ ಹೀಗೆ ವಿಭಿನ್ನತೆ ಹೊಂದುವುದರೊಂದಿಗೆ ಭಾರತದಂತ ರಾಷ್ಟ್ರಗಳು ಪ್ರತ್ಯೇಕವಾಗಿ ನಿಲ್ಲಲು ಸಾಧ್ಯವಾಗಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆ ಬಹುತೇಕವಾಗಿ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆ. ಹೀಗಿರುವುದರಿಂದ ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕೃಷಿ ಸಾವಿರದ ಒಂಬೈನೂರು ತೊಂಬತ್ತರ ದಶಕದಲ್ಲಿ ಶೇ. 35 ರಷ್ಟು ಪಾಲನ್ನು ನೀಡುತ್ತಿತ್ತು.

ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ವಿಪುಲ ಪ್ರಮಾಣದ ಜನ ಸಂಖ್ಯೆ ಒತ್ತಡವಿದೆ. ಇದಕ್ಕೆ ಕಾರಣಗಳು ಅಭಿವೃದ್ಧಿ ಶೀಲ ರಾಷ್ಟ್ರಗಳು. ಅದರಲ್ಲೂ ಭಾರತದ ಜನಸಂಖ್ಯೆ ಶೇ.2.5 ರ ದರದಲ್ಲಿ ಪ್ರತಿ ವರ್ಷ ಬೆಳೆದರೆ, ಮುಂದುವರಿದ ರಾಷ್ಟ್ರಗಳ ಜನಸಂಖ್ಯೆ ಶೇ. 0.75 ದರದಲ್ಲಿ ಬೆಳೆಯುತ್ತಿದೆ. ಈ ರೀತಿಯ ಬೆಳವಣಿಗೆಯಿಂದಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳ ಜನಸಂಖ್ಯಾ ಪ್ರಮಾಣ ಅಪಾರವಾಗಿದೆ. ಹೀಗೆ ವಿಪುಲವಾಗಿರುವುದರಿಂದ ತೀವ್ರ ಗತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ, ಬಟ್ಟೆ, ಮನೆ,

ಔಷಧಿಗಳು ಶಿಕ್ಷಣ ಮುಂತಾದವುಗಳನ್ನು ಒದಗಿಸಬೇಕಾಗಿದೆ. ಹೀಗೆ ಒದಗಿಸುವುದಕ್ಕೆ ಅಭಿವೃದ್ಧಿ ಶೀಲ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ ಆಗುವುದಿಲ್ಲ.

ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ನಿರಂತರ ನಿರುದ್ಯೋಗವಿರುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರ ಬೆಳವಣಿಗೆಯಾಗಿರುವುದರಿಂದ ಅಲ್ಲಿ ನಿರುದ್ಯೋಗ ಸಮಸ್ಯೆ ಅಷ್ಟಾಗಿ ಕಾಡುವುದಿಲ್ಲ. ಮುಂದುವರೆದ ರಾಷ್ಟ್ರಗಳಲ್ಲಿ ಹೆಚ್ಚಳವಾಗುವ ಕಾರ್ಮಿಕರು ಕೈಗಾರಿಕೆ ಮತ್ತು ಸೇವಾ ವಲಯ ಸೃಷ್ಟಿಸುವ ಉದ್ಯೋಗದಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಭಾರತದಂತ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೈಗಾರಿಕೆ ಹಾಗೂ ಸೇವಾ ವಲಯಗಳು ಬೆಳೆದಿಲ್ಲ. ಹೀಗೆ ಕೈಗಾರಿಕೆ ಹಾಗೂ ಸೇವಾ ವಲಯಗಳು ಬೆಳೆಯದೇ ಇರುವುದರಿಂದ, ಶೇ. 70 ರಷ್ಟು ಜನ ಕೃಷಿ ವಲಯದ ಮೇಲೆ ಅವಲಂಬಿತರಾಗಿದ್ದಾರೆ. ಇಲ್ಲಿ ಪರೋಕ್ಷ ನಿರುದ್ಯೋಗವಿದೆ (Disguised unemployment) ಇಲ್ಲಿ ಕೃಷಿ ಮೇಲೆ ಹೆಚ್ಚು ಜನಸಂಖ್ಯೆ ಅವಲಂಬಿತವಾಗಿರುವುದರಿಂದ ಇಲ್ಲಿನ ಜನಸಂಖ್ಯೆಯನ್ನು ಕಡಿಮೆಗೊಳಿಸಿದರು. ಕೃಷಿ ಉತ್ಪನ್ನಗಳೇನು ಕುಸಿಯುವುದಿಲ್ಲ ಆದ್ದರಿಂದ ಕಾರ್ಮಿಕರ ಅಂಚು ಉತ್ಪಾದಕತೆ ಶೂನ್ಯವಾಗಿದೆ (Marginal Productivity)

ಕಡಿಮೆ ಬಂಡವಾಳ ಸಂಗ್ರಹ : ಬಂಡವಾಳ ಸಂಗ್ರಹವನ್ನು ಆರ್ಥಿಕ ತಜ್ಞರು ವಿವರಿಸುವುದು ಉಕ್ಕು ಮತ್ತು ಇಂಧನ ಉಪಯೋಗಿಸುವುದರ ಮೂಲಕ ಇಲ್ಲಿ ಅಮೇರಿಕ , ಯುಕೆಯನ್ನು ಭಾರತಕ್ಕೆ ಹೋಲಿಸಲಾಗಿದೆ. ತಲಾ ಉಕ್ಕು ಮತ್ತು ಇಂಧನವನ್ನು ಅಭಿವೃದ್ಧಿ ಹೊಂದಿರುವಂತಹ ರಾಷ್ಟ್ರಗಳಲ್ಲಿ ಬಳಕೆಯಾಗುವುದು ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಅಮೇರಿಕಾದಲ್ಲಿ ಹಾಗೂ ಯುಕೆಯಲ್ಲಿ ಬಳಸಲಾಗುತ್ತದೆ. ತಲಾ ಒಬ್ಬರು 417 ಕೆ.ಜಿ. ಉಕ್ಕು 7681 ಕೆ.ಜಿ. ಇಂಧನವನ್ನು ಅಮೇರಿಕದಲ್ಲಿ ಬಳಸುತ್ತಾರೆ, ಬ್ರಿಟನ್ನಿನಲ್ಲಿ 259 ಕೆ.ಜಿ. ಉಕ್ಕು 3688 ಕೆ.ಜಿ. ಇಂಧನವನ್ನು ತಲಾ ಒಬ್ಬರು ಬಳಸುತ್ತಾರೆ, ಭಾರತದಲ್ಲಿ ತಲಾ ಒಬ್ಬರು ಬಳಸುವ ಉಕ್ಕು 20 ಕೆ.ಜಿ. ಇಂಧನ 337 ಕೆ.ಜಿ. ಇದು ಬಂಡವಾಳ ಸಂಗ್ರಹವನ್ನು ಅಳೆಯಲು ಉಪಯೋಗಿಸುವ ಸೂಚಿಗಳು ಹೀಗೆ ಅಭಿವೃದ್ಧಿ ಶೀಲ ರಾಷ್ಟ್ರಗಳು ಬಂಡವಾಳ ಸಂಗ್ರಹದಲ್ಲಿ ಹಿಂದೆ ಬಿದ್ದಿವೆ ಎಂಬುದು ಸ್ಪಷ್ಟವಾಗುತ್ತದೆ.

ಅಭಿವೃದ್ಧಿ ಶೀಲ ರಾಷ್ಟ್ರಗಳ ಮತ್ತೊಂದು ಅಂಶವೆಂದರೆ ಸಂಪತ್ತು ಹಂಚಿಕೆಯಲ್ಲಿ ಅಸಮಾನತೆ. ಸಂಪತ್ತು ಹಂಚಿಕೆಯ ಅಸಮಾನತೆ ಹಾಗೂ ಆದಾಯ ಅಸಮಾನತೆ ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ದಟ್ಟವಾಗಿ ಇದೆ. ವಾರ್ಷಿಕವಾಗಿ ರೂ. 1000 ಕ್ಕಿಂತ ಕಡಿಮೆ ಆಸ್ತಿ ಹೊಂದಿರುವವರು ಶೇ. 20 ರಷ್ಟು ಮನೆಗಳು ಇವರೆಲ್ಲ ಸೇರಿ ಒಟ್ಟು ಆಸ್ತಿಯಲ್ಲಿ ಶೇ. 0.7 ರಷ್ಟು ಪಾಲನ್ನು ಪಡೆಯುತ್ತಾರೆ ರೂ. 1000 ದಿಂದ ರೂ. 5000 ರಷ್ಟು ಆಸ್ತಿ ಹೊಂದಿರುವವರ ಪ್ರಮಾಣ ಶೇ. 31 ರಷ್ಟು ಕುಟುಂಬಗಳು ಇವರ ಆಸ್ತಿಯ ಪಾಲು ಶೇ. 7.5 ರಷ್ಟು ರೂ. 5000 ಕ್ಕಿಂತ ಕಡಿಮೆ ಆಸ್ತಿ ಹೊಂದಿರುವ ಕುಟುಂಬಗಳು

ಶೇ. 51 ರಷ್ಟು ಇವರು ಒಟ್ಟು ಆಸ್ತಿಯಲ್ಲಿ ಹೊಂದಿರುವ ಪಾಲು ಶೇ. 8 ರಷ್ಟು ಹಾಗೆಯೆ ರೂ. 50000 ಕ್ಕಿಂತ ಹೆಚ್ಚು ಆಸ್ತಿ ಹೊಂದಿರುವವರು ಶೇ. 4 ರಷ್ಟು ಕುಟುಂಬಗಳು ಒಟ್ಟು ಆಸ್ತಿಯಲ್ಲಿ ಇವರ ಪಾಲು ಶೇ. 31 ರಷ್ಟು ಇದ್ದು ಒಟ್ಟು ಆಸ್ತಿ ಹಂಚಿಕೆಯಲ್ಲಿ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ.

ಕಡೆಯದಾಗಿ ಕಳಪೆ ಗುಣದರ್ಜೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಹೆಚ್ಚಾಗಿಯೇ ಇದೆ. ಯಾಕೆಂದರೆ ನಿರಕ್ಷರತೆ, ಕೌಶಲ್ಯರಹಿತ ಕಾರ್ಮಿಕರು ಹೆಚ್ಚಾಗಿಯೇ ಇದೆ, ಆದ್ದರಿಂದ, ಇದರ ಪರಿಣಾಮ ಆರ್ಥಿಕ ವ್ಯವಸ್ತೆಯ ಮೇಲೆ ಬೀರಲಿದೆ. ಆದರೆ ನೀತಿ ನಿರೂಪಕರು ಇದನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಗುಣಾತ್ಮಕ ರಹಿತ ಮಾನವ ಸಂಪನ್ಮೂಲ ಹೆಚ್ಚಾಗಲು ಕಾರಣವಾಗಿದೆ, ಇದರಿಂದಾಗಿ, ಕೃಷಿ, ಕೈಗಾರಿಕೆ, ಇನ್ನಿತರ ವಲಯಗಳಲ್ಲೂ ಉತ್ಪಾದಕತೆ ಕುಸಿದಿದೆ, ಯಾವುದೆ ರಾಷ್ಟ್ರ ಮುಂದುವರಿಯಬೇಕಾದರೆ ಅಕ್ಷರತೆ ಮತ್ತು ಕೌಶಲ್ಯ ಬಹುಮುಖ್ಯ ಅಂಶಗಳು. ಆದರೆ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಈ ಅಂಶಗಳು ಹೆಚ್ಚಾಗಿ ಕಾಣಸಿಗುತ್ತಿಲ್ಲ. ಆದ್ದರಿಂದ ಸರಕಾರ ಈ ನಿಟ್ಟಿನಲ್ಲಿ ಯೋಚಿಸಿ ಕಾರ್ಯಕ್ರಮ ರೂಪಿಸಬೇಕಾಗಿದೆ. ನಿರಕ್ಷರತೆ, ಕೌಶಲ್ಯ ರಹಿತತೆ ಮಾನವ ಸಂಪನ್ಮೂಲದ ಗುಣಾತ್ಮಕತೆಯನ್ನು ಸುಧಾರಣೆಗೆ ಅಡಚಣೆಗಳಾಗಿ ಪರಿವರ್ತಿತಗೊಂಡಿವೆ. ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಈ ಅಂಶಗಳು ಶಾಪವಾಗಿ ಪರಿಗಣಿಸಲ್ಪಟ್ಟಿವೆ. ಹೀಗೆ ಶಾಪವಾಗಿರುವುದರಿಂದ, ಆರ್ಥಿಕ ಬೆಳವಣಿಗೆಯಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದರೆ ನಿರಕ್ಷರತೆ ಮತ್ತು ಕೌಶಲ್ಯ ರಹಿತತೆಯನ್ನು ನಿರ್ನಾಮಗೊಳಿಸಲು ಪಣ ತೊಡಬೇಕಾಗಿದೆ.

ಅಧ್ಯಯನದ ಸಮಸ್ಯೆ ಮತ್ತು ಮಹತ್ವ :

ಭಾರತ ಒಂದು ಅಭಿವೃದ್ಧಿ ಶೀಲ ರಾಷ್ಟ್ರ. ಇಲ್ಲಿ ರಸಗೊಬ್ಬರಗಳ ಉತ್ಪಾದನೆ ಬಳಕೆ ಹೇಗಿದೆ ಎಂಬುದನ್ನು ಗಮನಿಸೋಣ, ವರ್ಷದಿಂದ ವರ್ಷಕ್ಕೆ ರಸಗೊಬ್ಬರಗಳ ಉತ್ಪಾದನೆ, ಬೇಡಿಕೆ ಏರುತ್ತಿದೆ, ಹಾಗೆಯೇ ಸಮಸ್ಯೆಗಳು ತಲೆದೋರುತ್ತಿವೆ. ಯಾಕೆಂದರೆ ಅಧಿಕ ಇಳುವರಿ ತಳಿಗಳು, ನೀರಾವರಿ ಹೆಚ್ಚಿದಂತೆಲ್ಲ ರೈತರು ಸಹ ರಸಗೊಬ್ಬರಗಳ ಬಳಕೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ಎದುರಿಸುತ್ತಿರುವ ಸಮಸ್ಯೆಗಳು ಯಾವ ಯಾವ ಬೆಳೆಗಳಲ್ಲಿ ಎಷ್ಟು ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಬೇಕು, ಹೀಗೆ ಬಳಸಿದ ರಸಗೊಬ್ಬರಗಳಿಂದ ಅಧಿಕ ಇಳುವರಿ ಬರುತ್ತದೆಯೇ, ಇದು ಉತ್ಪಾದನೆ ಕಡೆಯ ಸಮಸ್ಯೆಯಾದರೆ. ಮಾರುಕಟ್ಟೆ ಕಡೆಯ ಸಮಸ್ಯೆಗಳು ಇನ್ನು ಅಧಿಕವಾಗಿವೆ. ಮಾರುಕಟ್ಟೆ ಎಂದಾಕ್ಷಣ ರೈತ ಕಂಗಾಲಾಗಬಹುದು, ಯಾಕೆಂದರೆ ಕಾರ್ಖಾನೆಗಳ ಉತ್ಪಾದಕತೆ ಹೆಚ್ಚಿದರೂ ರಸಗೊಬ್ಬರಗಳ ಲಭ್ಯತೆಯಲ್ಲಿ ಪ್ರತಿವರ್ಷವೂ ಕೊರತೆಯನ್ನು ಕಾಣುತ್ತಿದ್ದೇವೆ.

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಸಮಸ್ಯೆಗಳು:

ಇದಕ್ಕೆ ಸಂಬಂಧಪಟ್ಟ ಇದಕ್ಕೆ ಸಮೀಪವಾದ ಹಲವು ಅಧ್ಯನಗಳನ್ನು ಅವಲೋಕನ ಮಾಡಲಾಯಿತು. ರಸಗೊಬ್ಬರಗಳು ಬೆಳೆಗಳ ಉತ್ಪಾದಕತೆಗೆ ಅತಿ ಅವಶ್ಯಬೇಕಾದ ಸಂಪನ್ಮೂಲ ಎಂಬುದನ್ನು ಜಲನ್ ಎಂಬ ಅರ್ಥಶಾಸ್ತ್ರಜ್ಞ ಕೃಷಿ ಸಂಪನ್ಮೂಲ ಮಾರುಕಟ್ಟೆ ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಇವರ ಪ್ರಕಾರ ರಸಗೊಬ್ಬರಗಳು ಉಪಯೋಗ ಬೆಳೆಯ ವಿವಿಧ ತಳಿಗಳು, ನೀರಾವರಿ ಲಭ್ಯತೆ, ಮಣ್ಣಿನ ಗುಣಾಂಶ ಮೊದಲಾದವುಗಳ ಮೇಲೆ ಅವಲಂಬಿತವಾಗಿರುತ್ತದೆ. ರಸಗೊಬ್ಬರಗಳು ಇಂದು ರೈತರ ಬಳಕೆಯ ಅನಿವಾರ್ಯ ಉತ್ಪಾದನಾಂಗವಾಗಿದೆ. ಯಾಕೆಂದರೆ ಹಸಿರು ಕ್ರಾಂತಿಯ ನಂತರ, ರಾಷ್ಟ್ರ ಸ್ವಾವಲಂಬನೆ ಸಾಧಿಸಬೇಕೆಂಬ ಉದ್ದೇಶದಿಂದ ರಸಗೊಬ್ಬರಗಳ ಬಳಕೆ ಹೆಚ್ಚಳವಾಗಿದೆ. ರಸಗೊಬ್ಬರಗಳು, ನೀರಾವರಿ, ಅಧಿಕ ಇಳುವರಿ ತಳಿಗಳೊಂದಿಗೆ ಉತ್ತಮ ಫಲಿತಾಂಶ ನೀಡಿದೆ 1955-56 ರ ಅವಧಿಯಲ್ಲಿ 0.13 ದಶಲಕ್ಷಶ ಟನ್ ಗಳಷ್ಟೆ ರಸಗೊಬ್ಬರ ಬಳಸಿ 68 ಮಿಲಿಯನ್ ಟನ್ ಗಳಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸಿತು. 1983 - 84 ರಲ್ಲಿ ರಸಗೊಬ್ಬರಗಳ ಬಳಕೆ 7.79 ದಶಲಕ್ಷ ಟನ್ ಗಳಷ್ಟಾಯಿತು. ಆಹಾರ ಧಾನ್ಯಗಳ ಉತ್ಪಾದನೆ 151-5 ದಶಲಕ್ಷ ಟನ್ ಗಳಷ್ಟು 1991-92 ರಲ್ಲಿ 9.45 ದಶಲಕ್ಷ ಟನ್‌ಗಳು ರಸಗೊಬ್ಬರ ಉತ್ಪಾದನೆ ಆಹಾರ ಧಾನ್ಯಗಳ ಉತ್ಪಾದನೆ 176.4 ದಶಲಕ್ಷ ಟನ್ ಗಳು 2000-01 ರಲ್ಲಿ 15.22 ದಶಲಕ್ಷ ಟನ್‌ಗಳ ರಸಗೊಬ್ಬರಗಳ ಬಳಕೆ ಮತ್ತು ಆಹಾರ ಧಾನ್ಯಗಳು 208.9 ದಶಲಕ್ಷ ಟನ್ ಗಳು ಇದನ್ನು ಗಮನಿಸಿದರೆ ರಸಗೊಬ್ಬರಗಳು ಬೆಳೆಗಳ ಇಳುವರಿಯನ್ನು ಹೆಚ್ಚಿಸುವಲ್ಲಿ ಮಹತ್ವ ಪಾತ್ರವನ್ನು ವಹಿಸಿವೆ. ಇದಕ್ಕೆ ಸಂಬಂಧಪಟ್ಟಂತೆ ಕೃಷಿಗೆ ಸಂಬಂಧಪಟ್ಟ ರಾಯಲ್ ಆಯೋಗ, ಈ ರೀತಿ ಹೇಳಿದೆ. ಭಾರತದ ಮಣ್ಣಲ್ಲಿ ಅನೇಕ ಪೋಷಕಾಂಶಗಳ ಕೊರತೆ ಇರುತ್ತದೆಂದು, ಈ ಪೋಷಕಾಂಶಗಳ ಕೊರತೆಯನ್ನು ನೀಗಲು ರಸಗೊಬ್ಬರಗಳ ಬಳಕೆ ಅವಶ್ಯವೆಂಬುದನ್ನು ಮನನ ಮಾಡಿಕೊಟ್ಟಿತು. ರಸಗೊಬ್ಬರಗಳನ್ನು ತಿಪ್ಪೆಗೊಬ್ಬರ , ಹಸಿರೆಲೆ ಗೊಬ್ಬರದ ಜೊತೆ ಉಪಯೋಗಿಸಿದರೆ ಹೆಚ್ಚು ಪರಿಣಾಮಕಾರಿಯಾಗಿ ರಸಗೊಬ್ಬರ ಕೆಲಸ ಮಾಡುತ್ತದೆಂದು (ಜಲನ್) ಹೇಳಿರುತ್ತಾರೆ. ಬೆಳೆಗಳ ಇಳುವರಿ ಹೆಚ್ಚಾಗುವುದಕ್ಕೆ ರಸಗೊಬ್ಬರಗಳೊಂದೇ ಕಾರಣವಲ್ಲ. ಇತರ ಸಂಪನ್ಮೂಲಗಳು ಕಾರಣ ಎಂಬುದಾಗಿದೆ (ಜಲನ್) ರಸಗೊಬ್ಬರಗಳ ಹಾಗೂ ಇನ್ನಿತರ ಸಂಪನ್ಮೂಲಗಳು ಇಳುವರಿಯ ಮೇಲೆ ಬೀರುವ ಪರಿಣಾಮವನ್ನು ಒಂದಕ್ಕೊಂದು ಪ್ರತ್ಯೇಕಿಸಲು ಬರುವುದಿಲ್ಲ ಎಂಬುದಾಗಿ (ಆಚಾರ್ಯ) ಹೇಳುತ್ತಾರೆ. ರಸಗೊಬ್ಬರ ಬೇಡಿಕೆ ಅವಲಂಬಿತಬೇಡಿಕೆ () ರಸಗೊಬ್ಬರ ಬೇಡಿಕೆ ಹೆಚ್ಚಾಗಬೇಕೆಂದರೆ, ಅಧಿಕ ಇಳುವರಿ ಬೀಜಗಳ ಬೇಡಿಕೆ, ನೀರಾವರಿ, ಔಷಧಿಗಳ ಉಪಯೋಗ ಹೆಚ್ಚಾಗುವುದಕ್ಕೆ ಮಾತ್ರ ಎಂಬುದು (ಆಚಾರ್ಯರ ಅಭಿಪ್ರಾಯ) ಆದ್ದರಿಂದ, ರಸಗೊಬ್ಬರಗಳ ಉಪಯೋಗದಿಂದ ಇಳುವರಿ ಹೆಚ್ಚಾಗಿದೆಯೆಂದರೆ, ಅಧಿಕ ಇಳುವರಿ ತಳಿಗಳ ಬೀಜ ಉಪಯೋಗಿಸುವುದು ನೀರಾವರಿ ಸೌಲಭ್ಯ ಇರುವುದು ಸರ್ವೇ ಸಾಮಾನ್ಯವಾಗಿದೆ. ಆದ್ದರಿಂದ ರಸಗೊಬ್ಬರಗಳ ಇಳುವರಿ

ಮೇಲೆಬೀಳುವ ಪರಿಣಾಮವನ್ನು ಪ್ರತ್ಯೇಕವಾಗಿ ಹೇಳಲು ಸಾಧ್ಯವಾಗುವುದಿಲ್ಲ ರಸಗೊಬ್ಬರಗಳು ಅವಲಂಬಿತ ಬೇಡಿಕೆ ಮೇಲೆ ನಿಂತಿದೆ.

ಭಾರತದಲ್ಲಿ ರಸಗೊಬ್ಬರಗಳಬಳಕೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದರು, ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ರಸಗೊಬ್ಬರಗಳು ಹೆಕ್ಟೇರು ವಾರು ಬಳಕೆ ಕಡಿಮೆಯೇ; ಚೀನಾದಲ್ಲಿ 1982 - 83 ರಲ್ಲಿ ಹೆಕ್ಟೇರುವಾರು ಬಳಕೆ 157.5 ಕೆ.ಜಿ. ಗಳಾಗಿದ್ದರೆ ಭಾರತದದ್ದು ಇದೇ ಅವಧಿಯಲ್ಲಿ 34.6 ಕೆ.ಜಿಗಳಷ್ಟು ಇಟಾಲಿಯದು 161.3 ಕೆ.ಜಿಗಷ್ಟು ಇದೆ. ಜಪಾನ್ 412.1 ಕೆ.ಜಿ.ಗಳಷ್ಟಿದೆ. ಈ ಅಂಕಿ ಅಂಶಗಳ ಸಾದರಪಡಿಸುವುದೆಂದರೆ ಭಾರತ ಇನ್ನೂ ತನ್ನ ರಸಗೊಬ್ಬರಗಳ ಬಳಕೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ರಸಗೊಬ್ಬರಗಳ ಬಳಕೆ ಹೆಚ್ಚುವುದರಿಂದ ಬೆಳೆ ಇಳುವರಿಯೂ ಸಹ ಹೆಚ್ಚುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ಭಾರತ ಆಲೋಚಿಸಬೇಕಾಗಿದೆ. ಎಂಬುದೆ (ಜಲನ್) ಹಲವರ ವಾದ.

ಇವರ ಪ್ರಕಾರ ಭಾರತದಲ್ಲಿ ವಿವಿಧ ಪ್ರದೇಶಗಳಲ್ಲಿ ರಸಗೊಬ್ಬರಗಳ ಬಳಕೆಯಲ್ಲಿ ವ್ಯತ್ಯಾಸವಿದೆ. ಮಧ್ಯ ಭಾರತದಲ್ಲಿ 1983 - 84 ರಲ್ಲಿ 34-6 ಕೆ.ಜಿ.ಗಳಷ್ಟು ಪ್ರತಿ ಹೆಕ್ಟೇರಿಗೂ ರಸಗೊಬ್ಬರಗಳನ್ನು ಬಳಸಲಾಗುತ್ತಿತ್ತು. ಪೂರ್ವ ಭಾರತದಲ್ಲಿ (ಅಸ್ಸಾಂ ನಾಗಾಲ್ಯಾಂಡ ಮುಂತಾದವುಗಳ) ರಸಗೊಬ್ಬರಗಳ ಬಳಕೆ 24.3 ಕೆ.ಜಿಗಳು / ಹೆಕ್ಟೇರಿಗೆ, ಉತ್ತರ ಭಾರತದಲ್ಲಿ 19.3 ಕೆ.ಜಿ.ಹೆಕ್ಟೇರಿಗೆ ಬಳಸಲಾಗುತ್ತಿತ್ತು. ದಕ್ಷಿಣ ಭಾರತದಲ್ಲಿ 69.2 ಕೆ.ಜಿ. /ಹೆಕ್ಟೇರಿಗೆ ಬಳಸಲಾಗುತ್ತಿತ್ತು. ಪಶ್ಚಿಮ ಭಾರತದಲ್ಲಿ (ಗುಜರಾತ್, ಮಹಾರಾಷ್ಟ್ರ ಮುಂತಾದವುಗಳು) 31.8 ಕೆ.ಜಿ. / ಹೆಕ್ಟೇರಿಗೆ ಬಳಸಲಾಗುತ್ತಿತ್ತು. ಇದು ಸ್ಪಷ್ಟವಾಗಿ ಹೇಳುವುದೇನೆಂದರೆ ಭಾರತದಲ್ಲೇ ರಸಗೊಬ್ಬರ ಬಳಕೆಯಲ್ಲಿ ಪ್ರಾದೇಶಿಕ ಅಸಮತೋಲನವಿರುವುದು ಗೋಚರಿಸುತ್ತದೆ. ಆದ್ದರಿಂದ ರಸಗೊಬ್ಬರಗಳ ಬೇಡಿಕೆ ಪೂರೈಕೆ ಕೃಷಿ ವಲಯ ಆಧುನೀಕರಣ ಗೊಳ್ಳುವುದಕ್ಕನುಗುಣವಾಗಿ ಇರುತ್ತದೆ. ಪೂರ್ವ ಭಾರತ ಮತ್ತು ಉತ್ತರ ಭಾರತದಲ್ಲಿ ರಸಗೊಬ್ಬರಗಳ ಬಳಕೆ ಅತಿ ಕಡಿಮೆಯಿದೆ. ಪೂರ್ವ ಭಾರತದ ರಾಜ್ಯಗಳು ಗುಡ್ಡಗಾಡು ಹಾಗೂ ಅರಣ್ಯಗಳಿಂದ ಕೂಡಿರುವುದರಿಂದ ಇಲ್ಲಿ ಕೃಷಿಯನ್ನು ಆಧುನೀಕರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ರಸಗೊಬ್ಬರಗಳ ಬಳಕೆ ಕಡಿಮ ಇದೆ. ಆದರೆ ರಸಗೊಬ್ಬರಗಳ ಬಳಕೆ ನಿಗದಿತ ನೀರಾವರಿ ಪ್ರದೇಶಗಳಲ್ಲ ಹೆಚ್ಚು ಚಾಲನೆಯಲ್ಲಿದೆ. ಆದ್ದರಿಂದ ಹಸಿರು ಕ್ರಾಂತಿ ನೀತಿಗಳನ್ನು ಭಾರತದ ಸರಕಾರ ರೂಪಿಸಿದ್ದರು, ಅದು ಕೆಲವೆ ಪ್ರದೇಶಗಳಿಗೆ ಸೀಮಿತಗೊಂಡಿದೆ ಎಂಬುದೆ ಹಲವರ ವಾದ. ಇದೇನೆ ಇರಲಿ ಹಸಿರು ಕ್ರಾಂತಿ ನಂತರದ ದಿನಗಳ ರಸಗೊಬ್ಬರಗಳ ಬಳಕೆ ಗಣನೀಯ ಪ್ರಮಾಣದಲ್ಲಿ ಏರಿದ್ದರೂ, ಇದು ಬಳಕೆಯ ಸಾಮರ್ಥ್ಯಕ್ಕನುಗುಣವಾಗಿಲ್ಲ ಎಂಬುದನ್ನು ನಾವು ತಿಳಿಯಬಹುದಾಗಿದೆ. ಆದ್ದರಿಂದ ಬಳಕೆಯ ಸಾಮರ್ಥ್ಯಕ್ಕನುಗುಣವಾಗಿ ರಸಗೊಬ್ಬರಗಳ ಬಳಕೆಯನ್ನು ಹೆಚ್ಚಿಸುವ ಕಡೆಗೆ ನಾವು ಮಹತ್ವ ಕೊಡಬೇಕಾಗಿದೆ.

ರಸಗೊಬ್ಬರಗಳ ವಿತರಣೆ ಮೊದ ಮೊದಲು ಖಾಸಗಿ ಸಂಸ್ಥೆಗಳ ಮೂಲಕ ನಡೆಯುತ್ತಿತ್ತು. ಅನಂತರ ಸರಕಾರಿ ಮತ್ತು ಕಂಪನಿ ಸಂಸ್ಥೆಗಳ ಮೂಲಕ ರಸಗೊಬ್ಬರಗಳು ಸರಬರಾಜಾಗುತ್ತಿತ್ತು (ಜಲನ್) ಉತ್ತರ ಪ್ರದೇಶದ ಗೋರಖ್‌ಪುರ್ ಜಿಲ್ಲೆಯಲ್ಲಿ ರಸಗೊಬ್ಬರಗಳು ಕೆಳಕಂಡಂತೆ ಸರಬರಾಜಾಗುತ್ತಿದ್ದವು.

ಅ) ಖಾಸಗಿ ವಿತರಕರು			
1)	ಸಗಟು ವ್ಯಾಪಾರದಾರರು	16	ಒಟ್ಟು
2)	ಚಿಲ್ಲರೆ ವ್ಯಾಪಾರಗಳು	700	716
ಆ) ಸಹಕಾರಿ			
1)	ದೊಡ್ಡ ಪ್ರಮಾಣದ ಸಹಕಾರಿ ಸೊಸೈಟಿಗಳು	8	
2)	ರೈತ ಸೇವಾ ಸೊಸೈಟಿಗಳು	17	
3)	ಸಾಧನ ಸಹಕಾರಿ ಸೊಸೈಟಿಗಳು	264	289
ಇ) ಕೃಷಿ ಇಲಾಖೆ / ಬ್ಲಾಕ್			
1)	30	60	64
ಈ)	ಉತ್ತರ ಪ್ರದೇಶದ ಆಗ್ರೋ ಕೇಂದ್ರಗಳು	-	10
ಉ)	ಇಫ್ಕೋ ರೈತರ ಸೇವಾ ಕೇಂದ್ರಗಳು		1
ಊ)	ಇತ್ಯಾದಿ		5
			1,085

ರಸಗೊಬ್ಬರಗಳ ವಿತರಣೆ ಜಾಲ ಗೊರಖ್‌ಪುರ್ ಜಿಲ್ಲೆಯಲ್ಲಿ ಖಾಸಗಿಯವರ ಕೈಯಲ್ಲಿ ಇದೆ. ಖಾಸಗಿ ಚಿಲ್ಲರೆ ಮಾರಾಟಗಾರರು ಇದರಲ್ಲಿ ಅತಿ ಹೆಚ್ಚಾಗಿ ಬರುತ್ತಾರೆ. ನಂತರ ಸರಕಾರಿ ವಲಯ ಗೊಬ್ಬರಗಳ ವಿತರಣೆಯಲ್ಲಿ ಬರುತ್ತದೆ. ಇಲ್ಲಿ ರೈತರು ಖಾಸಗಿ ವಿತರಕರಿಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ, ಯಾಕೆಂದರೆ ಖಾಸಗಿ ವಿತರಕರು ಸಮಯಕ್ಕೆ ಸರಿಯಾಗ ರೈತರಿಗೆ ರಸಗೊಬ್ಬರಗಳನ್ನು ವಿತರಿಸುತ್ತಾರೆ (ಜಲನ್) ಸಾಲದಲ್ಲಿ ರಸಗೊಬ್ಬರಗಳನ್ನು ಪಡೆಯಬೇಕೆನ್ನುವರು ಖಾಸಗಿ ವಿತರಕರನ್ನು ಬಿಟ್ಟು ಸಹಕಾರಿ ಹಾಗೂ ಸರಕಾರಿ ಸಂಸ್ಥೆಗಳಿಗೆ ಹೋಗುತ್ತಾರೆ, ಎಲ್ಲ ರೈತರು ಹೋಗುವುದಿಲ್ಲ ಯಾಕೆಂದರೆ ಇಲ್ಲಿ ನೌಕರ ಷಾಹಿಯ ಅಡಚಣೆಗಳು ಇವರ ನಿರ್ಲಕ್ಷ್ಯ ಮನೋಭಾವದಿಂದಾಗಿ ಸರಕಾರಿ ಹಾಗೂ ಸಹಕಾರಿ ಸಂಸ್ಥೆಗಳ ವಿತರಕರು ಆಕರ್ಷಕರಾಗಿರುವುದಿಲ್ಲ (ಜಲನ್) ಇದು ಗೊರಖ್‌ಪುರ ಜಿಲ್ಲೆಯಲ್ಲಿ ಅಧ್ಯಯನ ಸಂದರ್ಭದಲ್ಲಿ ಹೊರಹೊಮ್ಮಿದ್ದ ಅಂಶ. ಬಹಳಷ್ಟು ರೈತರು ಪರವಾನಿಗೆ ಪಡೆದ ವಿತರಕರ ಬಗ್ಗೆ ಮಾಹಿತಿ ಇರುವುದಿಲ್ಲ. ಇವರು ಪರವಾಗಿ ಇಲ್ಲದ ವಿತರಕರ ಬಳಿಯು ರಸಗೊಬ್ಬರಗಳನ್ನು ಖರೀದಿಸುತ್ತಾರೆ. ಆದ್ದರಿಂದಾಗಿ ಇದರ ಗುಣಮಟ್ಟದ ರಸಗೊಬ್ಬರ ಪಡೆಯುವಲ್ಲಿ ಸೋಲುತ್ತಾರೆ. ಖಾಸಗಿ ಪರವಾನಿಗೆ ಇಲ್ಲದ ವಿತರಕರು ರಸಗೊಬ್ಬರಗಳಲ್ಲಿ ಕಲಬೆರಿಕೆ ಮಾಡುವುದು ಸಾಬೀತಾಗಿದೆ. ಆದರೆ ರೈತರು ಹೊಲಗಳಿಗೆ ರಸಗೊಬ್ಬರ

ಉಪಯೋಗಿಸಿದ ನೆಮ್ಮದಿ ಸಂತೃಪ್ತಿ ಅವರಲ್ಲಿ ಮೂಡುತ್ತದೆ. ಆದರೆ ರಸಗೊಬ್ಬರಗಳ ಗುಣಮಟ್ಟದ ಬಗ್ಗೆ ರೈತರು ತಲೆಕೆಡಿಸಿಕೊಳ್ಳುವುದಿಲ್ಲ. ಆದ್ದರಿಂದ ಪರವಾನಿಗೆ ಇಲ್ಲದೆ ವಿತರಕರಿಂದ ಹೆಚ್ಚು ರೈತರು ಕೊಳ್ಳುವುದು. ಇಲ್ಲಿ ಪರವಾನಿಗೆ ವಿತರಕರಿಗಿಂತ ಕಡಿಮೆ ಬೆಲೆಯಲ್ಲಿ ಮಾರುವುದರಿಂದ ಇವು ಹೆಚ್ಚು ಆಕರ್ಷಕವಾಗಿದೆ. ರಸಗೊಬ್ಬರಗಳ ಸಾಗಾಣಿಕೆಯ ಬಗ್ಗೆ ಅಧ್ಯಯನ ನಡೆದಿದೆ. ಸರಸಾರಿ ರಸಗೊಬ್ಬರಗಳನ್ನು ಸರಾಸರಿ 3 ಕಿ.ಮೀ. ದೂರದಿಂದ ತರುತ್ತಾರೆ. ರಸಗೊಬ್ಬರಗಳನ್ನು ಸಾಗಾಣಿಕೆ ಮಾಡಲು ಬಳಸುವ ವಾಹನಗಳೆಂದರೆ ರಿಕ್ಷಾ, ಟ್ರಾಕ್ಟರ್, ಟೈರ್ ಎತ್ತಿನ ಗಾಡಿ ಹಾಗೂ ಎತ್ತಿನ ಗಾಡಿ, ಗೋರಕ್ ಪುರದಲ್ಲಿ ನಡೆದ ಅಧ್ಯಯನ ಪ್ರಕಾರ (ಜಲನ್) ಈ ಅಂಶವು ಬೆಳಕಿಗೆ ಬಂದಿದೆ. ಸಾಗಾಣಿಕೆ ವೆಚ್ಚ ಒಂದು ಚೀಲಕ್ಕೆ ಒಂದು ಕಿ.ಮೀ. ಗೆ 1 ರೂ.ನಂತೆ ತಗಲುತ್ತದೆ.

ರಸಗೊಬ್ಬರ ಬೆಲೆಗಳನ್ನು ಸರಕಾರ ನಿಗಧಿಪಡಿಸಿದ್ದು ಮಾರುಕಟ್ಟೆಯ ಪೂರೈಕೆ ಮತ್ತುಬೇಡಿಕೆಯ ಮೇಲೆ ರಸಗೊಬ್ಬರ ಬೆಲೆಗಳು ವ್ಯತ್ಯಾಸಗೊಳ್ಳುತ್ತದೆ. ಚೀಲದ ಮೇಲೆ ನಮೂದಿಸಿರುವ ಬೆಲೆಯೆ ಬೇರೆ ರೈತರು ಕೊಡುವ ಬೆಲೆಯೇ ಬೇರೆ ಎಂಬುದು ಗೋರಕ್ ಪುರ್ ನಲ್ಲಿ ನಡೆದ (ಜಲನ್) ಅಧ್ಯಯನದ ಮೂಲಕ ಬೆಳಕಿಗೆ ಬಂದಿದೆ. ಒಂದು ಚೀಲಕ್ಕೆ 5 ರಿಂದ 10 ರೂ.ಗಳು ಜಾಸ್ತಿ ಕೊಡಬೇಕಾಗುತ್ತದೆಂಬುದು ಗೋರಾಕ್ ಪುರ್ ಅಧ್ಯಯನದಿಂದ ತಿಳಿದು ಬಂದ ವಿಷಯವಾಗಿದೆ. ಕೆಲವು ಬಾರಿ ರಸಗೊಬ್ಬರಗಳ ಪೂರೈಕೆಯಲ್ಲಿ ಕಡಿತವುಂಟಾಗಿ, ಇದರ ಜೊತೆಗೆ ಮಾಮೂಲಿ ಬೇಡಿಕೆಗಿಂತ ಜಾಸ್ತಿಬೇಡಿಕೆಯಾಗಿ ರೈತರು ಹೆಚ್ಚಿನ ಬೆಲೆ ಕೊಟ್ಟು ರಸಗೊಬ್ಬರಗಳನ್ನು ಕೊಂಡುಕೊಳ್ಳಬೇಕಾಗುತ್ತೆ. ಆದ್ದರಿಂದ ಸರಕಾರ ಬೆಲೆಯನ್ನು ನಿಗದಿಗೊಳಿಸಿದರೂ, ಇದು ರೈತರ ಸಹಾಯಕ್ಕೆ ಬರುವುದಿಲ್ಲ ಎಂಬುದು ಗೊರಖ್‌ಪುರದ ಅಧ್ಯಯನದಿಂದ ತಿಳಿದು ಬಂದ ವಿಷಯವಾಗಿದೆ. ಆದ್ದರಿಂದ ಸರಕಾರ ರಸಗೊಬ್ಬರಗಳನ್ನು ಸುಲಭ ಬೆಲೆಯಲ್ಲಿ ರೈತರಿಗೆ ಸಿಗಬೇಕೆಂದು ರಸಗೊಬ್ಬರ ಮಾರುಕಟ್ಟೆಯನ್ನು ನಿಯಂತ್ರಿಸಿದರೂ, ಅದು ಸುಲಭ ಬೆಲೆಯಲ್ಲಿ ರೈತರಿಗೆ ಸಿಗುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ.

ರೈತರು ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಸಗೊಬ್ಬರಗಳ ಬೆಲೆ, ಸ್ಥಳ, ಸಾಗಾಣಿಕೆ , ಸಾಲ, ಕಲಬೆರಕೆ, ಮತ್ತು ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ದೊರೆಯುವ ಬಗ್ಗೆ ಸಮಸ್ಯೆಗಳಿವೆ.

ಆದರೆ ಗೋರಖ್ ಪುರ್ ಜಿಲ್ಲೆಯ ಅಧ್ಯನ ಪ್ರಕಾರ ದೊಡ್ಡ ಸಮಸ್ಯೆಯೆಂದರೆ ಕಲಬೆರಕೆ ಶೇ. 46.7 ರಷ್ಟು ರೈತರು ಕಲಬೆರಕೆಯ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಶೇ. 28 ರಷ್ಟು ರೈತರು ರಸಗೊಬ್ಬರ ಪೂರೈಕೆಯು ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಶೇ. 14 ರಷ್ಟು ರೈತರು ಬೆಲೆಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಮಾರಾಟ ಸ್ಥಳದ ಬಗ್ಗೆ ಶೇ. 45 ರಷ್ಟು ರೈತರು ಆತಂಕ ವ್ಯಕ್ತಪಡಿಸುತ್ತಾರೆ. ಸಾಲದ ಬಗ್ಗೆ ಶೇ. 2.9 ರೈತರು ಆತಂಕ ವ್ಯಕ್ತಪಡಿಸುತ್ತಾರೆ.

ಮೇಲಿನ ಅಂಕಿ ಅಂಶಗಳನ್ನಿಟ್ಟುಕೊಂಡು ನಾವು ವಿಶ್ಲೇಷಿಸಿದಾಗ ಕಲಬೆರಕೆಯ ಬಗ್ಗೆ ಅಧ್ಯಯನಿಸಿದ ರೈತರಲ್ಲಿ ಶೇಕಡ 47 ಕ್ಕಿಂತ ಹೆಚ್ಚು ರೈತರು ಆಂತಕ ವ್ಯಕ್ತಪಡಿಸುತ್ತಾರೆ. ಕಲಬೆರಕೆಯೆಂದರೆ ಮಣ್ಣಿನ ಉಂಡೆಗಳು, ಅಥವಾ ಪೋಷಕಾಂಶಗಳಲ್ಲದ ಕೆಲವು ಗೊಬ್ಬರಗಳ ಬಣ್ಣಕ್ಕೆ ಹೊಂದಾಣಿಕೆಯಾಗುವ ವಸ್ತುಗಳನ್ನು ಬೆರೆಸಿ ಮಾರುತ್ತಾರೆ. ರೈತರು ಇದರ ಬಗ್ಗೆ ಇಲ್ಲಿ ಹೆಚ್ಚು ಚಿಂತಿತರಾಗಿದ್ದಾರೆ. ಆದ್ದರಿಂದ ಕಲಬೆರಕೆಯನ್ನು ತಡೆಯಲು 1955 ರಲ್ಲಿ ರಸಗೊಬ್ಬರಗಳನ್ನು ಅವಶ್ಯಕ ಸರಕು ಕಾಯಿದೆ ಅಡಿಯಲ್ಲಿ ಕೇಂದ್ರ ಸರ್ಕಾರ ತಂದಿದೆ, ರಸಗೊಬ್ಬರಗಳ್ನನು ಕಲಬೆರಕೆ ಮಾಡುವವರ ಮೇಲೆ ಅಧಿಕಾರಿಗಳು ಕಾನೂನಿನ ಕ್ರಮ ಕೈಗೊಳ್ಳಬಹುದು. ಆದ್ದರಿಂದ ರೈತರಿಗೆ ಈ ರೀತಿಯ ಕಾನೂನಿದೆ ಎಂಬುದು ಬಹಳಷ್ಟು ಜನರಿಗೆ ತಿಳಿದೇ ಇಲ್ಲ. ಆದ್ದರಿಂದಲೇ ರೈತರು ಕಲಬೆರಕೆಯ ಬಗ್ಗೆ ಆತಂಕ ಗೊಂಡಿರುವುದು. ತಾವು ಕೊಡುವ ದುಡ್ಡಿಗೆ ಒಳ್ಳೆ ಗುಣಮಟ್ಟದ ರಸಗೊಬ್ಬರ ಸಿಗದಿದ್ದರೆ ಇದನ್ನು ಬೆಳೆಗಳಿಗೆ ಉಪಯೋಗಿಸಿದರೆ, ಇದು ಇಳುವರಿಯ ಮೇಲೆ ಪ್ರಭಾವ ಬೀರುವಲ್ಲಿ ಹೆಚ್ಚು ಶಕ್ತವಾಗಿದೆ. ಕೃಷಿ ತಜ್ಞರು ಶಿಫಾರಸ್ಸು ಮಾಡಿದಷ್ಟು ರಸಗೊಬ್ಬರ ಗಳನ್ನು ಆಯ ಬೆಳೆಗೆ ಹಾಕದಿದ್ದರೆ ಇಳುವರಿ ಕಡಿಮೆಯಾಗಿ ರೈತ ತನ್ನ ವ್ಯವಸಾಯದ ಉದ್ದೇಶ ಈಡೇರಿಕೆ ಕೈಗೂಡದಿರಬಹುದು. ಆದ್ದರಿಂದ ರಸಗೊಬ್ಬರಗಳ ಗುಣಮಟ್ಟ ಕಾಯ್ದಿಡುವದು ಅವಶ್ಯವಾದದ್ದು.

ನಂತರ ರಸಗೊಬ್ಬರಗಳ ಮಾರಾಟ ಸ್ಥಳದಿಂದ ಬಗ್ಗೆ ಶೇ. 45ರಷ್ಟು ರೈತರು ಅಸಮಾಧಾನ ಸೂಚಿಸಿದ್ದಾರೆ ರಸಗೊಬ್ಬರಗಳು ರೈತರಿಗೆ ಅನುಕೂಲವಾಗುವ ಸ್ಥಳದಲ್ಲಿ ಲಭ್ಯವಾಗುವುದಿಲ್ಲ. ದೂರದ ಅಭಿವೃದ್ಧಿ ಹೊಂದಿದ ಹಳ್ಳಿಗಳಲ್ಲೇ ಅಥವಾ ಹತ್ತಿರದ ಪಟ್ಟಣಗಳಿಂದಲೇ ರಸಗೊಬ್ಬರಗಳನ್ನು ರೈತರು ತರಬೇಕಾಗಿರುತ್ತದೆ. ಆದ್ದರಿಂದ ರೈತರು ತಮ್ಮ ಹಳ್ಳಿಗಳಲ್ಲೇ ರಸಗೊಬ್ಬರ ಸಿಗುವಂತ ರೀತಿಯಲ್ಲಿ ರಸಗೊಬ್ಬರ ವಿತರಣಾ ಜಾಲ ವಿಸ್ತರಿಸಬೇಕು. ಆಗ ರೈತರಿಗೆ ಒಳ್ಳೆ ಗುಣಮಟ್ಟದ ವಿಶ್ವಾಸಾರ್ಹತೆಯುಳ್ಳ ರಸಗೊಬ್ಬರಗಳನ್ನು ಪಡೆಯಬಹುದು ಏಕೆಂದರೆ ತನ್ನ ಊರಿನಲ್ಲೇ ವ್ಯಾಪಾರ ಮಳಿಗೆ ಇರುವುದರಿಂದ, ಅಂಗಡಿಯು ರೈತನಿಗೆ ಪರಿಚಿತವಾಗಿರುತ್ತದೆ. ಇದರಿಂದಾಗಿ ಮಾರಾಟಗಾರರು ತೂಕದಲ್ಲಿ ಮೋಸ ಬೇಲೆ ಹಾಗೂ ಗುಣಮಟ್ಟದಲ್ಲಿ ಮೋಸ ಮಾಡುವುದು ಕಡಿಮೆ ಇರುತ್ತದೆ. ಯಾಕೆಂದರೆ ಬೆಳಿಗ್ಗೆ ಎದ್ದ ವ್ಯಾಪಾರಿ ರೈತನ ಮುಖ ನೋಡಬೇಕಾಗುತ್ತದೆ. ಇದರಿಂದಾಗಿ ಅವನಿಗೆ ರೈತ ಅವಮಾನ ಮಾಡುವುದು ಅಥವಾ ದೂರು ಸಲ್ಲಿಸುವಂಥ ಅಂಶಗಳು ಹೆಚ್ಚಾಗಿ ಇರುತ್ತವೆ. ಆದ್ದರಿಂದ ವ್ಯಾಪಾರಿ ರೈತನಿಗೆ ಮೋಸ ಮಾಡಲು ಸಾಧ್ಯವಿಲ್ಲ. ಆದ್ದರಿಂದ ವ್ಯಾಪಾರಿಯೂ ಸಹ ತನ್ನ ವಿಶ್ವಾಸಾರ್ಹತೆಯನ್ನು ಬಲಪಡಿಸಿಕೊಳ್ಳಲು, ಒಳ್ಳೆ ಗುಣಮಟ್ಟದ ಸಮರ್ಪಕ ಬೆಲೆಯಲ್ಲಿ ರೈತರಿಗೆ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾನೆ, ಪಟ್ಟಣ ಪ್ರದೇಶಗಳಿಂದಲೇ ಅಥವಾ ದೂರ ಪ್ರದೇಶಗಳಿಂದಲೇ ರಸಗೊಬ್ಬರಗಳನ್ನು ತಂದರೆ ಮೇಲೆ ಹೇಳಿದ ವ್ಯತಿರಿಕ್ತ ಅಂಶಗಳು ರೈತರಿಗೆ ಎದುರಾಗುತ್ತವೆ.

ಸಾಲದ ಬಗ್ಗೆ ಶೇ. 2.8 ರಷ್ಟು ರೈತರು ಮಾತ್ರ ತಲೆಕೆಡಿಸಿಕೊಂಡಿದ್ದು ಸಹಕಾರಿ ಸೊಸೈಟಿಗಳಲ್ಲಿ ಸರಕಾರಿ ಸಂಸ್ಥೆಗಳಲ್ಲಿ ರೈತರಿಗೆ ಸರಳವಾಗಿ ರಸಗೊಬ್ಬರ ಕೊಳ್ಳಲು ಸಾಲ ಸಿಗುತ್ತಿರುತ್ತದೆ. ಮುಖ್ಯ ಕಾರಣಗಳಿಂದಾಗಿ ನಾವು ನಂಬಬಹುದಾಗಿದೆ. ಆದರೆ ಕಡಿಮೆ ಪ್ರಮಾಣದ ರೈತರು ಸಾಲದ ಲಭ್ಯತೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ರಸಗೊಬ್ಬರಗಳು ರೈತರಿಗೆ ಸುಲಭವಾಗಿ ಸಿಗುವಂತಾಗಲು ಹಾಗೂ ಬೆಲೆಗಳನ್ನು ಕೈಗೆಟುಕುವಂತಿರಲು ಸಹಾಯಧನವನ್ನು ನೀಡುತ್ತಿದೆ. ಇದರಲ್ಲಿ ರಸಗೊಬ್ಬರಗಳ ತಯಾರಕರಿಗೆ ಸಹಾಯಧನ ಸಾಗಾಣಿಕೆ ಸಹಾಯಧನ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯಧನ ಮುಂತಾದವುಗಳನ್ನು ಸರಕಾರ ಹಾಕಿಕೊಂಡಿದೆ. ದೇಶಾದ್ಯಂತ ರಸಗೊಬ್ಬರಗಳ ನೋಡಿದಂತೆ ರಸಗೊಬ್ಬರಗಳ ಬೆಲೆಗಳನ್ನು ಚೀಲದ ಮೇಲೆ ನಮೂದಿಸಿರುವುದಕ್ಕಿಂತ ವ್ಯತ್ಯಾಸಗೊಳ್ಳುತ್ತವೆ. ಇದು ಸುಸ್ಥಿತಿಯಲ್ಲಿರುವ ರೈತರಿಗಷ್ಟೆ ಕೈಗೆಟುಕುವಂತಾಗಿದೆ. ಶೇ. 34.88 ರಷ್ಟು ಭತ್ತಕ್ಕೆ , 25.8 ರಷ್ಟು ಗೋಧಿಗೆ 8.03 ರಷ್ಟು ಜೋಳಕ್ಕೆ 5.45 ರಷ್ಟು ಹತ್ತಿ 2.30 ರಷ್ಟು ಕಡಲೆಕಾಯಿಗೆ 1.69 ರಷ್ಟು ಮುಸುಕಿನ ಜೋಳಕ್ಕೆ ಉಳಿದಂತೆ ರಸಗೊಬ್ಬರಗಳು, ಆಲೂಗಡ್ಡೆ, ಮೆಣಸಿನಕಾಯಿ, ಬಾಳೆಹಣ್ಣು, ತಂಬಾಕು ಮುಂತಾದವುಗಳಿಗೆ ಹಂಚಿಕೆಯಾಗಿದೆ. ಆದ್ದರಿಂದ ನೀರಾವರಿಯ ಸುಸ್ಥಿತಿಯಲ್ಲಿರುವ ರೈತರು ಹೆಚ್ಚಾಗಿ ರಸಗೊಬ್ಬರಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ಬಳಕೆ ಮಾಡುವುದನ್ನು ಹೆಚ್ಚಿಸಲು ಸರಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದನ್ನು ಇತ್ತೀಚೆಗೆ ರಸಗೊಬ್ಬರಗಳ ಬಳಕೆ ಹೆಚ್ಚಾಗಿದ್ದರು. ಅಭಿವೃದ್ಧಿ ಹೊಂದಿ ರಾಷ್ಟಗಳಿಗೆ ಹೋಲಿಸಿದರೆ ಇದರ ಪ್ರಮಾಣ ಕಡಿಮೆಯೇ, ಆದರೂ ರಸಗೊಬ್ಬರಗಳು ಬೆಳೆ ಇಳುವರಿಯನ್ನು ಹೆಚ್ಚಿಸಲು ಇರುವ ಸುಲಭೋಪಾಯ ಎಂಬುದು ಸ್ಪಷ್ಟ ಆದರೆ ಈಗೀಗ ರಸಗೊಬ್ಬರಗಳ ಬಳಕೆಯ ವಿರುದ್ಧವು ವಿವಾದ ಎದ್ದಿದೆ. ಆದರೆ ಜೈವಿಕ ಗೊಬ್ಬರ ಬಳಸಬೇಕೆಂದು ಸಹ ವಾದಗಳು ನಡೆಯುತ್ತಿವೆ. ಆದರೂ ಸಹ ರಸಗೊಬ್ಬರಗಳ ಬಳಕೆ ಹೆಚ್ಚುತ್ತಲೇ ಇದೆ.

ರಸಗೊಬ್ಬರ ಕೈಗಾರಿಕೆಗಳ ಮೇಲೆ ವಿಶ್ವ ವ್ಯಾಪಾರ ಸಂಘಟನೆಯ ಪ್ರಭಾವ ಅತ್ಯಂತ ಮುಖ್ಯವಾದದ್ದು, ಇಂದು ವಿಶ್ವ ವ್ಯಾಪಾರ ಸಂಘಟನೆ ತನ್ನ ಕಬಂಧ ಬಾಹುಗಳನ್ನು ಕೇವಲ ಕೃಷಿ ಉತ್ಪನ್ನ, ಸಂಸ್ಕರಿತ ಉತ್ಪನ್ನಗಳಿಗಷ್ಟೆ ಸೀಮಿತಗೊಂಡಿಲ್ಲ ಇದು ಕೃಷಿ ಸಂಪನ್ಮೂಲ ಉತ್ಪನ್ನಗಳಿಗೂ ಅನ್ವಯಿಸುತ್ತದೆ. ಕೃಷಿ ಸಂಪನ್ಮೂಲ ಉತ್ಪನ್ನಗಳಲ್ಲಿ ರಸಗೊಬ್ಬರ ಔಷಧಿಗಳು, ಯಂತ್ರೋಪಕರಣಗಳಿಗೂ ಇದು ಅನ್ವಯಿಸುತ್ತದೆ. ಇಲ್ಲಿ ರಸಗೊಬ್ಬರಗಳ ಆಮದು ಮೇಲಿನ ಪರಿಮಾಣಾತ್ಮಕ (Quantitative) ನಿರ್ಬಂಧವನ್ನು ತೆಗೆಯಲಾಗಿದೆ. ಈ ನಿರ್ಬಂಧವನ್ನು ಏಪ್ರಿಲ್ 2001 ರಲ್ಲೆ ರದ್ದುಪಡಿಸಲಾಗಿತ್ತು. ಪರಿಮಾಣಾತ್ಮಕ (Quantitative) ನಿರ್ಬಂಧತೆಯನ್ನು ತೆಗೆದ ಮೇಲೆ, ರಸಗೊಬ್ಬರಗಳ ಆಮದು ಹೆಚ್ಚಳ ಕಂಡು ಬಂದಿದೆ.

ರಸಗೊಬ್ಬರ ಕೈಗಾರಿಕೆಯಲ್ಲಿ ಬಂಡವಾಳ ಹೂಡುವಿಕೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ, ರಸಗೊಬ್ಬರ ಕೈಗಾರಿಕೆಗಳು ಬಂಡವಾಳ ಸಾಂದ್ರ ಹಾಗೂ ಬಂಡವಾಳ ಹೂಡಿಕೆ ಬರುವ ಆದಾಯದಲ್ಲಿ ಕಡಿಮೆ, ಮೊದಲು ಬಹುರಾಷ್ಟ್ರೀಯ ಕಂಪನಿಗಳು, ಈ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡುತ್ತಿದ್ದವು. ಆದರೆ ವರ್ಷದಿಂದ ವರ್ಷಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಬೆಲೆ ಕುಸಿತದಿಂದ ಇಂದು ಈ ಕ್ಷೇತ್ರ ಆಕರ್ಷಕವಾಗಿ ಉಳಿದಿಲ್ಲ. ಇದರ ಜೊತೆಗೆ ರಸಗೊಬ್ಬರ ಕೈಗಾರಿಕೆಗಳನ್ನು ಸರಕಾರ ಖಾಸಗೀಕರಿಸುವ ಹಾದಿಯಲ್ಲಿದೆ. ರಾಷ್ಟ್ರೀಯ ರಸಗೊಬ್ಬರ ಲಿಮಿಟೆಡ್ ಕಂಪನಿಯನ್ನು ಖಾಸಗೀಕರಿಸುವಲ್ಲಿ ಕೇಂದ್ರ ಸರಕಾರ ಮುಂದಾಗಿದೆ. ಇಲ್ಲಿ ಖಾಸಗೀಕರಿಸುವಾಗ ಶೇ. 51 ಕ್ಕಿಂತ ಹೆಚ್ಚು ಷೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಮುಂದಾಗಿದೆ. ಈ ಸರಕಾರ ಸ್ವಾಮ್ಯದ ಕೈಗಾರಿಕೆಗಳಲ್ಲಿ ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (FACT) ಹಿಂದೂಸ್ತಾನ್ ಫರ್ಟಿಲೈಸರ್ ಕಾರ್ಪೊರೇಷನ್ ಲಿಮಿಟೆಡ್ (HFC) ಪ್ರಾಜೆಕ್ಟ್ ಅಂಡ್ ಡೆವಲಪ್ ಮೆಂಟ್ ಇಂಡಿಯಾ ಲಿಮಿಟೆಡ್ (PDIL) ಪೈರೇಟಸ್ ಫಾಸ್ಪೇಟ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ (PPC) ಕಂಪನಿಗಳನ್ನು ರೋಗಗ್ರಸ್ತ ಕಂಪನಿಗಳೆಂದು ಘೋಷಿಸಲಾಗಿದೆ. ರಸಗೊಬ್ಬರಗಳ ಸರಕಾರಿ ಸ್ವಾಮ್ಯದ ಕಂಪನಿಗಳು ರೋಗಗ್ರಸ್ತವಾಗಲು, ಅನೇಕ ಕಾರಣಗಳಿವೆ. ಒಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ರಸಗೊಬ್ಬರಗಳ ಬೆಲೆ ಕುಸಿತ; ಎರಡನೆಯದಾಗಿ ರಸಗೊಬ್ಬರಗಳಿಗೆ ಬೇಕಾದ ಇಂಧನ ನೈಸರ್ಗಿಕ ತೈಲದ ಅಭಾವ; ಮೂರನೆಯದಾಗಿ ರಸಗೊಬ್ಬರಗಳಿಗೆ ಸಹಾಯಧನ ನೀಡುತ್ತಿರುವುದು., ಇವೆಲ್ಲ ಕಾರಣಗಳನ್ನಿಟ್ಟುಕೊಂಡು ನಾವು ತುಲನೆ ಮಾಡಿದಾಗ ರಸಗೊಬ್ಬರಗಳ ಬಳಕೆ ಹೆಚ್ಚುತ್ತಿದ್ದರೂ, ಇವು ಸರಕಾರಿ ಸ್ವಾಮ್ಯದ ರಸಗೊಬ್ಬರ ಕಾರ್ಖಾನೆಗಳು ರೋಗಗ್ರಸ್ತವಾಗಲು ಕಾರಣಗಳನ್ನು ಈಗಾಗಲೆ ನಾವು ನೋಡಿದ್ದೇವೆ. ಆದರೆ ಜಾಗತೀಕರಣ ಮತ್ತು ಖಾಸಗೀಕರಣದ ಹಿನ್ನೆಲೆಯಲ್ಲಿ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ರಸಗೊಬ್ಬರಗಳಿಗೆ ಬೇಡಿಕೆ ಇಲ್ಲದಿರುವುದು ಕಾರ್ಖಾನೆಗಳ ರೋಗಗ್ರಸ್ಥವಾಗಲು ಕಾರಣವಲ್ಲದೆ ಇರಬಹುದು ಆದರೆ ನಿರ್ವಹಣೆ, ಸಂಶೋಧನಾ ವೆಚ್ಚ, ಸಾಗಣಿಕೆ ವೆಚ್ಚಗಳಲ್ಲಿ ಒಂದು ಸಕಾರಣ ನೀತಿಯನ್ನು ರೂಪಿಸದೇ ಇರುವುದೇ ಇದಕ್ಕೆ ಕಾರಣವೆಂದರೆ ತಪ್ಪಾಗಲಾರದು

ರಸಗೊಬ್ಬರಗಳ ಕಾರ್ಖಾನೆಗಳು ನೈಸರ್ಗಿಕ ತೈಲ ಅನಿಲದ ಕೊರತೆಯಿಂದಾಗಿ , ನ್ಯಾಪ್ತ ಬಳಸುವ ಕಡೆ ಹೆಚ್ಚು ಆಸ್ಥೆ ತೋರಿಸುತ್ತಿವೆ. ನ್ಯಾಪ್ತ ನೈಸರ್ಗಿಕ ತೈಲ ಅನಿಲಕ್ಕಿಂತ ಹೆಚ್ಚು ಬೆಲೆಯದು. ಇದರಿಂದಾಗಿ ರಸಗೊಬ್ಬರಗಳ ಉತ್ಪಾದನ ವೆಚ್ಚ ಏರಿಕೆಯಾಗುತ್ತಿದೆ. ಆದರೆ ರಸಗೊಬ್ಬರಗಳ ಕಾರ್ಖಾನೆಗಳ ಒಕ್ಕೂಟ, ನೈಸರ್ಗಿಕ ತೈಲ ಆಮದಿನ ಕಡೆಯು ಬಗ್ಗೆ ಹೆಚ್ಚು ಯೋಚಿಸುತ್ತವೆ. ಆದರೆ ಈ ನೀತಿಯ ಬಗ್ಗೆ ಬಹಳಷ್ಟು

ಕಾರ್ಖಾನೆಗಳು ಉತ್ಸಾಹದಿಂದೇನು ಇಲ್ಲ. ಯಾಕೆಂದರೆ ಇಂಧನದ ಹಂಚಿಕೆಯಲ್ಲಿ ಗೊಂದಲಗಳು ಮೂಡಬಹುದೂ ಎಂಬುದೆ ಇವರ ಅನಿಸಿಕೆ, ಆದ್ದರಿಂದ, ರಾಷ್ಟ್ರದ ಸ್ಥಳೀಯ ಕಂಪನಿಗಳ ಜೊತೆಗೆ ವ್ಯವಹಾರ ಕುದುರಿಸಲು ಒಕ್ಕೂಟದ ಕೆಲವು ಕಂಪನಿಗಳು ಯೋಚಿಸುತ್ತಿವೆ.

ಯು.ಎನ್. ಅವಸ್ಥಿಯವರ ನೇತೃತ್ವದಲ್ಲಿ ರಚಿಸಲಾಗಿದ್ದ ಆಯೋಗ ನೈಸರ್ಗಿಕ ತೈಲ ಅನಿಲ, ನ್ಯಾಫ್ತ ಇನ್ನಿತರ ಪೆಟ್ರೋಲಿಯಂ ಉತ್ಪನ್ನಗಳನ್ನು ಪೂರೈಸಲು ಸ್ಥಳೀಯವಾಗಿಯೇ ಪ್ರಯತ್ನಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಈ ಪ್ರಾಜೆಕ್ಟ್ ನಿಂದ ಪಡೆಯುವ ಇಂಧನದಿಂದ ರಸಗೊಬ್ಬರಗಳ ಉತ್ಪಾದನೆ ಶೇ. 20 ರಷ್ಟು ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆಂದು ಭಾವಿಸಲಾಗಿದೆ. 2001 ರಲ್ಲಿ ಇಂಧನ ತೈಲದ ಬೆಲೆ ಟನ್‌ನಿಗೆ ರೂ. 8380, ನ್ಯಾಪ್ತ ರೂ.13210, LSHS ರೂ. 8840 ಇತ್ತು. ಇದಕ್ಕನುಗುಣವಾಗಿ ದೀರ್ಘಕಾಲಿಕ ರಸಗೊಬ್ಬರ ನೀತಿಯ ಪ್ರಕಾರ ನ್ಯಾಫ್ತ ಮತ್ತು ಇಂಧನ ತೈಲದಿಂದ LNG ಗೆ ಉಪಯೋಗಿಸುವ ಕಡೆ ಹೆಚ್ಚು ಪ್ರಯತ್ನ ನಡೆಸಬೇಕೆಂದೆ ಈ ಸಮಿತಿ ಅಭಿಪ್ರಾಯ ಪಟ್ಟಿತು.

2000-01 ರಲ್ಲಿ ಯೂರಿಯಾ ಬೆಲೆಯನ್ನು ಶೇ. 15 ರಷ್ಟು ಏರಿಸಲಾಯಿತು. ಡಿ.ಎ.ಪಿ. ಬೆಲೆಯನ್ನು ಶೇ. 7 ರಷ್ಟು ಏರಿಸಲಾಯಿತು. ಪೊಟ್ಯಾಷ್ ಬೆಲೆಯನ್ನು ಬೆಲೆಯನ್ನು ಶೇ. 15 ರಷ್ಟು ಏರಿಸಲಾಯಿತು. ಆದರೆ ಇದು ಕೇಂದ್ರ ಆಯವ್ಯಯದಲ್ಲಿ ಸೇರಿಸಲಿಲ್ಲ ಮತ್ತು ರಸಗೊಬ್ಬರಗಳ ಬೆಲೆ ಏರಿಸಲಿಲ್ಲ. ರಸಗೊಬ್ಬರಗಳ ಬೆಲೆ ಏರಿಕೆ ಮೂಲಕ ರಸಗೊಬ್ಬರಗಳಿಗೆ ನೀಡುತ್ತಿರುವ ಸಹಾಯಧನವನ್ನು ಕಡಿತಗೊಳಿಸಬೇಕೆಂಬುದೇ ಆಗಿತ್ತು ಆದರೆ ರಸಗೊಬ್ಬರಗಳ ಸಹಾಯಧನ ಕಡಿತಗೊಳಿಸುವಲ್ಲಿ ಸರಕಾರ ಹೆಚ್ಚೇನು ಆಸಕ್ತಿ ವಹಿಸಿಲ್ಲ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಪ್ರಕಾರ ರಸಗೊಬ್ಬರಗಳ ಸಹಾಯಧನವನ್ನು ಹಂತ ಹಂತವಾಗಿ ತೆಗೆಯಬೇಕೆಂಬ ನಿರ್ದೇಶನ ಸರಕಾರಕ್ಕೆ ಬಿಸಿತುಪ್ಪದಂತೆ ಉಗುಳಲು ಆಗದೆ ನುಂಗಲು ಆಗದೆ ಆಗಿದೆ. ಯಾಕೆಂದರೆ ರಸಗೊಬ್ಬರಗಳನ್ನು ರೈತರು ಹೆಚ್ಚು ಹೆಚ್ಚು ಬಳಕೆ ಮಾಡುತ್ತಿದ್ದಾರೆ ; ರಸಗೊಬ್ಬರ ಬಳಕೆಯಿಂದ ಭೂಮಿಯ ಉತ್ಪಾದಕತೆ ಹೆಚ್ಚುತ್ತಿದೆ. ಹಾಗೂ ಬೆಳೆಗಳ ಇಳುವರಿ ಸಹ ಹೆಚ್ಚುತ್ತಿದೆ. ಇದರಿಂದಾಗಿ ರಸಗೊಬ್ಬರ ಬೆಲೆ ಏರಿಕೆಯಿಂದ ಇಳುವರಿಯ ಮೇಲೆ ಪರಿಣಾಮ ಬೀರಬಹುದೆಂಬ ಶಂಕೆ ಸರಕಾರಕ್ಕಿದೆ. ಇಂದು ರಾಷ್ಟ್ರದ ಯಾವುದೇ, ಹಳ್ಳಿಗೆ ಹೋದರೂ, ಏಕರೂಪ ಬೆಲೆಯಲ್ಲಿ ರೈತರಿಗೆ ರಸಗೊಬ್ಬರ ಸಿಗುತ್ತಿದೆ, ಇದಕ್ಕೆ ಕಾರಣ ಸರಕಾರ ರೂಪಿಸಿರುವ ರಸಗೊಬ್ಬರ ನೀತಿಯೇ ಕಾರಣ. ರಸಗೊಬ್ಬರಗಳ ಅನಿಯಂತ್ರಿತಗೊಳಿಸುವುದು ರಸಗೊಬ್ಬರ ಮಾರುಕಟ್ಟೆಯ ಏರುಪೇರಿಗೆ ಕಾರಣವಾಗುತ್ತಿದೆ. ರೈತರು ಏಕರೂಪ ಬೆಲೆಯಲ್ಲಿ ರಸಗೊಬ್ಬರಗಳನ್ನು ಪಡೆಯಲು ಸಾಧ್ಯವಾಗದೇ ಹೋಗಬಹುದು. ರಸಗೊಬ್ಬರಗಳ ಬೆಲೆ ಒಂದು ಬೆಳೆ ಅವಧಿಯಿಂದ ಇನ್ನೊಂದು ಬೆಳೆ ಅವಧಿಗೆ ವ್ಯತ್ಯಾಸಗೊಳ್ಳಬಹುದು. ಇದರಿಂದಾಗಿ

ರಸಗೊಬ್ಬರಗಳ ಮಾರಾಟವನ್ನು ಅನಿಯತ್ರಿಸುವುದು ರಾಷ್ಟದ ಕೃಷಿ ಉತ್ಪಾದನೆಯ ಮೇಲೆ ದೂರಗಾಮಿ ಪರಿಣಾಮ ಬೀರಲಿದೆ. ನಾವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬನೆ ಸಾಧಿಸಬೇಕಾದರೆ, ರಸಗೊಬ್ಬರಗಳು ಯಥೇಚ್ಛವಾಗಿ ಏಕರೂಪ ಬೆಲೆಯಲ್ಲಿ ರೈತರಿಗೆ ಸಿಗಬೇಕು. ಮತ್ತು ಒಳ್ಳೆ ಗುಣಮಟ್ಟದ ರಸಗೊಬ್ಬರಗಳ ಪೂರೈಕೆಯನ್ನು ಕಾರ್ಖಾನೆಗಳು ಮಾಡಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಒಳ್ಳೆ ಗುಣಮಟ್ಟದ ರಸಗೊಬ್ಬರಗಳ ಪೂರೈಕೆಯಾಗುತ್ತಿಲ್ಲ. ರೈತರು ಅಂಗಡಿಗಳಿಂದ ಕೊಂಡೊಯ್ದ ರಸಗೊಬ್ಬರಗಳು ಮಣ್ಣು ಹಾಗು ಇನ್ನಿತರ ನಿರುಪಯೋಗಿ ವಸ್ತುಗಳಿಂದ ಕಲಬೆರಕೆಯಾಗಿರುತ್ತದೆ ರಸಗೊಬ್ಬರಗಳ ಗುಣಮಟ್ಟದ ಬಗ್ಗೆ ರೈತರಿಂದ ಅನೇಕ ದೂರುಗಳಿವೆ. ಹಾಗೂ ರೈತರು ಕಳಪೆ ರಸಗೊಬ್ಬರಗಳ ಮಾರಾಟ ಮಾಡುತ್ತಿರುವುದರ ವಿರುದ್ಧವಾಗಿ ಪ್ರತಿಭಟನೆಗಳನ್ನು ಮಾಡಿದ್ದಾರೆ. ಕಳಪೆ ಗುಣಮಟ್ಟದ ರಸಗೊಬ್ಬರಗಳಿಂದಾಗಿ ರೈತರಿಗೆ ಇಳುವರಿಯಲ್ಲಿ ಕುಸಿತ ಕಂಡು ಬಂದಿದೆ ಇಂಧನ ವೆಚ್ಚ ಹೆಚ್ಚಾಗುತ್ತಿದೆ.

ಅವಶ್ಥಿ ವರದಿಯ ಪ್ರಕಾರ ರಸಗೊಬ್ಬರ ಕಾರ್ಖಾನೆಗಳನ್ನು ಸುಧಾರಿಸುವಲ್ಲಿ ಸಂಶೋಧನೆಗಳು ಸರಿಯಾಗಿ ನಡೆಯುತ್ತಿಲ್ಲ. ಏಕೆಂದರೆ ರಸಗೊಬ್ಬರ ಕಾರ್ಖಾನೆಗಳು ಕಡಿಮೆ ವೆಚ್ಚದ ಇಂಧನ ಬಳಕೆಯಲ್ಲಿ ಯಾವುದೇ ಸಂಶೋಧನೆಗಳು ನಡೆಸಿಲ್ಲ, ಈ ತರಹದ ಅವಿಷ್ಕಾರಗಳು ಇಲ್ಲದೆ ಹೋದರೆ, ಕಾರ್ಖಾನೆಗಳು ಅದೇ ಹಳೆಯ ಕಾಲದ ತಂತ್ರಜ್ಞಾನವನ್ನು ಬಳಸುತ್ತ ರಸಗೊಬ್ಬರಗಳ ಗುಣಮಟ್ಟದಲ್ಲಿ ಸುಧಾರಣೆಯಾಗದೆ, ಹೆಚ್ಚು ವೆಚ್ಚ ಮಾಡುತ್ತವೆ. ಆದ್ದರಿಂದ ರಸಗೊಬ್ಬರಗಳ ಕಾರ್ಖಾನೆಗಳು, ರಸಗೊಬ್ಬರಗಳ ಉತ್ಪಾದನೆ ಹಾಗೂ ಮಾರುಕಟ್ಟೆಯಲ್ಲಿ ಸುಧಾರಣೆ ತರುವಂತಹ ಸಂಶೋಧನೆಗಳ ಕಡೆಗೆ ಹೆಚ್ಚು ಯೋಚಿಸಬೇಕಾಗಿದೆ. ಇದರ ಜೊತೆಗೆ ರಸಗೊಬ್ಬರದ ಕಾರ್ಖಾನೆಗಳು ತಮ್ಮ ಹಂಚಿಕೆ ಸ್ವರೂಪವನ್ನು ಬದಲಿಸಿಕೊಳ್ಳಬೇಕಾಗಿದೆ. ಯಾಕೆಂದರೆ ರಸಗೊಬ್ಬರಗಳಿಗೆ ಸರಕಾರ ಸಹಾಯಧನ ನೀಡುವುದರಿಂದ ಇವು ಅತ್ಯಂತ ಸಮರ್ಥವಾಗಿ ರಸಗೊಬ್ಬರಗಳನ್ನು ರೈತರಿಗೆ ತಲುಪುವಂತೆ ಹಂಚಿಕಾ ಜಾಲವನ್ನು ರೂಪಿಸಬೇಕಾಗಿದೆ. ಸದ್ಯಕ್ಕೆ ಸರಕಾರವೇ ಹಂಚಿಕಾ ಜಾಲವನ್ನು ನಿರ್ವಹಿಸುತ್ತಿದೆ. ಇದೇ ಕಾರ್ಖಾನೆಯೋತ್ತರ ರಸಗೊಬ್ಬರಬೆಲೆಗಳನ್ನು ನಿಗದಿಪಡಿಸುತ್ತಿದೆ. ಯಾಕೆಂದರೆ ಸರಕಾರ ಕಾರ್ಖಾನೆಗಳಿಗೆ ಈ ಜವಾಬ್ದಾರಿಯನ್ನು ವರ್ಗಾಯಿಸಲು ನೋಡುತ್ತಿದೆ. ಕಾರ್ಖಾನೆಗಳು ತಮ್ಮ ಸಹಾಯಧನ ಪಡೆದ ನಂತರ ಬರುವ ಖರ್ಚು ವೆಚ್ಚಗಳ ಮೂಲಕ ರಸಗೊಬ್ಬರಗಳ ಬೆಲೆಯನ್ನು ನಿರ್ಧರಿಸುತ್ತಿದೆ. ಇದರಿಂದಾಗಿ ಕಾರ್ಖಾನೆಗಳು ಹೆಚ್ಚು ಲಾಭಮಾಡಿಕೊಳ್ಳುತ್ತಿವೆ. ಇದನ್ನು ಸರಕಾರ ಗಮನಿಸಿದರೂ ಗಮನಿಸದಂತೆ ವರ್ತಿಸುತ್ತಿದೆ.

ಸ್ಥಳೀಯ ರಸಗೊಬ್ಬರ ಕಾರ್ಖಾನೆಗಳು ಸಾಮರ್ಥ್ಯ ಬಳಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿವೆ. ಸಾಮರ್ಥ್ಯಗಳ ಬಳಕೆಯೆಂದರೆ ಕಾರ್ಖಾನೆ ತಾನು ಎಷ್ಟು ವೆಚ್ಚ ಮಾಡಿರುತ್ತದೆಯೋ ಮತ್ತು ಎಷ್ಟು ಗಾತ್ರದ

ಯಂತ್ರೋಪಕರಣಗಳನ್ನು ಹೊಂದಿರುತ್ತದೆಯೋ ಅದಕ್ಕೆ ತಕ್ಕ ಹಾಗೆ ಉತ್ಪಾದನೆ ಮಾಡಬೇಕಾಗುತ್ತದೆ. 1999 ರಲ್ಲಿ ಸಾರಜನಕ ರಸಗೊಬ್ಬರಗಳ ಉತ್ಪಾದನೆಯಲ್ಲಿ ಶೇ. 99.6 ರಷ್ಟು ಸಾಮರ್ಥ್ಯ ಬಳಕೆ ರಂಜಕ ರಸಗೊಬ್ಬರಗಳಲ್ಲಿ ಶೇ. 99.1 ರಷ್ಟು ಸಾಮರ್ಥ್ಯ ಬಳಕೆ ಇದೇ, ಸಾಮರ್ಥ್ಯ ಬಳಕೆ 2000 ದ ವೇಳೆಗೆ ಸಾರಜನಕ ರಸಗೊಬ್ಬರ ಬಳಕೆಯಲ್ಲಿ ಶೇ. 103.00 ರಷ್ಟು ಹೆಚ್ಚಳ ರಂಜಕ ರಸಗೊಬ್ಬರ ಗಳಲ್ಲಿ ಶೇ. 94.2ರಷ್ಟು ಸಾಮರ್ಥ್ಯ ಬಳಕೆಯಾಗಿದೆ. ಇದರಿಂದಾಗಿ 1971 ರಲ್ಲಿ 1.06 ದಶಲಕ್ಷ ಟನ್ ಗಳಷ್ಟಿದ್ದ ರಸಗೊಬ್ಬರಗಳ ಉತ್ಪಾದನೆ 2000 ದ ವೇಳೆಗೆ 14.28 ದಶಲಕ್ಷ ಟನ್ ಗಳಷ್ಟಾಯಿತು. ರಸಗೊಬ್ಬರಗಳ ಬೆಳವಣಿಗೆ 1971 ರಲ್ಲಿ ಶೇ. 3.8 ರಷ್ಟಿತ್ತು. 2000 ದ ವೇಳೆಗೆ ಇದು ಶೇ. 7 ರಷ್ಟಾಯಿತು. ರಸಗೊಬ್ಬರಗಳ ಬಳಕೆ ಕ್ರಮವಾಗಿ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳ ಬಳಕೆ ಶೇ. 4.7, ಶೇ. 15.6, ಶೇ. 30 ರಷ್ಟಾಯಿತು.

ರಾಷ್ಟ್ರದಲ್ಲಿ 65 ದೊಡ್ಡ ರಸಗೊಬ್ಬರಗಳ ಕಾರ್ಖಾನೆಗಳಿವೆ. ಇದರಲ್ಲಿ 38 ಯೂರಿಯಾ ಉತ್ಪಾದಿಸುವ ಕಾರ್ಖಾನೆಗಳು 18 ಕಾರ್ಖಾನೆಗಳು ಡೈ ಅಮೋನಿಯಂ ಪಾಸ್ಪೇಟ್ ಉತ್ಪಾದಿಸುತ್ತವೆ, 7 ಕಾರ್ಖಾನೆಗಳು ಸಾರಜನಕ ರಸಗೊಬ್ಬರಗಳನ್ನು ಉತ್ಪಾದಿಸುತ್ತವೆ. ಇದರ ಜೊತೆಗೆ 79 ಸಣ್ಣ ಮತ್ತು ಮಧ್ಯಮ ಗಾತ್ರದ ರಸಗೊಬ್ಬರಗಳ ಕಾರ್ಖಾನೆಗಳಿವೆ ಇವು ಸೂಪರ್ ಫಾಸ್ಪೇಟನ್ನು ಉತ್ಪಾದಿಸುತ್ತವೆ.

ಈಗಾಗಲೇ ಚರ್ಚಿಸಿರುವ ಹಾಗೆ ರಸಗೊಬ್ಬರಗಳ ಇಂಧನ ಏರಿಕೆಯಿಂದ, ರಸಗೊಬ್ಬರಗಳ ಬೆಲೆ ಏರಿಕೆಯಾಗಿದೆ. ಈ ಬೆಲೆ ಏರಿಕೆಯನ್ನು ತಡೆಗಟ್ಟಲು ಸರಕಾರ ಧಾರಣ ಬೆಲೆ ಯೋಜನೆ (Rentention Price Scheme) (RPS) ನ್ನು 1997 ರಲ್ಲೆ ಜಾರಿಗೆ ತಂದಿತು ಈ ಯೋಜನೆಯಡಿಯಲ್ಲಿ ಸರಕಾರ ಮಾರಾಟ ಬೆಲೆ ಮತ್ತು ರಸಗೊಬ್ಬರಗಳ ಉತ್ಪಾದನೆ ವೆಚ್ಚದ ನಡುವೆ ಬರುವ ವ್ಯತ್ಯಾಸದ ಹಣವನ್ನು ಕಾರ್ಖಾನೆ ಮಾಲೀಕರಿಗೆ ನೀಡುತ್ತಾರೆ. ಇದನ್ನೇ ಧಾರಣ ಬೆಲೆ ಯೋಜನೆ (RPS) ಎಂದು ಕರೆಯುವದು, ಇದರಿಂದಾಗಿ ರಸಗೊಬ್ಬರಗಳ ಉತ್ಪಾದನಾ ವೆಚ್ಚ ಏರಿದರು ರೈತರಿಗೆ, ಕಡಿಮೆ ದರದಲ್ಲೇ ರಸಗೊಬ್ಬರಗಳನ್ನು ಪೂರೈಕೆ ಮಾಡಲಾಗುತ್ತದೆ. ಆದರೆ ವಸ್ತು ಸ್ಥಿತಿ ಹಾಗಿಲ್ಲ ಯಾಕೆಂದರೆ ರೈತರಿಗೆ ಸರಕಾರ ಸಹಾಯಧನ ಮೂಲಕ ರಸಗೊಬ್ಬರಗಳನ್ನು ನೀಡುತ್ತಿದ್ದರು, ವ್ಯಾಪಾರಸ್ಥರು ಚೀಲದ ಮುಖ ಬೆಲೆಗೆ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿಲ್ಲ ಎಂಬ ದೂರುಗಳು ರೈತರಿಂದ ಕೇಳಿ ಬರುತ್ತಿವೆ. ಆದಕ್ಕೆ ವ್ಯಾಪಾರಸ್ಥರು ಕೊಡುವ ಕಾರಣಗಳೆಂದರೆ ಸಾಗಾಣಿಕೆ ವೆಚ್ಚ, ದಾಸ್ತಾನು ವೆಚ್ಚ, ಇತ್ತೀಚಿನ ದಿನಗಳಲ್ಲಿ ಹೆಚ್ಚಳ ಕಂಡು ಬಂದಿರುವುದರಿಂದ ಮುಖ ಬೆಲೆಗೆ ರಸಗೊಬ್ಬರಗಳನ್ನು ಕೊಡಲಾಗುವುದಿಲ್ಲ ಎಂಬುದಾಗಿದೆ. ಆದರೆ ಸರಕಾರದವರು ಕಾರ್ಖಾನೆಗೆ ನೀಡುತ್ತಿರುವ ಸಹಾಯಧನದಿಂದಾಗಿ ಭಾರತದ ಯಾವುದೇ ಪ್ರದೇಶದಲ್ಲಿ ಯಾವುದೇ ರಸಗೊಬ್ಬರ

ಮಾರಾಟ ಮಾಡಲಿ ಅದು ಏಕರೂಪ ಬೆಲೆಯಾಗಿರಬೇಕೆಂಬುದಾಗಿದೆ. ಈಗ ಸರಕಾರದ ಧಾರಣ ಬೆಲೆ ಯೋಜನೆ ಮೂಲಕ ಕಾರ್ಖಾನೆ ಮಾಲೀಕರಿಗೆ ಸಹಾಯಧನ ನೀಡುವುದಕ್ಕೆ ಬದಲಿಯಾಗಿ ರೈತರಿಗೆ ನೇರವಾಗಿ ಸಹಾಯಧನ ತಲುಪುವಂತಹ ವ್ಯವಸ್ಥೆ ಮಾಡಬೇಕಾಗಿದೆ ಎಂಬುದಾಗಿದೆ; ಆದರೆ ಹೇಗೆ ಪಡಿತರ ವ್ಯವಸ್ಥೆಯ ಮೂಲಕ ಬಡವರಿಗೆ ಅಕ್ಕಿ ಇನ್ನಿತರ ಧವಸ ಧಾನ್ಯಗಳನ್ನು ಸಹಾಯಧನದ ಮೂಲಕ ನೀಡುತ್ತಾರೊ ಹಾಗೆಯೇ ರೈತರಿಗೆ ಸಹ ರಸಗೊಬ್ಬರಗಳನ್ನು ಪಡಿತರ ವ್ಯವಸ್ಥೆಯ ಮೂಲಕ ನೀಡಿದರೆ, ರೈತರಿಗೆ ವ್ಯಾಪಾರಸ್ಥರು ಮೋಸ ಮಾಡಲು ಸಾಧ್ಯವಿಲ್ಲ ಎಂಬುದೇ ಇಲ್ಲಿನ ವಾದವಾಗಿದೆ. ಆದರೆ ಸರಕಾರ ಇವರ ಬಗ್ಗೆ ಹೆಚ್ಚು ಆಸ್ಥೆ ವಹಿಸಿಲ್ಲ. ಇಂದಿಗೂ ಇದು ಕಾರ್ಖಾನೆ ಮಾಲೀಕರಿಗೆ ಉತ್ಪಾದನೆ ಸಹಾಯಧನ ನೀಡಿ, ರೈತರಿಗೆ ಇದರ ಫಲಗಳು ತಲುಪಬೇಕು ಎಂದು ಯೋಚಿಸುತ್ತದೆ. ಆದರೆ ಕಾರ್ಖಾನೆ ಮಾಲೀಕರಿಗೆ ಸಹಾಯಧನ ನೀಡಿದರೆ ಸಹಾಯಧನದ ಸೋರಿಕೆ ರಸಗೊಬ್ಬರಗಳ ಹಂಚುವ ಜಾಲದ ಮೂಲಕ ಆಗುತ್ತದೆ. ಏಕೆಂದರೆ ರಸಗೊಬ್ಬರಗಳ ಸಾಗಾಣಿಕೆ, ದಾಸ್ತಾನು ಮತ್ತು ಅದು ಸಗಟು ವ್ಯಾಪಾರಿಗಳಿಂದ ಚಿಲ್ಲರೆ ವ್ಯಾಪಾರಿಗಳಿಗೆ ಬಂದಾಗ ಚೀಲದ ಮುಖ ಬೆಲೆಗಿಂತಹ ಹೆಚ್ಚಾಗಿ, ರೈತರಿಗೆ ಮುಖ ಬೆಲೆಯ ಪ್ರಕಾರ ರಸಗೊಬ್ಬರ ಸಿಗುವುದಿಲ್ಲ. ಇದನ್ನು ಸರಕಾರ ಗಂಭೀರವಾಗಿ ಪರಿಗಣಿಸದಿದ್ದರೆ ರೈತರಿಗೆ ಸಹಾಯಧನದ ಫಲಗಳು ದೊರಕಲಾರದು.

ಮತ್ತೊಂದು ವಿಷಯವೆಂದರೆ ಬೆಲೆ ಧಾರಣ ಯೋಜನೆ ಒಂದು ಕಾರ್ಖಾನೆಯಿಂದ ಮತ್ತೊಂದು ಕಾರ್ಖಾನೆಗೆ ವ್ಯತ್ಯಾಸಗೊಳ್ಳುತ್ತದೆ. ಅದರಲ್ಲೂ ಒಂದೇ ಕಾರ್ಖಾನೆಯಲ್ಲಿ ಒಂದು ಉತ್ಪಾದನಾ ಘಟಕದಿಂದ ಇನ್ನೊಂದು ಉತ್ಪಾದನಾ ಘಟಕಕ್ಕೂ ಇದು ವ್ಯತ್ಯಾಸಗೊಳ್ಳುತ್ತದೆ. ಇಲ್ಲಿ ಧಾರಣ ಬೆಲೆ ಯೋಜನೆ ಬೆಲೆಗನುಗುಣವಾಗಿ ಎರಡು ವೆಚ್ಚಗಳನ್ನು ಭರಿಸುತ್ತದೆ. ಒಂದು ವ್ಯತ್ಯಾಸಗೊಳ್ಳುವ ಅಂದರೆ ಬದಲಾಗುವ ವೆಚ್ಚ (Variable Cost)ಮತ್ತೊಂದು ಸ್ಥಿರ ವೆಚ್ಚ (Fixed Cost). ಆದರೆ ಇದು ಕಾರ್ಖಾನೆ ಮಾಲೀಕರಿಗೆ ಹೆಚ್ಚು ಲಾಭದಾಯಕವಾಗಿರುತ್ತದೆ. ವ್ಯತ್ಯಾಸಗಳ್ಳೊವ ವೆಚ್ಚವನ್ನು ಸಹಾಯಧನದ ಮೂಲಕ ಭರಿಸುವುದು ಒಪ್ಪಿತ ವಿಚಾರ ಆದರೆ ಸ್ಥಿರ ವೆಚ್ಚವನ್ನು ಭರಿಸುವುದು ಕಾರ್ಖಾನೆ ಮಾಲೀಕರಿಗೆ ಲಾಭದಾಯಕವಾಗಿರುತ್ತದೆ. ಹಿಂದಿನ ವರ್ಷ ಯಾವ ಸ್ಥಿರ ವೆಚ್ಚಕ್ಕೆ ಸಹಾಯಧನ ನೀಡುತ್ತಾರೋ ನಿರಂತರವಾಗಿ ಅದೇ ಸ್ಥಿರ ವೆಚ್ಚಕ್ಕೆ ಪ್ರತಿ ವರ್ಷವೂ ಸಹಾಯಧನ ನೀಡುತ್ತಿದ್ದಾರೆ, ಅದು ಕಾರ್ಖಾನೆ ಮಾಲೀಕರಿಗೆ ಲಾಭದಾಯಕವಲ್ಲದೆ ಮತ್ತೇನು ಅಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಧಾರಣ ಬೆಲೆ ಯೋಜನೆಯೊಂದಿಗೆ ಸಮಾನ ಸರಕು ರವಾನೆ ಬಾಡಿಗೆ (equated freight subsidy) ಸಹಾಯಧನವನ್ನು ಕಾರ್ಖಾನೆ ಮಾಲೀಕರಿಗೆ ನೀಡಲಾಗುತ್ತದೆ. ಈ ಸಹಾಯಧನ ಉತ್ಪಾದನೆ

ಸ್ಥಳದಿಂದ ಬಳಕೆ ಸ್ಥಳಕ್ಕೆ ಕೊಂಡೊಯ್ಯುವ ಸಾಗಾಣಿಕೆ ವೆಚ್ಚವನ್ನು ಭರಿಸುತ್ತದೆ. ಇದರ ಜೊತೆಗೆ ಆಮದು ಮಾಡಿಕೊಂಡ ರಸಗೊಬ್ಬರಗಳು ಹಾಗೂ ಸ್ಥಳೀಯವಾಗಿಯೂ ಉತ್ಪಾದಿಸಲಾದ ರಸಗೊಬ್ಬರಗಳು ಒಂದೇ ಬೆಲೆಗೆ ರೈತರಿಗೆ ಮಾರುವುದರಿಂದ ಆಮದು ಮಾಡಿ ಕೊಂಡ ರಸಗೊಬ್ಬರಗಳಿಗೂ ಸಹ ಸಹಾಯಧನವನ್ನು ನೀಡಲಾಗುತ್ತದೆ. ಹೀಗೆ ಆಮದುಮಾಡಿಕೊಂಡ ರಸಗೊಬ್ಬರಗಳಿಗೆ ಸಹಾಯ ಧನವನ್ನು ನೀಡುವುದರಿಂದ ವಿದೇಶಿ ಕಾರ್ಖಾನೆಗಳು ಈ ಸಹಾಯ ಧನದ ಲಾಭವನ್ನು ಪಡೆಯುತ್ತವೆ. ಅಲ್ಲೂ ಇಂದು ಜಾಗತೀಕರಣದ ಸಂದರ್ಭದಲ್ಲಿ ಪ್ರಮಾಣಾತ್ಮಕ ನಿರ್ಬಂಧವನ್ನು ತೆಗೆದಿರುವುದರಿಂದ, ವಿದೇಶಿ ರಸಗೊಬ್ಬರ ಕಾರ್ಖಾನೆಗಳು ಮುಕ್ತವಾಗಿ ಭಾರತಕ್ಕೆ ರಸಗೊಬ್ಬರಗಳನ್ನು ಆಮದು ಮಾಡಿ ತಮ್ಮ ಲಾಭ ಹೆಚ್ಚಿಸಿಕೊಳ್ಳುತ್ತವೆ. ಈ ನಿಟ್ಟಿನಲ್ಲಿ ವಿದೇಶದಿಂದ ರಸಗೊಬ್ಬರಗಳನ್ನು ಆಮದು ಮಾಡಿಕೊಳ್ಳುವುದನ್ನು ಕ್ರಮೇಣವಾಗಿ ಕಡಿಮೆ ಪ್ರಮಾಣಕ್ಕೆ ಇಳಿಸಬೇಕಾಗುತ್ತದೆ. ಇಲ್ಲದೇ ಹೋದರೆ ವಿದೇಶಿ ಕಾರ್ಖಾನೆಗಳು ಉತ್ಪಾದಿಸಿದ ರಸಗೊಬ್ಬರಗಳು ಭಾರತ ಸರ್ಕಾರದ ಸಹಾಯಧನದೊಂದಿಗೆ ಪ್ರವೇಶಿಸಿ, ಸ್ಥಳೀಯ ಕೈಗಾರಿಕೆಗಳೊಂದಿಗೆ ಅನಾರೋಗ್ಯಕರ ಸ್ಪರ್ಧೆಗಿಳಿಯುತ್ತವೆ. ಇದು ಸ್ಥಳೀಯ ಕೈಗಾರಿಕೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲಾರದೆ ಮುಚ್ಚಿದರೆ ನಾವು ರಸಗೊಬ್ಬರಗಳನ್ನು ಸಂಪೂರ್ಣವಾಗಿ ವಿದೇಶದಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಸಹಾಯ ಧನವಿರುವುದರಿಂದ ವಿದೇಶಿ ಕಂಪನಿಗಳು ಹೆಚ್ಚು ಲಾಭ ಮಾಡಿ, ರೈತರಿಗೆ ನಾವು ಸಹಾಯಧನ ನೀಡಿದರು ಹೆಚ್ಚಿನ ಬೆಲೆಯ ರಸಗೊಬ್ಬರಗಳನ್ನು ಮಾರಾಟ ಮಾಡಬೇಕಾಗುತ್ತದೆ.

ಭಾರತದಲ್ಲಿ ಸರಕಾರಿ, ಖಾಸಗಿ ಹಾಗೂ ಸಹಕಾರಿ ವಲಯದಲ್ಲಿ ಸಾರಜನಕ ರಸಗೊಬ್ಬರಗಳ ಉತ್ಪಾದನೆ ಹೀಗಿದೆ. 1995-96 ರಲ್ಲಿ 30.25 ಲಕ್ಷ ಟನ್ ಸರಕಾರಿ ವಲಯದಲ್ಲಿ ಉತ್ಪಾದಿಸಲಾಯಿತು. ಇದು ಒಟ್ಟ ಸಾರಜನಕ ರಸಗೊಬ್ಬರದಲ್ಲಿ ಶೇ. 34 ರಷ್ಟು, ಖಾಸಗಿ ಕ್ಷೇತ್ರದಲ್ಲಿ 39.40 ಲಕ್ಷ ಟನ್ ಉತ್ಪಾದಿಸಲಾಯಿತು. ಇದು ಶೇ. 45 ರಷ್ಟು ಸಹಕಾರಿ ವಲಯದಲ್ಲಿ 18.04 ಲಕ್ಷ ಟನ್ ಸಾರಜನಕ ರಸಗೊಬ್ಬರ ಉತ್ಪಾದಿಸಲಾಯಿತು. ಇದು ಶೇ. 21 ರಷ್ಟು ಈ ಮೂರು ವಲಯಗಳು ಸೇರಿ ಒಟ್ಟ ಉತ್ಪಾದನೆಯಾದ ಸಾರಜನಕ ರಸಗೊಬ್ಬರ 87.69 ಲಕ್ಷ ಟನ್ ಗಳು. ಇದೇ ಅವಧಿಯಲ್ಲಿ ರಂಜಕ ಗೊಬ್ಬರ ಉತ್ಪಾದನೆ ಈ ರೀತಿ ಇದೆ. ಸರಕಾರಿ ವಲಯದಲ್ಲಿ 6.89 ಲಕ್ಷ ಟನ್ ಶೇ. 27 ರಷ್ಟು ಖಾಸಗಿ ವಲಯದಲ್ಲಿ 15.43 ಲಕ್ಷ ಟನ್ ಇದು ಶೇ. 59 ರಷ್ಟು ಸಹಕಾರಿ ವಲಯದಲ್ಲಿ 3.61 ಲಕ್ಷ ಟನ್ ಗಳು ಇದು ಶೇ. 14 ರಷ್ಟು ಒಟ್ಟು ರಂಜಕ ರಸಗೊಬ್ಬರಗಳ ಉತ್ಪಾದನೆ 29.53 ಲಕ್ಷ ಟನ್ ಗಳು ಎರಡು ರಸಗೊಬ್ಬರಗಳು ಸೇರಿ ಒಟ್ಟು ಉತ್ಪಾದನೆ 116.73 ಲಕ್ಷ ಟನ್, ಬೇಡಿಕೆ 138 ಲಕ್ಷ ಟನ್ ಗಳು, ಕೊರತೆ 23 ಲಕ್ಷ ಟನ್ ಗಳು.

ಭಾರತದಲ್ಲಿ ಸಾರಜನಕ ಗೊಬ್ಬರಗಳಾದ ಡಿ.ಎ.ಪಿ. ಬೆಲೆ 1998-99 ರಲ್ಲಿ ರೂ. 8300-00 / ಟನ್ ಇತ್ತು. ನಂತರ ಸರಕಾರಿ ಆಜ್ಞೆಯ ಪ್ರಕಾರ ಬೆಲೆಗಳಲ್ಲಿ ರಿಯಾಯಿತಿಯನ್ನು ಘೋಷಿಸಲಾಯಿತು.

ಇದೇ ಅವಧಿಯಲ್ಲಿ ಆಮದು ಮಾಡಿಕೊಂಡ ಡಿ.ಎ.ಪಿ.ಯ ಬೆಲೆ ರೂ. 3400-00 / ಟನ್, ಸ್ಥಳೀಯವಾಗಿ ಉತ್ಪಾದಿಸಲಾದ ಡಿ.ಎ.ಪಿ. ಯ ಬೆಲೆ ರೂ. 4000-00 / ಟನ್ ಪೊಟ್ಯಾಷ್ ಗೊಬ್ಬರಗಳ ಬೆಲೆ ರೂ. 3000-00 / ಟನ್ ಇಲ್ಲಿ ಪೊಟ್ಯಾಷ್ ರಂಜಕ ಗೊಬ್ಬರಗಳ ಬೆಲೆಯನ್ನು ಉತ್ಪಾದಕರೇ ನಿಗದಿ ಪಡಿಸುವಂತೆ ಸರಕಾರ ಸೂಚಿಸಿತು. ರಸಗೊಬ್ಬರಗಳ ಸಹಾಯಧನದ ಬೆಲೆ ನೀತಿ 1998-99ರ ಆಯವ್ಯಯದಲ್ಲಿ ಪ್ರಕಟವಾಯಿತು. ಸ್ಥಳೀಯ ಯೂರಿಯಾಗೆ ರೂ. 6000 ಕೋಟಿ ಮತ್ತು ಆಮದಿತ ಯೂರಿಯಾಗೆ ರೂ. 983 ಕೋಟಿ , ಪಿ.ಕೆ. ಗೊಬ್ಬರಗಳಿಗೆ ರೂ. 3000 ಕೋಟಿಯಷ್ಟು ಸಹಾಯ ಧನವನ್ನು ನೀಡಲಾಯಿತು.

ಹೀಗೆ ರಸಗೊಬ್ಬರಗಳು 21 ನೇ ಶತಮಾನದಲ್ಲೂ ಜೈವಿಕ ತಂತ್ರಜ್ಞಾನ ಹಾಗೂ ಸಾವಯವಕೃಷಿಯ ಪ್ರಯೋಗಗಳು ನಡೆಯುತ್ತಿದ್ದರೂ ರಸಗೊಬ್ಬರಗಳು ತಮ್ಮ ಅಸ್ತಿತ್ವದ ಪ್ರಸ್ತುತತೆಯನ್ನು ಉಳಿಸಿಕೊಂಡಿವೆ. ವಿಶ್ವದಲ್ಲಿ ಮತ್ತು ಭಾರತದಲ್ಲಿ ರಸಗೊಬ್ಬರಗಳ ಬಳಕೆ ಮತ್ತು ಉತ್ಪಾದನೆ ಹೆಚ್ಚಾಗುತ್ತಲೇ ಇದೆ. ಆದ್ದರಿಂದ ಇದರ ಮಾರುಕಟ್ಟೆಯ ಅಧ್ಯಯನ ಅವಶ್ಯವಾದುದು.

ರಸಗೊಬ್ಬರಗಳು ಬೃಹತ್ ಕೈಗಾರಿಕೆಗಳ ಮೂಲಕ ಉತ್ಪಾದಿಸಿ, ನಂತರ ಸರಕಾರಿ, ಸಹಕಾರಿ ಹಾಗೂ ಖಾಸಗಿ ವಲಯಗಳ ಮೂಲಕ ರೈತರನ್ನು ತಲಪುತ್ತಿವೆ. ಹೀಗೆ ಮೂರು ಮಾಧ್ಯಮಗಳ ಮೂಲಕ ರಸಗೊಬ್ಬರಗಳು ರೈತರ ಹೊಲಗಳಿಗೆ ತಲುಪಬೇಕಾಗಿದೆ. ಈಗಾಗಲೆ ತಿಳಿದಂತೆ ರಸಗೊಬ್ಬರಗಳು ಉಪಯೋಗ ವರ್ಷದಿಂದ ವರ್ಷಕ್ಕೆ ಹೆಚ್ಚಳಗೊಳ್ಳುತ್ತಿದೆ. ಇದರಿಂದಾಗಿ ಬೆಳೆಗಳ ಉತ್ಪಾದಕತೆಯು ಹೆಚ್ಚಳಗೊಂಡಿದೆ. ರೈತರು ತಾವು ಉಪಯೋಗಿಸುವ ರಸಗೊಬ್ಬರಗಳ ಮೇಲೆ ಹಾಗೂ ಇನ್ನಿತರ ಸಂಪನ್ಮೂಲಗಳ ಮೇಲೆ ಹೂಡುವ ಬಂಡವಾಳ ಮಾತ್ರ ಸರಿಯಾಗಿ ವಾಪಸ್ಸು ಬರುತ್ತಿಲ್ಲ. ಉತ್ಪಾದನೆಯ ಸ್ಥಳದಿಂದ ಕಟ್ಟಕಡೆಯ ಗ್ರಾಹಕ ರೈತನಿಗೆ ತಲುಪುವಲ್ಲಿ ರಸಗೊಬ್ಬರಗಳ ಬೆಲೆ ಹೆಚ್ಚಳಗೊಂಡಿರುತ್ತದೆ. ಇವುಗಳನ್ನು ಕೈಗಾರಿಕೆಯಲ್ಲಿ ಉತ್ಪಾದಿಸಲಾದ ಮೂಲ ಬೆಲೆಗೆ ಕೊಡುವಲ್ಲಿ ಸಾಫಲ್ಯ ಸಾಧಿಸಿದೆಯೇ ? ಪರಿಶೀಲಿಸಬೇಕು. ಯಾಕೆಂದರೆ ಸಾಗಾಣಿಕೆ ವೆಚ್ಚ ದಾಸ್ತಾನು ವೆಚ್ಚ ಕಟ್ಟಕಡೆಯ ಗ್ರಾಹಕನಾದ ರೈತನ ಮೇಲೆಯೇ ಬೀಳುವುದು. ಜೊತೆಗೆ ಇವು ದೂರ ಪ್ರದೇಶಗಳಿಂದಬರಬೇಕಾಗಿರುವುದರಿಂದ ಸಕಾಲದಲ್ಲಿ ರೈತರ ಕೈಸೇರದೇ ಹೋಗಬಹುದು ಹಾಗೂ ಇವು ಬೇಡಿಕೆಗೆ ತಕ್ಕ ಪೂರೈಕೆಯಾಗದಿರುವುದರಿಂದ ರೈತರಿಗೆ ಬೇಕಾದಷ್ಟು ಪ್ರಮಾಣದಲ್ಲಿ ದೊರೆಯದೆ ಹೋಗಬಹುದು. ಆದ್ದರಿಂದ ರೈತರು ತಾವು ಬೆಳೆಯನ್ನು ಬಿತ್ತಿ ರಸಗೊಬ್ಬರ ಹಾಗೂ ಇನ್ನಿತರ ಸಂಪನ್ಮೂಲಗಳಿಗೆ ಕಾಯುವಂತೆ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ರೈತರು ಪೂರ್ವನಿಯೋಜಿತ ಬೆಳೆಗಳಿಗೆ ಸಿದ್ಧತೆ ಮಾಡಿಕೊಂಡಿದ್ದು ತಮಗೆ ಬೇಕಾದ ರಸಗೊಬ್ಬರ ಮತ್ತು ಇನ್ನಿತರ ಸಂಪನ್ಮೂಲಗಳ ಕೊರತೆಯಿಂದಾಗಿ ನಿರ್ದಿಷ್ಟ ಬೆಳೆಯನ್ನು ಬೆಳೆಯದೆ, ಬೇರೆ ಬೆಳೆಗೆ ಹೋಗಬಹುದು. ಇದರಿಂದಾಗಿ ರೈತರಿಗೆ ಆ ವರ್ಷದಲ್ಲಿ ನಷ್ಟವಾಗಿ ತಾನು ಮೊದಲೆ ನಿರ್ಧರಿಸಿದ ಬೆಳೆಬೆಳೆದು ಮಾರಿ ಬಂದ ಹಣದಲ್ಲಿ ಹೇಗೆ ತನ್ನ ಆದಾಯವನ್ನು ಸಾಲಗಾರರಿಗೆ, ವೈಯುಕ್ತಿಕ ಖರ್ಚಿಗೆ, ಹಾಗೂ ಇನ್ನಿತರ

ಖರ್ಚುಗಳಿಗೆ ಹಂಚಬೇಕೆಂದು ಏರುಪೇರಾಗಬಹುದು. ಆದ್ದರಿಂದ ರಸಗೊಬ್ಬರದಿಂದ ಹಿಡಿದು ಇನ್ನಿತರ ಸಂಪನ್ಮೂಲಗಳು ರೈತರಿಗೆ ಸಕಾಲದಲ್ಲಿ ಹಾಗೂ ಆತನಿಗೆ ಅವಶ್ಯವಿದ್ದಷ್ಟು ಪೂರೈಕೆಯಾದಾಗಲೇ ರೈತನಿಗೆ ಹೊಲದಲ್ಲಿ ಕೆಲಸ ಮಾಡುವುದಕ್ಕೆ ಪ್ರತಿಫಲ ಸಿಗುತ್ತದೆ.

ಹಿಂದೆ ರಸಗೊಬ್ಬರಗಳು ಉತ್ಪಾದನೆ ಸ್ಥಳದಿಂದ ನೇರವಾಗಿ ಸರಕಾರಿ ಸ್ವಾಮ್ಯದ ಕೃಷಿ ಇಲಾಖೆಗಳಿಗೆ, ಸಹಕಾರಿ ಸೊಸೈಟಿಗಳಿಗೆ ವಿತರಣೆಯಾಗುತ್ತಿತ್ತು, ಕ್ರಮೇಣವಾಗಿ ಇದು ಖಾಸಗಿ ಮಳಿಗೆಗಳೂ ಬಂದಿದೆ, ಉದಾರೀಕರಣ ಹಾಗೂ ಜಾಗತೀಕರಣದಿಂದಾಗಿ ಇಂದು ಖಾಸಗಿ ರಸಗೊಬ್ಬರದ ಅಂಗಡಿಗಳ ಹೆಚ್ಚಳಕ್ಕೆ ಕಾರಣವಾಗಿದೆ.

ಕೆಳಕಂಡ ಅಂಕಿ ಅಂಶಗಳ ಮೂಲಕ ನಾವು ರಸಗೊಬ್ಬರ ಮಾರುಕಟ್ಟೆಯ ಮೇಲೆ ಜಾಗತೀಕರಣ ಹಾಗೂ ಉದಾರೀಕರಣ ನೆರಳು ಬಿದ್ದಿರುವುದು ಗೋಚರಿಸುತ್ತದೆ.

ಜಾಗತೀಕರಣ ಮತ್ತು ಉದಾರೀಕರಣವು ರಸಗೊಬ್ಬರ ಮಾರಾಟವನ್ನು ಪ್ರಭಾವಿಸುವುದು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

ವರ್ಷ	ಸಹಕಾರಿ ಮತ್ತು ಇನ್ನಿತರ ಸಂಸ್ಥೆಗಳು	ಶೇಕಡವಾರು	ಖಾಸಗಿ ಮಳಿಗೆಗಳ ಸಂಖ್ಯೆ	ಶೇಕಡವಾರು
1970	33418	47	38234	53
1980	51560	44	64862	56
1990	80040	35	151130	65
1995	79460	31	179560	69

1970 ರಲ್ಲಿ ರಸಗೊಬ್ಬರ ವಿತರಿಸುವಲ್ಲಿ ಶೇ. 47 ರಷ್ಟಿದ್ದ ಸಹಕಾರಿ ಸೊಸೈಟಿ ಹಾಗೂ ಇನ್ನಿತರ ಸರಕಾರಿ ಸಂಸ್ಥೆಗಳು 1995 ಕ್ಕೆ ಶೇ. 31 ಕ್ಕೆ ಕುಸಿಯುತ್ತದೆ. 1970 ರಲ್ಲಿ ಶೇ. 53 ರಷ್ಟಿದ್ದು ಖಾಸಗಿ ಮಳಿಗೆಗಳು 1995 ರಷ್ಟರಲ್ಲಿ ಶೇ. 69 ಕ್ಕೆ ಏರುತ್ತದೆ ಇದು ರಸಗೊಬ್ಬರ ಮಾರುಕಟ್ಟೆಯ ಚಿತ್ರಣವನ್ನು ಸ್ಪಷ್ಟವಾಗಿ ನಮ್ಮ ಮುಂದೆ ಇಡುತ್ತದೆ.

ಖಾಸಗೀಕರಣ ಹೆಚ್ಚಾದಂತೆಲ್ಲ ಮಾರುಕಟ್ಟೆಯ ಆದಾಯದ ಅಂಚುಗಳು (Market Margins) ವಿವಿಧ ಹಂತಗಳಲ್ಲಿ ಹೇಗಿದೆ ಎಂದು ಪರಿಶೀಲಿಸಬೇಕಾಗಿದೆ. ಉತ್ಪಾದನೆ ಕೇಂದ್ರದಿಂದ ಹೊರಟು ಗ್ರಾಹಕನಾದ ರೈತನ ಕೈಸೇರುವಲ್ಲಿ ಈ ಹಂತಗಳ ನಡುವೆ ಇರುವ ಬೆಲೆ ವ್ಯತ್ಯಾಸ ಪರಿಶೀಲಿಸಬೇಕಿದೆ. ಅಂದರೆ ಉತ್ಪಾದನಾ ಕೇಂದ್ರದ ಬೆಲೆ ಮತ್ತು ಚಿಲ್ಲರೆ ಬೆಲೆ ನಡುವೆ ಇರುವ ವ್ಯತ್ಯಾಸ ಎಂಬ ಅರ್ಥ. ಇಲ್ಲಿ

ಸಗಟುದಾರರ ಕಮೀಷನ್, ಏಜೆಂಟ್ ಕಮೀಷನ್, ಸಾರಿಗೆ ವೆಚ್ಚ, ದಾಸ್ತಾನು ವೆಚ್ಚ, ವಿಮಾ ವೆಚ್ಚ., ಇನ್ನುಳಿದಂತೆ ಸೌಕರ್ಯಗಳ ವೆಚ್ಚ, ಚಿಲ್ಲರೆ ಮಾರಾಟಗಾರನ ಲಾಭ ಇವೆಲ್ಲ ಮಾರುಕಟ್ಟೆ ವಿವಿಧ ಹಂತಗಳಲ್ಲಿ ಬರುವ ವೆಚ್ಚವಾಗಿರುತ್ತದೆ. ತೂಕದಲ್ಲಿ, ರಸಗೊಬ್ಬರಗಳ ಶುದ್ಧತೆಯಲ್ಲಿ ಕಂಡು ಬರುವ ಮೋಸ, ಇವನ್ನು ಅಧ್ಯಯನಕ್ಕೆ ಪರಿಶೀಲಿಸುವುದು ಮುಖ್ಯವಾಗುತ್ತದೆ. ಒಂದು ಸಮೀಕ್ಷೆಯ ಪ್ರಕಾರ ಸಹಕಾರಿ ಸೊಸೈಟಿಗಳಲ್ಲಿ ಶೇ. 30 ರಷ್ಟು ತೂಕ ಮತ್ತು ಗುಣಮಟ್ಟ ಕಾಯ್ದಿಟ್ಟುಕೊಳ್ಳುವಲ್ಲಿ ಮೋಸ ನಡೆಯುತ್ತದೆ ಎಂದು ಹೇಳಲಾಗುತ್ತದೆ. ಖಾಸಗಿ ಅಂಗಡಿಗಳಲ್ಲಿ ಇಂತಹ ಮೋಸ ಕಡಿಮೆ ಪ್ರಮಾಣದಲ್ಲಿ ಇರುತ್ತದೆಂದು ಕೆಲವು ಅಧ್ಯಯನಗಳು ತಿಳಿಸುತ್ತವೆ ಆದ್ದರಿಂದ ಇದನ್ನು ಪರಿಶೀಲಿಸುವುದು ಅತಿ ಮುಖ್ಯವಾಗುತ್ತದೆ.

ಅಧ್ಯಯನದ ಉದ್ದೇಶಗಳು:

ಅ) ಸಕಾಲಕ್ಕೆ ರಸಗೊಬ್ಬರಗಳು ಮಾರುಕಟ್ಟೆಗೆ ಸರಬರಾಜಾಗುವಲ್ಲಿ ಎದುರಾಗುವ ಸಮಸ್ಯೆಗಳನ್ನು ಕುರಿತು ಪರಿಶೀಲನೆ

ಆ) ರಸಗೊಬ್ಬರಗಳನ್ನು ಕೊಳ್ಳುವಲ್ಲಿ ರೈತರೆದುರಿಸುವ ಸಮಸ್ಯೆಗಳ ಪರಿಶೀಲನೆ.

ಇ) ರೈತರು ರಸಗೊಬ್ಬರಗಳನ್ನು ಬಳಕೆ ಮಾಡುವಲ್ಲಿ ಇರುವ ವ್ಯತ್ಯಾಸವನ್ನು ಪರಿಶೀಲಿಸುವುದು.

ಈ) ರಸಗೊಬ್ಬರ ಮಾರುಕಟ್ಟೆಯ ಶಕ್ತಿಗಳ (ಬೇಡಿಕೆ ಮತ್ತು ಪೂರೈಕೆ ರಾಷ್ಟ್ರ, ರಾಜ್ಯ, ಜಿಲ್ಲೆವಾರು) ಕಾರ್ಯಾಚರಣೆಯನ್ನು ಪರಾಮರ್ಶಿಸುವುದು.

ಉ) ಹಿಡುವಳಿಗಳ ಗಾತ್ರಕ್ಕನುಗುಣವಾಗಿ ಹೇಗೆ ರಸಗೊಬ್ಬರಗಳು ಬಳಕೆಯಾಗುತ್ತವೆ ಎಂಬುದನ್ನು ಪರಿಶೀಲಿಸುವುದು.

ಊ) ರಸಗೊಬ್ಬರಗಳ ಬೆಲೆ ನಿಗದಿ ಹಾಗೂ ಸಹಾಯಧನದ ವಿಶ್ಲೇಷಿಸುವುದು.

ಋ) ರಸಗೊಬ್ಬರಗಳ ಮಾರುಕಟ್ಟೆಯ ವಿತರಣಾ ವಾಹಿನಿ ಹಾಗೂ ಅಂಚು ಗಳಿಕೆಯನ್ನು ಪರಿಶೀಲಿಸುವುದು.

ೠ) ರಸಗೊಬ್ಬರಗಳನ್ನು ಕಾರ್ಖಾನೆಯಿಂದ ಬಳಕೆದಾರರಿಗೆ ತಲುಪಿಸುವ ಸಾಗಾಣಿಕೆ ನೀತಿಯನ್ನು ಪರಿಶೀಲಿಸುವುದು.

ಎ) ಚಿಲ್ಲರೆ ವ್ಯಾಪಾರಿಗಳ ನಡೆವಳಿಕೆ, ಲಾಭ ನಷ್ಟಗಳನ್ನು ಕುರಿತು ಅಧ್ಯಯನ ನಡೆಸುವುದು.

ಸಂಶೋಧನಾ ವಿಧಾನ: ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಹಾಗೂ ಎರಡನೇ ಹಂತದ ಅಂಕಿ ಅಂಶಗಳನ್ನು ಕಲೆ ಹಾಕಲಾಗಿದೆ. ಪ್ರಾಥಮಿಕ ಸಮೀಕ್ಷೆಯನ್ನು ಮಾಡಲಾಗಿದೆ. ಪ್ರಾಥಮಿಕ ಸಮೀಕ್ಷೆಯಲ್ಲಿ

ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನಲ್ಲಿ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಹಾಗೂ ಬೆಂಗಳೂರು ನಗರದಲ್ಲಿ ಒಂದು ಗ್ರಾಮ, ಬೆಂಗಳೂರು ಗ್ರಾಮಾಂತರದಲ್ಲಿ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ನಾಲ್ಕು ಗ್ರಾಮಗಳನ್ನು ಕೃಷಿ ಇಲಾಖೆಯ ಅಧಿಕಾರಿಗಳು, ಆಯ್ಕೆ ಮಾಡಿಕೊಳ್ಳಲು ಸಹಕರಿಸಿದರು. ಕೋಲಾರ ಜಿಲ್ಲೆಯಲ್ಲಿ ಮಾರ್ಜೇನಹಳ್ಳಿ ಹಿಂದುಳಿದ ಗ್ರಾಮವಾದರೆ, ಅರಹಳ್ಳಿ ಪ್ರಗತಿಪರ ಗ್ರಾಮ ಎಂದು ಪರಿಗಣಿಸಲಾಯಿತು. ಹಿಂದುಳಿದ ಹಾಗೂ ಪ್ರಗತಿಪರ ಗ್ರಾಮಗಳನ್ನು ಗುರುತಿಸಲು ಬಳಸಿದ ಮಾನದಂಡಗಳೆಂದರೆ. ಹಿಂದುಳಿದ ಗ್ರಾಮದಲ್ಲಿ ನೀರಾವರಿ ಕಡಿಮೆ, ಹೆಚ್ಚು ಕೃಷಿ ಕೂಲಿಗಳಿರುವುದು, ಮೂಲಭೂತ ಸೌಕರ್ಯಗಳು ಅಭಿವೃದ್ಧಿಹೊಂದದೆ ಇರುವುದು ನಿರಕ್ಷರ ಸಂಖ್ಯೆ ಹೆಚ್ಚಾಗಿರುವುದು ಮುಂತಾದವುಗಳಾಗಿವೆ. ಆದರೆ ಮಾರ್ಜೇನಹಳ್ಳಿಯಲ್ಲಿ ಹೆಚ್ಚು ಗುಡಿಸಲುಗಳು , ನೀರಾವರಿ, ಹೈನುಗಾರಿಕೆ ಕಡಿಮೆ ಪ್ರಮಾಣದಲ್ಲಿ ಇವೆ. ಹಾಗೆಯೇ ಅರಹಳ್ಳಿ ಗ್ರಾಮದಲ್ಲಿ ನೀರಾವರಿ, ಹೈನುಗಾರಿಕೆ ನಡೆಯುತ್ತಿದೆ, ನಿರಕ್ಷರಸ್ಥರ ಸಂಖ್ಯೆ ಸಹ ಕಡಿಮೆ ಇದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿವೆ. ಇವೆಲ್ಲ ಮಾನದಂಡಗಳನ್ನು ಇಟ್ಟುಕೊಂಡು ನಾನು ಅಳೆಯಲು ಪ್ರಾರಂಭಿಸಿದರೆ ಎರಡೂ ಗ್ರಾಮಗಳಲ್ಲಿ ಅಂತಹ ವ್ಯತ್ಯಾಸವೇನು ಇಲ್ಲ. ಆದರೂ ಸೂಕ್ಷ್ಮವಾಗಿ ಅಧ್ಯಯನಿಸಿದಾಗ ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ. ಆದ್ದರಿಂದ ಗ್ರಾಮಗಳೆಂದರೆ, ಗ್ರಾಮಗಳೇ ಅವುಗಳಲ್ಲಿ ಹಿಂದುಳಿದ ಹಾಗೂ ಪ್ರಗತಿಪರ ಎಂಬುದರ ಬಗ್ಗೆ ಚರ್ಚೆ ಅನವಶ್ಯಕ; ಇದೇ ಹೇಳಿಕೆ ಬೆಂಗಳೂರು ಜಿಲ್ಲೆಯ ಗ್ರಾಮಗಳಿಗೂ ಅನ್ವಯಿಸುತ್ತದೆ, ಬೆಂಗಳೂರು ನಗರದ ಗ್ರಾಮದ ಬಿಳಿ ಜಾಜಿಯಲ್ಲಿ ಕೃಷಿ ಕೆಲಸವನ್ನು ನಂಬಿಕೊಂಡು ಕುಳಿತಿರುವರ ಸಂಖ್ಯೆ ಕಡಿಮೆ ಇದೆ, ಹಾಗೆ ಬೆಂಗಳೂರು ಗ್ರಾಮಾಂತರ ಪ್ರದೇಶದ ಹೊಸಕೋಟೆಯ ಕುಂಬಳಹಳ್ಳಿಯಲ್ಲಿ ಕೃಷಿಯನ್ನು ವೈವಿಧ್ಯೀಕರಿಸಲಾಗಿದೆ. ಕೋಲಾರ ತಾಲ್ಲೂಕಿನ ಈ ಎರಡು ಗ್ರಾಮಗಳಿಗೆ ಬೆಂಗಳೂರು ಜಿಲ್ಲೆ ಎರಡು ಗ್ರಾಮಗಳನ್ನು ಹೋಲಿಸಿ ನೋಡಿದಾಗ, ಇವು ಸಹ ಕೋಲಾರ ಜಿಲ್ಲೆ ಗ್ರಾಮಗಳಿಗಿಂತ ತೀವ್ರ ಸ್ವರೂಪದ ಭಿನ್ನತೆ ಇಲ್ಲ, ಪ್ರತಿ ಗ್ರಾಮದಲ್ಲೂ 30 ಜನ ರೈತರನ್ನು ಆಯ್ಕೆ ಮಾಡಿಕೊಂಡು ಪ್ರಶ್ನೆಗಳನ್ನು ಅವರಿಗೆ ಕೇಳಿ ಪ್ರಶ್ನಾವಳಿಯಲ್ಲಿ ಅವರ ಅಭಿಪ್ರಾಯವನ್ನು ನಮೂದಿಸಲಾಯಿತು. ಸುಮಾರು 20 ಪುಟಗಳ ಪ್ರಶ್ನಾವಳಿಗಳನ್ನು ಪ್ರತಿಯೊಬ್ಬ ರೈತನೊಂದಿಗೆ ನೇರ ಮಾತು ಕತೆಗೆ ಇಳಿಯುವ ಮೂಲಕ ಪ್ರಶ್ನಾವಳಿಗಳನ್ನು ತುಂಬಲಾಯಿತು. ರೈತರೊಂದಿಗೆ ನೇರ ಮಾತುಕತೆಯೊಂದಿಗೆ ಪ್ರಶ್ನೆಗಳನ್ನು ನಮೂದಿಸಿರುವುದರಿಂದ, ಈ ಅಧ್ಯಯನಕ್ಕೆ ನಿಖರತೆ ಬಂದಿದೆ ; ಪ್ರಶ್ನಾವಳಿಗಳನ್ನು ಕೇಳುವಾಗ ಪ್ರತಿಯೊಬ್ಬ ರೈತರನ್ನು ಪ್ರತ್ಯೇಕವಾಗಿ ಕೆಲವು ವೇಳೆ ಸಾಮೂಹಿಕವಾಗಿ ಪ್ರಶ್ನೆಗಳನ್ನು ಕೇಳಲಾಯಿತು. ಪ್ರಶ್ನಾವಳಿಗೆ ರೈತರ ಆಯ್ಕೆಯೂ ಸಹ ಸಣ್ಣ ರೈತರು, ಕೃಷಿ ಕೂಲಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮುಂತಾದ ಅಂಶಗಳನ್ನು ಇಟ್ಟುಕೊಂಡು ಆಯ್ಕೆ ಮಾಡಲಾಯಿತು ಗ್ರಾಮೀಣ ಪ್ರದೇಶಗಳಲ್ಲಿ ರೈತರ ಮೂಲಕ ಮಾಹಿತಿ ಪಡೆಯುವುದು

ಸುಲಭದ ಕೆಲಸವಲ್ಲ. ಆದ್ದರಿಂದ ರೈತರನ್ನು ನಾನಾ ರೀತಿಯಲ್ಲಿ ಓಲೈಸಿ ಸಂದರ್ಶನ ಮಾಡಲಾಯಿತು. ಈ ಸಂದರ್ಶನದ ವಿಶ್ಲೇಷಣೆ ಹಾಗೂ ಕಾರ್ಯಕ್ಷೇತ್ರದ ವಿಶ್ಲೇಷಣೆಯನ್ನು ಗ್ರಾಮಗಳ ಅಧ್ಯಯನ ಎಂಬ ಅಧ್ಯಾಯಗಳಲ್ಲಿ ನೀಡಲಾಗಿದೆ. ಹೀಗೆ ಪ್ರಾಥಮಿಕ ಸಮೀಕ್ಷೆಯನ್ನು ಮಾಡಲು ಪ್ರಶ್ನಾವಳಿ ಹಾಗೂ ಸಂದರ್ಶನ ವಿಧಾನವನ್ನು ಅನುಸರಿಸಲಾಯಿತು.

ಎರಡನೆಯದಾಗಿ ರಸಗೊಬ್ಬರಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಬೇಡಿಕೆ ಪೂರೈಕೆ ಹಿಡುವಳಿಗಳ ಗಾತ್ರಕ್ಕನುಗುಣವಾಗಿ ರಸಗೊಬ್ಬರಗಳ ಬಳಕೆ ಮುಂತಾದವುಗಳಿಗೆ ಫರ್ಟಿಲೈಸರ್ ಸ್ಟಾಟಿಸ್ಟಿಕ್ ಎಂಬ ಬೃಹತ್ ಪುಸ್ತಕವನ್ನು ಅಧ್ಯಯನಿಸಲಾಯಿತು, ಇದರ ಜೊತೆಗೆ ಇತರ ಆಕರ ಗ್ರಂಥಗಳ ಪಟ್ಟಿಯಲ್ಲಿ ನೀಡಿರುವ ಪುಸ್ತಕಗಳನ್ನು ಅಧ್ಯಯಿನಿಸಲಾಯಿತು. ಹೀಗೆ ಅಧ್ಯಯನಿಸಿದ ನಂತರ ಉಳಿದ ಅಧ್ಯಾಯನಗಳನ್ನು ಬರೆಯಲಾಯಿತು. ಇದರಲ್ಲಿ ಖ್ಯಾತ ಸಂಶೋದಕ ಎಂ.ಎನ್. ಶ್ರೀನಿವಾಸ್‌ರವರ “ರಿಮೆಂಬರ್ಡ್ ವಿಲೇಜ್” (Remembered Village) ಬಹಳ ಉಪಯುಕ್ತವಾಯಿತು. ಇದರ ಜೊತೆಗೆ ಕೃಷಿ ಇಲಾಖೆ , ಅರಣ್ಯ ಇಲಾಖೆ, ಗ್ರಾಮ ಪಂಚಾಯಿತಿಗಳು. ತಾಲ್ಲೂಕು ಕಚೇರಿ ಮುಂತಾದವುಗಳಿಂದ ಈ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಕಲೆ ಹಾಕಲಾಯಿತು. ಪ್ರಸ್ತುತ ಅಧ್ಯಯನ ವಿಧಾನ ಸರಳವಾದದ್ದು ಪ್ರತ್ಯಕ್ಷ ಹಾಗೂ ಪರೋಕ್ಷ ಅಂಶಗಳೆಲ್ಲ ಸೇರಿ ಒಂದು ಅಧ್ಯಯನವಾಗಿದೆ. ಪರೋಕ್ಷವಾಗಿ ಪುಸ್ತಕಗಳ ಮೂಲಕ ಅಧ್ಯಯನ, ಪ್ರತ್ಯಕ್ಷವಾಗಿ ಗ್ರಾಮಗಳ ಅಧ್ಯಯನ ಎಂ.ಎನ್ ಶ್ರೀನಿವಾಸರವರ “ರಿಮೆಂಬರ್ಡ್ ವಿಲೇಜ್” ಎಂಬ ಪುಸ್ತಕದ ಅಧ್ಯಯನ ವಿಧಾನ ವಿಶಿಷ್ಟವಾದದ್ದು ಇಲ್ಲಿ ನಾನು ಪರೀಕ್ಷಿಸಬೇಕಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಅಧ್ಯಯನ ಮತ್ತು ಮುಂದಿನ ಪುಟಗಳಲ್ಲಿ ಮಾಡಲಾಗಿದೆ. ಆದ್ದರಿಂದ ಇಲ್ಲಿನ ಅಧ್ಯಯನ ವಿಧಾನ ನೇರವಾಗಿ ಗ್ರಾಮಗಳಿಗೆ ಭೇಟಿ ಕೊಟ್ಟು ರೈತರೊಂದಿಗೆ ನೇರ ಸಂದರ್ಶನದ ಜೊತೆಗೆ, ವಿವಿಧ ಇಲಾಖೆಗಳ ಅಂಕಿ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಇಂತಹ ಅಧ್ಯಯನ ವಿಧಾನ ನಾನಾ ಅಧ್ಯಯನಗಳಿಗೆ ಉಪಯುಕ್ತವಾದದ್ದು, ಇದು ಗ್ರಾಮಗಳ ಜಾತಿ ವ್ಯವಸ್ಥೆ ಹಾಗೂ ಜಾತಿಗಳ ಚಲನೆಗೂ ಇಂತಹ ಅಧ್ಯಯನದ ವಿಧಾನವನ್ನು ಬಳಸಿಕೊಳ್ಳಬಹುದು. ಸಣ್ಣ ರೈತರಿಗೆ ಸರಕಾರಿ ಕಾರ್ಯಕ್ರಮಗಳು ತಲಪುತ್ತಿವೆಯೇ ಅಥವಾ ಇಲ್ಲವೆ, ಅವರ ಪ್ರಗತಿಯಾಗಿದೆಯೇ ಎಂಬ ವಿಷಯಕ್ಕೂ ನಾನು ಮಾಡಿದ ಅಧ್ಯಯನ ವಿಧಾನ ಅನ್ವಯಿಸಬಹುದು. (ದೊಂಡಿಯಾಲ್ ತನ್ನ ರಿಸರ್ಚ್ ಮೆಥಡಾಲಜಿ ಎಂಬ ಪುಸ್ತಕದಲ್ಲಿ ಸಾಮಾಜಿಕ ವಿಜ್ಞಾನಗಳಲ್ಲಿ ಅಧ್ಯಯನ ಹೇಗೆ ಮಾಡಬೇಕೆಂಬುದನ್ನು ಹೇಳಿದ್ದಾನೆ, ಸಂಪನ್ಮೂಲಗಳು ವಿಫುಲವಾಗಿದ್ದು, ಗ್ರಾಮದ ಲಕ್ಷಣಗಳು ವಿಭಿನ್ನತೆಯಿಂದ ಕೂಡಿದ್ದರೆ, ಇವುಗಳನ್ನು ನೇರವಾಗಿ ಸಂದರ್ಶನದ ಮೂಲಕ ಅಧ್ಯಯಸಿಸಬೇಕೆಂಬುದೆ ಇವರ ವಾದ.

ಸಮೀಕ್ಷೆಯ ವಿಧಾನ:

ಪ್ರಸಕ್ತ ಅಧ್ಯಯನವನ್ನು ಸಮೀಕ್ಷೆಯ ವಿಧಾನದ ಮೂಲಕ ಮಾಡಲಾಗಿದೆ; ಸಮೀಕ್ಷೆಯ ವಿಧಾನ ಸಾಮಾಜಿಕ ವಿಜ್ಞಾನಗಳಲ್ಲಿ ಅತ್ಯಂತ ಪರಿಣಾಮಕಾರಿ ಸಂಶೋಧನಾ ವಿಧಾನ. ಏಕೆಂದರೆ ಸಾಮಾಜಿಕ ವಿಜ್ಞಾನಗಳಲ್ಲಿ ಪ್ರಯೋಗಾಲಯಗಳು ಇರುವುದಿಲ್ಲ. ಇಲ್ಲಿ ಗ್ರಾಮಗಳೇ ಪ್ರಯೋಗಾಲಯ, ಜೀವ ವಿಜ್ಞಾನಿಗಳಲ್ಲಿ ಪ್ರಯೋಗಾಲಯಗಳಲ್ಲಿ ನಿಯಂತ್ರಿತ ಮಾದರಿಗಳನ್ನು ಅನಿಯಂತ್ರಿತ ಮಾದರಿಗಳಿಗೆ ಹೋಲಿಕೆ ಮಾಡಿ, ನಂತರ ಅವುಗಳ ಫಲಿತಾಂಶಗಳನ್ನು ರೂಪಿಸುತ್ತಾರೆ. ಆದರೆ ಸಾಮಾಜಿಕ ವಿಜ್ಞಾನಗಳಲ್ಲಿ ಇಂತಹ ಸನ್ನಿವೇಶ ಎದುರಾಗುವುದಿಲ್ಲ. ಇಲ್ಲಿ ಗ್ರಾಮಗಳ ವಿಶಾಲ ಕ್ಷೇತ್ರವೇ ಪ್ರಯೋಗಾಲಯಗಳು, ಆದ್ದರಿಂದ ಇಲ್ಲಿ ಸಮೀಕ್ಷೆ ವಿಧಾನವನ್ನು ಅನುಸರಿಸಲಾಗಿದೆ. ಈ ಸಮೀಕ್ಷೆ ವಿಧಾನದಲ್ಲಿ ಪ್ರಶ್ನಾವಳಿಗಳನ್ನು ರೂಪಿಸಿ, ಪ್ರಶ್ನಾವಳಿಗಳನ್ನು ಆಯ್ದ ರೈತರೊಂದಿಗೆ ನೇರ ಸಂದರ್ಶನದ ಮೂಲಕ ತುಂಬಲಾಗಿದೆ. ನೇರ ಸಂದರ್ಶನ ದಲ್ಲಿ ಬರಿ ಪ್ರಶ್ನಾವಳಿಗಳಲ್ಲಿರುವ ಪ್ರಶ್ನೆಗಳಿಗಷ್ಟೆ ಸೀಮಿತಗೊಳ್ಳದೆ ಪ್ರಶ್ನಾವಳಿಗಳಲ್ಲಿ ಇಲ್ಲದ ಅಂಶಗಳನ್ನು ರೈತರಿಂದ ಸಂಗ್ರಹಿಸಲಾಗಿದೆ. ಇಲ್ಲಿ ರೈತರು ಪ್ರತಿಕ್ರಿಯೆದಾರರಾದರೆ, ಸಂಶೋಧಕರು ಸಂದರ್ಶಕರಾಗಿದ್ದಾರೆ, ಸಂದರ್ಶಕರು ಮತ್ತು ಪ್ರತಿಕ್ರಿಯೆದಾರರಿಗೆ ನೇರ ಸಂಬಂಧವಿರುತ್ತದೆ. ನೇರ ಸಂಬಂಧವಿರುವುದರಿಂದ ಪ್ರತಿಕ್ರಿಯೆದಾರರ ವೈಯುಕ್ತಿಕ ನಡವಳಿಕೆ, ಅವರು ಹೇಳದೆ ಗುಪ್ತವಾಗಿರುವ ವಿಷಯಗಳು, ಅವರು ಬೇರೊಬ್ಬ ಪ್ರತಿಕ್ರಿಯೆದಾರ ಜೊತೆಗಿರುವ ಸಂಬಂಧಗಳು, ನಾನು ತೆಗೆದುಕೊಂಡಿರುವ ಸಮಸ್ಯೆಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಪಡೆಯಲು ಸಹಾಯಕವಾಯಿತು. ಉದಾಹರಣೆಗೆ ಸಾರಾಯಿ ಕುಡಿಯುವುದನ್ನು ಕೆಲವು ಪ್ರತಿಕ್ರಿಯೆದಾರರು ಗುಪ್ತವಾಗಿಡಲು ಪ್ರಯತ್ನಿಸಿದರು, ಆದರೆ ನೇರ ಸಂದರ್ಶನವಾಗಿದ್ದರಿಂದ ಈ ಅಂಶವನ್ನು ಅವರ ಗೆಳೆಯರ ಮೂಲಕ ಪಡೆದು ಖಚಿತಪಡಿಸಿಕೊಂಡೆ ಹಾಗೆಯೇ ಸರಕಾರಿ ಇಲಾಖೆಗಳಿಂದ ಅನೇಕ ಫಲಗಳನ್ನು ಪಡೆದು ಅದನ್ನು ಕೃಷಿಗೆ ಬಳಸದೆ ಬೇರೆ ಉದ್ದೇಶಗಳಿಗೆ ಬಳಸುವುದು ಸಹ ಸಮೀಕ್ಷೆ ವಿಧಾನದಲ್ಲಿ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸಬಹುದು. ಇಲ್ಲಿ ಅಧ್ಯಯನದ ಗುಣಾತ್ಮಕತೆ ಹೆಚ್ಚುತ್ತದೆ. ಕೆಲವರುಆಶ್ರಯ ಯೋಜನೆಯಲ್ಲಿ ಮನೆಗಳನ್ನು ಪಡೆದಿದ್ದರೂ ಅದು ಬೆನಾಮಿ ಹೆಸರುಗಳಲ್ಲಿ ಪಡೆದಿರುವವರು ಇದ್ದರು, ನೇರ ಸಂದರ್ಶನದ ಸಮೀಕ್ಷೆಯಾಗಿದ್ದರಿಂದ, ಈ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಲು, ಸಮೀಕ್ಷೆ ವಿದಾನದಿಂದ ಅನುಕೂಲವಾಯಿತು.

ಪ್ರಶ್ನಾವಳಿಗೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳಿಗೆ ರೈತರು ಉತ್ತರಿಸುವಾಗ ಸತ್ಯ ಸಂಗತಿಗಳನ್ನು ಮರೆ ಮಾಚಿ ಉತ್ತರಿಸುತ್ತಾರೆ , ಉದಾಹರಣೆಗೆ ಕೃಷಿಯಿಂದ ಬರುವ ವಾರ್ಷಿಕ ಆದಾಯದ ಬಗ್ಗೆ ತೆಗೆದುಕೊಂಡಾಗ ರೈತರು ಕಡಿಮೆ ಆದಾಯ ಬರುತ್ತದೆಂದು ಹೇಳುತ್ತಾರೆ. ಆದರೆ ಕಡಿಮೆ ಆದಾಯ ಬರುವ ಹಾಗಿದ್ದರೆ ಒಳ್ಳೆ ಸುಸಜ್ಜಿತ ಮನೆ ದ್ವಿಚಕ್ರವಾಹನವನ್ನು ಹೇಗೆ ಹೊಂದಲು ಸಾಧ್ಯವಾಯಿತು ಎಂಬುದು ಅಲ್ಲಿನ ವಸ್ತು

ಸ್ಥಿತಿಯನ್ನು ಗಮನಿಸಿದಾಗ ಕಂಡು ಬಂತು. ಈ ಅಂಶದಿಂದ ಕೃಷಿಯಿಂದ ಬರುವ ಆದಾಯ ಕಡಿಮೆಯೆಂದು ಭಾವಿಸಲು ಸಾಧ್ಯವಾಗುವುದಿಲ್ಲ. ಅಥವಾ ಬೇರೆ ಯಾವ ಮೂಲದಿಂದ ಆದಾಯ ಬರುತ್ತದೆಂದು ಊಹಿಸಬಹುದು. ಹೀಗೆ ಸಮೀಕ್ಷೆ ವಿಧಾನದ ಮೂಲಕ ಪ್ರತಿಕ್ರಿಯೆದಾರ ಒಟ್ಟು ನಡವಳಿಕೆ ಅವರ ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತು ಅವರ ಜೀವನ ಶೈಲಿಯನ್ನು ಗ್ರಹಿಸಬಹುದು. ಆದ್ದರಿಂದ ವೈಯುಕ್ತಿಕ ಸಂದರ್ಶನ ಸಮೀಕ್ಷೆಯ ಮೂಲ ತಿರುಳು ಹೀಗೆ ವೈಯುಕ್ತಿಕ ಸಂದರ್ಶನ ಮಾಡುವುದರ ಮೂಲಕ ಗ್ರಾಮೀಣ ಪ್ರದೇಶದ ಅನೇಕ ಸಮಸ್ಯೆಗಳನ್ನು ಗ್ರಹಿಸಬಹುದು ಮತ್ತು ದಾಖಲಿಸಬಹುದು. ಆದ್ದರಿಂದ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿ ಸಮೀಕ್ಷೆಯ ವಿಧಾನ ಪ್ರಮುಖ ಪಾತ್ರ ವಹಿಸುತ್ತದೆ, ಪ್ರತಿಕ್ರಿಯೆದಾರರ ಮತ್ತು ಸಮೀಕ್ಷೆದಾರ ಸಂಬಂಧಗಳು ಹೆಚ್ಚು ಅರ್ಥ ಪೂರ್ಣವಾಗಲು ವೈಯುಕ್ತಿಕ ಸಂದರ್ಶನ ವಿಧಾನ ಮುಖ್ಯವಾಗುತ್ತದೆ. ಆದ್ದರಿಂದ ಸಮೀಕ್ಷೆಯ ವಿಧಾನದಲ್ಲಿ ಪ್ರತಿಕ್ರಿಯೆದಾರರ ವೈಯುಕ್ತಿಕ ಗುಣಗಳನ್ನು ಸಂದರ್ಶಕರು ಗಮನಿಸಬಹುದು. ಆದ್ದರಿಂದ ನಾನು ಆಯ್ದುಕೊಂಡ ಗ್ರಾಮಗಳಲ್ಲಿ ಸಮೀಕ್ಷೆ ವಿಧಾನದ ಮೂಲಕ ಸಮಸ್ಯೆಗಳನ್ನು ಗ್ರಹಿಸಲು ಪ್ರಯತ್ನ ಪಟ್ಟಿದ್ದೇನೆ ಅವುಗಳನ್ನು ದಾಖಲಿಸಿದ್ದೇನೆ. ಆದ್ದರಿಂದ ಸಮೀಕ್ಷೆ ವಿಧಾನ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯಲ್ಲಿ ಬಳಸುವ ಅತ್ಯಂತ ಸಾಮಾನ್ಯ ವಿಧಾನ.

ಸಮೀಕ್ಷೆ ವಿಧಾನದ ಮೂಲಕ ನಡೆಸುವ ಸಂಶೋಧನೆಯಲ್ಲಿ ಹೆಚ್ಚು ಗುಣಾತ್ಮಕತೆ ಇರುತ್ತದೆ. ಯಾಕೆಂದರೆ ಸಂದರ್ಶಕರು ಗ್ರಾಮೀಣ ಪ್ರದೇಶಗಳಿಗೆ ಹಲವಾರು ತಿಂಗಳುಗಳ ಕಾಲ ಹೋಗಬೇಕಾಗುತ್ತದೆ. ಆಗ ಅಲ್ಲಿ ಪರಿಸರ, ಅಭಿವೃದ್ಧಿ ಸಮಸ್ಯೆಗಳು ಸಂಶೋಧಕರಿಗೆ ಹೆಚ್ಚು ಸ್ಪಷ್ಟವಾಗುತ್ತದೆ. ಪ್ರಶ್ನಾವಳಿಗಳಲ್ಲಿ ಇಲ್ಲದ ಎಷ್ಟೋ ಘಟನೆಗಳು, ಅಲ್ಲಿ ನಮಗೆ ಹೊಸ ಜ್ಞಾನವನ್ನು ಪಡೆಯಲು ಅನುಕೂಲವಾಗುತ್ತದೆ. ನಾವು ಕೇಳರಿಯದ ಕಾಣದ ಪ್ರಸಂಗಗಳು ಎದುರಾಗಬಹುದು. ಈ ಎಲ್ಲಾ ಅಂಶಗಳನ್ನು ನಾವು ಗ್ರಹಿಸಬಹುದು ಹಾಗೂ ದಾಖಾಲಿಸಬಹುದು ನಮ್ಮ ಸಂಶೋಧನ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಷಯಗಳಿಂದ ಆಚೆಯೂ ಹೋಗಬಹುದು, ಆದರೆ ಇಂತಹ ಸನ್ನಿವೇಶ ಅಪರೂಪದ್ದಾಗಿರುತ್ತದೆ, ಆದ್ದರಿಂದ ನಮ್ಮ ಸಂಶೋಧನ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ನಮಗೆ ಗೊತ್ತಿಲ್ಲದ ವಿಷಯಗಳು ಸಹ ಇಲ್ಲಿ ಎದುರಾಗುತ್ತದೆ.

ಮಾದರಿಗಳ ಆಯ್ಕೆ

ಅಧ್ಯಯನಕ್ಕೆ ಬೇಕಾದ ಮಾದರಿಗಳ ಆಯ್ಕೆಗೆ ಮುಂಚೆ, ಗ್ರಾಮಗಳನ್ನು ಆಯ್ಕೆ ಮಾಡಿಕೊಂಡೆ, ಗ್ರಾಮಗಳ ಆಯ್ಕೆಯನ್ನು ಕೃಷಿ ಇಲಾಖೆಯ ಮಾರ್ಗದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು, ಹಿಂದುಳಿದ ಗ್ರಾಮ ಹಾಗೂ ಪ್ರಗತಿ ಪರ ಗ್ರಾಮ ಎಂಬ ಮಾನದಂಡಗಳನ್ನು ಉಪಯೋಗಿಸಿ ಆಯ್ಕೆ ಮಾಡಿಕೊಳ್ಳಲಾಯಿತು. ಹಿಂದುಳಿದ ಗ್ರಾಮವೆಂದರೆ ನಿರಕ್ಷರಸ್ಥರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿರುವುದು, ನೀರಾವರಿ ಬೆಳೆಗಳನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯುವದು, ಹೈನುಗಾರಿಕೆ ಇಲ್ಲದಿರುವುದು, ಕುಡಿಯುವ

ನೀರು ಇಲ್ಲದಿರುವುದು, ಒಟ್ಟಾರೆಯಾಗಿ ಜನರ ಬದುಕಿನ ಗುಣಾತ್ಮಕತೆಯನ್ನು ಸುಧಾರಿಸದೇ ಇರುವುದೇ ಆಗಿದೆ, ಈಗಾಗಲೇ ನಾನು ತಿಳಿಸಿರುವಂತೆ 30 ಜನ ರೈತರನ್ನು ಪ್ರತಿ ಗ್ರಾಮಕ್ಕೂ ಆಯ್ಕೆ ಮಾಡಿಕೊಳ್ಳಲಾಯಿತು 30 ಜನ ರೈತರನ್ನು ರ್‍ಯಾಂಡಮ್ ವಿಧಾನದ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು, ರ್‍ಯಾಂಡಮ್ ಮಾದರಿಯ ಮೂಲಕ ಆಯ್ಕೆ ಮಾಡಿಕೊಂಡಾಗ ಇವರಲ್ಲಿ ಪರಿಶಿಷ್ಟ ಜಾತಿ / ವರ್ಗ/ ಹಿಂದುಳಿದ ವರ್ಗ ಸಾಮಾನ್ಯ ವರ್ಗ ಹಾಗೂ ಸಣ್ಣ ಹಿಡುವಳಿದಾರರು ದೊಡ್ಡ ಹಿಡುವಳಿದಾರರು ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಿಕೊಳ್ಳಲಾಯಿತು. ದೊಂಡ್ಯಾಲ ಎಂಬ ವಿದ್ವಾಂಸರ ಪ್ರಕಾರ ಸಂಶೋಧಕರ ಬಳಿ ಇರುವ ಹಣಕಾಸು ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲದ ಮೇಲೆಯೇ ಸಮೀಕ್ಷೆ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಮಾನದಂಡದ ಮೂಲಕ ಮಾದರಿ ಜನಸಂಖ್ಯೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು ಇಡೀ ಗ್ರಾಮವನ್ನೇ ಸಮೀಕ್ಷೆ ಮಾಡುವುದು ದುಸ್ಸಾದ್ಯ ಎಂದು ದೊಂಡಿಯಾಲ್ ಪ್ರತಿಪಾದಿಸುತ್ತಾರೆ. ಈಗಾಗಲೆ ತಿಳಿದಂತೆ ಇದಕ್ಕೆ ಸರಕಾರಿ ಏಜನ್ಸಿಗಳು ಅಥವಾ ದೊಡ್ಡ ದೊಡ್ಡ ಸಂಸ್ಥೆಗಳು ವಿಪುಲ ಹಣ ಮತ್ತು ಮಾನವ ಸಂಪನ್ಮೂಲ ದ ಬೆಂಬಲದೊಂದಿಗೆ ತೆಗೆದುಕೊಳ್ಳುವ ಯೋಜನೆಗಳು ಅನ್ವಯಿಸುತ್ತವೆ.

ಕ್ಷೇತ್ರ ಕಾರ್ಯ - 30 ಪ್ರತಿಕ್ರಿಯೆದಾರರನ್ನು ಸಂದರ್ಶಿಸಲು ಪ್ರತಿ ಕ್ಷೇತ್ರಕ್ಕೂ ಹಲವಾರು ಬಾರಿ ಭೇಟಿ ಕೊಟ್ಟಿರುವೆ. ಬರಿ ಕ್ಷೇತ್ರ ಕಾರ್ಯ ಮಾಡಲು 4 ತಿಂಗಳು ತೆಗೆದುಕೊಂಡಿತು. ಪ್ರಶ್ನಾವಳಿಗಳಲ್ಲಿ ಬರುವ ಮುಖ್ಯ ವಿಷಯಗಳಿಗೆ ಹೆಚ್ಚು ಒತ್ತು ಕೊಡಲಾಯಿತು. ಅಂದ ಮಾತ್ರಕ್ಕೆ ಉಳಿದ ಪ್ರಶ್ನೆಗಳು ನಗಣ್ಯ ಎಂದು ಭಾವಿಸಬೇಕಾಗಿಲ್ಲ. ಯಾಕೆಂದರೆ ನಾನು ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ಅರಣ್ಯ ಪ್ರದೇಶವಾಗಲಿ ಬೆಟ್ಟ ಗುಡ್ಡಗಳು, ನದಿಗಳು, ಗಣಿಗಾರಿಕೆಗಳು ಯಾವುದೂ ಇರಲಿಲ್ಲ ಇದು ಮೊದಲು ಅಧ್ಯಯನ ಮಾಡಲು ಪ್ರಾರಂಭಿಸಿದಾಗ ಕಂಡು ಬಂದ ಅಂಶ, ಇಲ್ಲಿ ರೈತರನ್ನು ಕಾಣಲು ಬೆಳಿಗ್ಗೆ 8 ರಿಂದ 9 ಗಂಟೆಗೆ ನಾನು ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೆ ನಂತರ ಮೂರರಿಂದ ನಾಲ್ಕು ಗಂಟೆಗಳಿಗೆ ಗ್ರಾಮಗಳಿಂದ ವಾಪಸ್ಸಾಗುತ್ತಿದ್ದೆ ಇಲ್ಲಿ ರೈತರ ಕುಟುಂಬಗಳಿಗೆ ಭೇಟಿ ನೀಡುತ್ತಿದ್ದೆ ; ಇಲ್ಲವೆ ಪಂಚಾಯಿತಿ ಸಮುದಾಯ ಭವನ ಅಂಗಡಿಗಳ ಬಳಿ ಹೊಲಗಳಲ್ಲಿ ರೈತರು ಸಿಗುತ್ತಿದ್ದರೂ, ಮನೆಗಳಲ್ಲಿ ಬಹಳಷ್ಟು ರೈತರು ಇರುತ್ತಿದ್ದದ್ದೇ ಅಪರೂಪ, ಆದ್ದರಿಂದ ರೈತರನ್ನು ಸಂದರ್ಶಿಸಿದ ಮೇಲೆ ಇಡೀ ಗ್ರಾಮವನ್ನೆಲ್ಲ ಸುತ್ತಾಡಿ ಅಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ವೀಕ್ಷಿಸುತ್ತಿದೆ. ರೈತರು ಹೊಲಗಳಲ್ಲಿ ಇರುವವರ ಸಂಖ್ಯೆ ಕಡಿಮೆಯೇ ಯಾಕೆಂದರೆ ಬಹಳಷ್ಟು ರೈತರ ಕುಟುಂಬದ ಮಹಿಳೆಯರು ಇದನ್ನೆಲ್ಲ ನಿರ್ವಹಿಸುತ್ತಿದ್ದರು. ಗಂಡಸರ ಲೋಕಾಭಿರಾಮವಾಗಿ ಮಾತನಾಡಲು ಚಹ ಅಂಗಡಿಗಳ ಬಳಿಯೋ ಸಮುದಾಯ ಭವನದ ಬಳಿಯೋ ಗ್ರಾಮ ಪಂಚಾಯಿತಿ ಬಳಿಯೋ ಸೇರುತ್ತಿದ್ದರು, ಆಯ್ಕೆ ಮಾಡಿಕೊಂಡ ಸ್ವಲ್ಪ ರೈತರ ಪ್ರಶ್ನೆಗಳಿಗೆ ಉದಾಹರಣೆಯಾಗಿ

ಉತ್ತರಿಸುತ್ತಿದ್ದರು. ಇನ್ನೂ ಕೆಲವು ರೈತರು ಇದರಿಂದ ತಮಗೇನು ಲಾಭ ಎನ್ನುವ ದೃಷ್ಟಿಕೋನವನ್ನಿಟ್ಟು ಕೊಂಡಿದ್ದರು. ಇನ್ನೂ ಕೆಲವು ರೈತರು ನಮಗೇನಾದರೂ ಸರಕಾರದಿಂದ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದರು. ರೈತರನ್ನು ನೇರ ಸಂದರ್ಶನ ಮಾಡುವುದು ಒಬ್ಬನಿಂದಲೇ ಕಷ್ಟಕರವಾದ ಅನುಭವವಾಗಿತ್ತು. ನಾನಾ ರೀತಿಯಲ್ಲಿ ರೈತರ ದೃಷ್ಟಿಕೋನಕ್ಕನುಗುಣವಾಗಿ ನಾನು ಹೊಂದಾಣಿಕೆ ಮಾಡಿಕೊಂಡೆನು.

ರೈತರ ದೃಷ್ಟಿಕೋನಕ್ಕನುಗುಣವಾಗಿ ನಾನು ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಕ್ಷೇತ್ರ ಕಾರ್ಯ ಮುಗಿಸಲು ಕಷ್ಟಕರವಾಗುತ್ತಿತ್ತು. ಕೆಲವು ಶ್ರೀಮಂತ ರೈತರು ನನ್ನನ್ನು ಗುಮಾನಿಯಿಂದಲೇ ನೋಡುತ್ತಿದ್ದರು. ಯಾಕೆಂದರೆ ಈತನೇನಾದರೂ ನಾವು ಸರಿಯಾದ ಆದಾಯವನ್ನು ತಿಳಿಸಿದರೆ ತೆರಿಗೆ ಇತ್ಯಾದಿಗಳ ರೂಪದಲ್ಲಿ ಸಿಕ್ಕಿ ಹಾಕಿಕೊಳ್ಳಬಹುದೇನೋ ಎಂದು , ಅಂತಹ ಸಂದರ್ಭದಲ್ಲಿ ನಾನು ಅಂತಹ ರೈತರನ್ನು ಪುಸಲಾಯಿಸಿ , ಸಂದರ್ಶನ ನಡೆಸಿ ಅವರ ಮನೆ, ಹೊಲ ತೋಟಗಳಿಗೆ ಭೇಟಿ ನೀಡಿ ಒಂದು ಅಂದಾಜಿನ ಪ್ರಕಾರ ಅವರ ಆದಾಯ ಆಸ್ತಿ ಇವೆಲ್ಲವನ್ನು ವೀಕ್ಷಣೆ ಮಾಡುತ್ತಿದ್ದೆ ಕ್ಷೇತ್ರ ಕಾರ್ಯದಲ್ಲಿ ಎದುರಿಸಿದ ಸಮಸ್ಯೆಗಳೆಂದರೆ

1. ಕೆಲವು ರೈತರು ನನ್ನನ್ನು ಯಾವುದೊ ಸರಕಾರಿ ಇಲಾಖೆಯವನೆಂದು ಭಾವಿಸಿ, ಅದರಿಂದ ಏನಾದರೂ ಫಲಗಳು ಸಿಗಬಹುದೆಂದು ಬಡತನವನ್ನು ಉತ್ಪ್ರೇಕ್ಷೆ ಮಾಡಿ ಹೇಳುತಿದ್ದುದು ;
2. ಇನ್ನೂ ಕೆಲವು ರೈತರು ನಾನು ಅಧ್ಯಯನಕ್ಕೋಸ್ಕರ ಬಂದಿರುವುದೇನೆಂದರೆ ಇದರಿಂದ ನಮಗೇನು ಉಪಯೋಗ ಎಂದು ಉಡಾಫೆಯಿಂದ ಹೇಳುತ್ತಿದ್ದುದ್ದು ;
3. ಇನ್ನು ಕೆಲವು ರೈತರು ನಾನು ಅವರ ಸಮಸ್ಯೆಗಳನ್ನು ಇಲಾಖೆಯ ದೊಡ್ಡ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆಗಳನ್ನು ಪರಿಹರಿಸುವನೆಂದು ಭಾವಿಸಿದ್ದು.
4. ಇನ್ನೂ ಕೆಲವು ರೈತರು ನನ್ನನ್ನು ಮೇಲಧಿಕಾರಿಯೆಂದು ಭಾವಿಸಿ ಗ್ರಾಮ ಪಂಚಾಯಿತಿಯ ಭ್ರಷ್ಟಾ ಚಾರವನ್ನು ವಿವರಿಸುತ್ತಿದ್ದುದ್ದು.

ಇಂತಹ ಎಲ್ಲಾ ಸಂಕಷ್ಟಗಳ ಮಧ್ಯೆ ನಾನು ರೈತರನ್ನು ಸಂದರ್ಶಿಸಬೇಕಾಗಿ ಬಂತು.

ಇನ್ನು ಹೇಳಬೇಕಾಗಿರುವುದೇನೆಂದರೆ ಗ್ರಾಮ ಪಂಚಾಯಿತಿಯ ಅಧಿಕಾರಿಗಳನ್ನು ಸಂದರ್ಶಿಸಲು ಹೋದರೆ ಕೈಗೆ ಸಿಗದಂತೆ ಹೋಗುತ್ತಿದ್ದು, ನಾನು ಕೇಳಿದ ಪ್ರಶ್ನೆಗಳಿಗೆ ಹಾರಿಕೆ ಉತ್ತರ ನೀಡುತ್ತಿದ್ದು, ಈ ಎಲ್ಲಾ ಸಮಸ್ಯೆ, ಸಂಕಷ್ಟಗಳ ಮಧ್ಯೆ ನನ್ನ ಪ್ರತಿಕ್ರಿಯೆದಾರರ ಸಂದರ್ಶನ ಮಾಡಬೇಕಾಗಿ ಬಂತು. ಆದರೂ ನಾನು ಇದನ್ನೆಲ್ಲ ಮೀರಿ ಕೆಲವು ರೈತರ ಜೊತೆ ಸ್ನೇಹ ಬೆಳೆಸಿ, ಗ್ರಾಮ ಪಂಚಾಯಿತಿಯ ಕಾರ್ಯವೈಖರಿಯನ್ನು ಅಭ್ಯಸಿಸಿದೆ. ಆಗ ಅನೇಕ ವಿಷಯಗಳು ಬೆಳಕಿಗೆ ಬಂದವು. ಗ್ರಾಮ ಪಂಚಾಯಿತಿಯ ಅಧಿಕಾರಿಗಳು

ನಿಯಮಿತವಾಗಿ ಕೆಲಸಕ್ಕೆ ಬರದೆ, ವಾರಕ್ಕೆ 15 ದಿವಸಗಳಿಗೊಮ್ಮೆ ಬರುತ್ತಿದ್ದರು. ಗ್ರಾಮ ಪಂಚಾಯಿತಿ 'ಡಿ' ಗ್ರೂಪ್ ನೌಕರನು ಕಚೇರಿಯ ಬಾಗಿಲು ತೆರೆದು ಕುಳಿತಿರುತ್ತಿದ್ದು, ಆದ್ದರಿಂದ ಗ್ರಾಮಗಳ ತೆರಿಗೆ ಸಂಗ್ರಹ, ಜಾತಿವಾರು, ಆಶ್ರಯ ಮನೆಗಳು ಹಂಚಿಕೆ ಮುಂತಾದ ವಿಷಯಗಳು ನನ್ನ ಅಧ್ಯಯನ ವ್ಯಾಪ್ತಿಗೆ ಬಂದಿದ್ದರೂ ಕೆಲವು ಸ್ನೇಹಿತ ರೈತರು ಇದರ ಬಗ್ಗೆ ಅವರಿಗೆ ತಿಳಿದಷ್ಟು ಹೇಳುತ್ತಿದ್ದರು. ಹೀಗೆ ಕ್ಷೇತ್ರ ಕಾರ್ಯ ವೆಂಬುದು ಶ್ರಮದಾಯಕ ಕಠಿಣವಾದದ್ದು ಎಂಬುದು ನನ್ನ ಅಭಿಪ್ರಾಯ.

ಅಧ್ಯಯನಕ್ಕೆ ಬಳಸಿದ ಮಾನದಂಡಗಳು

ಅಧ್ಯಯನಕ್ಕೆ ಬಳಸಿದ ಮಾನದಂಡಗಳು ರಸಗೊಬ್ಬರ ಮಾರುಕಟ್ಟೆಗೆ ಪೂರಕವಾಗಿರುತ್ತವೇ ಎಂಬುದನ್ನು ಗಮನಿಸಲಾಯಿತು ಇದಕ್ಕಿಂತ ಮೊದಲು ಗ್ರಾಮದ ಸಾಮಾನ್ಯ ಮಾಹಿತಿಯನ್ನು ಕಲೆ ಹಾಕಲಾಯಿತು. ಪ್ರತಿ ಗ್ರಾಮದ ಜಾತಿವಾರು ಕುಟುಂಬಗಳ ಸಂಖ್ಯೆಯನ್ನು ಗ್ರಾಮ ಪಂಚಾಯಿತಿ ಅಧಿಕಾರಿಗಳ ಮೂಲಕ ಪಡೆಯಲಾಯಿತು. ಗ್ರಾಮದ ವಿಸ್ತೀರ್ಣ ಹಾಗೂ ನೀರಾವರಿ, ಒಣಬೇಸಾಯ, ತೋಟಗಾರಿಕೆ, ಮುಂತಾದವುಗಳ ಬಗ್ಗೆ ಕೃಷಿ ಇಲಾಖೆಯಿಂದ ಪಡೆಯಲಾಯಿತು. ಉದ್ಯೋಗದ ಮಾಹಿತಿ ಬಗ್ಗೆಗ್ರಾಮ ಪಂಚಾಯಿತಿಯಾಗಲಿ, ಜಿಲ್ಲಾ ಸಾಂಖ್ಯಿಕ ಇಲಾಖೆಯಾಗಲಿ ಮಾಹಿತಿ ಇಟ್ಟಿಲ್ಲದೆ ಇದ್ದಿದ್ದರಿಂದ ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಯಿತು, ರೈತರ ಹಿಡುವಳಿಗಳ ಗಾತ್ರಕ್ಕನುಗುಣವಾಗಿರುವ ಸಂಖ್ಯೆಯನ್ನು ಸಹ ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಯಿತು. ಬಡತನದ ರೇಖೆಗಿರುವಂತಹ ಕೆಳಗಿರುವ ಜನ ಸಂಖ್ಯೆಯ ಬಗ್ಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಮಾಹಿತಿ ಇಲ್ಲದಿದ್ದರಿಂದ ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಯಿತು. ನಿರಕ್ಷರತೆ ಬಗ್ಗೆ ಮಾಹಿತಿ ಗೃಹ ವಿದ್ಯುತ್ ಹೊಂದಿರುವವರ ಬಗ್ಗೆ ಇರುವ ಮಾಹಿತಿ ಹೈನುಗಾರಿಕೆ ತೊಡಗಿಸಿಕೊಂಡಿರುವವರ ಮಾಹಿತಿ, ಸಹಕಾರಿ ಸಂಘಗಳ ಸಂಖ್ಯೆ, ಸಾಲ ಪಡೆದಿರುವವರ ಸಂಖ್ಯೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನೀರಾವರಿ ಮೂಲಗಳು ಇತ್ಯಾದಿಗಳನ್ನೆಲ್ಲ ಪ್ರಾಥಮಿಕ ಮಾಹಿತಿ ಮೂಲಕ ಪಡೆಯಲಾಯಿತು.

ರಸಗೊಬ್ಬರಗಳ ಮಾರುಕಟ್ಟೆಗೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಮಾಹಿತಿಯನ್ನು ಪ್ರಾಥಮಿಕ ಸಮೀಕ್ಷೆ ಹಾಗೂ ಕೆಲವು ವರದಿಗಳನ್ನು ಅಧ್ಯಯನಗೊಳಿಸುವುದರ ಮೂಲಕ ಪಡೆಯಲಾಯಿತು.

ರಸಗೊಬ್ಬರಗಳು ಸಕಾಲಕ್ಕೆ ಮಾರುಕಟ್ಟೆಯ ಮೂಲಕ ಸರಬರಾಜಾಗುವಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು. ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಯಿತು ಇಲ್ಲಿ ಶೇಕಡವಾರು ವಿಧಾನವನ್ನು ಅನುಸರಿಸಲಾಯಿತು. ಇದು ನಾನು ನಮೂದಿಸಿರುವ ಉದ್ದೇಶಗಳಲ್ಲಿ ಅತ್ಯಂತ ಮುಖ್ಯವಾದದ್ದು

ರೈತರಿಗೆ ಸಕಾಲಕ್ಕೆ ರಸಗೊಬ್ಬರಗಳು ತಲುಪದಿದ್ದರೆ ಬೆಳೆ ನಷ್ಟ ಅನುಭವಿಸಬೇಕಾಗುತ್ತದೆ, ಆದ್ದರಿಂದ ಸೂಚಿಯನ್ನು ಬಳಸುವುದು ಅನಿವಾರ್ಯ

ರಸಗೊಬ್ಬರಗಳು ಕೊಳ್ಳುವಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು ಅಂದರೆ ರಸಗೊಬ್ಬರಗಳ ಗುಣಮಟ್ಟ ಇದರಲ್ಲಿ ಸಹಕಾರಿ ಹಾಗೂ ಖಾಸಗಿ ಮಳಿಗೆಗಳ ಮೂಲಕ ಪಡೆಯುವುದು ಇದನ್ನು ಪ್ರಾಥಮಿಕ ಸಮೀಕ್ಷೆಯ ಮೂಲಕ ಅಧ್ಯಯನ ನಡೆಸಲಾಗಿದೆ. ಎರಡನೆಯ ಸಮಸ್ಯೆ ಸಾಗಾಣಿಕೆ. ಇದನ್ನು ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಗಿದೆ. ಮುಂದೆ ಸಮಸ್ಯೆ ಸಾಲ ಅಥವಾ ನಗದು ಕೊಟ್ಟು ರಸಗೊಬ್ಬರಗಳನ್ನು ಕೊಳ್ಳುವುದು. ಇದನ್ನು ಶೇಕಡವಾರು ವಿಧಾನದ ಮೂಲಕ ಅಧ್ಯಯನಿಸಲಾಗಿದೆ.

ರೈತರು ರಸಗೊಬ್ಬರಗಳನ್ನು ಬಳಕೆ ಮಾಡುವಲ್ಲಿ ಇರುವ ವ್ಯತ್ಯಾಸವನ್ನು ಪ್ರಾಥಮಿಕ ಸಮೀಕ್ಷೆಯ ಮೂಲಕ ಪರಿಶೀಲಿಸಲಾಗಿದೆ.

ಎಕರೆ ರೂ. 5000 ಕ್ಕಿಂತ ಜಾಸ್ತಿ ವೆಚ್ಚ ಮಾಡುವವರು ಎಕರೆ ರೂ. 5000 ಕ್ಕಿಂತ ಕಡಿಮೆ ವೆಚ್ಚ ಮಾಡುವವರು

ಅದನ್ನು ಪ್ರಾಥಮಿಕ ಸಮೀಕ್ಷೆಯ ಮೂಲಕ ಪಡೆಯಲಾಯಿತು.

2) ಒಟ್ಟು ಉತ್ಪನ್ನದ ಬೆಲೆಯಲ್ಲಿ ರಸಗೊಬ್ಬರಗಳಿಗೆ ಮಾಡುವ ಶೇಕಡವಾರು ವೆಚ್ಚ

ಅ) ಶೇ. 5 ಕ್ಕಿಂತ ಕಡಿಮೆ

ಆ) ಶೇ. 5 ರಿಂದ ಶೇ. 10 ರವರೆಗೆ

ಇ) ಶೇ. 10 ರಿಂದ ಶೇ. 15 ರವರೆಗೆ

ಈ) ಶೇ. 15 ರಿಂದ ಶೇ. 20 ರವರೆಗೆ

ಉ) ಶೇ. 20 ಕ್ಕಿಂತ ಜಾಸ್ತಿ

3) ಒಟ್ಟು ಉತ್ಪಾದನಾ ವೆಚ್ಚದಲ್ಲಿ ರಸಗೊಬ್ಬರಗಳ ಶೇಕಡವಾರು

ಅ) ಶೇ. 10 ರಿಂದ ಶೇ. 15

ಆ) ಶೇ 15 ರಿಂದ ಶೇ. 20

ಇ) ಶೇ. 20 ರಿಂದ ಶೇ. 25

ಈ) ಶೇ. 25 ರಿಂದ ಶೇ. 30

ಉ) ಶೇ. 30 ಕ್ಕಿಂತ ಜಾಸ್ತಿ

ಈ ಸೂಚಿಗಳು ರೈತರು ರಸಗೊಬ್ಬರಗಳನ್ನು ಬಳಕೆ ಮಾಡುವಲ್ಲಿರುವ ವ್ಯತ್ಯಾಸವನ್ನು ತಿಳಿಸಿಕೊಡುವಲ್ಲಿ ಉಪಯೋಗಿಸಲಾಗಿದೆ. ಯಾಕೆಂದರೆ ರಸಗೊಬ್ಬರಗಳ ಬಳಕೆಯಿಂದ ಉತ್ಪಾದನೆ ಹೆಚ್ಚಾದರೆ, ಆ ಉತ್ಪನ್ನಕ್ಕೆ ಒಳ್ಳೆ ಮಾರುಕಟ್ಟೆ ಸಿಕ್ಕಿದರೆ, ರೈತರು ಉತ್ಪನ್ನದ ಬೆಲೆಯನ್ನು ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳಿಗೆ ಬಳಸುತ್ತಾರೆ ಎಂದು (ಜಲನ್) ಹೇಳುತ್ತಾರೆ. ಆದ್ದರಿಂದ ಈ ಸೂಚಿಯನ್ನು ಬಳಸಲಾಯಿತು.

ಹಾಗೆಯೇ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಬೀಜ, ಯಂತ್ರೋಪಕರಣಗಳು, ಔಷಧಿಗಳಿಗಿಂತ ರಸಗೊಬ್ಬರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತದೆ. ಇದಕ್ಕೆ ಈ ಸೂಚಿಯನ್ನು ಬಳಸಲಾಯಿತು. ಈ ಮೇಲಿನ ಸೂಚಿಗಳನ್ನು ಪ್ರಾಥಮಿಕ ಸಮೀಕ್ಷೆಯ ಮೂಲಕ ಪರಿಶೀಲಿಸಲಾಯಿತು.

4. ನಾಲ್ಕನೆ ಉದ್ದೇಶವಾದ ರಸಗೊಬ್ಬರ ಮಾರುಕಟ್ಟೆಯ ಶಕ್ತಿಗಳನ್ನು ಅನುಷಂಗಿಕ ಮಾಹಿತಿ ಮೂಲಕ (ರಾಷ್ಟ್ರ, ರಾಜ್ಯ, ಜಿಲ್ಲಾ ಮಟ್ಟದ ಬೇಡಿಕೆ ಪೂರೈಕೆ) ನ್ನು ಪರಿಶೀಲಿಸುವುದು. ಇದನ್ನು ಫರ್ಟಿಲೈಸರ್ಸ್ ಸ್ಟ್ಯಾಟಿಸ್ಟಿಕ್ಸ್, ಸ್ವಾಮಿ ಪುಸ್ತಕ, ವರದಿಗಳ ಮೂಲಕ ಸಂಗ್ರಹಿಸಲಾಗಿದೆ. ಇಲ್ಲಿ ರಾಷ್ಟ್ರ ರಾಜ್ಯ ಜಿಲ್ಲಾ ಮಟ್ಟದ ರಸಗೊಬ್ಬರಗಳ ಬೇಡಿಕೆ ಪೂರೈಕೆಯನ್ನು ಅಧ್ಯಯನಿಸಲಾಗಿದೆ.

5. ಹಿಡುವಳಿಗಳ ಗಾತ್ರಕ್ಕನ್ನುಗುಣವಾಗಿ ಹೇಗೆ ರಸಗೊಬ್ಬರ ಗಳು ಬಳಕೆಯಾಗುತ್ತಿವೆ ಎಂಬುದನ್ನು ಅನುಷಂಗಿಕ ಅಂಕಿ ಅಂಶಗಳನ್ನು ಉಪಯೋಗಿಸಿ ಅಧ್ಯಯನಿಸಲಾಗಿದೆ.

6. ರಸಗೊಬ್ಬರಗಳ ಬೆಲೆ ನಿಗದಿ ಹಾಗೂ ಸಹಾಯಧನದ ಬಗ್ಗೆ ಅಧ್ಯಯನಿಸಲಾಗಿದೆ ಇದಕ್ಕೆ ಫರ್ಟಿಲೈಸರ್ಸ್ ಸ್ಟ್ಯಾಟಿಸ್ಟಿಕ್ಸ್ , ಬೈಜಾಲಾಲ್, ಡಾ. ಎನ್.ಎಸ್. ಫರ್ಟಿಲೈಜರ್ಸ್ ಪ್ರೆಸ್ ಕಮಿಟಿಯ ವರದಿಗಳು ವಿಠಲ್ ಎನ್. ಮುಂತಾದವುಗಳ ಮೂಲಕ ಅಧ್ಯಯನಿಸಲಾಗಿದೆ.

7. ರಸಗೊಬ್ಬರ ಮಾರುಕಟ್ಟೆಯ ವಿತರಣಾ ವಾಹಿನಿ ಹಾಗೂ ಅಂಚು ಗಳಿಕೆಯನ್ನು ಅನುಷಂಗಿಕ ಸಾಹಿತ್ಯದ ಮೂಲಕ ಅಧ್ಯಯನಿಸಲಾಗಿದೆ. ಫರ್ಟಿಲೈಸರ್ ಸ್ಟ್ಯಾಟಿಸ್ಟಿಕ್ ವೈರಮನ್ ಸಿ.ಆರ್., ಜಯಕರ ಕೆ.ಪಿ. ಮುಂತಾದವರ ಪುಸ್ತಕಗಳನ್ನು ಅಧ್ಯಯನಿಸಿ ಈ ಅಧ್ಯಾಯವನ್ನು ಬರೆಯಲಾಗಿದೆ.

8. ರಸಗೊಬ್ಬರ ಸಾಗಾಣಿಕೆ ನೀತಿಯನ್ನು ಇಲ್ಲಿ ಅಧ್ಯಯನಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಫರ್ಟಿಲೈಸರ್ಸ್ ಸ್ಟ್ಯಾಟಿಸ್ಟಿಕ್ ಎನ್.ಪಿ. ಫರ್ಟಿಲೈಸರ್ ಮಾರ್ಕೆಟಿಂಗ್ ನ್ಯೂಸ್ ಮುಂತಾದ ವೃತ್ತಿ ಪರ ಪತ್ರಿಕೆಗಳ ಮೂಲಕ ಕಲೆ ಹಾಕಿ ಅಧ್ಯಯನಿಸಲಾಗಿದೆ.

ಇಷ್ಟು ಅಧ್ಯಯನಕ್ಕೆ ಬಳಸಿಕೊಳ್ಳಲಾದ ಸೂಚಿಗಳು. ಈ ಸೂಚಿಗಳ ಅಧ್ಯಯನವನ್ನು ಪ್ರಾಥಮಿಕ ಹಾಗೂ ಅನುಷಂಗಿಕ ಸಮೀಕ್ಷೆಯ ಮೂಲಕ ನಡೆಸಲಾಗಿದೆ.

ಅಧ್ಯಾಯಗಳ ಸಾರಾಂಶ

ಅಧ್ಯಾಯ-1 : ಅಧ್ಯಾಯ ಒಂದರಲ್ಲಿ ಕೃಷಿ ಅಭಿವೃದ್ಧಿಯ ತತ್ವಗಳನ್ನು ಚರ್ಚಿಸಲಾಗಿದೆ. ಮಿಲ್ಲರ್, ಶ್ಲುಲ್ಸ್, ಫೈ-ರಾನಿಸ್, ವಿಲಿಯಂ ನಿಕೋಲೋಸ್ ಮುಂತಾದವರು ಹೇಳಿರುವ ಅಭಿವೃದ್ಧಿಯ ತತ್ವಗಳನ್ನು ಚರ್ಚಿಸಲಾಗಿದೆ, ಇದರ ಜೊತೆಗೆ ರಸಗೊಬ್ಬರಗಳ ಮಾರುಕಟ್ಟೆಯ ಸಂಬಂಧಿತದ ಅಧ್ಯಯನಗಳನ್ನು ಕೊಡಲಾಗಿದೆ. ರಸಗೊಬ್ಬರಗಳ ಬೇಡಿಕೆ ಒಂದು ಸಮಗ್ರ ಅಧ್ಯಯನ ಎಂಬ ಪ್ರಬಂಧದಲ್ಲಿ ರಸಗೊಬ್ಬರಗಳ ಬೇಡಿಕೆ ಅವಲಂಬಿತ ಬೇಡಿಕೆಯಾಗಿದೆ ಎಂಬುದನ್ನು ಇಲ್ಲಿನ ಅಧ್ಯಯನಕಾರರು ಹೇಳುತ್ತಾರೆ. ಆದ್ದರಿಂದ ಅಧಿಕ ಇಳುವರಿ ಬೀಜಗಳು, ನೀರಾವರಿ ಇತ್ಯಾದಿ ಸಂಪನ್ಮೂಲಗಳನ್ನು ಬಳಸಿದರೆ ರಸಗೊಬ್ಬರಗಳ ಬೇಡಿಕೆ ಏರುತ್ತದೆ ಎಂದರ್ಥ. ಈ ಅಧ್ಯಯನಕಾರರ ವಾದವನ್ನು ಎರಡನೇ ಅಧ್ಯಾಯನದಲ್ಲಿ ಕೃಷಿ ಸಂಪನ್ಮೂಲಗಳ ಬೆಳವಣಿಗೆ ಮತ್ತು ಇದು ಬೆಳೆಗಳ ಉತ್ಪಾದಕತೆಯ ಮೇಲೆ ಬೀರುವ ಪರಿಣಾಮಗಳನ್ನು ಚರ್ಚಿಸಲಾಗಿದೆ. ಇಲ್ಲಿ ಉತ್ಪಾದನೆಯ ಸ್ಥಿತಿ ಸ್ಥಾಪಕತ್ವವನ್ನು ಬಳಸಲಾಗಿದೆ. ಇದು ರಸಗೊಬ್ಬರ ಬಳಕೆಯ ಉತ್ಪಾದನೆ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎಂಬುದನ್ನು ಹೇಳುತ್ತದೆ. ಮತ್ತೊಂದು ಅಧ್ಯಯನವನ್ನು ಇಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನ ಕೃಷಿ ಉತ್ಪಾದಕತೆ ಮತ್ತು ರಸಗೊಬ್ಬರಗಳ ಬೇಡಿಕೆ ಒಂದು ಆರ್ಥಿಕ ಪ್ರಮಾಣ ವಿಶ್ಲೇಷಣೆ ಎಂಬುದಾಗಿದೆ. ರಸಗೊಬ್ಬರಗಳ ಬೆಲೆ ಮತ್ತು ರಸಗೊಬ್ಬರಗಳ ಬಳಕೆ ನಕಾರಾತ್ಮಕ ಸಂಬಂಧ ಹೊಂದಿದೆ ಎಂಬುದಾಗಿದೆ. ಮತ್ತೊಂದು ಅಧ್ಯಯನದಲ್ಲಿ ಕೃಷಿ ಸಂಪನ್ಮೂಲಗಳ ಸಹಾಯ ಧನದಲ್ಲಿ ಕೃಷಿ ಸಂಪನ್ಮೂಲಗಳ ಸಹಾಯಧನದಿಂದಾಗಿ ಆಯವ್ಯಯದ ವಿತ್ತೀಯ ಕೊರತೆಯಲ್ಲಿ ಶೇ. 30 ರಷ್ಟು ಎಂಬುದು ಅಧ್ಯಯನಕಾರರ ಹೇಳಿಕೆ. ಹೀಗೆ ಕೃಷಿ ಸಂಪನ್ಮೂಲ ಮಾರುಕಟ್ಟೆಗೆ ಸಂಬಂಧಿಸಿದ 13 ಅಧ್ಯಯನಗಳನ್ನು ಇದು ಒಳಗೊಂಡಿದೆ.

ಅಧ್ಯಾಯ-2 : ಗ್ರಾಮಗಳ ಅಧ್ಯಯನ ಅಧ್ಯಾಯದಲ್ಲಿ ಗ್ರಾಮಗಳನ್ನು ಅಧ್ಯಯನಿಸಲಾಗಿದೆ ಮತ್ತು ಫಲಿತಗಳನ್ನು ವಿವರಿಸಲಾಗಿದೆ. ಕೋಲಾರ ಜಿಲ್ಲೆಯ ಎರಡು ಗ್ರಾಮಗಳನ್ನು ಬೆಂಗಳೂರು ಜಿಲ್ಲೆಯ ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನಿಸಲಾಗಿದೆ, ಕೋಲಾರ ಜಿಲ್ಲೆಯ ಎರಡು ಗ್ರಾಮಗಳು ಮಾರ್ಜೇನಹಳ್ಳಿ ಮತ್ತು ಅರಳ್ಳಿ ಗ್ರಾಮಗಳು ಮಾರ್ಜೇನಹಳ್ಳಿ ಹಿಂದುಳಿದ ಗ್ರಾಮವಾದರೆ ಅರಳ್ಳಿ ಮುಂದುವರಿದ ಗ್ರಾಮ. ಈ ಗ್ರಾಮ ಒಟ್ಟು ಕುಟುಂಬಗಳ ಜನಸಂಖ್ಯೆ ಜಾತಿವಾರು, ಜನಸಂಖ್ಯೆ ಉದ್ಯೋಗದ ಸ್ವರೂಪ, ಜಾತಿ ಮತ್ತು ಭೂಮಿ ಅಕ್ಷರಸ್ಥರು ಮತ್ತು ನಿರಕ್ಷರಸ್ಥರ ಸಂಖ್ಯೆ ಸಹಕಾರಿ ಸಂಘಗಳು ಹಾಲು ಉತ್ಪಾದಕರ ಸಂಘಗಳು ರಸಗೊಬ್ಬರ ಮಾರುಕಟ್ಟೆ ರಸಗೊಬ್ಬರಗಳ ಬಳಕೆ, ರಸಗೊಬ್ಬರಗಳು ಕೊಳ್ಳುವ ಮೂಲಗಳು, ರೈತರು ರಸಗೊಬ್ಬರಗಳನ್ನು ಉತ್ಪನ್ನದ ಬೆಲೆಯಲ್ಲಿ ಎಷ್ಟು ವೆಚ್ಚಮಾಡುತ್ತಾರೆ ಉತ್ಪಾದನಾ ವೆಚ್ಚದಲ್ಲಿ ಎಷ್ಟು ಮಾಡುತ್ತಾರೆ, ಚಿಲ್ಲರೆ ರಸಗೊಬ್ಬರಗಳ ಮಾರಾಟಗಾರರ ಅಧ್ಯಯನ ಮುಂತಾದವುಗಳನ್ನು

ನೀಡಲಾಗಿದೆ.

ಅಧ್ಯಯನ-3 : ರಸಗೊಬ್ಬರಗಳ ಮಾರುಕಟ್ಟೆಯ ಶಕ್ತಿಗಳು (ಬೇಡಿಕೆ ಮತ್ತು ಪೂರೈಕೆ ರಾಷ್ಟ್ರ ಮತ್ತು ಜಿಲ್ಲಾವಾರು) ಅಧ್ಯಾಯನದಲ್ಲಿ, ಭಾರತದಲ್ಲಿ ರಸಗೊಬ್ಬರ ಕಾರ್ಖಾನೆಗಳ ಆರಂಭ, ವಿವಿಧ ರೀತಿ ಅಂದರೆ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳ ಉತ್ಪಾದನೆ ಅಂದರೆ ವಲಯವಾರು ರಚನೆಗಳನ್ನು ನೀಡಲಾಗಿದೆ, ಹಾಗೆಯೇ ರಸಗೊಬ್ಬರಗಳ ಕಾರ್ಖಾನೆಗಳಲ್ಲಿ ತಂತ್ರಜ್ಞಾನ ಸುಧಾರಣೆ, ರಸಗೊಬ್ಬರ ಕಾರ್ಖಾನೆಗಳ ಉತ್ಪಾದನ ಸಾಮರ್ಥ್ಯ ಬಳಕೆ ರಾಜ್ಯವಾರು ರಸಗೊಬ್ಬರಗಳ ಬಳಕೆ ಜಿಲ್ಲಾವಾರು ರಸಗೊಬ್ಬರಗಳ ಬಳಕೆ ಹಾಗೂ ಪೂರೈಕೆಯನ್ನು ನೀಡಲಾಗಿದೆ.

ಅಧ್ಯಾಯ-4 : ಹಿಡುವಳಿಗಳ ಗಾತ್ರಕ್ಕನುಗುಣವಾಗಿ ರಸಗೊಬ್ಬರಗಳ ಬಳಕೆ ಅಧ್ಯಯನದಲ್ಲಿ ಹಿಡುವಳಿಗಳ ಗಾತ್ರದ ವ್ಯಾಖ್ಯಾನ ಇದರಲ್ಲಿ ಅತಿ ಸಣ್ಣ ಹಿಡುವಳಿದಾರರು ಸಣ್ಣ ಹಿಡುವಳಿದಾರರು ಅರೆ ಮಧ್ಯಮ ಹಿಡುವಳಿದಾರರು, ಮಧ್ಯಮ ಹಿಡುವಳಿದಾರರು, ದೊಡ್ಡ ಹಿಡುವಳಿದಾರರು ಎಂದು ನಾಲ್ಕು ವಿಭಾಗಗಳಾಗಿ ವಿಭಜಿಸಲಾಗಿದೆ. ಅತಿಸಣ್ಣ , ಸಣ್ಣ ಅತಿ ಮದ್ಯಮ, ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರು ವ್ಯವಸಾಯ ಮಾಡುತ್ತಿರುವ ಭೂಮಿ ಇದರಲ್ಲಿ ಒಣಬೇಸಾಯವೆಷ್ಟು ಮತ್ತು ನೀರಾವರಿ ಭೂಮಿಯೇಷ್ಟು ಎಂಬುದನ್ನು ನೀಡಲಾಗಿದೆ. ಇವರ ಜೊತೆಗೆ ವಿವಿಧ ವರ್ಗಗಳ ರೈತರು, ವಿವಿಧ ಬೆಳೆಗಳಲ್ಲಿ ಬಳಸುತ್ತಿರುವ ರಸಗೊಬ್ಬರಗಳ ಪ್ರಮಾಣವನ್ನು ನೀಡಲಾಗಿದೆ. ಇದು ರಸಗೊಬ್ಬರಗಳ ಮಾರುಕಟ್ಟೆಯನ್ನು ಅರ್ಥೈಸುವಲ್ಲಿ ಮುಖ್ಯ ಅಂಶವಾಗಿದೆ.

ಅಧ್ಯಾಯ-5 : ರಸಗೊಬ್ಬರ ಬೆಲೆ ಮತ್ತು ಸಹಾಯಧನ ಇಲ್ಲಿ ಕೃಷಿ ಉತ್ಪನ್ನಗಳಿಗೆ ಸಹಾಯಧನ ನೀಡಬೇಕೆ ಅಥರಾ ಕೃಷಿ ಸಂಪನ್ಮೂಲಗಳಿಗೆ ಅಂದರೆ ರಸಗೊಬ್ಬರಗಳಿಗೆ ಸಹಾಯಧನ ನೀಡಬೇಕೆ ಅಥವಾ ಬೇಡವೇ ಎಂಬ ಚರ್ಚೆಯಿದೆ. ಇದರ ಜೊತೆಗೆ ರಸಗೊಬ್ಬರಗಳ ಉತ್ಪಾದನಾ ವಿಧಾನದಲ್ಲಿ ಸುಧಾರಣೆ ಇದ್ದು ರಸಗೊಬ್ಬರಗಳ ಬೆಲೆಯ ಮೇಲೆ ಪರಿಣಾಮ ಬೀರುವುದನ್ನು ಚರ್ಚಿಸಲಾಗಿದೆ. ರಸಗೊಬ್ಬರಗಳ ಬೆಲೆ ನಿಗದಿ, ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರಸರ್ಕಾರ ರಸಗೊಬ್ಬರಗಳ ಸಹಾಯಧನವನ್ನು ವೈಜ್ಞಾನಿಕವಾಗಿ ರೂಪಿಸಿ ಪ್ರಪ್ರಥಮವಾಗಿ ಮರಾಥೆ ಆಯೋಗ ನೇಮಿಸಿದ್ದು, ಈ ಆಯೋಗದ ಅಧ್ಯಯನ ಮತ್ತು ಶಿಫಾರಸ್ಸುಗಳು, ಧಾರಣದ ಬೆಲೆ (Retention Price) ನೀತಿಯ ಬಗ್ಗೆ ಚರ್ಚಿಸಲಾಗಿದೆ. ಒಟ್ಟಾರೆ ರಸಗೊಬ್ಬರಗಳ ಮಾರುಕಟ್ಟೆಗೆ ಅತ್ಯಂತ ಸಂಬಂಧ ಹೊಂದಿರುವ ಸಹಾಯಧನದ ನೀತಿ ರಸಗೊಬ್ಬರಗಳಿಗೆ ಬೆಲೆ ನಿಗದಿ ನೀತಿಯನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ.

ಅಧ್ಯಾಯ-6 : ರಸಗೊಬ್ಬರಗಳ ಸಾಗಾಣಿಕೆ ನೀತಿ ಎಂಬ ಅಧ್ಯಾಯದಲ್ಲಿ ಕಾರ್ಖಾನೆಗಳಿಂದ ರೈತರು ಹಂತಕ್ಕೆ ರಸಗೊಬ್ಬರಗಳನ್ನು ಹೇಗೆ ಸಾಗಾಣಿಕೆ ಮಾಡುತ್ತಾರೆ. ರಸಗೊಬ್ಬರಗಳಿಗೆ ವರ್ಷ ಪೂರ್ತಿ ಬೇಡಿಕೆ

ಇಲ್ಲದಿರುವುದರಿಂದ ನಿರ್ಧಿಷ್ಟ ಋತುಮಾನದಲ್ಲಿ ಹೆಚ್ಚಿನ ಬೇಡಿಕೆ ಬಂದಾಗ ಅದನ್ನು ಪೂರೈಸಲು ರಸಗೊಬ್ಬರಗಳ ಸಾಗಾಣಿಕೆ ನೀತಿ ಅತ್ಯಂತ ಮುಖ್ಯವಾದದ್ದು. ಬಂದರುಗಳು ಪಕ್ಕದಲ್ಲಿ ರಸಗೊಬ್ಬರಗಳ ಕಾರ್ಖಾನೆಗಳು ಸ್ಥಾಪಿಸುವುದರಿಂದ ಸಾಗಾಣಿಕೆಗೆ ಹೆಚ್ಚು ಅನುಕೂಲಕರ ಎಂಬುದು ತಜ್ಞರ ವಾದ, ಈ ವಿಷಯವನ್ನು ಇಲ್ಲಿ ಚರ್ಚಿಸಲಾಗಿದೆ. ಶೇ.70 ರಿಂದ 80 ರಷ್ಟು ರಸಗೊಬ್ಬರಗಳ ಸಾಗಾಣಿಕೆ ರೆಲ್ವೆ ಮೂಲಕ ಸಾಗಾಣಿಕೆ ಮಾಡಲಾಗುತ್ತದೆ. ರಸ್ತೆಗಳ ಮೂಲಕ ಸಾಗಾಣಿಕೆ ಇನ್ನೂ ಜನಪ್ರಿಯವಾಗಿಲ್ಲ. ಇಲ್ಲಿ ಸಾಗಾಣಿಕೆಯ ಮಿಶ್ರಣವನ್ನು ಸಹ ನೀಡಲಾಗಿದೆ. ರಸಗೊಬ್ಬರಗಳ ಮಾರುಕಟ್ಟೆಯ ವೆಚ್ಚದಲ್ಲಿ ಸಾಗಾಣಿಕೆ ವೆಚ್ಚ ಎಷ್ಟು ಎಂಬುದನ್ನು ಸಹ ಇಲ್ಲಿ ನೀಡಲಾಗಿದೆ. ಯಾಕೆಂದರೆ ಸಾಗಾಣಿಕೆ ವೆಚ್ಚಗಳ ತೆಗೆದುಕೊಂಡರೆ, ಉತ್ಪಾದನಾ ವೆಚ್ಚವನ್ನು ಬಿಟ್ಟು ಮಾರುಕಟ್ಟೆಯ ವೆಚ್ಚದಲ್ಲಿ ಸಾಗಾಣಿಕೆ ವೆಚ್ಚವನ್ನು ಗ್ರಹಿಸುವುದು ಸಹಾಯಧನ ನಿಗಧಿಗೆ ಅನುಕೂಲಕರ.

ಅಧ್ಯಾಯ-7 : ಈ ಅಧ್ಯಾಯದಲ್ಲಿ ರಸಗೊಬ್ಬರ ಮಾರುಕಟ್ಟೆಯ ವಿತರಣವಾಹನಿಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಯಾವುದೇ ಉತ್ಪನ್ನವನ್ನು ನಾವು ಮಾರುಕಟ್ಟೆ ಮಾಡಬೇಕಾದರೆ ಮಾರುಕಟ್ಟೆಯ ವಿತರಣಾ ವಾಹಿನಿಗಳು ಅತಿಮುಖ್ಯ (ಮಾರ್ಕೆಟಿಂಗ್ ಚಾನೆಲ್ಸ್) ಆದ್ದರಿಂದ ರಸಗೊಬ್ಬರಗಳ ಮಾರುಕಟ್ಟೆಯ ಮಾರುಕಟ್ಟೆ ವಿತರಣಾ ವಾಹಿನಿಗಳನ್ನು ಅಧ್ಯಯಿನಸಲಾಗಿದೆ. ಇಲ್ಲಿ ಮಾರುಕಟ್ಟೆ ವಿತರಣ ವಾಹಿನಿಗಳ ಅರ್ಥ. ವಿತರಣಾ ವಾಹಿನಿಗಳಲ್ಲಿರುವ ವಿವಿಧ ಬಗೆಗಳಾದಂತಹ ಸಹಕಾರ ವಿತರಣಾ ವಾಹಿನಿ ಹಾಗೂ ಖಾಸಗಿ ವಿತರಣಾ ವಾಹನಿಗಳು ಇವುಗಳಲ್ಲೇ ವಿವಿಧ ಸ್ತರಗಳ ಮೂಲಕ ರಸಗೊಬ್ಬರಗಳ ಚಲಿಸಿ ರೈತರಿಗೆ ತಲುಪುವುದು ಹೇಗೆ ಎಂಬುದನ್ನು ಚರ್ಚಿಸಲಾಗಿದೆ. ಮಾರುಕಟ್ಟೆಯ ಪಾಲು ಪಡೆಯುವಿಕೆ (ಮಾರ್ಕೆಟಿಂಗ್ ಮಾರ್ಜಿನ್ಸ್)ನ್ನು ಸಹಾ ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-8 : ಈ ಅಧ್ಯಾಯದಲ್ಲಿ ಜೀವನಾಶ್ಯಕ ಕೃಷಿಯಿಂದ ಹೇಗೆ ಆಧುನೀಕರಣದ ಕಡೆಗೆ ನಡೆಯಿತು ಎಂಬುದನ್ನು ವಿವರಿಸಲಾಗಿದೆ. ಕೃಷಿ ಆಧುನೀಕರಣಗೊಳ್ಳುವಲ್ಲಿ ನೀರಾವರಿ, ಯಂತ್ರೀಕರಣ ರಸಗೊಬ್ಬರಗಳ ಉಪಯೋಗ ಮುಂತಾದವುಗಳನ್ನು ವಿವರಿಸಲಾಗಿದೆ.

ಅಧ್ಯಾಯ-9 : ಈ ಅಧ್ಯಾಯದಲ್ಲಿ ಪರಿಸರದ ಮೇಲೆ ರಸಗೊಬ್ಬರಗಳು ಬೀರುವ ದುಷ್ಪರಿಣಾಮಗಳನ್ನು ವಿವರಿಸಲಾಗಿದೆ. ಹೇಗೆ ಕೃಷಿ ರಾಸಾಯನಿಕಗಳಾದ ರಸಗೊಬ್ಬರ, ಕೀಟನಾಶಕ, ಮಣ್ಣು, ಜಲ ಹಾಗೂ ವಾಯುವನ್ನು ಮಲಿನಗೊಳಿಸಿ, ಜನರಲ್ಲಿ ಅನೇಕ ರೋಗಗಳಿಗೆ ಕಾರಣವಾಗುತ್ತವೆ ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ-1
ಕೃಷಿ ಅಭಿವೃದ್ಧಿ ಮತ್ತು ರಸಗೊಬ್ಬರ ಮಾರುಕಟ್ಟೆಯ ಸಂಬಂಧಿತ ಅಧ್ಯಯನ

ಅಭಿವೃದ್ಧಿ ಅಧ್ಯಯನ:

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಗಳಿಂದಲೂ ಕೃಷಿ ವಲಯಕ್ಕೆ ಪ್ರಾಮುಖ್ಯತೆಯನ್ನು ಸರಕಾರ ನೀಡುತ್ತಲೇ ಬಂದಿದೆ. ಕೃಷಿ ವಲಯ ಅಭಿವೃದ್ಧಿಯಾಗದೆ ದೇಶದ ಇಡೀ ಆರ್ಥಿಕ ವ್ಯವಸ್ಥೆ ಅಭಿವೃದ್ಧಿಯಾಗುವುದಿಲ್ಲ. ಕೈಗಾರಿಕಾ ಅಭಿವೃದ್ಧಿಯ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕ ಎಂಬ ಕೈಗಾರಿಕಾ ಅಭಿವೃದ್ಧಿಯ ಮೂಲಭೂತವಾದಿಗಳು ಸಹ ಈ ನಿಲುವನ್ನು ಒಪ್ಪುತ್ತಾರೆ. ಯಾಕೆಂದರೆ ಕೃಷಿ ವಲಯದಲ್ಲಿ ಶೇ. 70 ಕ್ಕಿಂತ ಹೆಚ್ಚು ರಾಷ್ಟ್ರದ ಜನಸಂಖ್ಯೆ ಅವಲಂಬಿಸಿದೆ. ನಮ್ಮ ಜನಸಂಖ್ಯೆಪ್ರತಿ ವರ್ಷ ಶೇ. 2.5 ರಷ್ಟು ಬೆಳವಣಿಗೆಯಾಗುತ್ತಿದೆ. ಇದಕ್ಕನುಗುಣವಾಗಿ ಕೃಷಿ ಉತ್ಪಾದಕತೆಯೂ ಸಹ ಶೇ. 2.5 ರಷ್ಟು ಬೆಳವಣಿಗೆಯಾಗಬೇಕು ಹಾಗೆ ಬೆಳವಣಿಗೆಯಾಗದಿದ್ದರೆ ಇಡೀ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯುಂಟಾಗುತ್ತದೆ. ಹೀಗೆ ಹಿನ್ನಡೆಯಾದರೆ ಆರ್ಥಿಕ ವ್ಯವಸ್ಥೆ ಅನಭಿವೃದ್ಧಿಯ ಕಡೆ ನಡೆಯುತ್ತದೆ. ಆದ್ದರಿಂದ ಕೃಷಿ ಅಭಿವೃದ್ಧಿಗೆ ಒತ್ತು ಕೊಡಬೇಕು.

ಕೃಷಿಯ ಅಭಿವೃದ್ಧಿ ತತ್ವಗಳು - ಭಾರತಕ್ಕೆ ಸಮಂಜಸವೇ?

Agricultural Development Theories - Are they Relevant to India?

ಭಾರತದಲ್ಲಿ ಬಹುತೇಕವಾಗಿ ಕೃಷಿ ಜೀವನಾವಶ್ಯಕ ಉದ್ಯೋಗವಾಗಿದೆ (Subsistence). ಹೀಗೆ ಜೀವನಾವಶ್ಯಕ ಉದ್ಯೋಗವಾಗಿರುವುದರಿಂದ ಕೃಷಿ ವಲಯ ಸರಕಾರ ನೀಡುತ್ತಿರುವ ಆರ್ಥಿಕ ರಿಯಾಯಿತಿಗಳಿಗೆ ಸ್ಪಂದಿಸುತ್ತಿಲ್ಲ. ಆದರೆ ಕೃಷಿಯನ್ನು ಒಂದು ವ್ಯಾಪಾರ ಎಂದು ಪರಿಗಣಿಸುವವರು ಇದಕ್ಕೆ ಸ್ಪಂದಿಸುತ್ತಿದ್ದಾರೆ. ಆದರೆ ಇವರ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಸರಕಾರ ಈ ನಿಟ್ಟಿನಲ್ಲಿ ಇಡೀ ಕೃಷಿ ವ್ಯವಸ್ಥೆಯನ್ನೇ ಪುನರ್ ರೂಪಿಸಬೇಕು. ಆದರೆ ಇಡೀ ಕೃಷಿ ವ್ಯವಸ್ಥೆಯನ್ನು ಪುನರ್ ರೂಪಿಸಲು ಅನುಕೂಲಕರವಾದ ವಾತಾವರಣವನ್ನು ರೂಪಿಸಬೇಕಾಗಿದೆ.

ಮಿಲ್ಲರ್ ಪ್ರಕಾರ ರೈತರು ಸಾಂಪ್ರದಾಯಿಕವಾಗಿದ್ದರೂ, ಅವರು ತಮ್ಮ ಸಂಪನ್ಮೂಲಗಳನ್ನು ಅತ್ಯಂತ ಸಾಮರ್ಥ್ಯದಿಂದ ಹಂಚಬಲ್ಲರು. ಆದರೆ ನಮ್ಮ ಸರಕಾರಗಳು ತಮ್ಮ ಸಂಪನ್ಮೂಲಗಳ್ನನು ಅತ್ಯಂತ ಸಾಮರ್ಥ್ಯದಿಂದ ಹಂಚಲಾರದೆ, ರೈತರಿಗೆ ಪ್ರತಿಕೂಲ ವಾತಾವರಣವನ್ನು ಸೃಷ್ಟಿಸಿವೆ, ಈ ಪ್ರತಿಕೂಲ ವಾತಾವರಣಕ್ಕೆ ರೈತರು ಕಾರಣರಲ್ಲ; ಸರಕಾರ ಕಾರಣ ಎಂದರೆ ತಪ್ಪಾಗಲಾರದು. ಇದನ್ನು ಶುಲ್ಟ್ಸ್ ಸಹ

ವಿವರಿಸುತ್ತಾನೆ. ರೈತರು ಬಡವರು ಮತ್ತು ಸಮರ್ಥರು ಎಂದು ಸಹ ವಿವರಿಸುತ್ತಾನೆ. ರೈತರು ತಮ್ಮಲ್ಲಿರುವ ಸಂಪನ್ಮೂಲಗಳನ್ನು ಹಂಚುವಲ್ಲಿ ಹಿಂದೆ ಬಿದ್ದಿಲ್ಲ ಆದರೆ ಸರಕಾರ ತನ್ನ ಸಂಪನ್ಮೂಲವನ್ನು ಹಂಚುವಲ್ಲಿ ಅವೈಜ್ಞಾನಿಕ ನೀತಿ ಹೊಂದಿದೆ. ಎಂಬುದೆ ಇವನ ವಾದ.

ಪಿ.ಎಮ್. ರೋಸನ್ ಸ್ಟಿನ್ ರೊಡನ್ ಪ್ರಕಾರ ಭಾರತದ ಕೃಷಿಯಲ್ಲಿ ಭೂಮಿ ಮತ್ತು ಕಾರ್ಮಿಕರ ಉತ್ಪಾದಕತೆ ಕಡಿಮೆ ಇದೆ. ಇದರ ಜೊತೆಗೆ ಕೃಷಿ ವಲಯದಲ್ಲಿ ತೊಡಗಿಸಿಕೊಂಡಿರುವ ಕಾಲು ಭಾಗ ಜನಸಂಖ್ಯೆ ಕೃಷಿ ಉತ್ಪಾದಕತೆಗೆ ಏನು ಕೊಡುಗೆ ನೀಡುತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೃಷಿಯಲ್ಲಿ ಮರೆ ಮಾಚಿದ ಅಥವಾ ಅಪ್ರತ್ಯಕ್ಷ (Disguised unemployment) ನಿರುದ್ಯೋಗವಿದೆ ಎಂಬುದು ಇವರ ವಾದ, ಇವರ ಪ್ರಕಾರ ಕೃಷಿಯಲ್ಲಿ ಅತಿರಿಕ್ತ ಕಾರ್ಮಿಕರಿದ್ದಾರೆ (Surplus Labour). ಅತಿರಿಕ್ತ ಕಾರ್ಮಿಕ ಶಕ್ತಿ ಕೆಲಸ ಮಾಡುತ್ತಿರುವುದರಿಂದ ಕೃಷಿ ವಲಯದಲ್ಲಿ ಭೂಮಿ ಮತ್ತು ಕಾರ್ಮಿಕರ ಉತ್ಪಾದಕತೆ ಕಡಿಮೆ ಇದೆ. ಭೂಮಿ ಉತ್ಪಾದಕವಾಗಬೇಕೆಂದರೆ ಕೃಷಿ ಸಂಪನ್ಮೂಲಗಳಾದಂತ ಅಧಿಕ ಇಳುವರಿ ತಳಿಯ ಬೀಜಗಳನ್ನು ರಸಗೊಬ್ಬರ, ನೀರಾವರಿಯನ್ನು ಬಳಸಬೇಕು. ಆದರೆ ಭಾರತದಲ್ಲಿ ಬಹಳಷ್ಟು ಜನ ರೈತರು, ಸಾಂಪ್ರದಾಯಿಕ ಕೃಷಿಯನ್ನು ಅವಲಂಬಿಸಿರುವುದರಿಂದ ರಸಗೊಬ್ಬರ ಅಧಿಕ ಇಳುವರಿ ತಳಿಗಳು, ನೀರಾವರಿಯನ್ನು ಸರಿಯಾದ ಪ್ರಮಾಣದಲ್ಲಿ ಬಳಸುತ್ತಿಲ್ಲ, ಹೀಗೆ ಬಳಸದೇ ಇರುವುದರಿಂದ ಕೃಷಿಯಲ್ಲಿ ಭೂಮಿ ಮತ್ತು ಕಾರ್ಮಿಕರ ಉತ್ಪಾದಕತೆ ಹೆಚ್ಚಾಗಿಲ್ಲ. ಇಲ್ಲಿ ರೋಸನ್ ಸ್ಟಿವ್ ಮತ್ತು ರೊಡನ್ ಮೇಲೆ ಹೇಳಿದ ಕಾರಣಗಳ ಜೊತೆಗೆ, ಕಾರ್ಮಿಕರ ಉತ್ಪಾದಕತೆ ಕಡಿಮೆ ಇರುವುದು, ಕೃಷಿಯಲ್ಲಿರುವ ಹೆಚ್ಚಳ ಕಾರ್ಮಿಕರನ್ನು ಕೃಷಿಯೇತರ ವಲಯಗಳಿಗೆ ವರ್ಗಾಯಿಸುವದರಲ್ಲಿ ವಿಫಲಗೊಂಡಿರುವುದೇ ಮುಖ್ಯ ಕಾರಣವಾಗುತ್ತದೆ. ಯಾಕೆಂದರೆ ಕೃಷಿಯೇತರ ವಲಯಗಳಾದ ಕೈಗಾರಿಕೆ ಹಾಗೂ ಸೇವಾದಲಯಗಳು ನಗರ ಕೇಂದ್ರಿತವಾಗಿದ್ದು , ಬಂಡವಾಳ ಸಾಂದ್ರ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದರಿಂದ ಕೃಷಿಯಲ್ಲಿ ಅನುತ್ಪಾದಕವಾಗಿರುವ ಹೆಚ್ಚಳ ಕಾರ್ಮಿಕರನ್ನು ತನ್ನ ವಲಯಕ್ಕೆ ಸೆಳೆಯುವಲ್ಲಿ ವಿಫಲವಾಗಿದೆ. ಆದ್ದರಿಂದಲೇ ಈ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಪ್ರತ್ಯಕ್ಷ ನಿರುದ್ಯೋಗವಿರುವುದು ಕಂಡು ಬರುತ್ತದೆ.

ಫೈ (Fie-Ranins) ಮಾದರಿಯ ಅಭಿವೃದ್ಧಿ4 ಎಂದು ಕರೆಯಬಹುದು, ಈತನ ಪ್ರಕಾರ ಕೃಷಿ ವಲಯದಲ್ಲಿ ಕಂಡು ಬರುವ ಹೆಚ್ಚಳ ಕಾರ್ಮಿಕರ ಸಂಖ್ಯೆ , ಕೃಷಿಯಲ್ಲಿ ಉತ್ಪಾದನೆಯಾಗುವ ಹೆಚ್ಚಳ ಉತ್ಪನ್ನವನ್ನು ಉಪಯೋಗಿಸಿ ಅಷ್ಟರ ಮಟ್ಟಿಗೆ ಕೃಷಿ ಉತ್ಪನ್ನದ ಹೆಚ್ಚಳ ಕಡಿತವಾಗುತ್ತದೆ ಎಂಬ ಅಭಿಪ್ರಾಯವನ್ನು ನೀಡುತ್ತಾರೆ.

ಇವರ ಇನ್ನೊಂದು ವಾದವೆಂದರೆ ಗ್ರಾಮೀಣ ಹಾಗೂ ನಗರ ಆರ್ಥಿಕ ವ್ಯವಸ್ಥೆಗೆ ಸಂಪರ್ಕದ ಕೊರತೆಯಿಂದಾಗಿ ಕಾರ್ಮಿಕ ಶಕ್ತಿ ಗ್ರಾಮೀಣ ಆರ್ಥಿಕ ವ್ಯವಸ್ಥೆಯಿಂದ ನಗರ ಆರ್ಥಿಕ ವ್ಯವಸ್ಥೆಯ ಕಡೆಗೆ ಮುಖ ಮಾಡಿ ನಡೆಯುವಲ್ಲಿ ವಿಫಲರಾಗುತ್ತದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಕೌಶಲ್ಯ, ಜ್ಞಾನ, ಗುಣಾತ್ಮಕ ಕಾರ್ಮಿಕರ ಸಂಖ್ಯೆ ಅತಿ ಕಡಿಮೆ ಪ್ರಮಾಣದಲ್ಲಿರುವುದರಿಂದ, ಇಂತಹ ಸಂಪರ್ಕ ಕೊರತೆಯಾಗಬಹುದು ಎಂಬ ಅಭಿಪ್ರಾಯವಿದೆ. ಆದ್ದರಿಂದ ಗ್ರಾಮಗಳಲ್ಲಿ ಕೃಷಿಯೇತರ ಉದ್ಯೋಗ ಒದಗಿಸುವಲ್ಲಿ ಸರಕಾರಗಳು ಮುಂದಾಗಬೇಕೆಂದು ಅಭಿಪ್ರಾಯ ಕೇಳಿ ಬರುತ್ತಿದೆ. ಮಣ್ಣಿನ ಸಂರಕ್ಷಣೆ, ನೀರಾವರಿ ಕಾಲುವೆಗಳ ನಿರ್ಮಾಣ, ಅರಣ್ಯೀಕರಣದ ಯೋಜನೆಗಳು, ಚರಂಡಿ ನಿರ್ಮಾಣ, ರಸ್ತೆ ನಿರ್ಮಾಣ, ಸಂಸ್ಕರಣ ಕೈಗಾರಿಕೆಗಳ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಗ್ರಾಮೀಣ, ವಲಯದಲ್ಲಿ ಕೃಷಿಯೇತರ ಚಟುವಟಿಕೆಗಳ ಮೂಲಕ ಮರೆ ಮಾಚಿದ ಕಾರ್ಮಿಕ ಶಕ್ತಿಗೆ ಉದ್ಯೋಗ ಸೃಷ್ಟಿಸಬಹುದು ಎಂಬ ವಾದವಿದೆ. ಉದ್ಯೋಗಗಳಿಗೆ ಯಾವುದೇ ಕೌಶಲ್ಯ , ಜ್ಞಾನ, ಕಾರ್ಮಿಕರ ಗುಣಾತ್ಮಕತೆಗೆ ಅಂತಹ ಪ್ರಾಮುಖ್ಯತೆಯೇನು ಇರುವುದಿಲ್ಲ. ಆದ್ದರಿಂದ ಗ್ರಾಮ ಮತ್ತು ನಗರ ಆರ್ಥಿಕ ವ್ಯವಸ್ತೆಗಳಿಗೆ ಸಂಪರ್ಕದ ಕೊರತೆ ಇದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿ ಮಾಡಬಹುದು. ಈ ಉದ್ಯೋಗಗಳು ಕೃಷಿ ವಲಯದ ಹೆಚ್ಚಳ ಕಾರ್ಮಿಕ ಶಕ್ತಿಗೆ ಉತ್ಪಾದಕ ಉದ್ಯೋಗ ಒದಗಿಸಿ, ಕಾರ್ಮಿಕರ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಹಾಗೆಯೇ ಕೃಷಿ ವಲಯದ ವಲಯದ ಉತ್ಪಾದಕತೆ ಹೆಚ್ಚಳವನ್ನು ಪೂರಕವಾಗಿರುತ್ತದೆ. ಯಾಕೆಂದರೆ ಕೃಷಿ ವಲಯದ ಹೆಚ್ಚಿನ ಕಾರ್ಮಿಕರು ಕೃಷಿಯೇತರ ವಲಯದ ಇತರ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಅತಿ ಸಣ್ಣ ಹಿಡುವಳಿಗಳು ವಿಪುಲವಾಗಿ ಭಾರತದಲ್ಲಿ ಇರುವುದರಿಂದ, ಭೂಮಿಯಲ್ಲಿ ಉತ್ಪಾದಕತೆ ಕಡಿಮೆ ಇದೆ ಎಂಬ ವಾದವಿದೆ. ಆದರೆ ಸಣ್ಣ ಹಿಡುವಳಿಗಳ ಕೃಷಿ, ಭಾರತದಲ್ಲಿ ಅನಿವಾರ್ಯ. ಏಕೆಂದರೆ ಶೇ. 70 ಕ್ಕಿಂತ ಹೆಚ್ಚು ರೈತರು ಕೃಷಿಯ ಮೇಲೆ ಅವಲಂಬಿತವಾಗಿರುವುದರಿಂದ ಸಣ್ಣ ಹಿಡುವಳಿ ವ್ಯವಸಾಯ ಮಾಡುವ ರೈತರು, ಈ ಹಿಡುವಳಿಗಳ ಮೇಲೆ ತಮ್ಮ ಜೀವನಾಧಾರಕ್ಕೆ ಅವಲಂಬಿತವಾಗಬೇಕಾಗುತ್ತದೆ, ಸಣ್ಣ ಹಿಡುವಳಿಗಳನ್ನು ಆರ್ಥಿಕವಾಗಿ ಸದೃಢ ಹಿಡುವಳಿಗಳಾಗಿ ಸಂಘಟಿಸಲು ಸದ್ಯದ ಸ್ಥಿತಿಯಲ್ಲಿ ಸಾಧ್ಯವಿಲ್ಲ. ಯಾಕೆಂದರೆ ರಷ್ಯಾದಂತ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಅನಾರ್ಥಿಕ ಹಿಡುವಳಿಗಳನ್ನು ಸದೃಢ ಹಿಡುವಳಿಗಳನ್ನಾಗಿ ಸಂಘಟಿಸುವಲ್ಲಿ ಕೃಷಿ ರಾಷ್ಟ್ರೀಕರಣ ಗೊಳಿಸಿದ್ದು ಪ್ರಮುಖ ಅಂಶವಾಗಿತ್ತು. ಭಾರತದಲ್ಲಿ ಕೃಷಿ ಖಾಸಗಿ ವಲಯವಾಗಿದೆ; ಹೀಗೆ ಖಾಸಗಿ ವಲಯವಾಗಿರುವುದರಿಂದ ಸಣ್ಣ ಹಿಡುವಳಿಗಳನ್ನು ಪುನರ್ ಸಂಘಟಿಸುವುದು ವೈಫಲ್ಯದ ಸಾಹಸವಷ್ಟೇ. ಆದ್ದರಿಂದ ಈಗಿರುವ ಹಿಡುವಳಿಗನುಗುಣವಾಗಿ ಹೋಗುವುದೇ ಇದಕ್ಕೆ ಪರಿಹಾರ.

ಆದರೆ ಶುಲ್ಜ್ ಪ್ರಕಾರ ಸಣ್ಣ ಹಿಡುವಳಿಗಳಿಗೆ ಅನುಗಣವಾದಂತಹ ತಂತ್ರಜ್ಞಾನವನ್ನು ವರ್ಗಾಯಿಸಬೇಕು ಹೀಗೆ ವರ್ಗಾಯಿಸುವುದರಿಂದ ಜಪಾನ್, ಡೆನ್‌ಮಾರ್ಕ್‌ನಲ್ಲಿ ಸಣ್ಣ ಕುಟುಂಬ ಹಿಡುವಳಿಗಳು

ಲಾಭದಾಯಕವಾಗಿ ಪರಿಣಮಿಸಿರುವುದು. ಆದರೆ ಭಾರತದಲ್ಲಿ ಸಣ್ಣ ಹಿಡುವಳಿಗಳಿಗೆ ಸೂಕ್ತ ತಂತ್ರಜ್ಞಾನವನ್ನು ವರ್ಗಾಯಿಸುವಲ್ಲಿ ಸರಕಾರ ವೈಫಲ್ಯ ತೋರಿಸಿದೆ, ನಾನು ಅಧ್ಯಯನಿಸಿದ ಹಿಡುವಳಿಗನುಗುಣವಾಗಿ ರಸಗೊಬ್ಬರಗಳ ಬಳಕೆಯಲ್ಲಿ ಸಹ ಸಣ್ಣ ಹಿಡುವಳಿದಾರರು ಅತಿ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸುವವರಾಗಿದ್ದಾರೆ.

ಭಾರತದಲ್ಲಿ ಅತ್ಯಂತ ಜರೂರಾಗಿ ಆಗಬೇಕಾಗಿರುವ ಕೆಲಸವೆಂದರೆ ಭೂಸುಧಾರಣೆಗಳು ಗೇಣಿದಾರರಿಗೆ ಭೂಮಿಯ ಹಕ್ಕನ್ನು ನೀಡುವುದರ ಮೂಲಕ, ಗೇಣಿದಾರರನ್ನು ಸಣ್ಣ ಹಿಡುವಳಿಗಳ ಮಾಲೀಕರನ್ನಾಗಿ, ಮಾಡಬಹುದಾಗಿದೆ. ಭಾರತದಲ್ಲಿ ನಡೆದ ಅಧ್ಯಯನಗಳ ಪ್ರಕಾರ ಸಣ್ಣ ಹಿಡುವಳಿಗಳಲ್ಲಿ ಉತ್ಪಾದಕತೆಯ ಪ್ರಮಾಣದಲ್ಲಿ ಸಾಕಷ್ಟು ಏರಿಕೆ ಕಂಡುಬಂದಿದೆ. ಇದಕ್ಕೆ ಕಾರಣವೆಂದರೆ ಆಧುನಿಕ ತಂತ್ರಜ್ಞಾನ. ಅಳವಡಿಸದಿದ್ದರೂ, ತಮ್ಮಲ್ಲಿರುವ ಕಾರ್ಮಿಕ ಶಕ್ತಿ ಹಾಗೂ ಇನ್ನಿತರ ಸಂಪನ್ಮೂಲಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿರುವುದು ಕಂಡು ಬರುತ್ತದೆಂದು ವಾದ ಮಾಡುವವರು ಇದ್ದಾರೆ. ಇವರು ಉಪಯೋಗಿಸುವ ಬಂಡವಾಳ ಸಾಂದ್ರ ತಂತ್ರಜ್ಞಾನ. ಆದರೆ ದೊಡ್ಡ ಹಿಡುವಳಿ ರೈತರು ಎದುರಿಸುತ್ತಿರುವ ಸಮಸ್ಯೆಯೆಂದರೆ ನಿರ್ವಹಣೆ ಮತ್ತು ಮೇಲ್ವಿಚಾರಣೆ ಸಮಸ್ಯೆಗಳು ಈ ಸಮಸ್ಯೆಗಳು ದೊಡ್ಡ ಹಿಡುವಳಿದಾರರಿಗೆ ಭೂತದಂತೆ ಕಾಡುತ್ತಿದೆ. ಯಾಕೆಂದರೆ ಇವರು ಬಳಸುವ ಕಾರ್ಮಿಕ ಸಾಂದ್ರ ತಂತ್ರಜ್ಞಾನದಿಂದಾಗಿ ಉದ್ಭವಿಸಿರುವ ಸಮಸ್ಯೆ. ಆದ್ದರಿಂದ ಸಣ್ಣ ಹಿಡುವಳಿದಾರರಿಗೆ ತಂತ್ರಜ್ಞಾನ ಒಂದು ಅಡಚಣೆಯಾಗಿದೆ. ಎಂಬುದು ಸರಿಯಲ್ಲ ಎಂಬುದು ಸಿ.ಹೆಚ್. ಹನುಮಂತರಾವ್ ಅವರ ಅಭಿಪ್ರಾಯ[5]. ಆಧುನಿಕ ಸಂಪನ್ಮೂಲಗಳಾದಂತ ರಸಗೊಬ್ಬರ, ಅಧಿಕ ಇಳುವರಿ ತಳಿ ಸಾಲ ಸಣ್ಣ ರೈತರನ್ನು ತಲುಪುವಲ್ಲಿ ಯಾವುದೇ ಸಂಶಯವಿಲ್ಲ ಎಂಬುದೇ ಇವರ ವಾದ, ಸಮಸ್ಯೆಯಿರುವುದು ರೈತರು ಹೂಡಿ ಬಂಡವಾಳದ ಬಗ್ಗೆ ಹೊಸ ತಂತ್ರಜ್ಞಾನವನ್ನು ಅಳವಡಿಸಿರುವುದರಿಂದ ಹೆಚ್ಚಿನ ಬಂಡವಾಳ ಹೂಡಿಕೆ ಅವಶ್ಯಕತೆ ಇದೆ. ಈ ಹೆಚ್ಚಿನ ಬಂಡವಾಳ ರೈತರ ಬಳಿಯಲ್ಲಿ ಇಲ್ಲ. ಇಂತಹ ಸಂದರ್ಭದಲ್ಲಿ ರೈತರಿಗೆ ಸಮಸ್ಯೆಗೆ ಇರುವ ದಾರಿ ಯಾವುದು? ಸಣ್ಣ ರೈತರಲ್ಲಿ ಉಳಿತಾಯವೂ ಇರುವುದಿಲ್ಲ ; ಬಂಡವಾಳ ಹೂಡಿಕೆಯೂ ಇರುವುದಿಲ್ಲ. ಈ ರೀತಿ ಸಂದರ್ಭದಲ್ಲಿ ರೈತರ ಮೂಲಕ ಖಾಸಗಿ ಬಂಡವಾಳವನ್ನು ಹೊಸ ತಂತ್ರಜ್ಞಾನವನ್ನು ಅಳವಡಿಸಲು ಹೆಚ್ಚಿಸಲು ಸಾಧ್ಯವಿಲ್ಲ ಆದ್ದರಿಂದ ಖಾಸಗಿ ಬಂಡವಾಳಕ್ಕೆ ಹೊರತಾಗಿ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರಕಾರ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸಬೇಕಾಗಿದೆ. ಇದು ನೀರಾವರಿ ಅಣೆಕಟ್ಟುಗಳನ್ನು ಕಟ್ಟುವುದರ ಮೂಲಕ ನೀರಾವರಿ ನಾಲೆಗಳ ನಿರ್ಮಾಣದ ಮೂಲಕ, ರಸಗೊಬ್ಬರಗಳ ಸಹಾಯಧನದ ಮೂಲಕ ಹಾಗೂ ಸಾಲವನ್ನು ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ತಲುಪಿಸುವುದರ ಮೂಲಕ ಸರಕಾರ ಸ್ಪಂದಿಸಬಹುದು.

ಕಡೆಯದಾಗಿ ಕೃಷಿ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹೇಳಬಹುದಾದ ಅಂಶಗಳೆಂದರೆ ಮೊದಲನೆಯದಾಗಿ ಸಂಶೋಧನ ಸಂಘಟನೆಯನ್ನು ಪುನರ್ ರೂಪಿಸಬೇಕಾಗಿದೆ. ಯಾಕೆಂದರೆ ದೂರಗಾಮಿ

ದೃಷ್ಟಿ ಇಟ್ಟುಕೊಂಡು ಸಂಶೋಧನೆಯನ್ನು ರೂಪಿಸಬೇಕಾಗಿದೆ. ಮುಂದುವರಿದ ರಾಷ್ಟ್ರಗಳಲ್ಲಿ ದೂರಗಾಮಿಯಾಗಿ ಅಪಾರ ಜ್ಞಾನದ ಸಂಗ್ರಹವಾಗಿದೆ, ಈ ಅಪಾರ ಜ್ಞಾನದ ಸಂಗ್ರಹದಿಂದಾಗಿ , ಇವು ಕೃಷಿ ವಲಯದಲ್ಲಿ ಅಭೂತ ಪೂರ್ವ ಯಶಸ್ಸನ್ನು ಸಾಧಿಸಿದೆ. ಈ ಜ್ಞಾನವನ್ನು ನಮ್ಮ ದೇಶ ಕೂಡ ಪಡೆಯಬಹುದು. ಆದರೆ ಮುಂದುವರಿದ ಅರ್ಥ ವ್ಯವಸ್ಥೆಯಲ್ಲಿ ನಡೆದ ಸಂಶೋಧನೆಗಳು ನಮ್ಮ ಆರ್ಥಿಕ ವ್ಯವಸ್ಥೆಯ ಕೃಷಿ ವಲಯಕ್ಕೆ ಎಷ್ಟು ಪ್ರಸ್ತುತ ಎಂಬುದನ್ನು ತಿಳಿದುಕೊಳ್ಳಬೇಕು ಯಾಕೆಂದರೆ ಜೀವ ವಿಜ್ಞಾನದ ಸಂಶೋದನೆಗಳು ಒಂದು ರಾಷ್ಟ್ರದ ಪರಿಸರದಿಂದ ಇನ್ನೊಂದು ರಾಷ್ಟ್ರದ ಪರಿಸರಕ್ಕೆ ವರ್ಗಾಯಿಸಬೇಕಾದರೆ ಎದುರಿಸುವ ಸಮಸ್ಯೆಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಬೇಕಾಗಿದೆ. ಇದು ಕೃಷಿ ಸಂಶೋಧನೆಗೆ ಸಂಬಂಧಪಟ್ಟ ವಿಷಯ.

ಎರಡನೆಯದಾಗಿ ಕೃಷಿಯಲ್ಲಿ ಆದ ಅವಿಷ್ಕಾರಗಳು ರಭಸದಲ್ಲಿ ಹಳ್ಳಿಗಳಿಗೆ ತಲುಪಬೇಕಾಗಿದೆ. ಅವಿಷ್ಕಾರಗಳು ಎಷ್ಟು ಬೇಗ ಹಳ್ಳಿಗಳಲ್ಲಿರುವ ರೈತರಿಗೆ ತಲುಪುತ್ತವೆಂದೇ ಅಷ್ಟು ಬೇಗ ರೈತರನ್ನು ಈ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವಲ್ಲಿ ಶ್ರಮ ಪಡಬೇಕಾಗಿದೆ. ಮುಂದುವರೆದ ರಾಷ್ಟ್ರಗಳಲ್ಲಿ ಪ್ರಯೋಗ ಶಾಲೆಗಳಲ್ಲಿ ಅವಿಷ್ಕರಿಸಿದ ಹೊಸ ತಂತ್ರಜ್ಞಾನವನ್ನು ಗ್ರಾಮಗಳಿಗೆ ತಲುಪಿಸಿ, ರೈತರು ಇವುಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವಲ್ಲಿ ಶ್ರಮ ವಹಿಸಿದ್ದಾರೆ. ಆದ್ದರಿಂದ ಕೃಷಿ ಉತ್ಪಾದಕತೆ ಹೆಚ್ಚಾಗಿದೆ, ಇದರಿಂದಾಗಿ ವಿಸ್ತರಣಾ ಶಿಕ್ಷಣದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಬೇಕಾಗಿದೆ. ಆದ್ದರಿಂದ ವಿಸ್ತರಣ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಬೇಕಾಗಿದೆ.

ಕೊನೆಯದಾಗಿ, ಕೃಷಿ ಸಂಪನ್ಮೂಲಗಳು ಹಾಗೂ ಉತ್ಪನ್ನಗಳನ್ನು ಮಾರಾಟ ಮಾಡಲು ಸೇವಾ ಮತ್ತು ವಿತರಣಾ ಜಾಲವನ್ನು ಸದೃಢಗೊಳಿಸಬೇಕಾಗಿದೆ. ಮುಂದುವರಿದ ರಾಷ್ಟ್ರಗಳು ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಮಾಡಿವೆ. ಭಾರತದಲ್ಲೂ ಈ ಕೆಲಸ ಆಗಬೇಕಾಗಿದೆ ರಸಗೊಬ್ಬರಗಳು , ಬೀಜಗಳು, ಔಷಧಿಗಳು ಸಾಲ ಇವನ್ನು ವ್ಯವಸ್ಥಿತವಾಗಿ ಸಾಂಸ್ಥಿಕ ಸ್ವರೂಪಗಳ ಮೂಲಕ ಮಾಡಬೇಕಾಗಿದೆ. ಸಾಲವನ್ನು ವ್ಯವಸ್ಥಿತವಾಗಿ ಗ್ರಾಮೀಣ ಬ್ಯಾಂಕುಗಳು ಹಾಗೂ ಸಹಕಾರ ಸಂಘಗಳ ಮೂಲಕ ವಿತರಿಸುವಂತಹ ಕೆಲಸ ಆಗಬೇಕಾಗಿದೆ, ರಸಗೊಬ್ಬರ ಬೀಜಗಳನ್ನು ಖಾಸಗಿ ವಲಯಕ್ಕೆ ಬಿಡುವುದಕ್ಕೆ ಬದಲಾಗಿ, ಸಹಕಾರಿ ಮತ್ತು ಸರಕಾರಿ ವಲಯ ವಹಿಸಿಕೊಳ್ಳಬೇಕಾಗಿದೆ. ಉತ್ಪಾದಿಸಿದ ಕೃಷಿ ಉತ್ಪನ್ನಗಳು ಸರಿಯಾಗಿ ಮಾರಾಟ ಮಾಡಲು ಮಾರುಕಟ್ಟೆ ಸಂಸ್ಥೆಗಳನ್ನು ಶಕ್ತಿಯುತವಾಗಿ ರೂಪಿಸಬೇಕಾಗಿದೆ. ಹಾಗೆ ರೈತರ ಉತ್ಪನ್ನಗಳನ್ನು ಸಂಗ್ರಹಿಸಿಡಲು ಉಗ್ರಾಣ, ಸಂಸ್ಕರಣ, ಘಟಕಗಳು ಮುಂತಾದವುಗಳನ್ನು ಶಕ್ತಿಯುತವಾಗಿ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಸಾಹಿತ್ಯ ಪರಾಮರ್ಶೆ :

ರಸಗೊಬ್ಬರಗಳ ಬೇಡಿಕೆ - ಒಂದು ಸಮಗ್ರ (Macro Analysis) ಹಂತದ ವಿಶ್ಲೇಷಣೆ : ಎಂಬ ಲೇಖನದಲ್ಲಿ (ಡಾ. ಕಯ್ಯಾರ್ ಕಸ್ಸಿ. ಎಸ್. 2000) ಎಂಬುವರು ರಸಗೊಬ್ಬರಗಳ ಬೇಡಿಕೆಯ ಮೇಲೆ,

ಅಧ್ಯಯನ ನಡೆಸಿದ್ದಾರೆ. ಇಲ್ಲಿ ಇವರು ವೇಳೆ ಸರಣಿಯ ದತ್ತಾಂಶಗಳನ್ನು ಬಳಸಿದ್ದಾರೆ (Time Series) 1966-67 ರಿಂದ 1992-93 ವರೆಗಿನ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿದ್ದಾರೆ. ಇವರ ಉಪಯೋಗಿಸಿರುವ ಅಧ್ಯಯನದ ವಿಧಾನ, ಕಾಬ್ ಡಾಗಲ್ಸ್ ಅಧ್ಯಯನ ವಿಧಾನ ಇಲ್ಲಿ ಎರಡು ಸ್ಥಿರ ಅಂಶಗಳು (Variable) ಗಳನ್ನು ತೆಗೆದುಕೊಂಡಿದ್ದಾರೆ. ಯಾಕೆಂದರೆ ರಸಗೊಬ್ಬರ ಬೇಡಿಕೆ ಅವಲಂಬಿತ ಬೇಡಿಕೆಯಾಗಿದೆ. ಅಂದರೆ ಇತರೆ ಸಂಪನ್ಮೂಲಗಳು ಅಂದರೆ ಅಧಿಕ ಇಳುವರಿ ಬೀಜಗಳು, ನೀರಾವರಿ ಇತ್ಯಾದಿ ಬಳಕೆಯ ಮೇಲೆ ರಸಗೊಬ್ಬರಗಳ ಬೇಡಿಕೆ ಇಂತಿದೆ.

ಇವರು ಉಪಯೋಗಿಸಿರುವ ಕಾಬ್ ಡಾಗಲ್ಸ್ (Cobb Douglas Production Function) ಉತ್ಪಾದನಾ ಅವಲಂಬನಾ ಪ್ರಮಾಣ ವಿಧಾನ $y - AF^{b1}, L^{b2} V$

ಇಲ್ಲಿ y = ಉತ್ಪನ್ನ F = ರಸಗೊಬ್ಬರ L = ಕಾರ್ಮಿಕರು ಈ ರೀತಿಯ ಅಧ್ಯಯನ ವಿಧಾನದಿಂದ ರಸಗೊಬ್ಬರಗಳ ಲಾಭ ಅವಲಂಬಿತ ಪ್ರಮಾಣದ ಸಮೀಕರಣ

ಲಾಭ = $PY = P_1F - P_2 C$

P = ಉತ್ಪನ್ನದ ಬೆಲೆ

P_1 = ರಸಗೊಬ್ಬರಗಳ ಬೆಲೆ

P_2 = ಕಾರ್ಮಿಕ ಅಥವಾ ಇನ್ಯಾವುದೇ ಸಂಪನ್ಮೂಲದ ಬೆಲೆ

ಈ ವಿಧಾನದ ಮೂಲಕ ಅಧ್ಯಯನ ನಡೆಸಿರುವ, ಲೇಖಕರು ರಸಗೊಬ್ಬರಗಳ ಬಳಕೆ ಅಧಿಕ ಇಳುವರಿ ತಳಿ ಬೀಜಗಳ ಉಪಯೋಗ ಮತ್ತು ನೀರಾವರಿ ಜೊತೆ ಸಕಾರಾತ್ಮಕ ಸಂಬಂಧ ಹೊಂದಿದೆ ಎಂದು ಹೇಳುತ್ತಾರೆ.

ಮಧ್ಯಪ್ರದೇಶದಲ್ಲ ಕೃಷಿ ಸಂಪನ್ಮೂಲಗಳ ಬೆಳವಣಿಗೆ ಮತ್ತು ಉತ್ಪಾದಕತೆಯ ಮೇಲೆ ಇದು ಬೀರುವ ಪರಿಣಾಮಗಳ ಬಗ್ಗೆ ಒಂದು ವಿಶ್ಲೇಷಣಾತ್ಮಕ ದೃಷ್ಟಿಕೋನ-ಜ್ಞಾನೇಂದ್ರ ಸಿಂಗ್ ಮತ್ತು ಹುಕುಂ ಚಂದ್ರ.

ಈ ಲೇಖನದಲ್ಲಿ (ಸಿಂಗ್, ಚಂದ್ರ 2000) ಮಧ್ಯಪ್ರದೇಶದಲ್ಲಿ ಕೃಷಿ ಸಂಪನ್ಮೂಲಗಳು ಅದರಲ್ಲೂ ರಸಗೊಬ್ಬರಗಳು, ಬೆಳೆಗಳ ಉತ್ಪಾದಕತೆಯ ಮೇಲೆ ಬೀರುವ ಪರಿಣಾಮವನ್ನು ವಿಶ್ಲೇಷಿಸಲಾಗದೆ. ಇಲ್ಲಿ ರಸಗೊಬ್ಬರಗಳ ಬಳಕೆ ಮತ್ತು ಬೇಡಿಕೆಯನ್ನು ಅಧ್ಯಯನಿಸಲಾಗಿದೆ. ಇಲ್ಲಿ ವಿಶ್ಲೇಷಣೆಗೆ ಪರಿಗಣಿಸಲಾದ ಸಂಪನ್ಮೂಲಗಳೆಂದರೆ ರಸಗೊಬ್ಬರ, ನೀರಾವರಿಯಡಿಯಲ್ಲಿರುವ ಭೂಮಿ, ಕೃಷಿ, ವಿದ್ಯುತ್ ಚ್ಛಕ್ತಿ , ಮುಂತಾದವುಗಳಿವೆ. ಇಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಲು ಮಧ್ಯಪ್ರದೇಶದ ಕೃಷಿ ನಿರ್ದೇಶನಲಾಯ ಪ್ರಕಟಿಸಿರುವ ಕೃಷಿ ಅಂಕಿ ಸಂಖ್ಯೆಗಳ ಸಂಪುಟ, ಮೂಲ ಕೃಷಿ ಅಂಕಿ ಸಂಖ್ಯೆಗಳ ಪುಸ್ತಕ, ಮಧ್ಯಪ್ರದೇಶದ ಭೂ ದಾಖಲೆ ಇಲಾಖೆಯ ಪುಸ್ತಕಗಳು, ರಸಗೊಬ್ಬರ ಅಂಕಿ ಅಂಶಗಳು ಮತ್ತು ಜಾನುವಾರು ಗಣತಿ ವರದಿ, 1966-67 ರಿಂದ ಇಲ್ಲಿಯವರೆಗಿನ ವೇಳೆ ಸರಣಿ ಅಂಕಿ ಅಂಶಗಳ (Time series Data) ವಿಧಾನವನ್ನು ಉಪಯೋಗಿಸಲಾಗಿದೆ. ಸಂಪನ್ಮೂಲಗಳ ಉತ್ಪಾದಕತೆಯ ಮೇಲೆ ಬೀರುವ ಸಮಗ್ರ ಪರಿಣಾಮಗಳನ್ನು

ಸರಳ ರೇಖಾತ್ಮಕ ರಿಗ್ರೇಷನ್ ಅವಲಂಬನಾ ಪ್ರಮಾಣದ ವಿಧಾನದ ಮೂಲಕ ವಿಶ್ಲೇಷಿಸಲಾಗಿದೆ.

$y = a + b_2 x_1 + b_2 x_1 + b_2 x_2$ ಯನ್ನು ಉಪಯೋಗಿಸಲಾಗಿದೆ. y = ಇಳುವರಿ /ಹೆಕ್ಟೇರ್

X_1 = ರಸಗೊಬ್ಬರ ಬಳಕೆ X_1 = ನೀರಾವರಿಯಡಿಯಲ್ಲಿ ಬರುವ ಕ್ಷೇತ್ರ

X_2 = ವಿದ್ಯುಚ್ಛಕ್ತಿ ಬಳಕೆ ಕಿ. ವ್ಯಾಟ್ಸ್ / ಹೆಕ್ಟೇರ್

a, b_1, b_2, b_3 = regression coefficient = ರಿಗ್ರೇಷನ್ ಸೂಕ್ಷ್ಮ ಪ್ರಮಾಣಾತ್ಮಕ ಅಂಶಗಳು

ಇವುಗಳನ್ನು ಉತ್ಪಾದಕತೆಯ ಸ್ಥಿತಿ ಸ್ಥಾಪಕತ್ವವುಗಳು (Elasticities) ಎಂದು ಕರೆಯಲಾಗುತ್ತದೆ. ಉತ್ಪಾದಕತೆ ಸ್ಥಿತಿ ಸ್ಥಾಪಕ ಅಂಶಗಳು, ಇಳುವರಿ ಹೆಚ್ಚಾಗಿದೆಯೇ ಕಡಿಮೆಯಾಗಿದೆಯೇ ಸಂಪನ್ಮೂಲಗಳ ಬಳಕೆಯೊಂದಿಗೆ ಕಡಿಮೆ ರಸಗೊಬ್ಬರ ಬಳಸಿ ಇಳುವರಿ ಕುಸಿದಿದೆಯೇ ಅಥವಾ ಹೆಚ್ಚು ರಸಗೊಬ್ಬರ ಬಳಕೆಯಿಂದ ಇಳುವರಿ ಹೆಚ್ಚಿದೆಯೇ ಎಂಬುದನ್ನ ಸ್ಪಷ್ಟವಾಗಿ ಬಿಂಬಿಸುತ್ತದೆ. ಇಲ್ಲಿ ರಸಗೊಬ್ಬರ ಒಂದು ಕೃಷಿ ಸಂಪನ್ಮೂಲ ಇದು ಬೆಳೆಗಳ ಉತ್ಪಾದಕತೆಯನ್ನು ಪ್ರಭಾವಿಸುತ್ತದೆ. ಮಧ್ಯಪ್ರದೇಶದಲ್ಲಿ 1951-52 ರಲ್ಲಿ ರಸಗೊಬ್ಬರ ಬಳಕೆ 0.01 ಕೆ.ಜಿ. ಹೆಕ್ಟೇರಿಗೆ, 1966-67 39-9 ಕೆ.ಜಿ. ಹೆಕ್ಟೇರ್ ಪ್ರತಿ ವರ್ಷದ ರಸಗೊಬ್ಬರ ಉಪಯೋಗದ ಬೆಳವಣಿಗೆ ಶೇ. 7.5 ರಷ್ಟು ಇದು ಇನ್ನಿತರ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿದೆ. ಪಂಜಾಬ್ 175 ಕೆ.ಜಿ. / ಹೆಕ್ಟೇರ್ ಹರಿಯ್ಯಾಣ (144 ಕೆ.ಜಿ. / ಹೆಕ್ಟೇರ್) ತಮಿಳುನಾಡು 135 ಕೆ.ಜಿ. /ಹೆಕ್ಟೇರ್, ಆಂದ್ರಪ್ರದೇಶ (132 ಕೆ.ಜಿ. /ಹೆಕ್ಟೇರ್) ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ (118 ಕೆ.ಜಿ. /ಹೆಕ್ಟೇರ್) ಕರ್ನಾಟಕ, ಗುಜರಾತ್ (90 ಕೆ.ಜಿ. / ಹೆಕ್ಟೇರ್) ಇದು ಏನನ್ನು ಹೇಳುತ್ತದೆಂದರೆ ರೈತರು ಸಮತೋಲನ ಪ್ರಮಾಣದಲ್ಲಿ ರಸಗೊಬ್ಬರ ಬಳಸುತ್ತಿಲ್ಲ.

ಕೃಷಿ ಉತ್ಪಾದಕತೆ ಮತ್ತು ರಸಗೊಬ್ಬರ ಬೇಡಿಕೆ : ಒಂದು ಆರ್ಥಿಕ ಪ್ರಮಾಣ ವಿಶ್ಲೇಷಣೆ -ಕೆ.ಎಸ್. ಸುರ್ಜಿತ್ ಮತ್ತು ಸುಜಿತ್ ಕುಮಾರ್ ಮಿಶ್ರ

ಈ ಲೇಖನದಲ್ಲಿ ನೀರಾವರಿಡಿಯಲ್ಲಿರುವ ಕ್ಷೇತ್ರ ರಸಗೊಬ್ಬರ ಬಳಕೆ ಮತ್ತು ಮಳೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ದತ್ತಾಂಶಗಳನ್ನು ಆರ್.ಬಿ.ಐ. ಬುಲೇಟಿನ್ ರಸಗೊಬ್ಬರ ಅಂಕಿ ಅಂಶ ಮತ್ತು ಆರ್ಥಿಕ ಸಮೀಕ್ಷೆಗಳ ಮೂಲಕ, ಕ್ಷೇತ್ರ ಉತ್ಪಾದನೆ ಮತ್ತು ಇಳುವರಿ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ. ಮಳೆ ಅಂಕಿ ಅಂಶಗಳನ್ನು ಹವಾಮಾನ ಇಲಾಖೆಯಿಂದ ಸಂಗ್ರಹಿಸಲಾಗಿದೆ. ಕಳೆದ 20 ವರ್ಷಗಳನ್ನು ಅಂಕಿ ಅಂಶಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಲಾಗಿದೆ. ಕಾಬ್ ಡಾಗಲ್ಸ್ ಉತ್ಪಾದನಾ ಅವಲಂಬಿ ಪ್ರಮಾಣವನ್ನು ವಿಧಾನವನ್ನು ಅಳವಡಿಸಲಾಗಿದೆ $y = AX_1^{\alpha} X_2^{\beta} x 3^{\theta} e^{\alpha d}$ ಈ ಸಮೀಕರಣವನ್ನು ಇದರಲ್ಲಿ ಬಳಸಲಾಗಿದೆ. ರಸಗೊಬ್ಬರಗಳ ಬೇಡಿಕೆ ಭಾರತದಲ್ಲಿ ವರ್ಷದಿಂದ ವರ್ಷಕ್ಕೆ

ಹೆಚ್ಚುತ್ತಿದೆ. 1951 ರಿಂದ 1991 ರ ಅವಧಿಯಲ್ಲಿ ರಸಗೊಬ್ಬರಗಳ ಬಳಕೆ 136 ರಷ್ಟು ಹೆಚ್ಚಾಗಿದೆ. 1951 ಲ್ಲಿ 0.50 ಕೆ.ಜಿ. / ಹೆಕ್ಟೇರ್ ಇದ್ದುದು 1991 ರಷ್ಟರಲ್ಲಿ 68.30 ಕೆ.ಜಿ. ಆಗಿದೆ. ರಸಗೊಬ್ಬರಗಳ ಬೇಡಿಕೆಯನ್ನು ನಿಯಂತ್ರಿಸುವ ಅಂಶಗಳಲ್ಲಿ ರಸಗೊಬ್ಬರಗಳ ಬೆಲೆ, ಸುಧಾರಿತ ತಳಿಗಳ ಬಳಕೆ, ನೀರಾವರಿ ಮಳೆ ಹಾಗೂ ಸಹಾಯಧನ, ಲಾಗ್ ರೇಖಾತ್ಮಕ ಸಮೀಕರಣ (log model) ವನ್ನು ಮೇಲೆ ನಮೂದಿಸಿದ ಸ್ಥಿರ ಅಂಶಗಳು (Variable) ಗಳ ರಸಗೊಬ್ಬರಗಳ ಬಳಕೆಯ ಮೇಲೆ ಬೀರುವ ಪ್ರಭಾವವನ್ನು ಅಳೆಯಲು ಉಪಯೋಗಿಸಲಾಗಿದೆ. ಈ ಸಮೀಕರಣವೆಂದರೆ

FD $= \alpha_1 + \beta_1 FP + \beta_2 Area_{HYV} + \beta_3 AB + \beta_4 I^{rr}i + \beta_5 a^{s}b + \beta_6 Rain + Vi$

FD = ರಸಗೊಬ್ಬರಗಳ ಬೇಡಿಕೆ

FP = ರಸಗೊಬ್ಬರಗಳ ಬೆಲೆ

Are HYV = ಅಧಿಕ ಇಳುವರಿಡಿಯಲ್ಲಿರುವ ಕ್ಷೇತ್ರ

AB = ನಾಟಿ ಮಾಡಿದ ಕ್ಷೇತ್ರ

Irr = ನೀರಾವರಿ

S = ಸಹಾಯಧನ

$\beta_1, \beta_2, \beta_3, \beta_4, \beta_5, \beta_6$ (Variables) ಸೂಕ್ಷ್ಮ ಮಾಪನದ ಅಂಶಗಳು

ರಸಗೊಬ್ಬರಗಳ ಬೆಲೆ ಮತ್ತು ರಸಗೊಬ್ಬರಗಳ ಬಳಕೆ ನಕಾರತ್ಮಕವಾದ ಸಂಬಂಧಗಳನ್ನು ಹೊಂದಿದೆ. ಇದನ್ನು ಈ ಕೆಳಕಂಡ ಕೋಷ್ಟಕದ ಮೂಲಕ ವಿವರಿಸಲಾಗಿದೆ.

ರಸಗೊಬ್ಬರ ಬೇಡಿಕೆಯನ್ನು ಪ್ರಭಾವಗೊಳಿಸುವ ಅಂಶಗಳ ರಿಗ್ರೇಷನ್ ಫಲಿತಾಂಶಗಳು

ಸ್ಥಿರ ಅಂಶಗಳು (Variables)	ಸ್ಥಿರವಾದದ್ದು (Constant)	ರಸಗೊಬ್ಬರ ಬೆಲೆ	ಅಧಿಕ ಇಳುವರಿ ತಳಿಯಡಿಯಲ್ಲಿ ಕ್ಷೇತ್ರ	ನೀರಾವರಿ	ಮಳೆ	ಸಹಾಯಧನ
ಸೂಕ್ಷ್ಮ ಮಾಪನಗಳು (Co-efficient)	- 2-623	0.181	0.47	1.14	0.001	0.155
ಟಿ ಪರೀಕ್ಷೆ	- 2.02	2.34	2.83	2.57	0.01	6.16

ಗಮನಾರ್ಹ (Significant) ಹಂತದ ಟಿ. ಪರೀಕ್ಷೆ ಶೇಕಡ 1, ಶೇ. 5, ಶೇ. 10 ಅನುಕ್ರಮವಾಗಿ ರಸಗೊಬ್ಬರಗಳ ಸೂಕ್ಷ್ಮ ಮಾಪನಗಳು ಹೇಳುವುದೇನೆಂದರೆ ಮೇಲಿನ ಕೋಷ್ಟಕದನ್ವಯ ಶೇ. 10 ರಷ್ಟು ರಸಗೊಬ್ಬರ ಬೆಲೆ ಜಾಸ್ತಿಯಾದರೆ ಶೇ. 1.18 ರಷ್ಟು ರಸಗೊಬ್ಬರಗಳ ಬೇಡಿಕೆ ಇಳಿಯುತ್ತದೆ. ನೀರಾವರಿ ಕ್ಷೇತ್ರ ಸೇ. 10 ರಷ್ಟು ಜಾಸ್ತಿಯಾದರೆ ರಸಗೊಬ್ಬರಗಳ ಬಳಕೆ ಶೇ. 11.42 ರಷ್ಟು ಜಾಸ್ತಿಯಾಗುತ್ತದೆ. ಅಧಿಕ ಇಳುವರಿ

ತಳಿಗಳ ಕ್ಷೇತ್ರ 10 ರಷ್ಟು ಜಾಸ್ತಿಯಾದರೆ ರಸಗೊಬ್ಬರಗಳ ಬಳಕೆ ಶೇ. 4.75 ರಷ್ಟು ಜಾಸ್ತಿಯಾಗುತ್ತದೆ.

ಕೃಷಿ ಸಂಪನ್ಮೂಲಗಳ ಸಹಾಯಧನ, ಎ. ವೈದ್ಯನಾಥನ್ : ಕೃಷಿ ಸಂಪನ್ಮೂಲಗಳಾದಂತ ನೀರಾವರಿ ವಿದ್ಯುಚ್ಛಕ್ತಿ ಹಾಗೂ ರಸಗೊಬ್ಬರಗಳಿಗೆ ಸಂಬಂಧಪಟ್ಟಂತೆ ಸರಕಾರಬಳಕೆದಾರರಿಂದ ಪಡೆದ ಹಣ 1987 - 88 ರಲ್ಲಿ 97 ಶತಕೋಟಿ ರೂಪಾಯಿಗಳು

ಬಳಕೆದಾರರಿಂದ ಸರಕಾರ ವಾಪಸ್ಸು ಪಡೆಯಲಾರದ ಕೃಷಿ ಸಂಪನ್ಮೂಲಗಳಿಗೆ ನೀಡಿದ ಹಣ (ಶತಕೋಟಿ ರೂಗಳಲ್ಲಿ)

ಸಂಪನ್ಮೂಲ	1987-88			1994-95		
	ಕೇಂದ್ರ	ರಾಜ್ಯ	ಒಟ್ಟು	ಕೇಂದ್ರ	ರಾಜ್ಯ	ಒಟ್ಟು
ನೀರಾವರಿ	1.1	44.6	45.7	1.3	142.1	143.4
ವಿದ್ಯುಚ್ಛಕ್ತಿ	17.9	14.3	32.2	39.3	80.3	119.4
ರಸಗೊಬ್ಬರ	19.0	ಇಲ್ಲ	19.00	57.7	NA	57.7
ಒಟ್ಟು	38.0	58.9	96.00	98.3	222.4	320.5

1994-95 ರೈತರಿಂದ ಪಡೆಯಲಾರದ ಸಂಪನ್ಮೂಲ ವೆಚ್ಚ 320 ಶತಕೋಟಿ ರೂಪಾಯಿಗಳು ಹೀಗೆ 1994-95 ರ ಅವಧಿಯಲ್ಲಿ ಕೃಷಿ ಸಂಪನ್ಮೂಲಗಳಾದಂತೆ ನೀರಾವರಿ, ವಿದ್ಯುಚ್ಛಕ್ತಿ ಹಾಗೂ ರಸಗೊಬ್ಬರಗಳಿಂದ ಬರಬೇಕಾದ ವೆಚ್ಚ ನಮ್ಮ ಆಯವ್ಯಯದ ವಿತ್ತೀಯ ಕೊರತೆಯಲ್ಲಿ ಶೇ. 30 ರಷ್ಟು ಇಲ್ಲಿ ಸಂಪನ್ಮೂಲಗಳನ್ನು ರೈತರಿಗೆ ಕೊಟ್ಟು, ಅವರಿಂದ ವಾಪಸ್ಸು ಬರದ ಹಣ ಮತ್ತು ಸಹಾಯಧನವನ್ನು, ಒಂದೇ ಎಂದು ಲೇಖಕರು ಹೇಳಿದ್ದಾರೆ. ಇದಕ್ಕಾಗಿ ಕೇಂದ್ರ ಸರಕಾರ ಮತ್ತು ಯೋಜನಾ ಆಯೋಗ ಸಾಂಸ್ಥಿಕ ಸುಧಾರಣೆ ಹಾಗೂ ಸಂಪನ್ಮೂಲಗಳಿಗೆ ಬೆಲೆ ನಿಗಿದಿಪಡಿಸುವ ದಿಕ್ಕಿನಲ್ಲಿ ಯೋಚಿಸುತ್ತಿವೆ. ಇಲ್ಲಿ ವೆಚ್ಚವನ್ನು ತಗ್ಗಿಸಿ ಸಂಪನ್ಮೂಲಗಳ ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳಾಗಿವೆ.

ಕೃಷಿಯಲ್ಲಿ ಸಂಪನ್ಮೂಲ ಸಹಾಯಧನ ಅವಶ್ಯ ಸುಧಾರಣೆಗಳು ಡಾ. ಆರ್.ಎನ್. ಪರೋಡ

ಸಂಪನ್ಮೂಲ ಸಹಾಯಧನದಿಂದಾಗಿ , ಭೂಮಿ ಮತ್ತು ನೀರಿನ ಅಂಶಗಳು ಗುಣಮಟ್ಟದಲ್ಲಿ ಅವನತಿಯೆಡೆ ನಡೆದಿರುವುದು ಮತ್ತು ಸುಸ್ಥಿರ ಕೃಷಿ ಅಪಾ.ಯವಿದೆ ಎಂದು ಲೇಖಕರು ಹೇಳುತ್ತಾರೆ ಅದಕ್ಕೆ ಉದಾಹರಣೆಯೆಂದರೆ ವಿದ್ಯುಚ್ಛಕ್ತಿ ಸಹಾಯಧನದಿಂದಾಗಿ ಕೊಳವೆಬಾವಿಗಳಿಂದ ಯಥೇಚ್ಛ ನೀರನ್ನು ಬಳಸಿ ನೀರಿನ ಸಮಸ್ಯೆಗೆ ಕಾರಣರಾಗುತ್ತಾರೆ. ಹಾಗೆಯೇ ರಸಗೊಬ್ಬರಗಳ ಸಹಾಯಧನ , ರಸಗೊಬ್ಬರಗಳನ್ನು ಮಿತಿ ಮೀರಿ ಬಳಸುವಂತ ಸಂದರ್ಭವನ್ನು ಕೆಲವು ವರ್ಗಗಳ ಹಾಗೂ ಕೆಲವು ಪ್ರದೇಶಗಳ ರೈತರಲ್ಲಿ ನಾವು ಕಾಣುತ್ತೇವೆ. ಆದ್ದರಿಂದ ಇದು ಪರಿಸರಕ್ಕೆ ಹೆಚ್ಚು ಅಪಾಯಕಾರಿಯಾದದ್ದು, ಕೃಷಿ ಸಂಪನ್ಮೂಲ ಸಹಾಯಧನ ಇಂದು ಹಲವರಿಂದ ಟೀಕೆಗೊಳಗಾಗಿದೆ. ಯಾಕೆಂದರೆ ಇದು ಮೊದಲನೆಯದಾಗಿ ಆರ್ಥಿಕ

ವ್ಯವಸ್ಥೆಗೆ ಭಾರವಾಗಿರುವಂತಹದು, ಎರಡನೆಯದಾಗಿ ಭೂಮಿ ಗುಣಾವನತಿ, ಅಂತರ್ಜಲ ಬತ್ತುವುದು, ಮಣ್ಣಿನ ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗುತ್ತದೆ ಎಂಬ ವಾದವನ್ನು ಮಾತ್ರ ಕೇಳುತ್ತಿದ್ದೇವೆ. ಬಡವರಿಗೆ ಈ ಸಹಾಯಧನದ ಫಲಗಳು ತಲುಪುವುದೇ ಇಲ್ಲ ಎಂಬ ಟೀಕೆಗಳು ಸಹ ಇದೆ. ಕೃಷಿ ಸಂಪನ್ಮೂಲ ಸಹಾಯಧನ 1982 - 83 ರ ಅವಧಿಯಲ್ಲಿ ಸಮಗ್ರ ಆಂತರಿಕ ಉತ್ಪನ್ನದ ಶೇ. 4 ರಷ್ಟು ಇದ್ದದ್ದು 1994 - 95 ರಲ್ಲಿ ಶೇ. 8 ರಷ್ಟು ಆಯಿತು. ರಂಜಕ ಮತ್ತು ಪೊಟಾಷ್ ರಸಗೊಬ್ಬರಗಳ ಬೆಲೆ ಅನಿಯಂತ್ರಣಕ್ಕೆ ಒಳಗಾಗಿವೆ. ಯಾಕೆಂದರೆ ಆರ್ಥಿಕ ವ್ಯವಸ್ಥೆಯ ಮೇಲೆ ಸಹಾಯಧನದ ಭಾರ ಕಡಿಮ ಮಾಡಲು , ಆದರೆ ಸಾರಜನಕ ಗೊಬ್ಬರಗಳು ಇನ್ನೂ ಸರಕಾರದ ನಿಯಂತ್ರಣದಲ್ಲೇ ಇದೆ. ಆದ್ದರಿಂದ ಒಟ್ಟಾರೆಯಾಗಿ ಸಂಪನ್ಮೂಲ ಸಹಾಯಧನ ಇಲ್ಲಿನ ಅಧ್ಯಯನಕಾರರ ಪ್ರಕಾರ ಆರ್ಥಿಕ ವ್ಯವಸ್ಥೆಗೆ ಹೊರೆ, ಪರಿಸರ ಗುಣಮಟ್ಟದಲ್ಲಿ ಅವನತಿ, ಕೆಲವೇ ರೈತರಿಗೆ ಸೀಮಿತವಾಗಿ ತಾರತಮ್ಯ ಉಂಟಾಗುವುದು, ಮುಂತಾದವುಗಳಾಗಿವೆ ಎಂಬುದೇ ಅಭಿಪ್ರಾಯ

ಕೃಷಿ ಉತ್ಪಾದನೆ ಮತ್ತು ರಸಗೊಬ್ಬರ ಬಳಕೆಯಲ್ಲಿರುವ ಪ್ರಣವತೆ ಅಥವಾ ವಿದ್ಯಮಾನಗಳು (Trends): ಹಸಿರು ಕ್ರಾಂತಿಯೋತ್ತರ ಮಾಪನ-ಸಂತಾನ್ ಮತ್ತು ಸುಜಿತ್ ಕುಮಾರ್ ಮಿಶ್ರ

ಈ ಲೇಖನದಲ್ಲಿ ಸಂಪನ್ಮೂಲ ಬಳಕೆಯ ವಿದ್ಯಮಾನ ಮತ್ತು ಬೆಳವಣಿಗೆ ಹೇಗೆ ಆಹಾರ ಧಾನ್ಯಗಳ ಬೆಳವಣಿಗೆಯಲ್ಲಿ ತನ್ನ ಪ್ರಭಾವವನ್ನು ಬೀರಿದೆ ಎಂಬುದನ್ನ ವಿಶ್ಲೇಷಿಸಲಾಗಿದೆ. ಇಲ್ಲಿ ಎರಡನೇ ಹಂತದ ಅಂಕಿ ಅಂಶಗಳನ್ನು ಬಳಸಲಾಗಿದೆ. ಅಂಕಿ ಸಂಖ್ಯೆಗಳ ಸಾರಾಂಶ ಪುಸ್ತಕಗಳಿಂದ ಮಾಹಿತಿ ಪಡೆಯಲಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯ ಉಸ್ತುವಾರಿ ಕೇಂದ್ರದಿಂದಲೂ ಸಹ ಅಂಕಿ ಅಂಶಗಳನ್ನು (CMIE) ಪಡೆಯಲಾಗಿದೆ. ಆರ್.ಬಿ.ಐ. ಬುಲೇಟಿನ್ ಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಇಲ್ಲಿ ಉತ್ಪಾದನಾ ಅವಲಂಬನಾ ಪ್ರಮಾಣ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಕ್ಷೇತ್ರ , ಮಳೆ, ರಸಗೊಬ್ಬರಗಳ ಬಳಕೆಯ ಪ್ರಭಾವ ಇಳುವರಿಯ ಮೇಲೆ ಎಷ್ಟರ ಮಟ್ಟಿಗೆ ಬೀರಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಆಂಧ್ರದಲ್ಲಿ ಹಸಿರು ಕ್ರಾಂತಿ ಪೂರ್ವ ರಸಗೊಬ್ಬರಗಳ ಬಳಕೆ ಕಡಿಮೆ ಪ್ರಮಾಣದಲ್ಲಿತ್ತು. 1971-72 ರಲ್ಲಿ 274 ಟನ್ ಗಳಷ್ಟಿತ್ತು. 2001 ರ ವೇಳೆಗೆ ಇದು 943 ಟನ್ ಗಳಾಯಿತು. 1971 - 72 ರಲ್ಲಿ ರಸಗೊಬ್ಬರಗಳ ಬಳಕೆ 21.56 ಕೆ.ಜಿ. / ಹೆಕ್ಟೇರ್ ಇತ್ತು. 1998-99 ರಲ್ಲಿ149.78 ಕೆ.ಜಿ./ಹೆಕ್ಟೇರ್ ಆಯಿತು. ಆಂಧ್ರದಲ್ಲಿ ಹೆಕ್ಟೇರ್ ವಾರು ರಸಗೊಬ್ಬರ ಬಳಕೆ. ರಾಷ್ಟ್ರ ಮಟ್ಟಕ್ಕಿಂತ ಹೆಚ್ಚಾಗಿದೆ, ಎಂಬುದು ಲೇಖಕರ ಅಭಿಮತ ಆದರಲ್ಲೂ ಪ್ರಾದೇಶಿಕವಾರು ರಸಗೊಬ್ಬರಗಳ ಬಳಕೆಯಲ್ಲಿ ಅಸಮತೋಲನವಿದೆ, ಎಂದು ಅಧ್ಯಯನಕಾರರು ಅಭಿಪ್ರಾಯ ಪಡುತ್ತಾರೆ. 1991-94 ರಲ್ಲಿ ಆಂಧ್ರ ಪ್ರದೇಶದಲ್ಲಿ 130.12 ಕೆ.ಜಿ. /ಹೆಕ್ಟೇರ್ ಇದೆ. ಆಂಧ್ರದ ಕರಾವಳಿ ಪ್ರದೇಸದಲ್ಲಿ 153.39 ಕೆ.ಜಿ. / ಹೆಕ್ಟೇರ್ ಇದೆ. ರಾಯುಲ ಸೀಮ ಪ್ರದೇಶದಲ್ಲಿ 1991-99 ರಲ್ಲಿ

78.84 ಕೆ.ಜಿ. / ಹೆಕ್ಟೇರ್ ತೆಲಂಗಾಣ ಪ್ರದೇಶದಲ್ಲಿ 1991-99 ರಲ್ಲಿ 136.65 ಕೆ.ಜಿ. ಇದೆ. ಎಂದು ಅಧ್ಯಯನಕಾರರು ಅಭಿಪ್ರಾಯ ಪಡುತ್ತಾರೆ.

ನೀರಾವರಿ ಅಭಿವೃದ್ಧಿಯ ಬೆಳವಣಿಗೆ ಮತ್ತು ರಸಗೊಬ್ಬರಗಳ ಬಳಕೆಯ ಪ್ರಭಾವ ದಾನ್ಯಗಳ ಉತ್ಪಾದನೆಯ ಮೇಲೆ - ಎನ್.ಎಸ್. ಪಾಸ್ ರಿಚಾ

ಅಧ್ಯಯನಕಾರರ ಪ್ರಕಾರ ರಸಗೊಬ್ಬರಗಳ ಬಳಕೆಯಿಂದಾಗಿ ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಬೃಹತ್ ಪ್ರಮಾಣದಲ್ಲಿ ಜಾಸ್ತಿಯಾಗಿದ್ದು 1950 ರಲ್ಲಿ 0.07 ದಶಲಕ್ಷ ಟನ್ ಗಳ ರಸಗೊಬ್ಬರಗಳ ಬಳಕೆಯಾಯಿತು. 1951 ರಲ್ಲಿ 0.29 ದಶಲಕ್ಷ ಟನ್ ಗಳು 1961 ರಲ್ಲಿ 2.25 ದಶಲಕ್ಷ ಟನ್ ಗಳು 1971 ರಲ್ಲಿ, 5.5 ದಶಲಕ್ಷ ಟನ್ ಗಳು 1981 ರಲ್ಲಿ 12.5 ದಶಲಕ್ಷ ಟನ್ ಗಳು 1991 ರಲ್ಲಿ 12.5 ದಶ ಲಕ್ಷ ಟನ್ ಗಳು ರಸಗೊಬ್ಬರಗಳ ಬಳಕೆಯಾಯಿತು. 50 ರ ದಶಕ ಹಾಗೂ 60 ರ ದಶಕದ ಆದಿ ಭಾಗದಲ್ಲಿ ಸ್ಥಳೀಯ ಭತ್ತದ ತಳಿಗಳಿಗೆ ರಸಗೊಬ್ಬರಗಳ ಬಳಕೆಯಿಂದ 0.67 ರಿಂದ 0.84 ಟನ್ ಗಳ / ಹೆಕ್ಟೇರಿಗೆ ಉತ್ಪಾದನೆ ಹೆಚ್ಚಾಯಿತು. 1983 ರಲ್ಲಿ 70 ಕೆ.ಜಿ. / ಹೆಕ್ಟೇರ್ ಬಳಸಿದಿ ರಸಗೊಬ್ಬರಗಳಿಂದ 1.65 ಟನ್ / ಹೆಕ್ಟೇರ್ ನಷ್ಟು ಬೆಳೆ ಉತ್ಪಾದಕತೆಯಾಯಿತು. 100 ಕೆ.ಜಿ. / ಹೆಕ್ಟೇರ್ ಬಳಸಿದಿ ರಸಗೊಬ್ಬರಗಳಿಂದ 2.25 ಟನ್ / ಹೆಕ್ಟೇರುಗಳಷ್ಟು ಉತ್ಪಾದಕತೆ ಹೆಚ್ಚಾಯಿತು. ಇದು ಅಧ್ಯಯನಕಾರರು ನಡೆಸಿದ ಅಧ್ಯಯನದಿಂದ ಹೊರ ಬಿದ್ದ ಅಂಶಗಳು

ತಮಿಳುನಾಡಿನ ಮದುರೆ ಜಿಲ್ಲೆಯ ಮೂರು ಬಹುಸಂಖ್ಯಾತ ಬೆಳೆಗಳ ಮೇಲೆ ರಸಗೊಬ್ಬರಗಳ ಬಳಕೆ ಒಂದು ಆರ್ಥಿಕ ಪ್ರಮಾಣಾತ್ಮಕ ವಿಶ್ಲೇಷಣೆ ಡಾ. ಕಯಕರಕನ್ನಿ

ಇಲ್ಲಿ ಬಹು ಹಂತದ ಕ್ರಮ ರಹಿತ (Random) ಮಾದರಿ ತಂತ್ರದ ವಿಧಾನವನ್ನು ಅನುಸರಿಸಲಾಗಿದೆ. ಮದುರೈ ಜಿಲ್ಲೆಯನ್ನು ಸಂಪೂರ್ಣ ಅಧ್ಯಯನದ ಘಟಕ (Universe) ಎಂದು ಪರಿಗಣಿಸಲಾಗಿದೆ. ತಾಲ್ಲೂಕು ಮತ್ತು ಬ್ಲಾಕ್ ಗಳನ್ನು ವಿಭಜಿಸಲಾಗಿದೆ. ಹಳ್ಳಿಯನ್ನು ಮಾದರಿ ಸಂಗ್ರಹದ ಪ್ರಾಥಮಿಕ ಘಟಕ ಎಂದು ಪರಿಗಣಿಸಲಾಗಿದೆ. ರೈತರು ಅಂತಿಮ ಘಟಕ (Ultimate unit) ಎಂದು ಪರಿಗಣಿಸಲಾಗಿದೆ. ರಸಗೊಬ್ಬರಗಳ ಬಳಕೆ ಇಳುವರಿಯ ಮೇಲೆಬೀರುವ ಪ್ರಭಾವವನ್ನು ಅಧ್ಯಯನಿಸಲು ಸರಳ ರೇಖಾತ್ಮಕ ರಿಗ್ರೇಷನ್ ಸಮೀಕರಣವನ್ನು ಅಳವಡಿಸಲಾಗಿದೆ. ಇಲ್ಲಿ ರಸಗೊಬ್ಬರಗಳನ್ನು ಅವಲಂಬಿತ ಸ್ಥಿರ ಅಂಶಗಳ (Variable) ನ್ನಾಗಿ ಪರಿಗಣಿಸಲಾಗಿದೆ. ಅಧ್ಯಯನಕಾರರ ಪ್ರಕಾರ ಒಂದರಲ್ಲಿ ರಸಗೊಬ್ಬರಗಳ ಬಳಕೆ ಹೆಚ್ಚಿಸಿದರೆ ಇದು ಭತ್ತದ ಬೆಳೆಯನ್ನು ಮೂರಷ್ಟು ಹೆಚ್ಚಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ರಸಗೊಬ್ಬರಗಳ ಮಾರುಕಟ್ಟೆ ವೆಚ್ಚ ಮತ್ತು ಅಂಚು ಲಾಭ ಆಯ್ದ ಏಷ್ಯಾದ ಅಭಿವೃದ್ಧಿ ಶೀಲ ರಾಷ್ಟ್ರಗಳ ಮತ್ತು ಫೆಸಿಫಿಕ್ ರಾಷ್ಟ್ರಗಳಲ್ಲಿ 1992-93 - ಮನ್ ಫ್ರೆಡ್ ಜೀಬೆ

ಈ ಲೇಖನದ ಅಧ್ಯಯನದಲ್ಲಿ ಅಧ್ಯಯನಕಾರರು ರಸಗೊಬ್ಬರಗಳ ಮಾರುಕಟ್ಟೆ ವೆಚ್ಚದ ಬಗ್ಗೆ

ಹೆಚ್ಚು ಹೇಳುತ್ತಾರೆ. ರಸಗೊಬ್ಬರಗಳ ಮಾರುಕಟ್ಟೆ ವೆಚ್ಚ ಕಡಿಮೆಯಾಗಿ ರೈತರಿಗೆ ಕಡಿಮೆ ಬೆಲೆಗೆ ರಸಗೊಬ್ಬರಗಳನ್ನು ತಲುಪಿಸುವುದು ಮಾರುಕಟ್ಟೆಯ ಸಾಮರ್ಥ್ಯವಾಗುತ್ತದೆ. ಆದರೆ ಅದೇ ಮಾರುಕಟ್ಟೆ ಅಸಾಮಾರ್ಥ್ಯದಿಂದಾಗಿ ರೈತರಿಗೆ ರಸಗೊಬ್ಬರಗಳು ಅಧಿಕ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ಮಾರುಕಟ್ಟೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಾಗಾಣಿಕೆ ವೆಚ್ಚ, ದಾಸ್ತಾನು ವೆಚ್ಚ, ಚೀಲೀಕರಣ ವೆಚ್ಚ, ಕೈ ನಿರ್ವಹಣೆ (Handling cost) ವೆಚ್ಚ, ಭೌತಿಕ ನಷ್ಟ, ಉತ್ಪನ್ನಗಳ ಅಭಿವೃದ್ಧಿ ವೆಚ್ಚ (Promotional Expenses) ಇವುಗಳನ್ನು ಕಡಿಮೆಗೊಳಿಸಿದರೆ ಮಾರುಕಟ್ಟೆಯ ಸಾಮರ್ಥ್ಯ ಹೆಚ್ಚಾಗಿ, ರೈತರಿಗೆ ಕಡಿಮೆ ವೆಚ್ಚದಲ್ಲಿ ರಸಗೊಬ್ಬರಗಳು ತಲುಪುತ್ತವೆ. ಸಮಗ್ರ ಮಾರುಕಟ್ಟೆ ಅಂಚು ಆದಾಯವನ್ನು ಇಲ್ಲಿಸೂತ್ರದ ಪ್ರಕಾರ ಲೆಕ್ಕಾಚಾರ ಮಾಡಬಹುದು.

ಚಿಲ್ಲರೆ ಬೆಲೆ + ಸಹಾಯಧನ ಆಮದು / ಉತ್ಪಾದಕರ ಬೆಲೆ = ಸಮಗ್ರ ಮಾರುಕಟ್ಟೆ ಅಂಚು ಆದಾಯ (Gross Marketing Margins).

ಮಾರುಕಟ್ಟೆ ಅಂಚು ಆದಾಯ ಅಥವಾ ಮಾರುಕಟ್ಟೆ ವೆಚ್ಚ ಭಾರತ, ಪಾಕಿಸ್ತಾನ ಬಾಂಗ್ಲಾ ದೇಶದಲ್ಲಿ 15 ಡಾಲರ್ ನಿಂದ 20 ಡಾಲರ್ ವರೆಗೂ ಪ್ರತಿ ಟನ್ ಗೆ ಇರುತ್ತದೆ. ಇದು ಕಡಿಮೆ ಮಾರುಕಟ್ಟೆ ವೆಚ್ಚಕ್ಕೆ ಸಾಕ್ಷಿಯಾಗಿದೆ. ಇಂಡೋನೇಷ್ಯಾ, ನೇಪಾಳ, ಶ್ರೀಲಂಕಾ ಮತ್ತು ವಿಯಟ್ನಾಮ್ ಗಳಲ್ಲಿ 35 ಡಾಲರ್ ನಿಂದ 20 ಡಾಲರ್ ಪ್ರತಿ ಟನ್ನಿಗೂ ಮಾರುಕಟ್ಟೆ ವೆಚ್ಚ ತಗಲುತ್ತದೆ. ಈ ರಾಷ್ಟ್ರಗಳು ಮಾರುಕಟ್ಟೆ ವೆಚ್ಚವನ್ನು ತಗ್ಗಿಸುವ ಹಾದಿಯಲ್ಲಿ ನಡೆದಿದೆ, ಇರಾನ್ ಮೈನಾಮರ್, ಫಿಲಿಫೈನ್ಸ್ ನಂತರ ದೇಶಗಳಲ್ಲಿ ಅತಿ ಮಾರುಕಟ್ಟೆ ವೆಚ್ಚವಿದೆ.

ಒಟ್ಟು ಮಾರುಕಟ್ಟೆಯ ವೆಚ್ಚದಲ್ಲಿ ಸಾಗಾಣಿಕೆ ವೆಚ್ಚ ಶೇ. 50 ಕ್ಕಿಂತ ಹೆಚ್ಚು ಇರುವುದು ಭಾರತ, ಇರಾನ್, ಪಾಕಿಸ್ಥಾನ ಮತ್ತು ಮೈನಮರ್ ನಲ್ಲಿ ಬಾಂಗ್ಲಾದೇಶ, ಇಂಡೋನೇಷ್ಯ , ಶ್ರೀಲಂಕಾ , ವಿಯಟ್ನಾಂ, ಫಿಲಿಪೈನ್ಸ್ ನಲ್ಲಿ ಸಾಗಾಣಿಕೆ ವೆಚ್ಚ ಶೇ. 50 ಕ್ಕಿಂದ ಕಡಿಮೆ ಇದೆ.

ಆಂದ್ರ ಪ್ರದೇಶ ರಸಗೊಬ್ಬರಗಳ ಮಾರುಕಟ್ಟೆ ಅಭಿವೃದ್ಧಿಯಲ್ಲಿ (Promotion) ಸಮಸ್ಯೆ ಮತ್ತು ಉತ್ತೇಜಕಗಳು - ಜಿ.ಪಿ. ಶಿರೋತ್ರಿಯ

ಇಲ್ಲಿ ಆಂಧ್ರಪ್ರದೇಶದಲ್ಲಿ ನಾಲ್ಕು ಪ್ರಮುಖ ರಸಗೊಬ್ಬರಗಳ ಕೈಗಾರಿಕೆಗಳು ಇವೆ. ಇವುಗಳಲ್ಲಿ ಸಾರಜನಕ ಮತ್ತು ಸಂಕೀರ್ಣ ರಸಗೊಬ್ಬರಗಳು ಉತ್ಪಾದನ ಘಟಕಗಳಾದಂತಹ (Complex) ಗೆ ಕೋರಮಂಡಲ್ ಫರ್ಟಿಲೈಜರ್ಸ್ ಲಿಮಿಟೆಡ್, ಗೋಧಾವರಿ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್, ನಾಗಾರ್ಜುನ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್, ರಾಷ್ಟ್ರೀಯ ಇಸ್ಪಾಲ್ ನಿಗಮ, ಇದರ ಜೊತೆಗೆ ಸೂಪರ್ ಫಾಸ್ಫೇಟನ್ನು ಉತ್ಪಾದಿಸುವುದು ಏಳು ಕೈಗಾರಿಕೆಗಳು ಇವೆ. ರಸಗೊಬ್ಬರ ಕಾರ್ಖಾನೆಗಳು

830 ಸಾವಿರ ಟನ್ ಗಳಷ್ಟು 2001-02 ರ ಅವಧಿಯಲ್ಲಿ ಸಾರಜನಕ ರಸಗೊಬ್ಬರಗಳನ್ನು ಉತ್ಪಾದಿಸುತ್ತದೆ. ಇಲ್ಲಿ ಯೂರಿಯ ಉತ್ಪಾದನೆ 1425.7 ಟನ್ ಗಳಷ್ಟು ಇಲ್ಲಿನ ಸಾಮರ್ಥ್ಯ 1974 - 3 ಸಾವಿರ ಟನ್ ಗಳಷ್ಟು ಮತ್ತು ರಂಜಕ ರಸಗೊಬ್ಬರಗಳ ಉತ್ಪಾದನೆಯ ಸಾಮರ್ಥ್ಯ 556.2 ಸಾವಿರ ಟನ್ ಗಳಷ್ಟು ರಂಜಕ ಗೊಬ್ಬರಗಳ ಉತ್ಪಾದನೆ 460.3 ಸಾವಿರ ಟನ್‌ಗಳು. ಆಂಧ್ರ ಪ್ರದೇಶದಲ್ಲಿ ಸಾರಜನಕ ಹಾಗೂ ರಂಜಕ ಗೊಬ್ಬರಗಳ ಉತ್ಪಾದನೆ ಶೇ. 68.9 ರಷ್ಟು ಇದರ ಬಳಕೆ ಶೇ. 84.0 ರಷ್ಟು ಆಂಧ್ರ ಪ್ರದೇಶದಲ್ಲಿ 144 ಕೆ.ಜಿ. / ಹೆಕ್ಟೇರ್. ಇವು ರಾಷ್ಟ್ರದ ರಸಗೊಬ್ಬರಗಳ ಬಳಕೆಗಿಂತ ಜಾಸ್ತಿ ಇದೆ. ಅಂದರೆ ಭಾರತದ ಸರಾಸರಿ ರಸಗೊಬ್ಬರಗಳ ಬಳಕೆ 90.1 ಕೆ.ಜಿ. /ಹೆಕ್ಟೇರ್ ರೂಗಳು ಆಂಧ್ರ ಪ್ರದೇಶದಲ್ಲಿ ಪಶ್ಚಿಮ ಗೋಧಾವರಿ ಹಾಗೂ ಪೂರ್ವ ಗೋಧಾವರಿ ಜಿಲ್ಲೆಗಳು ರಸಗೊಬ್ಬರಗಳು ಬಳಕೆಯಲ್ಲಿ ಮುಂದಿವೆ. ರಸಗೊಬ್ಬರಗಳ ಮಾರುಕಟ್ಟೆ ವಿತರಕರ ಮೂಲಕ ನಡೆಸಲಾಗುತ್ತಿದೆ. ಈ ವಿತರಕರು ಸಗಟು ವ್ಯಾಪಾರಸ್ಥರು ಹಾಗೂ ಚಿಲ್ಲರೆ ವ್ಯಾಪಾರಸ್ಥರು ಆಂಧ್ರ ಪ್ರದೇಶದಲ್ಲಿ 17.562 ರಸಗೊಬ್ಬರ ಮಾರುಕಟ್ಟೆ ಕೇಂದ್ರಗಳಿವೆ. ಇದರಲ್ಲಿ ಶೇ. 18.4 ರಷ್ಟು ಸಹಕಾರಿ ವಲಯದಲ್ಲಿ ಉಳಿದಂತೆ ಶೇ. 81.6 ರಷ್ಟು ಖಾಸಗಿ ಮಳಿಗೆಗಳು ಇದರಲ್ಲಿ ಶೇ. 15.7 ರಷ್ಟು ಸಗಟು ಮಾರಾಟ ಮಳಿಗೆಗಳು ಮತ್ತು 84.3 ರಷ್ಟು ಚಿಲ್ಲರೆ ಮಾರಾಟ ಕೇಂದ್ರಗಳು, ಆಂಧ್ರದಲ್ಲಿ ಈಗ ಚಾಲ್ತಿಯಲ್ಲಿರುವ ರಸಗೊಬ್ಬರ ಜಾಲ ಅಲ್ಪ ಪ್ರಮಾಣದದ್ದು, ಒಂದಕ್ಕಂತ ಹೆಚ್ಚು ಹಳ್ಳಿಗಳಲ್ಲಿ ಒಂದು ರಸಗೊಬ್ಬರ ಮಾರಾಟ ಕೇಂದ್ರವಿದೆ. ಮಾರಾಟ ಮಳಿಗೆಗಳ ಜಾಲವನ್ನು ವಿಸ್ತತಗೊಳಿಸಿದಂತೆಲ್ಲ, ರಸಗೊಬ್ಬರ ಬಳಸದೇ ಇರುವವರು ಸಹ ರಸಗೊಬ್ಬರವನ್ನು ಬಳಸುವಂತೆ ಮಾಡಲಾಗುತ್ತದೆ.

ರಸಗೊಬ್ಬರಗಳ ದಾಸ್ತಾನು ಮತ್ತು ಕೈ ನಿರ್ವಹಣೆ - ವಿ.ಜಿ. ಜಾಪಕ್

ರಸಗೊಬ್ಬರಗಳು ಅಲ್ಪ ಸಂಖ್ಯೆಯ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುತ್ತದೆ. ಬಂದರುಗಳ ಮೂಲಕ ಆಮದು ಮಾಡಿಕೊಂಡ ರಸಗೊಬ್ಬರಗಳು ಸರಬರಾಜಾಗುತ್ತದೆ. ಈ ಕೇಂದ್ರಗಳಿಂದ ಲಕ್ಷಾಂತರ ರೈತರಿಗೆ ರಸಗೊಬ್ಬರ ತಲುಪಬೇಕಾಗಿದೆ. ಆದ್ದರಿಂದ ರಸಗೊಬ್ಬರಗಳ ದಾಸ್ತಾನು ಅತಿ ಮುಖ್ಯವಾಗುತ್ತದೆ. ಸರಿಯಾದ ದಾಸ್ತಾನು ಇಲ್ಲದಿದ್ದರೆ ರೈತರಿಗೆ ಸಮಯಕ್ಕೆ ಸರಿಯಾಗಿ ರಸಗೊಬ್ಬರಗಳನ್ನು ಸರಬರಾಜು ಮಾಡಲು ಸಾಧ್ಯವಿಲ್ಲ. ಆದರೆ ರೈತರು ಬಿತ್ತನೆ ಕಾಲ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ, ರಸಗೊಬ್ಬರ ಕೊಂಡು ದಾಸ್ತಾನು ಮಾಡುವುದಿಲ್ಲ. ಇದು ಲೇಖಕರ ಅಭಿಪ್ರಾಯ ಇದರ ಜೊತೆಗೆ ಲೇಖಕರು ಇನ್ನಷ್ಟು ವಿಷಯುಗಳನ್ನು ತಿಳಿಸುತ್ತಾರೆ. ರಸಗೊಬ್ಬರಗಳನ್ನು ರೈತರ ಮನೆ ಬಾಗಿಲಿಗೆ , ಸರಿಯಾದ ಸಮಯಕ್ಕೆ ತಲುಪಿಸಲು ವ್ಯಾಪಕ ದಾಸ್ತಾನು ಜಾಲ ಇರಬೇಕೆಂದು ಅಭಿಪ್ರಾಯ ಪಡುತ್ತಾರೆ, ಆದ್ದರಿಂದ ರಸಗೊಬ್ಬರಗಳ ವಿತರಣೆಯು ಸರಿಯಾದ ನಿರ್ವಹಣೆಗೆ ದಾಸ್ತಾನು ಅತಿ ಮುಖ್ಯವಾಗುತ್ತದೆ. ಇದರ ಜೊತೆಗೆ ರಸಗೊಬ್ಬರಗಳ

ಚೀಲೀಕರಣ (Bagging) ಅತಿ ಮುಖ್ಯವಾಗುತ್ತದೆ ರಸಗೊಬ್ಬರಗಳು ತೇವಾಂಶಕ್ಕೆ ತೆಗೆದುಕೊಂಡರೆ, ಇವು ಗಡ್ಡೆ ಕಟ್ಟುತ್ತವೆ. ಇದರಿಂದಾಗಿ ರಸಗೊಬ್ಬರಗಳ ಗುಣಮಟ್ಟ ಕುಸಿಯುತ್ತದೆ. ಇದರಿಂದಾಗಿ ಸರಿಯಾದ ಚೀಲೀಕರಣದ ವಸ್ತುಗಳನ್ನು ಉಪಯೋಗಿಸಬೇಕು ಎಂಬುದು ಅಧ್ಯಯನಕಾರರ ವಾದ. ರಸಗೊಬ್ಬರಗಳ ದಾಸ್ತಾನನ್ನು ಸರಿಯಾದ ಸ್ಥಳದಲ್ಲಿ ಮಾಡಬೇಕು. ಪ್ರಾಥಮಿಕ, ದ್ವಿಹಂತ, ಮತ್ತುಚಿಲ್ಲರೆ ಹಂತ ಎಂದು ದಾಸ್ತಾನು ಸ್ಥಳಗಳನ್ನು ಗುರುತಿಸಲಾಗಿದೆ. ಹೀಗೆ ಮಾಡುವುದರಿಂದ ರೈತರಿಗೆ ಸರಿಯಾದ ಸ್ಥಳದಲ್ಲಿ ಸರಿಯಾದ ಸಮಯಕ್ಕೆ ರಸಗೊಬ್ಬರಗಳನ್ನು ಪೂರೈಸಬಹುದಾಗಿದೆ. ದಾಸ್ತಾನು ಮಳಿಗೆಗಳ ಸ್ಥಾಪಿಸಲು ಆಯ್ಕೆ ಮಾಡಿಕೊಳ್ಳಬೇಕಾದ ಸ್ಥಳಗಳನ್ನು ಕೆಳಕಂಡ ಅಂಶಗಳ ಮೇಲೆ ನಿರ್ಧರಿಸಲಾಗುತ್ತದೆ. ನಿಯಮಿತವಾಗಿ ಸಾರಿಗೆ ಅನುಕೂಲವಿರುವಂತಹ ಸ್ಥಳ, ವಾಹನಗಳ ಲಭ್ಯತೆ, ದಾಸ್ತಾನು ಮಳಿಗೆಗಳ ಕಡಿಮೆ ಬಾಡಿಗೆಗೆ ದೊರೆಯುವಂತ ವಾತಾವರಣ ಮುಂತಾದವುಗಳು ಇರಬೇಕೆಂದು ಅಧ್ಯಯನಕಾರರು ವಾದಿಸುತ್ತಾರೆ.

ಗ್ರಾಹಕರನ್ನು ತೃಪ್ತಿಪಡಿಸಲು ರಸಗೊಬ್ಬರಗಳ ಮಾರುಕಟ್ಟೆಯ ಗುಣಮಟ್ಟ ಕಾಯ್ದಿಡುವ ವ್ಯವಸ್ಥಿತ ದೃಷ್ಟಿಕೋನ : ಕೆ.ವಿ. ಸುಂದರವದನಮ್

ರಸಗೊಬ್ಬರಗಳ ವ್ಯಾಪಾರದಲ್ಲಿ ರೈತರೇ ಗ್ರಾಹಕರು, ಗ್ರಾಹಕರಿಗೆ ರಸಗೊಬ್ಬರಗಳು ತಲುಪುವಲ್ಲಿ ಅನೇಕ ಹಂತಗಳ ಮೂಲಕ ರೈತರಿಗೆ ಹೋಗುತ್ತದೆ. ಇದು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಳ್ಳುತ್ತದೆ. ಕೆಲವು ರಾಜ್ಯಗಳಲ್ಲಿ ತಯಾರಕರು ರಸಗೊಬ್ಬರಗಳನ್ನು ಚಿಲ್ಲರೆ ವ್ಯಾಪಾರಿಗಳಿಗೆ ನೇರವಾಗಿ ಮಾರುತ್ತಾರೆ. ಕೆಲವು ರಾಜ್ಯಗಳಲ್ಲಿ ರಸಗೊಬ್ಬರಗಳನ್ನು ಸಹಕಾರಿ ಸಂಸ್ಥೆಲಗಳಿಗೆ ಮಾರುತ್ತಾರೆ. ಸಹಕಾರಿ ಸಂಸ್ಥೆಗಳು ತಮ್ಮ ಸೊಸೈಟಿಗಳ ಮೂಲಕ, ರೈತರಿಗೆ ಮಾರಾಟ ಮಾಡುತ್ತಾರೆ, ಉತ್ತರ ಭಾರತದಲ್ಲಿ ರಾಜ್ಯಗಳಲ್ಲಿ ಸಗಟು ವ್ಯಾಪಾರಿಗಳಿಗೆ, ರಸಗೊಬ್ಬರಗಳು ಮಾರಾಟ ಮಾಡುತ್ತಾರೆ. ಸಗಟು ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ, ಚಿಲ್ಲರೆ ವ್ಯಾಪಾರಿಗಳಿಂದ ರೈತರಿಗೆ ಮಾರಾಟ ಮಾಡುತ್ತಾರೆ. ಗ್ರಾಹಕರು ಅಂದರೆ ರೈತರು ತಯಾರಕರು ಚೀಲಗಳ ಮೇಲೆ ನಮೂದಿಸಿರುವ ಗುಣಮಟ್ಟದ ಪಟ್ಟಿಗನುಸಾರವಾಗಿ ರಸಗೊಬ್ಬರಗಳಿದ್ದಿದ್ದರೆ, ಅಥವಾ ತಾವು ಬಯಸಿದಂತೆ ಉತ್ಪನ್ನಗಳಿದ್ದರೆ, ತೃಪ್ತಿ ತರುತ್ತದೆ, ಉದಾಹರಣೆಗೆ ತೇವಾಂಶ, ರಸಗೊಬ್ಬರಗಳ ಗಾತ್ರ, ನೀರಲ್ಲಿ ಕರಗುವ ಗುಣ ಮುಂತಾದವುಗಳ ರಸಗೊಬ್ಬರ ಗುಣಮಟ್ಟವನ್ನು ತಿಳಿಸುತ್ತದೆ, ಇವುಗಳು ಸರಿಯಾದ ಪ್ರಮಾಣದಲ್ಲಿದ್ದರೆ, ರೈತರಿಗೆ ತೃಪ್ತಿ ಸಿಗುತ್ತದೆ, ಕಾರ್ಖಾನೆಗಳಲ್ಲಿ ತಯಾರಿಸುವಾಗ, ಮೇಲೆ ನಮೂದಿಸಿದ ಎಲ್ಲಾ ಅಂಶಗಳನ್ನು ಸರಿಯಾದ ಪರಮಾಣದಲ್ಲಿರುವಂತೆ ನೀಡಬೇಕೆಂದರೆ ಗ್ರಾಹಕರನ್ನು ತೃಪ್ತಿಪಡಿಸಬಹುದು ಎಂದು ಅಧ್ಯಯನಕಾರರು ಹೇಳುತ್ತಾರೆ. ಎರಡನೇಯದಾಗಿ ಮಾರಾಟ ಮಾಡುವ, ವ್ಯವಸ್ಥಾಪಕರು ಕಂಪನಿಗಳಲ್ಲಿ ಅನುಭವಶೀಲರಾಗಿದ್ದಾರೆ ಗ್ರಾಹಕರ ಜೊತೆಗ ನಿರಂತರವಾಗಿ ಸಂಪರ್ಕವಿಟ್ಟುಕೊಂಡು ಇವರು ನಿರ್ವಹಣೆಯ ಕೌಶಲ್ಯವನ್ನು ಕರಗತ ಮಾಡಿಕೊಂಡಿರುತ್ತಾರೆ.

ಇದರಿಂದಾಗಿ ಇವರು ಗ್ರಾಹಕರನ್ನು ತೃಪ್ತಿಪಡಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಎಂದು ಅಧ್ಯಯನಕಾರರು ತಿಳಿಸಿದ್ದಾರೆ, ರಸಗೊಬ್ಬರಗಳ ಗುಣಮಟ್ಟದ ಜೊತೆ ಕೆಳಕಂಡ ಅಂಶಗಳಿದ್ದರೆ, ಚೀಲೀಕರಣ ಅ) ಬೇಡಿಕೆಯನ್ನು ಕಾಯ್ದಿರಿಸುವ ಕ್ರಿಯೆ ಬಿ) ಸಮರ್ಪಕ ವಿತರಣೆಯ ವ್ಯವಸ್ಥೆ ಸಿ) ಉತ್ಪನ್ನ ಅಭಿವೃದ್ಧಿ ಉ) ಚಿಲ್ಲರೆ ಸೇವೆ ಮುಂತಾದವುಗಳನ್ನು ಸರಿಯಾದಿ ಅನುಸರಿಸಿದರೆ ಗ್ರಾಹಕರ ತೃಪ್ತಿ ಮತ್ತಷ್ಟು ಹೆಚ್ಚಿಸಬಹುದು.

ಮಾರುಕಟ್ಟೆಯ ಕೌಶಲ್ಯ, ಮತ್ತು ನಾಯಕತ್ವ - ಎನ್. ಲಕ್ಷ್ಮೀನಾರಾಯಣ

ಮಾರಾಟ ಎಂದರೆ ಮಾರುಕಟ್ಟೆಯಲ್ಲಿ ಉತ್ಪನ್ನವಾದ ಅಭಿವೃದ್ಧಿಯಲ್ಲಿ (Promotion) ಆದ್ದರಿಂದ ಮಾರಾಟಗಾರರು, ತಮ್ಮ ಗ್ರಾಹಕರ ಬಗ್ಗೆ ಜ್ಞಾನ ಹೊಂದಿರಬೇಕು. ವ್ಯಾಪಾರ ವಹಿವಾಟಿನ ಬಗ್ಗೆಯು ಜ್ಞಾನ ಹೊಂದಿರಬೇಕು. ಒಳ್ಳೆ ಗುಣಗಳುಳ್ಳ ಕಂಪನಿಯ ಲಕ್ಷಣಗಳು ಈ ರೀತಿ ಇವೆ ಎಂದು ಅಧ್ಯಯನಕಾರರು ಹೇಳಿರುವರು. ಅ) ಪ್ರತಿ ಟನ್ನಿಗೂ ಮಾರಾಟ ವೆಚ್ಚ ಅ) ಹಿಂದಿನ ಸಂಗ್ರಹ ಒಯ್ಯುವ ವೆಚ್ಚ (Inventory carrying cost) ಇ) ಕೈ ನಿರ್ವಹಣೆ ಮತ್ತು ಸಾಗಾಣಿಕೆ ವೆಚ್ಚ ಈ) ಪಡೆಯುವ ಉತ್ಪನ್ನಗಳ ಮೇಲಿನ ಬಡ್ಡಿ ಉ) ಒಳ್ಳೆಯ ಮತ್ತ ಕೆಟ್ಟ ದಿನಗಳಲ್ಲಿ ನಿರ್ವಹಣೆಯಲ್ಲಿರುವ ವ್ಯತ್ಯಾಸ ಇದರ ಜೊತೆಗೆ ಕಂಪನಿಗಳು ಭಾರತದಲ್ಲಿರುವ 2.5 ಲಕ್ಷ ರಸಗೊಬ್ಬರ ಮಾರಾಟ ಮಾಡುವ ಮಳಿಗೆಗಳ ಜೊತೆ, ಕಂಪನಿಗಳು ನಿರಂತರ ಸಂಪರ್ಕವಿಟ್ಟುಕೊಂಡು ಕ್ಷೇತ್ರ ಸಿಬ್ಬಂದಿಯ ತರಹ ಕೆಲಸ ಮಾಡಬೇಕೆಂದು ಅಧ್ಯಯನಕಾರರು ಹೇಳುತ್ತಾರೆ.

ಅಧ್ಯಾಯ-2

ಗ್ರಾಮಗಳ ಅಧ್ಯಯನ

ಕೋಲಾರ ಜಿಲ್ಲೆಯ ಅಧ್ಯಯನ:

ಅ) ಮಾರ್ಜೇನಹಳ್ಳಿಯ ಗ್ರಾಮ:

ಗ್ರಾಮ ಪರಿಚಯ: ಮಾರ್ಜೇನಹಳ್ಳಿ ಕೋಲಾರದಿಂದ 6 ಕಿ.ಮೀ. ಗಳ ದೂರದಲ್ಲಿದೆ. ಇದು ಮಣಿ ಘಟ್ಟ ರಸ್ತೆಯಲ್ಲಿ ಬರುತ್ತದೆ. ಇಲ್ಲಿಂದ ಸರಕಾರಿ ಬಸ್ಸು ಸೇವೆಯೂ ಇದೆ, ಇದರ ಜೊತೆಗೆ ಖಾಸಗಿ ವಾಹನಗಳಾದ ರಿಕ್ಷಾ, ಟೆಂಪೋಗಳನ್ನು ಓಡಿಸಲಾಗುತ್ತದೆ. ಮಾರ್ಜೇನಹಳ್ಳಿ ಸುವರ್ಣ ಗ್ರಾಮದಡಿಯಲ್ಲಿ ಕೋಲಾರ ಜಿಲ್ಲಾಡಳಿತ ಆಯ್ಕೆ ಮಾಡಲಾಗಿದೆ. ಇದು ಕೋಲಾರದಿಂದ ಈಶಾನ್ಯ ದಿಕ್ಕಿನಲ್ಲಿದೆ (North east). ಇಲ್ಲಿ ಅಭಿವೃದ್ಧಿಯನ್ನು ಪರಿಶೀಲಿಸಿದರೆ, ಇಲ್ಲಿ ಅಭಿವೃದ್ಧಿ ಸಾಧಾರಣ ಮಟ್ಟದಲ್ಲಿ ಆಗಿದೆ, ಊರಿಗೆ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ, ಮೂರು ನಾಲ್ಕು ಮನೆಗಳು ಬಿಟ್ಟರೆ ಉಳಿದ ಮನೆಗಳು ಸಣ್ಣ ಮಣ್ಣಿನ ಕಚ್ಚಾ ಮನೆಗಳು, ಇಲ್ಲಿನ ಜನರಿಗೆ ಸರಕಾರ ಏನೇನು ಕಾರ್ಯ ಕ್ರಮ ಹಮ್ಮಿಕೊಂಡಿದೆ ಎಂಬುದು ಫಲಾನುಭವಿಗಳಿಗೆ ಸರಿಯಾಗಿ ತಿಳಿದಿಲ್ಲ ಇಲ್ಲಿ ಸಮೀಕ್ಷೆ ಮಾಡಿದ ಮೂವ್ವತ್ತು ರೈತರಲ್ಲಿ (83.33%) 25 ರೈತರಿಗೆ ಸರಕಾರ ಕಾರ್ಯಕ್ರಮದ ಮಾಹಿತಿಯೇ ಇಲ್ಲ ; ಉಳಿದ 5 ಜನ ರೈತರಿಗೆ (16.66) ಇಲ್ಲಿ ಗ್ರಾಮ ಪಂಚಾಯಿತಿ ಹೊಸ ಕಟ್ಟಡವಿದೆ. ಗ್ರಾಮ ಪಂಚಾಯಿತಿಯು ಒಟ್ಟು ಏಳು ಸುತ್ತಮುತ್ತಲಿನ ಹಳ್ಳಿಗಳನ್ನು ಒಳಗೊಂಡಿದೆ. ಆದರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಪಕ್ಕದ ಕಾಮಧೇನುಹಳ್ಳಿಯವರು ಇಲ್ಲಿ ಮೂಲಭೂತ ಸೌಕರ್ಯಗಳಾದ ಶಿಕ್ಷಣ, ಆರೋಗ್ಯ, ಕುಡಿಯುರ ನೀರು, ಸಂಪೂರ್ಣವಾಗಿ ಅಭಿವೃದ್ಧಿಯಾಗಿಲ್ಲ. ಆದರೆ ಅಚ್ಚುಕಟ್ಟಾದ ಡಾಂಬರು ರಸ್ತೆಗಳನ್ನು ಮಾಡಲಾಗಿದೆ.

ಯಾವುದೇ ಅವಶ್ಯಕತೆಗಳಿಗೆ ಇಲ್ಲಿನ ಜನ ನೇರವಾಗಿ ಕೋಲಾರಕ್ಕೆ ಬರುತ್ತಾರೆ, ದಿನಸಿ ಅಂಗಡಿಗಳು ಔಷಧಿ ಅಂಗಡಿಗಳು , ರಸಗೊಬ್ಬರ ಮತ್ತು ಕೃಷಿ ಔಷಧಿ ಅಂಗಡಿಗಳು ಇಲ್ಲಿ ಇಲ್ಲ. ಆದರಿಂದಾಗಿ ತಕ್ಷಣ ಆರೋಗ್ಯ ಸೇವೆಗಾಗಲೀ, ದಿನಸಿ ಕೊಂಡುಕೊಳ್ಳಲು ಕೋಲಾರ ನಗರಕ್ಕೆ ಬರಬೇಕಾಗುತ್ತದೆ. ಆದರೆ ಗ್ರಾಮದಲ್ಲಿ ಇದು ಕೋಲಾರದಿಂದ 6 ಕಿ.ಮೀ. ದೂರದಲ್ಲಿದ್ದರೂ ಅಭಿವೃದ್ಧಿಯನ್ನು ಕಾಣದಾಗಿದೆ. ಇಲ್ಲಿನ ಜನ ಉಸಿರಾಡುವಂತಾಗಿರಲು ಇಲ್ಲಿ ರಸ್ತೆಗಳು ಅಭಿವೃದ್ಧಿಯಾಗಿರುವುದರಿಂದಲೆ , ಕೋಲಾರಕ್ಕೆ 15 ನಿಮಿಷಗಳಲ್ಲಿ ಈ ಹಳ್ಳಿಯಿಂದ ಜನ ಬರಬಹುದು.

ಜಾತಿ ಮತ್ತು ಭೂಮಿ:

ಇಲ್ಲಿ ಒಟ್ಟು 120 ಮನೆಗಳಿವೆ. ಇದರಲ್ಲಿ 80 (66.66%) ಮನೆಗಳು ಪರಿಶಿಷ್ಟ ಜಾತಿ ಮನೆಗಳಾಗಿವೆ. ಉಳಿದಂತೆ ಪಕ್ಕಲಿಗರು 15 (12.55%) ಮನೆ, ಆಚಾರರು 3 ಮನೆ (2.5%) , ಕುಂಬಾರರು 2 ಮನೆ (1.6%) ಉಳಿದ ಜಾತಿಗಳು ಇಲ್ಲಿ ಕಂಡುಬರುವುದಿಲ್ಲ. ಇಲ್ಲಿ ಬಹುತೇಕ ಕುಟುಂಬಗಳು ಸಣ್ಣ ಹಿಡುವಳಿದಾರರು, ಎರಡು ಮನೆಗಳು ಹತ್ತು ಎಕರೆಯಷ್ಟು ಜಮೀನು ಹೊಂದಿರುವುದು ಬಿಟ್ಟರೆ ಸಮೀಕ್ಷೆಯಲ್ಲಿ ದೊರೆತ ಮಾಹಿತಿ ಪ್ರಕಾರ 30 ಜನ ರೈತರಲ್ಲಿ 25 (83.33%) ಜನ ರೈತರು 2 ಎಕರೆಗಿಂತ ಕಡಿಮೆ

ಜಮೀನು ಹೊಂದಿರುವವರು; ಉಳಿದ 5 ಜನರಲ್ಲಿ ಇಬ್ಬರು (6.66%) ಹತ್ತು ಎಕರೆಗಳಷ್ಟು ಜಮೀನು ಹೊಂದಿದ್ದಾರೆ ಉಳಿದ ಮೂವರು (10.00%) 5 ಎಕರೆಗಿಂತ ಜಾಸ್ತಿ ಮತ್ತು ಹತ್ತು ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿದ್ದಾರೆ, ಈ ಗ್ರಾಮದ ಮುಖ್ಯ ಲಕ್ಷಣವೆಂದರೆ, ಇಡೀ ಜನ ಸಂಖ್ಯೆಯ ಶೇ. 66.66 ರಷ್ಟು ಪರಿಶಿಷ್ಟ ಜಾತಿಯವರು ಈ ಗ್ರಾಮದಲ್ಲಿರುವುದು, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗವಾದ ಕುರುಬ, ಗೊಲ್ಲ, ಈಡಿಗರಿಲ್ಲ, ಪ್ರಬಲ ಕೋಮುವಾದ ವಕ್ಕಲಿಗರು , ಜನ ಸಂಖ್ಯಯಿಂದ ಅತಿ ಕಡಿಮೆ ಇರುವುದು, ಆದರೂ ಕೋಲಾರದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜನ ಸಂಖ್ಯೆಯಲ್ಲಿ ದಟ್ಟವಾಗಿರುವ ವಕ್ಕಲಿಗರ ಪ್ರಭಾವ ಇಲ್ಲಿ ನಿಚ್ಚಳವಾಗಿ ಕಾಣುತ್ತದೆ. ಪರಿಶಿಷ್ಟ ಜಾತಿ ಯವರು ಯಾವುದೇ ಕೆಲಸಗಳಿಗೂ ಒಕ್ಕಲಿಗರನ್ನು ಆಶ್ರಯಿಸಬೇಕಾದ ಸನ್ನಿವೇಶವನ್ನು ಇಲ್ಲಿ ಕಾಣಬಹುದಾಗಿದೆ. ವಕ್ಕಲಿಗರ ಮನೆಗಳಲ್ಲಿ ಊಟ ಮಾಡಬಹುದಾದ ಜಾತಿಗಳಾದ ಆಚಾರರು, ಕುಂಬಾರರು ಯಾವುದೇ ರಾಜಕೀಯ ಪ್ರಜ್ಞೆ ಇಲ್ಲದೆ ಇರುವಂತಹವರು. ಇವರ ಜನಸಂಖ್ಯೆ ಗ್ರಾಮದಲ್ಲಿ 10 ಕ್ಕಿಂತ ಜಾಸ್ತಿ ಇಲ್ಲ. ಪರಿಶಿಷ್ಟ ಜಾತಿಯೇ ಪ್ರಬಲವಾಗಿರುವ ಮಾರ್ಜೇನಹಳ್ಳಿಯಲ್ಲಿ, ಅಲ್ಪಸಂಖ್ಯಾತರಾದ ಒಕ್ಕಲಿಗರೆ ಕಾರುಬಾರು ನಡೆಸುತ್ತಿರುವುದು ಗಮನಾರ್ಹವಾದ ಅಂಶ. ಇಲ್ಲಿ ನಾಲ್ಕು ದೇವಸ್ಥಾನಗಳಿವೆ. ಎರಡು ಶ್ರೀರಾಮ ದೇವರ ದೇವಸ್ಥಾನ, ಒಂದು ಗಂಗಮ್ಮ ದೇವಸ್ಥಾನ, ಯಲ್ಲಮ್ಮ ದೇವಸ್ಥಾನ. ಈ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿಯವರ ಪ್ರವೇಶ ನಿಷಿದ್ದ , ಆದರಿಂದ ಪರಿಶಿಷ್ಟ ಜಾತಿಯವರೆ, ತಮ್ಮದೇ ದೇವಸ್ಥಾನ ಹೊಂದಿದ್ದಾರೆ. ತಾವು ಹೊಂದಿರುವ ದೇವಸ್ಥಾನಕ್ಕೆ ಪರಿಶಿಷ್ಟ ಜಾತಿಯವರು ಹೋಗಬಹುದು. ಉಳಿದಂತಹ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿಯವರ ಪ್ರವೇಶವಿಲ್ಲ. ಈ ಗ್ರಾಮದಲ್ಲಿ ಒಂದು ವಿಶಿಷ್ಟತೆ ಇದೆ ಅದೇನೆಂದರೆ ಪರಿಶಿಷ್ಟ ಜಾತಿಯವರೆ ಶೇ. 66 ರಷ್ಟಿದ್ದು, ಉಳಿದ ಸವರ್ಣೀಯ ಶೇ. 34 ರಷ್ಟುದ್ದು ಇಲ್ಲಿ ಅಸ್ಪೃಶ್ಯತೆ ಇನ್ನೂ ಹೋಗಿಲ್ಲ.

ಆದ್ದರಿಂದ ನಾವು ಒಂದು ನಿರ್ಣಯಕ್ಕೆ ಬರಬಹುದು. ಪರಿಶಿಷ್ಟ ಜಾತಿಗಳು ಜನಸಂಖ್ಯೆಯಿಂದ ಅಲ್ಪಸಂಖ್ಯಾತರಾಗಿರುವುದರಿಂದ ಶೋಷಣೆ ನಡೆಯುತ್ತಿದೆ ಎಂಬುದನ್ನು ಈ ಹಳ್ಳಿಯ ಅಧ್ಯಯನದ ನಂತರ ಈ ನಿರ್ಣಯವನ್ನು ನಾನು ಬದಲಿಸಬೇಕಾಯಿತು. ಇಲ್ಲಿ ಪರಿಶಿಷ್ಟ ಜಾತಿಯವರೇ ಬಹುಸಂಖ್ಯಾತರು ಆದರೆ ಜನಸಂಖ್ಯೆಗೂ ಆ ಜನಾಂಗದ ಚಲನೆಗೂ ಸಂಬಂಧವಿಲ್ಲ ಎಂಬುದೇ ನನ್ನ ಅಭಿಪ್ರಾಯ. ಪ್ರಜಾಪ್ರಭುತ್ವ ಪದ್ಧತಿಯ ವಯಸ್ಕ ಮತದಾನ ಪದ್ಧತಿಯಲ್ಲಿ ಜನಸಂಖ್ಯಾ ಬಲ ಇರುವ ಜಾತಿಗಳು ಚಲನೆ ಹೊಂದುತ್ತವೆ ಎಂಬ ವಿಶ್ಲೇಷಣೆಗಳನ್ನು ಇಲ್ಲಿನ ಗ್ರಾಮದ ಸ್ವರೂಪವನ್ನು ನೋಡಿದರೆ ಬದಲಿಸಿಕೊಳ್ಳಲೇಬೇಕಾಗುತ್ತದೆ. ಯಾಕೆಂದರೆ ಪ್ರಜಾಪ್ರಭುತ್ವ ಪದ್ದತಿಯಲ್ಲಿ ಸಾಮಾಜಿಕವಾಗಿ ಉಚ್ಚ ಅಂತಸ್ತು, ಆಸ್ತಿ ಹೊಂದಿರುವ ಜಾತಿಗಳು ಇದರ ಜೊತೆಗೆ ಜನಸಂಖ್ಯಾ ಬಲ ಇದ್ದರೆ ಮೇಲ್ಮುಖಿ ಚಲನೆ ಸಾಧ್ಯ ಎಂಬುದು ಈ ಅಧ್ಯಯನದ ಮೂಲಕ ನಿರ್ಧರಿಸಬಹುದು. 120 ಕುಟುಂಬಗಳಲ್ಲಿ 80 ಕುಟುಂಬಗಳಲ್ಲಿ ಪರಿಶಿಷ್ಟ ಜಾತಿಯವರು ಇದ್ದಾರೆ.

ಆದರೆ ಯಾವುದೇ ಮೇಲ್ಮುಖ ಚಲನೆ ಪರಿಶಿಷ್ಟ ಜಾತಿಯಲ್ಲಿ ಕಂಡು ಬರುತ್ತಿಲ್ಲ. ಇಲ್ಲಿ ಬರುವ ಏಳು ಕುಟುಂಬಗಳು ಬೋವಿಗಳನ್ನು ಬಿಟ್ಟರೆ ಇನ್ನು 73 ಕುಟುಂಬಗಳು ಬಲಗೈ ಪಂಗಡದವರು, ಸಮೀಕ್ಷೆ ಮಾಡಿದ ಪ್ರಕಾರ ಒಟ್ಟು 25 ಕುಟುಂಬಗಳು ಎರಡು ಎಕರೆಗಿಂತ ಕಡಿಮೆ ಇರುವಂತಹವರು, ಉಳಿದ 3 (10%) ಕುಟುಂಬಗಳಲ್ಲ ಈಗಾಗಲೇ ತಿಳಸಿರುವಂತೆ ಮಧ್ಯಮ ಆಧಾಯ, ದೊಡ್ಡ ಹಿಳುವಳಿದಾರರು 2 (6.66%) (ಇದ್ದಾರೆ ವಕ್ಕಲಿಗರಲ್ಲಿ ಸಣ್ಣ ರೈತರು ವಿಪುಲವಾಗಿಯೇ ಇದ್ದಾರೆ, ಹಾಗೆ ದೊಡ್ಡ ರೈತರು ಇದ್ದಾರೆ, ಒಟ್ಟಾರೆಯಾಗಿ ಈ ಗ್ರಾಮದಲ್ಲಿ ಸಣ್ಣ ಹಿಡುವಳಿದಾರರೆ ವಿಪುಲವಾಗಿದ್ದಾರೆ 120 ಕುಟುಂಬಗಳಲ್ಲಿ 110 ಕ್ಕೂ ಹೆಚ್ಚು ಕುಟಂಬಗಳಿಗೆ 5 ಎಕರೆಗಿಂತ ಕಡಿಮೆ ಪ್ರಮಾಣದ ಭೂಮಿಯನ್ನು ಹೊಂದಿದ್ದಾರೆ. ಇನ್ನೂ ಹತ್ತು ಕುಟುಂಬಗಳು 5 ಎಕರೆಗಿಂತ ಜಾಸ್ತಿ ಭೂಮಿಯನ್ನು ಹೊಂದಿದ್ದಾರೆ.

ವಿಕೇಂದ್ರೀಕರಣದ ಸ್ವರೂಪ:

ಇಲ್ಲಿನ ಗ್ರಾಮ ಪಂಚಾಯಿತಿಗೆ ಎಂಟು ಹಳ್ಳಿಗಳು ಸೇರುತ್ತವೆ. ಮಾರ್ಜೇನಹಳ್ಳಿ , ಕಾಮಧೇನುಹಳ್ಳಿ, ಚಿನ್ನಾಪುರ ಮತ್ತು ಯಳಚಿಪುರ, ಪಾರೆ ಹೊಸಹಳ್ಳಿ, ವರದೇನಹಳ್ಳಿ ಮತ್ತು ಕೂತಂಡಹಳ್ಳಿ, ಯಲವಾರ ಮತ್ತು ಬೆಸ್ತೇನಹಳ್ಳಿ, ಮಾರ್ಜೇನಹಳ್ಳಿ ಗ್ರಾಮ ಪಂಚಾಯಿತಿಗೆ ಮೂವರು ಸದಸ್ಯರಿದ್ದಾರೆ, ಸಾಮಾನ್ಯ ವರ್ಗ ಒಬ್ಬರು, ಪರಿಶಿಷ್ಟ ಜಾತಿ ಇಬ್ಬರು, ಈಗಾಗಲೆ ತಿಳಿಸಿರುವಂತೆ ಪರಿಶಿಷ್ಟ ಜಾತಿಯವರು ಶೇ. 66 ರಷ್ಟಿರುವುದರಿಂದ ಇಲ್ಲಿ ಎರಡು ಗ್ರಾಮ ಪಂಚಾಯಿತಿ ಸದಸ್ಯತ್ವವನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದೆ. ಕಾಮಧೇನುಹಳ್ಳಿಯಿಂದ ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ ಒಂದು ಪರಿಶಿಷ್ಟ ಜಾತಿ ಇನ್ನೊಂದು ಪ್ರವರ್ಗ 'ಎ' ಗುಂಪಿಗೆ ಹೋಗಿದೆ. ಬೆಸ್ತೇನಹಳ್ಳಿ ಮತ್ತು ಯಲವಾರ ಸೇರಿ ಮೂರು ಜನ ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ ಎರಡು ಮತ್ತು ಸಾಮಾನ್ಯ ಗುಂಪು ಒಬ್ಬ ಸದಸ್ಯರಿದ್ದರೆ ವರದೇನಹಳ್ಳಿ ಹಾಗೂ ಕೂತಂಡಹಳ್ಳಿ ಸೇರಿ ಒಂದು ಪರಿಶಿಷ್ಟ ಜಾತಿ ಮತ್ತು ಪ್ರವರ್ಗ ಒಂದಕ್ಕೆ ಒಬ್ಬರಿದ್ದಾರೆ, ಪಾರೆಹೊಸಹಳ್ಳಿ ಸೇರಿ ಒಂದು ಪರಿಶಿಷ್ಟ ಜಾತಿ ಒಂದು ಸಾಮಾನ್ಯ ವರ್ಗವಿದೆ. ಮಾರ್ಜೇನಹಳ್ಳಿಯ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಟ್ಟು 8 ಗ್ರಾಮಗಳು ಬರುತ್ತವೆ. ಇದನ್ನು ಈಗಾಗಲೇ ತಿಳಿಸಿರುವೆ. ಗ್ರಾಮ ಪಂಚಾಯತಿ ಇದೆಯಾದರು ಇಲ್ಲಿ ಸರಿಯಾಗಿ ಕೆಲಸಗಳು ಆಗುತ್ತಿಲ್ಲ ಎಂಬ ದೂರು ಸಹ ಇದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿಯವರಿಗೆ ಹಾಗೂ ಬಡವರಿಗೆ, ಸಹಾಯಧನದ ಮೂಲಕ ನೀಡುವ ಮನೆಗಳಿಗೆ ವರ್ಷಾನುಗಟ್ಟಲೆ ಅಲೆದಾಡಬೇಕೆಂಬುದೆ ಬಹಳಷ್ಟು ಜನರ ದೂರು, ಇಲ್ಲಿ ಬರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮುಂತಾದ ನೌಕರರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂಬ ದೂರುಗಳಿವೆ ಅಧಿಕಾರ ವಿಕೇಂದ್ರೀಕರಣವಾಗಿ ಒಂದೂವರೆ ದಶಕಗಳು ಕಳೆದಿದ್ದರೂ ಗ್ರಾಮ ಪಂಚಾಯಿತಿಗಳು ಸಶಕ್ತವಾಗಿ ಕೆಲಸ ನಿರ್ವಹಿಸದಿರುವುದಕ್ಕೆ ಮಾರ್ಜೇನಹಳ್ಳಿಯೇ ಉದಾಹರಣೆಯಾಗಿದೆ.

ಇದು ಕೋಲಾರದಿಂದ ಆರು ಕಿ.ಮೀ. ದೂರದಲ್ಲಿದ್ದರು, ಕುಗ್ರಾಮವಾಗಿಯೇ ಉಳಿದಿದೆ. ಇಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಹೋಟೇಲುರಗಳು ಇಲ್ಲ. ಒಂದು ಸಣ್ಣ ಡಬ್ಬ ಅಂಗಡಿ ಇದೆ ಬೀಡಿ, ಸಿಗರೇಟು ಎಲೆ ಅಡಿಕೆ ಇತ್ಯಾದಿ ವಸ್ತುಗಳನ್ನು ಇಲ್ಲಿ ಮಾರಾಟ ಮಾಡಲಾಗುತ್ತದೆ. ಮಾರ್ಜೇನಹಳ್ಳಿಯಲ್ಲಿ ಕಂಡು ಬರುವ ಅಂಶಗಳೆಂದರೆ ಇನ್ನೂ ಅಭಿವೃದ್ಧಿಯ ಕಡೆಗೆ ಮುಖ ಮಾಡಿ ನಿಲ್ಲದಿರುವದು.

ಉದ್ಯೋಗದ ಸ್ವರೂಪ:

ಇಲ್ಲಿ ಒಂದು ನೀರಿನ ಟ್ಯಾಂಕನ್ನು ನಿರ್ಮಿಸಲಾಗಿದೆ. ಆದರೆ ಆ ನೀರಿನ ಟ್ಯಾಂಕ್ ಈಗ ಕಾರ್ಯನಿರ್ವಹಿಸುತ್ತಿಲ್ಲ. ಬಹಳಷ್ಟು ಜನರು ಕುಡಿಯುವ ನೀರಿಗೆ ಕೊಳವೆ ಬಾವಿಗಳ ಮೇಲೆ ಅವಲಂಬಿತರಾಗಿದ್ದಾರೆ, 10 ಹೆಕ್ಟೇರ್ ವಿಸ್ತೀರ್ಣದ ಕೆರೆ ಇದೆ, ಇದು ಬೆಳೆಗಳಿಗೆ ನೀರೊದಗಿಸುವ ಕೆರೆ ಆದರೆ, ಇದು 10-15 ವರ್ಷಗಳಿಗೊಮ್ಮೆ ತುಂಬುತ್ತದೆ. ಆದ್ದರಿಂದ ರೈತರಿಗೆ ವ್ಯವಸಾಯಕ್ಕೆ ಕೊಳವೆ ಬಾವಿಗಳೇ ಆಧಾರ, ಕಲ್ಲಿನ ಬಾವಿಗಳು 8 ಇವೆ. (32%) ಈ 8 ಬಾವಿಗಳೆಲ್ಲವು ಒಣಗಿ ಹೋಗಿವೆ, ಈ ಬಾವಿಗಳಿಂದ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ರೈತರೆ ಹೇಳುವಂತೆ ಈ ಬಾವಿಗಳಲ್ಲಿ ಒಂದು ತೊಟ್ಟು ನೀರು ಇರುವುದಿಲ್ಲ. 15(60%) ಕೊಳವೆ ಬಾವಿಗಳಿವೆ. ಅನುಕೂಲಸ್ಥ ರೈತರು ಬಹುತೇಕವಾಗಿ ಕೊಳವೆಬಾವಿಗಳನ್ನು ಹೊಂದಿದ್ದಾರೆ. ಈ ಕೊಳವೆ ಬಾವಿಗಳು ನೀರಾವರಿಗೆ ಮತ್ತು ಕುಡಿಯುವುದಕ್ಕೆ ಉಪಯೋಗಿಸಲ್ಪಡುತ್ತವೆ. ಇಲ್ಲಿ ಉಷ್ಣ ಶೀತ ಮಿಶ್ರಿತ ವಾತಾವರಣ ಇದೆ. ಮಳೆ ಎಲ್ಲ ವರ್ಷಗಳಲ್ಲೂ ಆಗುವುದಿಲ್ಲ. ಆದ್ದರಿಂದ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಕೊಳವೆ ಬಾವಿಗಳಲ್ಲಿ ನೀರು ಸಿಗಬೇಕಾದರೆ 800 ಅಡಿಗಳಿಗಿಂತ ಹೆಚ್ಚು ಆಳಕ್ಕೆ ಇಳಿಸಬೇಕಾಗುತ್ತದೆ, ಇತ್ತೀಚಿಗೆ ಚಾಲ್ತಿಯಲ್ಲಿರುವ ಅಂತರ್ಜಲ ಹೆಚ್ಚಿಸುವ ಮಳೆ ಕೊಯ್ಲಿನ ಬಗ್ಗೆ ಇಲ್ಲಿ ಹೆಚ್ಚು ಜನರಿಗೆ ಅರಿವಿಲ್ಲ. ಮಣ್ಣಿನ ಸಂರಕ್ಷಣೆಯ ಬಗ್ಗೆಯೂ ಹೆಚ್ಚು ಅರಿವಿಲ್ಲ ಇಲ್ಲಿನ ಭೂಮಿ ಫಲವತ್ತಾದ ಕೆಂಪು ಮಣ್ಣಿನ ಭೂಮಿ. ಈ ಭೂಮಿಯಲ್ಲಿ ಏಕದಳ ಧಾನ್ಯಗಳು ದ್ವಿದಳ ದಾನ್ಯಗಳನ್ನು ಹಾಗೂ ತರಕಾರಿ ಹಿಪ್ಪು ನೇರಳೆ ಸೊಪ್ಪನ್ನು ಬೆಳೆಯಲಾಗುತ್ತದೆ. ಇಲ್ಲಿ ಸುಧಾರಿತ ರಾಗಿ ತಳಿಗಳು ಹಾಗೂ ತೊಗರಿ ತಳಿಗಳನ್ನು ಬೆಳೆಯಲಾಗುತ್ತದೆ. ಹಾಗೆಯೇ ಹೊಸ ಹಿಪ್ಪು ನೇರಳೆ ತಳಿಗಳನ್ನು ಇಲ್ಲಿ ಬೆಳೆಯುಲಾಗುತ್ತದೆ., ಇಲ್ಲಿ ಹಿಪ್ಪು ನೇರಳೆ ಬೆಳೆದು ಸಣ್ಣ ಪ್ರಮಾಣದಲ್ಲಿ ರೇಷ್ಮೆ ಉದ್ಯೋಗವನ್ನು ಕೈಗೊಳ್ಳುತ್ತಾರೆ. ಕೃಷಿ ಮೇಲೆ ಅವಲಂಬಿತವಾಗಿರುವವರು ಒಟ್ಟು 1200 ಜನ ಸಂಖ್ಯೆಯಲ್ಲಿ 100 (8.33%) ಜನವಷ್ಟೆ. ಇನ್ನೂ 800 (66%) ಜನ ಕೂಲಿಗಳಾಗಿ, ಪಕ್ಕದ ಊರುಗಳಿಗೆ ವಲಸೆ ಹೋಗುತ್ತಾರೆ. ಮುನ್ನೂರು (25%) ಜನ ಕೃಷಿಯೇತರ ಕೂಲಿಗಳು ಇವರು ಮರಗೆಲಸದವರು, ಗಾರೆ ಕೆಲಸದವರು ಪೇಂಟರಗಳು ಹೀಗೆ ವಿವಿಧ ಕೃಷಿಯೇತರ ಚಟುವಟಿಕೆಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಮೂವತ್ತು ಜನರ ಸಮೀಕ್ಷೆಯಲ್ಲಿ ಕಂಡು ಬಂದ ಅಂಶವೆಂದರೆ 20 (66.66%) ಜನ ಕೃಷಿ ಕೂಲಿಗಳು 5 ಜನ

ಕೃಷಿಯೇತರ ಕೂಲಿಗಳು ಇನ್ನು 5(16.66%) ಜನ ವ್ಯವಸಾಯಗಾರರು, ಇಲ್ಲಿ ಮುಖ್ಯವಾಗಿ ಕಂಡು ಬರುವುದೇನೆಂದರೆ ಸಣ್ಣ ಹಿಡುವಳಿದಾರರೆ ಅಧಿಕ ಪ್ರಮಾಣದಲ್ಲಿರುವುದರಿಂದ, ಇವರಿಗೆ ವ್ಯವಸಾಯ ಆರ್ಥಿಕವಾಗಿ ಸಬಲವಾಗಿಲ್ಲ. ಕೃಷಿಯಿಂದ ವರ್ಷಕ್ಕೆ ಬರುವ ಆದಾಯ ರೂ. 8000 ರೂಗಳಿಗಿಂತ ಕಡಿಮೆ. ಆದ್ದರಿಂದ ಬಹಳಷ್ಟು ಜನ ಕೃಷಿಯನ್ನು ಅವಲಂಬಿಸದೆ ನೆರೆಯ ಕೋಲಾರ ನಗರಕ್ಕೆ ಕೂಲಿಯನ್ನರಸುತ್ತ ಬರುತ್ತಾರೆ. ಇವರಿಗೆ ಕೂಲಿಯ ಮೂಲಗಳೆಂದರೆ ಇಟ್ಟಿಗೆ ಗೂಡುಗಳು, ಕಟ್ಟಡ ನಿರ್ಮಾಣ , ಎಣ್ಣೆ ತೆಗೆಯುವ ಮಿಲ್ಲುಗಳು. ಕೃಷಿಯಿಂದ ಬರುವ ವರಮಾನಕ್ಕಿಂತ ನಗರದಲ್ಲಿ ದುಡಿದು ಗಳಿಸುವ ವರಮಾನ ಇವರಿಗೆ ಜೀವನಾಧಾರವಾಗಿದೆ; ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಗೋಚರವಾದದೆಂದರೆ 30 ರೈತ ಪೈಕಿ 22(73.33%) ರೈತರು ಬಡತನದ ರೇಖೆಗಿಂತ ಕೆಳಗಿದ್ದಾರೆ. 6 (20%) ರೈತರು ಸಾಧಾರಣ ಆದಾಯ ಪಡೆಯುತ್ತಿದ್ದಾರೆ. 2 (6.6%) ರೈತರು ದ್ವಿಚಕ್ರ ವಾಹನವನ್ನಿಟ್ಟುಕೊಂಡು ವಾರ್ಷಿಕ ರೂ. 25,000 ವರಮಾನ ಹೊಂದಿದವರಾಗಿದ್ದಾರೆ. ಇಲ್ಲಿ ಬಡತನರೇಖೆಗಿಂತ ಕೆಳಗಿನವರಿಗೆ ಪಡಿತರ ಚೀಟಿ ಸರಿಯಾಗಿ ವಿತರಿಸಲಾಗಿಲ್ಲ. ಇಲ್ಲಿ ಇರುವ ನ್ಯಾಯಬೆಲೆ ಅಂಗಡಿ ಸರಿಯಾಗಿ ಆಹಾರ ದಾನ್ಯಗಳನ್ನು ವಿಲೇವಾರಿ ಮಾಡುವಲ್ಲಿ ಸೋತಿದೆ. ಬಡತನ ರೇಖೆಗಿಂತ ಕೆಳಗಿನವರಿಗೆ ಪಡಿತರ ಚೀಟಿಗಳನ್ನು ಗ್ರಾಮ ಪಂಚಾಯಿತಿ ಸರಿಯಾಗಿ ವಿತರಿಸುತ್ತಿಲ್ಲ. ಸರಕಾರದಿಂದ ಗ್ರಾಮ ಪಂಚಾಯಿತಿಗೆ ಸಂದಾಯವಾಗುವ ಹಣ ಜಿಲ್ಲಾ ಪಂಚಾಯಿತಿಯಿಂದ ಸರಿಯಾಗಿ ಬಿಡುಗಡೆಯಾಗುತ್ತಿಲ್ಲ. ಎಂಬ ದೂರಿದೆ. ಆದ್ದರಿಂದ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾದ ಮಟ್ಟದಲ್ಲಿ ನಡೆಯುತ್ತಿಲ್ಲವೆಂಬ ಅಭಿಪ್ರಾಯವಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲ, ಯಾವುದೇ ರೋಗ ಬಂದರು, ಕೋಲಾರದಲ್ಲಿ ವಿಫುಲವಾಗಿ ಹರಡಿರುವ ಖಾಸಗಿ ವೈದ್ಯಕೀಯ ಕ್ಲಿನಿಕ್ ಗಳಿಗೆ ಅಥವಾ ಸರಕಾರಿ ಆಸ್ಪತ್ರೆಯಾದ ಎಸ್.ಎನ್.ಆರ್. ಆಸ್ಪತ್ರೆಗೆ ಇಲ್ಲಿನ ಜನ ಬರಬೇಕಾಗುತ್ತದೆ. ಇತ್ತೀಚೆಗೆ ತಗುಲಿದ ಚಿಕುನ್ ಗುನ್ಯಾ ರೋಗ ಬಂದಾಗ ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದೆ ಜನರ ಪರಿತಪಿಸುವಂತಾಯಿತು, ಎಂಬುದೇ ಗ್ರಾಮಸ್ಥರ ಅಳಲು, ಸಣ್ಣ ಸಣ್ಣ ಕಾಯಿಲೆಯಿಂದ ನೆಗಡಿ, ಕೆಮ್ಮು ತಲೆ ನೋವಿನಂತ ರೋಗಗಳನ್ನು ಕೋಲಾರಕ್ಕೆ ಹೋಗಬೇಕಾದ ದುಃಸ್ಥಿತಿ ಅದರೆ ಸಮಾಧಾನಕರ ಅಂಶವೆಂದರೆ, ಒಳ್ಳೆ ರಸ್ತೆ ಮತ್ತು ಸಾರಿಗೆ ಸೌಕರ್ಯವಿರುವುದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದಿದ್ದರು ಶ್ರೀಮಂತ ಜನರು ಕೋಲಾರಕ್ಕೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಹೋಗುತ್ತಾರೆ, ಆದರೆ ಬಡವರಿಗೆ ಇದರಿಂದ ತೀರ ತೊಂದರೆಯಾಗಿದೆ ಎಂಬುದೆ ಸಮೀಕ್ಷೆ ವೇಳೆಯಲ್ಲಿ ಕಂಡುಬಂದ ಅಂಶ ಸಮೀಕ್ಷೆ ಮಾಡಿದ ಮೂವತ್ತು ಜನರಲ್ಲಿ (73.3%) 22 ಜನ ಪ್ರಾಥಮಿಕ ಆರೋಗ್ಯ ಕೇಂದ್ರ ಬೇಕು ಎಂದು ಹೇಳುತ್ತಾರೆ ಉಳಿದ 5(16.66%) ಜನ ಸರಕಾರವೆ ಕೋಲಾರಕ್ಕೆ ಹೋಗಲು ಉಚಿತ ಅಂಬ್ಯುಲೆನ್ಸ್ ಸೇವೆ ಒದಗಿಸುವಂತೆ ಹೇಳಿದರು. ಉಳಿದ ಮೂವರು (10%) ಕೋಲಾರ ಸಾಕಷ್ಟು ಹತ್ತಿರವಿರುವುದರಿಂದ ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿ ಬರುವುದಾಗಿ ತಿಳಿಸಿದರು. 1200 ಜನ ಸಂಖ್ಯೆಯಿರುವ ಈ ಗ್ರಾಮದಲ್ಲಿ

ಪ್ರಾಥಮಿಕ ಆರೋಗ್ಯ ಕೇಂದ್ರ ಅವಶ್ಯಕವಾಗಿ ಬೇಕಾಗಿದೆ. ಆದರೆ ಜಿಲ್ಲಾಡಳಿತ ಇದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ, ಚಿಕುನ್ ಗುನ್ಯಾ ಬಂದಾಗ, ಬಹಳಷ್ಟು ಬಡಜನ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿತ್ತು ಕೋಲಾರದ ಸರಕಾರಿ ಆಸ್ಪತ್ರೆ ನೆಪ ಮಾತ್ರಕ್ಕೆ ಇದೆ. ಇದು ರೋಗಿಗಳಿಗೆ ಆಸ್ಥೆಯಿಂದ ಚಿಕಿತ್ಸೆ ನೀಡುವುದಿಲ್ಲ ಎಂಬುದೇ ದೂರು, ಆದರೂ ಬಡವರು ಕೋಲಾರದ ಸರಕಾರಿ ಆಸ್ಪತ್ರೆಯನ್ನು ಆಶ್ರಯಿಸಿದರೆ ಅನುಕೂಲಸ್ಥ ರೈತರು, ಖಾಸಗಿ ನರ್ಸಿಂಗ್ ಹೋಂಗಳಿಗೆ ಹಾಗೂ ಕ್ಲಿನಿಕ್ ಗಳಿಗೆ ಹೋಗಿ ಚಿಕಿತ್ಸೆ ಪಡೆಯುತ್ತಾರೆ. ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದಿರುವುದರಿಂದ ಇಲ್ಲಿನ ಬಡವರು ತೀವ್ರ ಆರೋಗ್ಯದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಗ್ರಾಮದ ನೈರ್ಮಲ್ಯ ಕಾಪಾಡುವುದರಲ್ಲಿ ಸೋತಿದ್ದಾರೆ. ಗ್ರಾಮದ ವ್ಯವಸ್ಥೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆಯಿದ್ದರು, ಕೋಲಾರ ಜಿಲ್ಲಾಡಳಿತ ಇಲ್ಲಿ ಪ್ರಾಥಮಿಕ ಕೇಂದ್ರ ಪ್ರಾರಂಭಿಸಲು ಮೀನ ಮೇಷ ಎಣಿಸುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದೆ 60 ವರ್ಷಕ್ಕಿಂತ ಜಾಸ್ತಿ ವಯಸ್ಸಾಗಿರುವರಿಗೆ ನಿರಂತರವಾಗಿ ಆರೋಗ್ಯ ಕಾಯ್ದುಕೊಳ್ಳಲು ಆಗುತ್ತಿಲ್ಲ. ಈ ಕಡೆ ಕೋಲಾರದಲ್ಲಿರುವ ನರ್ಸಿಂಗ್ ಹೋಂಗಳು ರೋಗಿಗಳಿಂದ ಅಪಾರ ಹಣ ಸುಲಿಯುತ್ತವೆ. ಆದ್ದರಿಂದ 60 ವಯೋಮಿತಿಯ ವೃದ್ಧರಿಗೆ ಒಳ್ಳೆ ಆರೋಗ್ಯ ಇಟ್ಟುಕೊಳ್ಳಬೇಕಾದರೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆ ಇದೆ. ಇದಕ್ಕೆ ಗ್ರಾಮ ಪಂಚಾಯತಿಯ ಸಕಾರತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂಬ ದೂರು.

ಶಿಕ್ಷಣ ಸ್ವರೂಪ:

ಪ್ರಾಥಮಿಕ ಹಾಗೂ ಮಾಧ್ಯಮಿಕ ಎರಡು ಸರಕಾರಿ ಶಾಲೆಗಳಿವೆ. ಹಾಗೂ ಭಾರತರತ್ನ ವಿದ್ಯಾಸಂಸ್ಥೆಯೆಂಬ ಖಾಸಗಿ ಶಾಲೆಯು ಇದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ಇಲ್ಲಿ ಇರುವುದರಿಂದ ನಿರಕ್ಷರತೆಯ ಪ್ರಮಾಣ ಈ ಹಳ್ಳಿಯಲ್ಲಿ ಕಡಿಮೆ ಇದೆ ಸುಮಾರು 120 ಜನ ವಿದ್ಯಾರ್ಥಿಗಳಿರುವ ಈ ಶಾಲೆಯಲ್ಲಿ ಶಿಕ್ಷಕರ ಕೊರತೆಯನ್ನು ಎದುರಿಸಬೇಕಾಗಿದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ಹುಡುಗರಲ್ಲಿ ಓದಿನ ಬಗ್ಗೆ ಆಸಕ್ತಿ ಕೆರಳಿಸುವಲ್ಲಿ ಸೋತಿವೆ ಎಂಬುದೆ ಇಲ್ಲಿನ ಜನರ ಅಭಿಪ್ರಾಯ. ಸಾಕಷ್ಟು ಅಧ್ಯಾಪಕರ ಕೊರೆತಯನ್ನು ಎದುರಿಸಬೇಕಾಗಿದೆ. ಅಧ್ಯಾಪಕರು ಆಸಕ್ತಿ ವಹಿಸಿ, ವಿದ್ಯಾರ್ಥಿಗಳಿಗೆ ಬೋಧಿಸುವಲ್ಲಿ ವಿಫಲರಾಗಿದ್ದಾರೆ, ಇಲ್ಲಿ ಬಹಳಷ್ಟು ಜನ ವಿದ್ಯಾರ್ಥಿಗಳು ಬಡತನದ ರೇಖೆಗಿಂತ ಕೆಳೆಗಿರುವವರ ಮನೆಗಳಿಂದ ಬರುತ್ತಾರೆ. ಆದ್ದರಿಂದ ಅಧ್ಯಾಪಕರು ಇವರ ಬಗ್ಗೆ ಅಷ್ಟು ಕಾಳಜಿ ವಹಿಸುವುದಿಲ್ಲ. ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವುದರಿಂದ ಹಾಜರಾತಿ ಹೆಚ್ಚಾಗಿದೆ ಎಂದು ಸಮೀಕ್ಷೆ ನಡೆಸಿದಾಗ ತಿಳಿದು ಬಂದ ವಿಷಯ. ಮಧ್ಯಾಹ್ನದ ಬಿಸಿಯೂಟ ಒಳ್ಳೆ ಕಾರ್ಯಕ್ರಮ ಎಂಬುದೆ ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯ ಆದರೆ ಪ್ರತಿ ವರ್ಷ ಮಧ್ಯದಲ್ಲೇ ಶಾಲೆ ಬಿಡುವವರ ಸಂಖ್ಯೆ ಜಾಸ್ತಿಯೇ ಇದೆ, ಇದು ಶೇ. 30 ರಷ್ಟಿದೆ. ಎಂಬುದು ಇಲ್ಲಿನ ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯ. ಆದರೆ ಇಲ್ಲಿ ವಿದ್ಯಾರ್ಥಿಗಳ ತಂದೆ ತಾಯಿಯಂದಿರು ಬಹುತೇಕವಾಗಿ ಕೂಲಿಗಳಾಗಿರುವುದರಿಂದ ಇಲ್ಲಿನ

ಶಾಲೆಗೆ ಹೋಗುವುದು ಮಕ್ಕಳಿಗೆ ಅನಿವಾರ್ಯ. ಅನುಕೂಲಸ್ಥರ ಮನೆಗಳ ಮಕ್ಕಳು, ಕೋಲಾರದಲ್ಲಿರುವ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ. ಇವರಿಗೆ ವೇಳೆ ವೇಳೆಗೆ ಊಟ, ಮನೆಯಲ್ಲಿ ಪ್ರೋತ್ಸಾಹ ಇರುವುದರಿಂದ ಸ್ವಾಭಾವಿಕವಾಗಿಯೇ ಇವರು ಎಸ್.ಎಸ್.ಎಲ್.ಸಿ. ಓದಿದ ಮೇಲೆ ಓದು ನಿಲ್ಲಿಸುವುದಿಲ್ಲ ಮುಂದಿನ ಶಿಕ್ಷಣಕ್ಕೆ ನಗರಗಳಿಗೆ ಹೋಗುತ್ತಾರೆ ಆದರೆ ಬಡತನದ ಕುಟುಂಬಗಳಿಂದ ಬಂದಂತಹ ಹುಡುಗರ ಓದು ಎಸ್.ಎಸ್.ಎಲ್.ಸಿಗೆ ನಿಲ್ಲಿಸಬೇಕಾಗುತ್ತದೆ. ಇಲ್ಲಿಗೆ ಒಂದು ಸರಕಾರಿ ಪ್ರೌಢಶಾಲೆ ಮಂಜೂರು ಮಾಡಬೇಕೆಂದು ಇಲ್ಲಿನ ಗ್ರಾಮದ ಹಿರಿಯರು ಕೇಳಿದ್ದರೂ ಇನ್ನೂ ಸರಕಾರಿ ಪ್ರೌಢಶಾಲೆ ಮಂಜೂರಾಗಿಲ್ಲ ಆದರೆ ಪ್ರಾಥಮಿಕ ಶಿಕ್ಷಣವೇ ಉನ್ನತ ಶಿಕ್ಷಣಕ್ಕೆ ತಳಪಾಯ ಆಗಿರುವಾಗ ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡದೆ ಉನ್ನತ ಶಿಕ್ಷಣಕ್ಕೆ ಮಾನ್ಯತೆ ನೀಡಿರುವುದರಿಂದ ಬಹಳಷ್ಟು ಜನರಿಗೆ ಉನ್ನತ ಶಿಕ್ಷಣ ತಲುಪುವಲ್ಲಿ ಸೋತಿದೆ. ಈ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಅವ್ಯವಸ್ಥೆಯ ಆಗರವಾಗಿದೆ. ಗುಣಾತ್ಮಕತೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ನೀಡವಲ್ಲಿ ಸರಕಾರ ಸೋತಿದೆ ಎಂಬುದು ಮಾರ್ಜೇನಹಳ್ಳಿಯನ್ನು ಅಧ್ಯಯನಿಸಿದ ಮೇಲೆ ತಿಳಿಯಿತು.

ನೈರ್ಮಲ್ಯ:

ಇಲ್ಲಿನ ನೈರ್ಮಲ್ಯದ ಬಗ್ಗೆ ಪರಿಶೀಲಿಸಿದರೆ, ಎಲ್ಲ ಹಳ್ಳಿಗಳಿಗಿಂತ ಇಲ್ಲಿಯೂ ಬಾಂಬೆ ಕಕ್ಕಸ್ಸುಗಳು ಸೀಮಿತ ಸಂಖ್ಯೆಯಲ್ಲವೆ, ನೈರ್ಮಲ್ಯದ ಬಗ್ಗೆ ಹಾಗೂ ಸಾರ್ವಜನಿಕ ಶೌಚಾಲಯಗಳ ಬಗ್ಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ, ಇವು ಈ ಹಳ್ಳಿಯನ್ನು ತಲುಪುವಲ್ಲಿ ಸೋತಿವೆ. ಇಲ್ಲಿ ಜನರು ತಮ್ಮ ದೇಹ ಬಾಧೆ ತೀರಿಸಿಕೊಳ್ಳಲು, ಬಯಲಿಗೆ ಹೋಗಬೇಕಾಗಿರುತ್ತದೆ. ಈಗಾಗಲೇ ನಾನು ತಿಳಿಸಿರುವಂತೆ ಅನುಕೂಲಸ್ಥ ಕೆಲವು ರೈತರ ಮನೆಗಳಲ್ಲಿ ಶೌಚಾಲಯಗಳಿವೆ. ಈ ಶೌಚಾಲಯಗಳು 1200 ಜನ ಸಂಖ್ಯೆ ಇರುವ ಈ ಗ್ರಾಮದಲ್ಲಿ 15 ಕ್ಕಿಂತ ಜಾಸ್ತಿ ಇಲ್ಲ. ಇಲ್ಲಿ ಬಹುತೇಕರು ಕೂಲಿಗಳಾಗಿರಬೇಕಾದರೆ ಇವರು ಶೌಚಾಲಯ ಹೊಂದಲು ಸಾಧ್ಯವೆ? ಬದುಕಲು ಇನ್ನೂ ಮಣ್ಣಿನ ಮನೆಗಳ ಆಶ್ರಯದಲ್ಲೆ ಇರಬೇಕಾದರೆ ಶೌಚಾಲಯಗಳನ್ನು ಹೊಂದುವಂತೆ ಹೇಳುವುದು, ಸರಿಯಾದ ಕ್ರಮವಾಗಲಾರದು ಶೌಚಾಲಯಗಳು ಹೊಂದುವವರೆ ಬೇರೆ ವರ್ಗದ ಜನ ಇಲ್ಲಿ ಆ ವರ್ಗದ ಜನರು ಕಡಿಮೆ ಪ್ರಮಾಣದಲ್ಲಿದ್ದಾರೆ. ಇವರು ಸಿಮೆಂಟ್ ಉಪಯೋಗಿಸಿ, ವಿಶಾಲವಾಗಿ ಕಟ್ಟಿಸಿರುವ ಮನೆಗಳು, ಇವುಗಳಿಗೆ ಹೊಂದಿಕೊಂಡಿರುವ ಶೌಚಾಲಯಗಳನ್ನು ನಾವು ಕಾಣಬಹುದಾಗಿದೆ. ಆದರೆ ಇಂತಹವರ ಸಂಖ್ಯೆ ಗ್ರಾಮದಲ್ಲಿ ವಿರಳ, ಇಲ್ಲಿ ಇವರು ಆದಾಯ ಗಣನೀಯವಾಗಿ ಉಳಿದ ವರ್ಗಗಳ ಆದಾಯಕ್ಕಿಂತ ಹೆಚ್ಚಿನದಾಗದೆ. ಆದ್ದರಿಂದ ಇವರ ಆದಾಯಕ್ಕನುಗುಣವಾಗಿ ಇವರು ವಿಶಾಲವಾದ ಸಿಮೆಂಟ್ ಮನೆಗಳನ್ನು ಕಟ್ಟಿಸಿಕೊಂಡು ಶೌಚಾಲಯ.ಗಳನ್ನು ಹೊಂದಿದ್ದಾರೆ. ಇವರು ಸುಸಜ್ಜಿತ ಜೀವನ ನಡೆಸುತ್ತಿದ್ದಾರೆ. ಇವರ

ಭೂ ಹಿಡುವಳಿಗಳ ಗಾತ್ರ 5 ಎಕರೆಗಿಂತ ಮೇಲೆ ಇರುವುದು ಗಮನಾರ್ಹ ಅಂಶ, ಇವರಲ್ಲಿ ಕೆಲವರು ದೂರದ ನಗರಗಳಲ್ಲಿ ಸಹಕಾರಿ ಉದ್ಯೋಗದಲ್ಲಿರುವವರು ಇದ್ದಾರೆ. ಇದರ ಜೊತೆಗೆ ಕೋಲಾರ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ನಡೆಸುವವರು ಇದ್ದಾರೆ, ಆದ್ದರಿಂದಲೇ ಇವರು ವಿಶಾಲವಾದ ಸಿಮೆಂಟ್ ಮನೆಗಳನ್ನು ಕಟ್ಟಿಸಲು ಸಾಧ್ಯವಾಗಿದ್ದು, ಇವರಲ್ಲಿ ಬಹುತೇಕರು ಸವರ್ಣೀಯರೆ? ಆಗಿದ್ದಾರೆ ಪರಿಶಿಷ್ಟ ಜಾತಿಯಿಂದ ಇಂತಹ ಪಕ್ಕಾ ಮನೆಗಳು ಇಲ್ಲವೆ ಇಲ್ಲ. ಆದರೆ ಸವರ್ಣೀಯರಲ್ಲಿ ಕಡಿಮೆ ಭಾಗದಷ್ಟು ಜನರು ಇಂತಹ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಸವರ್ಣೀಯರಲ್ಲೂ ಬಡವರು ವಿಫುಲವಾಗಿದ್ದಾರೆಂಬುದು, ಕಂಡು ಬಂದ ಅಂಶವಾಗಿದೆ. ಬಡತನಕ್ಕೆ ಕಾರಣಗಳನ್ನು ಹುಡುಕಿದರೆ ಬಹುತೇಕವಾಗಿ ಸರಕಾರಿ ಯೋಜನೆಗಳು ಬಡವರನ್ನು ತಲುಪುವಲ್ಲಿ ಸೋತಿರುವುದು ಕಾಣಬಹುದಾಗಿದೆ.

ಮುಖ್ಯವಾಗಿ ಎದ್ದು ಕಾಣುವ ಅಂಶ, ಕೃಷಿ ಹಿಡುವಳಿಗಳ ಗಾತ್ರ ಸಣ್ಣ ಪ್ರಮಾಣದಲ್ಲಿರುವುದು, ಅಂದರೆ ಸಣ್ಣ ರೈತರೇ ಅಧಿಕವಾಗಿರುವುದು ಗ್ರಾಮದಲ್ಲಿ ಕೃಷಿ ಬಿಟ್ಟು ಪರ್ಯಾಯ ಉದ್ಯೋಗ ಸೃಷ್ಟಿಯಾಗುವಲ್ಲಿ ಸೋತಿರುವುದು. ಪರ್ಯಾಯ ಉದ್ಯೋಗಗಳಾದ ನೇಯ್ಗೆ, ಕಮ್ಮಾರಿಕೆ ಕುಂಬಾರಿಕೆ ಮುಂತಾದ ಉದ್ಯೋಗಗಳು ಇಲ್ಲಿ ನೆಲ ಕಚ್ಚಿವೆ, ಈ ಉದ್ಯೋಗ ಗಳನ್ನು ಆಧುನಿಕ ತಂತ್ರಜ್ಞಾನ ಉಪಯೋಗಿಸಿ ಪುನರ್ಶ್ಚೇತನ ಗೊಳಿಸುವಲ್ಲಿ ನಮ್ಮ ಸರಕಾರಗಳು ಸೋತಿರುವುದು ಎದ್ದು ಕಾಣುತ್ತದೆ. ಆದ್ದರಿಂದಲೇ ನಿರುದ್ಯೋಗ, ಕಡಿಮೆ ಆದಾಯ , ಬಡತನ ಹಳ್ಳಿಯ ಜನರನ್ನು ಬಾಧಿಸುತ್ತಿರುವುದು. 1200 ಜನರಲ್ಲಿ ಸರಾಕಾರಿ ಉದ್ಯೋಗ ಕೇವಲ 20 ಜನರಿದ್ದಾರೆ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸಹ 20 ಜನರಿದ್ದಾರೆ. ಕೃಷಿಕೂಲಿ, ಹಾಗೂ ಇನ್ನಿತರ ಶ್ರಮದಾಯಕ ಉದ್ಯೋಗ ಬಿಟ್ಟು 1200 ಜನರಲ್ಲಿ ಕೇವಲ 40 ಜನರು ಮಾತ್ರ ಈ ಗ್ರಾಮದಲ್ಲಿ ಮಾಸಿಕ ನಿಗದಿತ ಸಂಬಳ ಪಡೆಯುವ ಉದ್ಯೋಗಿಗಳು ಇದ್ದಾರೆ, ಇದರಿಂದಾಗಿಯೆ ಈ ಗ್ರಾಮ ಇನ್ನು ಕುಗ್ರಾಮವಾಗಿ ಉಳಿದಿರುವುದು ಉಳಿದಂತವರು ಬಹುಪಾಲು ಅರೆ ಉದ್ಯೋಗಿಗಳು ಇವರ ಉದ್ಯೋಗ ಸಿಗುವುದು ಋತುಮಾನ ಅವಲಂಬಿತವಾಗಿದೆ. ಅಂದರೆ ಒಳ್ಳೆ ಮಳೆ ಬಂದರೆ, ಇವರು ಊರಿನ ರೈತರ ಹೊಲಗಳಲ್ಲಿ ದುಡಿಯುವ ಕೂಲಿ ಕೆಲಸ ಸಿಗುತ್ತದೆ. ಇಲ್ಲದೇ ಹೋದರೆ ಬಹಳಷ್ಟು ಜನರು ನೆರೆಯ ಕೋಲಾರ ಪಟ್ಟಣದಲ್ಲಿ ಗಾರೆ ಕೆಲಸ, ಮರ ಗೆಲಸ, ಪೇಂಟರ್ ಗಳಾಗಿ ಹೋಗುತ್ತಾರೆ. ಇದರಲ್ಲಿ ಬರುವ ಆದಾಯ ಮೂಲಕವೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು, ದಿನನಿತ್ಯದ ಜೀವನ ಸಾಗಿಸಬೇಕು. ಆದ್ದರಿಂದ ಇವರಿಗೆ ವರ್ಷ ಪೂರ್ತಿ ಉದ್ಯೋಗ ಸಿಗುವುದು. ಕಷ್ಟಕರವಾದದ್ದು. ಸಮೀಕ್ಷೆಯಲ್ಲಿ ಕಂಡು ಬಂದ ಅಂಶವೆಂದರೆ 20 (66.66%) ಜನರು ಕೃಷಿ ಕೂಲಿಗಳು 5 (16.66%)ಜನ ವ್ಯವಸಯುಗಾರರು , 5 (16.66%) ಜನ ಕೃಷಿಯೇತರ ಕೂಲಿಗಳು , ಮಾರ್ಜೇನಹಳ್ಳಿಯ ಉದ್ಯೋಗ ಸ್ವರೂಪ ಇಲ್ಲಿ ನೂರು ದಿವಸಗಳಿಗಿಂತ ಕಡಿಮೆ ಉದ್ಯೋಗ ದೊರೆಯುವವರ ಸಂಖ್ಯೆ ವಿಫುಲವಾಗಿದೆ.

25 ಜನ (83.53%) 100 ದಿವಸಗಳಿಗಿಂತ ಕಡಿಮೆ ಉದ್ಯೋಗ ಹೊಂದಿದ್ದಾರೆ (16.66%) 5 ಜನ , 100 ದಿವಸಗಳಿಗಿಂತ ಹೆಚ್ಚು ತೊಡಗಿಸಿಕೊಂಡಿರುತ್ತಾರೆ. ಇನ್ನು 5 (16.66%) ಜನ ಸ್ವಂತ ವ್ಯಾಪಾರವು ಮಾಡಿಕೊಂಡಿದ್ದಾರೆ. ಇದು ಈ ಗ್ರಾಮದ ಉದ್ಯೋಗ ಸ್ವರೂಪ ಸರಕಾರಗಳು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಹೆಚ್ಚಿಸುವುದಾಗಿ ಎಷ್ಟು ಭರವಸೆಗಳನ್ನು ನೀಡಲಿ, ಇನ್ನೂ ಮಾರ್ಜೇನಹಳ್ಳಿಯಂತ ಕುಗ್ರಾಮದಲ್ಲಿ ಯಾವುದೇ ಉದ್ಯೋಗ ಹೆಚ್ಚಳ ಕಂಡುಬರುವುದಿಲ್ಲ. ಉದ್ಯೋಗ ಎಲ್ಲರಿಗೂ ತಿಳಿದಿರುವಂತೆ ಆದಾಯದ ಮೂಲ. ಆದರೆ ಇಲ್ಲಿ ಉದ್ಯೋಗದ ಅವಕಾಶಗಳೇ ಕಡಿಮ ಇರುವಾಗ, ಉದ್ಯೋಗ ದೊರಕಲು ಸಾಧ್ಯವೆ, ಆದರೂ ಇಲ್ಲಿ ಬಡವರು ಕೂಲಿಗಳು, ಬದುಕಬೇಕೆಂಬ ಒಂದೇ ಉದ್ದೇಶದಿಂದ ಉದ್ಯೋಗವನ್ನರಿಸಿ, ನೆರಯ ಕೋಲಾರ ನಗರಕ್ಕೆ ಬರುತ್ತಾರೆ. ಇಲ್ಲಿ ಉದ್ಯೋಗ ಸಿಗುತ್ತದೆಂಬ ಖಾತ್ರಿಯೇನು ಇಲ್ಲ. ಉದ್ಯೋಗ ಸಿಕ್ಕಿದರೆ ಸಿಕ್ಕಿತು ಇಲ್ಲವೆ ಸಂಜೆಗೆ ಬರಿಗೈಲಿ ಗ್ರಾಮಕ್ಕೆ ಹಿಂತಿರುಗುತ್ತಾರೆ. ಇದು ಇಲ್ಲಿನ ಸರ್ವೇ ಸಾಮಾನ್ಯ ಲಕ್ಷಣವಾಗಿದೆ. ಮಾರ್ಜೇನಹಳ್ಳಿಯನ್ನು ಗಮನಿಸಿದರೆ ದುಡಿಯುವ ಎಲ್ಲ ವಯಸ್ಕರಿಗೆ ಉದ್ಯೋಗ ಹಳ್ಳಿಯಲ್ಲೇ ಸಿಗುವುದು ಕಷ್ಟಕರವಾದದ್ದು, ಸರಕಾರಗಳು ಗ್ರಾಮೀಣ ಪ್ರವೇಶದಲ್ಲಿ ಬಡತನ ನಿವಾರಣೆಗೋಸ್ಕರ ಉದ್ಯೋಗ ಸೃಷ್ಟಿಸುತ್ತೇವೆಂದು ಭರವಸೆಕೊಟ್ಟರು, ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಯ ಖಾತ್ರಿ ಇಲ್ಲ ಹಳ್ಳಿಗರೆ ತಮ್ಮ ದೈನಂದಿನ ಜೀವನ ನಿರ್ವಹಣೆಗೆ ಬೇರೆ ಕಡೆ ಉದ್ಯೋಗವರಿಸಿಕೊಂಡು ಹೋಗುವ ಪದ್ಧತಿ ಬಳಕೆಯಲ್ಲಿದೆ. ಆದರೆ ಇದು ಕೂಲಿಗಳಿಗೆ ರೈತರಿಗೆ ಭರಿಸಲಾದ ಕಷ್ಟವಾಗಿದೆ. ಯಾಕೆಂದರೆ ಉದ್ಯೋಗವೆ ನಮ್ಮ ಆರ್ಥಿಕ ಚಟುವಟಿಕೆಗಳ ಜೀವನಾಡಿ ಅಂತಹ ಉದ್ಯೋಗ ಸೃಷ್ಟಿ ನೀತಿಯೇ ಸರಕಾರಗಳಿಗಿಲ್ಲದಿದ್ದರೆ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾಗವುದಾದರೂ ಹೇಗೆ?

ಮೂಲಭೂತ ಸೌಕರ್ಯಗಳು:

ವಿದ್ಯುಚ್ಛಕ್ತಿ (Electricity) :ಈ ಗ್ರಾಮದಲ್ಲಿ ಶೇ. 80 ಕ್ಕಿಂತ ಹೆಚ್ಚು ಮನೆಗಳು ವಿದ್ಯುಚ್ಛಕ್ತಿಯನ್ನು ಹೊಂದಿವೆ, ವಿದ್ಯುಚ್ಛಕ್ತಿ ಗ್ರಾಮದ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಪ್ರಮುಖ ಅಂಶವಾಗಿದ್ದರೂ ಇನ್ನಿತರ ಮೂಲ ಸೌಕರ್ಯಗಳ ಅಭಿವೃದ್ಧಿಯಾಗದೆ, ವಿದ್ಯುಚ್ಛಕ್ತಿ ನೀಡಿದರೆ ಗ್ರಾಮ ಏನಾಗಬಹುದು ಎಂಬುದಕ್ಕೆ ಮಾರ್ಜೇನಹಳ್ಳಿ ಸಾಕ್ಷಿಯಾಗಿದೆ. ಇಲ್ಲಿ ಪಂಪ್ ಸೆಟ್ ಗಳು ಕಡಿಮೆ ಪ್ರಮಾಣದಲ್ಲಿವೆ, 1200 ಜನಸಂಖ್ಯೆ ಹೊಂದಿರುವ ಗ್ರಾಮದಲ್ಲಿ 5 ಕ್ಕಿಂತ ಜಾಸ್ತಿ ರೈತರು ಪಂಪ್ ಸೆಟ್ ಗಳನ್ನು ಹೊಂದಿಲ್ಲ, ಪಂಪ್ ಸೆಟ್ ಗಳಿಗೆ ಇಂಧನ ರೂಪವಾಗಿ ಬಳಸುವ ವಿದ್ಯುಚ್ಛಕ್ತಿಗಿಂತ, ಗೃಹ ಉಪಯೋಗಿಯಾಗಿ ವಿದ್ಯುಚ್ಛಕ್ತಿಯನ್ನು ಬಳಸುವುದನ್ನು ಇಲ್ಲಿ ಕಾಣಬಹುದಾಗಿದೆ, ಬಹುತೇಕ ರೈತರು ಇಲ್ಲಿ ಸಣ್ಣ ಹಿಡುವಳಿದಾರರಾಗಿರುವುದರಿಂದ, ಪಂಪ್ ಸೆಟ್ ಗಳ ಕೊರತೆ ಎದ್ದು ಕಾಣುತ್ತದೆ. ಸಣ್ಣ ಹಿಡುವಳಿದಾರರಿಗೆ ಪಂಪ್ ಸೆಟ್ ಗಳನ್ನು ಹೊಂದುವ ಆರ್ಥಿಕ ಚೈತನ್ಯವಿರುವುದಿಲ್ಲ, ಆದ್ದರಿಂದ ಕೃಷಿಗಾಗಿ ವಿದ್ಯುಚ್ಛಕ್ತಿಯನ್ನು ಹೊಂದಿರುವವರ ಸಂಖ್ಯೆ ವಿರಳ, ಕೆಲವೆ ಹಿಡುವಳಿದಾರರು ಪಂಪ್ ಸೆಟ್ಟುಗಳನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ಇವರ ಹಿಡುವಳಿಯು

ಗಾತ್ರ 5 ಎಕರೆಗಳಿಗಿಂತ ಜಾಸ್ತಿ ಇದೆ. ಇವರು ತರಕಾರಿ ಬೆಳೆಗಳಾದ ಟೊಮೊಟೋ, ಹೂಕೋಸು, ಎಲೆಕೋಸು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಈಗಾಗಲೇ ತಿಳಿಸಿದಂತೆ ಉಳಿದವರು, ಕೂಲಿ, ಸೌದೆ ಮಂಡಿಗಳಲ್ಲಿ ಕೆಲಸ, ಗಾರೆ ಕೆಲಸ, ಮುಂತಾದ ಲಾಭದಾಯಕವಲ್ಲದ ಅತ್ಯಂತ ಶ್ರಮದ ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ವಿದ್ಯುಚ್ಛಕ್ತೀಕರಣ ಗೊಂಡಿದ್ದರೂ. ವಿದ್ಯುಚ್ಛಕ್ತಿ ಚಾಲಿತ ಯಂತ್ರಗಳಿಗೆ ಇಲ್ಲಿ ಕೊರತೆ ಇರುವುದು, ಅವರೆ ವಿದ್ಯುಚ್ಛಕ್ತಿ ಸರಬರಾಜು ದಿನ ಪೂರ್ತಿಯಿರುವುದಿಲ್ಲ ಎಂಬ ದೂರುಗಳು ಇಲ್ಲಿ ಬಂದಿವೆ, ಒಮ್ಮೊಮ್ಮೆ ಎರಡು ದಿವಸಕ್ಕೊಮ್ಮೆ ಮೂರು ದಿವಸಕ್ಕೊಮ್ಮೆ ವಿದ್ಯುಚ್ಛಕ್ತಿ ಸರಬರಾಜಾಗುತ್ತದೆ ಎಂಬುದೇ ಇವರ ಅಳಲು, ಆದ್ದರಿಂದ ವಿದ್ಯುಚ್ ಚಾಲಿತ ಯಂತ್ರಗಳಾದ ಪಂಪ್ ಸೆಟ್ಟನ್ನು ಹೊಂದಿದ್ದ, ರೈತರಿಗೇನು ಉಪಯೋಗವಿಲ್ಲ. ಎಂಬ ಅಂಶವನ್ನು ರೈತರು ಹೇಳಿದರು. ಆದ್ದರಿಂದ ಬಹಳಷ್ಟು ರೈತರು ಪಂಪ್ ಸೆಟ್ ಗಳನ್ನು ಕೊಳ್ಳಲು ಉತ್ಸುಕವಾಗಿಲ್ಲ, ಆದರೆ ಅವರ ಹಿಡುವಳಿಗಳ ಗಾತ್ರ ಪಂಪ್ ಸೆಟ್ ಹೊಂದಲು ಅನಕೂಲಕರವಾಗಿಲ್ಲದಿದ್ದರೂ ಒಂದು ರೀತಿ ಸಾಮಾಜಿಕ ಅಂತಸ್ತನ್ನು ಹೆಚ್ಚಿಸುತ್ತದೆ. ಎಂಬ ಕಾರಣಕ್ಕಾಗಿ ಪಂಪ್ ಸೆಟ್ಟು ಹೊಂದಲು ರೈತರು ಇಚ್ಚಿಸುತ್ತಾರೆ. ಆದರೂ ಇಲ್ಲಿ ನಿಯಮಿತವಾಗಿ ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ಈ ರೈತರು ಪಂಪ್ ಸೆಟ್ ಕೊಳ್ಳಲು ಧೈರ್ಯ ಮಾಡಿಲ್ಲ ಆದರೆ ಪಂಪ್ ಸೆಟ್ ಕೊಳ್ಳಲು ಹತ್ತಿರದ ಕೋಲಾರಕ್ಕೆ ಬರಬೇಕಾಗಿರುವುದರಿಂದ ಹಾಗೂ ಇಲ್ಲ ಮಾರಾಟ ಮಾಡುವ ಸೆಟ್‌ಗಳ ಗುಣಾತ್ಮಕತೆಯ ಬಗ್ಗೆ, ಬೆಲೆಯ ಬಗ್ಗೆ ರೈತರಿಗೆ ಪರಿಪೂರ್ಣ ಮಾಹಿತಿ ಇಲ್ಲದಿರುವುದರಿಂದ ರೈತರು ಪಂಪ್ ಸೆಟ್ ಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ ಎಂಬ ವಿಷಯ ಅಧ್ಯಯನದ ಸಂದರ್ಭದಲ್ಲಿ ಬೆಳಕಿಗೆ ಬಂದಿತು. ಆದರೆ ಇವರ ಹಿಡುವಳಿಗಳ ಗಾತ್ರ, ಪಂಪ್ ಸೆಟ್ ಹೊಂದಲು ಅನುಕೂಲಕರವಾಗಿಲ್ಲದಿರಬೇಕಾದರೆ, ಸಾಮಾಜಿಕ ಅಂತಸ್ತಿಗೋಸ್ಕರವಾದರೂ ಪಂಪ್ ಸೆಟ್ ಕೊಳ್ಳಬೇಕೆಂಬ ಇವರ ಕಾತುರ, ರೈತರು ಆರ್ಥಿಕ ಅಂತಸ್ಥಿನ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿದ್ದಾರೆ ಎಂಬ ಅಂಶ ತಿಳಿಯುತ್ತದೆ. ಏನೂ ಇಲ್ಲದಿದ್ದರೂ ತೋರಿಕೆಗೆ ಆರ್ಥಿಕವಾಗಿ ಅನುಕೂಲರಾಗಿದ್ದೇವೆ ಎಂದು ತೊರಿಸಿಕೊಳ್ಳಲು ಇಲ್ಲಿ ರೈತರು ಕಾತುರರಾಗಿದ್ದಾರೆ ಎಂಬ ಅಂಶ ತಿಳಿಯುತ್ತದೆ. ಆದರೆ ವಿದ್ಯುಚ್ಛಕ್ತಿಯಂತಹ ಬಹು ಮುಖ್ಯ ಕೃಷಿ ಸಂಪನ್ಮೂಲ ರೈತರಿಗೆ ಕೈಗೆಟುಕಿದ್ದರೂ , ಬಹುಪಾಲು ರೈತರು ಈ ಅವಕಾಶವನ್ನು ಬಳಸಿಕೊಳ್ಳಲು ವಿಫಲರಾಗಿದ್ದಾರೆ. ಈ ಗ್ರಾಮವೇನು ವಿದ್ಯುಚ್ಛಕ್ತಿ ಇಲ್ಲದ ಗ್ರಾಮವಲ್ಲ. ಈಗಾಗಲೇ ನಾವು ತಿಳಿದಿರುವಂತೆ ಈ ಗ್ರಾಮ ಶೇ. 80 ಕ್ಕಿಂತ ಹೆಚ್ಚಿನ ಜನ ಸಂಖ್ಯೆ ಗೃಹೋಪಯೋಗಿ ವಿದ್ಯುತ್ತನ್ನು ಹೊಂದಿದ್ದಾರೆ ; ನಾನು ಸಮೀಕ್ಷೆ ಮಾಡಿದ ರೈತರಲ್ಲಿ 26 (86.66%) ಜನ ಗೃಹ ವಿದ್ಯುತ್ ಹೊಂದಿದ್ದಾರೆ (13.33%) ನಾಲ್ಕು ಜನ ಇನ್ನೂ ಗೃಹ ವಿದ್ಯುತ್ ಹೊದಿಲ್ಲ. ಒಬ್ಬ (3.33%) ವಿದ್ಯುತ್ ಸಂಪರ್ಕ ಪಡೆಯಲು ಕೋಲಾರದಲ್ಲಿರುವ ಬೆಸ್ಕಾಂಗೆ ಅಡ್ಡಾಡುತ್ತಿದ್ದಾನೆ. ಆದರೆ ವಿದ್ಯುತ್ ನಿರ್ವಹಣೆಯಲ್ಲಿ ಬೆಸ್ಕಾಂ ಇನ್ನೂ ಅಡೆತಡೆಗಳಿಲ್ಲದೆ ಸರಬರಾಜು ಮಾಡುವಲ್ಲಿ ವಿಫಲವಾಗಿದೆ. ಆದರೆ ರೈತರು, ಬೆಸ್ಕಾಂ ಅಧಿಕಾರಿಗಳಿಗೆ ಛೀಮಾರಿ ಹಾಕುತ್ತಿದ್ದಾರೆ ಲೈನ್

ಮನ್‌ಗಳು ಸರಿಯಾಗಿ ತಮ್ಮ ಕೆಲಸ ನಿರ್ವಹಿಸುವುದಿಲ್ಲ, ಏನಾದರೂ ಸಣ್ಣ ಪುಟ್ಟ ತೊಡಕುಗಳಾಗಿ ವಿದ್ಯುಚ್ಛಕ್ತಿ ಪೂರೈಕೆ ಸ್ಥಗಿತಗೊಂಡರು, ಎಷ್ಟು ಬಾರಿ ದೂರು ಕೊಟ್ಟರು ಲೈನ್ ಮ್ಯಾನ್‌ಗಳು ಬರುವುದಿಲ್ಲ ಎಂಬ ಅಂಶವನ್ನು ರೈತರು ವ್ಯಕ್ತಪಡಿಸಿದರು. ಆದರೆ ಬೆಸ್ಕಾಂ ನವರು ಈ ರೀತಿ ಗ್ರಾಮಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವದು ಅಪರೂಪದ ಘಟನೆಯೇನೂ ಅಲ್ಲ. ಇದು ಕೋಲಾರ ನಗರದಿಂದ ಹಿಡಿದು ಎಲ್ಲಾ ಗ್ರಾಮಗಳಲ್ಲೂ ಬೆಸ್ಕಾಂನ ಅವ್ಯವಸ್ಥೆ ನೋಡಬಹುದಾಗಿದೆ. ಇಲ್ಲಿನ ಬಹುತೇಕ ರೈತರು ಮಾರ್ಜೇನಹಳ್ಳಿಯಲ್ಲೆ ಬೆಸ್ಕಾಂನ ಒಂದು ಶಾಖೆ ತೆಗೆಯಬೇಕೆಂದು ಒತ್ತಾಯಿಸುತ್ತಾರೆ. ಬೆಸ್ಕಾಂನ ಶಾಖೆ ಪ್ರತಿ ಹಳ್ಳಿಗಳಿಗಿಲ್ಲದಿದ್ದರೂ ಒಂದು ಗ್ರಾಮ ಪಂಚಾಯಿತಿಗೆ ಒಂದು ಶಾಖೆಯಾದರೂ ಇರಬೇಕೆಂಬುದೇ ಅಭಿಪ್ರಾಯ. ಬೆಸ್ಕಾಂ ಶಾಖೆ ಒಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿದ್ದರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ ಎಂಬುದು ಅಭಿಪ್ರಾಯ, ಇಲ್ಲದಿದ್ದರೆ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಎನ್ನಲಾಗುವ ಸಣ್ಣ ಪುಟ್ಟ ತೊಂದರೆಗಳಿಗು, ಕೋಲಾರದಲ್ಲಿರುವ ಬೆಸ್ಕಾಂ ಕಛೇರಿಗೆ ಎಡತಾಕಬೇಕಾಗುತ್ತದೆಂಬುದು ರೈತರ ಅಳಲು, ವಿದ್ಯುಚ್ಛಕ್ತಿ ಬಿಲ್ ಪಾವತಿಸಲು ಕೋಲಾರಕ್ಕೆ ಹೋಗಬೇಕು. ಇದು ದಿನಗಟ್ಟಲೆ ಹಿಡಿಯುತ್ತದೆ. ಆದ್ದರಿಂದ ನಾವು ಕೂಲಿ ಕೆಲಸ ಮಾಡಿ ಬದುಕುವವರು ಆದ್ದರಿಂದ ಕೋಲಾರಕ್ಕೆ ಹೋಗಿ ಬಿಲ್ ಪಾವತಿಸುವದು ಅತ್ಯಂತ ಪ್ರಯಾಸಕಾರಿಯಾದುದ್ದು; ಗ್ರಾಮ ಪಂಚಾಯಿತಿ ಮಟ್ಟದಲ್ಲೆ ವಿದ್ಯುತ್ ನಿರ್ವಹಣೆ, ಬಿಲ್ ಪಾವತಿಸುವುದು, ದುರಸ್ತಿ ಕೆಲಸಗಳು ರೈತರಿಗೆ ಅನುಕೂಲಕರವಾಗಬೇಕಾದರೆ, ಬೆಸ್ಕಾಂ ಶಾಖೆ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಇರಬೇಕೆಂದು ಒಕ್ಕೊರಲ್ಲಿನ ರೈತರ ಅಭಿಪ್ರಾಯ., ಆದರೆ ಇವರ ಅಭಿಪ್ರಾಯಕ್ಕೆ ಮನ್ನಣೆ ಕೊಡುವವರಾದರು, ಯಾರು ಬೀದಿ ದೀಪಗಳ ನಿರ್ವಹಣೆಯು ಸಹ ಅತ್ಯಂತ ಕಳಪೆ ಮಟ್ಟದಲ್ಲಿದೆ ಎಂಬುದೆ ರೈತರ ಅಭಿಪ್ರಾಯ ಆದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬೆಸ್ಕಾಂ ಒಂದು ಸಣ್ಣ ಶಾಖೆ ತೆರೆಯುವುದು ಔಚಿತ್ಯವಾದದ್ದು

ಹೈನುಗಾರಿಕೆ:

ಹಾಲು ಉತ್ಪಾದಕರ ಸಹಕಾರ ಸಂಘ , ಮಾರ್ಜೇನಹಳ್ಳಿಯಲ್ಲಿ ಇಲ್ಲ, ಇಲ್ಲಿನ ರಾಸುಗಳ ಸಂಖ್ಯೆ 5 ಕ್ಕಿಂತ ಜಾಸ್ತಿ ಇಲ್ಲ, ಹೈನುಗಾರಿಕೆ ಲಾಭದಾಯಕವಾಗಿದ್ದರೂ, ಯಾರು ಹೈನುಗಾರಿಕೆಯನ್ನು ಕೈಗೊಂಡಿಲ್ಲ ರೈತರು ಹೆಚ್ಚು ಹೆಚ್ಚಾಗಿ ಹಿಪ್ಪುನೇರಳೆ, ಇನ್ನಿತರ ತೋಟಗಾರಿಕೆ ಬೆಳೆಗಳಾದ ಟೊಮೊಟೋ, ಬದನೆಕಾಯಿ ಬೆಳೆಯುತ್ತಾರೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಪಕ್ಕದ ಚಿನ್ನಾಪುರ ಕಾಮಧೇನು ಹಳ್ಳಿಯಲ್ಲಿ ಇದೇ. ಅದರೆ ಮಾರ್ಜೇನಹಳ್ಳಿಯಲ್ಲಿ ಈ ಸಂಘಗಳು ಇಲ್ಲದೆ ಇರುವುದು ರೈತರ ಆದಾಯ ಕಡಿಮೆ ಇರುವುದಕ್ಕೆ ಕಾರಣ. ರೈತರು ಆದಾಯ ಹೆಚ್ಚಾಗಬೇಕೆಂದರೆ ರಾಗಿ, ಭತ್ತ, ತರಕಾರಿ ಬೆಳೆಗಳ ಜೊತೆಗೆ ಹೈನುಗಾರಿಕೆಯೆಂಬ ಉಪ ಕಸಬು ಇರಬೇಕು, ಆದರೆ ಇಲ್ಲಿ ಹಾಲಿನ ಸಂಘಗಳಾಗಲಿ ಅಥವಾ ಹಸುಗಳ

ಸಾಕಾಣಿಕೆಯಾಗಲಿ ಕಂಡು ಬರುತ್ತಿಲ್ಲ. ರೈತರು ಈ ಸ್ಥಿತಿಯಲ್ಲಿರಬೇಕಾದರೆ ಪಶು ವೈದ್ಯಕೀಯ ಮತ್ತು ಪಶು ಸಂಗೋಪನ ಇಲಾಖೆಯೇ ಕಾರಣ, ಆದರೆ ಇದು ರೈತರನ್ನು ಹೈನುಗಾರಿಕೆ ಕಡೆಗೆ ಒಲವು ತೋರುವಂತೆ ಮಾಡುವ ಯಾವುದೇ ಕಾರ್ಯಕ್ರಮಗಳು ಇಲ್ಲ, ಬಹಳಷ್ಟು ರೈತರು ಸರಕಾರವೇ ಹಸುಗಳನ್ನು ಕೊಡಲಿ ಎಂದು ಹೇಳುತ್ತಾರೆ. ಇದರ ಜೊತೆಗೆ ರೈತರು ಹೈನುಗಾರಿಕೆಯ ಮಹತ್ವ ಇನ್ನೂ ಅರ್ಥವಾಗಿಲ್ಲ, ಹೈನುಗಾರಿಕೆಯಿಂದ ಹೊಲ ಗದ್ದೆಗಳಲ್ಲಿ ಬರುವ ಆದಾಯಕ್ಕಿಂತ ಎರಡರಷ್ಟು ಇರುತ್ತದೆಂಬ ಅರಿವು ಇಲ್ಲ, ನಾನು ಸಮೀಕ್ಷೆ ಮಾಡಿದ ರೈತರಲ್ಲಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವವರು ಕಡಿಮೆ ಸಂಖ್ಯೆಯಲ್ಲಿದ್ದಾರೆ ಒಟ್ಟು ಮೂವತ್ತು ಜನರಲ್ಲಿ ಹೈನುಗಾರಿಕೆಯಲ್ಲಿ 2(6.60%) ಮಾತ್ರ ತೊಡಗಿಸಿಕೊಂಡಿದ್ದಾರೆ ಇನ್ನು 28(93.3%) ರಿಂದ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ, ಇಬ್ಬರು ಸರಕಾರ ರಾಸುಗಳನ್ನು ಸಹಾಯಧನದ ಮೂಲಕ ನೀಡಿದ್ದರಿಂದ ಹೈನುಗಾರಿಕೆಯ ಬಗ್ಗೆ ಒಲವು ತೋರಿದ್ದಾರೆ ಇಲ್ಲಿ ಮೂಲ ಭೂತವಾಗಿ ಹಾಲು ಉತ್ಪಾದಕರ ಸಹಕಾರ ಸಂಘ ಇಲ್ಲದಿರುವುದೇ ಕಾರಣವಾಗಿದೆ. ಈಗ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಮಾಡಬೇಕೆಂದು ಇಲ್ಲಿನ ಗ್ರಾಮ ಪಂಚಾಯಿತಿ ಸದಸ್ಯ ತನ್ನ ಅಪೇಕ್ಷೆಯನ್ನು ಹೊರಗಡೆವಿದರು, ಅದರೂ ಇಲ್ಲಿ ಗುಂಪುಗಾರಿಕೆ ಇರುವುದರಿಂದ ಹಾಲು ಉತ್ಪಾದಕರ ಸಹಕಾರ ಸಂಘ ಮಾಡುವುದು ಗೋಜಲಾಗಿದೆ ಎಂದು ಹೇಳಿದರು. ಹಾಲು ಉತ್ಪಾದಕರ ಸಂಘವಾದರೆ ಯಾರು ಇದರ ನಾಯಕತ್ವವನ್ನು ವಹಿಸಬೇಕು ಅದು ಇಲ್ಲಿನ ಗುಂಪುಗಾರಿಕೆಗೆ ಪ್ರತ್ಯಕ್ಷ ಸಾಕ್ಷಿ ಆದರೂ ಕೆಲವೆ ತಿಂಗಳುಗಳಲ್ಲಿ ಹೈನುಗಾರಿಕೆ ಸಹಕಾರ ಸಂಘ ಮಾಡಲಾಗುತ್ತದೆಂದು ಸಹ ತಿಳಿಸಿದರು. ಈಗ ಬಹಳಷ್ಟು ಹಳ್ಳಿಗಳಲ್ಲಿ ಹಾಲು ಉತ್ಪಾದನೆ ಒಂದು ಉದ್ಯಮವಾಗಿದೆ. ಈ ಉದ್ಯಮದಿಂದ ರೈತರಿಗೆ ಹೆಚ್ಚಿನ ಆದಾಯ ಹರಿದು ಬರುತ್ತಿರುವುದು ಸಹ ಮಿಥ್ಯೆಯೇನು ಅಲ್ಲ. ಆದರೆ ಹಾಲನ್ನು ಅಧಿಕ ಆದಾಯ ಪಡೆಯುವ ಮಾಧ್ಯಮವನ್ನಾಗಿ ಸ್ವೀಕರಿಸುವುದರಲ್ಲಿ ಮಾರ್ಜೇನಹಳ್ಳಿಯ ರೈತರು ವಿಫಲರಾಗಿದ್ದರೆ, ಆದರೆ ಹೈನುಗಾರಿಕೆ ಬೇಕೆಂಬ ಒಲವು ಕೆಲವು ರೈತರಲ್ಲಿ ಕಂಡು ಬರುತ್ತಿದೆ. ಆದೆರ ಈ ಒಲವನ್ನು ಮೂರ್ತಗೊಳಿಸಲು ಇಲ್ಲಿ ನಾಯಕರು ಮುಂದಾದರೆಯೇ ಎಂಬುದು ಇನ್ನು ಸಂಶಯಾಸ್ಪದವಾದದ್ದು.

ಭಾರತದಲ್ಲಿ ಕ್ಷೀರ ಕ್ರಾಂತಿ ಎಪ್ಪತ್ತರ ದಶಕದ ಆಧಿ ಭಾಗದಲ್ಲಿಪ್ರಾರಂಭವಾಯಿತು. ಇದು ಕರ್ನಾಟಕಕ್ಕೆ ತಲುಪುವಲ್ಲಿ ಒಂದುವರೆ ದಶಕಗಳೆ ತೆಗೆದುಕೊಂಡಿತು. (1985) ರಿಂದೀಚೆಗೆ ಸುಸಜ್ಜಿತ ಹಾಲು ಒಕ್ಕೂಟ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ನಂತರ ಕರ್ನಾಟಕದ ಹಳ್ಳಿಹಳ್ಳಿಗಳಿಗೂ ಬೃಹತ್ ಜಾಲವಾಗಿ ವ್ಯಾಪಿಸಿತು. ಹಾಲು ಒಕ್ಕೂಟಗಳು ಪ್ರಾರಂಭವಾಗುವ ಮುನ್ನ ಹಳ್ಳಿಯಲ್ಲಿ ರೈತರು ತಮ್ಮ ಮನೆಯ ಉಪಯೋಗಕ್ಕೆ ಬೇಕಾಗುವಷ್ಟು ಹಾಲನ್ನು ಉತ್ಪಾದಿಸುತ್ತಿದ್ದರು, ಕೆಲವು ರೈತರು ಹಳ್ಳಿಗಳಿಂದ ನಗರದ ಗ್ರಾಹಕರಿಗೆ ಪೂರೈಸುತ್ತಿದ್ದರು ಪ್ರಮುಖ ಗ್ರಾಹಕರೆಂದರೆ ಹೋಟೇಲುಗಳು ಹಾಗೂ ಮನೆಗಳು, ನಗರದಲ್ಲಿರುವ

ಮನೆಗಳಿಗೆ ಹತ್ತಿರದ ಹಳ್ಳಿಗಳಿಂದ ದಿನ ನಿತ್ಯ ಹಾಲನ್ನು ಸರಬರಾಜು ಮಾಡುತ್ತಿದ್ದರು. ಇಷ್ಟಕ್ಕೆ ಅಂದಿನ ಹೈನೋದ್ಯಮ ಸೀಮಿತಗೊಂಡಿತ್ತು ಆದರೆ (1985) ರ ನಂತರ (80 ರ ದಶಕದಿಂದೀಚೆಗೆ) ಹೈನೋದ್ಯಮ ವಾಣಿಜ್ಯೀಕರಣಗೊಳ್ಳಲು ಪ್ರಾರಂಭಿಸಿತ್ತು. ಇದಕ್ಕೆ ಹಾಲಿನ ಸಹಕಾರಿ ಸಂಘಗಳ ಪ್ರಮುಖ ಪಾತ್ರ ವಹಿಸಿದವು. ಹೈನುಗಾರಿಕೆಗೆ ಸಂಬಂಧಪಟ್ಟ ತಂತ್ರಜ್ಞಾನ ಮಾಹಿತಿಗಳನ್ನು ರೈತರಿಗೆ ತಲುಪಿಸಲಾಯಿತು. ಇದರಿಂದಾಗಿ ಹಳ್ಳಿ ಹಳ್ಳಿಗಳಲ್ಲೂ ಹೈನೋದ್ಯಮ ಒಂದು ಲಾಭದಾಯಕ ಹುದ್ದೆಯಾಗಿ ತಲೆಯೆತ್ತಿತ್ತು. ಈಗ ಸದೃಢ ಸಂಘಟನೆಯಾಗಿ ಹೈನೋದ್ಯಮ ಕರ್ನಾಟಕದಲ್ಲಿ ರೂಪುಗೊಂಡಿದೆ. ಅದರೆ ಹೈನು ವಲಯದಲ್ಲಿ ಬದಲಾವಣೆಗಳು ಆಗಿರಬೇಕಾದರೆ ಮಾರ್ಜೇನಹಳ್ಳಿಯಲ್ಲಿ ಇನ್ನು ಹೈನೋದ್ಯಮ ತಲೆ ಎತ್ತದಿರುವುದು ನಿಜಕ್ಕೂ ಶೋಚನೀಯ ಹಾಗೆಯೇ ಇನ್ನಿತರ ಪಶು ಸಂಗೋಪನೆಯಲ್ಲಿ ಇಲ್ಲಿನ ರೈತರು ಹಿಂದೆ ಬಿದ್ದಿದ್ದಾರೆ ಒಟ್ಟು ಕುರಿ ಮೇಕೆಗಳ ಸಂಖ್ಯೆ 15 ಕ್ಕಿಂತ ಜಾಸ್ತಿ ಇಲ್ಲ. ಕುರಿ ಮೇಕೆಗಳ ಸಾಕಾಣಿಕೆಯೂ ಲಾಭದಾಯಕವಾದದ್ದು. ಆದರೆ ಮಾರ್ಜೇನಹಳ್ಳಿಯಲ್ಲಿ ಕುರಿ ಮೇಕೆಗಳ ಸಾಕಾಣಿಕೆ ವ್ಯಾಪಕವಾಗಿ ಕಂಡುಬರುತ್ತಿಲ್ಲ. ಹತ್ತಿರದ ಬಂಗಾರಪೇಟೆಯ ಕುರಿ ಮಾರುಕಟ್ಟೆ ಇದ್ದರೂ ಇಲ್ಲಿನ ರೈತರು ಹೆಚ್ಚಾಗಿ ಕುರಿ, ಮೇಕೆಗಳನ್ನು ಸಾಕುತ್ತಿಲ್ಲ ಇದಕ್ಕೆ ಬಲವಾದ ಕಾರಣವೆಂದರೆ ಹಿಡುವಳಿಗಳ ಗಾತ್ರ ಸಣ್ಣದಿದ್ದು ಬಹಳಷ್ಟು ರೈತರು ಹತ್ತಿರದ ಕೋಲಾರ ನಗರದಲ್ಲಿ ಮರಗೆಲಸ, ಸೌದೆ ಮಂಡಿಗಳಲ್ಲಿ ಕೆಲಸದಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತಿದೆ. ಕುರಿ ಮೇಕೆ ಸಾಕಾಣಿಕೆ ಆಕರ್ಷಕವಾಗಿಲ್ಲದಿರುವುದು ಕುರಿ ಮೇಕೆ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳಿದ್ದು ಇವರದೇ ಪಾರು ಪತ್ಯವಿರುವುದರಿಂದ ಕುರಿ ಮೇಕೆ ಸಾಕಾಣಿಕೆ ಮಾರ್ಜೇನಹಳ್ಳಿಯಲ್ಲಿ ನೆಲೆವೂರದಿರುವುದು, ಆದರೆ ಬಹುತೇಕ ರೈತರು ನಾನು ಈಗಾಗಲೇ ತಿಳಿಸಿದಂತೆ ಲಕ್ಷ ಲಕ್ಷ ಸಂಪಾದಿಸಲು ಟೊಮೊಟೋ, ಇನ್ನಿತರ ತರಕಾರಿ ಬೆಳಗಳಿಗೆ ಮೊರೆ ಹೋಗುವುದು ಸರ್ವೆ ಸಾಮಾನ್ಯ ವಿಷಯವಾಗಿದೆ. ಕುರಿ ಮೇಕೆ ಸಾಕಾಣಿಕೆ ದೊಡ್ಡ ಪ್ರಮಾಣದಲ್ಲಿರಲಿ ಮದ್ಯಮ ಮತ್ತು ಸಣ್ಣ ಪ್ರಮಾಣದಲ್ಲಿಯೂ ಯಾರು ಮಾಡುತ್ತಿಲ್ಲ ಇವರಿಗೆ ಈ ಉಪ ಕಸುಬಿನಲ್ಲಿ ಹೆಚ್ಚು ಆದಾಯ ಬರುವುದಿಲ್ಲ ಎಂಬುದು ಮನವರಿಕೆಯಾದಂತಿದೆ. ಆದರೆ ಇದಕ್ಕೆಲ್ಲಾ ಕಾರಣ ಕುರಿ ಮೇಕೆ ಸಾಕಾಣಿಕೆಯ ತಂತ್ರಜ್ಞಾನ ಮಾಹಿತಿಯನ್ನು ರೈತರಲ್ಲಿ ಕೊಂಡೊಯ್ಯುವಲ್ಲಿ ಪಶು ಸಂಗೋಪನಾ ಇಲಾಖೆ ವಿಫಲವಾಗಿದೆ ಎಂಬುದು ಕಂಡು ಬರುತ್ತದೆ.

ಗೋಮಾಳದ ಕತೆ:

ಗೋಮಾಳ ಮಾರ್ಜೇನಹಳ್ಳಿಯಲ್ಲಿ ಹೇಳಿಕೊಳ್ಳುವಂತಹ ಪ್ರಮಾಣದಲ್ಲಿ ಇಲ್ಲ, ಈ ಹಳ್ಳಿಗಲ್ಲಿ ರಾಸುಗಳೇ ಕೊರತೆಯೇ ಗೋಮಾಳ ಕೇವಲ ಮೂರು ಎಕರೆಗಳಷ್ಟು ಇರುವುದು, ಪರಂಪಾರಾನುಗತವಾಗಿ ಗೋಮಾಳಗಳು ಗ್ರಾಮದ ದನಕರು, ಕುರಿ ಮೇಕೆ ಮುಂತಾದ ಜಾನುವಾರುಗಳನ್ನು ಮೇಯಿಸಲು ಉಪಯೋಗಿಸಲಾಗುತ್ತಿತ್ತು. ಇದು ಗ್ರಾಮ ಪಂಚಾಯಿತಿಯ ಸ್ವತ್ತು, ಇದಕ್ಕೋಸ್ಕರ ಗ್ರಾಮ ಪಂಚಾಯಿತಿಗೆ

ರೈತರು ಸ್ವಲ್ಪ ಹಣ ಸಂದಾಯ ಮಾಡಬೇಕಾಗಿದೆ. ಈ ಗ್ರಾಮದಲ್ಲಿ ಜಾನುವಾರುಗಳು 150 ಕ್ಕಿಂತ ಹೆಚ್ಚಿಲ್ಲ ಆದ್ದರಿಂದ ಈ ಗೋಮಾಳಗಳ ಮಲ ವಿಸರ್ಜನೆಯ ತಾಣವಾಗಿದೆ. ಗೋಮಾಳಗಳು ಬಹುತೇಕ ಹಳ್ಳಿಗಳಲ್ಲಿ 50 ರಿಂದ 60 ಎಕರೆಯವರೆಗೂ ಇರುತ್ತದೆ. ಯಾಕೆಂದರೆ ಈ ಗ್ರಾಮಗಳಲ್ಲಿ ಜಾನುವಾರುಗಳ ಸಂಖ್ಯೆಯು ವಿಪುಲವಾಗಿರುತ್ತದೆ. ಇಲ್ಲಿ ಗೋಮಾಳಗಳನ್ನು ನಿರ್ವಹಿಸುವುದು ಸಹ ಗ್ರಾಮ ಪಂಚಾಯಿತಿಗಳಿಗೆ ಸೇರಿರುತ್ತದೆ. ಗೋಮಾಳಗಳ ಸರಹದ್ದಿನಲ್ಲೇ ನೀರು ಮುಂತಾದ ರಾಸುಗಳಿಗೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತದೆ. ಆದರೆ ಈ ಗ್ರಾಮದಲ್ಲಿ ಗೋಮಾಳಗಳು ಎಂಬುದು ಇದೆಯೇ ಇಲ್ಲವೆ ಎಂದು ರೈತರಿಗೆ ಗೊತ್ತಿಲ್ಲ. ಯಾಕೆಂದರೆ ಗೋಮಾಳ ರೈತರಿಗೆ ಗೊತ್ತಾಗುವುದು ಅವರ ಮನೆಗಳಲ್ಲಿ ರಾಸುಗಳಿದ್ದರೆ ಮಾತ್ರ ಇಲ್ಲಿ ಬಹುತೇಕ ರೈತರು ಕೂಲಿಗಳಾಗಿರುವುದರಿಂದ ರಾಸುಗಳನ್ನು ಹೊಂದುವ ಅವಶ್ಯಕತೆ ಇಲ್ಲ. ಹಾಗೂ ಕೆಲವು ರೈತರು ಟ್ರ್ಯಾಕ್ಟರ್ ಹಾಗೂ ಇನ್ನಿತರ ಯಂತ್ರೋಪಕರಣಗಳನ್ನು ಬಳಸುವುದರಿಂದ ರಾಸುಗಳ ಅವಶ್ಯಕತೆ ಇಲ್ಲಿ ಕಾಣುವುದಿಲ್ಲ. ಆದ್ದರಿಂದ ಗೋಮಾಳ ಕೇವಲ 3 ಎಕರೆಗಳಷ್ಟು ಇರುವುದು. ಆದ್ದರಿಂದ ಗೋಮಾಳದಪ್ರಾಮುಖ್ಯತೆ ಈ ಗ್ರಾಮದಲ್ಲಿ ಎದ್ದು ಕಾಣುವುದಿಲ್ಲ. ಇಲ್ಲಿನ ರೈತರು ಗೋಮಾಳ ಪ್ರಾಮುಖ್ಯತೆಯನ್ನು ಪರಿಗಣಿಸಿಲ್ಲ ಆದ್ದರಿಂದಲೇ ಈ ಗ್ರಾಮ ಇಂದು ರಾಸುಗಳಿಲ್ಲದೆ ಒಂದು ಗೋಮಾಳವನ್ನು ನೋಡಿ ಬಂದಾಗ ಇದು ಅನೈರ್ಮಲ್ಯದ ತಾಣವಾಗಿದೆ. ಗ್ರಾಮ ಪಂಚಾಯಿತಿ ಇಲ್ಲಿ ಮಲ ವಿಸರ್ಜನೆ ಇತ್ಯಾದಿಗಳನ್ನು ತಡೆ ಹಿಡಿಯುವಲ್ಲಿ ಸೋತಿದೆ. ಈಗಾಗಲೇ ನಾನು ತಿಳಿಸಿರುವಂತೆ , ಈ ಗ್ರಾಮದಲ್ಲಿ ಬಾಂಬೆ ಕಕ್ಕಸುಗಳು ಕೊರತೆ ಇರುವುದನ್ನು ತಿಳಿಸಿರುವೆ, ಆದ್ದರಿಂದ ಈ ಗೋಮಾಳ ಮಲ ವಿಸರ್ಜನೆಯ ತಾಣವಾಗಿರುವುದು ಇಲ್ಲಿ ಕನಿಷ್ಟ ಪಕ್ಷ ಗೋಮಾಳದ ನೈರ್ಮಲ್ಯ ಕಾಪಾಡುವುದಾಗಿದ್ದರೆ, ಮಕ್ಕಳಿಗೆ ಆಡುವ ಮೈದಾನವನ್ನಾಗಿಯಾದರು ಪರಿವರ್ತಿಸಬಹುದಾಗಿತ್ತು ಆದರೆ ಗ್ರಾಮ ಪಂಚಾಯಿತಿ ಈ ನಿಟ್ಟಿನಲ್ಲಿ ಯೋಚಿಸದೇ ಇರುವುದು. ದುರಂತ ಆದರೆ ಗೋಮಾಳ ಒತ್ತುವರಿಯಾಗದೆ ಇರುವುದು ಈ ಗ್ರಾಮದ ಅದೃಷ್ಟ ನಾವು ಕಂಡಂತೆ ಬಹಳಷ್ಟು ಗ್ರಾಮಗಳಲ್ಲಿ ಗೋಮಾಳವನ್ನು ಒತ್ತುವರಿ ಮಾಡಿಕೊಂಡು , ಕೃಷಿಯಲ್ಲಿ ತೊಡಗುವುದು ಕಾಣಬಹುದಾಗಿದೆ. ಗೋಮಾಳಗಳು ಒತ್ತುವರಿಯಾಗುವುದು ಇವು ಯಾವ ಉದ್ದೇಶಕ್ಕಾಗಿ ಬಿಟ್ಟಿದ್ದಾರೋ ಆ ಉದ್ದೇಶಕ್ಕಾಗಿ ಉಪಯೋಗಿಸದೆ ಇರುವುದರಿಂದ. ಇಂದು ಬದಲಾದ ಗ್ರಾಮೀಣ ಪರಿಸರದಲ್ಲಿ ಗೋಮಾಳಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿವೆ. ಗ್ರಾಮಗಳಲ್ಲೂ ಯಾಂತ್ರೀಕರಣದಿಂದಾಗಿ ರಾಸುಗಳ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಬಂದಿದೆ. ಕುರಿ ಮೇಕೆಗಳನ್ನು ಆಹಾರಕ್ಕೆ ಮೊದಲು ಗೋಮಾಳಗಳೇ ಆಧಾರವಾಗಿದ್ದವು. ಆದರೆ ಕುರಿ ಮೇಕೆ ಸಾಕಾಣಿಕೆಗೆ ಆಧುನಿಕ ತಂತ್ರಜ್ಞಾನ ಬಂದಿರುವುದರಿಂದ ಗೋಮಾಳಗಳ ಪ್ರಾಮುಖ್ಯತೆ ಕಡಿಮೆಯಾಗುತ್ತ ಬಂದಿದೆ. ಮಾರ್ಜೇನಹಳ್ಳಿಯಲ್ಲಿ ಕುರಿ, ಮೇಕೆ, ದನಕರುಗಳು 150 ಕ್ಕಿಂತ ಜಾಸ್ತಿ ಇಲ್ಲ. ಇಂತಹ ಸಂದರ್ಭದಲ್ಲಿ ಬಹಳಷ್ಟು ರೈತರು ಈ ಗ್ರಾಮದಲ್ಲಿ ಪ್ರಾಣಿಗಳನ್ನು ಹೊಂದಿರುವುದೇ ಇಲ್ಲ ಆದ್ದರಿಂದ ಇಲ್ಲಿ ಗೋಮಾಳ

ಸಣ್ಣ ಪ್ರಮಾಣದಲ್ಲಿದ್ದರು ನಿರುಪಯುಕ್ತವಾಗಿದೆ.

ನಿರಕ್ಷರತೆ ಮತ್ತು ಅಕ್ಷರತೆ:

ಮಾರ್ಜೇನಹಳ್ಳಿಯಲ್ಲಿ ನಿರಕ್ಷರತೆ ಕಡಿಮೆ ಇವೆ, ಇಲ್ಲಿ ಸಾಕ್ಷರಸ್ಥರ ಸಂಖ್ಯೆ ಅಧಿಕ ಇದೆ. ಒಟ್ಟು ಸಾವಿರದ ಇನ್ನೂರು ಜನಸಂಖ್ಯೆಯಲ್ಲಿ ಕೇವಲ 15 ಜನ ಮಾತ್ರ ನಿರಕ್ಷರಸ್ಥರಿದ್ದಾರೆ. ನಿರಕ್ಷಸ್ಥರನ್ನು ಕಡಿಮೆಗೊಳಿಸುವ ದಿಕ್ಕಿನಲ್ಲಿ ಈ ಗ್ರಾಮ ಸಾಗಿದೆ. ನಾನು ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ, 30 ಜನ ಸಮೀಕ್ಷೆ ಗೊಳಪಡಿಸಿದವರ ಸಂಖ್ಯೆಯಲ್ಲಿ 25(83.33%) ಕ್ಕಿಂತ ಹೆಚ್ಚು ಅಕ್ಷರಸ್ಥರಿದ್ದು 5 (16.66%) ಜನ ನಿರಕ್ಷರಸ್ಥರಿದ್ದಾರೆ, ಇಲ್ಲಿ ಪ್ರಾಥಮಿಕ ಶಾಲೆಗಳು ಕೆಲಸ ಮಾಡುತ್ತಿರುವುದರಿಂದ ಹಾಗೂ ಸರ್ಕಾರದ ವತಿಯಿಂದ ನಿರಕ್ಷರತೆ, ತೊಲಗಿಸುವ ಕಾರ್ಯಕ್ರಮದಿಂದಾಗಿ ನಿರಕ್ಷರಸ್ಥರ ಸಂಖ್ಯೆ ಕಡಿಮೆ ಇದೆ ಆದರೆ ಈ ಹಳ್ಳಿ ಜಿಲ್ಲಾ ಕೇಂದ್ರದಿಂದ ಕೋಲಾರಿನೊಂದಿಗೆ ಒಡನಾಟವಿಟ್ಟುಕೊಂಡಿರುವುದರಿಂದ ಬಹುತೇಕರು ಕೋಲಾರದ ಸಂಪರ್ಕದಿಂದಾಗಿ ಅನಿವಾರ್ಯವಾಗಿ ಅಕ್ಷರಸ್ಥರಾಗುವ ಒತ್ತಡಗಳು ಕೆಲಸ ಮಾಡಿವೆ ಇಲ್ಲಿ ಮೂಲ ಸೌಕರ್ಯಗಳಲ್ಲಿ ವಿದ್ಯುಚ್ಛಕ್ತಿ, ಅಕ್ಷರತೆ, ರಸ್ತೆಗಳು ಸುಧಾರಣೆ ಕಂಡಿವೆ ಆದರೂ ಗ್ರಾಮ ಅಭಿವೃದ್ಧಿಯೆಡೆ ಮುಖ ಮಾಡುವಲ್ಲಿ ಸೋತಿದೆ. ನಿರಕ್ಷರತೆ ಕಡಿಮೆ ಇದ್ದರೆ, ಅಲ್ಲಿ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಗಳು ಆಗುತ್ತವೆಂಬ ಒಂದು ವಾದವುಂಟು ಆದರೆ ಅಕ್ಷರತೆಯಿಂದಾಗಿ ಇಲ್ಲಿನ ಜನರ ಬದುಕಿನಲ್ಲಿ ಯಾವುದೇ ಗುಣಾತ್ಮಕ ಬದಲಾವಣೆಗಳು ಕಂಡು ಬಂದಿಲ್ಲ, ಇಲ್ಲಿನ ಜನರ ಬದುಕು ದಿನನಿತ್ಯದ ಶ್ರಮದಾಯಕ ಕೆಲಸ ಹಾಗೂ ಅಲ್ಪ ಕೂಲಿಯಲ್ಲೆ ತೃಪ್ತಿಪಡಬೇಕಾಗಿದೆ. ಅಕ್ಷರತೆ ಜನರ ಬದುಕಿನ ಗುಣಾತ್ಮಕತೆಯನ್ನು ಹೆಚ್ಚಿಸುವುದು, ಆಸ್ತಿ ಇದ್ದಾಗ ಮಾತ್ರ ಆದರೆ ಈ ಗ್ರಾಮದ ಜನರು ಬಹುತೇಕವಾಗಿ ಸಣ್ಣ ಹಿಡುವಳಿದಾರರು ಹಾಗೂ ಕೂಲಿಗಳು, ಇದರಿಂದಾಗಿ ಅಕ್ಷರತೆ ಇಲ್ಲಿ ಜನರ ಬದುಕಿನಲ್ಲಿ ಗುಣಾತ್ಮಕ ಸುಧಾರಣೆ ತರುವಲ್ಲ ಸೋತಿದೆ, ಅಕ್ಷರಸ್ಥ ಎಂದರೆ ಸಹಿ ಮಾಡಲು ಬರುವ ಹಾಗೂ ಲಿಪಿಯನ್ನು ಓದಿ ಅರ್ಥೈಸಿಕೊಳ್ಳಬಲ್ಲನೆಂದು ಪರಿಗಣಿಸಿದರೂ, ಇಲ್ಲಿನ ಜನರ ಬದುಕು ಇನ್ನೂ ಕಡುಕಷ್ಟಗಳಿಂದ ಕೂಡಿದೆ, ಅಕ್ಷರತೆ ಪ್ರಯೋಜನಕ್ಕೆ ಬರುವುದ ಉದ್ಯಮದ ಶೀಲತೆ ಇದ್ದಾಗ, ಆದರೆ ಇಲ್ಲಿ ಬಹುತೇಕ ಗ್ರಾಮಸ್ಥರು ಇನ್ನೂ ಹಳೇ ಕಾಲದ ಮಣ್ಣಿನ ಮನೆಗಳಲ್ಲಿರುವುದು ಯಾವುದೇ ಅಭಿವೃದ್ಧಿ ಹೊಂದಿಲ್ಲ ಈ ಗ್ರಾಮ ಎಂಬುದನ್ನು ಸಾಬೀತು ಪಡಿಸುತ್ತದೆ. ಆದರೆ ಅಕ್ಷರತೆಯಿಂದ ಈ ಗ್ರಾಮದ ಜನರಲ್ಲಿ ಚಲನೆಯೇನು ಕಾಣಿಸಿಕೊಂಡಿಲ್ಲ ಗ್ರಾಮದಲ್ಲೇ ಕೃಷಿಯೇತರ ಉತ್ಪಾದಕ ಕೆಲಸಗಳನ್ನು ಗ್ರಾಮಸ್ಥರು ಸರ್ಕಾರದ ಸಹಾಯದಿಂದ ಸೃಷ್ಟಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಇಲ್ಲಿ ಅಕ್ಷರತೆ ಉದ್ಯೋಗ ಸೃಷ್ಟಿಯಲ್ಲಿ ಸಹಾಯಕವಾಗಿಯೂ ಇಲ್ಲ ಆಸ್ತಿ ಅಥವಾ ಉತ್ಪಾದನಾ ಸಾಧನಗಳ ಅನುಪಸ್ಥಿತಿಯಲ್ಲಿ ಅನ್ವಯಿಕವಾಗಿ ಜ್ಞಾನ ಜ್ಯೋತಿಯಾಗುವಲ್ಲಿ ಸೋತಿದೆ. ಇಲ್ಲಿನ ಗ್ರಾಮಸ್ಥರ ಅಕ್ಷರಸ್ಥರಾಗಿದ್ದರು ಸರಕಾರಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಅರಿತುಕೊಳ್ಳುವಲ್ಲಿ ವಿಫಲರಾಗಿದ್ದಾರೆ

ಭ್ರಷ್ಟ ನೌಕರ ಷಾಹಿ ಹಳ್ಳಿಗರಿಗೆ ಸರಕಾರದಿಂದ ಬಂದ ಕಾರ್ಯಕ್ರಮಗಳ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ನೀಡಿಲ್ಲ ಎಂಬುದು ಗೋಚರಿಸುತ್ತದೆ. ಅಕ್ಷರಸ್ಥರಾಗಿದ್ದರೂ ಗ್ರಾಮ ಪಂಚಾಯಿತಿಯಿಂದ ಕೇಳಿ ಮಾಹಿತಿ ಪಡೆಯವಲ್ಲಿಯೂ ಸೋತಿದ್ದಾರೆ. ಇದಕ್ಕೆ ಕಾರಣ ಇಲ್ಲಿನ ಗ್ರಾಮಸ್ಥರು ಸಂಘಟಿತರಾಗಿ ಜಾಗೃತ ಹೋರಾಟಗಳಿಲ್ಲದಿರುವುದೆ ಕಾರಣವಾಗಿದೆ. ಸಮೀಕ್ಷೆಯಲ್ಲಿ ಮಾತನಾಡಿಸಿದ ಗಂಗಪ್ಪ ಎಂಬ ಪರಿಶಿಷ್ಟ ಜಾತಿಯ ಅಕ್ಷರಸ್ಥ, ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಅಂಜುತ್ತಾನೆ. ಇವನ ಗ್ರಾಮ ಪಂಚಾಯಿತಿಯಿಂದ ಬರಬೇಕಾದ ಹಣಕ್ಕೆ ನೂರೆಂಟು ಬಾರಿ ಅಲೆದಾಡಿದ್ದಾನೆ, ಇವನಿಗೆ ಗ್ರಾಮದಲ್ಲಿ ನಿವೇಶನವಿಲ್ಲ ಆಶ್ರಯ ಯೋಜನೆಯಡಿಯಲ್ಲಿ ಈತನಿಗೆ ನಿವೇಶ ಹಾಗೂ ಮನೆ ನಿರ್ಮಿಸಿಕೊಳ್ಳಲು ಕೊಡಬೇಕಾದ ಹಣವನ್ನು ಗ್ರಾಮ ಪಂಚಾಯಿತಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ತಡ ಮಾಡುತ್ತಿದ್ದಾರೆ ಎಂಬುದೇ ರೈತನ ಅಳಲು. ಹೀಗೆ ಗ್ರಾಮದ ಜನರ ಅಳಲುಗಳು ಸಮಸ್ಯೆಗಳು ನೂರೆಂಟು ಈ ಎಲ್ಲ ಸಮಸ್ಯೆಗಳಿಗೆ ಅಕ್ಷರತೆ ಉತ್ತರವಾಗಲಾರದು ಎಂಬುದು ಈ ಗ್ರಾಮವ್ನನು ಅಧ್ಯಯನಿಸಿದ ಮೇಲೆ ಗೊತ್ತಾದ ಅಂಶ. ಆದರೆ ಆಕ್ಷರತೆ ಸಂಘಟನೆ, ಜಾಗೃತಿ ಸಂಚಲನಕ್ಕೂ ಅಡಿಪಾಯ ಹಾಕಿಲ್ಲ ಎಂಬುದು ಈ ಗ್ರಾಮವನ್ನು ಅಧ್ಯನಯನಿಸಿ ಮೇಲೆ ವೇದ್ಯವಾದ ಅಂಶ, ಆದರೆ ಅಕ್ಷರಸ್ಥರ ಸಂಖ್ಯೆ ಹೆಚ್ಚಿದಂತೆಲ್ಲ ಹಳ್ಳಿಗಳ ಅಭಿವೃದ್ಧಿ ಆಗುತ್ತದೆಂಬ ತತ್ವವನ್ನು ನಾವು ಬದಲಿಸಿಕೊಳ್ಳಲೇಬೇಕಿದೆ. ಯಾಕೆಂದರೆ ಆಸ್ತಿ ಉತ್ಪಾದನಾ ಸಾಧನ ಮತ್ತು ಮಾಹಿತಿಯನ್ನು ಯಥಾವತ್ತಾಗಿ ನೀಡುವ ವ್ಯವಸ್ಥೆಯಾಗದಿದ್ದರೆ ಗ್ರಾಮೀಣ ಜನರ ಬದುಕಲ್ಲೇನು ಬದಲಾವಣೆ ತರಲಾರದು. ಆದ್ದರಿಂದ ಸರಕಾರಗಳು ವಿಕೇಂದ್ರೀಕೃತ ವ್ಯವಸ್ಥೆಯನ್ನು ಪಾರದರ್ಶಕತೆಗೊಳಿಸುವ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಯಾಕೆಂದರೆ ಸರಕಾರದಿಂದ ಗ್ರಾಮಗಳ ಅಭಿವೃದ್ಧಿಗೆ ಏನಾದರು ಕಾರ್ಯಕ್ರಮ ಗಳು ಬಂದರೆ ಅದು ಫಲಾನುಭವಿಗಳಿಗೆ ತಲುಪಿಸಬೇಕು.

ಆದರೆ ಈ ಕಾರ್ಯಕ್ರಮಗಳ ಮಾಹಿತಿಯನ್ನು ಗ್ರಾಮ ಪಂಚಾಯಿಯ ನೌಕರ ಶಾಹಿ ಜನರಿಗೆ ತಲುಪಿಸದೆ, ಈ ಕಾರ್ಯಕ್ರಮಗಳನ್ನು ದುರುಪಯೋಗ ಪಡಿಸಿಕೊಳ್ಳುವಂತಹ ಅನೈತಿಕ ಮಾರ್ಗಗಳಿದಿದ್ದಾರೆ ಇವನ್ನು ಪ್ರಶ್ನಿಸುವಂತಹ, 'ಜಾಗೃತಿ', ಅಕ್ಷರತೆ ಹೆಚ್ಚಾದಂತೆಲ್ಲಾ ಹೆಚ್ಚಾಗಿ ಇರಬೇಕಾಗಿತ್ತು. ಆದರೆ ಈ ಗ್ರಾಮದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಕ್ಷರತೆಯೇನು ಇದೆ, ಆದರೆ ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಪ್ರಶ್ನಿಸುವಂತಹ ಯಾವುದೇ ಜಾಗೃತಿ ಮೂಡಿಲ್ಲ. ಇಲ್ಲಿನ ಗ್ರಾಮ ಪಂಚಾಯತಿ ಸದಸ್ಯರು ಸಹ ಅಧಿಕಾರಿಗಳ ಮರ್ಜಿಯಲ್ಲೇ ಇರಬೇಕಾಗಿದೆ. ಇಲ್ಲಿನ ಗ್ರಾಮ ಪಂಚಾಯಿತಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಸದಸ್ಯರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.ಜನರನ್ನು ಪ್ರತಿನಿಧಿಸುವ ಗ್ರಾಮ ಪಂಚಾಯಿತಿ ಸದಸ್ಯರಿಗೆ ಜಾಗೃತಿ ಮೂಡಬೇಕಾಗಿದೆ, ಗ್ರಾಮೀಣಾಭಿವೃದ್ಧಿಯ ಬಗ್ಗೆ ಅರಿವೆ ಇಲ್ಲ. ಈ ಸ್ಥಿತಿ ಗ್ರಾಮ ಪಂಚಾಯಿತಿ ಸದಸ್ಯರದೇ ಆಗಿರಬೇಕಾದರೆ ಇನ್ನು ಸಾಮಾನ್ಯ ಜನರ ಪಾಡನ್ನು ನೀವೇ ಅರ್ಥೈಸಿಕೊಳ್ಳಬೇಕು ತಮ್ಮ ಹಿಂಬಾಲಕರಿಗೆ ಕೆಲವು ಕೆಲಸಗಳನ್ನು ಮಾಡಿಸಿಕೊಡುವುದು ಬಿಟ್ಟರೆ, ಇಡೀ ಗ್ರಾಮದ ಅಭಿವೃದ್ಧಿಯ ಬಗ್ಗೆ ಯೋಚಿಸುವುದು

ತೀರ ವಿರಳ, ಇಂತಹ ವಾತಾವರಣವನ್ನು ಗ್ರಾಮದಲ್ಲಿರುವುದರಿಂದ ಗ್ರಾಮಾಭಿವೃದ್ಧಿಯಾಗದೆ. ಕುಗ್ರಾಮವಾಗಿಯೇ ಉಳಿದಿದೆ. ಆದ್ದರಿಂದ ಒಂದು ಕಾಲದಲ್ಲಿ ಅಕ್ಷರತೆ ಅಭಿವೃದ್ಧಿಯ ಮೂಲ ಮಾಧ್ಯಮ ಎಂದು ಯೋಚಿಸಲಾಗಿತ್ತು. ಆದರೆ ಮಾರ್ಜೇನಹಳ್ಳಿಯನ್ನು ಅಧ್ಯಯನಿಸಿದ ಮೇಲೆ ಅಕ್ಷರತೆ ಅಭಿವೃದ್ಧಿಯ ಮಾಧ್ಯಮವಾಗಲು ಎಷ್ಟೊಂದು ಅಡಚಣೆಗಳಿವೆ ಎಂಬುದು ತಿಳಿಯಿತು.

ಸಹಕಾರಿ ಸಾಲ:

ಅಕ್ಷರತೆ ಸಾಕಷ್ಟು ಪ್ರಮಾಣದಲ್ಲಿ ಇದ್ದರು ಮಾರ್ಜೇನಹಳ್ಳಿಯಲ್ಲಿ ಪ್ರಾಥಮಿಕ ಕೃಷಿ ಸಾಲ ಸಹಕಾರಿ ಸಂಘವಿಲ್ಲ. ಇಲ್ಲಿನ ರೈತರು ಸಾಲ ಪಡೆಯಬೇಕಾದರೆ ಪಕ್ಕದ ಅಣ್ಣೆಹಳ್ಳಿಗೆ ಹೋಗಬೇಕು, ಇಲ್ಲಿ ರೈತ ಸಮುದಾಯ ಕಡಿಮೆ ಇರುವುದರಿಂದ ಸಹಕಾರಿ ಸಂಘವಿಲ್ಲದಿರಬಹುದು ಎಂದು ಊಹಿಸಿದರೆ ತಪ್ಪಾಗುತ್ತದೆ. ಇಲ್ಲಿ ಕುಶಲ ಕರ್ಮಿಗಳು ರೈತರಿಗೆ ತಕ್ಷಣ ಸಾಲ ಬೇಕಾದರೆ ಗ್ರಾಮದಲ್ಲೇ ಪಡೆಯುವಂತಹ ಸೌಕರ್ಯ ಇಲ್ಲದಿರುವುದು ಶೋಚನೀಯವಾದದ್ದು 10 ಜನ ಹೆಚ್ಚು ಸದಸ್ಯರಾಗ ಬಯಸಿದರೆ ಅಂತಹ ಕಡೆ ಸಹಕಾರ ಸಂಘಗಳು ತಲೆಯುತ್ತುವುದು ಸಹಜವಾದದ್ದು, ಆದರೆ ಇಲ್ಲಿ 1200 ಜನ ಸಂಖ್ಯೆ ಹೊಂದಿದ್ದರೂ, ಇಲ್ಲಿ ಸಾಲ ಸಹಕಾರಿ ಸಂಘಗಳಿಲ್ಲದಿರುವುದು ಈ ಗ್ರಾಮ ಅಭಿವೃದ್ಧಿಯಲ್ಲಿ, ಹಿಂದೆ ಬಿದ್ದಿದೆ ಎಂಬುದು ಸ್ಪಷ್ಟವಾಗಿದೆ. ಸಾಲ ಸಹಕಾರ ಸಂಘಗಳಿದ್ದರೆ, ಕುಶಲ ಕರ್ಮಿಗಳು ರೈತರು ಅತಿ ಸುಲಭವಾಗಿ ಸಾಲ ಪಡೆಯಬಹುದಾಗಿದೆ. ಒಂದು ಚಾಪೆ ಎಣೆಯುವುದಕ್ಕಾಗಲಿ, ಬುಟ್ಟಿ ಎಣೆಯುವುದಕ್ಕಾಗಲಿ ಅಥವಾ ಕೃಷಿಕಾರ್ಯಗಳಿಗೆ ಅಲ್ಪಾವಧಿ ಸಾಲ ಪಡೆಯಬಹುದು. ಆದರೆ ಈ ಸೌಕರ್ಯ ಗ್ರಾಮದಲ್ಲಿ ಇಲ್ಲದಿರುವುದರಿಂದ, ಇಲ್ಲಿ ಆರ್ಥಿಕ ಚಟುವಟಿಕೆಗಳು ಕಡಿಮೆ ವೇಗದಲ್ಲಿ ಸಾಗಿದೆ, ಆರ್ಥಿಕ ಚಟುವಟಿಕೆಗಳು ಕ್ರಿಯಾತ್ಮಕಗೊಳ್ಳಬೇಕಾದರೆ ಸಾಲ ಸಹಕಾರಿ ಸಂಘ ಬೇಕಾಗುತ್ತದೆ. ನಾನು ಸಮೀಕ್ಷೆ ನಡೆಸಿದ ಪ್ರಕಾರ ಈ ಗ್ರಾಮಕ್ಕೆ ಸುಮಾರು ರೂ. 25 ಲಕ್ಷದಷ್ಟು ವಿವಿಧ ಆರ್ಥಿಕ ಚಟುವಟಿಕೆಗೆ ಬೇಕಾಗಿರುವ ಸಾಲದ ಮೊತ್ತದ ಅವಶ್ಯಕತೆ ಇದೆ, ಇನ್ನೂ ಅಲ್ಪ ಮೊತ್ತದ ಸಾಲವನ್ನು ಸರಕಾರ ರೈತರಿಗೆ ಇನ್ನಿತರ ಶ್ರಮ ಜೀವಿಗಳಿಗೆ ಪೂರೈಸಲಾಗದ ಸ್ಥಿತಿಯಲ್ಲಿರುವುದು ಸಹಕಾರ ಚಳುವಳಿಯ ಹಿನ್ನಡೆಯನ್ನು ಸೂಚಿಸುತ್ತದೆ. ಆದರೆ ಇಲ್ಲಿ ರೈತರು ಹಾಗೂ ಶ್ರಮ ಜೀವಿಗಳು ಕೃಷಿ ಸಾಲ ಸಹಕಾರ ಸಂಘ ಅವಶ್ಯಕತೆ ಇದೆ, ಎಂದು ಹೇಳುತ್ತಾರೆ ನಾನು ಸಮೀಕ್ಷೆ ಮಾಡಿದ 30 ಜನ ರೈತರಲ್ಲಿ 26 (86.66%) ಜನ ರೈತರು ಸಹಕಾರ ಸಂಘದ ಅವಶ್ಯಕತೆಯನ್ನು ಒತ್ತಿ ಹೇಳಿದರು, ಇವರ ಪ್ರಕಾರ ಸಹಕಾರ ಸಂಘವಿದ್ದರೆ ಖಾಸಗಿ ಲೇವಾದೇವಿಗಾರರಿಂದ ಹೆಚ್ಚಿನ ಮಟ್ಟದಬಡ್ಡಿ ದರ ನೀಡಿ ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದು ಹೇಳಿದರು. ಅಣ್ಣೆಹಳ್ಳಿಗೆ ಹೋಗಿ ಅಲ್ಲಿನ ಸ್ಥಳೀಯರ ಜೊತೆಗೆ ಸಹಕಾರಿ ಸಾಲ ಪಡೆಯಲು ಸ್ಪರ್ಧಿಸಬೇಕಾಗಿದೆ, ಎಂಬುದು ಇವರ ಅಭಿಮತ. ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ಸಾಲ ಒಂದು ಅವಶ್ಯ ಸಂಪನ್ಮೂಲ, ಸಾಲಕ್ಕೆ ಹೆಚ್ಚಿನ ಬೇಡಿಕೆ ಇದೆ, ಆದರೆ ಪೂರೈಕೆ

ಇಲ್ಲವೆ ಇಲ್ಲ, ಪಕ್ಕದ ಅಣ್ಣೆ ಹಳ್ಳಿಯ ರೈತರೊಂದಿಗೆ ಸ್ಪರ್ಧಿಸುವುದು ಸಾಧ್ಯವಿಲ್ಲ, ಅಲ್ಲಿನ ರೈತರಿಗೆ ಸಾಲ ಕೊಟ್ಟಾದ ಮೇಲೆ ನಮಗೆ ಸಾಲ ನೀಡಲಾಗುತ್ತದೆ ಆದ್ದರಿಂದ ಬಹುತೇಕ ರೈತರಿಗೆ ಹಾಗೂ ಶ್ರಮ ಜೀವಿಗಳಿಗೆ ಸಾಲದ ಅವಶ್ಯಕತೆ ಇರುವುದರಿಂದ ಸರಕಾರ ಆ ಸಾಲವನ್ನು ಹಳ್ಳಿಗರಿಗೆ ನೀಡಬೇಕಾಗಿರುವುದು ಒಂದು ಸಾಮಾಜಿಕ ಜವಾಬ್ದಾರಿ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಆದರೆ ಖಾಸಗಿ ಸಾಲ ಮಾಡಿಕೊಂಡು ಅಧಿಕ ಮೊತ್ತದ ಬಡ್ಡಿಯನ್ನು ನೀಡುತ್ತ, ಸಾಲದ ಮೂಲ ಹಣ ಹಾಗೂ ಏರುತ್ತಿರುವ ಬಡ್ಡಿಯನ್ನು ತೀರಿಸಲಾಗದೆ ಕಂಗಾಲಾಗಿರುವ ರೈತರು ಮತ್ತು ಶ್ರಮಿಕರು ತಮ್ಮ ಚೂರು ಪಾರು ಆಸ್ತಿಯನ್ನು ಖಾಸಗಿ ಲೇವಾದೇವಿಗಾರರಿಗೆ ಒತ್ತೆ ಇಟ್ಟು ನರಳುತ್ತಿದ್ದಾರೆ. ಆದರೆ ಸಹಕಾರಿ ಚಳುವಳಿಗಳ ಬಗ್ಗೆ ಸರಕಾರ ಎಷ್ಟೇ ಒತ್ತಿ ಹೇಳಿದರು ಸಹಕಾರಿ ಸಾಲ ರೈತರಿಗೆ ಯಾವುದೇ ಅಡಚಣೆ ಇಲ್ಲದೆ ಸಿಗುವಂತಾದರೆ ರೈತರ ದಾರಿದ್ರ್ಯ ನಿವಾರಣೆಯಾಗಬಹುದು. ಆದರೆ ಅಂತಹ ಸಂಕಲ್ಪ ಶಕ್ತಿ ನಮ್ಮ ಸರಕಾರದಲ್ಲಿಲ್ಲದಿರುವ ಅಭಾವ ಎದ್ದು ಕಾಣುತ್ತದೆ. ರೈತರು ಶ್ರಮ ಜೀವಿಗಳಲ್ಲಿ ಖಾಸಗಿ ಸಾಲ ಪಡೆದಿರುವವರು 26 (86.60%) ಜನ ಇದ್ದಾರೆ ಇನ್ನು ನಾಲ್ಕು (13.33%) ಜನ ಅಣ್ಣೆಹಳ್ಳಿ ಸಹಕಾರಿ ಸಾಲ ಪಡೆದಿದ್ದಾರೆ, ಸಮೀಕ್ಷೆಯನ್ನು ಗಮನಿಸಿದಾಗ ಸಹಕಾರಿ ಸಾಲ ಪಡೆಯುವ ಈ ಗ್ರಾಮದ ಬಹುತೇಕ ರೈತರು, ಶ್ರಮಜೀವಿಗಳು ವಿಫಲರಾಗಿದ್ದಾರೆಂಬುದು ಕಂಡು ಬರುತ್ತದೆ. ಸಮೀಕ್ಷೆಯಲ್ಲಿ ಕಂಡು ಬಂದ ಅಂಶವೆಂದರೆ ಖಾಸಗಿ ಲೇವಾದೇವಿಗಾರರು ನಮ್ಮ ಆಸ್ತಿಯನ್ನು ಬರೆದುಕೊಟ್ಟರೆ ತ್ವರಿತವಾಗಿ ಹಾಗೂ ಯಾವುದೇ ನಿಬಂಧನೆಗಳಿಲ್ಲದೆ ಸಾಲ ನೀಡುತ್ತಾರೆ ಆದರೆ ಅವರದು ಅಧಿಕ ಬಡ್ಡಿ ದರ ವಾಗಿರುವುದರಿಂದ ಸಾಲ ಪಡೆದ ಹಣವನ್ನು ತ್ವರಿತಗತಿಯಲ್ಲಿ ತೀರಿಸದಿದ್ದರೆ ಅಲ್ಪ ಅವಧಿಯಲ್ಲಿ ಬಡ್ಡಿ ಬೆಳೆದು ರೈತರು ಸಾಲ ತೀರಿಸಲಾರದ ಘಟ್ಟ ತಲುಪುತ್ತಾರೆ ಆಗ ಆಸ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದ ಸಮೀಕ್ಷೆಯಲ್ಲಿ ಕಂಡು ಬಂದ ಅಂಶ ಇಂತಹ ಸ್ಥಿತಿ ಈ ಗ್ರಾಮದಲ್ಲಿರಬೇಕಾದರೆ ರೈತರು, ಶ್ರಮ ಜೀವಿಗಳು ಬದುಕಲು ಸಾಧ್ಯವೆ? ಆರ್ಥಿಕ ಚಟುವಟಿಕೆಗಳು, ತ್ವರಿತಗತಿಯಲ್ಲಿ ಬೆಳೆಯಲು ಸಾಧ್ಯವೆ, ಎಂಬುದು ಅತಿ ಮುಖ್ಯವಾಗುತ್ತದೆ. ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿರುವುದು ರೈತರಿಗೆ ಅಲ್ಪಾವಧಿ ಸಾಲ ನೀಡುವುದಕ್ಕಾಗಿ ಆದರೆ ಅಂತಹ ಸಂಸ್ಥೆಯೇ ಇಲ್ಲದಿರುವುದರಿಂದ ರೈತರು ಮತ್ತು ಶ್ರಮ ಜೀವಿಗಳು ಸಾಲಗಾರರಾಗಿರುವುದು ಸಮಿಕ್ಷೆಯಿಂದ ಕಂಡು ಬಂದ ಅಂಶ, ಆದರೆ ಸಹಕಾರ ಸಂಘದ ಅವಶ್ಯಕತೆ ಅಂತಹ ಪ್ರಮುಖವಾದದಲ್ಲ ಎಂಬುದನ್ನು ನಾಲ್ಕು (13.33%) ಜನ ರೈತರು ವ್ಯಕ್ತಪಡಿಸಿದರು. ಯಾಕೆಂದರೆ ಸಹಕಾರ ಸಂಘಗಳು ರಾಜಕೀಯ ತಾಣಗಳಾಗಿರುವುದರಿಂದ ಮರಿ ರಾಜಕೀಯ ನಾಯಕರು ತಮ್ಮ ಹಿಂಬಾಲಕರಿಗಷ್ಟೆ ಸಾಲ ಕೊಡಿಸುತ್ತಾರೆ. ಅವರ ಹಿಂಬಾಲಕರಾಗದಿದ್ದರೆ ಅಂತಹವರಿಗೆ ಸಹಕಾರಿ ಸಾಲ ಸಿಗುವುದು ದುರ್ಲಬವಾಗುತ್ತದೆ. ಎಂದು ಹೇಳಿದರು. ಈಗ ಅಲ್ಲಿ ಪ್ರಬಲವಾಗಿರುವ ರಾಜಕೀಯ ಪಕ್ಷದ ಪ್ರಭಾವಿಗಳಿಗಷ್ಟೆ ಸಹಕಾರ ಸಾಲ ಸಿಗುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಲ್ಲಿ ಕಂಡು ಬಂದ ಅಂಶವೆಂದರೆ ಇದೀ ಸಹಕಾರಿ ಸಂಘ

ರಾಜಕೀಕರಣಗೊಂಡಿರುವುದು ಸಹಕಾರಿ ಚಳುವಳಿ ರಾಜಕೀಯದಿಂದ ಮುಕ್ತವಾಗಿರಬೇಕೆಂದು ಪಕ್ಷಾತೀತವಾಗಿ ಎಲ್ಲಾ ನಾಯಕರು ವ್ಯಕ್ತಪಡಿಸುತ್ತಿದ್ದರು, ಸಹಕಾರಿ ಸಂಘಗಳ ಸದಸ್ಯರಿಂದ ಹಿಡಿದು ಸಾಲ ವಿಲೇವಾರಿ ಯಾಗುವವರೆಗೂ ರಾಜಕೀಕರಣ ಗೊಂಡಿದೆ ಎಂಬುದು ಇಲ್ಲಿ ಕಂಡು ಬರುವ ಅಂಶ, ಇದರಿಂದಾಗಿ ಬಹಳಷ್ಟು ಪ್ರಭಾವಿಯಲ್ಲದ ರೈತರಿಗೆ ಸಹಕಾರಿ ಸಾಲ ಸಿಗುವುದು ಕಷ್ಟಕರವಾದದ್ದು ಎಂಬುದು ಗೋಚರಿಸುತ್ತದೆ ಜಾತಿಯೂ ಸಹ ಪ್ರಮುಖ ಪಾತ್ರ ವಹಿಸುತ್ತದೆ, ಎಂಬುದು ಸ್ಪಷ್ಟವಾಗಿದೆ ಆದ್ದರಿಂದ ಈ ಅಂಶಗಳನ್ನೇ ಮುಖ್ಯವಾಗಿಟ್ಟುಕೊಂಡು ಸಹಕಾರಿ ಚಳುವಳಿಯನ್ನು ನಿರ್ಲಕ್ಷಿಸುವುದು ಸರಿಯಲ್ಲ ಎಂಬುದೇ ನನ್ನ ಅಭಿಪ್ರಾಯ, ಆದಷ್ಟು ಪ್ರಮಾಣದಲ್ಲಿ ಸಹಕಾರಿ ಚಳುವಳಿ ರಾಜಕೀಕರಣಗೊಳ್ಳುವುದು ಜಾತೀಕರಣಗೊಳ್ಳುವುದನ್ನು ತಡೆ ಹಿಡಿಯಲೇ ಬೇಕು, ಅದಕ್ಕಾಗಿ ಸಹಕಾರಿ ಚಳುವಳಿಯ ಪ್ರಾಮುಖ್ಯತೆಯನ್ನು ತೆಗಳುವುದರಿಂದ ಏನೂ ಉಪಯೋಗವಿಲ್ಲ ಸಹಕಾರಿ ಚಳುವಳಿಯ ರಾಜಕೀಕರಣ ಹಾಗೂ ಜಾತೀಕರಣ ನಕಾರಾತ್ಮಕ ಅಂಶಗಳು ಇದ್ದರೂ ಇವನ್ನೆಲ್ಲ ಮೀರುವಂತೆ ಸಂಘಟನಾ ಶಕ್ತಿಯನ್ನು ಸಹಕಾರಿ ಚಳುವಳಿ ಬೆಳೆಸಿಕೊಳ್ಳಬೇಕಾಗಿದೆ ಆದರೆ ಇದಕ್ಕಾಗಿ ಸಹಕಾರಿ ಚಳುವಳಿಯನ್ನು ತೆಗಳುವುದು ಸಾಧುವಲ್ಲ. ಎಂಬುದೇ ನನ್ನ ಅಭಿಪ್ರಾಯ.

ಕೃಷಿ ಸಂಪನ್ಮೂಲ ಮಾರುಕಟ್ಟೆ :

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ಅತಿ ಮುಖ್ಯವಾದ ಮತ್ತೊಂದು ಅಂಶವೆಂದರೆ ರಸಗೊಬ್ಬರಗಳು, ಈಗಾಗಲೆ ಬೇರೆ ಅಧ್ಯಾಯದಲ್ಲಿ ನಾನು ತಿಳಿಸಿರುವಂತೆ ರಸಗೊಬ್ಬರಗಳ ಬಳಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತದೆ. ರಸಗೊಬ್ಬರಗಳ ಮೇಲೆ ರೈತರು ಹೆಚ್ಚು ಹೆಚ್ಚು ಹಣ ಹಾಕುತ್ತಿದ್ದಾರೆ, ನಾನು ಸಮೀಕ್ಷೆ ಮಾಡಿದ ಪ್ರಕಾರ 22 (73.33%) ರೈತರು ವರ್ಷಕ್ಕೆ ಎಕರೆಗೆ 5000 ರೂಗಳಿಗಿಂತ ಜಾಸ್ತಿ ಖರ್ಚು ಮಾಡುತ್ತಿದ್ದಾರೆ. ಉಳಿದ (26.66%) 8 ಜನ ರೈತರೂ ವರ್ಷಕ್ಕೆ 5000 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಖರ್ಚು ಮಾಡುತ್ತಿದ್ದಾರೆ. ಇಲ್ಲಿ ರೈತರು ಕೇವಲ ರಸಗೊಬ್ಬರಗಳನ್ನಷ್ಟೇ ಅಲ್ಲ ಸಾಂಪ್ರದಾಯಿಕ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ , ಹಸಿರೆಲೆಗೊಬ್ಬರ , ಕಾಂಪೋಸ್ಟ್ ಮುಂತಾದವುಗಳನ್ನು ಬಳಸುತ್ತಿದ್ದಾರೆ ರಸಗೊಬ್ಬರ ರಹಿತ ಬೇಸಾಯ ಇನ್ನು ಈ ಗ್ರಾಮದಲ್ಲಿ ಸಾಧ್ಯವಾಗಿಲ್ಲ, ಆದರೂ ರಸಗೊಬ್ಬರಗಳು ಉತ್ಪಾದಕತೆ ಹೆಚ್ಚಿಸುತ್ತವೆ ಎಂಬುದೆ ಇವರ ಅಭಿಮತ. 18 (60%) ಜನ ರೈತರು ಸಹಕಾರಿ ಸಂಘ ಮೂಲಕ ರಸಗೊಬ್ಬರಗಳನ್ನು ಪಡೆದರೆ ಉಳಿದ (40%) 12 ಜನ ರೈತರು ಖಾಸಗಿ ಮಳಿಗೆಗಳಿಂದ ರಸಗೊಬ್ಬರಗಳನ್ನು ಪಡೆಯುತ್ತಾರೆ ರಸಗೊಬ್ಬರಗಳು ಸಹಕಾರಿ ಸಂಘದಿಂದ ಪಡೆಯುವುದಕ್ಕೆ ಗುಣಮಟ್ಟದ ಖಾತ್ರಿ ಇರುವುದೇ ಮುಖ್ಯವಾಗಿದೆ. ಆದರೆ ಖಾಸಗಿ ಮಳಿಗೆಗಳಲ್ಲಿ ರಸಗೊಬ್ಬರಗಳ ಗುಣಮಟ್ಟ ಕಾಯ್ದಿಡುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳುತ್ತಾರೆ. ಆದರೆ ಎಲ್ಲರಿಗೂ ಸಹಕಾರ ಸಂಘಗಳಿಂದ ರಸಗೊಬ್ಬರ ಸಿಗುವುದು ಕಷ್ಟ ಎಂದು ಹೇಳುತ್ತಾರೆ,

ಸಹಕಾರಿ ಸಂಘಗಳಿಂದ ರಸಗೊಬ್ಬರದ ಗುಣಮಟ್ಟ ಖಾತ್ರಿ ಇದೆ ಎಂದು 15 (50%) ಜನ ರೈತರು ಹೇಳಿದರೆ ಇನ್ನೂ 15 (50%) ಜನ ರೈತರು ಸಹಕಾರಿ ಸಂಘಗಳು ಸಹ ಇತ್ತೀಚಿಗೆ ಗುಣಮಟ್ಟ ಕಾಯ್ದಿಡುವಲ್ಲಿ ಸೋತಿದೆ ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಆದರೆ ಸಹಕಾರಿ ಸಂಘಗಳು ವಿತರಿಸುವ ರಸಗೊಬ್ಬರಗಳು ಬಹಳಷ್ಟು ಜನ ರೈತರೇ ಹೇಳುವಂತೆ ಗುಣಮಟ್ಟ ಚೆನ್ನಾಗಿದೆ ಹಾಗೂ ನ್ಯಾಯಯುತ ಬೆಲೆಗಳೆ ದಕ್ಕುತ್ತಿದೆ ಎಂಬುದಾಗಿದೆ. ಆದರೆ ಖಾಸಗಿ ಮಳಿಗೆಗಳಲ್ಲಿ ಗುಣಮಟ್ಟ ಹಾಗೂ ಬೆಲೆ ಏರುಪೇರಾಗುತ್ತದೆ, ಒಮ್ಮೊಮ್ಮೆ ರಸಗೊಬ್ಬರಗಳು ಪೂರೈಕೆ ಕಡಿಮೆ ಇದ್ದಾಗ ಚೀಲದ ಮೇಲೆ ನಮೂದಿಸಿರುವ ಬೆಲೆಗಿಂತ ಹೆಚ್ಚಾಗಿ ಪಡೆಯುತ್ತಾರೆ ಎಂಬ ಆರೋಪವಿದೆ. ಸಮೀಕ್ಷೆಯಲ್ಲಿ ವ್ಯಕ್ತವಾದ ಅಂಶವೆಂದರೆ 22 ಕ್ಕೂ (73.33%) ಹೆಚ್ಚು ರೈತರು ಖಾಸಗಿ ಮಳಿಗೆಯಲ್ಲಿ ಖರೀದಿಸುವುದರಲ್ಲಿ ಗುಣಾತ್ಮಕತೆಯೂ ಇರುವುದಿಲ್ಲ, ಚೀಲದ ಮೇಲೆ ನಮೂದಿಸಿರುವ ಬೆಲೆಗಿಂತ ಹೆಚ್ಚಾಗಿ ಪಡೆಯುತ್ತಾರೆ ಎಂಬ ಆರೋಪ. ಉಳಿದ (26.66%) 8 ಜನ ರೈತರು ಖಾಸಗಿ ಮಳಿಗೆಗಳಲ್ಲಿ ಕೊಳ್ಳುವುದು ಅನಿವಾರ್ಯ ಎಂಬ ಅಭಿಪ್ರಾಯ. ಸಹಕಾರಿ ಸಂಘಗಳು ರೈತರ ಅವಶ್ಯಕ ಪೂರೈಸುವಾಗಿದ್ದರ ಎಲ್ಲ ರೈತರು ಅಲ್ಲೆ ರಸಗೊಬ್ಬರಗಳು ಕೊಳ್ಳುತ್ತಾರೆ. ಆದರೆ ಬೇಸಾಯದ ಮುಖ್ಯ ಹಂತದಲ್ಲಿ ರಸಗೊಬ್ಬರಗಳು ಅವಶ್ಯಕತೆ ಇದ್ದಾಗ , ರಸಗೊಬ್ಬರಗಳು ಸಿಗದೆ ರೈತರು ಕಂಗಾಲಾಗಿ ಎದುರಿಸುವ ಸಂಕಷ್ಟಗಳು ಯಾರಿಗೆ ಹೇಳಬೇಕೆಂಬುದು ರೈತರ ಅಭಿಪ್ರಾಯ ಆದರೆ ಈ ಸಮೀಕ್ಷೆಯಿಂದ ತಿಳಿದ ಅಂಶವೆಂದರೆ ಸಹಕಾರಿ ಸಂಘಗಳ ಜಾಲವನ್ನು ವಿಸ್ತರಿಸಿದರೆ ರೈತರಿಗೆ ರಸಗೊಬ್ಬರಗಳನ್ನು ಖಾಸಗಿ ಮಳಿಗೆಗಳಿಗೆ ದುಂಬಾಲು ಬೀಳುವುದು ತಪ್ಪುತ್ತದೆಂಬುದು ಮಾಡಿದ ಅಭಿಪ್ರಾಯ. ಆದರೆ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ನಡೆದಿಲ್ಲ ಎಂಬುದೇ ರೈತರ ಆರೋಪ ರಸಗೊಬ್ಬರಗಳನ್ನು ಸಹಾರಿ ಸಂಘಗಳಿಂದ ಕೊಳ್ಳಲಿ ಅಥವಾ ಖಾಸಗಿ ಮಳಿಗೆಗಳಿಂದ ಕೊಳ್ಳಲಿ ಕೋಲಾರದಿಂದ ಬಹುತೇಕ ರೈತರು ತಮ್ಮ ಗ್ರಾಮಕ್ಕೆ ರಿಕ್ಷಾ ಮೂಲಕ ಸಾಗಿಸುತ್ತಾರೆ. ಸಮೀಕ್ಷೆ ಮಾಡಿದ ರೈತರಲ್ಲಿ 28(83.33%) ಜನ ರೈತರು ರಿಕ್ಷಾದ ಮೂಲಕ ಸಾಗಾಣಿಕೆ ಮಾಡಿದರೆ, ಉಳಿದ (6.66%) 2 ಜನ ಎತ್ತಿನ ಗಾಡಿಗಳನ್ನು ಬಳಸುತ್ತಾರೆ. ಈ ರೀತಿ ರಸಗೊಬ್ಬರ ಸಾಗಾಣಿಕೆ ಪಕ್ಕ ರಸ್ತೆ ಇರುವುದರಿಂದ ಬಹಳಷ್ಟು ರೈತರಿಗೆ ಸುಲಭವಾಗಿದೆ. ಆದ್ದರಿಂದ ರಸಗೊಬ್ಬರವನ್ನು ಕೋಲಾರದಿಂದ ತಮ್ಮ ಗ್ರಾಮಕ್ಕೆ ಸಾಗಾಣಿಕೆ ಮಾಡುವಲ್ಲಿ ಸಾಗಾಣಿಕೆ ವೆಚ್ಚ ಹಾಗೂ ಸಾಗಾಣಿಕೆ ವಿಧಾನ ಸಹಾ ಸುಲಭವಾಗಿದೆ. ರೈತರು ರಸಗೊಬ್ಬರಗಳ ಸಾಗಾಣಿಕೆಯಲ್ಲಿ ಅಂತಹ ಕಷ್ಟವೇನು ಇಲ್ಲ ಆದರೆ ಬಹಳಷ್ಟು ರೈತರು ಆದರೆ 22 (73.33%) ಜನ ರೈತರು ಒಟ್ಟು ಉತ್ಪನ್ನವಾದ ಬೆಲೆಯಲ್ಲಿ ರಸಗೊಬ್ಬರಗಳಿಗೆ ಮಾಡುವ ವೆಚ್ಚ ಶೇ. 10 ರಿಂದ 15 ರವರೆಗೆ ಇದೆ. (16.66%) 5 ಜನ ರೈತರು ಮಾಡುವ ವೆಚ್ಚ ಶೇ. 5 ರಿಂದ 10 ರವರೆಗೆ 3 (ಶೇ. 10) ಜನ ರೈತರು ಮಾಡುವ ವೆಚ್ಚ ಶೇ 5 ಕ್ಕಿಂತ ಕಡಿಮೆ ಹೀಗೆ ರಸಗೊಬ್ಬರಗಳನ್ನು ವ್ಯಾಪಕವಾಗಿ ಬಹಳಷ್ಟು ರೈತರು ಬಳಸುತ್ತಿದ್ದಾರೆ. ಆದರೆ ಈಗಾಗಲೇ ತಿಳಿಸಿರುವಂತೆ ಇದರ ಜೊತೆಗೆ ಕೊಟ್ಟಿಗೆ ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರವನ್ನು ಬಳಸುತ್ತಾರೆ. ಆದರೆ ರಸಗೊಬ್ಬರಗಳ ಬಳಕೆಯು

ಪ್ರಾಮುಖ್ಯತೆ ಕಡಿಮೆಯಾಗಿಲ್ಲ, ಬಹುತೇಕ ರೈತರು ಒಟ್ಟು ಉತ್ಪನ್ನದ ಬೆಲೆಯಲ್ಲಿ ಶೇ. 10 ರಿಂದ ಶೇ. 15 ರಷ್ಟು ಮೀಸಲಿಡುತ್ತಿದ್ದಾರೆ. ಆದ್ದರಿಂದ ರಸಗೊಬ್ಬರ ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗಬೇಕೆಂಬುದೆ, ಇಲ್ಲಿನ ರೈತರ ಅಹವಾಲು ಹಾಗೆಯೇ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಶೇ. 10 -15 ರಷ್ಟನ್ನು ರಸಗೊಬ್ಬರಗಳ ಬಳಕೆಗೆ ಮೀಸಲಿಡಲಾಗಿದೆ. ಉತ್ಪನ್ನದ ಬೆಲೆ ಯಾವಾಗಲೂ ಉತ್ಪಾದನಾ ವೆಚ್ಚಕ್ಕಿಂತ ಜಾಸ್ತಿ ಇರಬೇಕಾದದ್ದು ನ್ಯಾಯಯುತವಾದದ್ದು ಆದರೆ ಈಗಿನ ಸಂದರ್ಭದಲ್ಲಿ ಉತ್ಪನ್ನದ ಬೆಲೆ ಉತ್ಪಾದನಾ ವೆಚ್ಚವನ್ನು ಭರಿಸುವುದಿರಲಿ ಮಾರುಕಟ್ಟೆ ವೆಚ್ಚ ಅಥವಾ ಸಾಗಾಣಿಕೆ ವೆಚ್ಚವನ್ನು ಸಹ ಉತ್ಪನ್ನದ ಬೆಲೆ ಭರಿಸಲಾರದ ಸ್ಥಿತಿಯನ್ನು ಇಂದು ತಲುಪಿದೆ. ನ್ಯಾಯವಾಗಿ ಇರಬೇಕಾಗಿದ್ದು ಉತ್ಪನ್ನದ ಬೆಲೆ ಉತ್ಪಾದನಾ ವೆಚ್ಚಕ್ಕಿಂತ ಶೇ. 15 ರಿಂದ 20 ರಷ್ಟು ಹೆಚ್ಚಾಗಿದ್ದರೆ ರೈತ ಕೃಷಿಯಲ್ಲಿ ಉಳಿಯಬಲ್ಲ ಆದರೆ ಈಗಿನ ವಿದ್ಯಮಾನಗಳು ಉತ್ಪನ್ನದ ಬೆಲೆ ಸಾಗಾಣಿಕೆ ವೆಚ್ಚವನ್ನು ಭರಿಸಲಾರದ ಸ್ಥಿತಿಯನ್ನು ತಲುಪಿವೆ. ಇಂತಹ ಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ರೈತರು ರಸಗೊಬ್ಬರಗಳನ್ನು ಉತ್ಪನ್ನದ ಬೆಲೆಯಲ್ಲಿ ಶೇ. 10 ರಿಂದ 15 ರವರೆಗೆ ಮೀಸಲಿಟ್ಟರೆ ಇಂದಿನ ಸಂದರ್ಭದಲ್ಲಿ ಉತ್ಪಾದನಾ ವೆಚ್ಚ ಏರುವಂತೆ ಮಾಡುವುದರಿಂದ ರೈತರು ನಷ್ಟ ಅನುಭವಿಸುವುದು ಖಚಿತವಾಗಿದೆ ಮುಖ್ಯ ಸಂಪನ್ಮೂಲಗಳಾದ ಬೀಜ, ಕೀಟನಾಶಕ , ಕಾರ್ಮಿಕರ ಕೂಲಿ ಇದರ ಜೊತೆಗೆ ಮಾರುಕಟ್ಟೆ ವೆಚ್ಚ ಇತ್ಯಾದಿಗಳಲ್ಲೆ ಸೇರಿ ಒಟ್ಟು ಉತ್ಪಾದನಾ ವೆಚ್ಚ ಆಗುತ್ತದೆ. ಈ ಉತ್ಪಾದನಾ ವೆಚ್ಚವನ್ನ ಭರಿಸಲಾರದ ಬೆಲೆ ಉತ್ಪನ್ನಗಳಿಗೆ ಸಿಕ್ಕಿದರೂ, ರಸಗೊಬ್ಬರಗಳ ಬಳಕೆಯ ಪ್ರಮಾಣ ಕಡಿಮೆಯಾಗಿಲ್ಲ. ಬಹಳಷ್ಟು ರೈತರು ಉತ್ಪಾದನಾ ವೆಚ್ಚದಲ್ಲಿ ಶೇ. 10 -15 ರಷ್ಟು ರಸಗೊಬ್ಬರಗಳಿಗೆ ಮೀಸಲಿಡುತ್ತಿದ್ದಾರೆ. ಹೀಗೆ ರೈತರು ಕಳೆದ 50 ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ರಸಗೊಬ್ಬರಗಳ ಬಳಕೆ ಹಾಗೆಯೇ ಮುಂದುವರಿದಿದೆ, ರಸಗೊಬ್ಬರ ಬಳಕೆಯಿಂದ ಹೆಚ್ಚು ಇಳುವರಿ ಪಡೆಯಬಹುದು ಎಂಬ ನಂಬಿಕೆ ಹಸಿರು ಕ್ರಾಂತಿ ಪ್ರಾರಂಭವಾದಾಗಲಿಂದಲೂ ಸುಧಾರಿತ ತಳಿಗಳು, ಸಂಕರಣೆಗೊಂಡ ತಳಿಗಳು ರಸಗೊಬ್ಬರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತವೆ ಎಂಬುದು ಸ್ಪಷ್ಟ. ಆದರೆ ರಸಗೊಬ್ಬರಗಳು ನಿರಂತರವಾಗಿ ಬಹಳಷ್ಟು ವರ್ಷಗಳು ಬಳಸುವುದರಿಂದ ಮಣ್ಣಿನ ಆರೋಗ್ಯ ಕೆಡುವುದು ರೈತರಿಗೆ ತಿಳಿಯುವುದಿಲ್ಲ ಆದರೆ ಇದು ದೂರಗಾಮಿ ಪರಿಣಾಮವಾಗಿರುವುದರಿಂದ ತತ್ ಕ್ಷಣದ ಫಲಗಳನ್ನು ರೈತರು ನೋಡುವುದರಿಂದ ರಸಗೊಬ್ಬರಗಳ ಬಳಕೆ ಹೆಚ್ಚಿದೆ. ನಾನು ಸಮೀಕ್ಷೆ ಮಾಡಿದ ರೈತರಲ್ಲಿ (43.33%) 13 ಜನ ಶೇ. 10 ರಿಂದ ಶೇ. 15 ರಷ್ಟನ್ನು ರಸಗೊಬ್ಬರಗಳಿಗೆ ಮೀಸಲಿಟ್ಟರೆ ಉಳಿದಂತ 17 (56.66%) ಜನ ರೈತರು ಶೇ. 16 ರಿಂದ ಶೇ. 20 ರಷ್ಟು ರಸಗೊಬ್ಬರಗಳಿಗೆ ಬಳಸುತ್ತಾರೆ. ಇದು ರೈತರ ಪ್ರಕಾರ ಕಡಿಮೆ ಪ್ರಮಾಣದ್ದು, ಇದರಲ್ಲಿ ಸಣ್ಣ ರೈತರೂ ಬಹಳಷ್ಟು ಜನರಿದ್ದಾರೆ, 17 ಜನ ರೈತರಲ್ಲಿ 16 ಜನ ಸಣ್ಣರೈತರು ಮತ್ತು ಮಧ್ಯಮ ರೈತರು (ಹಣ ಇದ್ದರೆ) ರಸಗೊಬ್ಬರಗಳನ್ನು ಇನ್ನೂ ಜಾಸ್ತಿ ಬಳಸಲು ತಯಾರಿದ್ದಾರೆ. ಆದ್ದರಿಂದ ರಸಗೊಬ್ಬರಗಳ ಬಳಕೆ ಹೆಚ್ಚು ಇಳುವರಿ ತರುವಲ್ಲಿ ಸಂಶಯವಿಲ್ಲ ಆದರೆ

ದೂರಗಾಮಿ ದುಷ್ಪರಿಣಾಮಗಳ ಬಗ್ಗೆ ರೈತರು ಮರೆಯುತ್ತಾರೆ, ನೀರಾವರಿಯಲ್ಲಿ ರಸಗೊಬ್ಬರಗಳು ಹೆಚ್ಚು ಪರಿಣಾಮಕಾರಿ ಸಂಪನ್ಮೂಲ ಎಂಬುದನ್ನು ರೈತರು ಒಪ್ಪಿಕೊಳ್ಳುತ್ತಾರೆ ಆದರೆ ಹಣದ ಅಭಾವದಿಂದ ಬಹಳಷ್ಟು ರೈತರು ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರ ಬಳಸುತ್ತಾರೆ ಇಲ್ಲದೆ ಹೋಗಿದ್ದರೆ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಶೇ. 25 ರಿಂದ 30 ರಷ್ಟು ರಸಗೊಬ್ಬರಗಳನ್ನು ಬಳಸಲು ತಯಾರಿಸಿದ್ದಾರೆ. ಆದರೆ, ಬಹಳಷ್ಟು ರೈತರು ಸಣ್ಣ ಮತ್ತು ಮಾಧ್ಯಮ ರೈತರಾಗಿರುವುದರಿಂದ ಹೆಚ್ಚು ಹಣವನ್ನು ರಸಗೊಬ್ಬರಗಳಿಗೆ ಮೀಸಲಿಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಈಗಾಗಲೆ ಹೇಳಿರುವಂತೆ ಉತ್ಪನ್ನದ ಬೆಲೆ ಮಾರುಕಟ್ಟೆ ವೆಚ್ಚ ಸೇರಿ ಒಟ್ಟು ಉತ್ಪಾದನಾ ವೆಚ್ಚ ವನ್ನು ಬಹಳಷ್ಟು ಸಂದರ್ಭದಲ್ಲಿ ಭರಿಸಲಾರದ ಸ್ಥಿತಿ ತಲುಪುವುದರಿಂದ ರಸಗೊಬ್ಬರ ಬಳಕೆ ಬಯಸಿದಷ್ಟು ಪ್ರಮಾಣದಲ್ಲಿ ಹೆಚ್ಚಾಗಿಲ್ಲ. ಆದರೆ ರಸಗೊಬ್ಬರಗಳ ಬಳಕೆ ಹೆಚ್ಚಾಗಿಲ್ಲದಿರುವುದನ್ನು ಒಂದು ದುರಂತ ಎಂದು ಹೇಳಬೇಕಾಗಿಲ್ಲ, ಯಾಕೆಂದರೆ ರಸಗೊಬ್ಬರ ಬಳಕೆಯ ನಕಾರಾತ್ಮಕ ಅಂಶಗಳು ಇವೆ ಸಕಾರಾತ್ಮಕ ಅಂಶಗಳು ಇವೆ, ಅಧ್ಯಯನದ ಪ್ರಕಾರ ರೈತರು ರಸಗೊಬ್ಬರಗಳ ನಕಾರಾತ್ಮಕ ಅಂಶಗಳನ್ನು ಗಮನಿಸಿಯೇ ಇಲ್ಲ, ಇವುಗಳ ಸಕಾರಾತ್ಮಕ ಅಂಶಗಳನ್ನು ನಂಬಿ ರಸಗೊಬ್ಬರಗಳನ್ನು ಬಳಸುತ್ತಿದ್ದಾರೆ. ಹೀಗೆ ರಸಗೊಬ್ಬರಗಳನ್ನು ಬಳಸುವುದರಿಂದ ಇಳುವರಿಯೂ ಸಹ ಹೆಚ್ಚಾಗುತ್ತದೆ. ಹೀಗೆ ಉತ್ಪಾದಕತೆ ಹೆಚ್ಚಾಗುವುದರಿಂದ ರೈತರು ತಮ್ಮ ನಿಗದಿತ ಜಮೀನಿನಿಂದ ಗರಿಷ್ಟ ಪ್ರಮಾಣದ ಇಳುವರಿಯನ್ನು ಪಡೆಯಬಹುದು. ಹಿಂದೆ ಸ್ಥಳೀಯ ತಳಿಗಳನ್ನು ಬಳಸಿ, ಕೊಟ್ಟಿಗೆಗೊಬ್ಬರ ಬಳಸಿ ಎಕರೆಗೆ 4-5 ಚೀಲ ರಾಗಿ ಬೆಳೆಯುತ್ತಿದ್ದ ರೈತರ ಸುಧಾರಿತ ಹಾಗೂ ಹೈಬ್ರಿಡ್ ರಾಗಿ ತಳಿಗಳನ್ನು ಬಳಸಿ ಎಕರೆಗೆ 12-15 ಚೀಲ (ಕ್ವಿಂಟಾಲ್) ಬೆಳೆ ತೆಗೆಯುವುದು.

ಆ) ಅರಹಳ್ಳಿ ಗ್ರಾಮ:

ಗ್ರಾಮ ಪರಿಚಯ:

ಅರಹಳ್ಳಿ ಗ್ರಾಮ ಕೋಲಾರದಿಂದ 6 ಕಿ.ಮೀ. ದೂರದಲ್ಲಿದೆ. ಇದು ಕೋಲಾರ ಚಿಂತಾಮಣಿ ರಸ್ತೆಯಲ್ಲಿದೆ, ಈ ರಸ್ತೆಯಿಂದ ಅರ್ಧ ಕಿ.ಮೀ. ಒಳಗೆ ನಡೆದರೆ ಅರಹಳ್ಳಿ ಗ್ರಾಮ ಸಿಗುತ್ತದೆ, ಈ ಗ್ರಾಮವನ್ನು ಆಯ್ಕೆ ಮಾಡಿಕೊಂಡಿದ್ದು ಇದು ಅಭಿವೃದ್ಧಿ ಹೊಂದಿದೆ ಎಂಬ ಕಾರಣಕ್ಕಾಗಿ ಇದು ಕೋಲಾರದಿಂದ North west (ವಾಯುವ್ಯ ದಿಕ್ಕಿಗೆ) ಇದೆ. ಈ ಗ್ರಾಮದಲ್ಲಿ ಒಟ್ಟು 350 ಕುಟುಂಬಗಳು ಇವೆ ಈ ಗ್ರಾಮದ ಜನ ಸಂಖ್ಯೆ 1800, ಈ ಗ್ರಾಮದಲ್ಲಿ ದಲಿತರಿಂದ ಹಿಡಿದು ಎಲ್ಲಾ ಜಾತಿಗಳು ಇವೆ, ವಕ್ಕಲಿಗರದು 125 (32.20%) ಕುಟುಂಬಗಳಿವೆ ಎಸ್.ಸಿ. ಗಳದು 100(22.5%) ಮನೆಗಳಿವೆ, ಕುರುಬರದು 7.42%) 26 ಮನೆಗಳಿವೆ, ಬೆಸ್ತರದು 15 (4.25%) ಮನೆಗಳಿವೆ ತಿಗಳರು (14.25%) 50 ಮನೆಗಳಿವೆ , ವಿಶ್ವಕರ್ಮ (1.7%) 6 ಮನೆಗಳಿವೆ, ಬಲಿಜಗರು 5 (2.20%) ಮನೆಗಳಿವೆ, ಪದ್ಮಸಾಲಿ 5(1.4%) ಮನೆಗಳಿವೆ, ಬೋವಿ 15(4.28%) ಮನೆಗಳು ಇವೆ, ಇಲ್ಲಿನ ಜಾತಿ ವ್ಯವಸ್ಥೆ ನಾನು ಅಧ್ಯಯನಿಸಿದ ಮಾರ್ಜೇನಹಳ್ಳಿಗಿಂತ ವಿಭಿನ್ನವಾಗಿದೆ. ಇಲ್ಲಿ ಎಲ್ಲ ತರದಲ್ಲೂ ವಕ್ಕಲಿಗರದೆ ಪ್ರಾಬಲ್ಯ, ದಲಿತರು ಸರಕಾರದ ಕಾನೂನು ನೀತಿಗಳಿಂದ ಸ್ವಲ್ಪ ಮಟ್ಟಿಗೆ ಪ್ರಬಲರಾಗಿದ್ದಾರೆ, ಆದರೆ ಕುರುಬರು, ತಿಗಳರು, ಪದ್ಮಸಾಲಿಗಳು, ವಿಶ್ವ ಕರ್ಮರು ಹಿಂದುಳಿದ ವರ್ಗಗಳ ಗುಂಪಿಗೆ ಸೇರಿವೆ, ಈ ರೀತಿಗಳಲ್ಲಿ ಅಂತಹ ಹೊಂದಾಣಿಕೆಯೇನು ಇಲ್ಲ ಎಂದರು, ರಾಜಕೀಯವಾಗಿ ಜಾಗ್ರತರಾಗಿದ್ದಾರೆ, ಹಿಂದುಳಿದ ವರ್ಗಗಳು ಕಾಂಗ್ರೇಸ್ ಬೆಂಬಲಗರಾಗಿದ್ದಾರೆ, ದಲಿತರಲ್ಲಿ ಬಹಳಷ್ಟು ಮಂದಿ ಕಾಂಗ್ರೇಸ ತೆಕ್ಕೆಯಲ್ಲಿದ್ದಾರೆ, ವಕ್ಕಲಿಗರಲ್ಲಿ ಬಹಳಷ್ಟು ಮಂದಿ ಜೆ.ಡಿ.ಎಸ್. ಪರ ಇದ್ದಾರೆ, ಇಲ್ಲಿನ ಜಾತಿ ವ್ಯವಸ್ಥೆಯನ್ನು ಗಮನಿಸಿದರೆ ವಕ್ಕಲಿಗರು ಮತ್ತು ಹಿಂದುಳಿದ ವರ್ಗಗಳು ಅಸ್ಪಶ್ಯತೆಯನ್ನು ಅಚರಿಸುತ್ತಿಲ್ಲ. ಅಸ್ಪೃಶ್ಯತೆ ಎಂಬುದು ಇಲ್ಲಿ ಹೆಚ್ಚು ಕೆಲಸ ಮಾಡುತ್ತಿಲ್ಲ ಇದು ಸ್ವಾತಂತ್ರ್ಯ ಬಂದು 60 ವರ್ಷಗಳಾದ ಮೇಲೆ ಸಿಗುವ ಸ್ಪಷ್ಟ ಚಿತ್ರಣ, ಹಿಂದುಳಿದ ವರ್ಗಗಳಲ್ಲಿ ಅಂತಹ ವ್ಯತ್ಯಾಸವಿಲ್ಲದೆ, ಪರಸ್ಪರ ಮನೆಗಳಲ್ಲಿ ಊಟ ಮಾಡುವುದನ್ನು ಇಲ್ಲಿ ಕಾಣಬಹುದು. ದಲಿತರು ಮತ್ತು ವಕ್ಕಲಿಗರು ಪ್ರಬಲವಾಗಿರುವುದರಿಂದ ವಕ್ಕಲಿಗರು ರಾಜಕೀಯ ಸ್ವಾಮ್ಯ ಸ್ಥಾಪಿಸಿದ್ದರೂ ಗ್ರಾಮ ಪಂಚಾಯತಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲು ಇರುವುದರಿಂದ ಅನಿವಾರ್ಯವಾಗಿ ದಲಿತರಿಗೆ, ಕುರುಬರಿಗೆ, ತಿಗಳರಿಗೆ ಪದ್ಮಸಾಲಿಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ಪಾಲು ಪಡೆಯಲು ಸಾಧ್ಯವಾಗಿದೆ. ಆದರೂ ವಕ್ಕಲಿಗರು, ದಲಿತರನ್ನು ಹಾಗೂ ಇನ್ನಿತರ ಹಿಂದುಳಿದ ವರ್ಗಗಳನ್ನು ಅಷ್ಟಾಗಿ ಓಲೈಸುವುದಿಲ್ಲ ಎಂಬ ಅಸಮಾಧಾನ ದಲಿತ ಹಾಗೂ ಹಿಂದುಳಿದ ವರ್ಗಗಳಲ್ಲಿದೆ. ಕುರುಬರು, ದಲಿತರ ಜೊತೆ ಸೇರಿದ್ದಾರೆ. ರೈತರ ಸಮೂಹದಲ್ಲಿ ವಕ್ಕಲಿಗರೂ ಕುರುಬರು, ಬಲಿಜಗರು ಬೆಸ್ತರು ಬರುತ್ತಾರೆ, ಆದರೆ ಹಿಡುವಳಿಗಳನ್ನು ಹೊಂದಿರುವಲ್ಲಿ ಸಣ್ಣ ಪ್ರಮಾಣದ ಹಿಡುವಳಿದಾರರು ಕುರುಬರು, ಬೆಸ್ತರು, ತಿಗಳರ ಸಮೂಹ ಹೆಚ್ಚಿನ ಪ್ರಮಾಣದಲ್ಲಿದೆ. ದೊಡ್ಡ ಹಿಡುವಳಿದಾರರಲ್ಲಿ ವಕ್ಕಲಿಗರ ಸಮೂಹ ಹೆಚ್ಚಿನ ಪ್ರಮಾಣದಲ್ಲಿದೆ. ನಾನು ಸಮೀಕ್ಷೆ ಮಾಡಿದ

30 ಜನರಲ್ಲಿ ವಕ್ಕಲಿಗರು 15 (50%) ಜನ ದಲಿತರು, 10 (33.33%) ಜನ, ಕುರುಬರು 3 (10%) ಜನ, ತಿಗಳರು 2 (6.6%) ಜನ, ಇವರಲ್ಲಿ ವಕ್ಕಲಿಗರಲ್ಲಿ (16.66%^) 5 ಜನ ದೊಡ್ಡ ಹಿಡುವಳಿವಾರು ಅಂದರೆ 10 ಎಕರೆಗಿಂತ ಜಾಸ್ತಿ ಇರುವವರು. ದಲಿತರಲ್ಲಿ ಕುರುಬರಲ್ಲಿ, ತಿಗಳರಲ್ಲಿ ದೊಡ್ಡ ಹಿಡುವಳಿದಾರರು ಯಾರು ಇಲ್ಲ, ಇದು ಸ್ಪಷ್ಟ ಪಡಿಸುವುದೇನೆಂದರೆ ಪ್ರಬಲ ಜಾತಿಯಾದ ವಕ್ಕಲಿಗರಲ್ಲೂ ದೊಡ್ಡ ಹಿಡುವಳಿದಾರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದು. ಕುರುಬ, ತಿಗಳ, ಬೆಸ್ತ, ಪದ್ಮಶಾಲಿಗಳಲ್ಲಿ ಸಣ್ಣ ಹಿಡುವಳಿದಾರರ ವಿಪುಲವಾಗಿರುವುದು, ಗ್ರಾಮದ ಒಟ್ಟ ಜನ ಸಂಖ್ಯೆಯಲ್ಲಿ ಅಂದರೆ 350 ಕುಟುಂಬಗಳಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳು 150; ಉಳಿದ 200 ಜನ ಕೃಷಿಯೇತರ ಚಟುವಟಿಕೆ ಹಾಗೂ ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ., ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ 150. ಅಂದರೆ ಸುಮಾರು ಗ್ರಾಮದ ಅರ್ಧದಷ್ಟು ಕುಟುಂಬಗಳು ಕೃಷಿ ಅವಲಂಬಿತರಾಗಿದ್ದಾರೆ. ಇನ್ನು ಅರ್ಧದಷ್ಟು ಜನಸಂಖ್ಯೆ ಕೃಷಿಯೇತರ ಇಟ್ಟಿಗೆ ಕಾರ್ಖಾನೆ, ನೇಯ್ಗೆ, ಬಡಗಿ ಕೆಲಸ ಪೇಂಟರ್ ಗಳು ಟೈಲರಿಂಗ್ ಹಾಗೂ ಕೃಷಿ ಕೂಲಿಗಳಾಗಿದ್ದಾರೆ. ನಾನು ಸಮೀಕ್ಷೆ ಮಾಡಿದ ಮುವತ್ತು ಜನರಲ್ಲಿ ಸಣ್ಣ ಹಿಡುವಳಿದಾರರು ವಕ್ಕಲಿಗರಲ್ಲಿ 10 (33.33%) ಜನ ದಲಿತರಲ್ಲಿ 5 (16.66%) ಜನ, ಕುರುಬರಲ್ಲಿ 3 (10%) ಜನ, ತಿಗಳರಲ್ಲಿ 2 (6.6%) ಜನ ವಕ್ಕಲಿಗರಲ್ಲಿ ದೊಡ್ಡ ಹಿಡುವಳಿದಾರರು 5 (16.66%) ಜನ ಇದ್ದಾರೆ ಉಳಿದ 5 ಜನ ಕೂಲಿಗಳು ಮಾಡುವುದರಲ್ಲಿ ನಿರತರಾಗಿದ್ದಾರೆ.

ಭೂಮಿ ಕಳೆದುಕೊಳ್ಳುವುದು ಹಾಗೂ ಪುರ್ನವಸತಿ:

ಇಲ್ಲಿ ಇನ್ನೊಂದು ಸಮಸ್ಯೆ ಇದೆ. ಅದೇನೆಂದರೆ ಕೇಂದ್ರ ಸರಕಾರದಿಂದ ಪವರ್ ಗ್ರಿಡ್ನನ್ನು ಮುನ್ನೂರು ಎಕರೆಗಳಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿ ಅರಹಳ್ಳಿ ಗ್ರಾಮಸ್ಥರದು 250 ಎಕರೆ, ಹೂವಳ್ಳಿ ರೈತರದು 50 ಎಕರೆ ಜಮೀನನ್ನು ಸರಕಾರ ವಶಪಡಿಸಿಕೊಂಡಿದೆ. ಬಹುತೇಕವಾಗಿ ಹಿಂದುಳಿದ ವರ್ಗಗಳಿಂದ ಬಂದಂತಹ ರೈತರು ಜಮೀನು ಕಳೆದುಕೊಂಡಿದ್ದಾರೆ. ಇವರಿಗೆ ಎಕರೆಗೆ 1.5 ಲಕ್ಷದಂತೆ ಪರಿಹಾರ ನೀಡಲಾಗಿದೆ. ಜಮೀನು ಕಳೆದುಕೊಂಡು ಸಂತ್ರಸ್ತರಾದ ರೈತರಿಗೆ ಪರಿಹಾರ ಕೊಟ್ಟು ಕೈತೊಳೆದುಕೊಂಡಿದೆ. ಇವರಿಗೆ ಪುನರ್ ವಸತಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸರಕಾರ ಸೋತಿದೆ, ಪವರ್ ಗ್ರಿಡ್ ನಲ್ಲಿ ಸ್ಥಳೀಯರಿಗೆ ಕೆಳಹಂತದ ಉದ್ಯೋಗವನ್ನು ನೀಡಿಲ್ಲ, ಇದು ನಾನು ಸಮೀಕ್ಷೆಯ ಸಂದರ್ಭದಲ್ಲಿ ಕಂಡುಕೊಂಡ ಅಂಶ. ಅರಹಳ್ಳಿ ಗ್ರಾಮದ ಸ್ಥಿತಿಯನ್ನು ಗಮನಿಸಿದಾಗ ನಮಗೆ ಕಂಡುಬರುವುದೇನೆಂದರೆ ಸರಕಾರ ನಾನಾ ಉದ್ದೇಶಗಳಿಗೆ ರೈತರ ಜಮೀನನ್ನು ವಶಪಡಿಸಿಕೊಳ್ಳುತ್ತದೆ. ಆದರೆ ಪರಿಹಾರ ನೀಡುವಾಗ ವಿಳಂಬ ತಂತ್ರ ಅನುಸರಿಸುತ್ತದೆ ಯಾವುದೇ ಅಥವಾ ಅಭಿವೃದ್ಧಿ ಚಟುವಟಿಕೆಗಳಿಗೆ ಸರಕಾರ ಭೂಮಿ ವಶಪಡಿಸಿಕೊಂಡು

ಕಾರ್ಖಾನೆಗಳನ್ನು ಸ್ಥಾಪಿಸಿದರೆ ಸ್ಥಳೀಯರಿಗೆ ಉದ್ಯೋಗದ ಅವಕಾಶಗಳ್ನನು ಕಲ್ಪಿಸಬೇಕಾಗಿರುವುದು ಅನಿವಾರ್ಯ, ಆದರೆ ಅರಹಳ್ಳಿಯೊಂದೆಯಲ್ಲ, ಯಾವುದೇ ಗ್ರಾಮವಾಗಿರಬಹುದು; ಸರಕಾರ ರೈತರ ಭೂಮಿಯನ್ನು ಅಲ್ಪ ಮೌಲ್ಯೀಕರಿಸಿ, ಪರಿಹಾರವನ್ನು ನೀಡುತ್ತದೆ. ಆದರೆ ಸಣ್ಣ ರೈತರು ಎರಡೋ ಮೂರೋ ಎಕರೆ ಇದ್ದರೆ ಕಳೆದುಕೊಂಡು ಸರಕಾರ ಕೊಡುವ ಪರಿಹಾರ ಏನೇನೂ ಸಾಲದೆ ಬೀದಿಗೆ ಬೀಳುವುದಂತೂ ಖಂಡಿತ. ಇಂತಹ ಸ್ಥಿತಿಯನ್ನು ನಾವು ಅರಹಳ್ಳಿಯಲ್ಲಿ ಕಾಣಬಹುದು. ಸುಮಾರು 50 ಕ್ಕಿಂತ ಹೆಚ್ಚು ರೈತರು ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಗಳಾಗಿ ಮಾರ್ಪಟ್ಟಿದ್ದಾರೆ, ಆದ್ದರಿಂದ ಸರಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಎಂದರೆ ರೈತರಿಗೆ ಇದರಿಂದ ಅನ್ಯಾಯವಾಗುವುದು ಖಾತ್ರಿ ಎಂದು ಭಾವಿಸಿಕೊಳ್ಳಬೇಕಾಗಿದೆ. ಅರಹಳ್ಳಿಯನ್ನೆ ಒಂದು ಸ್ಯಾಂಪಲ್ ಎಂದು ತೆಗೆದುಕೊಂಡರೂ, ಪವರ್ ಗ್ರಿಡ್ ಸ್ಥಾಪನೆಗೆ ರೈತರಿಂದ ವಶಪಡಿಸಿಕೊಂಡ ಜಮೀನಿನ ಮಾರುಕಟ್ಟೆ ಮೌಲ್ಯದ ಬೆಲೆ ನೀಡದೆ ಪೂರ್ವ ನಿರ್ಧರಿತ ಬೆಲೆಯನ್ನು ನೀಡಿ ಪವರ್ ಗ್ರಿಡ್ ಅಧಿಕಾರಿಗಳು ಕೈತೊಳೆದು ಕೊಂಡಿದ್ದಾರೆ; ಇದರ ಪರಿಣಾಮವಾಗಿ 50 ಜನ ರೈತರು ಅಲ್ಪ ಮೊತ್ತದ ಹಣ ಪಡೆದು ತಮಗೆ ನಿರಂತರವಾಗಿ ಅನ್ನಕೊಡುತ್ತಿದ್ದ ಜಮೀನನ್ನು ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಕನಿಷ್ಠ ಪಕ್ಷ ಕೆಳ ಹಂತದ ಉದ್ಯೋಗವನ್ನು ಭೂಮಿ ಕಳೆದುಕೊಂಡ ರೈತರಿಗೆ ನೀಡಿದ್ದಿದ್ದರೆ ಒಂದಷ್ಟು ಅಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಸಮಾಧಾನಾಕರವಾಗುತ್ತಿತ್ತೇನೊ. ಆದರೆ ಪವರ್ ಗ್ರಿಡ್‌ನ ಅಧಿಕಾರಿಗಳು ಈ ನಿಟ್ಟಿನಲ್ಲಿ ಯೋಚಿಸದ ಭೂಮಿಗೆ ಅಲ್ಪ ಮೊತ್ತದ ಹಣ ನೀಡಿ ಕೈತೊಳೆದುಕೊಂಡಿದ್ದಾರೆ. ರಾಷ್ಟ್ರಾದ್ಯಂತ ಇಂತಹ ಪಿಡುಗು ಹಬ್ಬಿದೆ, ಇದರಲ್ಲಿ ಅರಹಳ್ಳಿ ಒಂದು ಸಣ್ಣ ಉದಾಹರಣೆಯಷ್ಟೆ. ಆದ್ದರಿಂದ ಅರಹಳ್ಳಿ ಆರ್ಥಿಕ ವ್ಯವಸ್ಥೆಗೂ ಈ ಯೋಜನೆ ಏನೂ ಸಹಾಯಕವಾಗಿಲ್ಲ.

ಬೆಳೆ ಸ್ವರೂಪ:

ಅರಹಳ್ಳಿಯ ಭೌಗೋಳಿಕ ವಿಸ್ತೀರ್ಣ 900.14 (2250 ಎಕರೆ) ಹೆಕ್ಟೇರುಗಳು 105 (262.5) ಹೆಕ್ಟೇರುಗಳು ನೀರಾವರಿ ಜಮೀನು, 338 (845 ಎಕರೆ) ಹೆಕ್ಟೇರುಗಳು ಒಣ ಬೇಸಾಯ, ಈ ಅಂಕಿ ಅಂಶಗಳನ್ನು ಕೃಷಿ ಇಲಾಖೆ ಒದಗಿಸಿದೆ ಅರಹಳ್ಳಿಯಲ್ಲಿ ನೀರಾವರಿ ಜಮೀನು 105 ಹೆಕ್ಟೇರುಗಳಿವೆ (61.66%) ಒಣ ಬೇಸಾಯದ ಜಮೀನು 338 (37.55%) ಹೆಕ್ಟೇರುಗಳು, ಇನ್ನೂ 350 ಹೆಕ್ಟೇರು ಜಮೀನು ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು, ಇದು ವ್ಯವಸಾಯ ಮಾಡದೆ ಹಾಗೆ ಬೀಡು ಬಿಟ್ಟಿದ್ದಾರೆ ಇದು ಸ್ಪಷ್ಟಪಡಿಸುವುದೇನೆಂದರೆ ಬಹಳಷ್ಟು ರೈತರಿಗೆ ಕೃಷಿ ಭೂಮಿ ಲಾಭದಾಯಕವಾಗದೆ ಇರುವುದು ಮಾರ್ಜೇನಹಳ್ಳಿಗೆ ಹೋಲಿಸಿದರೆ ಇಲ್ಲಿ ನೀರಾವರಿ ಭೂಮಿಯ ವಿಸ್ತೀರ್ಣ ಗಣನೀಯ ಪ್ರಮಾಣದಲ್ಲಿದೆ ಆದರೂ ಒಣ ಬೇಸಾಯದ ಜಮೀನು ಇನ್ನೂ ಜಾಸ್ತಿಯಿರುವುದರಿಂದ ರೈತರು ಹೆಚ್ಚಾಗಿ ಒಣ ಬೇಸಾಯದ ಬೆಳೆಗಳಾದಂತ ರಾಗಿ, ಸಾಮೆ, ಅವರೆ, ಭತ್ತವನ್ನು ಬೆಳೆಯುತ್ತಾರೆ ಆದರೆ ನೀರಾವರಿ ಸೌಲಭ್ಯ ಇರುವವರು

ಟಮೋಟೋ, ಹಿಪ್ಪುನೇರಳೆ, ಹಾಗೂ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ, ಆದರೆ ಬೆಳೆಗಳು ರೈತರಿಗೆ ಲಾಭ ತರುವುದಕ್ಕಿಂತ ನಷ್ಟವೇ ಹೆಚ್ಚು ಎಂಬ ಅಂದಾಜಿದೆ. ಟೋಮೋಟೋ , ರಾಗಿ, ಭತ್ತ ಮುಂತಾದ ಬೆಳೆಗಳು ಬೆಲೆಗಳು ಸುಗ್ಗಿಯ ಕಾಲದಲ್ಲಿ ನೆಲ ಕಚ್ಚುವುದರಿಂದ ಇವುಗಳು ಲಾಭದಾಯಕವಲ್ಲ ಎಂದು ಅನುಭವಿ ರೈತರ ತಿಳುವಳಿಕೆ, ಇವರಿಗೆ ಅಷ್ಟೋ ಇಷ್ಟೋ ಹಣ ನೋಡುವುದೆಂದರೆ ಹಿಪ್ಪು ನೇರಳೆ ಸೊಪ್ಪು, ಹಿಪ್ಪು ನೇರಳೆ ಸೊಪ್ಪು, ಒಂದು ಮೂಟೆಗೆ ರೂ. 120 ರಿಂದ 140 ರವರೆಗೂ ಮಾರಾಟ ವಾಗುತ್ತದೆ. 1800 ಜನಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಜನ ಸಂಖ್ಯೆ 850, ಉಳಿದ 950 ಜನ ನಾನು ಈಗಾಗಲೇ ತಿಳಿಸಿರುವಂತೆ ಕೂಲಿಗಳಾಗಿ ಪಕ್ಕದ ಕೋಲಾರಕ್ಕೆ ಗಾರೆ ಕೆಲಸಗಾರರಾಗಿ ಹೋಗುವುದೂ, ಪೇಂಟರ್ ಗಳು ಇಟ್ಟಿಗೆ ಕಾರ್ಖಾನೆಗಳಲ್ಲಿ ದುಡಿಯುವದು, ನೇಯ್ಗೆ ಮಾಡುವುದು, ಮುಂತಾದ ಕೃಷಿಕೂಲಿಗಳಿಗಿಂತ ಲಾಭದಾಯಕ ಕೆಲಸಗಳಲ್ಲಿ ತೊಡಗಿಸಿ ಕೊಂಡಿದ್ದಾರೆ. ಅರಹಳ್ಳಿ ಗ್ರಾಮ ಮಾರ್ಜೇನಹಳ್ಳಿಗೆ ಹೋಲಿಸಿದರೆ ಹೆಚ್ಚು ಮುಂದುವರೆದಿದೆ, ಇಲ್ಲಿ ಪಕ್ಕಮನೆಗಳ ಜಾಸ್ತಿ ಇವೆ. ಪಕ್ಕ ಮನೆಗಳೆಂದರೆ, ಕಲ್ಲು ಚಪ್ಪಡಿ ಹಾಕಿ ಕಟ್ಟಿಸಿರುವ ಮನೆಗಳು, ಆರ್.ಸಿ.ಸಿ. ಮನೆಗಳು ಕಡಿಮೆ ಇವೆ. ಆದರೆ ಗುಡಿಸಲುಗಳು ಮತ್ತು ಕಚ್ಚಾ ಮನೆಗಳ ಸಂಖ್ಯೆಯೂ ಬಹಳಷ್ಟು ಕಡಿಮೆ ಇವೆ. ದಲಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ನೀಡಿರುವ ಜನತಾ ಮನೆಗಳಿವೆ, ಇದರ ಜೊತೆಗ ಹಿಂದುಳಿದ ವರ್ಗದ ವರಿಗೆ ಇಂತಹ ಜನತಾ ಮನೆಗಳಲ್ಲಿರುವುದು ನೋಡಬಹುದಾಗಿದೆ. ಆದರೆ, ಪಕ್ಕ ಮನೆಗಳಲ್ಲಿ ವಕ್ಕಲಿಗರ ಪಾಲೇ ಹೆಚ್ಚು ಈಗಾಗಲೇ ತಿಳಿಸಿರುವಂತೆ ದೊಡ್ಡ ಹಿಡುವಳಿದಾರರು ಮತ್ತು ಮುಖ್ಯವಾಗಿ ಸಂಪದ್ಭರಿತ ರೈತರು ಇರುವುದು ವಕ್ಕಲಿಗರಲ್ಲೆ, ಕುರುಬ, ತಿಗಳ ಪದ್ಮಸಾಲಿಗಳಲ್ಲಿ ಸಣ್ಣ ರೈತರು ಮತ್ತು ಕೂಲಿಗಳು ವಿಫುಲವಾಗಿದ್ದಾರೆ ಆದ್ದರಿಂದ ಅಭಿವೃದ್ಧಿಯ ಫಲಗಳು ವಕ್ಕಲಿಗರಿಗೆ ಸಿಗುವಂತಾಗಿದೆ. ಎಂಬ ದೂರು ಸಮೀಕ್ಷೆ ಸಂದರ್ಭದಲ್ಲಿ ತಿಳಿಯಿತು. ಉಳಿದ ಜಾತಿಗಳಿಗೆ ಅಲ್ಪ ಪ್ರಮಾಣದಲ್ಲಿ ಈ ಅಭಿವೃದ್ಧಿಯ ಫಲಗಳು ದಕ್ಕಿದೆ. ರಾಜಕೀಯವಾಗಿ ಆರ್ಥಿಕವಾಗಿ ವಕ್ಕಲಿಗರದೇ ಮೇಲುಗೈ ಸಹಕಾರಿ ಸಂಸ್ಥೆಗಳ ಸಾಲ ವಜಾ ಕಾರ್ಯಕ್ರಮ ಇರಬಹುದು; ಸಬ್ಸಿಡಿಯಲ್ಲಿ ನೀಡುವ ಕೃಷಿ ಸಲಕರಣೆಗಳಿರಬಹುದು, ಇದು ದೊಡ್ಡ ರೈತರ ಪಾಲಾಗಿದೆ, ದೊಡ್ಡ ರೈತರು ಕಡಿಮೆ ಪ್ರಮಾಣದಲ್ಲಿದ್ದರೂ , ಅವರ ಅಸ್ತಿತ್ವವನ್ನು ಇಲ್ಲಿ ಸ್ಥಾಪಿಸಿಕೊಂಡಿದ್ದಾರೆ. ಆದ್ದರಿಂದ ಸರಕಾರ ಈ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮೀಸಲಾಗಿರುವ ಕಾರ್ಯಕ್ರಮಗಳ ಪ್ರಯೋಜನವನ್ನು ದೊಡ್ಡ ರೈತರು ಪಡೆದುಕೊಳ್ಳುತ್ತಿರುವುದು ಒಂದು ದುರಂತ.

ಸಾಂಸ್ಕೃತಿಕ ಲೋಕ:

ಅರಹಳ್ಳಿಯಲ್ಲಿ ಸುಮಾರು 18 ದೇವಸ್ಥಾನಗಳಿವೆ ಧರ್ಮರಾಯರ ದೇವಸ್ಥಾನ, ಸಪ್ಪಮ್ಮನ ದೇವಸ್ಥಾನ, ಗಂಗಮ್ಮ ದೇವಸ್ಥಾನ, ಮಾರೆಮ್ಮ ದೇವಸ್ಥಾನ ಎಲ್ಲಮ್ಮನ ದೇವಸ್ಥಾನ ಅಂಜನೇಯಸ್ವಾಮಿ ದೇವಸ್ಥಾನ ,

ಗಣೇಶನ ದೇವಸ್ಥಾನ ನಾನು ಸಮೀಕ್ಷೆ ಮಾಡಿದ ಪ್ರಕಾರ ಈ ದೇವಸ್ಥಾನಗಳಲ್ಲಿ ಎಲ್ಲಾ ಜಾತಿಯವರು ಹೋಗಬಹುದು. ಪೂಜೆಯನ್ನು ಮಾಡಬಹುದು ಅಸ್ಪೃಶ್ಯತೆ ಇಲ್ಲ ಆಚರಿಸಲಾಗುತ್ತಿಲ್ಲ. ಈ ಎಲ್ಲ ದೇವಸ್ಥಾನಗಳಲ್ಲಿ ಹಬ್ಬ ಹರಿದಿನಗಳಲ್ಲಿ ಪೂಜೆ ನಡೆಯುವುದರೊಂದಿಗೆ ವಾರಕ್ಕೆ ಒಂದು ಬಾರಿ ಪೂಜೆ ನಡೆಯುತ್ತದೆ. ಈ ಬಾರಿ ಚಿಕನ್ ಗುನ್ಯಾ ಬಂದಾಗಿ ಸಪ್ಲಮ್ಮ ಮಾರೆಮ್ಮ ಹಾಗೂ ಗಂಗಮ್ಮ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು 15 ದಿವಸಗಳ ಕಾಲ ಸತತವಾಗಿ ವಿಶೇಷ ಪೂಜೆ ಮಾಡುವುದರೊಂದಿಗೆ ಕ್ಷುದ್ರ ದೇವತೆಗಳನ್ನು ಆರಾಧಿಸಲಾಯಿತು. ಈ ಕ್ಷುದ್ರ ದೇವತೆಗಳು ಮುನಿಸಿಕೊಂಡರೆ ವಿವಿಧ ರೀತಿ ಮಾರಕ ರೋಗಗಳು ಬರುತ್ತವೆಂಬುದೇ ಜನರ ನಂಬಿಕೆ, ಏಕೆಂದರೆ ಚಿಕುನ್ ಗುನ್ಯಾ ವ್ಯಾಪಕವಾಗಿ ಈ ಹಳ್ಳಿಗಳಲ್ಲಿ ವ್ಯಾಪಿಸಿತ್ತು. ವೈದ್ಯಕೀಯ ಚಿಕಿತ್ಸೆ ಪಡೆದರು. ಈ ಕಾಯಿಲೆ ವಾಸಿಯಾಗಲಿಲ್ಲ. ಆದರಿಂದಾಗಿ ಜನರಿಗೆ ದೈವಿಕ ಶಕ್ತಿಯ ಬಗ್ಗೆ ನಂಬಿಕೆ. ಈ ಆರಾಧನೆಯಲ್ಲಿ ತಂಬಿಟ್ಟು ದೀಪಗಳನ್ನು ಮಾಡಿ ಪೂಜೆ ಮಾಡುವುದರೊಂದಿಗೆ ಮುಗಿಯುತ್ತದೆ. ಈ ಗ್ರಾಮದ ಜನರು ಕ್ಷುದ್ರ ದೇವತೆಗಳ ಬಗ್ಗೆ ಭಯ ಭೀತರಾಗಿಯೇ ಇರುತ್ತಾರೆ. ಕ್ಷುದ್ರ ದೇವತೆಗಳು ಮುನಿಸಿಕೊಂಡರೆ ಇಂತಹ ಕಾಯಿಲೆಗಳು ಬರುತ್ತವೆಂಬುದೇ ಇವರ ನಂಬಿಕೆ, ಆದ್ದರಿಂದ ಇವರು ಕ್ಷುದ್ರ ದೇವತೆಗಳ ಮುನಿಸೊಕೊಳ್ಳದಿರಲಿ ಎಂದು ಸ್ನಾನ ಮಾಡಿ ದೇವರುಗಳನ್ನು ಪೂಜಿಸುತ್ತಾರೆ. ಈ ದೇವರುಗಳು ಸಂತೃಪ್ತಗೊಂಡರೆ ಯಾವುದೇ ರೋಗ ರುಜಿನಗಳು ಬರುವುದಿಲ್ಲ ಎಂಬುದೇ ಇವರ ನಂಬಿಕೆ ಆದ್ದರಿಂದ ದೇವಸ್ಥಾನಗಳ ಒಳಗೆ ಎಲ್ಲರೂ ಹೋಗುವುದು ಇಲ್ಲಿ ಅಸ್ಪೃಶ್ಯತೆಯ ತೀವ್ರತೆಯನ್ನು ಕಡಿಮೆ ಮಾಡಿದೆ. ಇಲ್ಲಿ ಅಸ್ಪೃಶ್ಯತೆಯ ತೀವ್ರತೆ ಕಡಿಮಯಾಗಿದೆ. ಎಂಬುದು ತಿಳಿದರೂ, ನಾನು ಗ್ರಹಿಸಿದ ಪ್ರಕಾರ ಹಿಂದುಳಿದ ವರ್ಗಗಳ ಆದಿಯಾಗಿ ವಕ್ಕಲಿಗರಿಗೂ ಅಸ್ಪೃಶ್ಯರು, ಈ ದೇವಸ್ಥಾನಗಳ ಒಳಗೆ ಪ್ರವೇಶ ಪಡೆಯುವಲ್ಲಿ ಆಗಾಗ್ಗೆ ಜಗಳಗಳು ಆಗುತ್ತದೆ ಎಂಬುದು ತಿಳಿದು ಬಂತು. ಆದರೆ ಅಸ್ಪೃಶ್ಯರು ಪೂಜೆ ಮುಗಿದ ಮೇಲೆ ಉಳಿದ ಜಾತಿಗಳು ಹೋಗುವುದು ಇಲ್ಲಿನ ಸಂಪ್ರದಾಯ. ಇದೆ ಕ್ಷುದ್ರದೇವತೆಗಳಾದ ಮಾರೆಮ್ಮ ಗಂಗಮ್ಮ ಹಾಗೂ ಸಪ್ಲಮ್ಮ ಇವು ಅಸ್ಪೃಶ್ಯರ ದೇವತೆಗಳಾಗಿದ್ದರೂ ಒಮ್ಮೊಮ್ಮ ಗ್ರಾಮದ ಜನ ಈ ದೇವಾಲಯಗಳಿಗೆ ಅಸ್ಪಶ್ಯರು ಬರುವುದನ್ನು ಆಕ್ಷೇಪ ವ್ಯಕ್ತಪಡಿಸುತ್ತಾರೆಂಬ ಅಂಶ ತಿಳಿದು ಬಂತು, ಆದರೆ ಅಸ್ಪೃಶ್ಯತೆ ಇಪ್ಪತ್ತು ವರ್ಷಗಳ ಹಿಂದೆ ಇದ್ದಷ್ಟು ತೀವ್ರವಾಗಿಲ್ಲ ಎಂಬುದು ಸಹ ಗಮನಾರ್ಹ ಅಂಶ, ಅಸ್ಪೃಶ್ಯತೆ ಕಡಿಮೆಯಾಗಲು ಇಲ್ಲಿನ ದಲಿತರು ಹೆಚ್ಚು ಜಾಗೃತಗೊಂಡಿರುವುದು ಮುಖ್ಯ ಕಾರಣವಾಗುತ್ತದೆ. ಕುರುಬರು, ತಿಗಳರು ಪದ್ಮಸಾಲಿಗಳು ದಲಿತರ ಸಂಘಟನೆಯನ್ನು ನೋಡಿ ತಾವು ಆ ರೀತಿ ಸಂಘಟನೆಯಾಗಬೇಕೆಂಬ ಮನೋಭಾವ ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಇತ್ತೀಚೆಗೆ ಸಿದ್ದರಾಮಯ್ಯನವರು ಪ್ರಾರಂಭಿಸಿದ ಅಹಿಂದ ಸಂಘಟನೆ ಇಲ್ಲಿ ಬೆಳೆಯುತ್ತಿದೆ. ಜೆಡಿಎಸ್ ಜೊತೆ ಗುರ್ತಿಸಿ ಕೊಂಡಿರುವ ವಕ್ಕಲಿಗರು ಅಹಿಂದ ಸಂಘಟನೆಗೆ ಸೇರಿಲ್ಲ, ಆದರೆ ಇಲ್ಲಿ ಅಹಿಂದ ಸಂಘಟನೆ ಬೆಳೆಯುತ್ತಿರುವುದರಿಂದ ದಲಿತರ ಅಸ್ಪೃಶ್ಯತೆ ಕಡಿಮೆಯಾಗಲು ಕಾರಣ ಎಂಬ ವಿಷಯ ತಿಳಿಯಿತು.

ಆಹಿಂದ ದಲಿತ ಸಂಘರ್ಷ ಸಮಿತಿ ಸಂಘಟನೆಗಳು ಇಲ್ಲಿ ಸಕ್ರಿಯವಾಗಿವೆ, ಇದರಿಂದಾಗಿ ಹಿಂದುಳಿದ ವರ್ಗಗಳ ಹಾಗೂ ದಲಿತರ ಮಧ್ಯೆ ಅಂತಹ ಒಡಕುಗಳೇನು ಕಾಣಿಸುತ್ತಿಲ್ಲ, ಕೋಲಾರ ವಿಧಾನಸಭೆಗಳಿಗೆ ವಕ್ಕಲಿಗ ಅಭ್ಯರ್ಥಿ ಆಯ್ಕೆಯಾಗಿರುವುದರಿಂದ ರಾಜಕೀಯವಾಗಿ ವಕ್ಕಲಿಗರು ಹೆಚ್ಚು ಹೆಚ್ಚು ಸಂಘಟಿತರಾಗಿ, ರಾಜಕೀಯ ಪ್ರಾಬಲ್ಯ ಸಾಧಿಸಿದ್ದಾರೆ. ಕುರುಬ, ತಿಗಳ, ಬೆಸ್ತರಲ್ಲಿ ಈ ಅಸಮಾಧಾನ ಇದ್ದೇ ಇದೆ. ಈ ಎಲ್ಲಾ ಕಾರಣಗಳಿಂದಾಗಿ ಅಸ್ಪೃಶ್ಯತೆ ಹೆಚ್ಚಾಗಿಲ್ಲ.

ನೀರಿನ ಮೂಲಗಳು:

ಕಲ್ಲಿನ ಬಾವಿಗಳು ಇಲ್ಲಿ ಒಣಗಿ ಹೋಗಿರುವುದು ಅಂತರ್ಜಲ ಹೆಚ್ಚು ಹೆಚ್ಚಾಗಿ ಕುಗ್ಗಿದೆ. ಇಲ್ಲಿ ಕಲ್ಲಿನ ಬಾವಿಗಳಿಂದ ಕಿಂಚಿತ್ತು ಉಪಯೋಗವಿಲ್ಲ ಎಂದು ರೈತರು ತಿಳಿಸುತ್ತಾರೆ ಕಲ್ಲಿನ ಬಾವಿಗಳಿಗೆ ಸುಮಾರು ನೂರು ವರ್ಷಗಳ ಮೇಲಿನ ಇತಿಹಾಸವಿದೆ. ಮಳೆ ಬಂದಾಗ ತುಂಬಿ ಮಳೆ ಬರದಿದ್ದಾಗ ಒಣಗಿ ಹೋಗುತ್ತವೆ ಬೆಳೆಗಳನ್ನು ಬೆಳೆಯುವುದಕ್ಕೆ ಕಲ್ಲಿನ ಬಾವಿಗಳನ್ನು ನೆಚ್ಚಿಕೊಂಡು ಕೂರಲು ಸಾಧ್ಯವಿಲ್ಲ. ಯಾಕೆಂದರೆ ಈಗ ಹೊಸದಾಗಿ ಪ್ರಾರಂಭವಾಗಿರುವ ವಾಣಿಜ್ಯ ಬೆಳೆಗಳಿಗೆ ಉದಾಹರಣೆಗೆ ಟೊಮೊಟೋ , ಹಿಪ್ಪುನೇರಳೆ ಸೊಪ್ಪು, ಆಲೂಗಡ್ಡೆ ಮೂಲದ ಬೆಳೆಗಳಿಗೆ ಕಲ್ಲಿನ ಭಾವಿಗಳ ಮೂಲಕ ನೀರನ್ನು ಹರಿಸಿ ಬೆಳೆಯುವದು ಆಗದ ಮಾತು, ಏಕೆಂದರೆ ಈ ಬಾವಿಗಳನ್ನು ಕುಡಿಯುವ ನೀರಿಗೂ ಬಳಸುವುದಿಲ್ಲ. ಒಂದು ಅಥವಾ ಎರಡು ವರ್ಷ ಮಳೆ ಬರದೆ ಹೋದರೆ ಈ ಬಾವಿಗಳಲ್ಲಿ ನೀರು ಬತ್ತಿ ಹೋಗುತ್ತದೆ ಎಂಬುದೇ ರೈತರ ಅಭಿಪ್ರಾಯ , ಆದ್ದರಿಂದ ಕಲ್ಲಿನ ಬಾವಿಗಳನ್ನು ಕೆಲವರು ಮುಚ್ಚಲು ಸಹ ನಿರ್ಧರಿಸಿದ್ದಾರೆ. ಬಾವಿಗಳು 30 ಅಡಿಗಳಷ್ಟು ಅಗಲವಾಗಿ ಇರುತ್ತವೆ. 60 ಅಡಿ ಆಳವಿರುತ್ತವೆ. ಆದರೆ ಇವು ಇಂದು ರೈತರಿಗೆ ಹೊರೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಏಕೆಂದರೆ ಇವುಗಳನ್ನು ಸುಸ್ಥಿತಿಯಲ್ಲಿ ಇಡಲು ರೈತರು ಈ ಬಾವಿಗಳಿಗೆ ಸ್ವಲ್ಪ ವೆಚ್ಚ ಮಾಡಬೇಕಾಗುತ್ತದೆ ಈ ರೀತಿ ವೆಚ್ಚ ಮಾಡಲು ತಮ್ಮ ಆದಾಯದಲ್ಲಿ ಶೇ. 5 ರಷ್ಟು ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ರೈತರು ಕಲ್ಲಿನ ಬಾವಿಗಳನ್ನು ಹೊಸದಾಗಿ ನಿರ್ಮಿಸಲು ನಿರಾಸಕ್ತರಾಗಿದ್ದಾರೆ; ಇರುವ ಬಾವಿಗಳನ್ನು ನಿರ್ವಹಿಸಲು ಸಹ ಆಸಕ್ತಿ ತೋರಿಸುತ್ತಿಲ್ಲ.ಇದು ಎಲ್ಲ ಹಳ್ಳಿಗಳಲ್ಲಿ ಕಂಡುಬರುವ ಸಾಮಾನ್ಯ ಅಂಶ, ಆದರೆ ಬಹಳ ಕಡಿಮೆ ರೈತರು ಕಲ್ಲಿನ ಬಾವಿಗಳ ಮೇಲೆ ಅವಲಂಬಿತರಾಗಿದ್ದಾರೆ. ನಾನು ಸಮೀಕ್ಷೆ ಮಾಡಿದವರಲ್ಲಿ 27 (90%) ಜನ ರೈತರು ಕಲ್ಲಿನ ಬಾವಿಗಳ ಬಗ್ಗೆ ನಿರಾಸಕ್ತಿ ತೋರಿಸಿದರು. ಉಳಿದ 3 (10%) ಮೂರು ಜನ ರೈತರು ಇದರ ಬಗ್ಗೆ ಆಸಕ್ತಿಯನ್ನು ತೋರಿಸಿದರು. ಇದು ಏನನ್ನು ಸೂಚಿಸುತ್ತದೆಂದರೆ ರೈತರು ನೀರಾವರಿಯ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಲು ಮುಂದಾಗಿದ್ದಾರೆ, ಮುಖ್ಯವಾದದ್ದೆಂದರೆ ಕೊಳವೆ ಬಾವಿಗಳು ಹಾಗೂ ಕೆರೆ ನೀರಾವರಿ ಇಲ್ಲಿ ಬರುವ 105 ಹೆಕ್ಟೇರುಗಳಿಗೆ ಕೆರೆ ಮತ್ತು ಕೊಳವೆ ಬಾವಿಗಳ ಮೂಲಕ ನೀರನ್ನು ಹಾಯಸುತ್ತಾರೆ. ಕೊಳವೆ ಬಾವಿಗಳ

ಸಂಖ್ಯೆ 70 ಕ್ಕೂ ಮೀರಿವೆ. ಕೊಳವೆಬಾವಿಗಳನ್ನು ನಿರ್ಮಿಸಲು ವಾಣಿಜ್ಯ ಬ್ಯಾಂಕುಗಳು ಸಾಲ ನೀಡುವುದರಿಂದ ಎರಡರಿಂದ ಮೂರು ಎಕರೆ ಹೊಂದಿರುವ ರೈತ ರಿಂದ ಹಿಡಿದು 10 ಎಕರೆಗಳಿಗೂ ಮೇಲ್ಪಟ್ಟು ಹಿಡುವಳಿ ಹೊಂದಿರುವ ರೈತರು ಕೊಳವೆ ಬಾವಿಗಳನ್ನು ಹೊಂದಿದ್ದಾರೆ. ಸಮೀಕ್ಷೆಯ ಪ್ರಕಾರ 3 ಎಕರೆ ಹೊಂದಿರುವ ಸಣ್ಣ ಹಿಡುವಳಿದಾರರು ಎರಡು ಕೊಳವೆ ಬಾವಿಗಳನ್ನು ಹೊಂದಿದ್ದಾರೆ; ಹತ್ತು ಎಕರೆಗೂ ಮೇಲ್ಪಟ್ಟ ರೈತರು ಮೂರು ನಾಲ್ಕು ಕೊಳವೆ ಬಾವಿಗಳನ್ನು ಹೊಂದಿದ್ದಾರೆ. ಇಲ್ಲಿ ಕೊಳವೆ ಬಾವಿಯಲ್ಲಿ ನೀರು ಸಿಗಬೇಕಾದರೆ ರೈತರು 1000 ಅಡಿಗಳವರೆಗೂ ಆಳಕ್ಕೆ ಕೊಳವೆ ಬಾವಿಗಳನ್ನು ಇಳಿಸಬೇಕಾಗುತ್ತದೆ. ಆದರೆ ಕೊಳವೆ ಬಾವಿಗಳು ಕೆಲವು ರೈತರ ಕೈಯಲ್ಲಿ ಕೇಂದ್ರೀಕರಣ ಗೊಂಡಿವೆ. ನಾನು ಸಮಿಕ್ಷೆಗೊಳಪಡಿಸಿದ 30 ಜನ ರೈತರಲ್ಲಿ 10 (38.33%) ಜನ ರೈತರು ಕೊಳವೆ ಬಾವಿಗಳನ್ನು ಹೊಂದಿದ್ದರೆ ಉಳಿದ 20 (66.66%) ಜನ ರೈತರು ಕೊಳವೆ ಬಾವಿಗಳನ್ನು ಹೊಂದಿಲ್ಲ ಆದ್ದರಿಂದ ಈ ಅಧ್ಯಯನದ ಪ್ರಕಾರ ಕೊಳವೆ ಬಾವಿಗಳು ಕೆಲವೇ ಕೆಲವು ರೈತರ ಕೈಯಲ್ಲಿವೆ. ಉಳಿದ ರೈತರು ಕೆರೆ ಮತ್ತು ಮಳೆಯ ಮೇಲೆ ಅವಲಂಬಿತರಾಗಿರುತ್ತಾರೆ.

ಕೊಳವೆ ಬಾವಿಗಳನ್ನು ಹೊಂದಿರುವ ರೈತರು ವರ್ಷಕ್ಕೆ ಎರಡರಿಂದ ಮೂರು ಬೆಳೆ ತೆಗೆಯುತ್ತಾರೆ, ಇವರು ರಾಗಿ ಭತ್ತ, ಬೆಳೆಯುವುದಿಲ್ಲ, ಇವರು ಬೆಳೆಯುವ ಬೆಳೆಗಳು ಟೊಮೋಟೋ, ಆಲೂಗಡ್ಡೆ, ಇನ್ನಿತರ ತರಕಾರಿ ಬೆಳೆಗಳು ಇವುಗಳಿಗೆ ಕೋಲಾರ,ಬೆಂಗಳೂರು, ಚೆನ್ನೈ, ಮಾರುಕಟ್ಟೆಯಲ್ಲಿ ಬೇಡಿಕೆ ಇದೆ, ಆದ್ದರಿಂದ ಈ ರೈತರು ತರಕಾರಿ ಬೆಳೆಗಳನ್ನು ಬೆಳೆಯುವುದು. ಹೊಲಗಳಿಗೆ ವ್ಯಾಪಾರಿಗಳು ಬಂದು ತರಕಾರಿಯನ್ನು ಖರೀದಿಸಿ ಹಣವನ್ನು ಪಾವತಿಸಿ ಹೋಗುತ್ತಾರೆ. ಈ ಅಂಶ ಎಲ್ಲಿ ರೈತರಿಗೂ ಅನ್ವಯಿಸುವುದಿಲ್ಲ ಯಾಕೆಂದರೆ ಇಲ್ಲ ಬೆಳೆಗಳನ್ನು ಮಾರಲು ಸ್ಪರ್ಧೆ ಇರುವುದರಿಂದ ವ್ಯಾಪಾರಿಗಳು ಚೌಕಾಸಿ ಮಾಡಿ ಬಹಳಷ್ಟು ಸಂದರ್ಭದಲ್ಲಿ ಕಡಿಮೆ ಬೆಲೆ ನಿರ್ಧರಿಸಿ ಹೋಗುತ್ತಾರೆ ಆದರೆ ಎ.ಪಿ.ಎಂ.ಸಿ. ಯಲ್ಲಿ ಕೊಡುವ ಬೆಲೆಗಿಂತ ಇದು ಅಧಿಕವಾಗಿಯೇ ಇರುತ್ತದೆ. ಆದ್ದರಿಂದ ರಾಗಿ ಭತ್ತ, ಇನ್ನಿತರ ಆಹಾರ ಧಾನ್ಯ ಬೆಳೆಗಳನ್ನು ಬೆಳೆಯುವ ರೈತರಿಗಿಂತ ಇವರು ಆರ್ಥಿಕವಾಗಿಯಂಥೂ ಸಬಲರಾಗಿದ್ದಾರೆ, ಆದ್ದರಿಂದ ಬಹಳಷ್ಟು ರೈತರು ನೀರು ಸುಲಭವಾಗಿ ದೊರೆಯುವಾಗಿದ್ದರೆ, ವಾಣಿಜ್ಯ ಬ್ಯಾಂಕುಗಳು ಸುಲಭವಾಗಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವ ಹಾಗೆ ಇದ್ದರೆ ಕೊಳವೆ ಬಾವಿಗಳನ್ನು ಹೊಂದಲು ಆಸಕ್ತರಾಗಿದ್ದಾರೆ. ಆದರೆ ಬಹಳಷ್ಟು ವೇಳೆ ಕೊಳವೆ ಬಾವಿಗಳ 1000 ಅಡಿಗಳಿಗಿಂತ ಹೆಚ್ಚು ಆಳಕ್ಕಿಳಿಸಿದರು ನೀರು ಸಿಗುವುದಿಲ್ಲ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೀಡಾಗುತ್ತಾರೆ. ಹೀಗೆ ಆರ್ಥಿಕ ಸಂಕಷ್ಟಕ್ಕೀಡಾದ ರೈತರಿಗೆ ಸರಕಾರದಿಂದ ಯಾವುದೆ ನೆರವಿನ ಹಸ್ತ ಇಲ್ಲ ; ಆದ್ದರಿಂದ ಬಹಳಷ್ಟು ಜನ ರೈತರಿಗೆ ಕೊಳವೆ ಬಾವಿಗಳನ್ನು ಹೊಂದಲು ಆಸಕ್ತಿ ಇದ್ದರು ನೀರು ಸಿಗದೆ ಇರುವುದು, ಬ್ಯಾಂಕುಗಳು ಸಾಲವನ್ನು ಸುಲಭವಾಗಿ ಕಡಿಮೆ ಬಡ್ಡಿ ದರದಲ್ಲಿ ಕೊಡದೇ ಇರುವುದು ರೈತರ ಹಿಂಜರಿಕೆಗೆ ಮೂಲವಾಗಿವೆ.

ಅರಹಳ್ಳಿ ಕೆರೆ:

ಅರಹಳ್ಳಿಯಲ್ಲಿ 120 ಎಕರೆಗಳಷ್ಟು ವಿಸ್ತೀರ್ಣದ ಕೆರೆ ಇದೆ ಈ ಕೆರೆ ತುಂಬುವುದು ಏಳು ವರ್ಷಗಳಿಗೊಮ್ಮೆ ಒಂದು ಸರಿ ಕೆರೆ ತುಂಬಿದರೆ ಮೂರು ನಾಲ್ಕು ವರ್ಷಗಳಷ್ಟು ಕಾಲ ಕೆರೆಯ ನೀರನ್ನು ನೀರಾವರಿಗೆ ಬಳಸಬಹುದು. ಬಹುತೇಕ ರೈತರ ನೀರಾವರಿ ವ್ಯವಸಾಯ, ಈ ಕೆರೆಯ ಆಸರೆ, ಆದ್ದರಿಂದ ಈ ಕೆರೆಯ ಪ್ರಾಮುಖ್ಯತೆ ಹಾಗೂ ಇದರ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ರೈತರು ಕೆರೆಯನ್ನು ಅಭಿವೃದ್ಧಿಪಡಿಸಲು ಹಾಗೂ ವೈಚಾರಿಕವಾಗಿ ನಿವಾರಿಸಲು ವೀರಾಂಜನೇಯ ಸ್ವಾಮಿ ಕೆರೆ ಅಭಿವೃದ್ಧಿ ಸಂಘ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಈ ವೀರಾಂಜನೇಯ ಸ್ವಾಮಿ ಕೆರೆ ಅಭಿವೃದ್ಧಿ ಸಂಘಕ್ಕೆ 22 ಜನ ಸದಸ್ಯರಿದ್ದಾರೆ., ಈ ಸದಸ್ಯರಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ, ಹಾಗೂ ಪಂಗಡದ ಸದಸ್ಯರು ಇದ್ದಾರೆ, ಈ ಕೆರೆ ಅಭಿವೃದ್ಧಿಗೆ ವಿಶ್ವ ಬ್ಯಾಂಕ್ ನಿಂದ ರೂ. 18,80,466 ಮಂಜೂರಾಗಿದೆ. ಇದಕ್ಕೆ ತಂತ್ರಜ್ಞಾನ ಮಾಹಿತಿ ಮಾರ್ಗದರ್ಶಿಕೆಯಾಗಿ ಸ್ಕಡ್ಸ್ ಎಂಬ ಸ್ವಯಂ ಸೇವೆ ಸಂಸ್ಥೆ ಮತ್ತು ಜಲ ಸಂವರ್ಧನಾ ಯೋಜನಾ ಸಂಘ, ಕೆರೆ ಕೆಲಸದ ಹೆಸರು ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆ. ನಂಜುಂಡೇಶ್ವರ ಅರ್ಥ್ ಮೂವರ್ಸ್ ಈ ಕೆಲಸದ ಗುತ್ತಿಗೆಯನ್ನು ಪಡೆದಿದ್ದಾರೆ ವೀರಾಂಜನೆಯ ಕೆರೆ ಅಭಿವೃದ್ಧಿ ಸಂಘ ಕೆರೆಯ ಹೂಳೆತ್ತುವುದು, ತೂಬು ರಿಪೇರಿ ಕೋಡಿ ರಿಪೇರಿ ಕೆಲಸವನ್ನು ಮುಗಿಸಿದೆ ಆದರೆ ಇಲ್ಲಿ ಕಳೆದ ವರ್ಷ ಚೆನ್ನಾಗಿ ಮಳೆಯಾಗಿದ್ದರಿಂದ ಈ ಕೆರೆ ಅರ್ಧದಷ್ಟು ತುಂಬಿದೆ. ಆದ್ದರಿಂದ ಕೆರೆಯ ನೀರನ್ನು ಬಳಸುತ್ತಿರುವ ಗ್ರಾಮಸ್ಥರು ಕೆರೆ ಬತ್ತಿ ಹೋದ ಮೇಲೆ ಮತ್ತೊಮ್ಮೆ ಹೂಳೆತ್ತುವ ಕೆಲಸವನ್ನು ಹಮ್ಮಿಕೊಳ್ಳಲು ನಿರ್ಧರಿಸಿದ್ದಾರೆ ಹೀಗೆ ವಿಶ್ವ ಬ್ಯಾಂಕ್ ನೆರವಿನಿಂದ ದುರಸ್ತಿಗೊಂಡಿರುವ ಕೆರೆ ರೈತರ ಪಾಲಿಗೆ ವರದಾನವಾಗಿದೆ.

ಅರಹಳ್ಳಿಯಲ್ಲಿ ಪುರಾತನ ಕಾಲದಿಂದಲೂ ಬಂದಿರುವ ಕೆರೆ ಇದೆ. ಈ ಕೆರೆಯನ್ನು ವ್ಯವಸಾಯಕ್ಕೋಸ್ಕರ ಬಳಸಿಕೊಳ್ಳಲಾಗುತ್ತದೆ. ಇಲ್ಲಿ ನೀರಿನ ಟ್ಯಾಂಕ್ ಕಟ್ಟಿಯೋ ಕೊಳವೆ ಬಾವಿಗಳಿಂದ ನೀರೆತ್ತಿ, ಕುಡಿಯುವ ನೀರಿಗೆ ಉಪಯೋಗಿಸುವುದು ಚಾಲ್ತಿಯಲ್ಲಿದೆ ಕಳೆದ 15 ವರ್ಷಗಳ ಹಿಂದೆ ಕೆರೆಯ ನೀರನ್ನು ಕುಡಿಯಲು ಉಪಯೋಗಿಸಲಾಗುತ್ತಿತ್ತು. ಅಂದು ವ್ಯವಸಾಯ ಮತ್ತು ಕುಡಿಯುವ ನೀರಿಗೆ ಇದೇ ಕೆರೆ ಆಸರೆಯಾಗಿತ್ತು ಆದರೆ ಕೋಲಾರ ಜಿಲ್ಲೆಯಲ್ಲಿ ಪ್ರತಿ ವರ್ಷವೂ ಮಳೆಯಾಗುವುದಿಲ್ಲ, ಹತ್ತುವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಮಳೆಯಾಗುತ್ತದೆ. ಈ ಸಂದರ್ಭದಲ್ಲಿ ಕೆರೆ ತುಂಬುತ್ತದೆ. ತುಂಬಿದ ಕೆರೆ 2-3 ವರ್ಷಗಳವರೆಗೂ ವ್ಯವಸಾಯಕ್ಕೆ ನೀರು ಸಿಗುತ್ತದೆ ನಂತರ ರೈತರು ವ್ಯವಸಾಯಕ್ಕೆ, ಕುಡಿಯುವುದಕ್ಕೆ ಕೊಳವೆ ಬಾವಿಗಳನ್ನು ಅವಲಂಬಿಸಬೇಕಾಗಿದೆ. ಅರಹಳ್ಳಿ ಗ್ರಾಮ ಪಂಚಾಯಿತಿಯಿಂದ ಎರಡು ಕೊಳವೆಬಾವಿಗಳಿವೆ ಈ ಕೊಳವೆ ಬಾವಿಗಳ ಮೂಲಕ ನೀರಿನ ಟ್ಯಾಂಕನ್ನು ತುಂಬಿಸಿ, ನಂತರ ಸಾರ್ವಜನಿಕ ನಲ್ಲಿಗಳಿಗೆ ನೀರು ಪೂರೈಸಲಾಗುತ್ತದೆ.

ಕುಡಿಯುವ ನೀರಿನ ಸಮಸ್ಯೆಯನ್ನು ಇಲ್ಲಿ ಪರಿಹರಿಸಲಾಗಿದೆ. ಆದ್ದರಿಂದ 15-20 ವರ್ಷಗಳಿಂದ ಕುಡಿಯುವ ನೀರಿಗೆ ತೀವ್ರ ಕ್ಷಾಮವೆದಿರಿಸುತ್ತಿದ್ದು ಅರಹಳ್ಳಿ ಇಂದು ಶುದ್ಧವಾದ ಕುಡಿಯುವ ನೀರಿನ್ನು ಪಡೆಯುತ್ತಿದೆ. ಇಲ್ಲಿ ಕುಡಿಯುವ ನೀರನ್ನು ಗೃಹೋಪಯೋಗಿಯಾಗಿ ಬಳಸುವುದರ ಜೊತೆಗೆ ಜಾನುವಾರು ಗಳಿಗೂ ಈ ನೀರನ್ನು ಬಳಸಲಾಗುತ್ತಿದೆ. ಆದ್ದರಿಂದ ಅರಹಳ್ಳಿ ಗ್ರಾಮಸ್ಥರು ಇಂದು ಒಳ್ಳೆ ಶುದ್ಧವಾದ ಕುಡಿಯುವ ನೀರನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಆದೆರ ನೀರಿನ ಒರತೆ 1000 ಅಡಿಗಳಿಗಿಂತಲು ಹೆಚ್ಚು ಹೋಗಿರುವುದು, ರೈತರಿಗೆ ತಂದಿರುವ ಆತಂಕ, ಇದಕ್ಕೆ ಅಂತರ್ಜಲದ ಒರತೆಯನ್ನು ಹೆಚ್ಚಿಸುವ ಯಾವ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಹಾಕಿಕೊಂಡಿಲ್ಲ. ಕೃಷಿಗೋಸ್ಕರ ಜಲಾನಯನ ಇಲಾಖೆಯವರು ಅಂತರ್ಜಲ ಹೆಚ್ಚಿಸಲು ನೀರಿನ ಹೊಂಡಗಳನ್ನು ಮಾಡಿದ್ದರೂ, ಇವುಗಳ ನಿರ್ವಹಣೆ ಸರಿಯಾಗಿ ನಡೆಯದೆ ಇರುವುದರಿಂದ ಈ ಹೊಂಡಗಳಲ್ಲಿ ಮಣ್ಣು ತುಂಬಿಕೊಂಡು ಹೆಚ್ಚು ನೀರನ್ನು ಹಿಡಿದಿಡಲಾದ ಸ್ಥಿತಿಯನ್ನು ತಲುಪಿವೆ,ಇದರಿಂದಾಗಿ ಅಲ್ಲಲ್ಲಿ ಹೊಂಡಗಳನ್ನು ನಿರ್ಮಿಸಿ, ಮಳೆ ನೀರನ್ನು ಆ ಹೊಂಡಗಳಲ್ಲಿ ನಿಲ್ಲಿಸುವ ಕ್ರಿಯೆ ಇಲ್ಲದೆ ಬಹಳಷ್ಟು ಕಡೆ ಸಣ್ಣ ಸಣ್ಣ ಹೊಂಡಗಳು ಒಣಗಿ ಹೋಗಿವೆ. ಇದರ ಜೊತೆಗೆ ಕೊಳವೆ ಬಾವಿಗಳನ್ನು ಕೊರೆಸುವ ಕ್ರಿಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಹೀಗೆ ಕೊಳವೆ ಬಾವಿಗಳು ಮುಂದಿನ ಎರಡು ವರ್ಷಗಳಲ್ಲಿ 100ರ ಗಡಿ ದಾಟುವ ಸೂಚನೆ ಇದೆ, ಹೀಗೆ ಕೊಳವೆ ಬಾವಿಗಳನ್ನು ವ್ಯವಸಾಯಕ್ಕೋಸ್ಕರ ಕೊರೆಯುತ್ತಾ ಹೋದರೆ ಮುಂದಿನ ಕೆಲವೇ ವರ್ಷಗಳಲ್ಲಿ ಈ ಹಳ್ಳಿಯ ಜನ ಕುಡಿಯುವ ನೀರಿಗೂ ಪರದಾಡಬೇಕಾದ ಸನ್ನಿವೇಶ ನಿರ್ಮಾಣವಾಗಬಹುದು. ಆದ್ದರಿಂದ ಗ್ರಾಮದಲ್ಲಿ ಪರಂಪರಾನುಗತವಾಗಿ ಬಂದಿರುವ ನೀರಿನ ಹೊಂಡಗಳ ಹೂಳೆತ್ತಿಸಿ ಚೆನ್ನಾಗಿ ಮಳೆಯಾದ ಕಾಲದಲ್ಲಿ ಹೊಂಡಗಳನ್ನು ತುಂಬುವಂತೆ ನೋಡಿಕೊಳ್ಳಬೇಕು. ಆದರೆ ಇಲ್ಲಿನ ಕತೆಯೇ ಬೇರೆಯಾಗಿದೆ. ಇಲ್ಲಿ ವೀರಾಂಜನೇಯ ಕೆರೆ ಅಭಿವೃದ್ಧಿ ಸಂಘವಿದೆ ಆದರೂ ರೈತರ ಹೊಲಗಳಲ್ಲಿರುವ ಹೊಂಡಗಳು ಹಾಗೂ ಊರಿನ ಸಾರ್ವಜನಿಕ ಹೊಂಡಗಳು ಒಣಗಿ ಹೋಗಿವೆ 2005-06 ರಲ್ಲಿ ಸರಿಯಾಗಿ ಮಳೆಯಾಗದಿರುವುದರಿಂದ ಈ ಹೊಂಡಗಳು ಒಣಗಿ ಹೋಗಿವೆ, ರೈತರ ಅಭಿಪ್ರಾಯದ ಪ್ರಕಾರ 2004-05 ರಲ್ಲಿ ಚೆನ್ನಾಗಿ ಮಳೆಯಾಗಿತ್ತು ಆಗ ಈ ಹೊಂಡಗಳಲ್ಲಿ ತುಂಬಿಕೊಡಿದ್ದವು, ಆದರೆ ಒಂದೂವರೆ ವರ್ಷದ ಅವಧಿಯಲ್ಲಿ ಈ ಹೊಂಡಗಳು ಒಣಗಿವೆ, ಆದ್ದರಿಂದ ರೈತರ ಹೊಲಗಳಲ್ಲಿರುವ ಹೊಂಡಗಳು ಹಾಗೂ ಸಾರ್ವಜನಿಕ ಹೊಂಡಗಳು ಚೆನ್ನಾಗಿ ಮಳೆಯಾದ ವರ್ಷದಲ್ಲಿ ನೀರನ್ನು ಸಂಗ್ರಹಿಸಲು ಯೋಗ್ಯವಾಗುವಂತಹ ಯೋಜನೆಯನ್ನು ವೀರಾಂಜನೇಯ ಕೆರೆ ಅಭಿವೃದ್ಧಿ ಸಂಘ ಕೈಗೆತ್ತಿಕೊಳ್ಳಬೇಕಾಗಿದೆ. ವಿಶ್ವ ಬ್ಯಾಂಕಿನಿಂದ 18 ಲಕ್ಷಗಳಿಗೂ ಮೇಲ್ಪಟ್ಟು ಹಣ ಬಂದಿರುವಾಗ ಜಿಲ್ಲಾಡಳಿತ ಹಾಗೂ ಗ್ರಾಮಾಡಳಿತ ಸಂಸ್ಥೆಗಳು ಈ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ಬೇಕಾಗಿದೆ. ಈ ನಿಟ್ಟಿನಲ್ಲಿ ಕ್ರಿಯಾ ಶೀಲವಾಗದಿದ್ದರೆ, ಅಂತರ್ಜಲದ ಕುಸಿತವನ್ನು ಕಾಣಬಹುದಾಗಿದೆ. ಅಂತರ್ಜಲವನ್ನು ರಕ್ಷಿಸುವುದು ಹಳ್ಳಿಗರ ಒಂದು

ಮುಖ್ಯಕಾರ್ಯಕ್ರಮ ವಾಗಬೇಕಾಗಿದೆ. ಯಾಕೆಂದರೆ ನೀರಾವರಿ ಬೆಳೆಗಳಿಗೆ ನಿರಂತರವಾಗಿ ನೀರು ಬಳಸುವುದರಿಂದ ಕೊಳವೆ ಬಾವಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಒಬ್ಬಬ್ಬ ರೈತರು ಮೂರು ನಾಲ್ಕು ಕೊಳವೆ ಬಾವಿಗಳನ್ನು ಕೊರೆಸುವುದನ್ನು ನಿಲ್ಲಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಬೇಕಾಗಿದೆ. ಸ್ವೆಚ್ಚೆಯಾಗಿ ಕೊಳವೆ ಬಾವಿಗಳನ್ನು ಕೊರೆಸುವುದರಿಂದ ಮುಂದಿನ ವರ್ಷಗಳಲ್ಲಿ ಕುಡಿಯುವ ನೀರಿಗೂ ಸಂಚಕಾರ ಬರುವ ಸನ್ನಿವೇಶವಿರುವುದರಿಂದ ಈ ಬಗ್ಗೆ ಹೆಚ್ಚಿನ ಗಮನವನ್ನು ಗ್ರಾಮ ಪಂಚಾಯಿತ ಹಾಗೂ ಗ್ರಾಮಸ್ಥರು ಅನುಸರಿಸಬೇಕಾಗಿದೆ. ಆದರೆ ಇದು ಸಾಧ್ಯವೆಂಬುದು ನಾವು ಯೋಚಿಸಬೇಕಾಗಿದೆ. ಯಾಕೆಂದರೆ ನೀರಾವರಿಯಿಂದ ಫಲಗಳನ್ನು ಪಡೆದು ಸುಸ್ಥಿತಿ ತಲುಪಿರುವ ರೈತರು ಕೊಳವೆ ಬಾವಿಗಳನ್ನು ಕೊರೆಸುವುದು ಮುಂದುವರೆಸದೆ ಇರಲಾರರು, ಆದ್ದರಿಂದ ಈ ರೈತರನ್ನು ಸಂಘಟಿಸಿ ಜಿಲ್ಲಾಡಳಿತ ಹಾಗೂ ಗ್ರಾಮಾಡಳಿತ ಜಾಗೃತಿ ಮೂಡಿಸುವುದು ಒಂದು ಮಾರ್ಗವಾದರೆ ಇಂತಿಷ್ಟು ಕೊಳವೆ ಬಾವಿಗಳಿರುವವರು, ಮತ್ತೆಕೊಳವೆ ಬಾವಿಗಳನ್ನು ಕೊರೆಸುವುದನ್ನು ನಿಷೇಧಿಸಬೇಕು, ಇದು ಆಗದಿದ್ದರೆ ಅಂತರ್ಜಲ ಪಾತಾಳಕ್ಕಿಳಿಯುವದು ನಿಶ್ಚಿತ ಆದ್ದರಿಂದ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವುದು ಮುಖ್ಯವಾಗುತ್ತದೆ.

ರಾಜಕೀಯ ವಿಕೇಂದ್ರಿಕರಣ:

ಅರಹಳ್ಳಿ ಗ್ರಾಮ ಪಂಚಾಯಿತಿಗೆ 8 ಹಳ್ಳಿಗಳು ಬರುತ್ತವೆ. ಮೊದಲನೆಯದಾಗಿ ಅರಹಳ್ಳಿ 3 ಜನ ಸದಸ್ಯರಿದ್ದಾರೆ, ಈ ಮೂರರಲ್ಲಿ ಒಂದು ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿದೆ. ಎರಡನೆಯದಾಗಿ ಹಿಂದುಳಿದ ವರ್ಗ 'ಎ' ಗುಂಪಿಗೆ ಮೀಸಲಾಗಿದೆ. ಮತ್ತೊಂದು ಸಾಮಾನ್ಯ ಗುಂಪಿಗೆ ಬಿಡಲಾಗಿದೆ. ಹೂವಳ್ಳಿಯಿಂದ ಇಬ್ಬರು ಸದಸ್ಯರು ಚುನಾಯಿತರಾಗಿದ್ದಾರೆ, ಇಬ್ಬರಲ್ಲಿ ಪರಿಶಿಷ್ಟ ಜಾತಿಗೆ ಒಂದು ಮೀಸಲಾಗಿದೆ. ಹಿಂದುಳಿದ ವರ್ಗ ಎ ಗುಂಪಿಗೆ ಇನ್ನೊಂದು ಮಿಸಲಾಗಿದೆ. ಸೀಪುರ ಸಹ ಅರಹಳ್ಳಿ ಗ್ರಾಮ ಪಂಚಾಯಿತಿಗೆಬರುವ ಹಳ್ಳಿ ಇಲ್ಲಿಂದ ಮೂವರು ಸದಸ್ಯರನ್ನು ಚುನಾಯಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿ ಎರಡು ಸದಸ್ಯರು ಸಾಮಾನ್ಯ ಗುಂಪು, ಒಬ್ಬರನ್ನು ಚುನಾಯಿಸಲಾಗಿದೆ. ಹೊಗರೆ ಎಂಬ ಗ್ರಾಮದಿಂದ ಮೂರು ಸದಸ್ಯರನ್ನು ಚುನಾಯಿಸಲಾಗಿದೆ. ಒಂದು ಸಾಮಾನ್ಯ ಕ್ಷೇತ್ರ, ಪರಿಶಿಷ್ಟ ಪಂಗಡ ಒಂದು, ಹಿಂದುಳಿದವರ್ಗ ಎ ನಿಂದ ಚುನಾಯಿಸಲಾಗಿದೆ. ಹೊದಲವಾಡಿ ಗ್ರಾಮದಿಂದ ಒಬ್ಬ ಸದಸ್ಯರು ಚುನಾಯಿತರಾಗಿದ್ದಾರೆ, ಇವರಲ್ಲಿ ಹಿಂದುಳಿದ ವರ್ಗ 'ಬಿ' ಗುಂಪಿಗೆ ಮೀಸಲಿರಿಸಲಾಗಿದೆ. ಕೋಡಿ ಕಣ್ಣೂರು ಗ್ರಾಮದಿಂದ 5 ಸದಸ್ಯರನ್ನು ಚುನಾಯಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿ ಇಬ್ಬರು ಸದಸ್ಯರು ಹಿಂದುಳಿದ ವರ್ಗ 'ಎ' ಒಬ್ಬರು ಸಾಮಾನ್ಯ ಇಬ್ಬರು, ಭೂವಹಳ್ಳಿ ಗ್ರಾಮದಿಂದ ಇಬ್ಬರು ಸದಸ್ಯರು, ಸಾಮಾನ್ಯ ಎರಡು ಬಾರಂಡಹಳ್ಳಿ ಗ್ರಾಮದಿಂದ ಪರಿಶಿಷ್ಟ ಜಾತಿ ಒಬ್ಬರನ್ನು ಚುನಾಯಿಸಲಾಗಿದೆ. ಒಟ್ಟು 20 ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ ಇಪ್ಪತ್ತು ಗ್ರಾಮ ಪಂಚಾಯತಿ ಸದಸ್ಯರಲ್ಲಿ ಪರಿಶಿಷ್ಟ ಜಾತಿ 8 ಜನ ಸದಸ್ಯರು

, ಪರಿಶಿಷ್ಟ ಪಂಗಡದ ಒಬ್ಬರು ಹಿಂದುಳಿದ ವರ್ಗ 'ಎ' ನಾಲ್ಕು ಜನ, ಸಾಮಾನ್ಯ ಗುಂಪು 6 ಒಂದು ಹಿಂದುಳಿದ ವರ್ಗ 'ಬಿ'

ಅರಹಳ್ಳಿ ಗ್ರಾಮ ಪಂಚಾಯಿತಿಯು ಸಹ ಮಾರ್ಜೇನಹಳ್ಳಿ ಗ್ರಾಮ ಪಂಚಾಯಿತಿ ತರಹವೇ ನಿಷ್ಕ್ರಿಯಾವಸ್ಥೆಯಲ್ಲಿದೆ. ಇದು ನಿಷ್ಕ್ರಿಯಾವಸ್ಥೆಯಲ್ಲಿರುವುದಕ್ಕೆ ಗ್ರಾಮ ಪಂಚಾಯಿತಿಯ ಕಾರ್ಯವೈಖರಿಯೋ ಕಾರಣ, ಇಲ್ಲಿ ಆಶ್ರಯಯೋಜನೆಯಾಗಲಿ, ಕೂಲಿಗಾಗಿ ಕಾಳು ಯೋಜನೆಯಾಗಲಿ ಸರಿಯಾಗಿ ಜಾರಿಯಾಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಇಲ್ಲಿ ಬಹುತೇಕ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ವೈಯುಕ್ತಿಕ ಕೆಲಸಗಳನ್ನು ಮಾಡಿಸಿಕೊಂಡು ಹಾಗೂ ತಮಗೆ ಬೇಕಾದ ಬೆಂಬಲಿಗರ ಕೆಲಸಗಳನ್ನು ಮಾಡಿಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ಆದರೆ ಇಲ್ಲಿನ ಸಾಮಾನ್ಯ ಜನಕ್ಕೆ ಬಹುತೇಕವಾಗಿ ಗ್ರಾಮ ಪಂಚಾಯಿತಿಯಿಂದ ಯಾವುದೇ ಉಪಯೋಗವಿಲ್ಲ. ಜನರ ಸಹಭಾಗಿತ್ವದಲ್ಲಿ ನಡೆಸಬೇಕಾದ ಗ್ರಾಮ ಪಂಚಾಯಿತಿ ಅಧಿಕಾರಶಾಹಿಯ ಸಂಕೇತವಾದಂತಹ ಕಾರ್ಯದರ್ಶಿಯ ಮರ್ಜಿ ಮುಲಾಜಿಗಳಿಗೆ ಕಾಯಬೇಕಾಗುತ್ತದೆ. ಇಲ್ಲಿನ ಗ್ರಾಮಸ್ಥರ ಸಮಸ್ಯೆಗಳು ಹಲವಾರು ; ಅವುಗಳಲ್ಲಿ ಪ್ರಮುಖವಾದುದೆಂದರೆ ನಿರುದ್ಯೋಗ, ಶಿಕ್ಷಣ, ಬಡತನ ಎಂದು ಗುರುತಿಸಬಹುದು. ಇಲ್ಲಿ ನಿರಕ್ಷರಸ್ಥರ ಸಂಖ್ಯೆ ಕಡಿಮೆ ಇದ್ದರೂ, ಗ್ರಾಮ ಪಂಚಾಯಿತಿ ಗ್ರಾಮದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವಲ್ಲಿ ವಿಫಲವಾಗಿದೆ. ಈ ಹಳ್ಳಿ ಮಾರ್ಜೇನಹಳ್ಳಿಗಿಂತ ಹೆಚ್ಚು ಅಭಿವೃದ್ಧಿಯಾಗಿದೆ. ಇದಕ್ಕೆ ಗ್ರಾಮದ ಜನರ ಪ್ರಯತ್ನ ಗಳೆ ಕಾರಣ ಎಂಬುದು ಸ್ಪಷ್ಟವಾಗಿದೆ. ಗ್ರಾಮದವರು ಪಕ್ಷಗಳ ಮೇಲೆ ವಿಭಜನೆಗೊಂಡಿದ್ದರು, ಗ್ರಾಮದ ಅಭಿವೃದ್ಧಿ ವಿಷಯ ಬಂದಾಗ ಒಂದಾಗುತ್ತಾರೆ ಎಂಬುದು ನಾನು ಸಮೀಕ್ಷೆ ಮಾಡಿದಾಗ ತಿಳಿದು ಬಂದ ಅಂಶ, ಗ್ರಾಮಸ್ಥರು ಗ್ರಾಮ ಪಂಚಾಯಿತಿ ಚುನಾವಣೆಗಳು ಮುಕ್ತವಾಗಿ ನಡೆಯಲಿ ಎಂದು ಹೇಳುತ್ತಾರೆ, ಹಣ ಹೆಂಡ ಹಾಗೂ ಇತರ ಆಮಿಷಗಳನ್ನು ತೋರಿಸಲಾಯಿತು ಎಂಬುದು ಇವರ ಅನಿಸಿಕೆ ಆದರೂ ದಲಿತರು ಮತ್ತು ಹಿಂದುಳಿದ ವರ್ಗಗಳವರು ಗ್ರಾಮ ಪಂಚಾಯಿತಿಯಲ್ಲಿ ಸಿಂಹ ಪಾಲು ಪಡೆದಿದ್ದಾರೆ. ಇದಕ್ಕೆ ಕಾರಣ ಗ್ರಾಮ ಪಂಚಾಯಿತಿ ಸದಸ್ಯತ್ವದಲ್ಲಿ ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ್ದೆ ಕಾರಣ ಎಂಬುದಾಗಿ ಹೇಳುತ್ತಾರೆ ಅದರೂ ಗ್ರಾಮ ಪಂಚಾಯಿತಿ ರಾಜಕೀಯವಾಗಿ ಸಶಕ್ತವಾಗಿದ್ದರೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಹಿಂದೆ ಬಿದ್ದಿದೆ ಇಲ್ಲಿ ಜನರೆ ಸಂಘಟಿತರಾಗಿ ವೀರಾಂಜನೇಯ ಕೆರೆ ಅಭಿವೃದ್ಧಿ ಸಂಘ, ಸ್ವಸಹಾಯ ಗುಂಪುಗಳು, ಸ್ತ್ರೀ ಶಕ್ತಿ ಗುಂಪುಗಳು ಇವೆ. ಗ್ರಾಮದ ಅಭ್ಯುದಯಕ್ಕೆ ಕಾರಣವಾಗಿರುವಂತಹವು ಆದ್ದರಿಂದ ಗ್ರಾಮ ಪಂಚಾಯಿತಿ ಆಚೆಯಿಂದ ಅಭಿವೃದ್ಧಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಇದೇ ಮಾದರಿಯನ್ನು ಬೇರೆ ಗ್ರಾಮಗಳು ಹಾಕಿಕೊಂಡರೆ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ ಎಂಬುದು ಸ್ಪಷ್ಟವಾಗಿದೆ. ರಾಜಕೀಯ ವಿಕೇಂದ್ರೀಕರಣವೇನೂ ನಡೆದು ಹೋಯಿತು. ಆದರೆ ಆರ್ಥಿಕ ವಿಕೇಂದ್ರೀಕರಣ

ಆಗಿಲ್ಲ ರಾಜಕೀಯ ವಿಕೇಂದ್ರೀಕರಣದಿಂದಾಗಿ, ಹಳ್ಳಿಗಳಲ್ಲಿ ದಲಿತರು ಮತ್ತು ಹಿಂದುಳಿದ ವರ್ಗಗಳಲ್ಲಿ ಆತ್ಮವಿಶ್ವಾಸವೇನೂ ಮೂಡಿದೆ. ಆದರೆ ಈ ವರ್ಗಗಳನ್ನು ತಮ್ಮ ಹಕ್ಕಿಗಾಗಿ ಹೋರಾಡುವಂತಹ ಸಂಕಲ್ಪ ಶಕ್ತಿಯ ಕೊರತೆಯಿಂದಾಗಿ ದಲಿತರು ಮತ್ತು ಇತರೇ ಹಿಂದುಳಿದ ವರ್ಗಗಳಲ್ಲಿ ಸಂಘಟಯಾಗದ ಹಾಗೆ ಇದ್ದಾರೆ ಇಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳ ಸದಸ್ಯರು ಬಹುಪಾಲು ಇದ್ದರು, ಪ್ರಬಲ ಜಾತಿಯ ನಿರ್ದೇಶನದ ಮೇಲೆ ಇವರು ಕಾರ್ಯನಿರ್ವಹಿಸುವುದು, ಇದು ಬಹುಶಃ ಈ ಒಂದು ಗ್ರಾಮ ಪಂಚಾಯಿತಿಗೆ ಸೀಮಿತವಾಗಿಲ್ಲ ಎಲ್ಲ ಗ್ರಾಮಗಳಲ್ಲೂ ಇದೇ ವಿದ್ಯಮಾನವನ್ನು ನಾವು ಕಾಣಬಹುದಾಗಿದೆ. ಆದರೆ ಅರಹಳ್ಳಿ ಅಭಿವೃದ್ಧಿಯಾಗಿರುವುದೆ ಜಿಲ್ಲಾ ಕೇಂದ್ರವಾದ ಕೋಲಾರ ಸಮೀಪ ಇರುವುದರಿಂದ, ಎಲ್ಲ ಅವಕಾಶಗಳನ್ನು ಇಲ್ಲಿನ ಗ್ರಾಮಸ್ಥರು ಬಳಸಿಕೊಂಡಿದ್ದಾರೆ, ಆದರೆ ಮಾರ್ಜೇನಹಳ್ಳಿ ಇನ್ನೂ ಕುಗ್ರಾಮವಾಗರುವುದೇ ಕೋಲಾರಕ್ಕೆ ಸಮೀಪ ಇದ್ದು ಸಿಗುವ ಅವಕಾಶಗಳನ್ನು ಬಳಸಿಕೊಳ್ಳದೇ ಇರುವುದು.

ಮೂಲಭೂತ ಸೌಕರ್ಯಗಳು:

ಇಲ್ಲಿ ಮೂಲಭೂತ ಸೌಕರ್ಯಗಳೊಂದಾದ ವಿದ್ಯುಚ್ಛಕ್ತಿಯ ಎಲ್ಲರ ಮನೆಗಳಿಗೂ ಸಿಕ್ಕಿದೆ ಆದ್ದರಿಂದ ಗ್ರಾಮ ಸಂಪೂರ್ಣವಾಗಿ ವಿದ್ಯುಚ್ಛಕ್ತೀಕರಣಗೊಂಡಿದೆ. ಗೃಹೋಪಯೋಗಿ ವಿದ್ಯುಚ್ಛಕ್ತಿ ಇಲ್ಲಿ ಇದ್ದರು ರೈತರು ವ್ಯವಸಾಯಕ್ಕೆ ಬಳಸುವ ವಿದ್ಯುಚ್ಛಕ್ತಿಯ ಕೊರತೆಯನ್ನು ನಾವು ಕಾಣಬಹುದಾಗಿದೆ. ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ 18(60%) ಜನ ಪಂಪ್ ಸೆಟ್ ಗಳನ್ನು ಹೊಂದಿ ವಿದ್ಯುಚ್ಛಕ್ತಿಯನ್ನು ಬಳಸುತ್ತಿದ್ದಾರೆ. ಉಳಿದ 12(40%) ಜನ ಪಂಪ್ ಸೆಟ್ ಗಳನ್ನು ಹೊಂದಿಲ್ಲ ಹಾಗೂ ವಿದ್ಯುಚ್ಛಕ್ತಿಯನ್ನು ಬಳಸುತ್ತಿಲ್ಲ. ವಿದ್ಯುಚ್ಛಕ್ತಿಯನ್ನು ಬಳಸುವ ರೈತರ ಸಮಸ್ಯೆಗಳು ಹಲವಾರು, ಇವರಿಗೆ ದಿನಪೂರ್ತಿ ವಿದ್ಯುಚ್ಛಕ್ತಿ ಸಿಗುವುದಿಲ್ಲ ಹಾಗೂ ಬೆಳೆಗಳಿಗೆ ಸಕಾಲದಲ್ಲಿ ನೀರು ಪೂರೈಸಬೇಕಾದರೆ ವಿದ್ಯುಚ್ಛಕ್ತಿ ಕೈಕೊಟ್ಟಿರುತ್ತದೆ, ಆದ್ದರಿಂದ ಬೆಳೆಗಳಿಗೆ ಸಕಾಲದಲ್ಲಿ ನೀರು ಪೂರೈಸದೆ ಇಳುವರಿ ಇಳಿಮುಖವನ್ನು ನೋಡಬಹುದಾಗಿದೆ. ಕೆರೆ ನೀರನ್ನು ಅವಲಂಬಿಸಿ ಬೇಸಾಯ ಮಾಡುವ ರೈತರಿಗೆ ಕೆಲ ಅನುಭವಗಳು ಆಗಿಲ್ಲ ಆದರೆ ಸಂಪೂರ್ಣವಾಗಿ ಪಂಪ್ ಸೆಟ್ ಗಳ ಮೇಲೆ ಅವಲಂಬಿತವಾಗಿರುವವರಿಗೆ ವಿದ್ಯುಚ್ಛಕ್ತಿಯ ಸರಬರಾಜಿನಲ್ಲಿ ಆಗುವ ವ್ಯತ್ಯಯಗಳಿಗೆ ಬಲಿಯಾಗಬೇಕಾಗಿದೆ. ಈ ದಿಸೆಯಲ್ಲಿ ಕೋಲಾರದಲ್ಲಿರುವ ಬೆಸ್ಕಾಂ ನವರಿಗೆ ದೂರು ಸಲ್ಲಿಸಿದ್ದರೂ ಏನು ಪ್ರಯೋಜನವಾಗಿಲ್ಲ, ಬೆಸ್ಕಾಂ ಅಧಿಕಾರಿಗಳು ತಿಂಗಳಿಗೊಮ್ಮೆ ಬಾರಿ ಭೇಟಿ ನೀಡಬೇಕೆಂದು ಗ್ರಾಮಸ್ಥರು ತಮ್ಮ ಬೇಡಿಕೆ ಮುಂದಿಟ್ಟರೂ ಬೆಸ್ಕಾಂ ಅಧಿಕಾರಿಗಳು ಬರುವುದೇ ರೈತರು ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲಾರದೆ ಇದ್ದಾಗ ಮೀಟರ್ ಗಳನ್ನು ತೆಗೆಯುವುದಕ್ಕೆ ಎಂದು ಗ್ರಾಮಸ್ಥರು ದೂರುತ್ತಾರೆ, ಬೆಸ್ಕಾಂ ಅಧಿಕಾರಿಗಳು ರೈತರಿಗೆ ಅನುಕೂಲವಾಗುವಂತೆ ವಿದ್ಯುತ್ ಚ್ಛಕ್ತಿಯನ್ನು ಪೂರೈಸುತ್ತೇವೆಂದು ಭರವಸೆ ನೀಡಿದ್ದರು, ಭರವಸೆ ಮಾತ್ರ ಭರವಸೆಯಾಗಿ ಉಳಿದಿದೆ. ಆದ್ದರಿಂದ ಬೆಸ್ಕಾಂನವರಿಗೆ ರೈತರು ಹಣ ಪಾವತಿಸುವುದರಲ್ಲಿ ಅಂತಹ

ಪ್ರಾಮಾಣಿಕತೆಯನ್ನು ತೋರಿಸಲ್ಲ ರೈತರು ಬೆಸ್ಕಾಂಗೆ ನಿಯಮಿತವಾಗಿ ಹಣ ಪಾವತಿಸಿ ಬೇಕಾದರೆ ಗುಣಾತ್ಮಕತೆಯಿಂದ ಕೂಡಿರುವ ವಿದ್ಯುಚ್ಛಕ್ತಿ ಪೂರೈಕೆಯಾಗಬೇಕು ಆದರೆ ವಿದ್ಯುತ್ ಚ್ಛಕ್ತಿಯ ಪೂರೈಕೆಯಲ್ಲಿ ಗುಣಾತ್ಮಕತೆಯನ್ನು ಕಾಯ್ದಿಟ್ಟುಕೊಳ್ಳಲಾಗಿಲ್ಲ ಎಂಬುದು ವೇದ್ಯವಾದ ಸಂಗತಿ, ಲೈನ್ ಮೆನ್ ಗಳು ಗ್ರಾಮದಲ್ಲಿ ಯಾವಾದರು ವಿದ್ಯುಚ್ಛಕ್ತಿ ಸರಬರಾಜು ಕೆಟ್ಟರೆ ತಕ್ಷಣ ದುರಸ್ತಿ ಮಾಡುವಲ್ಲಿ ವಿಳಂಬ ತಂತ್ರ ಅನುಸರಿಸುತ್ತಾರೆ ಎಂಬುದು ಇಲ್ಲಿನ ಗ್ರಾಮಸ್ಥರ ಅಳಲು ಎರಡು ಮೂರು ದಿನಗಳಾದರು ವಿದ್ಯುಚ್ಛಕ್ತಿ ಪೂರೈಕೆ ಇಲ್ಲ ಕತ್ತಲಲ್ಲೆ ಗ್ರಾಮಸ್ಥರು ಕಳೆಯಬೇಕಾಗುತ್ತದೆ ಲೈನ್ ಮೇನ್ ಈ ಕಡೆ ತಿರುಗಿಯೂ ನೋಡುವುದಿಲ್ಲ ಈ ಗ್ರಾಮಕ್ಕೆ ಇಬ್ಬರು ಲೈನ್ ಮನ್ ಗಳನ್ನು ಕೊಡಲಾಗಿದೆ. ಆದರೆ ಅವರು ವಾರಕ್ಕೊಮ್ಮೆ ಎರಡು ವಾರಕ್ಕೊಮ್ಮೆಯೇ ಇಲ್ಲಿಗೆ ಬರುತ್ತಾರೆ, ಆದ್ದರಿಂದ ಗ್ರಾಮಸ್ಥರು, ವಿದ್ಯುಚ್ಛಕ್ತಿ ಸರಬರಾಜಿಲ್ಲದೆ ಹಲವರು ದಿವಸಗಳೇ ಕಳೆಯಬೇಕಾಗುತ್ತದೆ. ಎಂಬುದೇ ದೂರು. ಆದರೂ ವಿದ್ಯುಚ್ಛಕ್ತಿಯ ಬಿಲ್ಲುಗಳನ್ನು ಮಾತ್ರ ನಿಯಮಿತ (regular) ವಾಗಿ ಕೊಟ್ಟು ಹೋಗುತ್ತಾರೆ. ಕೋಲಾರಕ್ಕೆ ಹೋಗಿವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸುವುದಕ್ಕಿದೆ ಗ್ರಾಮದಲ್ಲೆ ವಿದ್ಯುತ್ ಚ್ಛಕ್ತಿಯ ಬಿಲ್ಲನ್ನು ಪಾವತಿಸಲು ಅನೂಕಲವಾಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಬಹಳಷ್ಟು ದಿನಗಳಿಂದ ಬೇಡಿಕೆ ಇಟ್ಟಿದ್ದರೂ ಯಾರು ಈ ಬೇಡಿಕೆಗೆ ಸ್ಪಂದಿಸಿಲ್ಲ ಎಂಬುದೇ ಗ್ರಾಮಸ್ಥರ ಕೊರಗು, ಯಾಕೆಂದರೆ ಪ್ರತಿ ತಿಂಗಳು ವಿದ್ಯುಚ್ ಚ್ಛಕ್ತಿ ಬಿಲ್ಲನ್ನು ಪಾವತಿಸಲು ಕೋಲಾರಕ್ಕೆ ಹೋಗುವುದಕ್ಕೆ ಹಣಕಾಸಿನ ತೊಂದರೆಯೂ ಎದುರಾಗುತ್ತದೆಂಬುದೆ ಇಲ್ಲಿನ ಗ್ರಾಮಸ್ಥರ ಅಳಲು, ಅರಹಳ್ಳಿಗೆ ಬಸ್ ಸೌಕರ್ಯ ವಿದ್ದರೂ, ಇಲ್ಲಿಂದ ಕೋಲಾರಕ್ಕೆ ಹೋಗಿ ಬರಲು, ಹೆಚ್ಚು ಖರ್ಚು ಬರುತ್ತದೆ. ಆದ್ದರಿಂದ ಇದನ್ನು ನೀಗಿಸಲು ಬೆಸ್ಕಾಂ ಅಧಿಕಾರಿಗಳು ಮುಂದಾಗಬೇಕೆಂಬುದೆ ಗ್ರಾಮಸ್ಥರ ಅಳಲು.

ದಿನಸಿ , ಸಾರಾಯಿ ಮತ್ತು ವ್ಯಾಪಾರ:

ದಿನಸಿ ಅಂಗಡಿಗಳು ಈ ಗ್ರಾಮದಲ್ಲಿ ನಾಲ್ಕು ಇವೆ, ಆದರೆ ಇವು ಸಣ್ಣ ಪ್ರಮಾಣದಲ್ಲಿ ಇಟ್ಟಿರುವುದರಿಂದ ಇವು ಗ್ರಾಮಸ್ಥರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲ, ಆದ್ದರಿಂದ ಬಹಳಷ್ಟು ಗ್ರಾಮಸ್ಥರು ಹತ್ತಿರದ ಕೋಲಾರದಿಂದ ದಿನಸಿಗಳನ್ನು ತರುತ್ತಾರೆ ಇಲ್ಲಿನ ದಿನಸಿ ಅಂಗಡಿಗಳಿಗೆ ಸಾಲ ಕೇಳುವವರು ಮಾತ್ರ ಹೋಗುತ್ತಾರೆ, ಸಾಲ ಮಾಡುವ ಜನ ಸಾಕಷ್ಟು ಸಂಖ್ಯೆಯಲ್ಲಿಲ್ಲದಿದ್ದರೂ ಇಲ್ಲಿನ ದಿನಸಿ ಅಂಗಡಿಗಳು ಆ'ದಿನ ಅವಶ್ಯಕತೆ ಪೂರೈಸಿಕೊಳ್ಳಿ ಅಂದೇ ಕೊಳ್ಳುವವರ ಬೇಕು ಬೇಡಗಳನ್ನು ಪೂರೈಸುತ್ತೇವೆ, ಬಹಳಷ್ಟು ಗ್ರಾಮಸ್ಥರು ಹತ್ತಿರದ ಕೋಲಾರಕ್ಕೆ ದಿನಸಿಕೊಳ್ಳಹೋಗುವುದು, ಗ್ರಾಮದಲ್ಲಿರುವ ಅಂಗಡಿಗಳು ಪದಾರ್ಥಗಳ ಗುಣಾತ್ಮಕತೆಯನ್ನು ಕಾಯ್ದಿಟ್ಟುಕೊಳ್ಳದೇ ಇರುವುದರಿಂದ. ಮಾರ್ಜೇನಹಳ್ಳಿಯಲ್ಲಿ ದಿನಸಿ ಅಂಗಡಿಗಳೆ ಇಲ್ಲದಿರುವುದು ಈ ಹಳ್ಳಿಯಲ್ಲಿ ದಿನಸಿ ಅಂಗಡಿಗಳು ಇರುವುದು ಈ ಗ್ರಾಮ ಅಭಿವೃದ್ಧಿಯ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿದೆ. ಎಂದು ಭಾವಿಸಿಕೊಳ್ಳಬಹುದು. ಆದರೆ ಈ ದಿನಸಿ ಅಂಗಡಿಗಳಿಗೆ ಕೂಲಿಗಳು,

ಬಡವರೆ, ಗಿರಾಕಿಗಳು. ಸ್ಥಿತಿವಂತರು ಹತ್ತಿರದ ಕೋಲಾರದಿಂದ ತಿಂಗಳಿಗೆ ಬೇಕಾಗುವಷ್ಟು ದಿನಸಿಯ ಕೊಂಡು ತಂದಿಟ್ಟುಕೊಳ್ಳುತ್ತಾರೆ, ಆದರೂ ಕೂಲಿಗಳಲ್ಲೂ, ಬಡವರಲ್ಲಿ ಹತ್ತಿರದ ಕೋಲಾರದಿಂದ ಸಾಲದ ಮೇಲೆ ದಿನಸಿ ತರುವವರ ಸಂಖ್ಯೆಯೂ ಇದೆ, ನಾನು ಸಮೀಕ್ಷೆ ಮಾಡಿದವರಲ್ಲಿ 22 (73.33%) ಜನ ಕೋಲಾರದಿಂದ ದಿನಸಿ ತರುತ್ತಾರೆ 6 (20%) ಜನ ಕೋಲಾರ ಮತ್ತು ಗ್ರಾಮದಲ್ಲೆ ದಿನಸಿ ಪಡೆಯುತ್ತಾರೆ, ಉಳಿದ 2(6.66%) ಗ್ರಾಮದಲ್ಲೇ ದಿನಸಿ ಪಡೆಯುತ್ತಾರೆ. ಅದರಿಂದ ಬಹುತೇಕವಾಗಿ ಇಲ್ಲಿ ಕಂಡು ಬರುವುದೇನೆಂದರೆ, ಅರಹಳ್ಳಿ ಗ್ರಾಮದಲ್ಲಿರುವ ಜನ ದಿನಸಿಕೊಳ್ಳುವಾಗ ಕೋಲಾರಕ್ಕೆ ಬರುತ್ತಾರೆ ಉಳಿದವರು ಗ್ರಾಮದಲ್ಲಿ ಮತ್ತು ಕೋಲಾರದಲ್ಲಿ ಕೊಳ್ಳುತ್ತಾರೆ, ಉಳಿದಂತೆ ಅಲ್ಪ ಪ್ರಮಾಣದ ಜನ, ಗ್ರಾಮದಲ್ಲಿ ದಿನಸಿ ಕೊಳ್ಳುತ್ತಾರೆ. ಸಮೀಕ್ಷೆಯಲ್ಲಿ ನಾನು ಗಮನಿಸಿದ ಹಾಗೆ ದಿನಸಿ ಅಂಗಡಿಗಳು ಕಡಿಮೆ ಗುಣಮಟ್ಟದ ಅಂಗಡಿಗಳಾಗಿವೆ, ಇಲ್ಲಿ ಮಾರುವ ಪದಾರ್ಥಗಳ ಸಂಖ್ಯೆಯೂ, ಕಡಿಮೆ ಗ್ರಾಹಕರಿಗೆ ಬೇಕಾದ ಗುಣಾತ್ಮಕ ಪದಾರ್ಥಗಳ (choice) ಆಯ್ಕೆ ಇಲ್ಲಿ ಸಿಗುವುದಿಲ್ಲ. ಅಂಗಡಿಯವರು ಕೊಟ್ಟಪದಾರ್ಥಗಳನ್ನು ಎರಡು ಮಾತಿಲ್ಲದೆ ಕೊಳ್ಳಬೇಕಾಗುತ್ತದೆ ಅವು ಗುಣಾತ್ಮಕವಾಗಿ ಚೆನ್ನಾಗಿರಲಿ ಚೆನ್ನಾಗಿರದೇ ಇರಲಿ ಗ್ರಾಹಕರು ಚಕಾರವೆತ್ತುವಂತಿಲ್ಲ. ಆದ್ದರಿಂದ ಇವು ಗ್ರಾಮದ ಗ್ರಾಹಕರ ಅವಶ್ಯಕತೆ ಪೂರೈಸುವಲ್ಲಿ ವಿಫಲವಾಗಿವೆ ಆದರೂ ನಾನು ಗಮನಿಸಿದ ಪ್ರಕಾರ ಒಂದೊಂದು ಅಂಗಡಿಗೂ ದಿನಕ್ಕೆ 200 ರಿಂದ 300 ರೂ ವ್ಯಾಪಾರವಾಗುತ್ತದೆ. ಇಷ್ಟೆ ಹಣ ಗ್ರಾಮದ ವ್ಯವಹಾರದಲ್ಲಿ ದೊಡ್ಡ ಮೊತ್ತ. ಹೋಟೆಲ್ ಗಳು ಯಾವುವು ಇಲ್ಲ, ಯಾಕೆಂದರೆ ಬಹಳಷ್ಟು ಜನ ರೈತರು ಮನೆಗಳಲ್ಲೇ ಬೆಳಿಗ್ಗೆ ಊಟ ಮಾಡಿ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ತೊಡಗಿಸಿಕೊಂಡಿರುವುದರಿಂದ ಹೋಟೇಲುಗಳು ಊಟ ಮಾಡದ ಅಭ್ಯಾಸವಿಲ್ಲದಿರುವುದರಿಂದ ಗ್ರಾಮಸ್ಥರಿಗೆ ಹೋಟೆಲ್ ಅವಶ್ಯಕತೆ ಇಲ್ಲ ಆದ್ದರಿಂದ ಹೋಟೆ ಲ್ ಗಳು ಇಲ್ಲಿ ಇಲ್ಲ. ಇಲ್ಲಿನ ಜನ ಮನೆಯ ಊಟಕ್ಕೆ ಬೇಸತ್ತು ಆಚೆ ಕಡೆ ಊಟ ಮಾಡುವ ಅಭ್ಯಾಸದವರಲ್ಲ, ಇವರು ಸರ್ಕಾರಿ ಕಚೇರಿಗಳಿಗೂ ಅಥವಾ ಕೋರ್ಟುಗಳಿಗೆ ಬಂದಾಗ ನಗರದಲ್ಲಿ ಹೋಟೆಲ್ ಗಳಲ್ಲಿ ಊಟ ಮಾಡುತ್ತಾರೆ, ಈ ಅಭ್ಯಾಸ ಬಿಟ್ಟರೆ, ಹೊರಗಡೆ ಊಟ ಮಾಡುವ ಅಭ್ಯಾಸವಿಲ್ಲದಿರುವುದರಿಂದ ಗ್ರಾಮದಲ್ಲಿ ಹೋಟೆಲ್ ಪ್ರಾರಂಭಿಸಿದರು, ಗ್ರಾಹಕರಿರುವುದಿಲ್ಲ, ಇದು ಎಲ್ಲ ಗ್ರಾಮಗಳ ಒಂದು ಸರ್ವೇ ಸಾಮಾನ್ಯ ನೋಟ, ಆದರೆ ಈ ಗ್ರಾಮದಲ್ಲಿ ಪಕ್ಕದ ಹಳ್ಳಿಯ ವೀರಶೈವ ಜನಾಂಗಕ್ಕೆ ಸೇರಿದ ವ್ಯಕ್ತಿ ಒಂದು ಸಸ್ಯಹಾರಿ ಹೋಟೆಲ್ ಪ್ರಾರಂಭಿಸಿದ್ದನೆಂದು ಆದರೆ ಅದು ಗ್ರಾಹಕರಿಲ್ಲದೆ ಮುಚ್ಚುವಂತಾಯಿತೆಂದು, ಸಮೀಕ್ಷೆಯ ಸಮಯದಲ್ಲಿ ಕಂಡುಬಂದ ಅಂಶ ಆದರೆ ಮಾರ್ಜೇನಹಳ್ಳಿಯಲ್ಲಿ ಹೋಟೇಲೆ ಪ್ರಾರಂಭಿಸುವ ಪ್ರಯತ್ನವೂ ನಡೆದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಎರಡು ಸಾರಾಯಿ ಅಂಗಡಿಗಳು ಅರಹಳ್ಳಿಯಲ್ಲಿ ಇವೆ, ಮಾರ್ಜೇನಹಳ್ಳಿಯಲ್ಲಿ ಒಂದೂ ಸಾರಾಯಿ

ಅಂಗಡಿ ಇಲ್ಲ. ಇಲ್ಲಿ ಕಂಡುಬರುವ ಅಂಶವೆಂದರೆ ಸಾರಾಯಿ ಮಾರಾಟ, ವಿಪುಲವಾಗಿ ನಡೆಯುವುದು, ದಿವಸಕ್ಕೆ ಸುಮಾರು 80-100 ಲೀಟರಿಗಿಂತ ಹೆಚ್ಚಾಗಿ ಮಾರಾಟವಾಗುವುದು ಸುಮಾರು 80-100 ಗಿರಾಕಿಗಳನ್ನು ಈ ಸಾರಾಯಿ ಅಂಗಡಿಗೆ ಹೋಗುತ್ತಾರೆ, ಇಲ್ಲಿಗೆ ಬರುವವರಲ್ಲಿ ಕೂಲಿಗಳು ಮತ್ತು ಕೆಳ ಮಧ್ಯಮವರ್ಗದ ಜನ, ಸಾರಾಯಿ ಅಂಗಡಿಗೆ ಹೋಗುವ ಕೂಲಿಯನ್ನು ಪ್ರಶ್ನಿಸಿದಾಗ, ದಿನನಿತ್ಯ ಕಷ್ಟ ಪಟ್ಟು ದುಡಿಯುತ್ತೇನೆ, ದಿವಸಕ್ಕೆ 75 ರಿಂದ 80 ರೂಪಾಯಿಗಳನ್ನು ಗಳಿಸುತ್ತೇನೆ ಇದರಲ್ಲಿ ರೂ. 35-40 ಗಳನ್ನು ಖರ್ಚು ಮಾಡುತ್ತೇನೆ ದುಡ್ಡಿದ್ದಾಗಲೆಲ್ಲ ಸಾರಾಯಿ ಅಂಗಡಿಗೆ ಬರುತ್ತೇನೆಂದು ಹೇಳುವ ಈತ ಇಬ್ಬರು ಮಕ್ಕಳನ್ನು ಹೊಂದಿದ್ದಾನೆ ಇಬ್ಬರ ಮಕ್ಕಳಲ್ಲಿ ಒಬ್ಬನು 12 ವರ್ಷ ವಯಸ್ಸು, ಇನ್ನೊಂದು ಮಗು 10 ವರ್ಷದ ವಯಸ್ಸು, ಇವರು ಕೋಲಾರದ ಹೋಟೆಲ್ ಗಳಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದಾರೆ, ಒಬ್ಬನಿಗೆ ತಿಂಗಳಿಗೆ 600 ರೂಗಳನ್ನು ಕೊಟ್ಟರೆ ಹತ್ತು ವರ್ಷದ ವಯಸ್ಸಿನ ಹುಡುಗನಿಗೆ ರೂ. 400 ಕೊಡಲಾಗುತ್ತದೆ, ಹೆಂಡತಿಯೂ ಸಹ ಕೂಲಿಗೆ ಹೋಗಿ ದಿವಸಕ್ಕೆ ರೂ. 50 ರಿಂದ ರೂ. 60 ರೂಗಳನ್ನು ಗಳಿಸುತ್ತಾರೆ, ಆದ್ದರಿಂದ ಮುನಿಯಪ್ಪ ಕೂಲಿಗೆ ತನ್ನ ಕುಟುಂಬದ ಸಂಸಾರ ನಡೆಯಬೇಕೆಂಬ ನಿಯಮವಿಲ್ಲ ಆದರೆ ಹೆಂಡತಿ ಮಕ್ಕಳ ದುಡಿಮೆಯ ಮೇಲೆ ಮುನಿಯಪ್ಪ ಜೀವಿಸುವುದು ಖಚಿತವಾಯಿತು ಆದರೆ, ಸಾರಾಯಿ ಇಲ್ಲದಿದ್ದರೆ, ಕೋಲಾರಕ್ಕೆ ಹೋಗಿ ಅಗ್ಗದ ವಿಸ್ಕಿಯನ್ನೊ ರಂ ಅನ್ನೋ ಕುಡಿಯುತ್ತೇನೆಂದು ಹೇಳಿದ ಆದರೆ ಅಗ್ಗದ ದರ ವಿಸ್ಕಿ , ರಂಗಿಂತ ಸಾರಾಯಿಯ ಅತಿ ಪ್ರಿಯ ಎಂದು ಹೇಳುತ್ತಾನೆ, ಕುಡಿಯುವುದಕ್ಕೆ ದುಡ್ಡಿಲ್ಲದ ದಿವಸ ಸಾಲ ಹೇಳಿ ಕುಡಿಯುತ್ತೇನೆ, ಆದರೆ ದಿನಸಿಗಳನ್ನು ಅಲ್ಲಿನ ಅಂಗಡಿಯಲ್ಲೇ ದಿನ ನಿತ್ಯ ಅಕ್ಕಿ ರಾಗಿ, ನುಚ್ಚು ಖರೀದಿಸುತ್ತಾನೆ ಸಾಲ ಸಹ ಹೇಳುತ್ತೇನೆಂದು ಹೇಳುತ್ತಾನೆ. ಸಾಲ ನೀಡುವುದರಿಂದ ದಿನನಿತ್ಯದ ಜೀವನಕ್ಕೇನು ತೊಂದರೆಯಿಲ್ಲ ಎಂಬುದೇ ಈತನ ಅನಿಸಿಕೆ. ಇಬ್ಬರು ಗಂಡು ಮಕ್ಕಳಿಂದ ತಿಂಗಳಿಗೆ ಬರುವ ರೂ. 1000ಗಳನ್ನು ದಿನಸಿ ಅಂಗಡಿಯ ಬಾಬತ್ತು ಕೊಟ್ಟು ಬಿಡುತ್ತೇನೆಂದು ಹೇಳುತ್ತಾನೆ, ಇದು ಬಹುತೇಕ ಈ ಗ್ರಾಮದ ಜನರ ಬವಣೆಯಾಗಿದೆ ಸಾರಾಯಿ ಕುಡಿಯುವವರು ಸಮೀಕ್ಷೆಯ ಪ್ರಕಾರ 20 ಜನ (66.66%), ದಿನಾ ಕುಡಿಯುವವರು 7 (23.3%) ಜನ ಸಾರಾಯಿಯನ್ನು ಮುಟ್ಟದವರು 3(10%) ಜನ ಇದು ಸ್ಪಷ್ಟಪಡಿಸುವುದೇನೆಂದರೆ ಜೀವನಾವಶ್ಯಕ ವಸ್ತುಗಳಂತೆ ಸಾರಾಯಿಯು ಆಗಿರುವುದು ಅದರಲ್ಲೂ ಕೂಲಿ ಮತ್ತು ಕೆಳಮಧ್ಯ ವರ್ಗಗಳ ಗಂಡಸರು ಸಾರಾಯಿಯನ್ನು ಕುಡಿಯುವುದು ಒಂದು ಅಭ್ಯಾಸವಾಗಿ ಹೋಗಿದೆ. ಸಮೀಕ್ಷೆಯಲ್ಲಿ ಇವರನ್ನು ಇದು ಆರೋಗ್ಯಕ್ಕೆ ಒಳ್ಳೆಯದಲ್ಲವಲ್ಲ ಹಾಗೂ ನಿಮ್ಮ ಸಂಸಾರವನ್ನು ಹಾಳುಗೆಡವುತ್ತವಲ್ಲ ಎಂದು ಕೇಳಿದಾಗ, ಸಂಸಾರಗಳನ್ನು ಹೇಗೆ ಸಾಗಿಸುತ್ತವೆ. ಆದರೆ ಸಾರಾಯಿ ಕಷ್ಟ ಪಟ್ಟು ದುಡಿದಾಗ, ಆ ನೋವುಗಳನ್ನಲ್ಲಿ ಮರೆಯಲು ಕುಡಿಯಲೇಬೇಕಾಗುತ್ತದೆ ಎಂಬುದೇ ಉತ್ತರ, ಇದುವರೆಗೂ ನಮ್ಮ ಆರೋಗ್ಯದ ಮೇಲೆ ಯಾವ ದುಷ್ಪರಿಣಾಮಗಳನ್ನು ಮಾಡಿಲ್ಲ

ಎಂಬುದೇ ಇವರ ಅನಿಸಿಕೆ, ಸಾರಾಯಿ ಸಿಗದಿದ್ದರೆ ಕಳ್ಳಭಟ್ಟಿಯನ್ನು ಕುಡಿಯುವುದಕ್ಕೆ ಸಿದ್ದ ಎಂಬುದೇ ಇವರ ಉತ್ತರ, ಆದ್ದರಿಂದ ರಾಜ್ಯ ಸರಕಾರ ಸಾರಾಯಿಯನ್ನು ನಿಷೇಧಿಸಬೇಕೆಂದು ಹೇಳುತ್ತದೆ. ಆದರೆ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಜನ ಸಾರಾಯಿ, ಕಳ್ಳಭಟ್ಟಿ ಕುಡಿಯುವ ಅಭ್ಯಾಸ ಇರುವುದರಿಂದ ಅಕ್ರಮ ಪರ್ಯಾಯ ವ್ಯವಸ್ಥೆಯೇ ಹಳ್ಳಿಗಳಲ್ಲಿ ಬೇರು ಬಿಡುವ ಸನ್ನಿವೇಶ ಸೃಷ್ಟಿಯಾಗಬಹುದು, ಆದ್ದರಿಂದ ಸಾರಾಯಿ ನಿಷೇಧಿಸುವುದು ಒಂದು ಆದರ್ಶವಾಗಬಹುದು ಇಂತಹ ಆದರ್ಶಗಳು ವಾಸ್ತವದಲ್ಲಿ ಹುಸಿಯಾಗುವುದೇ ಜಾಸ್ತಿ ಆದ್ದರಿಂದ ಒಳ್ಳೆ ಗುಣಾತ್ಮಕ ಸಾರಾಯಿ ಸಿಗುವುದಿಲ್ಲ ಎಂಬ ಕೂಲಿಗಳ ಅಳಲನ್ನು ಗಮನಿಸಬೇಕಾಗುತ್ತದೆ.

ಶಿಕ್ಷಣ ಇತ್ಯಾದಿ:

ಇಲ್ಲಿ ಮೂರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ಇವೇ ಈ ಶಾಲೆಗಳಲ್ಲಿ ಸುಮಾರು 180 ಜನ ವಿದ್ಯಾರ್ಥಿಗಳಿದ್ದು 7 ಜನ ಅಧ್ಯಾಪಕರಿದ್ದಾರೆ, ಇಲ್ಲಿ ವಿದ್ಯಾರ್ಥಿಗಳ ನೊಂದಣಿಕೆ ಸಂಖ್ಯೆ ಗಮನಾರ್ಹವಾಗಿದ್ದರೂ, ಗುಣಾತ್ಮಕತೆಯಿಂದ ಈ ಶಾಲೆಗಳಲ್ಲಿ ಅಂತಹ ಒಳ್ಳೆ ಬೋಧನಾ ಮಟ್ಟವನ್ನು ಕಾಯ್ದಿಟ್ಟುಕೊಂಡು ಬಂದಿಲ್ಲ ಆದ್ದರಿಂದ ಸುಸ್ಥಿತಿಯಲ್ಲಿರುವ ಕೋಲಾರಕ್ಕೂ ತಮ್ಮ ಮಕ್ಕಳನ್ನು ಗ್ರಾಮಸ್ಥರು ಕಳಿಸುತ್ತಾರೆ, ಆದರೆ ಇಲ್ಲಿನ ಶಾಲೆಗಳಲ್ಲಿ ಕನ್ನಡ ಮಾಧ್ಯಮವಾಗಿರುವುದರಿಂದ ಬಹಳಷ್ಟು ಸುಸ್ಥಿತಿಯಲ್ಲಿರುವ ಪೋಷಕರು ತಮ್ಮ ಮಕ್ಕಳನ್ನು ಹೆಚ್ಚಿಗೆ ವಂತಿಗೆ ಕೊಟ್ಟು, ಕೋಲಾರದ ಶಾಲೆಗಳಿಗೆ ಕಳಿಸುತ್ತಾರೆ. ಸರಕಾರಿ ಶಾಲೆಗಳು ಗ್ರಾಮಗಳ ಮಕ್ಕಳಲ್ಲಿ ಜಾಣತನ, ಗ್ರಹಿಸುವ ಶಕ್ತಿಯನ್ನು ಉತ್ತೇಜಿಸುವಲ್ಲಿ ವಿಫಲವಾಗಿವೆ ಎಂಬುದೇ ಬಹಳಷ್ಟು ಪೋಷಕರ ಅನಿಸಿಕೆ. ಯಾಕೆಂದರೆ ಇಲ್ಲಿನ ಅಧ್ಯಾಪಕರು ಯಾವುದೇ ಪೂರ್ವ ಸಿದ್ಧತೆ ಇಲ್ಲದೆ ಹಾಗೂ ಅದೇ ಹಳೆಯ ಮಾದರಿಯ ಬೋಧನಾ ವಿಧಾನಗಳನ್ನು ಅನುಸರಿಸುವುದರಿಂದ ಭವಿಷ್ಯದಲ್ಲಿ ಮಕ್ಕಳ ಪ್ರಗತಿಯ ಬಗ್ಗೆ ಅನೇಕ ಪೋಷಕರು ಆತಂಕದಿಂದ ಇದ್ದಾರೆ ಆದರೆ ಸರಕಾರಿ ಶಾಲೆಗಳಲ್ಲಿ ತಮ್ಮ ಮಕ್ಕಳ ಓದಿಗೆ ಅಂತಹ ಹೇಳಿಕೊಳ್ಳುವಂತಹ ಖರ್ಚು ಬರದೇ ಇರುವುದರಿಂದ, ಅಂದರೆ ಕೋಲಾರದಲ್ಲಿರುವ ವಂತಿಗೆ ಶಾಲೆಗಳಿಗಿಂತ ಇಲ್ಲಿ ಕಡಿಮೆ ಹಾಗೂ ಉಚಿತ ಶಿಕ್ಷಣ ನೀಡುವುದರಿಂದ ಬಹಳಷ್ಟು ಗ್ರಾಮಸ್ಥರು ತಮ್ಮ ಮಕ್ಕಳನ್ನು ಇಲ್ಲಿನ ಶಾಲೆಗೆ ಕಳಿಸುತ್ತಾರೆ. ಇಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದೆ ಎಂಬುದೇ ಅಧ್ಯಾಪಕರ ದೂರು, ಯಾಕೆಂದರೆ ಒಂದು ದಿನ ಶಾಲೆಗೆ ಬಂದರೆ ಮೂರು ನಾಲ್ಕು ದಿನಗಳವರೆಗೂ ಮಕ್ಕಳು ಶಾಲೆಗೆ ಬರುವುದೇ ಇಲ್ಲ ಎಂದು ದೂರು. ಆದರೆ ಶಿಕ್ಷಕರು ನಾವು ನಿಯಮಿತವಾಗಿ ಶಾಲೆಗೆ ಬರುತ್ತೇವೆಂದು ಹೇಳುತ್ತಾರೆ. ಆದರೆ ಗ್ರಾಮಸ್ಥರ ಅನಿಸಿಕೆಯೇ ಬೇರೆ ಇಲ್ಲಿನ ಅಧ್ಯಾಪಕರು ಮಕ್ಕಳಿಗೆ ಬೋಧಿಸುವ ಬಗ್ಗೆ ಗಂಭೀರವಾಗಿಯೇನು ಇಲ್ಲ, ಅವರು ಶಾಲೆಗಳಿಗೆ ಬಂದರೆ ಬಂದರು ಇಲ್ಲದೆ ಹೋದರೆ, ಅವರ ಖಾಸಗಿ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಎಂಬುದೆ ದೂರು

ಆದರೆ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ಜ್ಞಾನ ಬೋಧನೆಯ ತಾಣಗಳಾಗಿರಬೇಕೆಂಬ ಅಭಿಲಾಷೆಯಿಂದ ಸರ್ಕಾರಿ ಶಾಲೆಗಳನ್ನು ತೆರೆದು ನಡೆಸುತ್ತಿದ್ದೆ, ಆದರೆ ಈ ಮನೋಭಾವ ಅಧ್ಯಾಪಕರಲ್ಲಿ ಮತ್ತು ಪೋಷಕರಲ್ಲಿ ಎದ್ದು ಕಾಣುತ್ತದೆ, ಆದ್ದರಿಂದ ಇವು ಕೇವಲ ಸರಕಾರ ಶಾಲೆ ತೆಗೆದಿದೆ ಅದ್ದರಿಂದ ನಾವು ಶಾಲೆಗೆ ಹೋಗಬೇಕು ಎಂಬ ಮನೋಭಾವ ಶಿಕ್ಷಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಎದ್ದು ಕಾಣುತ್ತಿದೆ ಸರಕಾರಿ ಶಾಲೆಗಳೆಂದರೆ ಅವ್ಯವಸ್ಥೆ ಹಾಗೂ ಅಕ್ರಮ ಚಟುವಟಿಕೆಗಳ ತಾಣ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ ಹಾಗೆಯೇ ಅರಹಳ್ಳಿಯಲ್ಲೂ ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯ ಆಸೆ ಹಾಗೂ ಆಸಕ್ತಿಯನ್ನು ಹುಟ್ಟಿಸುವ ಬದಲು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ, ಆದ್ದರಿಂದ ನಾವು ಶಾಲೆ ನಡೆಸಬೇಕು ಎಂಬ ಮನೋಭಾವ ಶಿಕ್ಷಕರಲ್ಲಿದೇ ಶಿಕ್ಷಕರು ಅಷ್ಟೇ ಮಧ್ಯದಲ್ಲಿ ಬಿಟ್ಟು ಹೋಗುವ ವಿದ್ಯಾರ್ಥಿಗಳ ಬಗ್ಗೆ ಆಸಕ್ತಿ ವಹಿಸಿಲ್ಲ ಸರಕಾರ ಪ್ರಾರಂಭಿಸಿರುವ ಮರಳಿ ಶಾಲೆಗೆ ಎಂಬ ಕಾರ್ಯಕ್ರಮ ಬಹಳಷ್ಟು ಪೋಷಕರಿಗೆ ಗೊತ್ತೇ ಇಲ್ಲ. ಬಹಳಷ್ಟು ವಿದ್ಯಾರ್ಥಿಗಳು, irregular (ಅನಿಯಮಿತ) ಆಗಿದ್ದಾರೆ, ಯಾಕೆಂದರೆ ಪೋಷಕರಿಗೆ ಕೃಷಿ ಕೆಲಸಗಳಲ್ಲಿ ಸಹಾಯಕರಾಗಿ ಮಕ್ಕಳು ದುಡಿಯುತ್ತಾರೆ ಆದ್ದರಿಂದ ನಿಯಮಿತವಾಗಿ ಮಕ್ಕಳು ಶಾಲೆಗೆ ಬರುವುದಿಲ್ಲ ಇಲ್ಲಿನ ಫಲಿತಾಂಶಗಳು ಮಾತ್ರ ಅಚ್ಚರಿ ಮೂಡಿಸುತ್ತದೆ. ಶಿಕ್ಷಕರು ಬೋಧನೆಯಲ್ಲಿ ಆಸಕ್ತಿ ಇಲ್ಲದಿದ್ದರೂ, ಕಡಿಮೆ ಫಲಿತಾಂಶದಿಂದ ಸರ್ಕಾರದ ಕಣ್ಣು ತಮ್ಮ ಮೇಲೆ ಬೀಳದಿರಲೆಂದು ಶೇ. 30 ರಿಂದ 90 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವಂತೆ ನೋಡಿಕೊಳ್ಳುತ್ತಿದ್ದಾರೆ, ಆದ್ದರಿಂದಲೇ ಪ್ರೌಢಶಾಲೆ ಹಾಗೂ ಪಿ.ಯು.ಸಿ. ಮಟ್ಟದಲ್ಲಿ ಗ್ರಾಮೀಣ ಪ್ರದೇಶದಿಂದ ಬಂದಂತ ವಿದ್ಯಾರ್ಥಿಗಳ ಗುಣಮಟ್ಟ ಸುಧಾರಿಸದೇ ಇರುವುದು, ಇಲ್ಲಿನ ಗ್ರಾಮಸ್ಥರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ತೃಪ್ತಿಕರವಾಗದೆ ಇದ್ದರೂ, ಪ್ರೌಢಶಾಲೆ ಬೇಕೆಂದು ಬೇಡಿಕೆ ಇಟ್ಟಿದ್ದಾರೆ, ಆದರೆ ಇದರ ಬಗ್ಗೆ ಶಿಕ್ಷಣ ಇಲಾಖೆ ತಲೆ ಕೆಡಿಸಿಕೊಂಡಿಲ್ಲ.

ಅಕ್ಷರಸ್ಥರು ಮತ್ತು ನಿರಕ್ಷರಸ್ಥರು:

ಒಟ್ಟು 2800 ಜನಸಂಖ್ಯೆಯಲ್ಲಿ 1200 ಜನ ಅಕ್ಷರಸ್ಥರು ಉಳಿದವರು ಅಂದರೆ 400 ಜನ ಅರೆ ಅಕ್ಷರಸ್ಥರು 200 ಜನ ನಿರಕ್ಷರಸ್ಥರು ಇದ್ದಾರೆ ಇದಕ್ಕೆ ಕಾರಣವೇನೆಂದರೆ ಮುಂದುವರೆದ ಶಿಕ್ಷಣ ಕೇಂದ್ರ ಸಂಜೆ 6 ಗಂಟೆಯಿಂದ 8 ಗಂಟೆಯವರೆಗೂ ಇರುತ್ತದೆ. ದಿನವಹಿ 40 ರಿಂದ 50 ಜನ ಶಿಕ್ಷಣಾರ್ಥಿಗಳು ಈ ಕೇಂದ್ರಕ್ಕೆ ಹೋಗುತ್ತಾರೆ, ಹೀಗೆ ವಯಸ್ಕರ ಶಿಕ್ಷಣಕ್ಕೆ ಸರಕಾರ ಪ್ರಾಮುಖ್ಯತೆ ನೀಡಿದೆ. ಇದರ ಜೊತೆಗೆ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿರುವುದರಿಂದ ವಯಸ್ಕ ಶಿಕ್ಷಣವನ್ನು ಈ ಹಳ್ಳಿಯಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗಿದೆ, ದಿನಂಪ್ರತಿ ಬಹಳಷ್ಟು ಸಂಖ್ಯೆಯಲ್ಲಿ ವಯಸ್ಕ ಶಿಕ್ಷಣಾರ್ಥಿಗಳು ಬರುವುದರಿಂದ ಹಾಗೂ ಇಂದಿನ ಯುಗದಲ್ಲಿ, ಓದುವುದು, ಬರೆಯುವುದು, ಹಾಗೂ ಸಹಿಮಾಡುವುದು ಕಲಿಯದಿದ್ದರೆ ಯಾವುದೇ ವ್ಯವಹಾರ ನಡೆಸಲು ಸಾಧ್ಯವಿಲ್ಲ, ಎಂಬುದು ಬಹಳಷ್ಟು ಗ್ರಾಮಸ್ಥರ ತಿಳುವಳಿಕೆ ಆದ್ದರಿಂದ

ವ್ಯವಹಾರಕ್ಕಾಗಿ ಓದಲು ಬರೆಯಲು ಹಾಗೂ ಸಹಿ ಮಾಡಲು ವಯಸ್ಕ ಶಿಕ್ಷಣ ಉಪಯುಕ್ತ ಎಂಬುದು ಸ್ಪಷ್ಟ. ಆದ್ದರಿಂದ ಈ ನಿಟ್ಟಿನಲ್ಲಿ ಸರಕಾರ ಕೈಗೊಂಡಿರುವ ಕಾರ್ಯಕ್ರಮಗಳು ಅಷ್ಟೇ ಉಪಯುಕ್ತ. ಅರಹಳ್ಳಿಯನ್ನು ಗಮನಿಸಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ. ಯಾಕೆಂದರೆ ನಿರಕ್ಷರಸ್ಥ ರೈತರಿಗೆ, ವ್ಯಾಪಾರಿಗಳು ಸುಲಭವಾಗಿ ವಂಚಿಸುತ್ತಾರೆ ಎಂಬುದೇ ರೈತರ ಅನಿಸಿಕೆ, ನಿರಕ್ಷರಸ್ಥ ರೈತರು ತಮ್ಮ ಉತ್ಪನ್ನಗಳನ್ನು ಮಾರಬೇಕಾದರೆ ಅಕ್ಷರಸ್ಥರ ಮೇಲೆ ಅವಲಂಬಿತರಾಗಿರುತ್ತಾರೆ, ಸ್ವತಂತ್ರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ನಿರಕ್ಷರಸ್ಥ ರೈತರಿಗೆ ಸಾಧ್ಯವಾಗುವುದಿಲ್ಲ. ವರ್ತಕರು ಎಷ್ಟು ಬೆಲೆ ಹೇಳುತ್ತಾರೊ ಅಷ್ಟೇ ಬೆಲೆಗೆ ಉತ್ಪನ್ನಗಳನ್ನು ಮಾರಿ, ಅವರು ನೀಡುವ ಬೆಲೆ ಚೀಟಿಯನ್ನು ತಂದು ಅಕ್ಷರಸ್ಥರಿಗೆ ತೋರಿಸಬೇಕಾಗುತ್ತದೆ. ಇಲ್ಲಿ ನಿರಕ್ಷರಸ್ಥ ರೈತರಿಗೆ ಎಲ್ಲ ತರಹದಲ್ಲೂ ಮೋಸ ಮಾಡುವ ಸಂದರ್ಭಗಳೇ ಹೆಚ್ಚಾಗುತ್ತದೆ. ಆದ್ದರಿಂದ ನಿರಕ್ಷರಸ್ಥರ ಬದುಕು ಭಯನಾಕರವಾದ್ದದು, ಇದರಿಂದ ಬಿಡಿಸಿಕೊಳ್ಳಬೇಕೆಂದರೆ ವಯಸ್ಕ ಶಿಕ್ಷಣ ಕೇಂದ್ರಗಳಿಗೆ ಹೋಗಿ ಓದುವುದು ಬರೆಯುವುದು, ಮತ್ತು ಸಹಿ ಮಾಡುವುದನ್ನು ಕಲಿಯಬೇಕಾಗಿರುವುದು ಅನಿವಾರ್ಯ ಆ ರೀತಿಯಲ್ಲಿ ನೋಡಿದರೆ ಅರಹಳ್ಳಿಯಲ್ಲಿ ಈ ವಯಸ್ಕ ಶಿಕ್ಷಣ ಯಶಸ್ವಿಯಾಗಿದೆ, ಇಲ್ಲಿನ ಬಹುತೇಕ ರೈತರು ಅಕ್ಷರಸ್ಥರಾಗಿದ್ದಾರೆ ಹಾಗೂ ಸರಕಾರದಿಂದ ಬರುವ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದ ಕೇಳಿ ತಿಳಿದುಕೊಳ್ಳುವಂತಹ ಜಾಗೃತ ಪ್ರಜ್ಞೆ ಬಂದಿದೆ. ಆದರೆ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಬಹಳಷ್ಟು ಯೋಜನೆಗಳ ಬಗ್ಗೆ ರೈತರಿಗೆ ತಿಳಿಸುವುದಿಲ್ಲ, ಎಂಬುದು ಅಕ್ಷರಸ್ಥ ರೈತರ ಅಭಿಪ್ರಾಯ ರೈತರು ಅಕ್ಷರಸ್ಥರಾಗಿರುವುದರಿಂದ ತಮ್ಮ ಮನೆಯಲ್ಲಿ ಮಕ್ಕಳ ಓದಿನ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಾರೆ ಎಂಬುದು ಅಷ್ಟು ಪ್ರಾಮುಖ್ಯತೆ ಪೆಡದಿಲ್ಲ. ಅಕ್ಷರಸ್ಥರಾದರೆ ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣ ಕೊಡಿಸಬೇಕೆಂಬ ಆಕಾಂಕ್ಷೆಯೇನು ಹೊಂದಿಲ್ಲದಿರುವುದು ಅಕ್ಷರ ಕ್ರಾಂತಿಯ ಸೋಲಲ್ಲದೆ ಮತ್ತೇನು ಅಲ್ಲ. ಆದರೆ ಅಕ್ಷರತೆ ರೈತರು, ಇನ್ನಿತರ ಕೌಶಲ್ಯ ಕೆಲಸಗಳಿಗೆ ಹೋಗಲು ದಾರಿ ಮಾಡಿಕೊಡುತ್ತವೆಂಬುದು ಸುಳ್ಳಾಗಿದೆ, ಯಾಕೆಂದರೆ ಬಹಳಷ್ಟು ಅಕ್ಷರಸ್ಥರು ರೈತರು ಕೂಲಿಗಳಾಗಿ ಕೆಲಸ ಮಾಡುತ್ತಿರುವುದೆ ಇದಕ್ಕೆ ಸಾಕ್ಷಿಯಾಗಿದೆ. ಯಾಕೆಂದರೆ ಅಕ್ಷರಸ್ಥರಾದರೆ ವೃತ್ತ ಪತ್ರಿಕೆಗಳು, ಪುಸ್ತಕಗಳ ಮೂಲಕ ಲೋಕದ ಆಗು ಹೋಗುಗಳನ್ನು ತಿಳಿದುಕೊಳ್ಳಬಹುದು ಆದರೆ ಅರಹಳ್ಳಿಯಲ್ಲಿ ರೈತರು ವೃತ್ತ ಪತ್ರಿಕೆಗಳನ್ನು ಓದುತ್ತಾರೆ ಹಾಗೂ ಪಂಚಾಯಿತಿಗೆ ಬರುವ ಪಾಕ್ಷಿಕ ಮಾಸಿಕ ಪತ್ರಿಕೆಗಳನ್ನು ಓದುತ್ತಾರೆ, ಆದರೆ ಇನ್ನಿತರ ಜ್ಞಾನವನ್ನು ಪಡೆಯಲು ಹೆಚ್ಚು ಓದಲು ಬೇಕಾದ ಪುಸ್ತಕಗಳು ಅಲಭ್ಯ. ಏಕೆಂದರೆ, ಇಲ್ಲಿ ಗ್ರಂಥಾಲಯ ವಿಲ್ಲದಿರುವುದು ಒಂದು ದುರಂತ ಹಳ್ಳಿ ಹಳ್ಳಿಗಳಲ್ಲೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯಗಳಿರುವುದು ಅವಶ್ಯವಾದರು, ಅರಹಳ್ಳಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯ.ವುದೇ ಗ್ರಂಥಾಲಯವಿಲ್ಲ ಗ್ರಂಥಾಲಯಗಳು ಕೌಶಲ್ಯ ಕೆಲಸಗಳ ಬಗ್ಗೆ ವಿವರಗಳಿರುವ ಪುಸ್ತಕಗಳನ್ನು ಸರಬರಾಜು ಮಾಡಿದರೆ, ರೈತರು ಅವನ್ನು ಓದಿ ಜ್ಞಾನ ಹೆಚ್ಚಿಸಿಕೊಂಡು, ಹೆಚ್ಚು ಆದಾಯ ತರಬಲ್ಲ ಉದ್ಯೋಗಗಳಲ್ಲಿ

ತೊಡಗಿಸಿಕೊಳ್ಳಬಹುದು, ಹಾಗೂ ತಮ್ಮ ಮಕ್ಕಳನ್ನು ಭವಿಷ್ಯತ್ತಿನಲ್ಲಿ ಉತ್ತಮ ವಿದ್ಯಾವಂತರನ್ನಾಗಿ ರೂಪಿಸಬಹುದು. ಆದ್ದರಿಂದ ಅಕ್ಷರತೆಯೊಂದಿಗೆ ಗ್ರಂಥಾಲಯಗಳ ಅವಶ್ಯಕತೆಯೂ ಇದೆ.

ಹೈನುಗಾರಿಕೆ ಇತ್ಯಾದಿ:

ಅರಹಳ್ಳಿಯನ್ನು ಮಾರ್ಜೇನಹಳ್ಳಿಗೆ ಹೋಲಿಸಿದರೆ, ಪಶು ಸಂಪತ್ತು ಹೇರಳವಾಗಿದೆ. 250 ಹಾಲು ಕರೆಯುವ ಹಸುಗಳು 50 (5.50%) ಎತ್ತುಗಳು ಎಮ್ಮೆಗಳು 50 (5.5%) ಕುರಿಗಳು, 500 , ಮೇಕೆ 100 (11.11%) ಹಾಲು ಕರೆಯುವ ಹಸುಗಳು 250 ಇರುವುದರಿಂದ ಬೆಳೆಗಳ ಬೆಳೆಯುವುದರ ಜೊತೆಗೆ ಹಾಲು ಕರೆಯುವ ಹಸುಗಳನ್ನು ಸಾಕಾಣಿಕೆ ಮಾಡುವದನ್ನು ಉಪಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಈ ಜಾನುವಾರುಗಳಿಗೆ ಮೇವು, ಕೃಷಿಯಿಂದ ಬರುವ ತ್ಯಾಜ್ಯಗಳಿಂದ ಹಾಗೂ ಪಕ್ಕದ ಹಳ್ಳಿಗಳಿಂದ ಹುಲ್ಲು, ಹಸಿರು ಸೊಪ್ಪು ಮತ್ತು ಹಿಂಡಿ ಕಲಗಚ್ಚನ್ನು ಉಪಯೋಗಿಸಲಾಗುತ್ತಿದೆ. ಮೇವು ಕಡಿಮೆಯಾದರೆ ಕೋಲಾರದಲ್ಲಿರುವ ಹುಲ್ಲಿನ ಅಂಗಡಿಗಳಿಂದ ಹುಲ್ಲನ್ನು ಕೊಳ್ಳಲಾಗುತ್ತದೆ. ಅವನ್ನು ಎತ್ತಿನಗಾಡಿ ಹಾಗೂ ಟ್ರಾಕ್ಟರುಗಳ ಮೂಲಕ ಸಾಗಿಸಲಾಗುತ್ತದೆ. ಸುಮಾರು 250 ಜನ ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಹೊಂದಿದ್ದಾರೆ. ಇವು ಆರ್ಥಿಕವಾಗಿ ಈ ಹಳ್ಳಿಯಲ್ಲಿ ರೈತರು ಸಬಲವಾಗುವುದಕ್ಕೆ ಕಾರಣವಾಗಿದೆ. ಹಸುಗಳು 1500 ಲೀಟರ್ ಹಾಲನ್ನು ನೀಡುತ್ತವೆ, ಇದನ್ನು ಅರಹಳ್ಳಿ ಹಾಲೂ ಸಹಕಾರ ಸಂಘಕ್ಕೆ ಹಾಕುತ್ತಾರೆ, ಹಸುಗಳಿಗೆ ಬೇಕಾದ ಆಹಾರ ಒದಗಿಸುವುದು ಕಷ್ಟಕರ ಎಂಬುದೆ ರೈತರ ಅಳಲು, ಆದರೂ ಬೇಸಿಗೆಯಲ್ಲಿ ಜಾನುವಾರುಗಳಿಗೆ ಮೇವು ಇಲ್ಲದೆ ಹಾಲಿನ ಇಳುವರಿ ಇಳಿಮುಖವಾಗುತ್ತದೆ ಹತ್ತಿರದ ವೇಮಗಲ್ ಮತ್ತು ತೊಟ್ಲಿಯಿಂದಲೂ ಹಸುಗಳಿಗೆ ಬೇಕಾದ ಮೇವನ್ನು ತರಲಾಗುತ್ತದೆ. ಇಲ್ಲಿನ ರೈತರು ಟೊಮೋಟೋ ಆಲೂಗಡ್ಡೆ ಹಿಪ್ಪುನೇರಳೆ ಬೆಳೆಗಳನ್ನು ಬೆಳೆಯುುವದರೊಂದಿಗೆ ಹೈನುಗಾರಿಕೆಯುಲ್ಲಿ ತೊಡಗಿಸಿಕೊಂಡಿರುವುದರಿಂದ ಹೆಚ್ಚಿನ ಆದಾಯ ರೈತರಿಗೆಬರುತ್ತದೆ. ಬಂದ ಆದಾಯದಿಂದ ಮನೆ ಕಟ್ಟಿಸುವುದು, ಮದುವೆ ಮಾಡುವುದು, ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳಿಸುವುದು ನಡೆದಿದೆ. ಕುರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಇದ್ದು, ಭೂ ರಹಿತರಿಗೆ ಆಸರೆಯಾಗಿರುವ ಉದ್ಯೋಗವಿದು, ಒಂದು ಕುರಿ 1500 ರಿಂದ 2000 ದವರೆಗೆ ಮಾರಾಟವಾಗುತ್ತದೆ ಹತ್ತಿರದ ಬಂಗಾರಪೇಟೆ ಸಂತೆ ಕೋಲಾರದ ಸಂತೆಯಲ್ಲಿ ಕುರಿಗಳನ್ನು ಮಾರಲಾಗುತ್ತದೆ.

ಹಸುಗಳಿಗೆ ಮತ್ತು ಕುರಿ ಮೇಕೆಗಳಿಗೆ ರೋಗ ರುಜಿನ ಬಂದರೆ ಭೂ ರಹಿತ ಕುಟುಂಬಗಳು ಹೆಚ್ಚು ಆತಂಕಗೊಳ್ಳುತ್ತಾರೆ ಯಾಕೆಂದರೆ ಕಳೆದ ಎರಡು ವರ್ಷಗಳ ಹಿಂದೆ ಕುರಿಗೆ ನೀಲಿ ನಾಲಿಗೆ ರೋಗ ಬಂದು 50 ಕ್ಕೂ ಹೆಚ್ಚು ಕುರಿಗಳು ಸತ್ತು ಹೋದವು ಇದರ ಬಗ್ಗೆ ಪಶು ವೈದ್ಯಕೀಯ ಇಲಾಖೆಯ ದಿವ್ಯ ನಿರ್ಲಕ್ಷ್ಯದಿಂದಾಗಿ ಕುರಿಗಳು ಸಾಯಬೇಕಾಯಿತು ಆದರೂ ಸರಕಾರದಿಂದ ಪರಿಹಾರ ಧನವಂತು ರೈತರಿಗೆ

ಸಿಗಲಿಲ್ಲ ಎಂದು ರೈತರು ಪಶುವೈದ್ಯಕೀಯ ಇಲಾಖೆಯನ್ನು ದೂರುತ್ತಾರೆ, ಆದರೆ ಇಲ್ಲಿ ಹೆಚ್ಚು ಸಣ್ಣ ರೈತರು ಮತ್ತು ಭೂ ಹೀನ ರೈತರು ಕುರಿ ಹಾಗೂ ಮೇಕೆ ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಈ ಉದ್ಯಮ ಹೆಚ್ಚಿನ ರೀತಿಯಲ್ಲಿ ಈ ಜನರಿಗೆ ಆದಾಯ ತರುತ್ತದೆಂಬುದನ್ನು ಮಾತ್ರ ಗಮನಿಸಿದ್ದೇವೆ ಆದರೆ ಸರಕಾರ ಕುರಿ ಸಾಗಾಣಿಕೆದಾರರ ಹಾಗೂ ಹಾಲು ಕೊಡುವ ಹಸುಗಳ ಸಾಕಾಣಿಕೆದಾರರ, ಸಮಸ್ಯೆಗಳ್ಳನು ಕಡೆಗಣಿಸಿರುವುದರಿಂದ ರೈತರು ಅನೇಕ ವಿಪತ್ತುಗಳಿಗೆ ಈಡಾಗಬೇಕಾಗಿದೆ. ಹಸುಗಳಿಗೆ ಕೆಚ್ಚಲು ಬಾವು ರೋಗ ಬರುವುದು ಸರ್ವೇ ಸಾಮಾನ್ಯವಾದದ್ದು, ಆದರೆ ಪಶುವೈದ್ಯಕೀಯ ಸೇವೆ ಅವ್ಯವಸ್ಥಿತವಾಗಿದೆ ಎಂಬುದೆ ರೈತರ ಅಳಲು, ಸರಕಾರ ಭೂರಹಿತ ರೈತರಿಗೆ ಪರ್ಯಾಯ ಲಾಭದಾಯಕ ಯೋಜನೆಗಳಡಿಯಲ್ಲಿ ಕುರಿಗಳಿಗೆ ಹಾಗೂ ಮೇಕೆಗಳಿಗೆ ನೀಡುವ ಹಣ ಹಾಗೂ ಪರಿಹಾರ ಧನಸಹಾಯ, ಪಶುವೈದ್ಯ ಇಲಾಖೆ ರೈತರಿಗೆ ತಲುಪಿಸುವಲ್ಲಿ ಸೋತಿದೆ ಬಹಳಷ್ಟು ರೈತರು ಹಸು ಮತ್ತು ಕುರಿಗಳಿಗೆ ತಗಲುವ ರೋಗಗಳಿಂದ ನಷ್ಟ ಅನುಭವಿಸಿದ್ದಾರೆ, ಆದರೂ ಪಶು ವೈದ್ಯಕೀಯ ತಜ್ಞರು ಇದರ ಬಗ್ಗೆ ನಿರ್ಲಕ್ಷ್ಯದಿಂದಿದ್ದಾರೆ, ಆದ್ದರಿಂದ ರೈತರೆ ಈ ನಷ್ಟವನ್ನು ಅನುಭವಿಸಬೇಕಾಗಿದೆ. ಹೀಗೆ ನಷ್ಟ ಅನುಭವಿಸಿದ ರೈತರು ಈ ಪಶುಸಂಗೋಪನೆ ಉದ್ಯಮವನ್ನು ಬಿಡಬೇಕೆಂದು ಹೇಳುತ್ತಾರೆ ಆದರೆ ಪರ್ಯಾಯ ಉದ್ಯೋಗವಿಲ್ಲದಿರುವುದರಿಂದ ಇವರು ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ ಆದ್ದರಿಂದ ಪಶುವೈದ್ಯಕೀಯ ತಜ್ಞರು ಈ ಕಡೆ ಗಮನಹರಿಸಬೇಕಾಗಿರುವುದು. ತುರ್ತಾಗಿ ಆಗಬೇಕಾಗಿರುವ ಕೆಲಸ ಆದರೆ ಪಶು ಸಂಗೋಪನೆಯನ್ನು ವಿಸ್ತೃತ ಪ್ರಮಾಣದಲ್ಲಿ ಕೈಗೊಂಡಿರುವ ಅರಹಳ್ಳಿ ಪಶುಸಂಗೋಪಕರಿಗೆ ರೋಗದ ಮಾಹಿತಿ, ಇತ್ಯಾದಿಗಳ ಮಾಹಿತಿ ಮುಂತಾದವುಗಳು ಸರಿಯಾಗಿ ಸಿಗುತ್ತಿಲ್ಲ ಎಂಬ ಆರೋಪ ಕುರಿಗಳು ಉತ್ಪಾದಿಸುವ ಉಣ್ಣೆಗೂ ಸಹಬೆಲೆ ಇದೆ, ಆದ್ದರಿಂದ ವರ್ಷಕ್ಕೆ ಎರಡು ಬಾರಿ ಉಣ್ಣೆಯನ್ನು ಕಟಾವು ಮಾಡಲಾಗುತ್ತದೆ. ಇಲ್ಲಿಗೆ ಪಕ್ಕದ ಹಳ್ಳಿಗಳಿಂದ ಹಾಗೂ ಕೋಲಾರ ನಗರದಿಂದ ಬರುವ ಗಿರಾಕಿಗಳ ಉಣ್ಣೆಯನ್ನು ಕತ್ತರಿಸಿಕೊಂಡು ಹಣ ನೀಡಿ ಹೋಗುತ್ತಾರೆ, ಈಗ ಉಣ್ಣೆ ವಸ್ತುಗಳಿಗೆ ಅಷ್ಟು ಬೇಡಿಕೆ ಇಲ್ಲದಿರುವುದರಿಂದ ಕಡಿಮೆ ಬೆಲೆಗೆ ಉಣ್ಣೆ ಮಾರಾಟ ವಾಗುತ್ತದೆ. ಆದ್ದರಿಂದ ರೈತರು ಕುರಿ ಸಾಕಾಣಿಕೆಯಲ್ಲಿ ಉಣ್ಣೆ ಮಾರಾಟ ಅಷ್ಟು ಆಕರ್ಷಕವಾಗಿಲ್ಲದಿರುವುದು, ಅದರು ಗಳಿಕೆಯಾದಷ್ಟು ಗಳಿಸೋಣ ಎಂದು ಉಣ್ಣೆಯನ್ನು ಮಾರಾಟ ಮಾಡುತ್ತಾರೆ ರೈತರು ಸಾಕುವ ಕುರಿಗಳು ಉಣ್ಣೆ ಉತ್ಪಾದನೆ ಮಾಡುವ ಕುರಿ ತಳಿಗಳಲ್ಲ ಇವು ಮಾಂಸಕ್ಕೋಸ್ಕರ ಸಾಕುವ ಕುರಿಗಳು, ಇವುಗಳ ಗೊಬ್ಬರ ರೈತರಿಗೆ ಒಳ್ಳೆ ಬೆಲೆ ತರುತ್ತದೆ, ಆದರೆ ರೈತರು ಈ ಗೊಬ್ಬರವನ್ನು ಮಾರಾಟ ಮಾಡದೆ ತಮ್ಮ ಹೊಲಗದ್ದೆಗಳಿಗೆ ಬಳಸಿಕೊಳ್ಳುತ್ತಾರೆ ಹಾಗೆಯೇ ಹಸುಗಳ ಸಗಣಿ ಗೊಬ್ಬರ ಒಳ್ಳೆ ಫಲವತ್ತಾದ ಗೊಬ್ಬರ. ಇದನ್ನು ತಮ್ಮ ಹೊಲ ಗದ್ದೆಗಳಿಗೆ ಬಳಸಿಕೊಳ್ಳುತ್ತಾರೆ, ಆದ್ದರಿಂದ ಜಮೀನಿನ ಫಲವತ್ತತೆಯನ್ನು ಹೆಚ್ಚಿಸಬಹುದಾಗಿದೆ, ಹೀಗೆ ಫಲವತ್ತತೆಯನ್ನು ಹೆಚ್ಚಿಸುವುದರ ಮೂಲಕ ಮಣ್ಣಿನ ಗುಣ ಸಂರಕ್ಷಿಸಬಹುದು ಹಾಗೂ ಬೆಳೆಗಳ ಇಳುವರಿಯನ್ನು ಹೆಚ್ಚಿಸಬಹುದು

ಎಂಬುದು ರೈತರ ಅಭಿಪ್ರಾಯ, ಕಾಂಪೋಸ್ಟನ್ನು ತಯಾರಿಸಲು ಬಳಸುತ್ತಾರೆ, ಇದಕ್ಕೆ ಮಾಹಿತಿಯನ್ನು ಕೃಷಿ ಇಲಾಖೆ ನೀಡುತ್ತದೆ, ವರ್ಷಕ್ಕೆ 500 ಟನ್ ಗಳಿಗಿಂತ ಹೆಚ್ಚು ಕಾಂಪೋಸ್ ಗೊಬ್ಬರವನ್ನು ಈ ಗ್ರಾಮದಲ್ಲಿ ಉತ್ಪಾದಿಸಲಾಗುತ್ತದೆ. ಆದರೆ ಇದನ್ನು ಕೆಲವರು ಪಕ್ಕದ ಗ್ರಾಮಗಳ ರೈತರಿಗೆ ಮಾರಿಕೊಂಡರು. ಬಹುತೇಕ ರೈತರು, ಈ ಗೊಬ್ಬರವನ್ನು ತಮ್ಮ ಹೊಲ ಗದ್ದೆಗಳಿಗೆ ಬಳಸಿಕೊಳ್ಳುವುದು ರೂಢಿಗತವಾಗಿದೆ. ಆದ್ದರಿಂದ ಹೈನುಗಾರಿಕೆ ಕುರಿ ಮೇಕೆ ಸಾಗಾಣಿಕೆ ಬರಿ ಹಾಲಿನಿಂದ ಹಾಗೂ ಮಾಂಸದಿಂದ ಬರುವ ಆದಾಯದ ಜೊತೆಗೆ ಗೊಬ್ಬರವು ಸಹ ರೈತರ ಆರ್ಥಿಕಮಟ್ಟ ಸುಧಾರಣೆಗೆ ಪೂರಕವಾಗಿದೆ. ಇಲ್ಲಿ 2002 ರಲ್ಲಿ ಪ್ರಾರಂಭವಾದ ಹಾಲು ಸಹಕಾರಿ ಸಂಘ ಆರ್ಥಿಕವಾಗಿ ಹಾಗೂ ಸದಸ್ಯತ್ವ ನೊಂದಣಿ, ನಿಟ್ಟಿನಿಂದ ಸಶಕ್ತವಾದಂತಹುದು ಬೆಳಿಗ್ಗೆಯೇ ಹಾಲು ಕರೆಯಲು ರೈತರು ಹಸುಗಳೊಂದಿಗೆ ಬಂದು, ಹಾಲು ಕರೆದು ಸಹಕಾರಿ ಸಂಘ ತನ್ನದೇ ವಿಧಾನಗಳ ಮೂಲಕ ಹಾಲನ್ನು ಖರೀದಿಸುತ್ತದೆ. ದಿವಸಕ್ಕೆ 1500 ಲೀಟರು ಹಾಲು ಸರಬರಾಜಾಗುತ್ತದೆ. ತಿಂಗಳಿಗೆ ಮೂರು ಲಕ್ಷಕ್ಕೂ ಹೆಚ್ಚು ವಹಿವಾಟನ್ನು ಹಾಲು ಉತ್ಪಾದಕರ ಸಂಘ ನಡೆಸುತ್ತದೆ. ಹಾಲು ಉತ್ಪಾದಕರ ಸಂಘಕ್ಕೆ 300 ಜನ ಸದಸ್ಯರು ಇದ್ದಾರೆ, ಇವರಲ್ಲಿ 150 ಜನ ಸದಸ್ಯರು ಮಾತ್ರ ಹಾಲು ಸರಬರಾಜು ಮಾಡುತ್ತಾರೆ, ಇನ್ನೂ ನೂರೈವತ್ತು ಜನ ಮೊದಲು ಹಾಲು ಸರಬರಾಜು ಮಾಡುತ್ತಿದ್ದರು ಆದರೆ ಈಗ ಇವರು ಹಾಲು ಸರಬರಾಜನ್ನು ನಿಲ್ಲಿಸಿದ್ದಾರೆ ಇದಕ್ಕೆ ಕಾರಣ 150ಜನರು ಸಮಾಜದಲ್ಲಿ ಸಿಗುವ ಸ್ಥಾನಮಾನ ಹಾಗೂ ಹಾಲು ಸಹಕಾರಿ ಸಂಘದಲ್ಲಿ ಸಿಗುವ ಅಧಿಕಾರದ ಆಸೆಯಿಂದ ಸದಸ್ಯರಾಗಿದ್ದಾರೆ ಎಂಬುದು ಸಮೀಕ್ಷೆಯ ಸಮಯದಲ್ಲಿ ವ್ಯಕ್ತವಾದ ಅಭಿಪ್ರಾಯ. ಹೈನುಗಾರಿಕೇತರ ಸದಸ್ಯರು ಪ್ರತಿಷ್ಠರಾಗಿದ್ದು, ಹಾಲು ಸರಬರಾಜು ಮಾಡುವ ಸದಸ್ಯರ ಮೇಲೆ ತಮ್ಮ ಅಧಿಕಾರದ ದರ್ಪ ತೋರಿಸುತ್ತಾರೆಂಬುದು ಬಹುತೇಕ ಹೈನುಗಾರರ ಅಭಿಪ್ರಾಯ . ಎಲ್ಲ ಸಹಕಾರಿ ಸಂಘಗಳಂತೆ ಇದು ಸಹ ರಾಜಕೀಯದಿಂದ ಮುಕ್ತವಾಗಿಲ್ಲ. ವಿವಿಧ ರಾಜಕೀಯ ಪಕ್ಷದ ಧುರೀಣರು ಹಾಲು ಸಹಕಾರ ಸಂಘದ ಮೇಲೆ ಅಧಿಕಾರ ಸ್ಥಾಪಿಸಲು ಪ್ರಯತ್ನಿಸುತ್ತಾ ಇದ್ದಾರೆ ಎಂದು ಹೈನುಗಾರರ ಅಭಿಮತ, ಹೈನುಗಾರರ ಪ್ರಕಾರ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಹೈನುಗಾರಿಕೆ ಸಹಕಾರ ಸಂಘಕ್ಕೆ ಸದಸ್ಯರಾಗಬೇಕು ಹಾಗೂ ಪದಾಧಿಕಾರಿಗಳು ಆಗಬೇಕು ಎಂಬುದೇ ಅಳಲು ಆದರೆ ಹೈನುಗಾರರೇತರ ಸದಸ್ಯತ್ವ ಶೇ. 50 ರಷ್ಟಿರುವುದರಿಂದ ಹೈನುಗಾರರ ಸಮಸ್ಯೆಗಳಿಗೆ ಹಾಲು ಉತ್ಪಾದಕರ ಸಹಕಾರಿ ಸಂಘ ಸ್ಪಂದಿಸುತ್ತಿಲ್ಲ ಎಂಬ ಹೈನುಗಾರರ ಆರೋಪದಲ್ಲಿ ಸತ್ಯವಿದೆ. ಹಸುಗಳಿಗೆ ರೋಗರುಜಿನಗಳು ಬಂದಾಗ ಹಾಲು ಸಹಕಾರಿ ಸಂಘವು ಪಶುವೈದ್ಯಕೀಯ ಇಲಾಖೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ ಎಂಬುದೇ ಹೈನುಗಾರರ ಆರೋಪ

ನೈರ್ಮಲ್ಯ, ಪ್ರಾಥಮಿಕ ಆರೋಗ್ಯ ಕೇಂದ್ರ:

ಅರಹಳ್ಳಿಯಲ್ಲಿ ಪಕ್ಕಾ ಮನೆಗಳು ಅಂದರೆ ಕಲ್ಲು ಚಪ್ಪಡಿ ಮನೆಗಳು ಜಾಸ್ತಿ ಪ್ರಮಾಣದಲ್ಲಿದ್ದರೂ, ನೈರ್ಮಲ್ಯದ ದೃಷ್ಟಿಯಿಂದ ಸ್ವಂತ ಆಧುನಿಕ ಕಕ್ಕಸುಗಳನ್ನು ಹೊಂದಿರುವವರ ಸಂಖ್ಯೆ ಕಡಿಮೆಯೇ, ಬಹಳಷ್ಟು ಜನ ಬರ್ಹಿದೆಶೆಗೆ ಬಯಲಿಗೆ ಹೋಗುವ ಅಭ್ಯಾಸವಿದೆ. ಹಳೇ ಕಾಲದಿಂದಲೂ ಬಂದಿರುವ ತಿಪ್ಪೆಗಳನ್ನು ಹೊಂದಿರುವವರು ಬಹಳಷ್ಟು ಮಂದಿ ಇದ್ದಾರೆ, ಇದು ಸಮೀಕ್ಷೆಯ ಸಂದರ್ಭದಲ್ಲಿ ಕಂಡು ಬಂದ ಅಂಶ, ಇಲ್ಲಿ ನೈರ್ಮಲ್ಯಕ್ಕೆ ಪಂಚಾಯಿತಿಯಿಂದ ಯಾವುದೇ ಕಾರ್ಯಕ್ರಮಗಳಿಲ್ಲ, ಪಂಚಾಯಿತಿಗೆ ಈಗಾಗಲೇ 150 ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಮಂಜೂರಾಗಿದ್ದರು ಇನ್ನೂ ಸಾರ್ವಜನಿಕ ಶೌಚಾಲಯ ಇಲ್ಲಿ ನಿರ್ಮಾಣವಾಗಿಲ್ಲ. ಆದ್ದರಿಂದ ಗ್ರಾಮದ ನೈರ್ಮಲ್ಯ ಕಾಪಾಡುವಲ್ಲಿ ಪಂಚಾಯಿತಿ ಸೋತಿದೆ, ಗ್ರಾಮದ ನೈರ್ಮಲ್ಯವನ್ನು ಕಾಪಾಡಲು ಕಾಂಪೋಸ್ಟನ್ನು, ಗ್ರಾಮ ಪಂಚಾಯಿತಿ ವತಿಯಿಂದ ತಯಾರಿಸಬಹುದಾಗಿತ್ತು. ಆದರೆ ಆಸಕ್ತ ರೈತರು ಮಾತ್ರ ಕಾಂಪೋಸ್ಟನ್ನು ಮಾಡುವ ಅಭ್ಯಾಸವಿದೆ, ಈಗಾಗಲೆ ನಾನು ತಿಳಿಸಿರುವಂತೆ , ಕೋಲಾರದ ಕೃಷಿ ಇಲಾಖೆ, ಈ ಕಾಂಪೋಸ್ಟ್ ಮಾಡುವ ತರಬೇತಿಯನ್ನು ನೀಡುತ್ತಿದ್ದಾರೆ, ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಇದೆ, ಆದರೆ ಚರಂಡಿಗಳು ವ್ಯಾಪಕವಾಗಿಯೇನು ಮಾಡಿಲ್ಲ, ಆದ್ದರಿಂದ ಮಳೆಗಾಲದಲ್ಲಿ ಗ್ರಾಮಸ್ಥರು ರಸ್ತೆಗಳಲ್ಲಿ ಹರಡಿರುವ ಕೆಸರಿನಲ್ಲೆ ಓಡಾಡಬೇಕಾದ ಪರಿಸ್ಥಿತಿ ಇದೆ. ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯಗಳ ಅಭಿವೃದ್ಧಿ ಕೆಲಸ ಇನ್ನೂ ನಡೆಯಬೇಕಾಗಿದೆ, ಚರಂಡಿಗಳಲ್ಲದೆ ಕೊಚ್ಚೆ ನೀರು ಸಣ್ಣ ಸಣ್ಣ ಮಡವುಗಳೋಪಾದಿಯಲ್ಲಿ ನಿಂತುಕೊಳ್ಳುವುದರಿಂದ ಸೊಳ್ಳೆಗಳ ಕಾಟ ಜಾಸ್ತಿ, ಸೊಳ್ಳೆಗಳಿಂದಾಗಿ ವಿವಿಧ ಸೋಂಕು ರೋಗಗಳು ಹರಡುತ್ತವೆ, ಆದರೆ ಗ್ರಾಮ ಪಂಚಾಯಿತಿ, ಗ್ರಾಮದಲ್ಲಿ ವ್ಯಾಪಕವಾಗಿ ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಮಾಡುವಲ್ಲಿ ವಿಫಲಹೊಂದಿದೆ ಡಾಂಬರು ರಸ್ತೆಗಳನ್ನು ಈಗ ಮಾಡತ್ತಿದ್ದಾರೆ ಆದರೆ ಈ ಡಾಂಬರು ರಸ್ತೆಯ ಕಳಪೆ ಗುಣಮಟ್ಟದಿಂದ ಕೂಡಿದೆ, ಎಂಬುದು ಗ್ರಾಮಸ್ಥರ ದೂರು, ಆದ್ದರಿಂದ ಅರಹಳ್ಳಿ ಅಭಿವೃದ್ಧಿ ಹೊಂದಿದ್ದರೂ ಚರಂಡಿಗಳು ಶೌಚಾಲಯ ವ್ಯವಸ್ಥೆಯಲ್ಲಿ ಹಿಂದೆ ಬಿದ್ದಿದೆ. ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ, ಆದರೆ ಇಲ್ಲಿ ಪದವೀಧರ ವೈದ್ಯರಿಲ್ಲ, ಆದರೆ ಒಬ್ಬ ನರ್ಸ್ ಮಾತ್ರ ಇದ್ದಾರೆ, ಇಲ್ಲಿನ ಗ್ರಾಮಸ್ಥರು ಹೇಳುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ಗಂಭೀರ ಕಾಯಿಲೆಗಳಾದ ಚಿಕುನ್ ಗುನ್ಯಾ, ವಿಷಮಶೀತ ಜ್ವರ ಮುಂತಾದವುಗಳಿಗೆ ಚಿಕಿತ್ಸೆ ಇಲ್ಲ. ಇಂತಹ ಗಂಭೀರ ರೋಗಗಳು ಬಂದರೆ ರೋಗಿಗಳು ಕೋಲಾರದ ಸರ್ಕಾರಿ ಆಸ್ಪತ್ರೆಗೆ ಅಥವಾ ಖಾಸಗಿ ನರ್ಸಿಂಗ್ ಹೋಗಳಿಗೆ ಹೋಗಬೇಕಾಗಿದೆ, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಕೇವಲ ಸಣ್ಣಪುಟ್ಟ ಕಾಯಿಲೆಗಳಿಗೆ ಮಾತ್ರ ಚಿಕಿತ್ಸೆ ನೀಡುತ್ತದೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಕೆಲಸ ಆಗಬೇಕಿದೆ, ಎಂಬುದೆ ಗ್ರಾಮಸ್ಥರ ಅಭಿಪ್ರಾಯ. ಆದರೆ ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಪ್ರಯತ್ನಿಸುತ್ತಿಲ್ಲ ಎಂಬುದೇ ಗ್ರಾಮಸ್ಥರ ಆರೋಪ, ಇತ್ತೀಚಿಗೆ ಚಿಕುನ್ ಗುನ್ಯಾ

ಬಂದಾಗ ಬಹಳಷ್ಟು ಮಂದಿ ಕೋಲಾರದ ಸರಕಾರಿ ಆಸ್ಪತ್ರೆಗೆ ಹೋಗಿದ್ದರು, ಹಣವಿರುವವರು ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗಿದ್ದರು, ಆದರೆ ಗ್ರಾಮ ಪಂಚಾಯಿತಿ ಮಾಡಿದ ಒಳ್ಳೆ ಕಾರ್ಯವೆಂದರೆ ಕೋಲಾರದ ಸರಕಾರಿ ಆಸ್ಪತ್ರೆಯ ಸಹಯೋಗದೊಂದಿಗೆ ಗ್ರಾಮ ಪಂಚಾಯಿತಿ ಚಿಕುನ್ ಗುನ್ಯಾ ಶಿಬಿರಗಳು, ರೋಗಿಗಳ ಆರೋಗ್ಯವನ್ನು ತಪಾಸಣೆ ಮಾಡಿ, ಚಿಕಿತ್ಸೆ ನೀಡಿತು, ಈ ಶಿಬಿರಗಳು ಗ್ರಾಮದ ಜನರಿಗೆ ಉಪಯುಕ್ತವಾದುದೆಂದು ಗ್ರಾಮಸ್ಥರ ಅನಿಸಿಕೆ. ಆದರೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿದರೆ, ಗ್ರಾಮೀಣ ಜನರ ಆರೋಗ್ಯ ಸುಧಾರಿಸಬಹುದೆಂದೇ ಗ್ರಾಮಸ್ಥರ ಅಭಿಪ್ರಾಯ, ಆದರೆ ಸ್ಥಳೀಯ ಗ್ರಾಮಾಡಳಿತ ಹಾಗೂ ಕೋಲಾರದ ಜಿಲ್ ಪಂಚಾಯಿತಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ಬಗ್ಗೆ ಗ್ರಾಮಸ್ಥರು ಪಂಚಾಯಿತಿ ಅಧ್ಯಕ್ಷರು ಕಾರ್ಯದರ್ಶಿಗಳ ಮೇಲೆ ಒತ್ತಡ ತರುತ್ತಿದ್ದಾರೆ.

ಸ್ವಸಹಾಯ ಸಂಘಗಳು ಹಾಗೂ ಸ್ತ್ರೀ ಶಕ್ತಿ ಸಂಘಗಳು:

ಒಂದು ಸ್ವಸಹಾಯ ಸಂಘಕ್ಕೆ 15 ರಿಂದ 20 ಜನ ಸದಸ್ಯರಿದ್ದಾರೆ ಸ್ವಸಹಾಯ ಸಂಘಗಳ ಅಧ್ಯಕ್ಷರು ಹಾಗೂ ಇನ್ನಿತರ ಪದಾಧಿಕಾರಿಗಳನ್ನು ಸದಸ್ಯರೇ ಆಯ್ಕೆ ಮಾಡುತ್ತಾರೆ, ಸ್ತ್ರೀಶಕ್ತಿ ಸಂಘಗಳಿಗೆ ಅಂಗನವಾಡಿ ಅಧ್ಯಾಪಕರೇ ಕಾರ್ಯದರ್ಶಿ, ಇವು ಸುಮಾರು 2003 ರಲ್ಲಿ ಪ್ರಾರಂಭವಾಗಿದ್ದು ಸ್ವಸಹಾಯ ಸಂಘಗಳಿಗೆ ಕೋಲಾರದ ವಿಜಯ ಬ್ಯಾಂಕ್ ಹಾಗೂ ಗ್ರಾಮೀಣ ಬ್ಯಾಂಕುಗಳಿಂದ ಸಾಲ ಸಿಗುತ್ತದೆ. ಸ್ತ್ರೀ ಶಕ್ತಿ ಸಂಘಗಳಿಗೆ ಬ್ಯಾಂಕುಗಳ ಜೊತೆಗೆ ಸರಕಾರದಿಂದ ದೇಣಿಗೆ ಬರುತ್ತದೆ. ಹೀಗೆ ದೇಣಿಗೆಯನ್ನು ಸ್ತ್ರೀಶಕ್ತಿ ಸಂಘಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಹಣವನ್ನು ದ್ವಿಗುಣಗೊಳಿಸಿಕೊಳ್ಳುತ್ತಾರೆ, ನಾನು ಸಮೀಕ್ಷೆ ಮಾಡಿದ ಪ್ರಕಾರ 15 ರಿಂದ 20 ಜನ ಸದಸ್ಯರಿರುವ ಸ್ವಸಹಾಯ ಸಂಘಗಳು ವಾರಕ್ಕೊಮ್ಮೆ 45000 ದಿಂದ ಐವತ್ತು ಸಾವಿರದವರೆಗೂ ಹಣದ ವಹಿವಾಟು ನಡೆಸುತ್ತಾರೆ, ಹೊಲಿಗೆ ಕೆಲಸ , ಕೋಳಿ ಹಾಗೂ ಕುರಿ ಸಾಕಾಣಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಣ್ಣ ಪ್ರಮಾಣದ ಸಾಲವನ್ನು ಸಣ್ಣ ಪ್ರಮಾಣದ ಲಾಭದ ಮೂಲಕ ಈ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತವೆ. ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ 15 (50%) ಜನ ಸ್ವಸಹಾಯ ಸಂಘಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೂ 5 (16.66%) ಜನ ಸ್ತ್ರೀ ಶಕ್ತಿ ಸಂಘಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೂ (33.33%) 10 ಜನ ಯಾವುದೇ ಸಂಘದ ಸದಸ್ಯರಲ್ಲ. ಸ್ವಸಹಾಯ ಹಾಗೂ ಸ್ತ್ರೀ ಶಕ್ತಿ ಸಂಘಗಳ ತತ್ವವೆ ಸಣ್ಣ ಪ್ರಮಾಣದ ಸಾಲವನ್ನು, ಸಣ್ಣ ಪ್ರಮಾಣದ ಲಾಭ ಗಳಿಸಿ, ಸಣ್ಣ ಪ್ರಮಾಣದಲ್ಲಿ ಉಳಿತಾಯ ಮಾಡಬೇಕೆಂಬುದು, ಇಲ್ಲಿನ ಸ್ವಸಹಾಯ ಸಂಘಗಳು, ಅತ್ಯಂತ ಕ್ರಿಯಾಶೀಲರಾಗಿ ನಡೆಯುತ್ತಿವೆ. ಯಾಕೆಂದರೆ ಬ್ಯಾಂಕ್ ಸಾಲ ಕೊಟ್ಟರೆ, ಅದೆಲ್ಲವನ್ನು ಖರ್ಚು ಮಾಡಿ ಬ್ಯಾಂಕ್ ಸಾಲ ಹಿಂದುರಿಗಿಸದೆ ಇರುವವರ ಸಂಖ್ಯೆ ಇಲ್ಲಿ ಇಲ್ಲ

ಪ್ರತಿವಾರಕ್ಕೊಮ್ಮೆ ಬ್ಯಾಂಕಿನಿಂದ ಪಡೆದ ಸಾಲವನ್ನು ಹಿಂತಿರುಗಿಸುತ್ತಾರೆ. ಉಳಿದ ಲಾಭವನ್ನು ತಮ್ಮ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಹೀಗೆ ಹಣವನ್ನು ದ್ವಿಗುಣಗೊಳಿಸುತ್ತಾ ಇಂದು ಅರಹಳ್ಳಿಯಲ್ಲಿ ಸ್ವಸಹಾಯ ಸಂಘಗಳು ಹಾಗೂ ಸ್ತ್ರೀ ಶಕ್ತಿ ಸಂಘಗಳು ಸಾಫಲ್ಯದ ಹಾದಿಯಲ್ಲಿ ಇವೆ. ಆದರೆ ಇದರ ಎಲ್ಲ ಸದಸ್ಯರು ಮಹಿಳೆಯರೆ, ಗ್ರಾಮೀಣ ಪ್ರದೇಶದಲ್ಲಿ ಕೂಲಿ, ಕೃಷಿಯಲ್ಲಿ ತೊಡಗಿಸಿಕೊಂಡು ಬೇರೆಯವರ ಮೇಲೆ ಅವಲಂಬಿತರಾಗಿದ್ದ ಸ್ತ್ರೀಯರಿಗೆ ಇಂದು ತಾವೇ ಬಂಡವಾಳ ಹೂಡಿ ದುಡಿವ ಅವಕಾಶ ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳ ಮೂಲಕ ಸಿಕ್ಕಿದೆ. ಸ್ತ್ರೀಯರು ಗ್ರಾಮೀಣ ಪ್ರದೇಶದಲ್ಲಿ ಪುರುಷರ ಸಮನಾಗಿ ಕೆಲಸ ಮಾಡಿದರು ಅವರಿಗೆ ಸಿಗುತ್ತಿದ್ದ ಕೂಲಿ ಪುರುಷರಿಗಿಂತ ಕಡಿಮೆ, ಅಥವಾ ಯಾವುದೆ ಕೂಲಿ ಕೆಲಸಗಳನ್ನು ಹತ್ತಿರದ ಕೋಲಾರ ನಗರದಲ್ಲಿ ಮಾಡಿದರು ಮಹಿಳೆಯರಿಗೆ ಸಿಗುತ್ತಿದ್ದ ಕೂಲಿ ಅತ್ಯಲ್ಪವೆ, ಆದರೆ ಸ್ವಸಹಾಯ ಸಂಘಗಳು ಹುಟ್ಟಿಕೊಂಡ ಮೇಲೆ ಮಹಿಳೆಯರಲ್ಲಿ ಉದ್ಯಮ ಶೀಲತೆ ಬೆಳೆಯುತ್ತಿದೆ. ನಾವು ಕೂಲಿಗಳಲ್ಲ ಮಾಲಿಕರು ಎಂಬ ಹೊಸ ಆಲೋಚನೆಗಳು ಮಹಿಳೆಯರಲ್ಲಿ ಗರಿಕೆದರಿಕೊಂಡಿದೆ ಆದ್ದರಿಂದ ಅರಹಳ್ಳಿಯಲ್ಲಿ ಸ್ವಸಹಾಯ ಸಂಘಗಳು ಜನಪ್ರಿಯತೆಗಳಿಸುತ್ತಿವೆ. ಬಹಳಷ್ಟು ಮಹಿಳೆಯರು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಮೇಲ್ದರ್ಜೆಗೇರಿಸುವ ಆಕಾಂಕ್ಷೆ ವ್ಯಕ್ತಪಡಿಸುತ್ತಾರೆ. ಈಗ ಸಣ್ಣ ಪ್ರಮಾಣದಲ್ಲಿ ಟೈಲರಿಂಗ್ ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ ಹಾಗೂ ಇನ್ನಿತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರಿವುರುದ ಭವಿಷ್ಯತ್ತಿನಲ್ಲಿ ಇನ್ನು ಬೆಳೆಯಬೇಕೆಂಬ ಆಕಾಂಕ್ಷೆಯನ್ನು ತೋಡಿಕೊಂಡರು, ಕೋಲಾರದಲ್ಲಿರುವ ವಿಜಯಬ್ಯಾಂಕ್, ಪ್ರಗತಿ ಗ್ರಾಮೀಣ ಬ್ಯಾಂಕುಗಳು ಸಹ ಸ್ವಸಹಾಯ ಸಂಘಗಳಿಗೆ ಹಣ ನೀಡುವಲ್ಲಿ ಉತ್ಸುಕರಾಗಿದ್ದಾರೆ, ಯಾಕೆಂದರೆ ವಾರಕ್ಕೊಮ್ಮೆ ಸಣ್ಣ ಪ್ರಮಾಣದ ಬಡ್ಡಿ ದರದಲ್ಲಿ ನಿಯಮಿತವಾಗಿ ಹಣವನ್ನು ಬ್ಯಾಂಕುಗಳಿಗೆ ಪಾವತಿಸುವುದರಿಂದ ಬ್ಯಾಂಕ್ ಅಧಿಕಾರಿಗಳಿಗೆ ಹರ್ಷ ತಂದಿದೆ. ಆದ್ದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳು ಬೆಳೆಯುತ್ತವೆಂದು ಬ್ಯಾಂಕ್ ಅಧಿಕಾರಿಗಳು ಹೇಳುತ್ತಾರೆ.

ಸಂಪನ್ಮೂಲ ಮಾರುಕಟ್ಟೆಯಲ್ಲಿ ಸಾಲ ಪ್ರಮುಖ ಸ್ಥಾನವನ್ನು ಪಡೆದಿದೆ:

ಅರಹಳ್ಳಿಯಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘವಿದೆ ಇದು ರೈತರಿಗೆ ಅಲ್ಪಾವಧಿ ಮತ್ತು ಮಾಧ್ಯಮಾವಧಿ ಸಾಲವನ್ನು ನೀಡುತ್ತದೆ. ಇಲ್ಲಿ ಈ ಸಹಕಾರ ಸಂಘ ಗರಿಷ್ಟ ಮಟ್ಟದಲ್ಲಿ ಅಂದರೆ ರೂ 25000 ವರೆಗೂ ರೈತರಿಗೆ ಸಾಲ ನೀಡುತ್ತದೆ ಕೋಲಾರದಲ್ಲಿರುವ ವಿಜಯ ಬ್ಯಾಂಕು ಹಾಗೂ ಗ್ರಾಮೀಣ ಬ್ಯಾಂಕುಗಳು ಅಲ್ಪಾವಧಿ ಹಾಗೂ ದೀರ್ಘಾವದಿ ಸಾಲಗಳನ್ನು ನೀಡುತ್ತವೆ, ಈ ಸಾಲಗಳನ್ನು ರೈತರು ವೇಳೆಗೆ ಸರಿಯಾಗಿ ಹಿಂತಿರುಗಿಸುವುದಿಲ್ಲ. ಎಂಬುದೇ ಬ್ಯಾಂಕ್ ಅಧಿಕಾರಿಗಳ ಆರೋಪ ನಾನು ಸಮೀಕ್ಷೆ ಮಾಡಿದ 30 ಜನ ರೈತರಲ್ಲಿ (50%) ಸಾಲ 15 ಜನ ಜನ, ಮಧ್ಯಮಾವಧಿ ಸಾಲ ಪಡೆಯುವವರು, ಖಾಸಗಿ ಸಾಲ ಪಡೆಯುವವವರು, 10 ಜನ (38.33%), 3 (10%) ರೈತರು ದೀರ್ಘಾವಧಿ ಸಾಲವನ್ನು

ಪಡೆದಿದ್ದಾರೆ. ಉಳಿದ 2 (6.6%) ಜನ ಅಲ್ಪಾವಧಿ ಸಾಲವನ್ನು ಪಡೆದಿದ್ದಾರೆ. ಇಷ್ಟು ಜನರಲ್ಲಿ ಬ್ಯಾಂಕ್ ಗೆ ಬಡ್ಡಿ ಸಹಿತ, ಮೂಲಹಣದೊಂದಿಗೆ ಪಾವತಿಸಿರುವವರು, 10 (33.33%) ರೈತರು ಉಳಿದಂತೆ 20 (66.66%) ರೈತರು ಹಾಗೆ ಸಾಲವನ್ನು ಮುಂದುವರೆಸಿದ್ದಾರೆ, ಬಡ್ಡಿಯಾ ಸಹ ಬೆಳೆಯುತ್ತಿದೆ. ಸರಕಾರ ಸಹಕಾರಿ ಸಂಘಗಳ ಬಡ್ಡಿ ಮತ್ತು ಮೂಲ ಹಣವನ್ನು ವಜಾ ಮಾಡುತ್ತೇವೆಂದು ಹೇಳಿರುವುದನ್ನು ತಿಳಿದುಕೊಂಡ ರೈತರು ತಮ್ಮ ಸಾಲ ವಜಾ ವಾಣಿಜ್ಯ ಬ್ಯಾಂಕ್ ಗಳಿಗೆ ಅನ್ವಯಿಸುತ್ತದೆಂದು ಭಾವಿಸಿಕೊಂಡು ಹಾಗೇ ಕಾಯುತ್ತಿದ್ದಾರೆ, ಇಲ್ಲಿ ರೈತರು ಸಾಲ ಮರುಪಾವತಿಸದೇ, ಇರುವುದಕ್ಕೆ ಪ್ರಬಲ ಕಾರಣವೆಂದರೆ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಸಿಗದೆ ನಷ್ಟ ಅನುಭವಿಸಿರುವುದು, ಈ ಬಾರಿ ಟೊಮ್ಯೆಟೋ ಬೆಳೆ ವ್ಯಾಪಕವಾಗಿ ಬೆಳೆದಿದ್ದ ರೈತರು ಮಾರುಕಟ್ಟೆಯಲ್ಲಿ, 15 ಕೆ.ಜಿ. ಟೊಮ್ಯೆಟೋ ಪೆಟ್ಟಿಗೆಗೆ ರೂ. 14 ರಿಂದ ರೂ. 15 ರೂಗಳು ಆಗಿದ್ದರಿಂದ, ಟೊಮ್ಯೆಟೋ ಬೆಳೆಯನ್ನು ಬಹಳಷ್ಟು ರೈತರು ತೋಟಗಳಲ್ಲೆ ಬಿಟ್ಟು ನಾಶ ಮಾಡಿದರೂ, ಇನ್ನೂ ಎ.ಪಿ.ಎಂ.ಸಿ. ಗೆ ಬಂದರೆ ರೈತರಿಂದ ರೂ. 1 ಕ್ಕೆ 1 ಕೆ.ಜಿ.ಯಂತೆ ಕೊಂಡು ಎಪಿಸಿ.ಎಂ. ಸಿಯವರು ಚರಂಡಿಗೆ ಸುರಿದಿದ್ದರು, ಇದರಿಂದಾಗಿ ರೈತರಿಗೆ ನಷ್ಟವಾಗಿ ತಾವು ತಂದಿದ್ದ ಸಾಲದ ಮೌಲ್ಯವು ಗಿಟ್ಟದೆ ಸಾಲ ಮರುಪಾವತಿಸಲಾಗದೆ, ಜಮೀನುಗಳನ್ನು ಕಳೆದುಕೊಂಡಿರುವ ರೈತರು ಸಾಕಷ್ಟು ಜನರಿದ್ದಾರೆ. ಕೆಲವರು ಕ್ಯಾರೆಟ್ , ಮೂಲಂಗಿ, ಬದನೆಕಾಯಿಯನ್ನು ಬೆಳೆದಿದ್ದರೂ ಆದರೆ ಮಾರುಕಟ್ಟೆಯಲ್ಲಿ ಈ ಬೆಳೆಗಳಿಗೆ ಸರಿಯಾದ ಲಾಭದಾಯಕ ಬೆಳೆ ಸಿಗದೆ, ತೋಟಗಳಲ್ಲೆ ಕೊಳೆಯುವಂತೆ ಮಾಡಿದರು, ಸರಕಾರ ರೂ. 200 ಕೋಟಿಗಳಷ್ಟು ಪ್ರಸಕ್ತ ಸಾಲಿನ (2006-07) ರಲ್ಲಿ ರೈತರ ಉತ್ಪನ್ನಗಳ ಬೆಲೆಗಳು ಕುಸಿದಾಗ, ರೈತರ ನೆರವಿಗೆ ಬರುವ ಕಾರ್ಯಕ್ರಮ ಹಾಕಿಕೊಂಡಿದ್ದರೂ, ಇವರಿಂದ ರೈತರಿಗೇನು ಉಪಯೋಗ ಆಗಿಲ್ಲ. ನಾನು ಸಮೀಕ್ಷೆ ಮಾಡಿದ ರೈತರಲ್ಲಿ 26 (86.6%) ಜನ ರೈತರಿಗೆ ತಮ್ಮ ಉತ್ಪನ್ನಗಳಿಗೆ ಬೆಂಬಲ ಬೆಲೆ ಇದೆ ಎಂಬುದೇ ತಿಳಿದಿಲ್ಲ ಉಳಿದ ಮೂರು(10%) ಜನ ರೈತರಿಗೆಬೆಂಬಲ ಬೆಲೆಯ ಬಗ್ಗೆ ಅಲ್ಪ ಸ್ವಲ್ಪ ತಿಳಿದಿದೆ ಆದೆರ ಉಳಿದ ಒಬ್ಬ (3.3%) ರೈತನಿಗೆ ಸರಕಾರ ನೀಡುವ ಹೇಳಿಕೆಯೆ ಬೇರೆ, ಇಲ್ಲಿ ಮಾರುಕಟ್ಟೆಯಲ್ಲಿ ಸರಕಾರ ವರ್ತಿಸುವ ರೀತಿಯೇ ಬೇರೆ ಎಂಬುದೆ ಅನಿಸಿಕೆ. ಆದ್ದರಿಂದ ಕ್ಯಾರೆಟ್ , ಕ್ಯಾಬೇಜ್ , ಹೂ ಕೋಸು ಮುಂತಾದವುಗಳಿಗೆ ಸರಕಾರ ಬೆಂಬಲ ಬೆಲೆ ನೀಡುವುದಿಲ್ಲ ಆದರೂ ಟೊಮ್ಯೋಟೋಗೆ ಸರಕಾರ ಬೆಂಬಲಬೆಲೆ ಘೋಷಿಸಿದ ಮೇಲೆ ಈ ಉತ್ಪನ್ನಗಳಿಗೂ ಸರಕಾರ ಬೆಂಬಲ ಬೆಲೆ ನೀಡುತ್ತದೆಂದು ಭಾವಿಸಿಕೊಂಡಿದ್ದಾರೆ., ಆದರೆ ಎ.ಪಿ.ಎಂ.ಸಿ. ಬಳಿ ಈ ಉತ್ಪನ್ನಗಳನ್ನು ತಂದರೆ ಎ.ಪಿ.ಎಂ.,ಸಿ. ಅಧಿಕಾರಿಗಳು ಟೊಮೋಟೋ ಬಿಟ್ಟು ಈ ಉತ್ಪನ್ನಗಳಿಗೆ ಬೆಂಬಲ ಬೆಲೆ ಇಲ್ಲ ಎಂದು ಹೇಳುತ್ತಾರೆ, ದಿಕ್ಕೆಟ್ಟ ರೈತರು ರಸ್ತೆಗೆ ಸುರಿದು ಪ್ರತಿಭಟಿಸುವುದು ಸರ್ವೇ ಸಾಮಾನ್ಯ ಅಂಶವಾಗಿದೆ. ಈ ಎಲ್ಲಾ ಕಾರಣ ಗಳಿಂದಾಗಿ ರೈತರು ನಿರಂತರವಾಗಿ ನಷ್ಟ ಅನುಭವಿಸಿದ್ದಾರೆ ಇದರಿಂದಾಗಿ ಬಹಳಷ್ಟು ರೈತರು ಸಾಲ ಮರುಪಾವತಿಸುವ ಗೋಜಿಗೆ ಹೋಗಿಲ್ಲ, ದೇವರಾಜು ಎಂಬ ರೈತನದು ಎರಡು ಎಕರೆ

ಇದೆ, ಇದರ ಮೇಲೆ 2002 ರಲ್ಲಿ ರೂ. 3.5 ಲಕ್ಷ ಸಾಲ ಮಾಡಿದ್ದು ಈಗ ಸಾಲ 5 ಲಕ್ಷವಾಗಿದೆ. ಬ್ಯಾಂಕ್ ಅಧಿಕಾರಿಗಳು ಬಡ್ಡಿ ಸಹಿತ ಈ ಸಾಲವನ್ನು ಹಿಂತಿರುಗಿಸುವಂತೆ ಹೇಳುತ್ತಿದ್ದಾರೆ, ಆದರೆ ನಿರಂತರವಾಗಿ 4 ವರ್ಷಗಳಿಂದ ಬೆಲೆ ಕೈಕೊಟ್ಟಿದ್ದರಿಂದ, ಈತ ಸಾಲಗಾರನಾಗಿ ಯಾವ ಕ್ಷಣದಲ್ಲಿ ಭೂಮಿ ಬ್ಯಾಂಕ್ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಎಂಬ ಆತಂಕದಿಂದ ಇದ್ದಾನೆ, ಇದೇ ಕತೆ ಬಹುತೇಕ ಅರಹಳ್ಳಿ ರೈತರದಾಗಿದೆ. ಆದರೆ ಇಲ್ಲಿ ಯಾವುದೇ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿಲ್ಲ. ರೈತರಲ್ಲಿ ಹೆಚ್ಚು ಸಾಲ ಪಡೆದಿರುವವರು ಪರಿಶಿಷ್ಟ ವರ್ಗದ ಜನ, 1700 ಜನ ಸಂಖ್ಯೆಯಲ್ಲಿ 300 ಜನ ಸಾಲ ಪಡೆದಿದ್ದಾರೆ ಇವರಲ್ಲಿ 150 ಜನ ಪರಿಶಿಷ್ಟ ಜಾತಿಯವರು 100 ಜನ, ಹಿಂದುಳಿದ ವರ್ಗದವರು 50 ಜನ ಸಾಮಾನ್ಯ ಗುಂಪಿನವರು ಇಲ್ಲಿ ಕಂಡುಬರುವುದೇನೆಂದರೆ ಪರಿಶಿಷ್ಟ ಜಾತಿಯವರು ಕುರಿ, ಕೋಳಿ ಸಾಕಾಣಿಕೆಯಲ್ಲಿ ಹೆಚ್ಚು ಜನ ತೊಡಗಿಸಿಕೊಂಡಿದ್ದರೆ, ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಅತ್ಯಲ್ಪ. ಹಾಗೆಯೇ ಹಿಂದುಳಿದ ವರ್ಗಗಳ ಸಣ್ಣ ಪ್ರಮಾಣದ ರೈತರು ವಿಪುಲವಾಗಿ ಇದ್ದಾರೆ, ಇವರು ಸಹ ಸಾಲ ಪಡೆದಿದ್ದಾರೆ, ಸಾಮಾನ್ಯ ಗುಂಪಿನಲ್ಲಿ ವಕ್ಕಲಿಗರು ಬರುತ್ತಾರೆ., ಇವರು ಗುಂಪಿನಲ್ಲಿ ಸಾಲ ಪಡೆದಿರುವವರ ಸಂಖ್ಯೆ ಸ್ವಲ್ಪ ಮಟ್ಟಿಗೆ ಕಮ್ಮಿ ಅಂದರೆ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಲ್ಲಿ ಅಲ್ಪಾವಧಿ ಸಾಲ ಪಡೆದಿರುವವರೆ ಹೆಚ್ಚಾಗಿದ್ದಾರೆ ದೀರ್ಘಾವಧಿ ಸಾಲ ಪಡೆದಿರುವವರು ಸಾಮಾನ್ಯ ಗುಂಪಿನಲ್ಲಿ ಹೆಚ್ಚಾಗಿದ್ದಾರೆ, ಆದ್ದರಿಂದ ಇಂದು ಸರಕಾರಗಳು ರೈತರಿಗೆ ರೂಪಿಸಿರುವ ಸಹಕಾರಿ ಸಾಲದ ವಜಾ ಬಗ್ಗೆ ಜಾತಕ ಪಕ್ಷಿಗಳಂತೆ ಕಾಯುತ್ತ ಕುಳಿತಿದ್ದಾರೆ, ಈ ಸಾಲದ ವಜಾ ಯೋಜನೆ ದಲಿತರಿಗೆ ಹಿಂದುಳಿದ ವರ್ಗಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಲಿದೆ. ಆದರೆ ದೊಡ್ಡ ರೈತರು ಹಾಗೂ ಶ್ರೀಮಂತ ರೈತರು ಈ ಸಾಲದ ಯೋಜನೆಯ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ಇವರು ಪ್ರಭಾವ ಬಳಸಿ, ಸಾಲದಿಂದ ರಕ್ಷಿಸಿಕೊಳ್ಳುವವರು, ರೈತರು ಸಾಲ ಪಡೆಯುವಾಗ ಬಡ್ಡಿ ದರವನ್ನು ಗಮನಿಸುವುದಿಲ್ಲ, ಯಾರು ಸುಲಭವಾಗಿ , ಯಾವುದೇ ನಿಯಮಾವಳಿ (Procedure) ಇಲ್ಲದೆ ನೀಡುತ್ತಾರೋ ಅವರ ಬಳಿ ಸಾಲ ಪಡೆಯುತ್ತಾರೆ, ಇಲ್ಲಿನ ಸಮೀಕ್ಷೆ ಮಾಡಿದ ಪ್ರಕಾರ 30 ರಲ್ಲಿ 10 ಜನ ಖಾಸಗಿ ಲೇವಾದೇವಿ ಗಾರರಿಂದ ತಿಂಗಳಿಗೆ ಶೇ. 3 ರಷ್ಟು ಬಡ್ಡಿಯಲ್ಲಿ ಸಾಲ ಪೆಡದಿದ್ದಾರೆ. ಉಳಿದ ಜನ ವಾಣಿಜ್ಯ ಬ್ಯಾಂಕ್ ಗ್ರಾಮೀಣ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳಿಂದ ಪಡೆದಿದ್ದಾರೆ. ಇಲ್ಲಿ ಖಾಸಗಿ ಲೇವಾದೇವಿದಾರರು ತಿಂಗಳಿಗೊಂದು ಸಾರಿ ಶೇ. 30 ರಷ್ಟು ಬಡ್ಡಿದರದಲ್ಲಿ ತಾವು ಕೊಟ್ಟ ಸಾಲವನ್ನು ವಸೂಲಿ ಮಾಡುತ್ತಾರೆ ಇಲ್ಲಿ ಇಬ್ಬರು ರೈತರ ಭೂಮಿಯ ಖಾಸಗಿ ಲೇವಾದೇವಿಗಾರರಿಗೆ ಬಿಟ್ಟು ಕೊಟ್ಟಿದ್ದಾರೆ. ಇಬ್ಬರು ರೈತರಲ್ಲಿ ಒಬ್ಬ 1 ಲಕ್ಷ ಪಡೆದಿದ್ದ ಮತ್ತೊಬ್ಬ 2 ಲಕ್ಷ ಪಡೆದು ಇದು ನಾಲ್ಕು ವರ್ಷಗಳ ಅವಧಿಯಲ್ಲಿ ರೂ. 5 ಲಕ್ಷಕ್ಕಿಂತ ಹೆಚ್ಚಾಗಿದೆ. ಆದ್ದರಿಂದ ಸಾಲ ಕಟ್ಟಲು ಆಗದೆ ಖಾಸಗಿ ಲೇವಾದೇವಿಗಾರರಿಗೆ ತಮ್ಮ ಒಂದೊಂದು ಎಕರೆ ಜಮೀನನ್ನು ಬಿಟ್ಟು ಕೊಟ್ಟಿದ್ದಾರೆ. ಸುಮಾರು 1 ಎಕರೆ ಜಮೀನಿನ ಮಾರುಕಟ್ಟೆ ಬೆಲೆ 15 ಲಕ್ಷಕ್ಕಿಂತಲೂ ಹೆಚ್ಚಿದೆ ಎಂಬುದು ಸಮೀಕ್ಷೆಯಲ್ಲಿ

ತಿಳಿದು ಬಂದಿದೆ. ಇಲ್ಲಿ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಸಂಘ ಹಾಗೂ ಖಾಸಗಿ ಲೇವಾದೇವಿಗಾರ ಮಧ್ಯೆ ಶೇ. 50 - 40 ರಷ್ಟು ಹಂಚಿ ಹೋಗಿದ್ದಾರೆ, ಬಡ್ಡಿದರ ಕಡಿಮೆ ಇದ್ದರು ಕ್ಲಿಷ್ಟಕರವಾದ ವಿಧಾನಗಳಿರುವ ಬ್ಯಾಂಕುಗಳಿಗೆ ಹಾಗೂ ಸಹಕಾರಿ ಸಂಘಗಳ ಬಳಿ ಹೋಗಲು ರೈತರು ಇಚ್ಚಿಸುವುದಿಲ್ಲ. ಆದ್ದರಿಂದ ಖಾಸಗಿ ಲೇವಾದೇವಿಗಾರರು ವಿಧಿ ವಿಧಾನಗಳು ಸುಲಭವಾಗಿರುತ್ತದೆ ಆದರೆ ಬಡ್ಡಿದರ ಜಾಸ್ತಿ ಇರುತ್ತದೆ. ನನ್ನ ಸಮೀಕ್ಷೆಯಲ್ಲಿ ಅರ್ಧದಷ್ಟು ರೈತರು ಖಾಸಗಿ ಲೇವಾದೇವಿಗಾರರಿಂದ ಆಕರ್ಷಿತರಾಗಿದ್ದಾರೆ, ಆದ್ದರಿಂದ ಖಾಸಗೀ ಲೇವಾದೇವಿರವರುಗಳಿಗೆ ಇನ್ನೂ ಹೆಚ್ಚಿನ ರೈತರು ಮುಂದಿನ ದಿನಗಳಲ್ಲಿ ಹೋಗುವ ಸಾಧ್ಯತೆಗಳಿವೆ.

ವಾಣಿಜ್ಯ ಬ್ಯಾಂಕುಗಳಿರಲಿ, ಸಹಕಾರ ಸಂಘಗಗಳಿರಲಿ, ಮಧ್ಯವರ್ತಿಗಳದೆ ದರ್ಬಾರು ಇಲ್ಲಿ ಇವರು ಸಾಲದ ಒಟ್ಟ ಮೊತ್ತದಲ್ಲಿ ಶೇ. 10 ರಿಂದ 15 ರಷ್ಟು ಪಡೆಯುತ್ತಾರೆ ಎಂದು ಸಮೀಕ್ಷೆಯಲ್ಲಿ ತಿಳಿದು ಬಂದ ಅಂಶವಾಗಿದೆ. ನಾನು ಸಮಿಕ್ಷೆ ಮಾಡಿದ 30 ಜನರಲ್ಲಿ 25 (83.33%) ಜನರು ಮಧ್ಯವರ್ತಿಗಳ ಮೂಲಕ ಸಾಲ ಪಡೆಯುತ್ತಾರೆ, 5 (16.66) ಜನರು ಹಾಗೆ ಮಧ್ಯವರ್ತಿಗಳಲ್ಲಿದೆ ಸಾಲ ಪಡೆಯುತ್ತಾರೆ, ಹೀಗೆ ಮಧ್ಯವರ್ತಿಗಳಿಂದಾಗಿ ರೈತರು ಸುಲಭವಾಗಿ ಸಾಲ ಪಡೆಯಬಹುದೆಂದು ಬಹಳಷ್ಟು ರೈತರು ಸಾಲ ಪಡೆಯುತ್ತಾರೆ, ಯಾಕೆಂದರೆ ಈ ಮಧ್ಯವರ್ತಿಗಳು ಹಾಗೂ ಬ್ಯಾಂಕಿನ ಅಧಿಕಾರಿಗಳ ಮಧ್ಯೆ ಒಳ ಸಂಬಂಧಗಳಿರುತ್ತವೆ, ಎಂಬುದನ್ನು ಬಹಳಷ್ಟು ರೈತರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಒಬ್ಬ ರೈತ ಹೇಳಿದ ಪ್ರಕಾರ ಆತ ಮಧ್ಯವರ್ತಿ ಇಲ್ಲದೆ ಹೋಗಿದ್ದರಿಂದ ಸಾಲ 7 ತಿಂಗಳಾದರು ಮಂಜೂರಾಗಲಿಲ್ಲ, ಬೇಸತ್ತ ರೈತ ಮಧ್ಯವರ್ತಿ ಹಿಡಿದಾಗ, ರೂ. 15,000 ಸಾಲ 15 ದಿವಸಗಳ ಒಳಗೆ ಮಂಜೂರಾತಿಯಯಾಯಿತೆಂದು ಹೇಳಿದರು, ಆದ್ದರಿಂದ ಬಹಳಷ್ಟು ಮಧ್ಯವರ್ತಿಗಳು ಕೋಲಾರದಲ್ಲೆ ಇರುತ್ತಾರೆ, ಈ ಮಧ್ಯವರ್ತಿಗಳ ಸಾಲ ಮಂಜೂರಾತಿಯಲ್ಲಿ ಹೆಚ್ಚು ಪರಿಣಿತರಾಗಿದ್ದರೆಂದು ರೈತರಲ್ಲಿರುವ ಪ್ರತೀತಿ ಈ ಮಧ್ಯವರ್ತಿಗಳು ರಾಜಕೀಯ ಪಕ್ಷಗಳ ಕಾರ್ಯಕರ್ತರು, ಸ್ವಯಂ ಘೋಷಿತ ನಾಯಕರಾಗಿದ್ದಾರೆ, ರೈತರು ಇವರ ಪ್ರಭಾವಕ್ಕೆ ಸುಲಭವಾಗಿ ಬೀಳುತ್ತಾರೆ, ಹಾಗೂ ಶೇ. 10-15 ರಷ್ಟು ಒಟ್ಟು ಸಾಲದ ಹಣದಲ್ಲಿ ಇವರು ಕಮೀಷನ್ ಪಡೆಯುತ್ತಾರೆ. ಇವರ ಸಹಾಯವಿಲ್ಲದೆ ಸಾಲ ಮಂಜೂರಾಗುವುದು ಕಷ್ಟದಾಯಕವಾದದ್ದು, ಆದ್ದರಿಂದ ರೈತರು ಈ ವ್ಯವಸ್ಥೆಗೆ ಸ್ವಾಭಾವಿಕವಾಗಿಯೇ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ, ಆದ್ದರಿಂದ ನಾನು ಸಮೀಕ್ಷೆ ಮಾಡಿದ 30 ರೈತರಲ್ಲಿ 25 ರಷ್ಟು ಜನ ಮಧ್ಯವರ್ತಿಗಳ ಮೂಲಕ ಸಾಲ ಪಡೆಯುತ್ತಾರೆ.

ರಸಗೊಬ್ಬರಗಳ ಬಳಕೆ:

ರಸಗೊಬ್ಬರಗಳು ಹಾಗೂ ಸಾಂಪ್ರಾದಾಯಿಕ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ ಹಸಿ ರಸಗೊಬ್ಬರ ಮಂತಾದವುಗಳನ್ನು ಬಹಳಷ್ಟು ರೈತರು ಬಳಸುತ್ತಾರೆ ಇಲ್ಲಿ ಮಾಡಿದ ಸಮೀಕ್ಷೆಯ ಪ್ರಕಾರ ಎಲ್ಲ 27 (90%) ರೈತರು ರಸಗೊಬ್ಬರ ಹಾಗೂ ಸಾಂಪ್ರದಾಯಿಕ ಗೊಬ್ಬರಗಳನ್ನು ಬಳಸುತ್ತಾರೆ. 3 (10%) ಜನ

ರೈತರು ಬರಿ ಸಾಂಪ್ರದಾಯಿಕ ಗೊಬ್ಬರ ಬಳಸುತ್ತಾರೆ. ಅಪರೂಪಕ್ಕೆ ರಸಗೊಬ್ಬರಗಳನ್ನು ಬಳಸುತ್ತಾರೆ ಈ ಹಳ್ಳಿಯಲ್ಲಿ ರಾಸುಗಳು ಹಾಗೂ ಕುರಿ ಮೇಕೆಗಳ ಸಂಖ್ಯೆ, ಜಾಸ್ತಿ ಯಿರುವುದರಿಂದ ರಸಗೊಬ್ಬರ ಹಾಗೂ ಸಾಂಪ್ರದಾಯಿಕ ಗೊಬ್ಬರಗಳ ಬಳಸುವವರ ಸಂಖ್ಯೆ ಜಾಸ್ತಿಯೇ ಇದೆ. ಬರೀ ಸಾಂಪ್ರದಾಯಿಕ ಗೊಬ್ಬರಗಳನ್ನು ಬಳಸುವವರ ಸಂಖ್ಯೆ ಕಡಿಮೆ ಇದೆ, ಇವರು ಸಹ ರಸಗೊಬ್ಬರಗಳನ್ನು ಬಳಸಲು ಉತ್ಸುಕರಾಗಿದ್ದಾರೆ, ಆದರೆ ಇವರಿಗೆ ಹಣದ ಮುಗ್ಗಟ್ಟಿನಿಂದಾಗಿ ತಮ್ಮ ಹೊಲದಲ್ಲಿ ತ್ಯಾಜ್ಯಗಳಿಂದ ದೊರಕುವ ಸಾಂಪ್ರದಾಯಿಕ ಗೊಬ್ಬರಗಳನ್ನು ಬಳಸುತ್ತಾರೆ. ಇಲ್ಲಿ ರಸಗೊಬ್ಬರಗಳನ್ನು ಬಳಸುವವರು ಇಳುವರಿ ಹೆಚ್ಚಿದೆ ಎಂದು ಅಭಿಪ್ರಾಯ ಪಡುತ್ತಾರೆ. 27(100%) ಜನ ರಸಗೊಬ್ಬರ ಬಳಸುವವರಲ್ಲಿ 27 ಜನವು ಸಹ ರಸಗೊಬ್ಬರಗಳು ಇಳುವರಿಯನ್ನು ಹೆಚ್ಚಿಸಿವೆ ಎಂದು ಹೇಳುತ್ತಾರೆ. ಎಕರೆಗೆ ರೂ. 5000 ನಷ್ಟು ಹಣವನ್ನು ವರ್ಷಕ್ಕೆ ಖರ್ಚು ಮಾಡುತ್ತಾರೆ. ಇವರಲ್ಲಿ ಸರಿ ಸುಮಾರು 1 ಎಕರೆಗೆ 12 ಚೀಲ ರಸಗೊಬ್ಬರಗಳನ್ನು ಬಳಸುತ್ತಾರೆ. ಸಮೀಕ್ಷೆಯ ಪ್ರಕಾರ ಇವರು 22 (81%) ಜನ ರೈತರಿದ್ದಾರೆ., ವರ್ಷಕ್ಕೆ ಒಂದು ಎಕರೆಗೆ ರೂ. 5000 ಕ್ಕಿಂತ ಕಡಿಮೆ ಖರ್ಚು ಮಾಡುವವರ ಸಂಖ್ಯೆ 5 (18.5%) ರೈತರು, ಇದು ಸ್ಪಷ್ಟಪಡಿಸುವುದೇನೆಂದರೆ ಇಲ್ಲಿನ ರೈತರು ಬಹುತೇಕವಾಗಿ ಮಧ್ಯಮ ಮತ್ತು ಸಣ್ಣ ಹಿಡುವಳಿ ದಾರರಾದರು ರಸಗೊಬ್ಬರಗಳ ಬಳಸುವಲ್ಲಿ ಉತ್ಸಾಹ ಇದೆ, ಇವರುರಸಗೊಬ್ಬರಗಳಿಗೆ ಖರ್ಚು ಮಾಡಿದ್ದು ಬೆಳೆಯ ಇಳುವರಿ ಹೆಚ್ಚಿಸಿ, ಒಳ್ಳೆ ಆದಾಯ ತರುತ್ತದೆಂಬುದು ಸ್ಪಷ್ಟ, ಆದ್ದರಿಂದ ರೂ. 5000 ಕ್ಕಿಂತ ಹೆಚ್ಚು ಎಕರೆಗೆ, ಖರ್ಚು ಮಾಡುವುವರಲ್ಲಿ ತೋಟಗಾರಿಕೆ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವರು. ಇವರು ಖರ್ಚು ಮಾಡುವುದು ರಸಗೊಬ್ಬರ ಅಧಿಕ ಇಳುವರಿ ತಂದು ಅಧಿಕ ಲಾಭ ತರುವುದರಿಂದ, ಆದ್ದರಿಂದ ಇವರು ಜಾಸ್ತಿ ಪ್ರಮಾಣದಲ್ಲಿ ರಸಗೊಬ್ಬರಗಳಿಗೆ ಖರ್ಚು ಮಾಡುತ್ತಾರೆ. ಹಾಗೆಯೇ ಇವರು ಕೋಲಾರದಲ್ಲಿರುವ ಸಹಕಾರಿ ಸಂಘಗಳ ಮೂಲಕ ರಸಗೊಬ್ಬರಗಳನ್ನು ತರುತ್ತಾರೆ. ಒಟ್ಟು 27 ರೈತರಲ್ಲಿ 23(85.18%) ಜನ ಸಹಕಾರಿ ಸಂಘಗಳ (14.51%) ಖಾಸಗಿ ಮಳಿಗೆಗಳಲ್ಲಿ ರಸಗೊಬ್ಬರವನ್ನು ಖರೀದಿಸುತ್ತಾರೆ. ಕೃಷಿ ಇಲಾಖೆಯಿಂದ ಸಹಾಯಧನ ಮೂಲಕ ರೈತರಿಗೆ ರಸಗೊಬ್ಬರ ಕೊಡುವುದು ಇಲ್ಲಿನ ರೈತರಿಗೆ ತಿಳಿದೇ ಇಲ್ಲ, ಕೃಷಿ ಇಲಾಖೆಯ ಅಧಿಕಾರಿಗಳು ಸಹ ಈ ಕಡೆ ಸುಳಿಯುವುದಿಲ್ಲ. ಆದ್ದರಿಂದ ಈ ಮಾಹಿತಿಯಿಂದ ರೈತರು ವಂಚಿತರಾಗಿದ್ದಾರೆ. ಒಟ್ಟು 27 ಜನ ರೈತರಲ್ಲಿ 27 ಜನ ರೈತರು ಕೃಷಿ ಇಲಾಖೆಯಿಂದ ಸಬ್ಸಿಡಿ ದರದಲ್ಲಿ ರಸಗೊಬ್ಬರ ನೀಡುವುದು ಮಾಹಿತಿ ತಿಳಿದಿಲ್ಲ ರಸಗೊಬ್ಬರಗಳ ಅಧಿಕೃತ ವಿತರಕರ ಬಗ್ಗೆ 27 ಜನ ರೈತರಲ್ಲಿ 27 ಜನಕ್ಕೂ ಮಾಹಿತಿ ಇದೆ. ನಾನು ಈಗಾಗಲೆ ತಿಳಿಸಿರುವಂತೆ 27 ಜನರಲ್ಲಿ ಸಹಕಾರಿ ಸಂಘಗಗಳು ಖಾಸಗಿ ಮಾರಾಟಗಾರರ ಬಗ್ಗೆ ಮಾಹಿತಿ ಇದೆ, ರಸಗೊಬ್ಬರಗಳ ಗುಣಮಟ್ಟದ ಬಗ್ಗೆ 22 (81.48%) ಜನ ರೈತರು ಸಹಕಾರಿ ಸಂಘಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರೆ 5 (18.51%) ಜನ ರೈತರು ಖಾಸಗಿ ವಿತರಕರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ರಸಗೊಬ್ಬರಗಳ ಸಾಗಾಣಿಕೆ ವೆಚ್ಚ ಕೋಲಾರದಿಂದ ತರಲು ಒಂದು ಬಾರಿಗೆ 50 ರಿಂದ

100 ರೂಗಳು 20 ಮೂಟೆಗೆ ವೆಚ್ಚವಾಗುತ್ತದೆ. 26 (96.29%) ರೈತರು ರಿಕ್ಷ ಮೂಲಕ ತಂದರೆ ಒಬ್ಬರು ಮಾತ್ರ ಎತ್ತಿನ ಗಾಡಿ ಮೂಲಕ ತರುತ್ತಾರೆ.

ಒಟ್ಟು ರಸಗೊಬ್ಬರಗಳಿಗೆ ರೈತರು ಮಾಡುವ ವೆಚ್ಚ ಒಟ್ಟು ಉತ್ಪನ್ನದ ಬೆಲೆಯಲ್ಲಿ ಶೇ. 20 ಕ್ಕಿಂತ ಜಾಸ್ತಿ ಮಾಡುವವರು 15 ಜನ (55.55%) ಶೇ. 15 ರಿಂದ 20 ರವರೆಗೆ ಮಾಡುವವರು 5 ಜನ (18.55%) 10 ರಿಂದ 15 ರವರೆಗಿ ಮಾಡುವವರು 6 ಜನ (22.22%) ಶೇ. 5 ಕ್ಕಿಂತ ಕಡಿಮೆ ಮಾಡುವವರು ಒಬ್ಬರು (3.70%) ಇಲ್ಲಿನ ರೈತರು ಖಾಸಗಿ ಕಂಪನಿಗಳು ಹಾಗೂ ಕೃಷಿ ಇಲಾಖೆಯ ಅಧಿಕ ಇಳುವರಿ ತಳಿಗಳು ತೋಟಗಾರಿಕೆ ವಾಣಿಜ್ಯ ಬೆಳೆಗಳಿಗೆ ಶಿಫಾರಸ್ಸು ಮಾಡುವ, ರಸಗೊಬ್ಬರಗಳ ಪ್ರಮಾಣವನ್ನು ಅನುಸರಿಸುತ್ತಿದ್ದಾರೆ. ಬಹಳಷ್ಟು ರೈತರಲ್ಲಿ ರಸಗೊಬ್ಬರಗಳನ್ನು ಜಾಸ್ತಿ ಬಳಸಿದಷ್ಟು, ಇಳುವರಿ ಜಾಸ್ತಿ ಎಂಬ ಕಾರಣದಿಂದ ಒಟ್ಟ ಉತ್ಪನ್ನದ ಬೆಲೆಯಲ್ಲಿ ಶೇ. 20 ಕ್ಕಿಂತ ಜಾಸ್ತಿ ಖರ್ಚು ಮಾಡುವ ರೈತರೇ ಅಧಿಕವಿದ್ದಾರೆ, ಉತ್ಪನ್ನದ ಬೆಲೆಯಲ್ಲಿ ಶೇ. 5.ಕ್ಕಿಂತ ಖರ್ಚು ಮಾಡುವ ರೈತ ಒಬ್ಬನೆ ಇದು ಹಣದ ಮುಗ್ಗಟ್ಟಿನಿಂದಾಗಿ ಬಹಳಷ್ಟು ರೈತರು ಶೇ. 20 ಕ್ಕಿಂತ ಕಡಿಮೆ ಖರ್ಚನ್ನು ರಸಗೊಬ್ಬರ ಗಳಿಗೆ ಮಾಡುತ್ತಾರೆ, ಆದರೆ ರಸಗೊಬ್ಬರಗಳನ್ನು ಯಥೇಚ್ಚವಾಗಿ ಬಳಸುವುದರಿಂದ ನಾನು ಈಗಾಗಲೆ ತಿಳಸಿರುವಂತೆ ಅಧಿಕ ಇಳುವರಿ ಬರುತ್ತದೆಂಬುದೇ ಬಹಳ ರೈತರ ಅಭಿಮತ. ಆದರೆ ಒಟ್ಟ ಉತ್ಪನ್ನದ ಬೆಲೆಯಲ್ಲಿ ಶೇ. 20 ಕ್ಕಿಂತ ಹೆಚ್ಚು ಅಥವಾ ಶೇ. 15-20 ರ ಪ್ರಮಾಣದಲ್ಲಿ ಖರ್ಚು ಮಾಡಿದರೆ, ಇವರಿಗೆ ಲಾಭ ಬರಬೇಕಾದರೆ ಮಾರುಕಟ್ಟೆಯಲ್ಲಿ ಲಾಭದಾಯಕ ಬೆಲೆಗೆ ಉತ್ಪನ್ನಗಳು ಮಾರಾಟವಾಗಬೇಕು ಆದರೆ ರೈತರು ಟೊಮೊಟೋ, ಹೂಕೋಸು, ಬೆಳೆಗಳಲ್ಲಿ ಒಳ್ಳೆ ಬೆಲೆಯನ್ನು ಪಡೆಯುವಲ್ಲಿ ಕೈಸುಟ್ಟುಕೊಂಡಿದ್ದರು. ರಸಗೊಬ್ಬರಗಳನ್ನು ಬಳಸುವ ಛಲದಿಂದ ಮುಕ್ತರಾಗಿಲ್ಲ, ಆದರೆ ಇದು ಮಣ್ಣಿನ ಗುಣದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ. ಎಂಬುದೇ ಬಹಳಷ್ಟು ರೈತರ ಅಭಿಪ್ರಾಯ. ಈಗ ಸಾವಯವ ಕೃಷಿ, ಸ್ವಾಭಾವಿಕ ಕೃಷಿ ತಂತ್ರಜ್ಞಾನದ ಬಗ್ಗೆ ಚರ್ಚೆಯಾಗುತ್ತಿರಬೇಕಾದರೆ ಅದರ ಬಗ್ಗೆ ರೈತರಿಗೆ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ ರೈತರು ಉತ್ಪನ್ನದಬೆಲೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ರಸಗೊಬ್ಬರಗಳಿಗೆ ಮೀಸಲಿಟ್ಟಿದ್ದಾರೆ.

ಒಟ್ಟು ಉತ್ಪಾದನಾ ವೆಚ್ಚದಲ್ಲಿ ರಸಗೊಬ್ಬರ ಗಳ ಶೇ. 20 ರಿಂದ 25 ರಷ್ಟಿದೆ. ಒಟ್ಟು 27 ರೈತರಲ್ಲಿ ಶೇ. 20 ರಿಂದ 25 ರಷ್ಟು ಉತ್ಪಾದನಾ ವೆಚ್ಚದಲ್ಲಿ ರಸಗೊಬ್ಬರಗಳಿಗೆ ಮೀಸಲಿಡುತ್ತಿರುವವರು 18 (66.66%) ಜನ ಶೇ. 15 ರಿಂದ 20 ರಷ್ಟು ರಸಗೊಬ್ಬರಗಳ ಮೇಲೆ ವೆಚ್ಚ ಮಾಡುತ್ತಿರುವರು 6(22.22%) ಜನ, 3 (11.11%) ಜನ ರೈತ್ತರು. ಶೇ. 10 ರಿಂದ ಶೇ. 15 ರವರೆಗೆ ರಸಗೊಬ್ಬರಗಳಿಗೆ ಖರ್ಚು ಮಾಡುತ್ತಾರೆ. ಇದು ಸ್ಪಷ್ಟಪಡಿಸುವುದೇನೆಂದರೆ, ಸಣ್ಣ ಮತ್ತು ಮಧ್ಯ ಹಿಡುವಳಿದಾರರು ಹೆಚ್ಚು ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸುತ್ತಿದ್ದರೆ, ಇದಕ್ಕೆ ಕಾರಣವೆಂದರೆ ರೈತರು ರಸಗೊಬ್ಬರ ಬಳಸುವುದರಿಂದ ನಾನು ಈಗಾಗಲೆ ತಿಳಿಸಿರುವಂತೆ ಇಳುವರಿ, ಹೆಚ್ಚಾಗುತ್ತದೆಂಬುದು ರಸಗೊಬ್ಬರ ಬಳಸುವುದರಲ್ಲಿ ರೈತರು

ಎದುರಿಸುತ್ತಿರುವ ಸಮಸ್ಯೆ ಸಾಲ ಸಹಕಾರಿ ಸಂಘಗಳಿಂದಲೆ ಬಹುತೇಕ ರೈತರು ಖರೀದಿಸುತ್ತಿರುವುದರಿಂದ ಅಲ್ಲಿ ಸಾಲದ ಮೇಲೆ ರಸಗೊಬ್ಬರಗಳನ್ನು ನೀಡುತ್ತಾರೆ. ಇಲ್ಲಿ ಸಾಲ ಪಡೆಯಲು ಅಷ್ಟೇನು ಕಷ್ಟ ಕರವಲ್ಲ ಎಂದು 10 (37.00%) ಜನ ರೈತರು ಸಮೀಕ್ಷೆಯ ಸಂದರ್ಭದಲ್ಲಿ ವ್ಯಕ್ತ ಪಡಿಸಿದರು. ಸಾಲ ಸುಲಭವಾಗಿ ಸಿಗುತ್ತದೆ. ಎಂದು (40%) 11 ಜನ ವ್ಯಕ್ತಪಡಿಸಿದ ಇನ್ನೂ 6 (22.2%) ಜನ ರೈತರು ರಸಗೊಬ್ಬರಗಳಿಗೆ ಸಾಲ ಪಡೆಯುವುದು ಅತಿ ಕಷ್ಟ ಎಂದು ವ್ಯಕ್ತಪಡಿಸಿದರು. ಇದು ಸ್ಪಷ್ಟ ಪಡಿಸುವುದೇನೆಂದರೆ ರಸಗೊಬ್ಬರಗಳನ್ನು ಕೊಳ್ಳಲು ಸಹಕಾರಿ ಸಂಘಗಳು ಸಾಲ ನೀಡುತ್ತವೆ ಎಂದು ರೈತರಿಗೆ ಗೊತ್ತಿದೆ ಬಹುತೇಕ ರೈತರು ರಸಗೊಬ್ಬರಗಳಿಗೆ ಸಾಲ ಪಡೆಯುವುದು ಕಷ್ಟವಲ್ಲ ಎಂದು ತಿಳಿಸಿದ್ದಾರೆ, ಸಾಲ ಸಿಗುವುದು ಕಷ್ಟಕರವಾದುದು ಎಂದು, ಅಲ್ಪ ಪ್ರಮಾಣದ ಸಂಖ್ಯೆಯ ರೈತರು ಹೇಳಿದ್ದಾರೆ, ಹೀಗಿದ್ದರು ಸಾಲ ಕೊಡುವುದನ್ನು ಹೆಚ್ಚಿಸಬೇಕು. ಮತ್ತು ಸಾಲ ನೀಡುವಾಗ ಮಾಡುವ ವಿಧಿ ವಿಧಾನಗಳನ್ನು ಇನ್ನೂ ಸರಳೀಕರಿಸಬೇಕು ಎಂಬುದೇ ಸ್ಪಷ್ಟವಾಗಿರುವುದು, ಇಲ್ಲಿ ಖಾಸಗಿ ಮಳಿಗೆಗಳಲ್ಲಿ ಖರೀದಿಸುತ್ತಿರುವವರಿಗೂ ಅನ್ವಯಿಸುತ್ತದೆ ಇವರು ಸಹ ಖಾಸಗಿ ಮಳಿಗೆಗಳಿಂದ ಸಾಲವನ್ನು ಪಡೆಯುತ್ತಾರ.

ರಸಗೊಬ್ಬರ ಸಕಾಲಕ್ಕೆ ಸಿಗುವುದಿಲ್ಲ ಹಾಗೂ ಬೇಡಿಕೆಗೆ ಅನುಗುಣವಾಗಿ ಪೂರೈಸಲಾಗುತ್ತಿಲ್ಲ ಎಂದು 22 (81.22%) ಜನ ರೈತರು ಹೇಳಿದರು, ಉಳಿದ 5 (18.51%) ಜನ ರೈತರು ಸಕಾಲಕ್ಕೆ ಸಿಗುತ್ತದೆ ಎಂದು ಹೇಳಿದರು. ಇಲ್ಲಿ ಸ್ಪಷ್ಟವಾಗುವುದೇನೆಂದರೆ ಅರಹಳ್ಳಿ ಗ್ರಾಮದಲ್ಲಿ ರಸಗೊಬ್ಬರಗಗಳನ್ನು ಯಥೇಚ್ಚವಾಗಿ ಬಳಸುತ್ತಾರೆ ರಸಗೊಬ್ಬರಗಳನ್ನು ಬಳಸುವವರು ತರಕಾರಿ ಹಾಗೂ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತಹವರು ಆದ್ದರಿಂದ ಇಲ್ಲಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಬಳಕೆಯ ಪಹಿವಾಟಿಗೆ ಹೆಚ್ಚಿನದಾಗಿದೆ, ಬೀಜಗಳಿಗಿಂತ ರಸಗೊಬ್ಬರಕ್ಕೆ ರೈತರು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಬೆಂಗಳೂರು ನಗರದ ಅಧ್ಯಯನ:

ಇ) ಬಿಳಿ ಜಾಜಿ ಗ್ರಾಮ:

ಗ್ರಾಮ ಪರಿಚಯ:

ಬಿಳಿ ಜಾಜಿ ಬೆಂಗಳೂರು ಉತ್ತರ ತಾಲ್ಲೂಕು , ಬೆಂಗಳೂರು ನಗರಕ್ಕೆ ಸೇರುತ್ತದೆ, ಇದು ಹೆಸರಘಟ್ಟ ಹೋಬಳಿಯ ಹುರುಳಿ ಚಿನ್ನ ಗ್ರಾಮ ಪಂಚಾಯಿತಿಗೆ ಸೇರುತ್ತದೆ. ಗ್ರಾಮದ ಒಟ್ಟು ವಿಸ್ತೀರ್ಣ 191.24 (478 ಎಕರೆ) ಹೆಕ್ಟೇರುಗಳು ಒಣ ಬೇಸಾಯ 130.16 (354.4 ಎಕರೆಗಳು) ಹೆಕ್ಟೇರುಗಳು ನೀರಾವರಿ

13.81 (33.25 ಎಕರೆ) ಹೆಕ್ಟೇರುಗಳು , ಬಾಗಾಯ್ತು 1.74 (4.37 ಎಕರೆ) ಹೆಕ್ಟೇರುಗಳುನ್ನು ಹೊಂದಿದೆ. ಇದು ಬೆಂಗಳೂರಿನಿಂದ 30 ಕಿ.ಮೀ. ದೂರದಲ್ಲಿದೆ ಬೆಂಗಳೂರಿನಿಂದ ಮುಕ್ಕಾಲುಗಂಟೆ ಹೆಸರುಘಟ್ಟಕ್ಕೆ ಪ್ರಯಾಣಿಸಿ ಹೆಸರು ಘಟ್ಟದಿಂದ 3 ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ 175 ಕುಟುಂಬಗಳು ಇವೆ, ಜನಸಂಖ್ಯೆ 1800, ಇಲ್ಲಿ 175 ಕುಟುಂಬಗಳಲ್ಲಿ ವಕ್ಕಲಿಗರು 30 (17%) ಕುಟುಂಬಗಳು, ತಿಗಳರು 70 (40%) ಕುಟುಂಬಗಳು ಲಿಂಗಾಯಿತರು, (17%), 30 ಕುಟಂಬಗಳು , ಪರಿಶಿಷ್ಟಜಾತಿಯಲ್ಲಿ ಕೋರಮರು (14.28%) 25 ಕುಟುಂಬಗಳು, ಪರಿಶಿಷ್ಟ ಪಂಗಡದಲ್ಲಿ, ನಾಯಕರು 20 (11.42%) ಕುಟುಂಬಗಳು ಇಲ್ಲಿ ಪರಿಶಿಷ್ಟ ಜಾತಿಯಲ್ಲಿ ಬರುವ ಹೊಲೆಯರು ಮತ್ತು ಮಾದಿಗರ ಕುಟುಂಬಗಳಿಲ್ಲದಿರುವುದು ಒಂದು ವಿಶಿಷ್ಟವಾದದ್ದು, ಇಲ್ಲಿ ಜಾತಿ ಜಾತಿಗಳ ನಡುವೆ ಸಾಮರಸ್ಯ ವಿರುವುದು ಎದ್ದು ಕಾಣುತ್ತದೆ. ತಿಗಳರು ಅಧಿಕವಾಗಿರುವ ಈ ಗ್ರಾಮದಲ್ಲಿ ವಕ್ಕಲಿಗರದೇ ಪಾರುಪತ್ಯ ಆದರೆ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿರುವುದರಿಂದ, ವಕ್ಕಲಿಗರು ಅನಿವಾರ್ಯವಾಗಿ ಇಂದಿನ ರಾಜಕೀಯ ವ್ಯವಸ್ಥೆಗೆ ಹೊಂದಿಕೊಳ್ಳಬೇಕಾಗಿದೆ. ತಿಗಳರು ಹಿಂದುಳಿದ ವರ್ಗ 2A ಪ್ರಮಾಣಕ್ಕೆ ಬರುತ್ತಾರೆ, ಇವರ ಕಸುಬು ತೋಟಗಾರಿಕೆ ಅದರಲ್ಲೂ ಹೂ ಬೆಳೆಗಳನ್ನು ಬೆಳೆಯುವುದು. ಈ ಗ್ರಾಮದಲ್ಲಿ ಕುರುಬ, ಈಡಿಗ, ಕುಂಬಾರ, ವಿಶ್ವಕರ್ಮ ಮುಂತಾದ ಜಾತಿಗಳು ಒಂದು ಮನೆಯೂ ಇಲ್ಲ ಜನಸಂಖ್ಯೆಯಲ್ಲಿ ತಿಗಳರು ಅಧಿಕವಿದ್ದರೂ, ವಕ್ಕಲಿಗರು ಆರ್ಥಿಕವಾಗಿ ಮುಂದಿದ್ದಾರೆ, ತಿಗಳರು ಸಾಮಾಜಿಕವಾಗಿ, ವಕ್ಕಲಿಗರ ನಂತರ ಬರುವ ಜಾತಿ ಇಲ್ಲಿ, ಅನೇಕ ಸಾಮಾಜಿಕ ಪಲ್ಲಟಗಳು ಗ್ರಾಮ ಪಂಚಾಯಿತಿಯಲ್ಲಿ ಮೀಸಲಾತಿ ಇರುವುದರಿಂದ ನಡೆದಿದೆ, ಈ ರೀತಿ ಸಾಮಾಜಿಕ ಪಲ್ಲ ಟಗಳು ನಾನು ಕ್ಷೇತ್ರ ಕಾರ್ಯ ಮಾಡಿದ ಕೋಲಾರ ಜಿಲ್ಲೆಯ ಮಾರ್ಜೇನಹಳ್ಳಿ ಹಾಗೂ ಅರಹಳ್ಳಿಗಳಲ್ಲೂ, ನಡೆದಿದೆ ಪರಂಪರಾನುಗತವಾಗಿ ವಕ್ಕಲಿಗರ ಪ್ರಾಬಲ್ಯ ಸಾದಿಸುತ್ತಿದ್ದ ಗ್ರಾಮೀಣ ಪರಿಸರ, ಇಂದು ಹೊಸ ಸ್ಪಂದನಗಳೊಂದಿಗೆ ಇನ್ನಿತರ ಹಿಂದುಳಿದ ವರ್ಗಗಳ ಪ್ರಾಬಲ್ಯ ಸಾಧಿಸುವ ನಿಟ್ಟಿನಲ್ಲಿ ನಡೆದಿದೆ, ತಿಗಳರು ವಕ್ಕಲಿಗರ ನಂತರ ಆರ್ಥಿಕ ಪ್ರಾಬಲ್ಯ ಸಾಧಿಸಿರುವ ಜಾತಿ ಇದಕ್ಕೆ ಕಾರಣ, ತಿಗಳರು ಹೆಚ್ಚಾಗಿ, ತರಕಾರಿ ಹೂ, ಬೆಳೆಗಳ ಮೇಲೆ ಅವಲಂಬಿತರಾಗಿ ಬೆಂಗಳೂರು ಹತ್ತಿರವಿರುವುದರಿಂದ ತಮ್ಮ ಉತ್ಪನ್ನಗಳನ್ನು ಹತ್ತಿರದ ಕೆ.ಆರ್. ಮಾರ್ಕೆಟ್ಟಿಗೆ ಇಲ್ಲವೆ, ಪೀಣ್ಯದ ಬಾಣಾವರ ಕ್ಕೆ ತೆಗೆದುಕಂಡು ಹೋಗುತ್ತಾರೆ, ಇಲ್ಲಿ ಗ್ರಾಮ ಪಂಚಾಯಿತಿಯಲ್ಲಿ ತಿಗಳರು ಹಿಂದುಳಿದ ವರ್ಗ ಎ ಗುಂಪಿನಲ್ಲಿ ಬರುವುದರಿಂದ ಪ್ರಾಬಲ್ಯ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಿಳಿ ಜಾಜಿ ಗ್ರಾಮ ಹುರುಲಿ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿಯ ಅಡಿಯಲ್ಲಿ ಬರುವುದರಿಂದ ಹುರುಳಿ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿಗೆ ಸಾಸುವೆ ಘಟ್, ತರಬನಹಳ್ಳಿ, ಕೊಪಗಿತರು ಮೂಲಪುರ, ಐವರು ಕಂಡಪುರ, ಬಿಳಿ ಜಾಜಿ, ಹುರುಳಿ ಚಿಕ್ಕನಹಳ್ಳಿಯೂ ಸೇರಿ 6 ಗ್ರಾಮಗಳು ಬರುತ್ತವೆ. ಈ ಆರು ಗ್ರಾಮಗಳಲ್ಲೂ ತಿಗಳರು ಪ್ರಬಲರಾಗಿದ್ದಾರೆ, ಈ ಆರು ಗ್ರಾಮಗಳು

ಸೇರಿ 21 ಗ್ರಾಮ ಪಂಚಾಯಿತಿ ಸದಸ್ಯರ ಪೈಕಿ 8 ಜನ ತಿಗಳ ಜನಾಂಗಕ್ಕೆ ಸೇರಿದವರು 7 ವಕ್ಕಲಿಗರು, 3 ಕೊರಮರು, 2 ನಾಯಕರು 1 ಹೊಲೆಯರು, ತರಬನಹಳ್ಳಿಯಲ್ಲಿ ಸಾಮಾಜಿಕವಾಗಿ ವಕ್ಕಲಿಗರು , ತಿಗಳರು ಸಾಮರಸ್ಯದಿಂದೇನೊ ಇದ್ದಾರೆ, ಆದರೆ ವಕ್ಕಲಿಗರ ತಿಗಳರ ನಡುವೆ ಆಗಾಗ್ಗೆ ಸಣ್ಣ ಪುಟ ಸಂಘರ್ಷಗಳು ನಡೆಯುತ್ತವೆಂದು ತಿಳಿದುಕೊಂಡೆ ಆದರೆ ತಿಗಳರು ಬೆಂಗಳೂರಿನ ಕೆಲವು ಗ್ರಾಮಗಳನ್ನು ನಗರದ ಕೆಲವು ವಾರ್ಡುಗಳಲ್ಲಿ ಜನಸಂಖ್ಯೆ ಇದ್ದರು, ಇವರು ರಾಜ್ಯ ಮಟ್ಟದಲ್ಲಿ ಅಲ್ಪಸಂಖ್ಯಾತ ಜಾತಿ ಎಂಬುದರಲ್ಲಿ ಸಂದೇಹವಿಲ್ಲ. ಕೊರಮರು ಅಷ್ಟೆ ಈ ಹಳ್ಳಿಯಲ್ಲಿ ಜನ ಸಂಖ್ಯೆಯಿಂದ ಗಣನೀಯ ಪ್ರಮಾಣದಲ್ಲಿದ್ದಾರೆ, ಆದರೆ ರಾಜ್ಯ ಮಟ್ಟದಲ್ಲೂ ಈ ಜಾತಿ ಪರಿಶಿಷ್ಟ ಜಾತಿಯಲ್ಲಿ ಅಲ್ಪಸಂಖ್ಯಾತ ಜಾತಿ, ಹೀಗೆ ವಿಶಿಷ್ಟ ಸಾಮಾಜಿಕ ಪರಿಸರವನ್ನು ಹೊಂದಿರುವ, ಬಿಳಿ ಜಾಜಿ ಗ್ರಾಮದಲ್ಲಿ ವಕ್ಕಲಿಗರು, ತಿಗಳರಲ್ಲಿ ಗಣನೀಯ ಪ್ರಮಾಣದಲ್ಲಿ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ, ವಕ್ಕಲಿಗರಲ್ಲಿ 25 (83.33%) ಮನೆ, ತಿಗಳರಲ್ಲಿ 35 (50.00%) ಕೊರಮರ 15 (60%)ಮನೆ ನಾಯಕರಲ್ಲಿ 12 (60%) ಮನೆ ಲಿಂಗಾಯಿತರಲ್ಲಿ 20 (66%) ಮನೆ, ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಲಿಂಗಾಯಿತರು ತಿಗಳರು, ವಕ್ಕಲಿಗರು ಕೊರಮರು, ಮತ್ತು ನಾಯಕರು ಮನೆಗಳಲ್ಲಿ ಪರಸ್ಪರ ಊಟ ಮಾಡುತ್ತಾರೆ, ಎಂದು ಸಮೀಕ್ಷೆಯ ಸಮಯದಲ್ಲಿ ತಿಳಿದು ಬಂದ ವಿಷಯ ಕೊರಮರು ಅಸ್ಪೃಶ್ಯರಲ್ಲದ ಕಾರಣ, ನಾಯಕರು, ಸಹ ಅಸ್ಪೃಶ್ಯರಲ್ಲದ ಕಾರಣ ವಕ್ಕಲಿಗರು , ಲಿಂಗಾಯಿತರು, ತಿಗಳರು ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯಲ್ಲಿ ಬಂದರು, ಯಾವುದೇ ತರಹದ ಅಸ್ಪೃಶ್ಯತೆ ಆಚರಿಸುತ್ತಿಲ್ಲ. ಹೊಲೆಮಾದಿಗರು ಈ ಗ್ರಾಮದಲ್ಲಿ ಇಲ್ಲದೇ ಇರುವುದರಿಂದ ಅಸ್ಪೃಶ್ಯತೆ ಈ ಗ್ರಾಮದಲ್ಲಿ ಇಲ್ಲ 7 ದೇವಸ್ತಾನಗಳಿವೆ, ಮದ್ದೂರಮ್ಮನ ದೇವಸ್ಥಾನ, ಆಂಜನೇಯಸ್ವಾಮಿ ದೇವಸ್ಥಾನ ಕರಗದಮ್ಮನ ದೇವಸ್ಥಾನ , ಮಾರಮ್ಮನ ದೇವಸ್ಥಾನ, ನರಸಮ್ಮನ ದೇವಸ್ಥಾನ, ಲಕ್ಷ್ಮೀದೇವಸ್ಥಾನ, ಮುನೀಶ್ವರನ ದೇವಸ್ಥಾನ ಇಲ್ಲಿನ ದೇವಸ್ಥಾನಗಳಲ್ಲಿ ಬ್ರಾಹ್ಮಣರು, ಲಿಂಗಾಯಿತರು ಹಾಗೂ ನಾಯಕ ಜನಾಂಗದವರು ಪೂಜಾರಿಗಳಾಗಿದ್ದಾರೆ, ಈ ಸ್ವರೂಪ ಈ ಗ್ರಾಮದಲ್ಲಿರಬೇಕಾದರೆ, ಅಸ್ಪೃಶ್ಯತೆ ಎಂಬುದು ಸಂಪೂರ್ಣವಾಗಿ ಈ ಗ್ರಾಮದಲ್ಲಿ ಇಲ್ಲ, ಹೊಲೇಮಾದಿಗ ಜಾತಿಗಳು ಇದ್ದಿದ್ದರೆ ಇಲ್ಲಿ ಪ್ರತ್ಯಕ್ಷವಾಗಲ್ಲದಿದ್ದರೂ, ಪರೋಕ್ಷವಾಗಿ ಅಸ್ಪೃಶ್ಯತೆ ಇರುತ್ತಿತ್ತೇನೋ ? ಆದರೆ ಎಲ್ಲ ಅಸ್ಪೃಶ್ಯ ಜಾತಿಗಳೇ ಇಲ್ಲಿ ಇರುವುದರಿಂದ ಇಲ್ಲಿ ಸಾಮಾಜಿಕ ವಾತಾವರಣವೆ ವಿಭಿನ್ನವಾಗಿದೆ ಇಲ್ಲಿ ಸಾಮಾಜಿಕ ವಾತಾವರಣದಿಂದಾಗಿ, ಜಾತಿಗಳ ಮಧ್ಯೆ ವೈಮನಸ್ಸು ಬರುವುದಿಲ್ಲ ಈ ಹಳ್ಳಿಯಲ್ಲಿ ಕೊರಮರ ಮನೆಗಳಲ್ಲಿ ವಕ್ಕಲಿಗರು ತಿಗಳರು, ಲಿಂಗಾಯಿತರು ಊಟ ಮಾಡುತ್ತಾರೆ.

ಜಾತಿ ಮತ್ತು ಭೂಮಿ:

ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ ((33.33%) 10 ಜನ ವಕ್ಕಲಿಗರು 15 (50%) ಜನ ತಿಗಳರು, 2 ಕೊರಮರು 2 (6.6%) ಲಿಂಗಾಯಿತರು 1 (3.3%) ರೂ ನಾಯಕರು 10 (33.33%)

ಜನ ವಕ್ಕಲಿಗರಲ್ಲಿ 4 (13.33%) ಜನ 10 ಎಕರೆಗಿಂತ ಮೇಲ್ಪಟ್ಟವರು 15 ಜನ ತಿಗಳರಲ್ಲಿ 5 (16.30%) ಜನ 10 ಎಕರೆಗಿಂತ ಮೇಲ್ಪಟ್ಟವರು 2 (6.6%) ಲಿಂಗಾಯಿತರು ಹತ್ತು ಎಕರೆಗಿಂತ ಮೇಲ್ಪಟ್ಟವರು, ಉಳಿದಂತ ರೈತರು ಸಣ್ಣ ರೈತರು ಸಣ್ಣ ರೈತರ ಸಮೂಹ ವಿಪುಲವಾಗಿದೆ ಯಾಕೆಂದರೆ ಇದು ಬೆಂಗಳೂರಿಗೆ ಹತ್ತಿರವಾಗಿರುವುದರಿಂದ 1 ಎಕರೆ ಜಮೀನು 50 ರಿಂದ 60 ಲಕ್ಷ ರೂ ಇದೆ, ಬಹಳಷ್ಟು ರೈತರು ತಮ್ಮ ಬಳಿ ಇರುವ ದೊಡ್ಡ ಹಿಡುವಳಿಗಳಲ್ಲಿ ಸುಮಾರು ಭಾಗ ಮಾರಾಟ ಮಾಡಿ ಉಳಿದಿದ್ದನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ, ಹಾಗೂ ಆಸ್ತಿ ವಿಭಜನೆಯಾಗಿಯೂ ಸಹ ಸಣ್ಣ ಹಿಡುವಳಿಗಳಾಗಿ ರೂಪುಗೊಂಡಿವೆ, ಬಹಳಷ್ಟು ರೈತರ ಬಳಿ 3 ಎಕರೆಗಿಂತ ಕಡಿಮೆ ಹಿಡುವಳಿಗಳಿರುವುದು ಕಂಡುಬಂದಿದೆ, ಕೊರಮರು ನಾಯಕರು ಸಹ ಗಮನಾರ್ಹ ಪ್ರಮಾಣದಲ್ಲಿ ಭೂ ಹಿಡುವಳಿಗಳನ್ನು ಹೊಂದಿದ್ದಾರೆ. ಭೂರಹಿತರ ಸಂಖ್ಯೆ ಎಲ್ಲಾ ಜಾತಿಗಳಲ್ಲೂ ವಿಪುಲವಾಗಿ ಇದೆ, ಭೂ ರಹಿತರ ಪಕ್ಕದ ಪೀಣ್ಯಾದ ಕೈಗಾರಿಕಾ ಎಸ್ಟೇಟಿನಲ್ಲಿ ಕೂಲಿಗಳಾಗಿ ಕೆಲಸ ಮಾಡುತ್ತಾರೆ ಇನ್ನೂ ಕೆಲವರು ಆಟೊ ಓಡಿಸುತ್ತಾರೆ, ಮತ್ತೆ ಕೆಲವರು ಗಾರೆ ಕೆಲಸ ಕಟ್ಟಡ ನಿರ್ಮಾಣದ ಕೂಲಿಗಳಾಗಿ ಕೆಲಸ ಮಾಡುತ್ತಾರೆ ಈ ಹಳ್ಳಿಯಲ್ಲಿ ಕೃಷಿಯಲ್ಲಿ ವಕ್ಕಲಿಗರು ತಿಗಳರು ದೊಡ್ಡ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ ಕೊರಮರು, ನಾಯಕರು ಸಹ ಗಣನೀಯ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಆದರೆ ಹತ್ತು ಎಕರೆಗಿಂತ ಮೇಲ್ಪಟ್ಟ ದೊಡ್ಡ ರೈತರು ಬರುವುದು ವಕ್ಕಲಿಗ ಮತ್ತು ತಿಗಳ ಲಿಂಗಾಯಿತ ಜಾತಿಗಳಲ್ಲಿ. ಈಗಾಗಲೆ ನಾನು ತಿಳಿಸಿದಂತೆ 10 ವಕ್ಕಲಿಗರಲ್ಲಿ 4 ಜನ 15 ತಿಗಳರಲ್ಲಿ 5 ಜನ 2 ಲಿಂಗಾಯಿತರಲ್ಲಿ 2 ದೊಡ್ಡ ಹಿಡುವಳಿದಾರರು , ಕೊರಮ ನಾಯಕರಲ್ಲಿ ಯಾರು ಇಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ಇಲ್ಲಿ ಮತ್ತೊಂದು ವಿಷಯವನ್ನು ಹೇಳಲೇಬೇಕಾಗಿದೆ ಅದೇನೆಂದರೆ ರಾಜ್ಯ ಮಟ್ಟದಲ್ಲಿ ಪ್ರಬಲರಾಗಿರುವ ವಕ್ಕಲಿಗ, ಲಿಂಗಾಯಿತರ ಪ್ರಾಬಲ್ಯದ ಗುಟ್ಟೇನೆಂದರೆ, ಬೆಂಗಳೂರಿನಂತಹ ಸ್ಥಳದಲ್ಲಿ 1-2 ಎಕರೆ ಇದ್ದರೇನೆ, ಅವರು ಶ್ರೀಮಂತರು ಅಂತಹವುದರಲ್ಲಿ 4 ಜನ ವಕ್ಕಲಿಗರು 10 ಎಕರೆಗಿಂತ ಜಾಸ್ತಿ ಹೊಂದಿರಬಹುದು. ಲಿಂಗಾಯಿತರು ಇಬ್ಬರಲ್ಲಿ ಇಬ್ಬರೂ ದೊಡ್ಡ ಹಿಡುವಳಿದಾರರಾಗಿರುವುದು ವಕ್ಕಲಿಗರು ಲಿಂಗಾಯಿತರು ಮುಂದುವರೆಯಲು ಕಾರಣವಾಗಿದೆ. ತಿಗಳರು ರಾಜ್ಯ ಮಟ್ಟದಲ್ಲಿ ವೆಂಕಟಸ್ವಾಮಿ, ಮತ್ತು ಚಿನ್ನಪ್ಪರೆಡ್ಡಿ ವರದಿಯ ಪ್ರಕಾರ ಶೇ. 0.60 ರಷ್ಟು ಜನಸಂಖ್ಯೆ ಇದೆ. ಆದರ ಕೆಳಮಟ್ಟದಲ್ಲಿ ತಿಗಳರು ಸಾಕಷ್ಟು ಸಂಪದ್ಭರಿತ ಜಾತಿಯಾಗಿದೆ. ಆದರೆ ರಾಜ್ಯ ಮಟ್ಟದಲ್ಲಿ ವಕ್ಕಲಿಗರು ಶೇ. 11.75 ರಷ್ಟು ಲಿಂಗಾಯಿತರು ಶೇ. 16 ರಷ್ಟು ಜನ ಸಂಖ್ಯೆ ಇರುವುದರಿಂದ ಅವರು ಆರ್ಥಿಕ ಮುಂದುವರಿಕೆ ಜೊತೆಗೆ ಸಂಖ್ಯಾ ಬಾಹುಳ್ಯದಿಂದ ರಾಜಕೀಯವಾಗಿ ಪ್ರಬಲರಾಗಿದ್ದಾರೆ, ಆದರೆ ತಿಗಳರು ಆರ್ಥಿಕವಾಗಿ ಸದೃಢವಾಗಿದ್ದರೂ ಸಂಖ್ಯಾ ಬಲ ಇಲ್ಲದಿರುವುದರಿಂದ ಪ್ರಬಲರಾಗಿಲ್ಲ ಈಗಾಗಲೆ ನಾನು ತಿಳಿಸಿದಂತೆ ಆಸ್ತಿ ಹೊಂದಿ ಆರ್ಥಿಕವಾಗಿ ಸದೃಢವಾಗಿ ಸಂಖ್ಯಾ ಬಲವಿದ್ದರೆ, ಅವರು ರಾಜಕೀಯ ಹಾಗೂ ಇನ್ನಿತರ ರಂಗಗಳಲ್ಲಿ ಮುಂದುವರೆಯುತ್ತಾರೆ. ಈ ಮಾದರಿಯೇ ಕರ್ನಾಟಕದಲ್ಲಿ ಇರುವುದು, ಇದಕ್ಕೆ ಅಪವಾದ ಎಂಬಂತೆ ತಿಗಳರು ಆರ್ಥಿಕವಾಗಿ ಸದೃಢವಾಗಿದ್ದರು ಜನಸಂಖ್ಯಾ ಬಲ ಇಲ್ಲದೇ ಇರುವುದರಿಂದ ಅವರು ಕರ್ನಾಟಕದ ರಾಜಕಾರಣದಲ್ಲಿ, ಮೇಲೆ ಬರಲು ಸಾಧ್ಯವಾಗಿಲ್ಲ ಆದರೆ ಕೊರಮ

ನಾಯಕರು ಸಣ್ಣ ಹಿಡುವಳಿದಾರರಾದರು ಇಲ್ಲಿನ ಹಿಡುವಳಿಗೆ ದುಬಾರಿಯಾದ ಬೆಲೆಯಿರುವುದರಿಂದ ಇವರಲ್ಲೂ ಸಹ ಸಾಕಷ್ಟು ಪ್ರಗತಿ ನೋಡಬಹುದು.

ಉದ್ಯೋಗದ ಸ್ವರೂಪ:

ಸಣ್ಣ ಹಿಡುವಳಿಗಳೇ ಇಂದು ಹೆಚ್ಚು ಹಣ ತರುವ ಹಿಡುವಳಿಗಳಾಗಿವೆ, ಯಾಕೆಂದರೆ ಈಗಾಗಲೆ ಇಲ್ಲಿ ರಿಯಲ್ ಎಸ್ಟೇಟ್ ದಂದೆ ಪ್ರಾರಂಭವಾಗಿದೆ, ರಿಯಲ್ ಎಸ್ಟೇಟಿನಲ್ಲಿ ತೊಡಗಿಸಿಕಂಡಿರುವವರ ಸಂಖ್ಯೆ ಸಾಕಷ್ಟು ಇದೆ ಇಲ್ಲಿ ಸಮೀಕ್ಷೆ ಮಾಡಿದ ಪ್ರಕಾರ 30 ಜನರಲ್ಲಿ ರಿಯಲ್ ಎಸ್ಟೇಟ್ ನಲ್ಲಿ ತೊಡಗಿಸಿಕೊಂಡಿರುವವರು ಪರೋಕ್ಷ ಮತ್ತು ಪ್ರತ್ಯೇಕವಾಗಿ 18 (60%) ಜನ ಉಳಿದಂತ 12 ಜನರಲ್ಲಿ 6 (20%) ಜನ ಕೃಷಿ ಕೂಲಿಗಳು 6 (20%) ಜನ ಗಾರೆ ಕೆಲಸ ಪೇಯಿಂಟಿಂಗ್ ಮುಂತಾದ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ ಇದು ಬೆಂಗಳೂರಿನ ಭಾಗವಾಗಿರುವುದರಿಂದ ಬಹಳಷ್ಟು ಮಂದಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆ ಹೀಗೆ ತೊಡಗಿಸಿಕೊಂಡಿರುವುದರಿಂದ, ಇವರು ಹೆಚ್ಚು ಹಣದ ವಹಿವಾಟು ನಡೆಸುತ್ತಾರೆ, ಸಮೀಕ್ಷೆಯಲ್ಲಿ ಒಬ್ಬ ವ್ಯಕ್ತಿಯ ಅಭಿಪ್ರಾಯದ ಪ್ರಕಾರ, 2 ಎಕರೆ ಜಮೀನನ್ನು 1.5 ಕೋಟಿಗಳಿಗೆ ಬೇರೆ ವ್ಯಕ್ತಿಗೆ ಮಾರಿದ ಆ ವ್ಯಕ್ತಿ ಆರು ತಿಂಗಳ ತರುವಾಯ ಅದೇ ಜಮೀನನ್ನು 2 ಕೋಟಿ ರೂಪಾಯಿಗಳಿಗೆ ಮಾರಿದ್ದಾನೆ, ಆರು ತಿಂಗಳಲ್ಲೇ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಈ ವ್ಯಕ್ತಿ 50 ಲಕ್ಷ ರೂಪಾಯಿಗಳನ್ನು ಪಡೆದಿದ್ದಾನೆ, ಆದ್ದರಿಂದ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಕೈ ಹಾಕಿದವರು ಯಾರು ಸಹ ಹಿನ್ನಡೆ ಅನುಭವಿಸಿಲ್ಲ , ರಿಯಲ್ ಎಸ್ಟೇಟ್ ವ್ಯವಹಾರ ಮಾಡಲು ಮೂಲ ಬಂಡವಾಳದ ಅವಶ್ಯಕತ ಇಲ್ಲ, ಯಾಕೆಂದರೆ ಇಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡಿದರೆ ಶೇ. 10 ರಷ್ಟು ಕಮೀಷನ್ ಸಹ ಸಿಗುತ್ತದೆ, ಆದರೆ ಇಲ್ಲಿರುವ ತೊಂದರೆ ಎಂದರೆ, ಗ್ರಾಮಾಡಳಿತ ಹಾಗೂ ಬಿಡಿಎ ಅಧಿಕಾರಿಗಳ ಆಸ್ಥೆಯಿಂದ ಸ್ನೇಹ ಸಂಬಂಧಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬರಬೇಕು ಇಲ್ಲಿ ಬಹುತೇಕ ಜನ ಕೃಷಿಯನ್ನು ಅವಲಂಬಿಸಿದ್ದರು ರಿಯಲ್ ಎಸ್ಟೇಟ್ ವ್ಯವಹಾರ ಆಕರ್ಷಣೀಯವಾಗಿದೆ.

ರಿಯಲ್ ಎಸ್ಟೇಟಿನ ಮಧ್ಯವರ್ತಿಯಾಗಿ ಮ್ಯಾನೇಜರ್ ಗಳಾಗಿ ಕೆಲಸ ನಿರ್ವಹಿಸುವುದು ಹೆಚ್ಚು ಲಾಭದಾಯಕ 20 ವರ್ಷಗಳ ಹಿಂದೆ ಬಾಡಿಗೆ ಮನೆಗಳನ್ನು, ನಿವೇಶನಗಳನ್ನು ಕೊಳ್ಳುವುದು, ಮಾರುವುದಕ್ಕಷ್ಟೆ ಸೀಮಿತವಾಗಿದ್ದ ರಿಯಲ್ ಎಸ್ಟೇಟನ್ನು ವ್ಯವಹಾರ ಈಗ ಇದರ ಜೊತೆ ಕೃಷಿ ಭೂಮಿಯನ್ನು ಕೊಳ್ಳುವುದು, ಅದನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವದು ಮತ್ತು ನಿವೇಶನಗಳಾಗಿ ಮಾರ್ಪಡಿಸುವುದು, ಪ್ಲಾಟ್ ಗಳನ್ನು ಕಟ್ಟಿಸುವುದು ಹಾಗೂ ಅವುಗಳನ್ನು ಮಾರುವುದು ಒಂದು ಮುಖ್ಯ ಕಸಬಾಗಿ ರೂಪುಗೊಂಡಿದೆ. ಅದೇ ಮಾದರಿ ಅಭಿವೃದ್ಧಿಯನ್ನು ಇಲ್ಲಿ ಕಾಣಬಹುದಾಗಿದೆ. ಕೃಷಿ ಮೇಲೆ ಅವಲಂಬಿತರಾಗಿರುವ 107 ಕುಟುಂಬಗಳಿದ್ದರೂ ಇವರು ಬಹುತೇಕರು ಸಣ್ಣ ಹಿಡುವಳಿದಾರರಾಗಿರುವುದರಿಂದ ಇದರ ಜೊತೆಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ವೈವಿಧ್ಯಕರಿಸಿ ಕೊಂಡಿದ್ದಾರೆ. ಈಗಾಗಲೆ ತಿಳಿದಿರುವಂತೆ ಕೃಷಿಯ ಮೇಲೆ ಅವಲಂಬಿತರಾಗಿರುವವರು ಸಾಕಷ್ಟು ಇದ್ದರು, ಇವರಲ್ಲಿ ರಿಯಲ್ ಎಸ್ಟೇಟ್ ಕೆ.ಆರ್. ಮಾರ್ಕೆಟ್

ನಲ್ಲಿ ಮಂಡಿ ಹೊಂದಿರುವವರು ಇದ್ದಾರೆ, ಕಂಟ್ರಾಕ್ಟರುಗಳು ಸಹ ಇದ್ದಾರೆ, ಇದರ ಜೊತೆಗೆ ಕೃಷಿ ಕೂಲಿಗಳು, ಗಾರೆ ಮೇಸ್ತ್ರಿಗಳು, ಪೇಂಟರ್ ಗಳು ಸಹ ಇದ್ದಾರೆ ಯಾರು ಸಹ ತಮ್ಮ ಸಾಂಪ್ರಾದಾಯಿಕ ಕೆಲಸಗಳನ್ನು ಮಾಡುತ್ತಿಲ್ಲ ತಿಗಳರಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಕೃಷಿಕರು ಇದ್ದಾರೆ. ಇವರು ತರಕಾರಿ ಬೆಳೆಗಳನ್ನು ಬೆಳೆಯುವದು ಹಾಗೂ ಹೂವ್ವಿನ ಬೆಳೆಗಳನ್ನು ಬೆಳೆದು ಹತ್ತಿರದ ಕೆ.ಆರ್ ಮಾರುಕಟ್ಟೆಯ್ಲಲಿ ಮಾರಾಟ ಮಾಡುತ್ತಾರೆ. ಮುಂಗಾರಿನಲ್ಲಿ ರಾಗಿ, ಭತ್ತ, ಬೆಳೆಯುತ್ತಾರೆ ಹಿಂಗಾರಿನಲ್ಲಿ ತೊಗರಿ ಹೂವಿನ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಬಹಳಷ್ಟು ಜನ ಸಣ್ಣ ಅತಿ ಸಣ್ಣ ರೈತರೇ ಇಲ್ಲ ವಿಪುಲರಾಗಿರುವುದು 185 ಕುಟುಂಬಗಳಲ್ಲಿ 90 ಕುಟುಂಬಗಳು ಅಂದರೆ ಶೇ. 51 ರಷ್ಟು 0.5 ಎಕರೆಗಿಂತ ಕಡಿಮೆ ಇರುವವರು 1-2 ಎಕರೆ ಇರುವವರು (22%) 40 ಕುಟುಂಬಗಳು 2-5 ಎಕರೆ ಇರುವರು 14.28 % 25 ಕುಟುಂಬಗಳು 5 ಎಕೆರೆಗೆ ಮೇಲ್ಪಟ್ಟು ಇರುವವರು 5 (2.8%) ಕುಟುಂಬಗಳು 10 ಎಕರೆಗಿಂತ ಜಾಸ್ತಿ ಇರುವವರು 15 (8.5%) ಕುಟುಂಬಗಳು ಇಲ್ಲಿನ ಬೆಳೆ ಪದ್ಧತಿಯನ್ನು ಈಗಾಗಲೆ ತಿಳಿದುಕೊಂಡಿದ್ದೇವೆ. ರೈತರು ಮುಂಗಾರಿನಲ್ಲಿ ಹೆಚ್ಚು ಬೆಳೆ ಬೆಳೆಯುತ್ತಾರೆ. ಇವರು ಹಿಂಗಾರನ್ನು ಅವಲಂಬಿಸಿಲ್ಲ, ಕಲ್ಲಿನ ಬಾವಿಗಳು, 13 (35%) ಸಂಖ್ಯೆಯಷ್ಟು ಇವೆ ಈ ಬಾವಿಗಳಲ್ಲೇನು ನೀರು ಇರುವುದಿಲ್ಲ. ಈ ಬಾವಿಗಳು ಒಣಗಿ ಹೋಗಿವೆ. ಈ ಬಾವಿಗಳು ನಿರುಪಯುಕ್ತವಾಗಿವೆ, ಅಂತರ್ಜಲ ಮಟ್ಟ ಕುಸಿದಿರುವುದರಿಂದ, ಈ ಬಾವಿಗಳಲ್ಲಿ ನೀರು ಇರುವುದಿಲ್ಲ. ಹಾಗೂ ಮಳೆ ಬಂದ ವರ್ಷ ಮಾತ್ರ ಈ ಬಾವಿಗಳು ತುಂಬಿರುತ್ತವೆ, ಆದರೆ ಮಳೆ 3-4 ವರ್ಷಗಳಿಗೊಮ್ಮ ಬರುವುದರಿಂದ, ಈ ಬಾವಿಗಳು ಒಣಗಿ ಹೋಗುತ್ತವೆ, ಆದ್ದರಿಂದ ಕೃಷಿಗೆ ಈ ಬಾವಿಗಳಿಂದ ಯಾವುದೇ ಉಪಯೋಗವಿಲ್ಲ, ಅಂತರ್ಜಲ ಕುಸಿದಿರುವುದರಿಂದ ಈಬಾವಿಗಳಲ್ಲಿ ಹೂಳೆತ್ತಿದ್ದರೂ ನೀರು ಸಿಗುವುದಿಲ್ಲ. ಆದ್ದರಿಂದ ಈ ಬಾವಿಗಳನ್ನು ಸುಮ್ಮನೆ ಯಾವುದೇ ರಿಪೇರಿ ಮಾಡದೆ ಹಾಗೆ ರೈತರು ಬಿಟ್ಟಿದ್ದಾರೆ ಈ ಬಾವಿಗಳಲ್ಲಿ ನೀರು ಒರತೆಯೇ ಇಲ್ಲ ಎಂದು ಸಮೀಕ್ಷೆಯಲ್ಲಿ ರೈತರು ಹೇಳಿದರು ಆದ್ದರಿಂದ ಅಂತರ್ಜಲ ಮಟ್ಟ ಯಾವ ಹಂತಕ್ಕೆ ತಲುಪಿದೆ ಎಂಬುದು ಸ್ಪಷ್ಟವಾಗಿದೆ. ಅಂತರ್ಜಲ ಕುಸಿಯಲು ರೈತರು ಮಳೆ ನೀರನ್ನು ಹಿಂಗಿಸುವ ಹೊಂಡಗಳನ್ನು ಮಾಡುತ್ತಿಲ್ಲ, ಮಳೆ ನೀರು ಹಿಂಗಿಸಿ, ಅಂತರ್ಜಲ ಹೆಚ್ಚಾಗುವಂತೆ ಮಾಡುವ ತಂತ್ರಜ್ಞಾನವನ್ನು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಯವರು ಮಾಡುತ್ತಿಲ್ಲ ಇಲ್ಲಿ ಅಲ್ಲಲ್ಲಿ 15 ಕುಂಟೆಗಳಿವೆ ಈ ಕುಂಟೆಗಳು ಮಳೆ ಬಂದಾಗ ತುಂಬಿದ್ದು ಉಳಿದ ವೇಳೆ ಒಣಗಿ ಹೋಗುತ್ತವೆ, ಹೀಗೆ ಒಣಗಿ ಹೋಗುವ ಕುಂಟೆಗಳಲ್ಲಿ ನೀರನ್ನು ಸಂಗ್ರಹಿಸಲು ಕುಂಟೆಗಳಿಂದ ಹೂಳೆತ್ತುವ, ಕಾರ್ಯಕ್ರಮ ರೂಪಿಸಿಲ್ಲ ಆದ್ದರಿಂದ ಅಂತರ್ಜಲ ಮಟ್ಟ ಕುಸಿದಿದೆ ರೈತರೂ ಸಹ ತಮ್ಮ ಹೊಲಗಳಲ್ಲಿ ಹೊಂಡಗಳನ್ನು ಮಾಡಿ ನೀರು ಸಂಗ್ರಹಿಸುವ ಇಚ್ಛಾ ಶಕ್ತಿ ಇಲ್ಲ. ಆದ್ದರಿಂದ ಮಳೆ ಬಂದಾಗ ನೀರನ್ನು ಸಂಗ್ರಹಿಸಿ ಅಂತರ್ಜಲ ಹೆಚ್ಚಿಸುವ ಕಾರ್ಯಕ್ರಮಗಳನ್ನು ಸರಕಾರ ಹಾಕಿಕೊಂಡಿಲ್ಲ.

ನೀರಿನ ಮೂಲಗಳು:

ಇಲ್ಲಿ ಕೊಳವೆ ಬಾವಿಗಳ ಸಂಖ್ಯೆ 25 (65%) ಮೀರಿಸಿ ಈ ಸಂಖ್ಯೆ ಮುಂದಿನ ವರ್ಷದಲ್ಲಿ ಇನ್ನೂ ಹೆಚ್ಚಾಗುವ ಸಂಭವ ಇದೆ ಆದರೆ ಕೊಳವೆ ಬಾವಿಗಳಲ್ಲಿ ನೀರಿಗಾಗಿ 800 ಅಡಿಯಿಂದ 1000 ದ ಅಡಿಯವರೆಗೂ ಕೊರೆಸಬೇಕಾಗುತ್ತದೆ. ಆದ್ದರಿಂದ ರೈತರಿಗೆ ಈ ನೀರನ್ನ ತೆಗೆದುಕೊಳ್ಳುವ ಆಸಕ್ತಿ ಇಲ್ಲ, ಒಮ್ಮೊಮ್ಮೆ ಕೊಳವೆ ಬಾವಿಗಳಲ್ಲಿ 500 ಅಡಿಗೂ ಹೆಚ್ಚು ಕೊರೆಸಿದರು ನೀರು ಸಿಗದೆ ಕಂಗಾಲಾಗಿ ಕೊಳವೆ ಬಾವಿಕೊರೆಸಲು ಹಿಂದು ಮುಂದು ನೋಡುತ್ತಾರೆ. ಆದ್ದರಿಂದ ಸಮೀಕ್ಷೆ ಮಾಡಿದ 30 ಜನ ರೈತರಲ್ಲಿ ಕೊಳವೆ ಬಾವಿ ಕೊರೆಸಲು 18 (60%) ಜನ ರೈತರು ಆಸಕ್ತಿ ತೋರಿಸಿದರೆ ಉಳಿದ 12 (40%) ಜನ ರೈತರು ಕೊಳವೆ ಬಾವಿಗಳನ್ನು ತೋಡಿಸಲು ನಿರಾಸಕ್ತರಾಗಿದ್ದಾರೆ, ಆದ್ದರಿಂದ ಆಸಕ್ತ ರೈತರ ಸಂಖ್ಯೆಯೂ ಜಾಸ್ತಿ ಇದೆ, ನಿರಾಸಕ್ತಿ ರೈತರ ಸಂಖ್ಯೆ ಗಮನಾರ್ಹವಾಗಿದೆ ಆದ್ದರಿಂದ ಎಲ್ಲಾ ಗ್ರಾಮಗಳು ಕಂಡು ಬರುವ ಸರ್ವೇ ಸಾಮಾನ್ಯ ಅಂಶವೆಂದರೆ ಅಂತರ್ಜಲದ ಕುಸಿತ, ಹೀಗೆ ಅಂತರ್ಜಲ ಕುಸಿಯುವುದರಿಂದ ಕೃಷಿಗೆ ಇರಲಿ, ಕುಡಿಯುವ ನೀರಿಗೂ ಪರದಾಡಬೇಕಾದ ಸ್ಥಿತಿ ನಿರ್ಮಾಣ ಆಗುತ್ತದೆ. ಇಲ್ಲಿ ಕುಡಿಯುವ ನೀರಿಗೆ ಸದ್ಯಕ್ಕೇನೂ ತೊಂದರೆ ಇಲ್ಲ ಇಲ್ಲಿ ಪಂಚಾಯಿತಿಯ ಮೂರು ಕೊಳವೆ ಬಾವಿಗಳು ಇವೆ, ಒಂದು ನೀರಿನ ಟ್ಯಾಂಕ್ ಇದೆ, ಅಲ್ಲಲ್ಲಿ ನಲ್ಲಿಗಳೂ ಇವೆ, ಆದ್ದರಿಂದ ರೈತರಿಗೆ ಕುಡಿಯುವ ನೀರಿಗೆ ಯಾವುದೇ ತೊಂದರೆ ಇಲ್ಲ. ಕುಡಿಯುವ ನೀರು ಸರಬರಾಜಿಗೆ ಗ್ರಾಮ ಪಂಚಾಯಿತಿಗೆ ಸರಕಾರದಿಂದ 7 ಲಕ್ಷ ಅನುದಾನ ಬಂದಿದೆ, ಈಗ ಕುಡಿಯುವ ನೀರಿನ ಸರಬರಾಜಿನ ಗುಣಮಟ್ಟವನೇನು ಕಾಯ್ದಿಟ್ಟುಕೊಳ್ಳುವ ಕಾರ್ಯಕ್ರಮ ಶುರು ಮಾಡಲಾಗುವುದು ಎಂದು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಹೇಳಿದರು. ಗುಣಾತ್ಮಕತೆಯೆಂದರೆ ನಲ್ಲಿಗಳಿಗೆ, ಕೊಳವೆ ಬಾವಿಗಳಿಂದ ನೀರನ್ನು ಬಿಡುವ ಮೊದಲು ಶುದ್ದೀಕರಿಸಿ ಬಿಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈಗ ಸದ್ಯಕ್ಕೆ ಹಾಗೆಯೇ ಟ್ಯಾಂಕ್ ನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಎಂದು ತಿಳಿಸಿದರು. ಇಲ್ಲಿ ಬಹಳಷ್ಟು ಜನ ಕುಡಿಯುವ ನೀರಿನ ಬಗ್ಗೆ ಆತಂಕ ವ್ಯಕ್ತಪಡಿಸಿದರು, ಯಾಕೆಂದರೆ ಅಂತರ್ಜಲ ಕುಸಿದರೆ ಎಲ್ಲಿ ಕುಡಿಯುವ ನೀರಿಗೆ ಸಂಚಕಾರ ಬರುತ್ತದೆ ಎಂದು ಆತಂಕ, ಆದ್ದರಿಂದ ಈ ಆತಂಕದ ಬಗ್ಗೆ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಯಾವುದೆ ಸ್ಪಷ್ಟವಾದ ಉತ್ತರ ನೀಡಲು ನಿರಾಕರಿಸಿದರು ಆದ್ದರಿಂದ ಒಟ್ಟಾರೆ ಕೋಲಾರ ಜಿಲ್ಲೆಯ ಎರಡು ಗ್ರಾಮಗಳ ಅಧ್ಯಯನದಿಂದ ಕಂಡುಬರುವುದೇನೆಂದರೆ ಕುಡಿಯುವ ನೀರಿಗೆ ಸದ್ಯಕ್ಕೆ ಆತಂಕವಿಲ್ಲದೇ ಇದ್ದರೂ, ಹೀಗೆ ಅಂತರ್ಜಲ ಕುಸಿಯುತ್ತಾ ಹೋದರೆ ಇದನ್ನು ಸರಿಪಡಿಸುವ ಮುಂದಿನ ಯೋಜನೆಯ ಬಗ್ಗೆ ಯಾರ ಬಳಿಯಲ್ಲೂ ಉತ್ತರವಿಲ್ಲ ಹಾಗೆಯೇ ಬಿಳಿಜಾಜಿಯಲ್ಲೂ ಮುಂದಿನ ಯೋಜನೆಗಳ ಬಗ್ಗೆ ಮಾಹಿತಿ ಇಲ್ಲ. ಆದ್ದರಿಂದ ಕುಡಿಯುವ ನೀರು ಪ್ರಮುಖ ಸಮಸ್ಯೆಯಾಗೇನು ಉಳಿದಿಲ್ಲ, ಮುಂದುವರೆದ ಹಳ್ಳಿಗಳನ್ನು ಹಿಂದುಳಿದ ಹಳ್ಳಿಗಳಲ್ಲೂ ಕುಡಿಯುವ ನೀರು, ವಿದ್ಯುಚ್ಛಕ್ತಿಯಂತೆ ಮೂಲ ಸೌಕರ್ಯಗಳು ಅಭಿವೃದ್ಧಿ ಗೊಂಡಿದೆ. ಆದರೆ ಗ್ರಾಮದ ಮುಖ್ಯ

ಸಮಸ್ಯೆಗಳೆಂದರೆ, ನಿರುದ್ಯೋಗ, ಬಡತನ, ಇಲ್ಲಿ ಪಕ್ಕ ರಸ್ತೆಗಳು ಇವೆ, ಬಿಳಿ ಜಾಜಿಯಲ್ಲೂ ಪಕ್ಕ ರಸ್ತೆಯಿದೆ, ಈಗ ಮತ್ತೆ ಡಾಂಬರೀಕರಣದ ಕೆಲಸ ಪ್ರಾರಂಭವಾಗಿದೆ. ರಸ್ತೆಗಳು ಸುಮಾರಾಗಿವೆ. ಹೆಸರು ಘಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಈಗ ಡಾಂಬರೀಕರಣ ಕೆಲಸ ನಡೆಯುತ್ತದೆ ಈ ಡಾಂಬರೀಕರಣ ಮುಗಿದ ಮೇಲೆ ಒಳ್ಳೆ ಗುಣಾತ್ಮಕ ರಸ್ತೆಯಾಗಲಿದೆ ಎಂದುಗ್ರಾಮ ಪಂಚಾಯಿತಿ ಕಾರ್ಯದರ್ಶಿ ತಿಳಿಸಿದರು.

ಗ್ರಾಮದ ಅಭಿವೃದ್ಧಿ:

ಇಲ್ಲಿ ಪಕ್ಕ ಮನೆಗಳು ಹೆಚ್ಚಾಗಿದ್ದರೂ, ಅಷ್ಟೇ ಸಂಖ್ಯೆಯಲ್ಲಿ ಕಚ್ಚಾ ಮನೆಗಳು ಇವೆ ಎಂಬುದು, ಮತ್ತೊಂದು ಅಂಶ ಪಕ್ಕ ಮನೆಗಳೆಂದರೆ ಶೀಟ್ ಮನೆಗಳು ಹೆಚ್ಚಾಗಿವೆ, ಹೆಂಚಿನ ಮನೆಗಳಿವೆ, ಇವನ್ನು ಸಿಮೆಂಟಿನಿಂದ ಕಟ್ಟಲಾಗಿದೆ. ಕಚ್ಚಾ ಮನೆಗಳೆಂದರೆ ಮಣ್ಣಿನಿಂದ ಕಟ್ಟಲಾಗಿರುವ ಮನೆಗಳು. ಹೀಗೆ ಮಣ್ಣಿನಿಂದ ಕಟ್ಟಿದ ಮನೆಗಳು ಒಂದು ಹಾಲ್ ಮತ್ತು ಅಡುಗೆ ಮನೆಯನೇನು ಹೊಂದಿದೆ, ಪಕ್ಕಾ ಮನೆಗಳೆಂದರೆ ಹಾಲ್, ಬೆಡ್ ರೂಮ್ ಅಡುಗೆ ಮನೆಯನ್ನು ಹೊಂದಿದೆ, ಇಲ್ಲಿ ಶೌಚಾಲಯಗಳ ಸಮಸ್ಯೆ, ಬಹಳಷ್ಟು ಮನೆಗಳಿಗೆ ಶೌಚಾಲಯಗಳು ಇಲ್ಲ, ಶೌಚಾಲಯಗಳು 50 ರಿಂದ 60 ಮನೆಗಳಿಗೆ ಇದೆ, ಉಳಿದಂತವರು ಬಯಲಿಗೆ ಹೋಗುವುದು ಅನಿವಾರ್ಯ ಸರ್ಕಾರಗಳು ಇದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಗ್ರಾಮ ಪಂಚಾಯಿತಿ ಸಮುದಾಯ ಶೌಚಾಲಯಗಳನ್ನು ನಿರ್ಮಾಣ ಮಾಡಿಲ್ಲ, ಆದ್ದರಿಂದ ನೈರ್ಮಲ್ಯೀಕರಣದ ಬಗ್ಗೆ ಗ್ರಾಮ ಪಂಚಾಯಿತಿ ಹೆಚ್ಚು ಆಸ್ಥೆ ವಹಿಸಿಲ್ಲ, ಇದರಿಂದಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡದೆ ಇರುವುದೇ ಸ್ಪಷ್ಟವಾಗಿದೆ. ಬಿಳಿ ಜಾಜಿ ಗ್ರಾಮ ಬೆಂಗಳೂರು ನಗರದ ವ್ಯಾಪ್ತಿಗೆ ಬಂದರೂ ಒಂದು ಕೊಳಚಿ ಪ್ರದೇಶದ ತರಹ ಇದೆ, ಇಲ್ಲಿ ಸಣ್ಣ ಸಣ್ಣ ಶೀಟ್ ಮನೆಗಳ ಮಧ್ಯೆ ಅಲ್ಲೊಂದು ಇಲ್ಲೊಂದು ಸುಸಜ್ಜಿತ ಮನೆಗಳು ಇವೆ, ಈ ಸುಸಜ್ಜಿತ ಮನೆಗಳನ್ನು ಕಂಟ್ರಾಕ್ಟರುಗಳು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವವರು ಕಟ್ಟಿಸಿದ್ದಾರೆ, ಆದ್ದರಿಂದ ಸುಸಜ್ಜಿತ ಮನೆಗಳು ಮಾಮೂಲಿ ಕೆಳ ಮಧ್ಯಮ ವರ್ಗದವರು ಕಟ್ಟಿಸಿರುವ ಶೀಟ್ ಮನೆಗಳಿಗಿಂತ ಹೆಚ್ಚು ಸೌಲಭ್ಯ ಹಾಗೂ ಆಕರ್ಷಣೆಯನ್ನು ಹೊಂದಿವೆ.

ಆದ್ದರಿಂದ ಇಲ್ಲಿ ಮನೆಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಸುಸಜ್ಜಿತ ಸಿಮೆಂಟ್ ಮನೆಗಳು ಹಾಗೂ ಸಿಮೆಂಟ್ ನಲ್ಲಿ ಕಟ್ಟಿಸಿರುವ ಶೀಟ್ ಮನೆಗಳು, ಕೆಳ ಮಧ್ಯಮ ವರ್ಗಗಳು ಮಣ್ಣಿನಲ್ಲಿ ಕಟ್ಟಿಸಿರುವ ಶೀಟ್ ಮನೆಗಳು. ಪಕ್ಕ ಮನೆಗಳೆಂದರೆ ಸಿಮೆಂಟ್ ನಿಂದ ಕಟ್ಟಿಸಿದ ಸುಸಜ್ಜಿತ ಮನೆಗಳು ಹಾಗೂ, ಸಿಮೆಂಟ್‌ನಲ್ಲಿ ಕಟ್ಟಿಸಿಯದ ಶೀಟ್ ಮನೆಗಳು. ಕಚ್ಚಾ ಮನೆಗಳೆಂದರೆ ಮಣ್ಣಿನಲ್ಲಿ ಕಟ್ಟಿಸಿದ ಶೀಟ್ ಮನೆಗಳು. ಇಲ್ಲಿ ಕಚ್ಚಾ ಮನೆಗಳೆಂದರೆ, ಮಣ್ಣಿನಿಂದ ಕಟ್ಟಿಸಿದ ಶೀಟ್ ಮನೆಗಳ ಸುಮಾರು 100 ಮನೆಗಳಿವೆ ಉಳಿದ 60 ಮನೆಗಳು ಸಿಮಂಟ್‌ನಿಂದ ಕಟ್ಟಿಸಿದ ಶೀಟ್ ಮನೆಗಳು 15 ಮನೆಗಳು, ಸುಸಜ್ಜಿತ

ಮನೆಗಳು ಆದ್ದರಿಂದ ಬಿಳಿ ಜಾಜಿ ಬೆಂಗಳೂರು ನಗರ ಪ್ರದೇಶಕ್ಕೆ ಸೇರಿದ್ದರೂ ಅಭಿವೃದ್ಧಿ ಹೊಂದುವಲ್ಲಿ ವಿಫಲಗೊಂಡಿದೆ.

ನಿರುದ್ಯೋಗ ಸಮಸ್ಯೆ ಬಡತನ:

ಇಲ್ಲಿ ನಿರುದ್ಯೋಗ ಸಮಸ್ಯೆ ಹಾಗೂ ಬಡತನ ವಿಪುಲವಾಗಿದೆ. ಇಲ್ಲಿ ಸಣ್ಣ ಹಿಡುವಳಿದಾರರು ವಿಪುಲವಾಗಿ ಇರುವುದರಿಂದ, ಇಲ್ಲಿ ಕೃಷಿ ಹಿಡುವಳಿಗಳು ಲಾಭದಾಯಕವಾಗಿಲ್ಲ, ಬಹುತೇಕ ಸಣ್ಣ ಹಿಡುವಳಿದಾರರು ಕೂಲಿ ಕೆಲಸಗಳಿಗೆ ಹೋಗುತ್ತಾರೆ, ಪೀಣ್ಯದಲ್ಲಿರುವ ಕೈಗಾರಿಕಾ ಸಮುಚ್ಚಯದಲ್ಲಿ, ದೊಡ್ಡ ರೈತರ ಹೊಲಗಳಲ್ಲಿ, ಜೊತೆಗೆ ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣದ ಕೆಲಸಗಳಿಗೆ, ಹೋಟೆಲ್ ಸರ್ವರ್‌ಗಳಾಗಿ, ಮುಂತಾದ ಶ್ರಮದಾಯಕವಾದ ಕೆಲಗಳಿಗೆ ವ್ಯವಸಾಯದ ಜೊತೆಗೆ ಇಂತಹ ಕೆಲಸಗಳಿಗೆ ಹೋಗುತ್ತಾರೆ. ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ 23 (76.66%) ಜನ ಕೂಲಿಗಳು 5 (16.66%) ಜನ ವ್ಯವಸಾಯಗಾರರು, 2 (6.66%) ಜನ ಕೃಷಿ ಜೋತೆಗೆ ಕಂಟ್ರಾಕ್ಟರುಗಳು, ಇಲ್ಲಿ ಉದ್ಯೋಗ ಸ್ವರೂಪವನ್ನು ನೋಡಿದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಮ್ಮಿಕ್ಕೊಂಡಿರುವ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ, ಬಡತನ ನಿರ್ಮೂಲನೆ ಮಾಡುವಲ್ಲಿ ಸೋತಿರುವುದು ವೇದ್ಯವಾಗುತ್ತದೆ. ಬೆಂಗಳೂರಿನಂತ ಮಹಾನ್ ನಗರದ ಭಾಗವಾಗಿರುವ ಬಿಳಿ ಜಾಜಿಯಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ. ಸರಕಾರಿ ಮತ್ತು ಅರೆ ಸರಕಾರಿಯಲ್ಲಿ ಕೆಲಸಗಳಲ್ಲಿ ಇರುವವರು 200 ಜನ ಎಂದು ಪ್ರಾಥಮಿಕ ಸಮೀಕ್ಷೆಯಲ್ಲಿ ತಿಳಿದುಬಂದಿದೆ 23 (76.66%) ಜನ ಕೃಷಿ ಕೂಲಿಗಳು ತಮ್ಮ ಹಳ್ಳಿಯಲ್ಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ, 5 (16.66%) ಜನರು ಸ್ವಂತ ವ್ಯವಸಾಯದ ಮೇಲೆ ನಿಂತಿದ್ದಾರೆ. ಇವರದು ಸುಮಾರು 2 ರಿಂದ 3 ಎಕರೆ ಜಮೀನಿದೆ. ಉಳಿದ 2 (6.66%) 5 ಎಕರೆಗಳಿಗಿಂತ ಮೇಲ್ಪಟ್ಟು ಜಮೀನಿದೆ ಇವರು ವ್ಯವಸಾಯದ ಜೊತೆಗೆ ಇನ್ನಿತರ ಕಾರ್ಯಚಟುವಟಿಕೆಗಳನ್ನು ಕಂಟ್ರಾ ್ಯಕ್ಟರ್ ಮಾಡಿಸುತ್ತಾರೆ. ಸಣ್ಣ ಹಿಡುವಳಿದಾರರು ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಕೂಲಿ ಮಾಡುತ್ತಾರೆ. ರಿಕ್ಷಾ ಓಡಿಸುವವರು ಇದ್ದಾರೆ, ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಲು, ಉದ್ಯೋಗ ಸೃಷ್ಟಿಯಾಗುವಂತಹ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಬೇಕು. ಗುಡಿ ಕೈಗಾರಿಕೆಗಳು ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸರಕಾರ ಉತ್ತೇಜಿಸಬೇಕಾಗಿತ್ತು. ಆದರೆ ಈ ನಿಟ್ಟಿನಲ್ಲಿ ಸರಕಾರ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಕೃಷಿ ಬಿಟ್ಟು ಪರ್ಯಾಯ ಉದ್ಯೋಗ ಸೃಷ್ಟಿಯಾಗಿಲ್ಲ, ಇದರಿಂದಾಗಿ ಬಹಳಷ್ಟು ಜನ ಕೃಷಿ ಕೂಲಿಗಳಾಗಿ ದಿನಕ್ಕೆ ರೂ. 60-75 ಗಳವರೆಗೂ ಸಂಪಾದಿಸುತ್ತಾರೆ, ಆದರೆ ಇಂದಿನ ಹಣದುಬ್ಬರದ ಕಾಲದಲ್ಲಿ ಈ ಕೂಲಿ ತಮ್ಮ ದೈನಂದಿನ ಜೀವನ ನಿರ್ವಹಣೆಗೆ ಸಾಲದಾಗಿದೆ. ಆದ್ದರಿಂದ ಇವರು ರಿಯಲ್ ಎಸ್ಟೇಟ್ ಜಾಲದಲ್ಲೂ ಕೆಲಸ ಮಾಡುತ್ತಾರೆ. ಬಹುತೇಕರು ಹೊಲಗಳಲ್ಲಿ ರಿಯಲ್ ಎಸ್ಟೇಟ್ ನಲ್ಲಿ ಕೆಲಸ ವಿಲ್ಲದಾಗ ಕೂಲಿಗಳಾಗಿ ಕೆಲಸ ಮಾಡುತ್ತಾರೆ.

ರಿಯಲ್ ಎಸ್ಟೇಟ್ ಬಗ್ಗೆ ನಾನು ಈಗಾಗಲೆ ವಿವರಿಸಿರುವೆ, ಆದರೆ ಸರಕಾರಿ ಪರ್ಯಾಯ ಉದ್ಯೋಗ ಸೃಷ್ಟಿಯಲ್ಲಿ ಹಿಂದೆ ಬಿದ್ದಿರುವುದರಿಂದ ಇಲ್ಲಿ ಕೃಷಿ ಹೊರತು ಪಡಿಸಿ ಕೃಷಿಯೇತರ ಉದ್ಯೋಗ ಸೃಷ್ಟಿಯಾಗುವಲ್ಲಿ ವಿಫಲವಾಗಿದೆ. ಆದ್ದರಿಂದ ರಿಯಲ್ ಎಸ್ಟೇಟ್ ವ್ಯವಹಾರ ವರ್ಷ ಪೂರ್ತಿ ನಡೆಯದೆಯಿರುವುದರಿಂದ ಇವರು ಸಹ ಕೂಲಿಗಳಳಗಿ ಕೆಲಸ ಮಾಡಬೇಕಾಗಿದೆ. ಇಲ್ಲಿ ಇಟ್ಟಿಗೆ ಕಾರ್ಖಾನೆಯಾಗಲಿ ಹೆಂಚಿನ ಕಾರ್ಖಾನೆಗಳಾಗಲಿ ಯಾವುದು ಇಲ್ಲ. ಯಾಕೆಂದರೆ ಇಟ್ಟಿಗೆ ಕಾರ್ಖಾನೆ ಶ್ರಮದಾಯಕ ಹಾಗೂ ಇದು ಹೆಚ್ಚು ಜನರಿಗೆ ಉದ್ಯೋಗ ಸೃಷ್ಟಿಸುತ್ತದೆ ಆದರೆ ಇಲ್ಲಿ ಅಂತಹ ಚಟುವಟಿಕೆಗಳೇನು ಇಲ್ಲ, ಕೋಲಾರ ಜಿಲ್ಲೆಯ ಅರಹಳ್ಳಿ ಗ್ರಾಮದಲ್ಲಿ ಇಟ್ಟಿಗೆ ಕಾರ್ಖಾನೆ ಗಳು ಇವೆ, ಆದರೆ ಈ ಗ್ರಾಮದಲ್ಲಿ ಅಂತಹ ಕಾರ್ಖಾನೆಗಳೇನು ಇಲ್ಲ. ಇನ್ನು ಈಗ ಮನೆ ಕಟ್ಟಿಸುವುದಕ್ಕೆ ಹೆಂಚುಗಳನ್ನು ಬಳಸುವ ಪದ್ಧತಿ ಇಲ್ಲ ಇದಕ್ಕೆ ಬದಲಾಗಿ ದೊಡ್ಡ ಕಾರ್ಖಾನೆಗಳಲ್ಲಿ ಉತ್ಪಾದಿಸಲಾದ ಸಿಮೆಂಟ್ ಶೀಟ್ ಗಳು , ಆಸ್‌ಬೆಸ್ಟರ್ ಶೀಟ್ ಗಳನ್ನು ಬಳಸುವುದರಿಂದ ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಿದೆ. ಹಾಗೆಯೇ ಕರಕುಶಲಗಾರರು ಗ್ರಾಮದಲ್ಲಿ ಇಲ್ಲ. ಕರಕುಶಲ ವಸ್ತುಗಳು ಉತ್ಪಾದಿಸಿದರೆ ಅದಕ್ಕೆ ಮಾರುಕಟ್ಟೆ ಇಲ್ಲದಿರುವುದರಿಂದ ಯಾರು ಕರಕುಶಲ ಉತ್ಪನ್ನಗಳನ್ನು ಉತ್ಪಾದಿಸುವುದಿಲ್ಲ. ನೇಯ್ಗೆಯವರು ಬಣ್ಣ ಹಾಕುವುವವರು ಇಲ್ಲ ಹಾಗೆಯೇ ದೋಬಿಗಳು ಇಲ್ಲ. ಇಲ್ಲಿ ಯಾವುದೇ ಹೋಟೇಲ್ ಗಳು ಇಲ್ಲ, ಹೋಟೆಲ್ ಗೆ ಹೋಗಬೇಕಾದರೆ ಹೆಸರು ಘಟ್ಟಕ್ಕೆ ಬರಬೇಕು, ಆದ್ದರಿಂದ ಈ ಗ್ರಾಮ ರಿಯಲ್ ಎಸ್ಟೇಟಿನಲ್ಲಿ ದೊಡ್ಡ ಕುಳಗಳು ಇವರು 5-6 ಜನ ಶ್ರೀಮಂತರಾಗಿದ್ದಾರೆ ಉಳಿದಂತೆ ಬಹಳಷ್ಟು ಜನ ಬಡತನ, ಉದ್ಯೋಗ ಖಾತ್ರಿ ಇಲ್ಲದೆ ಬಳಲುತ್ತಿದ್ದಾರೆ ಆದರೆ ಗ್ರಾಮ ಪಂಚಾಯಿತಿ ಉದ್ಯೋಗ ಸೃಷ್ಟಿಯ ದೃಷ್ಟಿಯಿಂದ ನಿಷ್ಕ್ರಿಯವಾಗಿದೆ.

ದಿನಸಿ ಅಂಗಡಿಗಳು:

9 ದಿನಸಿ ಅಂಗಡಿಗಳು ಇವೆ, ಇಲ್ಲಿ ಪಟ್ಟಣದ ಪ್ರಭಾವ ಇರುವುದರಿಂದ ಬೆಂಗಳೂರು ಸಂಸ್ಕೃತಿ ಇದರ ಮೇಲೆ ಮೂಡಿರುವುದರಿಂದ ದಿನಸಿ ಅಂಗಡಿಗಳಲ್ಲೇ ಅಲ್ಲಿನ ಗ್ರಾಮಸ್ಥರು ಕೊಳ್ಳುತ್ತಾರೆ, ಆದರೆ ಬಹಳ ಕಡಿಮೆ ಪ್ರಮಾಣದ ಗ್ರಾಮಸ್ಥರು ಹೆಸರುಘಟ್ಟಕ್ಕೆ ಹೋಗಿ ದಿನಸಿ ಕೊಳ್ಳುವುದನ್ನು ಇಲ್ಲಿ ಕಾಣಬಹುದಾಗಿದೆ. ಆದರೆ ಬಿಳಿ ಜಾಜಿಯಲ್ಲಿ ನಾನು ಸಮೀಕ್ಷೆ ಮಾಡಿದ ಪ್ರಕಾರ ಯಾವುದೇ ಪಟ್ಟಣಕ್ಕೂ ಕಡಿಮೆ ಇರದಂತಹ ವ್ಯವಸ್ಥಿತ ದಿನಸಿ ಅಂಗಡಿಗಳು ಇವೆ. ಇಲ್ಲಿ ದೈನಂದಿನ ವಹಿವಾಟು ರೂ. 8000 ರಿಂದ ರೂ. 10000 ದವರೆಗೆ ಇದೆ, ಇಲ್ಲಿಯೇ ದಿನಸಿ ಕೊಳ್ಳಲು ಗ್ರಾಮಸ್ಥರು ಇಚ್ಚಿಸುವುದು ಹೆಸರು ಘಟ್ಟದಿಂದ ದ್ವಿಚಕ್ರದ ವಾಹನದಲ್ಲೊ ಅಥವಾ ರಿಕ್ಷಾದಲ್ಲೋ ಸಾಗಾಣಿಕೆ ಮಾಡಬೇಕಾಗುತ್ತದೆ. ಈ ಸಾಗಾಣಿಕೆ ವೆಚ್ಚವು ದುಬಾರಿ, ರಿಕ್ಷಾದಲ್ಲಿ ಹೆಸರು ಘಟ್ಟದಿಂದ ಬಿಳಿಜಾಜಿಗೆ ಬರಬೇಕಾದರೆ ರಿಕ್ಷಾದವರು ರೂ. 35 ರಷ್ಟು ತೆಗೆದುಕೊಳ್ಳುತ್ತಾರೆ, ಆದ್ದರಿಂದ ಬಹಳಷ್ಟು ಗ್ರಾಮಸ್ಥರು ಬಿಳಿಜಾಜಿಯಲ್ಲೇ ದಿನಸಿಯನ್ನು ಕೊಳ್ಳುತ್ತಾರೆ, ಅದೂ ಅಲ್ಲದೆ ಇಲ್ಲಿ ಸಾಲಕೇಳುವ ವ್ಯವಸ್ಥೆಯೂ ಸಹ ಇರುವುದರಿಂದ ಬಹುತೇಕ ಜನರು ಹೆಸರುಘಟ್ಟಕ್ಕೆ

ಹೋಗುವುದಿಲ್ಲ. ದಿನಸಿ ಅಂಗಡಿಗಳಲ್ಲಿ ಬಹಳಷ್ಟು ಗ್ರಾಮಸ್ಥರು ಸಾಲದ ಮೇಲೆಯೆ ದಿನಸಿಗಳನ್ನು ಪಡೆಯುತ್ತಾರೆ. ಹಣವಿದ್ದಾಗ ಸಾಲ ಚುಕ್ತಾ ಮಾಡುತ್ತಾರೆ, ಆದ್ದರಿಂದ ಬಹಳಷ್ಟು ಜನರು ಇಲ್ಲಿಯೇ ದಿನಸಿಗಳನ್ನು ಕೊಳ್ಳುತ್ತಾರೆ.

ಇಲ್ಲಿ ಎರಡು ಸಾರಾಯಿ ಅಂಗಡಿ ಇದೆ. ಸಾರಾಯಿ ಅಂಗಡಿಗಳು ಇರುವುದರಿಂದ ದಿನಕ್ಕೆ ಏನಿಲ್ಲವೆಂದರು ಒಂದು ಸಾರಾಯಿ ಅಂಗಡಿಗೆ ರೂ. 1500 ರಿಂದ ರೂ. 2000 ಸಾವಿರದವರೆಗೂ ವಹಿವಾಟು ನಡೆಯುತ್ತದೆ. ಬಹುತೇಕ ಕೂಲಿಗಳು ತಮ್ಮ ಅಂದಿನ ದುಡಿಮೆಯಲ್ಲಿ ಶೇ. 50 ರಿಂದ 60 ರಷ್ಟು ಸಾರಾಯಿಗೆ ಕೊಟ್ಟು ತಮಗೆ ದೈನಂದಿನ ಅವಶ್ಯಕತೆಗಳಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ದಿನಸಿ ಅಂಗಡಿಗಳಲ್ಲಿ ಸಾಲದ ಮೇಲೆ ಪಡೆಯುತ್ತಾರೆ. ಹೆಸರುಘಟ್ಟಕ್ಕೆ ದಿನಸಿಕೊಳ್ಳಲು ಹೋಗದೇ ಇರುವುದಕ್ಕೆ ಇದು ಒಂದು ಪ್ರಬಲ ಕಾರಣ. ಇಲ್ಲಿಯೂ ಸಹ ದಿನಸಿ ಅಂಗಡಿಗಳು ಸುಸಜ್ಜಿತವಾಗಿವೆ. ಹೀಗೆ ಸುಸಜ್ಜಿತ ವಾಗಿರುವುದರಿಂದ ಶ್ರೀಮಂತರು ಸಹ ಇದೇ ದಿನಸಿ ಅಂಗಡಿಗಳಲ್ಲಿ ತಿಂಗಳಿಗೆ ಬೇಕಾಗುವಷ್ಟು ದಿನಸಿಯನ್ನು ಕೊಳ್ಳುತ್ತಾರೆ, ಆದರೆ ಇವರು ಸಾಲದ ಮೇಲೆ ದಿನಸಿಕೊಳ್ಳುವುದಿಲ್ಲ. ಇವರು ಅಲ್ಲೆ ನಗದು ಕೊಟ್ಟ ದಿನಸಿಗಳನ್ನು ಕೊಳ್ಳುತ್ತಾರೆ ಹೀಗೆ ದಿನಸಿಕೊಳ್ಳುವವರನ್ನು ನಾನು ಸಮೀಕ್ಷೆ ಮಾಡಿದಾಗ, ಹೆಸರುಘಟ್ಟ ಹೋಗಿ ಬೆಂಗಳೂರಿನ ದಿನಸಿ ಅಂಗಡಿಗಳು ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳುವಂತೆ ಇಲ್ಲಿ ಗುಣಮಟ್ಟ ಕಾಯ್ದಿರಿಸುವುದರಿಂದ ಶ್ರೀಮಂತ ಬಡವ ಎಂಬ ತಾರತಮ್ಯವಿಲ್ಲದೆ, ಸ್ಥಳೀಯ ದಿನಸಿ ಅಂಗಡಿಗಳ ಗ್ರಾಹಕರಾಗಿದ್ದಾರೆ, ಆದರೆ ಹೆಸರು ಘಟ್ಟದ ದಿನಸಿ ಅಂಗಡಿಗಳಿಗೂ, ಇಲ್ಲಿನ ಅಂಗಡಿಗಳಿಗೂ ಬೆಲೆಯಲ್ಲಿ ಅಂತಹ ವ್ಯತ್ಯಾಸವು ಇರುವುದಿಲ್ಲ. ಬೆಲೆಯಲ್ಲಿ ಕಡಿಮೆ ಪ್ರಮಾಣದಲ್ಲಿ ವ್ಯತ್ಯಾಸವಿದ್ದರೂ ಬೆಂಗಳೂರು, ಹೆಸರುಘಟ್ಟದ ಅಂಗಡಿಗಳಿಗಿಂತ ಇಲ್ಲಿ 1 ರೂಪಾಯಿ ರೂ. 1.50 ರೂಪಾಯಿಯೂ ಜಾಸ್ತಿ ಇದ್ದರು, ಸಾಗಾಣಿಕೆಗೆ ತಗಲುವ ವೆಚ್ಚ, ಶ್ರಮ ಅದಕ್ಕಾಗಿ ಮೀಸಲಿಡುವ ವೇಳೆ ಇವೆಲ್ಲವುಗಳಿಂದಾಗಿ ಬಹಳಷ್ಟು ಗ್ರಾಮಸ್ಥರು ಇದೇ ಗ್ರಾಮದಲ್ಲಿ ದಿನಸಿಗಳನ್ನು ಕೊಳ್ಳುತ್ತಾರೆ, ಅದು ಅಲ್ಲದೆ ಗುಣಮಟ್ಟದಿಂದ ಕಳಪೆ ಸಾಮಗ್ರಿಗಳನ್ನೇನಾದರೂ ನೀಡಿದರೆ ತಕ್ಷಣ ವಾಪಸ್ಸು ಮಾಡುವುದಕ್ಕೆ ಅನುಕೂಲವಿರುವುದು ಸಹ ಬಹಳಷ್ಟು ಗ್ರಾಮಸ್ಥರು ಇಲ್ಲಿಯೇ ದಿನಸಿಕೊಳ್ಳುವುದನ್ನು ರೂಢಿಸಿಕೊಂಡಿದ್ದಾರೆ. ಹೆಸರು ಘಟ್ಟದಲ್ಲಿ ತಂದು ಅದನ್ನು ವಾಪಸ್ಸು ಮಾಡಬೇಕಾದರೆ ಮತ್ತೆ 25-30 ರೂಗಳನ್ನು ಖರ್ಚು ಮಾಡಿಕೊಂಡು ಹೋಗಬೇಕಾಗುತ್ತದೆ.

ಅಕ್ಷರಸ್ಥರು ಉದ್ಯೋಗ ಸೃಷ್ಠಿಯಲ್ಲಿ ವೈಫಲ್ಯ

ಬಿಳಿ ಜಾಜಿಯಲ್ಲಿ ನಿರಕ್ಷರಸ್ಥರ ಸಂಖ್ಯೆ ಕಡಿಮ ಇದೆ, ನಾನು ಸಮೀಕ್ಷೆ ಮಾಡಿದ ಪ್ರಕಾರ ಅಕ್ಷರಸ್ಥರು 27 (90%) ಜನ ಇದ್ದಾರೆ ನಿರಕ್ಷರಸ್ಥ 3 (10%) ಜನ ಇದ್ದಾರೆ, ಇಲ್ಲಿ ಕಂಡುಬರುವುದೇನೆಂದರೆ ವಯಸ್ಕರ ಶಿಕ್ಷಣ ಸಂಸ್ಥೆ ಇಲ್ಲಿ ಕೆಲಸ ಮಾಡುತ್ತಿದೆ. ವಯಸ್ಕರ ಶಿಕ್ಷಣ ಸಮಿತಿ ಕಳೆದ 5 ವರ್ಷಗಳ ಅವಧಿಯಲ್ಲಿ 300

ಕ್ಕೂ ಹೆಚ್ಚು ವಯಸ್ಕರರನ್ನು ಅಕ್ಷರಸ್ಥರನ್ನಾಗಿ ಮಾಡಿದೆ, ಇಲ್ಲಿ ಪ್ರತಿ ದಿನ ಸಂಜೆ 6 ರಿಂದ 9 ಗಂಟೆಯವರೆಗೆ ವಯಸ್ಕರಿಗೆ ತರಬೇತಿ ನೀಡಲಾಗುತ್ತದೆ. ವಯಸ್ಕರ ಶಿಕ್ಷಣ ಇಲಾಖೆ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಇಲ್ಲಿ ನಿರಕ್ಷರತೆಯ ಪ್ರಮಾಣ ಕುಸಿದಿದೆ. ಹೀಗೆ ಕುಸಿದಿರುವುದು ಗ್ರಾಮದ ಪ್ರಗತಿಯ ಸಂಕೇತ, ಎಂಬುದರಲ್ಲಿ ಸಂದೇಹವಿಲ್ಲ. ಇದು ಮಾನವ ಸಂಪನ್ಮೂಲದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಮಾನವ ಸಂಪನ್ಮೂಲದ ಗುಣಮಟ್ಟ ಹೆಚ್ಚಾದರೆ, ಗ್ರಾಮ ಪ್ರಗತಿಯೆಡೆಗೆ ನಡೆಯುತ್ತದೆ. ಎಂಬುದೇ ಬಹಳಷ್ಟು ತಜ್ಞರ ಅಭಿಪ್ರಾಯ, ಆದರೆ ಇಲ್ಲಿ ಮಾನವ ಸಂಪನ್ಮೂಲದ ಗುಣಮಟ್ಟವೇನು ಹೆಚ್ಚಿದೆ, ಆದರೆ ಇದು ಆರ್ಥಿಕ ಚಟುವಟಿಕೆಗಳಲ್ಲೂ ಗುಣಾತ್ಮಕತೆಯನ್ನು ಹೆಚ್ಚಿಸುವಲ್ಲಿ ಸಾಫಲ್ಯ ಸಾಧಿಸಿಲ್ಲ ಯಾಕೆಂದರೆ ಇಲ್ಲಿನ ಅಕ್ಷರಸ್ಥ ಗ್ರಾಮಸ್ಥರು ಸ್ವಉದ್ಯೋಗ ಸೃಷ್ಟಿಯಲ್ಲಿ ಹಿಂದೆ ಬಿದ್ದಿದ್ದಾರೆ, ಇವರು ಇನ್ನೂ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ, ಇದು ಏನನ್ನು ಸೂಚಿಸುತ್ತದೆಂದರೆ ಬರಿ ಅಕ್ಷರಸ್ಥರಾಗುವುದರಿಂದ ಆರ್ಥಿಕ ಚಟುವಟಿಕೆಗಳಲ್ಲಿ ನಿರಾಯಾಸವಾಗಿ ತೊಡಗಿಸಿಕೊಳ್ಳುವಲ್ಲಿ ಸಾಫಲ್ಯ ಸಾಧಿಸಲಾಗಿಲ್ಲ. ಯಾಕೆಂದರೆ ಅಕ್ಷರತೆಯ ಜೊತೆಗೆ ಕೌಶಲ್ಯವನ್ನು ಕಲಿಸಬೇಕಾಗಿದೆ. ಕೌಶಲ್ಯವ್ನನು ಕಲಿಸಿದರೆ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಆದರೆ ಕೌಶಲ್ಯವ್ನನು ನೀಡುವ ತರಬೇತಿ ಕಾರ್ಯಕ್ರಮಗಳು ಅಪರೂಪಕ್ಕೆ ನಡೆಯುತ್ತವೆ. ಆದ್ದರಿಂದ ಬರೀ ಅಕ್ಷರತೆ, ವರ್ತಮಾನ ಪತ್ರಿಕೆಗಳನ್ನು ಓದಿಸುವುದಕ್ಕೆ ಸಹಾಯಕವಾಗಿದೆ. ಹೀಗೆ ಸಹಾಯಕವಾಗಿರುವುದರಿಂದ ಇದು ಸಾಮಾನ್ಯ ಜ್ಞಾನವನ್ನು ಅಕ್ಷರಸ್ಥರಿಗೆ ಹೆಚ್ಚಿಸಬಹುದು ಆದರೆ ಸಾಮಾನ್ಯ ಜ್ಞಾನ ಸ್ವಉದ್ಯೋಗವನ್ನು ಸೃಷ್ಟಿಸುವಲ್ಲಿ ಈಗಾಗಲೆ ತಿಳಿದಿರುವಂತೆ ಅಂತಹ ಸಾಫಲ್ಯವೇನು ಕಂಡಿಲ್ಲ, ಆದರೂ ಕೆಲವು ಯುವಕರು ಸ್ವ ಉದ್ಯೋಗ ಮಾಡಬೇಕು ಎಂಬ ಹಂಬಲ ವ್ಯಕ್ತಪಡಿಸಿದರು.

ಶಿಕ್ಷಣ ಇತ್ಯಾದಿ:

ಇಲ್ಲಿ ಎರಡು ಹಿರಿಯ ಸರಕಾರಿ ಪ್ರಾಥಮಿಕ ಶಾಲೆಗಳು ಇವೆ ಈ ಶಾಲೆಗಳಿಗೆ ಈಗ ಬಿಸಿಯೂಟ ನೀಡುತ್ತಿರುವುದರಿಂದ 175 ವಿದ್ಯಾರ್ಥಿಗಳು ಹೋಗುತ್ತಿದ್ದಾರೆ, ಇವರೆಲ್ಲ ಕೂಲಿ ಕಾರ್ಮಿಕರ ಮಕ್ಕಳು 8 ಜನ ಅಧ್ಯಾಪಕರಿದ್ದಾರೆ, ಗ್ರಾಮಸ್ಥರ ಅಳಲು ಎಂದರೆ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳಿಸಲು ಆಗುತ್ತಿಲ್ಲ, ಏಕೆಂದರೆ ಕೃಷಿ ಕೆಲಸಗಳಲ್ಲಿ ಅಥವಾ ಕೂಲಿ ಕೆಲಸಗಳಲ್ಲಿ ಸಹಾಯ ಮಾಡಿದರೆ ನಮಗೆ ದಿನಕ್ಕೆ ರೂ 20 ರಿಂದ ರೂ. 30 ಹೆಚ್ಚಾಗಿ ಸಿಗುತ್ತದೆ. ಶಾಲೆಗಳಿಗೆ ಕಳಿಸುವುದರಿಂದ ಏನು ಉಪಯೋಗವಿದೆ ಎಂಬುದು ಹಲವಾರು ಪೋಷಕರಲ್ಲಿರುವ ಅಭಿಪ್ರಾಯ. ಆದರೆ ಈಗ ಬಿಸಿಯೂಟ ನೀಡುತ್ತಿರುವುದರಿಂದ ಶಾಲೆಗಳಲ್ಲಿ ಮಕ್ಕಳು ಹಾಜರಾತಿ ಹೆಚ್ಚಿದೆ ಎಂಬುದು ಅಲ್ಲಿನ ಅಧ್ಯಾಪಕರ ಒಕ್ಕೊರಲಿನ ಅಭಿಪ್ರಾಯ, ಆದರೆ ಕೆಲವು ಪೋಷಕರು ಅಧ್ಯಾಪಕರು ಶಾಲೆಗಳಲ್ಲಿ ಬೋಧಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಸ್ವಂತ

ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ, ನಿಯಮಿತವಾಗಿ ಪಾಠಗಳು ನಡೆಯುತ್ತಿಲ್ಲ ಎಂಬ ಅಭಿಪ್ರಾಯ ಕಂಡು ಬಂದಿತು. ಆದರೆ ಅಧ್ಯಾಪಕರು ಈ ಅಪಾಧನೆಗಳನ್ನು ನಿರಾಕರಿಸಿ, ನಾವು ನಿಯಮಿತವಾಗಿ ಶಾಲೆಗೆ ಬಂದು ಪಾಠ ಪ್ರವಚನ ಮಾಡುತ್ತೆ ಆದರೆ ಪೋಷಕರು ಮತ್ತು ವಿದ್ಯಾರ್ಥಿಗಳು ಉತ್ಸಾಹ ತೋರಿಸುತ್ತಿಲ್ಲ ಎಂಬ ಅಭಿಪ್ರಾಯ ಕೇಳಿ ಬಂತು. ಆದರೆ ಗ್ರಾಮ ಪಂಚಾಯಿತಿ ಸದಸ್ಯರು ಬಿಳಿ ಜಾಜಿಗೆ ಒಂದು ಪ್ರೌಢಶಾಲೆ, ಮಂಜೂರು ಮಾಡಿಸಿಕೊಳ್ಳಬೇಕೆಂದು ಉತ್ಸಾಹ ತೋರಿದ್ದಾರೆ. ಆದರೆ ಈ ನಿಟ್ಟನಲ್ಲಿ ಪ್ರಯತ್ನಗಳು ಸಾಗಿವೆ ಎಂಬ ವಿಷಯ ತಿಳಿಯಿತು. ಆದರೆ ಶಿಕ್ಷಣ ಇಲಾಖೆಯವರು ಅಧಿಕಾರಿಗಳು ಈ ನಿಟ್ಟಿನಲ್ಲಿ ಉತ್ಸುಕರಾಗಿಲ್ಲ ಎಂಬ ಅಭಿಪ್ರಾಯ ಕೇಳಿ ಬಂತು. ಇಲ್ಲಿ ವಿದ್ಯಾರ್ಥಿಗಳು ಪ್ರೌಢಶಾಲೆಗಳಿಗೆ ಸೇರಬೇಕೆಂದರೆ ಇಲ್ಲಿಂದ 5 ಕಿ.ಮೀ. ಇರುವ ಬಾಣಾವರಕ್ಕೆ ಹೋಗಬೇಕಾಗುತ್ತದೆ. ಎಂಬುದೇ ಅಭಿಪ್ರಾಯ. ಇಲ್ಲಿ ಪ್ರೌಢಶಾಲೆ.ಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 50 ಕ್ಕೂ ಹೆಚ್ಚಿದೆ. ಎಂದು ಗ್ರಾಮ ಪಂಚಾಯಿತಿ ಸದಸ್ಯರು, ಮಾಹಿತಿ ನೀಡಿದರು, ಆದರೆ ಬಿಳಿ ಜಾಜಿಯಲ್ಲಿ ಪ್ರೌಢಶಾಲೆ ಹೊಂದುವುದು ಇನ್ನೂ ಕನಸಾಗಿಯೇ ಉಳಿದಿದೆ. ಯಾಕೆಂದರೆ ಗ್ರಾಮಪಂಚಾಯಿತಿ ಅಧ್ಯಕ್ಷರು ಸಹ ಇದರ ಪರವಾಗಿ ಇದ್ದರೂ ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪ್ರೌಢಶಾಲೆ ತರುವುದು ಕಷ್ಟಕರ, ಈ ಪ್ರಯತ್ನ ಪ್ರಾರಂಭವಾಗಿದ್ದು ಎರಡು ವರ್ಷಗಳಿಗೂ ಮೇಲ್ಪಟ್ಟು ನಡೆದಿದ್ದರೂ, ಇನ್ನೂ ಕಾರ್ಯಗತಗೊಂಡಿಲ್ಲ, ಎಂಬುದೇ ಗ್ರಾಮ ಪಂಚಾಯಿತಿಯ ಸದಸ್ಯರ ಅಭಿಪ್ರಾಯ., ಆದ್ದರಿಂದ ಗ್ರಾಮಸ್ಥರೇ ಸೇರಿ ಪ್ರೌಢಶಾಲೆ ತಮ್ಮ ಹಳ್ಳಿಗೆ ತರಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಕಂಡು ಬಂದಿತು.

ಗೋಮಾಳದ ಕತೆ:

ಗೋಮಾಳ ಬಿಳಿ ಜಾಜಿಯಲ್ಲಿ 55 ಎಕೆರೆಗಳಷ್ಟು ಇದೆ, ಆದರೆ ಈ ಗೋಮಾಳವನ್ನ ಕುರಿ, ಮೇಕೆ, ರಾಸುಗಳನ್ನು ಮೇಯಿಸಲು ಉಪಯೋಗಿಸುತ್ತಿಲ್ಲ, ಈ ಗೋಮಾಳದಲ್ಲಿ ಅನಧಿಕೃತ ವ್ಯವಸಾಯವನ್ನು 50 ಜನ ರೈತರು ಮಾಡುತ್ತಿದ್ದಾರೆ, ಇಲ್ಲಿ ಅನಧಿಕೃತ ವ್ಯವಸಾಯ ಮಾಡುತ್ತಿರುವ ರೈತರು ಭೂಮಿಯನ್ನು ಹೊಂದಿರುವವರು ಇದ್ದಾರೆ ಭೂ ರಹಿತರು ಇದ್ದಾರೆ, ಭೂಮಿಯನ್ನು ಹೊಂದಿರುವವರು 30 ಜನ ಇದ್ದರೆ, ಉಳಿದ 25 ಜನ ಭೂ ರಹಿತರಿದ್ದಾರೆ, ಇಲ್ಲಿ ಭೂಮಿಗೆ ಚಿನ್ನದ ಬೆಲೆ ಇರುವುದರಿಂದ ಅನಧಿಕೃತ ರೈತರು, ಸರಕಾರ ಅಧಿಕೃತ ಗೊಳಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ, ಎಲ್ಲ ಸಣ್ಣ ಮತ್ತು ಅತಿ ಸಣ್ಣ ರೈತರು ಭೂ ರಹಿತ ರೈತರಾಗಿದ್ದಾರೆಂದು ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ, ಆದೆರ ಇವರು ಸಲ್ಲಿಸಿದ ಮನವಿಗೆ ಕಂದಾಯ ಇಲಾಖೆ ಸಕಾರಾತ್ಮಕವಾಗಿಯೇ ಸ್ಪಂದಿಸಿಲ್ಲ

ಅನಧಿಕೃತ ರೈತರು ಸರಕಾರಿ ಭೂಮಿಯನ್ನು ತೆರವು ಗೋಳಿಸಬೇಕೆಂದು ಕಂದಾಯ ಇಲಾಖೆ ಸೂಚಿಸಿದ್ದರೂ ಅನಧಿಕೃತ ವ್ಯವಸಾಯಗಾರರು ಗೋಮಾಳವನ್ನು ತೆರವು ಗೊಳಿಸಿಲ್ಲ, ಇವರು ಅನಧಿಕೃತ ವ್ಯವಸಾಯವ್ವನು ಸಕ್ರಮಗೊಳಿಸಬೇಕೆಂದು ಮತ್ತೆ ಮನವಿ ಮಾಡಿದ್ದಾರೆ, ಹಿಂದೆ ಕಂದಾಯ ಇಲಾಖೆ

ಅಧಿಕಾರಿಗಳು ಅನಧಿಕೃತ ವ್ಯವಸಾಯವನ್ನು ತೆರವು ಗೊಳಿಸಲು ನಡೆಸಿದ ಪ್ರಯತ್ನ ವಿಫಲವಾಗಿದೆ. ಸರಕಾರ ಸಣ್ಣ ರೈತರು ಮತ್ತು ಭೂ ರಹಿತ ರೈತರು ಸರಕಾರಿ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದರೆ ಅಂತಹ ಭೂಮಿಯನ್ನು ಸಕ್ರಮಗೊಳಿಸುವುದಾಗಿ ಮಾಡಿದ ಘೋಷಣೆಯಿಂದ, ಇಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರು ಕಂದಾಯ ಇಲಾಖೆ ಅಧಿಕಾರಿಗಳ ಮಾತನ್ನ ಕೇಳುತ್ತಿಲ್ಲ ಅಕ್ರಮ ವ್ಯವಸಾಯಗಾರರ ಭೂಮಿಯನ್ನು ಸಕ್ರಮಗೊಳಿಸುವುದಾಗಿ ಸರಕಾರ ಹೇಳಿದೆ, ಆದರೆ ಇವರೆಲ್ಲ ಬಹುತೇಕರು, ರಾಜಕೀಯ ಪ್ರಭಾವ ಹೊಂದಿರುವವರು ಇದ್ದಾರೆ, ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಮೊದಲು ಸರಕಾರ ಯೋಚಿಸಬೇಕಾಗಿದೆ. ಯಾಕೆಂದರೆ ಅಕ್ರಮ ಸಾಗುವಳಿಯನ್ನು ಸಣ್ಣ ರೈತರು ಹಾಗೂ ಭೂ ರಹಿತರ ಹೆಸರಲ್ಲಿ ಸಕ್ರಮಗೊಳಿಸಿದರೆ, ಗ್ರಾಮಗಳಲ್ಲಿರುವ ಕೆರೆ, ಕುಂಟೆ, ಮುಂತಾದ ಸಾರ್ವಜನಿಕ ಸ್ವತ್ತನ್ನು ಅಕ್ರಮ ಸಾಗುವಳಿ ಮಾಡುವ ಕಾಲ ದೂರವಿಲ್ಲ ಇದರಿಂದಾಗಿ, ಗ್ರಾಮಗಳಲ್ಲಿ ಸಾರ್ವಜನಿಕ ಆಸ್ತಿಯ ಮೇಲೆ ಪ್ರಭಾವಿ ರೈತರ ಕಣ್ಣು ಬೀಳುವುದು ಸಹಜವೆ, ಆದರೆ ಇದರಿಂದ ನಿಜವಾದ ದುರ್ಬಲರಿಗೆ ಏನು ಸಿಗುವುದಿಲ್ಲ, ಇದೇ ಸನ್ನಿವೇಶ ಬಿಳಿ ಜಾಜಿಯಲ್ಲಿ ನಾವು ಕಾಣಬಹುದಾಗದೆ. ನಿಜವಾದ ದುರ್ಬಲ ವರ್ಗಗಳನ್ನು ಸಣ್ಣ ಮತ್ತು ಭೂ ರಹಿತರ ಹೆಸರಲ್ಲಿ ಪ್ರಭಾವಿ ರೈತರು ಹತ್ತಿಕ್ಕುವುದರಲ್ಲಿ ಸಂಶಯವಿಲ್ಲ ಹಾಗೂ ಈ ಭೂಮಿಯನ್ನು ಪರಬಾರೆ ಮಾಡಲು ಈ ರೈತರು ಸಕ್ರಮಗೊಳ್ಳುವುದಕ್ಕಾಗ ಕಾಯುತ್ತಿದ್ದಾರೆ. ಆದ್ದರಿಂದ ಸರಕಾರ ಅಕ್ರಮವಾಗಿ ವ್ಯವಸಾಯ ಮಾಡುತ್ತಿರುವವರನ್ನು ಸಕ್ರಮಗೊಳಿಸದೆ ತೆರವು ಮಾಡಿಸಲು ಮುಂದಾಗಬೇಕಿದೆ.

ಹೈನುಗಾರಿಕೆ:

ಬಿಳಿ ಜಾಜಿಯಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘವಿದೆ, ಇದು 1992 ರಲ್ಲಿ ಪ್ರಾರಂಭವಾಗಿದ್ದು ಇದು ಪ್ರಾರಂಭವಾಗಿ 14 ವರ್ಷಗಳಿಗೂ ಮೇಲಾಗಿದೆ. ಈ ಸಂಘಕ್ಕೆ 120 ಜನ ಸದಸ್ಯರಿದ್ದಾರೆ, ಇಲ್ಲಿನ ಹಾಲು ಕರೆಯುವ ಹಸುಗಳ ಸಂಖ್ಯೆ 110, ದಿವಸಕ್ಕೆ 300 ಲೀಟರ್ ಹಾಲು ಸಂಗ್ರಹ ಮಾಡಲಾಗುತ್ತಿದೆ. ತಿಂಗಳಿಗೆ 1.5 ಲಕ್ಷಕ್ಕಿಂತಲೂ ಹೆಚ್ಚು ವಹಿವಾಟು ನಡೆಸಲಾಗುತ್ತಿದೆ. ಇಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘ ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ 20 (66.66%) ಜನರು, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿಲ್ಲ 10 (33.33%) ಜನರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಸ್ಪಷ್ಟಪಡಿಸುವುದೇನೆಂದರೆ ಹೈನುಗಾರಿಕೆ ಲಾಭದಾಯಕ ವಾಗಿದ್ದರೂ ಸಣ್ಣ ರೈತರೆ ಹೆಚ್ಚಿರುವ ಈ ಗ್ರಾಮದಲ್ಲಿ ಬಂಡವಾಳವಿಲ್ಲದೆ ಹೈನುಗಾರಿಕೆ ಕೈಗೊಳ್ಳದಿರುವ ಸಂಖ್ಯ 20 ಜನ ಇದ್ದಾರೆ, ಉಳಿದ 10 ಜನ ಬ್ಯಾಂಕುಗಳಲ್ಲಿ ಸಾಲ ಮಾಡಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಎರಡು ಹಸುಗಳನ್ನು ಕೊಳ್ಳಬೇಕೆಂದರು 25 ಸಾವಿರದಿಂದ 30 ಸಾವಿರದ ವರೆಗೂ ಬಂಡವಾಳ ಅವಶ್ಯಕತೆ ಇದೆ ಆದರೆ ಇಲ್ಲಿ ಬಹುತೇಕರು ಸಣ್ಣ ರೈತರು ಹಾಗೂ ಕೂಲಿಗಳಾಗಿರುವುದರಿಂದ 30 ಸಾವಿರ ರೂಪಾಯಿ ಸಹ ದೊಡ್ಡ ಮೊತ್ತವೆ, ಆದ್ದರಿಂದ

ಬಹಳಷ್ಟು ರೈತರು ಇಷ್ಟು ಮೊತ್ತದ ಮೂಲ ಧನ ವಿಲ್ಲದೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿಲ್ಲ, ಒಬ್ಬ ರೈತ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದರೆ ದಿನಕ್ಕೆ ರೂ. 200 ರಿಂದ ಮೂನ್ನೂರು ರೂಗಳವೆರರಗೂ ಸಂಪಾದನೆ ಮಾಡುತ್ತಾನೆ, ಆದರೆ ಇಲ್ಲಿ ಬಹಳಷ್ಟು ರೈತರ ಬಳಿ ಬಂಡವಾಳ ಇಲ್ಲದಿರುವುದರಿಂದ ಇವರ್‍ಯಾರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿಲ್ಲ. ಜೊತೆಗೆ ಹಾಲು ಉತ್ಪಾದಕರ ಸಂಘ ಸಂಪೂರ್ಣವಾಗಿ ರಾಜಕೀಕರಣಗೊಂಡಿದೆ. ಇಲ್ಲಿ ಪ್ರಭಾವಶಾಲಿ ರೈತರ ಉತ್ಪನ್ನಕ್ಕೆ ಮಾತ್ರ ಅಧ್ಯತೆ, ಸಾಮಾನ್ಯ ರೈತರಿಗೆ ತಮ್ಮ ಉತ್ಪನ್ನವನ್ನು ಮಾರಲು ಅನೇಕ ಕಷ್ಟಗಳನ್ನು ಎದುರಿಸಬೇಕಾಗುವುದು, ಯಾಕೆಂದರೆ ಎಲ್ಲ ಸಹಕಾರಿ ಸಂಘಗಳಂತೆ ಹಾಲು ಉತ್ಪಾದಕರ ಸಂಘ ಸಹ ಸಾಮಾನ್ಯ ರೈತರ ಏಳಿಗೆಗೆ ಇರಬೇಕು ಆದರೆ , ಬಿಳಿ ಜಾಜಿಯಲ್ಲಿ ಈ ಅಂಶ ಕಂಡುಬಂದಿಲ್ಲ. ತಮಗೆ ಬೇಕಾದವರ ಹಾಲನ್ನು ಕೊಳ್ಳುವ ಸಹಕಾರಿ ಸಂಘ ಬೇಡವಾದವರು ಬಂದರೆ ಹಾಲಿನಗುಣಮಟ್ಟದ ನೆವ ವೊಡ್ಡಿ ಕೊಳ್ಳಲು ನಿರಾಕರಿಸುತ್ತದೆ ಎಂಬುದನ್ನು ಕೆಲವು ರೈತರು ದೂರಿದರು ಹಾಲಿಗೆ ನೀರು ಬೆರೆಸುತ್ತಾರೆ ಎಂದು ಸಹ ಸಹಕಾರಿ ಸಂಘ ಆರೋಪಿಸುತ್ತದೆ, ಆದರೆ ಈ ಸಹಕಾರಿ ಸಂಘ ಅಸಹಾಯಕರ, ದುರ್ಬಲವರ್ಗಗಳ ಹಾಗೂ ಬಡವರ ನೆರವಿಗೆ ಒತ್ತಾಸೆಯಾಗಿರುವ ಬದಲು, ಪ್ರಭಾವಿಗಳ ಹಾಗೂ ಶ್ರೀಮಂತ ರೈತರ ಉತ್ಪನ್ನಗಳಿಗೆ ಆದ್ಯತೆ ನೀಡುತ್ತದೆ ಇದು ಪ್ರಾರಂಭವಾಗ 14 ವರ್ಷಗಳ ಮೇಲಾಗಿದ್ದರು, ಇದು ತನ್ನ ಸಹಕಾರಿ ತತ್ವವನ್ನು ತಾತ್ವಿಕವಾಗಿಯೂ ಸಹ ಅನುಸರಿಸುತ್ತಿಲ್ಲ ಎಂಬ ಆಪಾದನೆ ಇದೆ, ಆದ್ದರಿಂದ ಬಿಳಿ ಜಾಜಿಯಲ್ಲಿ ಹೈನುಗಾರಿಕೆ ತೀವ್ರ ಗತಿಯಲ್ಲಿ ಬೆಳೆಯಲು ಆಗಿಲ್ಲ ಖಡಾ ಖಂಡಿತವಾಗಿ ಹೇಳಬೇಕೆಂದರೆ, ಚಿಕ್ಕ ಜಾಜಿಯಲ್ಲಿ ಹೈನುಗಾರಿಕೆ, ಅಲ್ಲಿ ಕೂಲಿಗಳಿಗೆ , ಭೂ ರಹಿತರಿಗೆ ಪರ್ಯಾಯ ಉದ್ಯೋಗ ಸೃಷ್ಟಿಸಬಹುದು, ಆದರೆ ಈ ನಿಟ್ಟಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಪಶುವೈದ್ಯಕೀಯ ಇಲಾಖೆ ವಿಫಲವಾಗಿವೆ, ಪಶುವೈದ್ಯಕೀಯ ಇಲಾಖೆ ರಾಸುಗಳ ಆರೋಗ್ಯ ತಪಾಸಣೆ, ರೋಗ ಬಂದಾಗ ಚಿಕಿತ್ಸೆ ಇತ್ಯಾದಿಗಳನ್ನು ಸರಿಯಾಗಿ ನೀಡುತ್ತಿಲ್ಲ, ಎಂಬ ಆಪಾದನೆ ಇದೆ, ಆದ್ದರಿಂದ ಹಾಲು ಉತ್ಪಾದಕರ ಸಂಘ ಸಹ ಈ ನಿಟ್ಟಿನಲ್ಲಿ ಪಶು ವೈದ್ಯಕೀಯ ಇಲಾಖೆಯ ಮೇಲೆ ಒತ್ತಡ ತರುವಲ್ಲಿ ವಿಫಲವಾಗಿದೆ. ಇದು ಏನಿದ್ದರೂ ಪಕ್ಷರಾಜಕಾರಣ ಮಾಡಿಕೊಂಡು ತಮಗೆ ಬೇಕಾದ ರೈತರಿಗೆ ಸಾಲ, ಇತ್ಯಾದಿ ಸೌಲಭ್ಯಗಳನ್ನು ನೀಡುತ್ತ ಬಂದಿದೆ. ಆದ್ದರಿಂದ ಇದು ಹುಟ್ಟಿ 14 ವರ್ಷಗಳಿಗಿಂತಲೂ ಮೇಲಾಗಿದ್ದರೂ ಇಲ್ಲಿ ಹೈನೋದ್ಯಮವನ್ನು ಜನಪ್ರಿಯಗೊಳಿಸುವಲ್ಲಿ ಸೋತಿದೆ. ಇದೆ ಬಿಳಿ ಜಾಜಿಯಲ್ಲಿ ಕಂಡುಬಂದಿದ್ದು.

ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳು:

ಬಿಳಿ ಜಾಜಿಯಲ್ಲಿ 3 ಸ್ವಸಹಾಯ ಗುಂಪುಗಳು ಹಾಗೂ ಮೂರು ಸ್ತ್ರೀ ಶಕ್ತಿ ಸಂಘಗಳು ಇವೆ ಸ್ವಸಹಾಯ ಸಂಘಗಳಿಗೆ ತಲಾ 20 ಜನ ಸದಸ್ಯರಿದ್ದಾರೆ, ಇವರೆ ಈ ಗುಂಪುಗಳ ನಾಯಕತ್ವ ವಹಿಸಿದ್ದಾರೆ ಇಲ್ಲಿ ಸದಸ್ಯರು ಪರಸ್ಪರ ನೆರವಾಗುತ್ತ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ, ಸ್ವಸಹಾಯ ಸಂಘಗಳ

ಆರ್ಥಿಕ ಚಟುವಟಿಕೆಗಳು ಟೈಲರಿಂಗ್, ಎಂಬ್ರಾಯಿಡರಿ, ಸಣ್ಣ ಟೀ ಸ್ಟಾಲ್ ಗಳನ್ನು ನಡೆಸುವುದು ಮುಂತಾದವುಗಳು. ವಾರಕ್ಕೆ 35 ಸಾವಿರದಿಂದ 60 ಸಾವಿರದವರೆಗೂ ವಹಿವಾಟು ನಡೆಯುತ್ತದೆ. ಹೀಗೆ ಬಂದ ಹಣವನ್ನು ವಿಜಯ ಬ್ಯಾಂಕ್ ನಲ್ಲಿ ಪಡೆದಿರುವ ಸಾಲ ಚುಕ್ತ ಮಾಡಲು ಬಳಸಿಕೊಳ್ಳುತ್ತಾರೆ, ವಿಜಯ ಬ್ಯಾಂಕ್ ಸಾಲ ನೀಡಿದ ಮೇಲೆ ತಲಾ 250 ರಿಂದ 300 ರವರೆಗೂ ಉಳಿಯುತ್ತದೆ. ಹೀಗೆ ಉಳಿದ ಹಣವನ್ನು ಸ್ವಲ್ಪ ಖರ್ಚು ಮಾಡಿಕೊಂಡು ಉಳಿದನ್ನು ಮತ್ತೆ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ, ಸ್ವಸಹಾಯ ಸಂಘ ಹಾಗೂ ಸ್ತ್ರೀ ಶಕ್ತಿ ಸಂಘಗಳ ಪರಿಕಲ್ಪನೆ ಪರಿಚಯವಾದ ಮೇಲೆ ಇವು ಗ್ರಾಮದ ಬಡಜನರಲ್ಲಿ ನಾವು ಬದುಕಬಲ್ಲರೆಂದು ಆಶಾಕಿರಣ ಬಂದಿದೆ, ಸ್ತ್ರೀ ಶಕ್ತಿ ಸಂಘಗಳಿಗೆ ಅಂಗನವಾಡಿ ಕಾರ್ಯಕರ್ತರು ಕಾರ್ಯದರ್ಶಿಗಳಾಗಿ ಈ ಸಂಘಗಳನ್ನು ಮುನ್ನಡೆಸುತ್ತಿದ್ದಾರೆ, ಕಿರು ಸಾಲ ಯೋಜನೆಯ ಮೂಲಕ ಸಕ್ರಿಯವಾಗಿರುವ ಸ್ತ್ರೀ ಶಕ್ತಿ ಸಂಘಗಳು, ಇಲ್ಲಿ ಬಡಜನರಲ್ಲಿ ಆತ್ಮಸ್ಥೈರ್ಯವನ್ನು ಬೆಳೆಸಿವೆ, ಇವು ಗ್ರಾಮೀಣ ಪ್ರದೇಶಗಳಲ್ಲಿ ಬಡವರು ಸ್ವಾವಲಂಬಿಗಳಾಗುವ ಕಡೆ ನಡೆದಿದೆ. ಈ ಸ್ತ್ರೀ ಶಕ್ತಿ ಹಾಗೂ ಸ್ವಸಹಾಯ ಗುಂಪುಗಳು ನಾನು ಅಧ್ಯಯನ ನಡೆಸಿದ ನಾಲ್ಕು ಗ್ರಾಮಗಳಲ್ಲಿ ಮಾರ್ಜೇನಹಳ್ಳಿಯಲ್ಲಿ ಬಿಟ್ಟು ಉಳಿದೆಲ್ಲ ಕಡೆ ಇವೆ, ಇವುಗಳ ಸ್ವರೂಪ ಮತ್ತು ಕಾರ್ಯನಿರ್ವಹಣೆ ಒಂದೇ ರೀತಿಯಲ್ಲಿದೆ.

ಈಗ ರಾಜಕೀಯ ಪಕ್ಷಗಳು ಸ್ವಸಹಾಯ ಮತ್ತು ಸ್ತ್ರೀ ಶಕ್ತಿ ಸಂಘಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿವೆ ಏಕೆಂದರೆ, ಸ್ತ್ರೀ ಶಕ್ತಿ ಹಾಗೂ ಸ್ವಸಹಾಯ ಸಂಘಗಳಿಗೆ ರಾಜಕಾರಣಿಗಳಿಗೆ ಆಕರ್ಷಕ ಮತ ಬ್ಯಾಂಕುಗಳಾಗಿ ಕಂಡುಬರುತ್ತಿವೆ ಈ ಸಂಘಗಳು ರಾಜಕಾರಣಗಳಿಂದ ದೂರವಿರದಿದ್ದರೆ ಗ್ರಾಮೀಣ ಜನರ ಸ್ವಾವಲಂಬನೆಗೆ ಅಡಚಡಣೆಗಳಾಗುವುದರಲ್ಲಿ ಸಂಶಯವಿಲ್ಲ ಹಾಗೂ ಗ್ರಾಮೀಣ ಜನರಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮುಂತಾದವುಗಳನ್ನು ಪರಿಚಯಿಸುವುದರಲ್ಲಿ ರಾಜಕಾರಣಿಗಳ ಪ್ರಭಾವ ಇರುತ್ತದೆ. ಆದ್ದರಿಂದ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಗುಂಪುಗಳು ಇಂತಹ ರಾಜಕಾರಣದಿಂದ ದೂರವಿರುವುದೆ ಸರಿ, ಆದರೆ ಈಗಾಗಲೆ ಗ್ರಾಮ ಪಂಚಾಯಿತಿ ಗಳು ರಾಜಕೀಯೇತರ ಸಂಸ್ಥೆ ಎಂದು ಇದ್ದರೂ ರಾಜಕೀಕರಣ ಗೊಂಡಿದೆಯೇ ಹಾಗೆಯೇ ಸ್ವಸಹಾಯ ಗುಂಪುಗಳು ಸಹ ರಾಜಕೀಕರಣಗೊಂಡಿವೆ. ಇಲ್ಲಿ ಪ್ರಭಾವಿ ಪಕ್ಷಗಳಾದ ಕಾಂಗ್ರೇಸ್ ಜೆ.ಡಿ.ಎಸ್. , ಬಿ.ಜೆ.ಪಿ. ಯವರು ಸ್ವಸಹಾಯ ಹಾಗೂ ಸ್ತ್ರೀ ಶಕ್ತಿ ಸಂಘಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಚುನಾವಣೆಗಳ ದೃಷ್ಟಿಯಿಂದ ಈ ಸಂಘಗಳು ರಾಜಕೀಯ ಪಕ್ಷಗಳಿಗೆ ಸಿಗದಿಗೊಳಿಸಿದ ಮತ ಬ್ಯಾಂಕುಗಳು, ಯಾಕೆಂದರೆ ಈ ಸ್ವಸಹಾಯ ಹಾಗೂ ಸ್ತ್ರೀ ಶಕ್ತಿ ಗುಂಪುಗಳು ಅಕ್ಷರಶಃ ರಾಜಕೀಯೇತರ ಗುಂಪುಗಳಂತೆ ಸಮೀಕ್ಷೆಯ ಸಂಧರ್ಭದಲ್ಲಿ ವರ್ತಿಸಿದರು., ಇವರು ಹಣಕೊಟ್ಟವರ ಕಡೆಗೆ ತಮ್ಮ ರಾಜಕೀಯ ಒಲವನ್ನು ತೋರಿಸುತ್ತಿದ್ದಾರೆ. ಎಂಬುದು ಕಂಡು ಬಂತು, ಈಗಾಗಲೆ ಜೆಡಿಎಸ್ ನವರು ಈ ಸಂಘಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಎಲ್ಲ ತರಹದ ತಂತ್ರಗಳನ್ನು ರೂಪಿಸುತ್ತಿದ್ದಾರೆ, ಆದರೆ ಈ ಸಂಘಗಳಲ್ಲಿ ಕಾಂಗ್ರೆಸ್ ಕಡೆಗೆ ಒಲವು ತೋರಿಸುತ್ತಿರುವವರನ್ನು ನಾನು ಗಮನಿಸಿದೆ. ಇವು

ಸಹ ಸಹಕಾರಿ ಸಂಘಗಳಂತೆ ಕೆಲವೆ ವರ್ಷಗಳಲ್ಲಿ ರಾಜಕೀಯ ಪಕ್ಷಗಳ ಮುಖ ವಾಣಿಯಾಗುವುದರಲ್ಲಿ ಸಂದೇಹವಿಲ್ಲ. ಬಿಳಿ ಜಾಜಿಯಲ್ಲಿ ನ್ಯಾಯಬೆಲೆ ಅಂಗಡಿ ಇಲ್ಲ. ಇವರು ಅತ್ಯವಶ್ಯಕ ವಸ್ತುಗಳನ್ನು ಖರೀದಿಸಬೇಕಾದರೆ.

ನ್ಯಾಯಬೆಲೆ ಅಂಗಡಿ:

ಹೆಸರು ಘಟ್ಟದಲ್ಲಿರುವ ನ್ಯಾಯ ಬೆಲೆ ಅಂಗಡಿಗೆ ಹೋಗಬೇಕಾಗುತ್ತದೆ. ಇಲ್ಲಿನ ನ್ಯಾಯ ಬೆಲೆ ಅಂಗಡಿ ವಾರಕ್ಕೊಮ್ಮೆಯೋ ಹದಿನೈದು ದಿವಸಗಳಿಗೊಮ್ಮೆಯೇ ತೆರೆಯುತ್ತದೆ. ಇಲ್ಲಿ ನ್ಯಾಯಬೆಲೆ ಅಂಗಡಿಗೆಂದು ಬರುವ ಸಾಮಾನುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ, ಸರಿಯಾಗಿ ಪದಾರ್ಥಗಳನ್ನು ಗ್ರಾಹಕರಿಗೆ ನ್ಯಾಯಬೆಲೆ ಅಂಗಡಿಯವರು ಒದಗಿಸುವುದಿಲ್ಲ ಎಂಬ ದೂರುಗಳು ಇವೆ. ಸಕ್ಕರೆ ಸೀಮೆ ಎಣ್ಣೆಯಂತಹ ಅವಶ್ಯಕ ಉತ್ಪನ್ನಗಳನ್ನು ನ್ಯಾಯಬೆಲೆ ಅಂಗಡಿ ಗ್ರಾಹಕರಿಗೆ ಒದಗಿಸುವಲ್ಲಿ ವಿಫಲವಾಗಿದೆ. ಎಂಬುದೆ ಗ್ರಾಹಕರ ಅಥವಾ ಪಡಿತರ ಚೀಟಿ ಹೊಂದಿರುವವರ ಅಳಲು, ನ್ಯಾಯಬೆಲೆ ಅಂಗಡಿಯೂ ಹೆಸರಘಟ್ಟದಲ್ಲಿ ಇರುವುದರಿಂದ ಬಿಳಿ ಜಾಜಿ ಗ್ರಾಹಕರು ಅಂಗಡಿಗೆ ಹೋಗಲು ಸಾರಿಗೆ ಸಮಸ್ಯೆ ಎದರಿಸುತ್ತಿದ್ದಾರೆ, ಹಾಗೂ ಅದು ಅನಿಯಮಿತವಾಗಿ ತೆರೆಯುವುದರಿಂದ ಯಾವಾಗ ತೆರೆಯುತ್ತದೆ ಯಾವಾಗ ಮುಚ್ಚುತ್ತದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ, ಹೀಗೆ ಮಾಹಿತಿ ಇಲ್ಲದೇ ಇರುವುದರಿಂದ ನ್ಯಾಯ ಬೆಲೆ ಅಂಗಡಿಯ ಮಾಲೀಕನಿಗೆ ವರದಾನವಾಗಿದೆ. ನಾನು ಸಮಿಕ್ಷೆ ಮಾಡಿದ 30 ಜನ ರೈತರಲ್ಲಿ 22 (73.33%) ಜನಕ್ಕೆ ನ್ಯಾಯಬೆಲೆ ಅಂಗಡಿಯ ಅವ್ಯವಹಾರಗಳ ಬಗ್ಗೆ ಪ್ರಸ್ತಾಪಿಸುತ್ತಾರೆ, 8 (26.66%) ಜನ ನ್ಯಾಯಬೆಲೆ ಅಂಗಡಿಯನ್ನು ಸಂಪೂರ್ಣವಾಗಿಯೇ ನೆಚ್ಚಿ ಕುಳಿತಿಲ್ಲ ಹಾಗೂ ಅವ್ಯವಹಾರಗಳು ನಡೆಯುವುದು ಗೊತ್ತಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಗ್ರಾಮದಲ್ಲಿ ಬಹುತೇಕರು ನ್ಯಾಯ ಬೆಲೆ ಅಂಗಡಿಯನ್ನು ಅವಲಂಬಿಸಿಲ್ಲ. ಸಣ್ಣ ಪ್ರಮಾಣದ ಜನ ನ್ಯಾಯಬೆಲೆ ಅಂಗಡಿಯನ್ನು ಅವಲಂಬಿಸಿದ್ದರೂ, ಅವರಿಗೆ ನಿಯಮಿತವಾಗಿ ಸಾಮಾನು ಸರಂಜಾಮುಗಳು ಸಿಗುತ್ತಿಲ್ಲ. ಆದ್ದರಿಂದ ಬಿಳಿ ಜಾಜಿಯಲ್ಲೆ ನ್ಯಾಯ ಬೆಲೆ ಅಂಗಡಿ ಆಗಬೇಕೆಂದು ಪ್ರಯತ್ನಿಸುತ್ತಿದ್ದಾರೆ., ಆದರೆ ಇಲ್ಲಿಯವರೆಗೂ ಬಿಳಿ ಜಾಜಿಯಲ್ಲಿ ನ್ಯಾಯ ಬೆಲೆ ಅಂಗಡಿ ಇನ್ನೂ ಆಗಿಲ್ಲ. ಯಾಕೆಂದರೆ ಬಿಳಿ ಜಾಜಿ ಹೆಸರುಘಟ್ಟದಿಂದ 3 ಕಿ.ಮೀ. ಗಳು ಇರುವುದರಿಂದ ಅಲ್ಲದೇ ಬಿಳಿ ಜಾಜಿ ಜನರು ಪದಾರ್ಥಗಳನ್ನ ಕೊಳ್ಳಬಹುದೆಂದು ಆಹಾರ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯದಿಂದ ಉತ್ತರಿಸುತ್ತಾರೆ, ಆದರೆ ಇಲ್ಲಿರುವ ಸಮಸ್ಯೆಗಳೆಂದರೆ ನ್ಯಾಯಬೆಲೆ ಅಂಗಡಿ ನಿಯಮಿತವಾಗಿ ತೆರೆಯುವುದಿಲ್ಲ. ತೆರೆದರು ಸಂಗ್ರಹ (stock) ಇಲ್ಲ ಎಂಬ ಉತ್ತರ ಹಳ್ಳಿಗರು ಕೇಳಬೇಕಾಗುತ್ತದೆ. ಮೂರನೆಯದಾಗಿ ಸಾಗಾಣಿಕೆ ವೆಚ್ಚವನ್ನು ರೈತರು ಭರಿಸಲಾರರು, ಇಷ್ಟೆಲ್ಲ ಅಡಚಣೆಗಳು ನ್ಯಾಯಬೆಲೆ ಅಂಗಡಿಗೆ ಸಂಬಂಧಪಟ್ಟಂತೆ ಇರಬೇಕಾದರೆ ಬಿಳಿ ಜಾಜಿಯತ್ತ ನ್ಯಾಯಬೆಲೆ ಅಂಗಡಿ ಒದಗಿಸಬೇಕಾಗಿರುವುದು ಸರಕಾರದ ಕರ್ತವ್ಯ ಆದರೆ ಸರಕಾರ ಇದರ ಬಗ್ಗೆ ದಿವ್ಯ ನಿರ್ಲಕ್ಷ್ಯ ದಿಂದ ಇದೆ. ಬಿಳಿ ಜಾಜಿಯಲ್ಲೆ ನ್ಯಾಯ

ಬೆಲೆ ಅಂಗಡಿ ಇದ್ದರೆ, ಗ್ರಾಮಸ್ಥರುಗಳಿಗೆ ಇದು ಹತ್ತಿರವಾಗುತ್ತದೆ ಹಾಗೂ ನ್ಯಾಯಬೆಲೆಯ ಅಂಗಡಿಯವರು ಅವ್ಯವಹಾರ ನಡೆಸುವುದಕ್ಕೂ ಆಸ್ಪದ ಇರುವುದಿಲ್ಲ. ಇನ್ನು ಹಳ್ಳಿಗರ ನಿಯಂತ್ರಣಕ್ಕೆ ಬರುತ್ತದೆ. ಬಡತನ ರೇಖೆಗಿಂತ ಕೆಳಗೆ ಬರುವ ರಾಮಯ್ಯನ ಪ್ರಕಾರ ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ ನಮ್ಮ ಪಡಿತರ ಚೀಟಿಯಲ್ಲಿ ನಮೂದಿಸಿರುವದಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀಡುತ್ತಾರೆ ಕೇಳಿದರೆ ದಾಸ್ತಾನು ಇಲ್ಲ ಮುಂದಿನ ತಿಂಗಳು ದಾಸ್ತಾನು ಬಂದ ಮೇಲೆ ಕೊಡುವುದಾಗಿ ತಿಳಿಸುತ್ತಾರೆ, ರಾಮಯ್ಯ ತನ್ನ ತಿಂಗಳಿನ ಪಡಿತರಕ್ಕೆ ನ್ಯಾಯ ಬೆಲೆ ಅಂಗಡಿಯನ್ನ ನೆಚ್ಚಿಕುಳಿತಿದ್ದಾನೆ, ಇಂತಹವರಿಗೆ ನ್ಯಾಯ ಬೆಲೆ ಅಂಗಡಿಯವರು ಮೋಸ ಮಾಡುವುದಾದರೆ ನ್ಯಾಯ ಬೆಲೆ ಅಂಗಡಿ ಇರಬೇಕಾದ ಅವಶ್ಯಕತೆ ಏನು ಎಂಬುದೇ ರಾಮಯ್ಯನ ಪ್ರಶ್ನೆ.

ಸಾಲ, ಸಹಕಾರ ಸಂಘ, ಬ್ಯಾಂಕ್ ಇತ್ಯಾದಿ:

ಬಿಳಿ ಜಾಜಿಯಲ್ಲಿ ಕೃಷಿ ಸಾಲದ ಸಹಕಾರ ಸಂಘವಿಲ್ಲ ಹಾಗೆಯೇ ಯಾವುದೇ ವಾಣಿಜ್ಯ ಬ್ಯಾಂಕ್ ಸಹ ಇಲ್ಲ, ಈ ಗ್ರಾಮದ ರೈತರೆಲ್ಲರು ಹೆಸರು ಘಟ್ಟದಲ್ಲಿರುವ ಸಾಲ ಸಹಕಾರಿ ಸಂಘದಿಂದ ಹಾಗೂ ಅಲ್ಲಿನ ವಾಣಿಜ್ಯ ಬ್ಯಾಂಕಿನಿಂದ ಸಾಲ ಪಡೆಯುತ್ತಾರೆ, ಸಾಲ ಸುಲಭವಾಗಿ ದೊರೆಯುವುದಿಲ್ಲ, ಎಂಬುದೇ ರೈತರು ವ್ಯಕ್ತಪಡಿಸಿದ್ದು ಸಾಲ ಪಡೆಯಬೇಕಾದರೆ ಮಧ್ಯವರ್ತಿಗಳ ಮೂಲಕ ಹೋದರೆ ಸಾಲ ಸುಲಭವಾಗಿ ಸಿಗುತ್ತದೆಂಬುದೆ ಅಭಿಪ್ರಾಯ ಸಾಲ ಮಾಡದೆ ಕೃಷಿ ಮತ್ತು ಇನ್ನಿತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಕಷ್ಟಕರ ಎಂಬುದೆ ವ್ಯಕ್ತವಾದ ಅಭಿಪ್ರಾಯ. ಹಾಗಾದರೆ ಸಾಲದ ಮೂಲಗಳು ಯಾವುವು ಎಂದು ತಿಳಿದುಕೊಳ್ಳುವುದು ಅವಶ್ಯ ಈ ಗ್ರಾಮದ ರೈತರ ಸಾಲದ ಮೂಲಗಳು ವಾಣಿಜ್ಯ ಬ್ಯಾಂಕುಗಳೇ ಪ್ರಮುಖವಾದ್ದದು ಕೃಷಿಯಾಗಿರಲಿ ಕೃಷಿಯೇತರ ಚಟುವಟಿಕೆಗಳಾಗಿರಲಿ ಸಾಲ ವಾಣಿಜ್ಯ ಬ್ಯಾಂಕುಗಳಿಂದಲೇ ಬರಬೇಕು., ಹೀಗೆ ಸಾಲ ಪಡೆಯುವ ರೈತರು ತಮಗೆ ಇರುವ ಚೂರು ಪಾರು ಆಸ್ತಿಯನ್ನು ಬ್ಯಾಂಕಿಗೆ ಬರೆದುಕೊಡುತ್ತಾರೆ, ಸಾಲ ಚುಕ್ತ ಆದ ನಂತರ ಈ ಆಸ್ತಿಯನ್ನು ರೈತರು ವಾಪಸ್ಸು ಪಡೆಯುತ್ತಾರೆ. ಸಾಲ, ರೈತರ ಬದುಕಿನ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದು ರೈತರ ಅಭಿಪ್ರಾಯ ಯಾಕೆಂದರೆ ಸಾಲ ಪಡೆದರೆ ರೈತರು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕಿಂತ ಅನುತ್ಪಾದಕ ಚಟುವಟಿಕೆಗಳಲ್ಲಿ ತೊಡಗಿ, ಹಾಳು ಮಾಡುತ್ತಾರೆ, ಸೀಮೆ ಹಸು ಕೊಳ್ಳಬೇಕೆಂದು ಮಧ್ಯಮಾವಧಿ ಸಾಲ ಪಡೆದರು. ಕೆಲವು ರೈತರು ಸೀಮೆ ಹಸುಗಳನ್ನು ಕೊಳ್ಳದೆ ಅದನ್ನು ಮದುವೆ ಅಥವಾ ಬೇರೆ ವಸ್ತುಗಳನ್ನು ಕೊಳ್ಳಲು ಉಪಯೋಗಿಸುತ್ತಾರೆ. ರೈತರು ಪಡೆದ ಸಾಲವನ್ನು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸುವುದು ಆರ್ಥಿಕವಾಗಿ ಸಾಧುವಲ್ಲ ಎಂದು ನಂಬಿದ್ದಾರೆ ಯಾಕೆಂದರೆ, ಇಲ್ಲಿ ಹೈನುಗಾರಿಕೆ ಇದೆ ಎಂದು ಈಗಾಗಲೆ ನಾವು ತಿಳಿದಿದ್ದೇವೆ ಒಂದು ಮತ್ತು ಎರಡು ಹಾಲು ಕರೆಯುವ ಹಸುಗಳನ್ನು ಅಥವಾ ಕೋಳಿ ಸಾಕಾಣಿಕೆಯನ್ನು

ಪ್ರಾರಂಭಿಸಿದ್ದರೆ ತಾವು ಬಯಸಿದಷ್ಟು ಲಾಭ ಸಿಗುವುದಿಲ್ಲ ಎಂಬುದೇ ಇವರ ಅಭಿಪ್ರಾಯ ನಾನು ಸಮೀಕ್ಷೆ ಮಾಡಿದ ಮುವ್ವತ್ತು ರೈತರಲ್ಲಿ 12 (40%) ಜನ ಮಧ್ಯಮಾವಧಿ, 6(20%) ಜನ ಅಲ್ಪಾವದಿ 6 (20%) ಜನ ದೀರ್ಘಾವಧಿ ಸಾಲವನ್ನೂ ಪಡೆದಿದ್ದೂ ಉಳಿದ 6 (20%) ಜನ ಖಾಸಗಿ ಲೇವಾದೇವಿಗಾರರಿಂದ ಸಾಲವನ್ನು ಪಡೆದಿದ್ದಾರೆ, ಬ್ಯಾಂಕುಗಳಿಂದ ಸಾಲ ಪಡೆಯುವದು ಅತ್ಯಂತ ಪ್ರಯಾಸಕಾರಿಯಾದದ್ದು ಎಂಬುದೇ, ಬಹುತೇಕ ರೈತರ ಅಭಿಪ್ರಾಯ ಯಾಕೆಂದರೆ ಸಾಲ ಪಡೆಯುಲು ಅರ್ಜಿ ಹಾಕಿದರೆ ಕನಿಷ್ಠ ಪಕ್ಷ 7-8 ತಿಂಗಳವರೆಗೂ ಸಾಲ ಮಂಜೂರಾಗುವುದು ಕಷ್ಟ ಅದೇ ಮಧ್ಯವರ್ತಿಗಳ ಮೂಲಕ ಹೋದರೆ ಒಂದು ತಿಂಗಳೊಳಗಾಗಿ ಸಾಲ ಮಂಜೂರಾತಿ ಸಿಗುತ್ತದೆ ಎಂಬುದೇ ರೈತರ ಅಭಿಪ್ರಾಯ. ಬ್ಯಾಂಕುಗಳಲ್ಲಿ ಸಾಲ ನೀಡಲು ಅನುಸರಿಸುವ ವಿಧಾನ ರೈತರಿಗೆ ಸಾಲ ಪಡೆಯುವುದು ಕಷ್ಟಕರವಾಗುತ್ತದೆ. ಇವರು ರೈತರಿಂದ ಬೇರೆಲ್ಲೂ ಸಾಲ ಪಡೆದಿಲ್ಲವೆಂಬುದರ ಬಗ್ಗೆ ಪ್ರಮಾಣ ಪತ್ರ ಮುಂತಾದವುಗಳನ್ನು ಇಲ್ಲಿನ ಅಧಿಕಾರಿಗಳು ರೈತರಿಗೆ ಕೇಳುತ್ತಾರೆ, ಆದರೆ ರೈತರು ಈ ಕಾಗದ ಪತ್ರಗಳನ್ನು ಪಡೆಯುವುದಕ್ಕೆ ಹಲವು ತಿಂಗಳುಗಳನ್ನು ವ್ಯಯಿಸುತ್ತಾರೆ, ಆದ್ದರಿಂದ ಬಹಳಷ್ಟು ಜನ ಖಾಸಗಿ ಲೇವಾದೇವಿಗಾರರ ಬಳಿಗೆ ಹೋಗುವುದು. ಆದರೆ ಖಾಸಗಿಲೇವಾದೇವಿಗಾರರು ಹೆಚ್ಚಿನ ಬಡ್ಡಿ ದರವನ್ನು ವಿಧಿಸುತ್ತಾರೆ, ಬ್ಯಾಂಕಿನಲ್ಲಿ ಸಾಲ ಪಾವತಿಸುವುದು ವರ್ಷಕ್ಕೊಮ್ಮೆ ಅಥವಾ 6 ತಿಂಗಳಿಗೊಮ್ಮೆ ಆದರೆ ಖಾಸಗಿ ಲೇವಾದೇವಿಗಾರರು ತಿಂಗಳಿಗೊಮ್ಮೆ ಮೂಲ ಹಣವನ್ನು ನೀಡದಿದ್ದರೂ ಬಡ್ಡಿಯನ್ನು ನೀಡಲೇಬೇಕಾಗುತ್ತದೆ. ಆದ್ದರಿಂದ ಬಿಳಿ ಜಾಜಿಯಲ್ಲಿ ಕಡಿಮೆ ಪ್ರಮಾಣದ ರೈತರು ಖಾಸಗಿಲೇವಾದೇವಿಗಾರರ ಬಳಿಗೆ ಹೋಗುತ್ತಾರೆ. ಉಳಿದವರು ಬ್ಯಾಂಕುಗಳಿಂದ ಸಹಕಾರಿ ಸಂಘಗಳಿಂದ ಸಾಲವನ್ನು ಪಡೆಯುತ್ತಾರೆ, ಇಲ್ಲಿ ವ್ಯವಸ್ಥೆಯ ನಕಾರಾತ್ಮಕ ಗುಣವೆಂದರೆ ಮಧ್ಯವರ್ತಿಗಳ ಹಾವಳಿ, ಮಧ್ಯವರ್ತಿಗಳು ಬ್ಯಾಂಕ್ ಅಧಿಕಾರಿಗಳ ಜೊತೆ ಪರೋಕ್ಷ ಸಂಬಂಧಗಳನ್ನು ಹೊಂದಿರುತ್ತಾರೆ, ಹೀಗೆ ಪರೋಕ್ಷ ಸಂಬಂಧ ಹೊಂದಿರುವುದರಿಂದ ಬ್ಯಾಂಕ್ ಅಧಿಕಾರಿಗಳಿಗೆ ಮಧ್ಯವರ್ತಿಗಳು ಕಮೀಷನನ್ನು ರೈತರಿಂದ ಕೊಡಿಸುತ್ತಾರೆ, ಅಲ್ಪವಾಧಿ ಸಾಲವಾದರೆ ರೂ. 2000 - 8000 ರೂಗಳಷ್ಟು ಇರುತ್ತದೆ. ಇದರಲ್ಲಿ ಕಮೀಷನ್ ಎಂದೆ ಶೇ. 50 ಕ್ಕಂತಲೂ ಜಾಸ್ತಿ ಹೋಗುತ್ತದೆ. ರೈತರ ಅಭಿಪ್ರಾಯ ಕೇಳಿದಾಗ 25 (83.33%) ಜನ ರೈತರು ಶೇ. 20 ಕ್ಕಿಂತ ಅಧಿಕ ಹಣ ಮಧ್ಯವರ್ತಿಗಳಿಗೆ ಹೋಗುತ್ತದೆಂದು 3 (ಶೇ.10) ಜನ ಶೇ. 40 ರಷ್ಟು ಹಣ ಮಧ್ಯವರ್ತಿಗಳಿಗೆ ಹೋಗುತ್ತದೆಂದು 2 (6.68%) ಜನ ಶೇ. 75 ರಷ್ಟು ಹಣ ಮಧ್ಯವರ್ತಿಗಳಿಗೆ ಹೋಗುತ್ತದೆಂದು ಹೇಳಿದರು ಇದು ಪ್ರಾಥಮಿಕ ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯ. ಇಲ್ಲಿ ಕಂಡುಬರುವುದೇನೆಂದರೆ ರೈತರ ಹಣಕ್ಕೋಸ್ಕರ ಗ್ರಾಮೀಣ ಪ್ರದೇಶಗಳಲ್ಲಿ ಮಧ್ಯವರ್ತಿಗಳೆಂಬ ಹೊಸವರ್ಗದ ಸೃಷ್ಟಿಯಾಗಿದೆ. ಈ ಮಧ್ಯವರ್ತಿಗಳಲ್ಲಿ ನಾನಾ ನಮೂನೆಗಳಿಗೆ ಕೆಲವರು ಹಣ ಮಂಜೂರಾದ ಮೇಲೆ ಕಮೀಷನ್ ಪಡೆದರೆ, ಕೆಲವರು ಹಣ ಮಂಜೂರಾಗುತ್ತಿದ್ದಕ್ಕೆ ಮೊದಲೆ ಕಮೀಷನ್ ಪಡೆಯುತ್ತಾರೆ, ಮತ್ತೆ ಕೆಲವರು ರೈತರಿಗೆ ಸಾಲ ಮಾಡುವಂತೆ

ಪ್ರಚೋದಿಸಿ ಹೀಗೆ ಪ್ರಚೋದಿಸಲು ಸಹ ಹಣ ಪಡೆಯುತ್ತಾರೆ, ಆದ್ದರಿಂದ ಸರಕಾರಗಳು ಎಷ್ಟೇ ಸಾಲದ ನೀತಿಗಳನ್ನು ಉದಾರೀಕರಿಸಿ ಸುದಾರಣೆ ಗೊಳಿಸಿದರು ಈ ಮಧ್ಯವರ್ತಿಗಳಿಂದ ಬಿಡುಗಡೆ ಇಲ್ಲ ಮಧ್ಯವರ್ತಿಗಳೆ ವರ್ಗ ರೂಪುಗೊಂಡಿರುವುದು ಗ್ರಾಮ ಪಂಚಾಯಿತಿ ಸದಸ್ಯರಿಂದ ಅಥವಾ ಸಹಕಾರಿ ಸಂಘದ ಸದಸ್ಯರಿಂದ ಆದ್ದರಿಂದ ರೈತರ ಸಾಲ ಪಡೆಯುವುದರಲ್ಲಿ ಇಣುಕಿರುವ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಸಂಕಲ್ಪ ಶಕ್ತಿಯನ್ನು ಸರಕಾರಗಳು ಕೈಗೊಳ್ಳದಿದ್ದರೆ ಬಡ ರೈತರ ಪಾಡು ನಾಯಿ ಪಾಡಾಗುವುದರಲ್ಲಿ ಸಂದೇಹವಿಲ್ಲ, ಆದ್ದರಿಂದ ಸರಕಾರ ಬ್ಯಾಂಕಿಂಗ್ ನೀತಿಗಳಲ್ಲಿ ಸುಧಾರಣೆ ತರಬೇಕಾಗಿದೆ. ರೈತರಿಗೆ ಕಡಿಮೆ ಬಡ್ಡಿ ದರ ದಲ್ಲಿ ಸಾಲ ನೀಡುವ ಕಾರ್ಯಕ್ರಮಗಳು ರೈತರಿಗೆ ತಿಳಿದೆ ಇಲ್ಲ, ಹೋದ ಬಾರಿ , ಚಿದಂಬರಂರವರು ಪ್ರಕಟಿಸಿರುವ ಶೇ. 7 ರ ಬಡ್ಡ ದರದಲ್ಲಿ 3 ಲಕ್ಷ ರೂಪಾಯಿಗಳವರೆಗೂ ರೈತರಿಗೆ ಸಾಲ ನೀಡುತ್ತೇವೆಂಬ ಕಾರ್ಯಕ್ರಮ ನಾನು ಸಮೀಕ್ಷೆ ಮಾಡಿದ 30 ರೈತರಿಗೂ ತಿಳಿಯದು, ಶೇ. 7 ರ ಬಡ್ಡಿದರದಲ್ಲಿ ಸಾಲ ಕೊಡುವುದು. ಸರಿಯಷ್ಟೆ ಆದರೆ ಬ್ಯಾಂಕುಗಳು ಸಹ ಈ ನೀತಿಯನ್ನು ಪಾಲಿಸುತ್ತಿಲ್ಲ ಅದೇ ಶೇ. 12 ರ ಬಡ್ಡಿ ದರವನ್ನು ಸಾಲದ ಮೇಲೆ ಹಾಕುತ್ತಿದ್ದಾರೆ, ರೈತರಿಗೂ ಇದರ ಬಗ್ಗೆ ಮಾಹಿತಿ ಇಲ್ಲದಿರುವುದು ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಅಪಹಾಸ್ಯಕರವಾದದ್ದು. ಆದ್ದರಿಂದ ಬ್ಯಾಂಕುಗಳು ಗ್ರಾಮೀಣಾಭಿಮುಖಿಯಾಗಬೇಕು, ಆದ್ಯತಾ ವಲಯಗಳ ಬಗ್ಗೆ ಸಾಲ ನೀಡಬೇಕು, ಹಾಗೂ ಬಡ್ಡಿದರವನ್ನು ಕಡಿತಗೊಳಿಸಬೇಕು, ಆದರೆ ಈ ಎಲ್ಲಾ ಅಂಶಗಳು ನೀತಿಗಳಾಗಿದ್ದರು ಬ್ಯಾಂಕಿನ ಆಡಳಿತಾತ್ಮಕ ಸುಧಾರಣೆಯಾಗದಿದ್ದರೆ ಈ ನೀತಿಗಳು ಸರಿಯಾದ ನಿಟ್ಟಿನಲ್ಲಿ ಅನುಷ್ಠಾನಗೊಳಿಸುವುದು ಕಷ್ಟಕರವಾಗುತ್ತದೆ. ರೈತರು ಸಹ ಬ್ಯಾಂಕುಗಳು ಬಿಟ್ಟು ಖಾಸಗಿಲೇವಾದೇವಿಯವರ ಋಣ ಬಾರದಲ್ಲಿ ಸಿಲುಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಿವೇಶ ನಿರ್ಮಾಣವಾಗುತ್ತದೆ. ಆದರೆ ಜಿಡ್ಡುಗಟ್ಟಿರುವ ಬ್ಯಾಂಕಿಂಗ್ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರ ಯೋಚಿಸಬೇಕಾಗಿದೆ. ಆಡಳಿತಾತ್ಮಕ ಸುಧಾರಣೆಗಳು ಬ್ಯಾಂಕಗಳು ರೈತರ ಮಿತ್ರರಾಗುವಂತೆ ಮಾಡಬೇಕು ಅಂತಹ ಬ್ಯಾಂಕ್ ಸುಧಾರಣೆಗಳನ್ನು ಹಾಗು ಕೇಂದ್ರ ಸರಕಾರಗಳು ತರಲು ಮುಂದಾಗಬೇಕಿದೆ. ಆದರೆ ಎಷ್ಟೇ ಚರ್ಚೆಗಳು ನಡೆಯಲಿ ಪ್ರಾಯೋಗಿಕವಾಗಿ ಈ ನೀತಿಗಳು ಅನುಷ್ಠಾನಗೊಳ್ಳದಿರುವುದು, ಹೀಗೆ ಗ್ರಾಮೀಣ ಸಾಲದ ಜಾಲದಲ್ಲಿ ಪಟ್ಟಭದ್ರಹಿತಾಸಕ್ತಿ, ರೈತರು ಪಡೆದ ಸಾಲವನ್ನು ಸದುಪಯೋಗ ಮಾಡಿಕೊಳ್ಳದಿರುವುದು ಅಧ್ಯಯನದ ಕಾಲದಲ್ಲಿ ಕಂಡು ಬಂದ ಅಂಶಗಳು, ಬಹಳಷ್ಟು ರೈತರು ಹಸುಗಳ ಖರೀದಿಗೋ , ಕೊಳವೆಬಾವಿಗಳ ಕೊರೆಸುವುದಕ್ಕೂ ಅಥವಾ ಭೂ ಅಭಿವೃದ್ಧಿಗೊಳಿಸುವುದಕ್ಕೂ ಯೋಜನೆ ಸಿದ್ದಪಡಿಸಿ ಬ್ಯಾಂಕಿಗೆ ನೀಡುತ್ತಾರೆ, ಬ್ಯಾಂಕ್ ಸಾಲವನ್ನು ಮಂಜೂರು ಮಾಡಿದ ಮೇಲೆ ಅದನ್ನು ನಿಗದಿತ ಯೋಜನೆಗಳನ್ನು ಕೈಗೊಳ್ಳುವಲ್ಲಿ ಸಫಲರಾಗಿಲ್ಲ, ಇದನ್ನು ಮನೆಕಟ್ಟಿಸುವುದಕ್ಕೆ ಮದುವೆಗಳಿಗೆ ಅಥವಾ ಇನ್ನಿತರ ಕೃಷಿಯೇತರ ಖರ್ಚುಗಳಿಗೆ ಉಪಯೋಗಿಸಿ ಕೊಂಡಿರುವುದೆ ಮುಖ್ಯ ಅಂಶವಾಗಿದೆ. ನಾನು ಸಮೀಕ್ಷೆ ಮಾಡಿದ ಪ್ರಕಾರ 8 (26.66%)

ಜನ ಸಾಲ ಪಾವತಿಸಿದಿದ್ದರೆ ಇನ್ನು 22 (73.33%) ಜನ ಸಾಲವನ್ನು ಮರು ಪಾವತಿಸಿಲ್ಲ ಅದು ಬಡ್ಡಿಯೊಂದಿಗೆ ಬೆಳೆಯುತ್ತಾ ಹೋಗುತ್ತಿದೆ. ಕಿತ್ತು ತಿನ್ನುವ ಬಡತನದಿಂದಾಗಿ ಈ ಸಾಲವ್ನನು ರೈತರು ಕೃಷಿಯೇತರ ಖರ್ಚುಗಳಿಗೆ ಬಳಸಿಕೊಂಡು ಆರ್ಥಿಕ ಚಟುವಟಿಕೆಗಳಲ್ಲಿ ಹೂಡದೆ, ಹಣವನ್ನು ವ್ಯರ್ಥಗೊಳಿಸಿರುವ ಅಂಶವೆ ಹೆಚ್ಚಾಗಿ ಕಂಡು ಬಂದಿದೆ. ಹೈನುಗಾರಿಕೆಯಲ್ಲೆ, ತೋಟಗಾರಿಕೆಯಲ್ಲೊ ಹಣವನ್ನು ಹೂಡಿದ್ದರೆ, ಅದು ಲಾಭದಾಯಕವಾಗಿ ಉದಾಹರಣೆಗೆ ರೂ. 8000 ಹೂಡಿದ್ದರೆ ರೂ. 20000 ಆದಾಯ ಬಂದರೆ ಸಾಲ ಚುಕ್ತಾ ಮಾಡಿ ಉಳಿದದನ್ನು ಮುಂದಿನ ಹೂಡಿಕೆ ಹಣವಾಗಿ ಉಪಯೋಗಿಸಿಕೊಂಡು ಸ್ವಂತ ಖರ್ಚುಗಳಿಗೂ ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಬಹುತೇಕ ರೈತರು ಸ್ವಂತ ಖರ್ಚಿಗೆ ಹಣಬಳಸಿಕೊಂಡು ಬರಿಗೈಯಲ್ಲಿದ್ದಾರೆ, ಜೊತೆಗೆ ಮುಂದಿನ ಸಾಲಗಳಿಗೆ ಖಾಸಗಿ ಲೇವಾದೇವಿಗಾರರ ಕಡೆಗೆ ನೋಡುತ್ತಿದ್ದಾರೆ. ಬಿಳಿ ಜಾಜಿಯಲ್ಲಿ ಅತ್ಯಧಿಕ ರೈತರು ಸಾಲವನ್ನು ಮರುಪಾವತಿಸುವಲ್ಲಿ ಹಿಂದೆ ಬಿದ್ದಿದ್ದಾರೆ, ಹೀಗೆ ಹಿಂದೆ ಬೀಳಲು ಕಾರಣಗಳನ್ನು ಹೀಗಾಗಲೆ ನಾವು ನೋಡಿದ್ದೇವೆ., ಬಹಳಷ್ಟು ಮಧ್ಯವರ್ತಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳು ಸಾಲದ ಹಣವನ್ನು ಕಮೀಷನ್ ರೂಪದಲ್ಲಿ ನುಂಗಿಹಾಕಿದ್ದಾರೆ. ಜಾಜಿಯಲ್ಲಿ ಒಟ್ಟು 500 ಜನರು ಸಾಲ ಪಡೆದಿದ್ದು. ಹಿಂದುಳಿದ ವರ್ಗಗಳು 250 (50%) ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರು 150 (30%) ಜನ ಹಾಗೂ ಸಾಮಾನ್ಯ ವರ್ಗದ ವರು 100 (20%) ಜನ ಸಾಲ ಪಡೆದಿದ್ದಾರೆ, ಆದರೆ ಹಿಂದಳಿದ ವರ್ಗಗಳಿಗೆ ಹಾಗೂ ಸಾಮಾನ್ಯ ಗುಂಪಿಗೆ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸವಿಲ್ಲದಿರುವುದರಿಂದ ಇವರಲ್ಲಿ ಹೆಚ್ಚಿನ ಜನ ಮರು ಪಾವತಿಸಿಲ್ಲ, ಇವರಿಗೆ ಯಾವುದೇ ವಿಶೇಷ ಸೌಲಭ್ಯವಿಲ್ಲ ಆದರೆ ಕೆಲವು ವಿಶಿಷ್ಟ ಸೌಲಭ್ಯಗಳನ್ನು ಹೊಂದಿರುವ ಪರಿಶಿಷ್ಟ ಜಾತಿ ಪಂಗಡಗಳಲ್ಲೂ ಮರುಪಾವತಿ ಮಾಡದಿರುವವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಇದೆ. ನಾನು ಈಗಾಗಲೆ ತಿಳಿಸಿರುವಂತೆ ಮರು ಪಾವತಿ ಆಗದಿರುವುದು ಯಾವ ಉದ್ದೇಶವಾಗಿ ಸಾಲ ಪಡೆದರೂ ಆ ಉದ್ದೇಶಕ್ಕಾಗಿ ಸಾಲವನನು ಬಳಸದೆ ಇರುವುದು ಸಾಲ ಕೃಷಿ ಸಂಪನ್ಮೂಲದಲ್ಲಿ ಒಂದು ಮುಖ್ಯ ಸಂಪನ್ಮೂಲ, ಸಾಲ ಎಂಬುದು ಉದ್ಯೋಗ ಸೃಷ್ಟಿಸುವ ಚಟುವಟಿಕೆಗಳಿಗೆ ಒತ್ತಾಸೆಯಾಗಿರುವಂತೆ ನೋಡಿಕೊಳ್ಳಬೇಕು ಆದರೆ ಇಲ್ಲಿನ ಜನ ಸಾಲವನ್ನು ಅನುತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವುದೇ ಹೆಚ್ಚಾಗಿ ಕಂಡುಬಂದಿದೆ. ಹೀಗೆ ಸ್ವಂತ ಖರ್ಚಿಗೆ ಅದೂ ಅನುತ್ಪಾದಕ ಚಟುವಟಿಕೆಗಳಿಗೆ ಸಾಲದ ಹಣ ದುರ್ಬಳಕೆಯಾಗುವುದನ್ನು ಬ್ಯಾಂಕಿನವರು ತಡೆಯುವಂತಹ ವ್ಯವಸ್ಥೆ ಸೃಷ್ಟಿಯಾಗಬೇಕು ಬ್ಯಾಂಕ್ ಸಾಲ ಗ್ರಾಮೀಣ ಪ್ರದೇಶಗಳಲ್ಲಾಗಲಿ ಉದ್ಯೋಗ ಸೃಷ್ಟಿಗೆ ಅನುವು ಮಾಡಿಕೊಟ್ಟು ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕಿದೆ ಆದರೆ ಬ್ಯಾಂಕ್ ಸಾಲದಲ್ಲಿ ಪಾರದರ್ಶಕತೆ ಇಲ್ಲದಿರುವುದು, ರೈತರ ಸಾಲ ದುರ್ಬಳಕೆಯಾಗುತ್ತಿರುವುದು ಇವೆಲ್ಲ ಸೇರಿ, ಇಂದು ಬ್ಯಾಂಕಿಂಗ್ ಸಾಲ ರೈತರ ಪಾಲಿಗೆ ಮರಣಶಾಸನವಾಗಿದೆ.

ರಸಗೊಬ್ಬರಗಳ ಬಳಕೆ:

ಬಿಳಿಜಾಜಿಯಲ್ಲಿ ಕಂಡು ಬರುವ ಅಂಶವೆಂದರೆ, ಸಾಂಪ್ರದಾಯಿಕ ಗೊಬ್ಬರಗಳ ಬಳಕೆ ಇಲ್ಲ, ಜೊತೆಗೆ ಮಿಶ್ರಣದ ಗೊಬ್ಬರದ ಬಳಕೆಯು ಇಲ್ಲಿ ಮಾಡುವುದಿಲ್ಲ. ಸಂಪೂರ್ಣವಾಗಿ ರಸಗೊಬ್ಬರಗಳ ಮೇಲೆ ಬೇಸಾಯ ಅವಲಂಬಿತವಾಗಿದೆ, ಇದಕ್ಕೆ ಪ್ರಮುಖ ಕಾರಣವೆಂದರೆ ನಗರೀಕರಣ, ನಗರೀಕರಣದಿಂದಾಗಿ ಎಲ್ಲ ರೈತರು ಕೊಟ್ಟಿಗೆ ಗೊಬ್ಬರ ಬಳಸುವುದನ್ನು ಬಿಟ್ಟಿದ್ದಾರೆ, ಈ ರೀತಿ ಸಂಪೂರ್ಣವಾಗಿ ರಸಗೊಬ್ಬರಗಳ ಮೇಲೆ ಅವಲಂಬಿತವಾಗಿರುವುದರಿಂದ ಇಳುವರಿ ಹೆಚ್ಚುತ್ತದೆಂಬ ನಂಬಿಕೆಯು ಇದೆ, ಅನುಭವದ ಮೂಲಕ ಹೇಳುವುದಾದರೆ ಇಳುವರಿಯೇನು ಹೆಚ್ಚಾಗಿದೆ, ಯಾಕೆಂದರೆ ಹೈಬ್ರಿಡ್ ತಳಿಗಳು ಹೆಚ್ಚಾಗಿ ರಸಗೊಬ್ಬರಗಳಿಗೆ ಪ್ರತಿಕ್ರಿಯೆಸುತ್ತವೆ ಎಂಬುದೇ ರೈತರ ಅನಿಸಿಕೆ ರಸಗೊಬ್ಬರಗಳನ್ನು ಎಷ್ಟು ಕಡಿಮೆ ಮಾಡುತ್ತವೊ ಅಷ್ಟು ಇಳುವರಿ ಕಡಿಮೆಯಾಗುತ್ತದೆಂಬುದೆ ಇವರ ಅಭಿಪ್ರಾಯ, ಆದ್ದರಿಂದ ಕೊಳವೆ ಬಾವಿಗಳಿಂದ ಬರುವ ನೀರನ್ನು ಹರಿಸಿ ನೀರಾವರಿ ಮಾಡುವುದರ ಮೂಲಕ , ರಸಗೊಬ್ಬರ ಗಳನ್ನು ಬಳಸುವುದು ಆರ್ಥಿಕವಾಗಿ ಧನಾತ್ಮಕ ಪರಿಣಾಮವನ್ನು ಬೀರುತ್ತದೆಂಬುದೆ ಅನಿಸಿಕೆ, ಆದರೆ ಇದು ದೂರಗಾಮಿಯಾಗಿ ಮಣ್ಣಿನ ಮೇಲೆ ಬೀರುವ ಋಣಾತ್ಮಕ ಪರಿಣಾಮಗಳ ಬಗ್ಗೆ ರೈತರು ಯೋಚಿಸುವುದಿಲ್ಲ, ಇಲ್ಲಿನ ಬಹುತೇಕ ರೈತರು, ರಸಗೊಬ್ಬರಗಳು ಮಣ್ಣಿನ ಗುಣಮಟ್ಟವನ್ನೇನು ಕೆಡಿಸುವುದಿಲ್ಲ, ಎಂಬುದೇ ಅಭಿಪ್ರಾಯ ಆದರೆ ಕೋಲಾರ ಜಿಲ್ಲೆಯಲ್ಲಿ ನಡೆಸಿದ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ರಸಗೊಬ್ಬರಗಳನ್ನು ಅತಿ ಹೆಚ್ಚು ಬಳಸಿದರೆ ಇಳುವರಿಯನ್ನೇನು ಕೊಡುತ್ತವೆ ಆದರೆ ಮಣ್ಣಿನ ಗುಣಮಟ್ಟವನ್ನು ಕೆಡಿಸುತ್ತದೆ. ಎಂಬುದು ಆದರೆ ಇಲ್ಲಿನ ರೈತರು ಹೆಚ್ಚು ಹೆಚ್ಚಾಗಿ ತರಕಾರಿ ಬೆಳೆಗಳನ್ನು ಹೂವಿನ ಬೆಳೆಗಳನ್ನು ಬೆಳೆಯುವುದರಿಂದ ತರಕಾರಿಗಳನ್ನು ಕಿತ್ತಮೇಲೆ ಮೇಲೆ ಇವುಗಳ ಸಾವಯವ ತ್ಯಾಜ್ಯಗಳನ್ನು ಮತ್ತೆ ಮಣ್ಣಿಗೆ ಹಾಕಿ ಉಳುಮೆ ಮಾಡುವ ಪದ್ಧತಿಯಿಂದ ರಸಗೊಬ್ಬರಗಳನ್ನು ಹೆಚ್ಚಾಗಿ ಬಳಸಿದರು, ಮಣ್ಣಿನ ಗುಣಮಟ್ಟ ಕೆಡದೇ ಇರಲು ಕಾರಣ ಎಂದು ಪರಿಭಾವಿಸಬಹುದು, ಆದರೆ ಈ ಗ್ರಾಮದ ವಿಶಿಷ್ಟತೆಯೆಂದರೆ ಇದು ಕೋಲಾರ ಜಿಲ್ಲೆಯಲ್ಲಿರುವ ಗ್ರಾಮಗಳಂತಲ್ಲ ಎಂಬುದು ಸ್ಪಷ್ಟವಾಗಿದೆ, ಇಲ್ಲಿನ ರೈತರು ರಸಗೊಬ್ಬರ ಬಳಸುವುದು ಚಿಕ್ಕ ಹಿಡುವಳಿಗಳೇ ವಿಪುಲವಾಗಿರುವುದರಿಂದ ಎಂಬುದು ಕಂಡುಬಂದಿತು, ಚಿಕ್ಕ ಹಿಡುವಳಿಗಳಲ್ಲಿ ಇಳುವರಿಯನ್ನು ಗರಿಷ್ಠ ಮಟ್ಟದವರೆಗೂ ಪಡೆಯಬೇಕಾದರೆ ರಸಗೊಬ್ಬರಗಳ ಬಳಕೆ ಅತ್ಯವಶ್ಯಕ, ಈಗಾಗಲೆ ನಾನು ತಿಳಿಸಿರುವಂತೆ ಇವರು ಬಳಸುವ ಸಂಕರಗೊಂಡ ತಳಿಗಳು, ರಸಗೊಬ್ಬರಗಳಿಗೆ ಹೆಚ್ಚು ಪ್ರತಿಕ್ರಿಯಿಸುವುದರಿಂದ ರೈತರಿಗೆ ಇದು ಅಭ್ಯಾಸವಾಗಿ ಹೋಗಿದೆ, ಆದ್ದರಿಂದ ನಗರಗಳ ಅಂಚಿನಲ್ಲಿರುವ ಗ್ರಾಮಗಳು ಹೆಚ್ಚು ಹೆಚ್ಚು ತರಕಾರಿ ಬೆಳೆಗಳನ್ನು ಬೆಳೆಯುವುದರಿಂದ ರಸಗೊಬ್ಬರ ಬಳಕೆ ಒಂದು ಸಾಮಾನ್ಯ ಅಭ್ಯಾಸವಾಗಿ ಹೋಗಿದೆ. ಇಲ್ಲಿ ಬೆಳೆಯುವ ಎಲೆಕೋಸು, ಹೂ ಕೋಸು, ಗಡ್ಡೆ ಕೋಸು, ಹುರುಳಿಕಾಯಿ, ಕುಂಬಳ, ಚಪ್ಪರ ಬದನೆ , ಬದನೆಕಾಯಿಗಳಲ್ಲಿ ಈಗ ಸಂಕರಗೊಂಡ ತಳಿಗಳು ಅಧಿಕ ಇಳುವರಿ

ಕೊಡಬೇಕೆಂದರೆ ತೋಟಗಾರಿಕೆ ಇಲಾಖೆಯವರ ಶಿಫಾರಸ್ಸಿಗಿಂತ ಹೆಚ್ಚಿನ ಗೊಬ್ಬರ ಬಳಸಬೇಕು ಎಂಬ ನಂಬಿಕೆ ರೈತರಲ್ಲಿರುವುದರಿಂದ, ಇವರು ವಿಶೇಷವಾಗಿ ರಸಗೊಬ್ಬರಗಳನ್ನು ವಿಪುಲ ಪ್ರಮಾಣದಲ್ಲಿ ಬಳಸುತ್ತಾರೆ ಎಂಬುದು ಅಧ್ಯಯನದ ಸಮಯದಲ್ಲಿ ಕಂಡು ಬಂದ ಅಂಶ ಹಾಗೂ ರಸಗೊಬ್ಬರಗಳ ಬಳಕೆಯನ್ನು ಹೆಚ್ಚಾಗಿ ಹೇಳುವುದರಿಂದ ಹಾಗೂ ಬೆಂಗಳೂರಿನ ಅಂಚಿನಲ್ಲಿರುವುದರಿಂದ ಎಲ್ಲಾ ವಿಸ್ತರಣಾ ಸಂಸ್ಥೆಗಳು ಈ ಗ್ರಾಮಗಳಿಗೆ ತಂತ್ರಜ್ಞಾನ ವರ್ಗಾವಣೆಗೆ ಲಗ್ಗೆ ಇಡುವುದರಿಂದ. ಬಿಳಿಜಾಜಿ ಗ್ರಾಮದಲ್ಲಿ ಹೆಚ್ಚಾಗಿ ಎಲ್ಲರು ರಸಗೊಬ್ಬರ ಆಧಾರಿತ ವ್ಯವಸಾಯಕ್ಕೆ ಪ್ರಾಧಾನ್ಯತೆ ನೀಡುತ್ತಿರುವುದು. ಕೃಷಿ ವಿ.ವಿ. ವಿಸ್ತರಣಾ ಘಟಕದ ಪ್ರಚಾರ ಸಾಮಗ್ರಿಗಳನ್ನು ಪರಿಶೀಲಿಸಿದರೆ ಇದು ಹೆಚ್ಚಾಗಿ ಬೆಂಗಳೂರು ಪ್ರದೇಶಕ್ಕೆ ಅನ್ವಯಿಸುವ ತೋಟಗಾರಿಕೆ ಬೆಳೆಗೆ ಸಂಬಂಧಿಸಿದ್ದು, ಇದರಲ್ಲಿ ಪ್ರತಿ ತರಕಾರಿಬೆಳೆಗಳಿಗೆ ಎರಡು ಮೂರು ತಳಿಗಳಿಗಿಂತ ಅಧಿಕ ತಳಿಗಳನ್ನು ಶಿಫಾರಸ್ಸನ್ನು ಮಾಡಿರುತ್ತಾರೆ, ಹಾಗೂ ಇದರ ಜೊತೆಗೆ ರಸಗೊಬ್ಬರಗಳನ್ನು ಬಳಸುವಂತೆ ಪೋಷಕಾಂಶಗಳ ರೂಪದಲ್ಲಿ ಶಿಫಾರಸ್ಸು ಮಾಡಿರುತ್ತಾರೆ, ಇದೇ ರೀತಿಯ ರಸಗೊಬ್ಬರ ಉತ್ಪಾದಕತೆಯು ಇಲ್ಲಿ ಕ್ಷೇತ್ರ ಪ್ರಾತ್ಯಕ್ಷಿತೆಗಳನ್ನು ತೆಗೆದುಕೊಂಡು ರಸಗೊಬ್ಬರಗಳನ್ನು ಬಳಸುವಂತೆ ಮನವಿ ಮಾಡುತ್ತಾರೆ, ಈ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ರಸಗೊಬ್ಬರ ಬಿಳಿ ಜಾಜಿಯಲ್ಲಿ ತೀವ್ರ ಸ್ವರೂಪದಲ್ಲಿರುವುದು, ಎಲ್ಲ ಸಂಸ್ಥೆಗಳ ವಿಸ್ತರಣಾ ಘಟಕಗಳು ಮಾಡುವ ತಳಿ ಶಿಫಾರಸ್ಸುಗಳು ಹಾಗೂ ಈ ತಳಿಗಳಿಗೆ ಬಳಸಲು ರಸಗೊಬ್ಬರ, ಬೀಜದ ಪ್ರಾಮಾಣ ಕೀಟನಾಶಕಗಳ ಪ್ರಮಾಣ ಇವೆಲ್ಲ ಸೇರಿರುತ್ತದೆ, ಆದ್ದರಿಂದ ರೈತರು ತಮ್ಮ ಸಣ್ಣ ಹಿಡುವಳಿಗಳನ್ನು ಉತ್ಪಾದಕವಾಗಿಸಲು ಅತಿ ಹೆಚ್ಚು ರಸಗೊಬ್ಬರಗಳನ್ನು ಬಳಸುವುದನ್ನು ರೂಢಿಸಿಕೊಂಡಿದ್ದಾರೆ.

ಸಮೀಕ್ಷೆಯ ಪ್ರಕಾರ 30 ಜನ ರೈತರಲ್ಲಿ ವರ್ಷಕ್ಕೆ ಎಕರೆಗೆ ರೂ. 5000 ಕ್ಕಿಂತ ಹೆಚ್ಚು ಖರ್ಚು ಮಾಡುವವರು 25 (83.33) ಜನ ಇನ್ನು 5 (16.60%) ಜನ ರೂ 5000 ಕ್ಕಿಂತ ಕಡಿಮ ಖರ್ಚು ಮಾಡುತ್ತಾರೆ. ಇದಕ್ಕೆ ಕಾರಣಗಳನ್ನು ಗಮನಿಸೋಣ ಇಲ್ಲಿನ ರೈತರು ತರಕಾರಿ ಬೆಳೆಗಳನ್ನು ಬೆಳೆಯುವುದರಿಂದ ನಾವು ಈಗಾಗಲೆ ತಿಳಿಸಿರುವಂತೆ ಈ ಬೆಳೆಗಳಿಗೆ ಶಿಫಾರಸ್ಸು ಮಾಡಿರುವ ರಸಗೊಬ್ಬರಗಳ ಬಳಕೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ರೈತರು ಶಿಫಾರಸ್ಸು ಮಾಡಿರುವ ರಸಗೊಬ್ಬರಗಳಿಗಿಂತ ಹೆಚ್ಚು ಬಳಸುತ್ತಾರೆ ಎಂಬುದು ನಾವು ತಿಳಿದಿರುವ ಅಂಶ ಹಾಗೂ ಸಹಕಾರ ಸಂಘದಿಂದ ಗೊಬ್ಬರಗಳನ್ನು ವಿತರಿಸುವುದರಿಂದ ಇವು ಹೆಚ್ಚಿನ ರೈತರಿಗೆ ಕೈಗೆಟುಕುವಂತೆ ಇರುತ್ತದೆ. ಆದ್ದರಿಂದ ರೈತರು ಯಥೇಚ್ಚವಾಗಿ ರಸಗೊಬ್ಬರಗಳನ್ನು ಬಳಸುತ್ತಿರುವುದು ಪ್ರಾಥಮಿಕ ಸಮೀಕ್ಷೆಯ ಪ್ರಕಾರ ಸಹಕಾರಿ ಸಂಘಗಳಿಂದ ರಸಗೊಬ್ಬರಗಳನ್ನು ಕೊಳ್ಳುವವರು 26 (86.66%) ಜನ ಆದರೆ ಖಾಸಗಿ ಮಳಿಗೆಗಳಿಂದ ಕೊಳ್ಳುವವರು 6 (13.33%) ಜನ ಮಾತ್ರ ಇಲ್ಲಿ ರಸಗೊಬ್ಬರ ವಿತರಣಾ ವ್ಯವಸ್ಥೆ ಹೆಚ್ಚು ಸಮರ್ಪಕವಾಗಿದೆ, ಎಂಬುದು ವೇದ್ಯವಾಗುತ್ತದೆ, ಸಹಕಾರ ಸಂಘಗಳು ವ್ಯಾಪಕವಾಗಿ ಹೆಸರುಘಟ್ಟದಲ್ಲಿರುವುದರಿಂದ ಸಹಕಾರಿ ಸಂಘಗಳು ಸಾಲ ಕೊಡುವುದರ

ಮೂಲಕ ರೈತರನ್ನು ಆಕರ್ಷಿಸುತ್ತದೆ. ಇಲ್ಲಿ ಗುಣಮಟ್ಟ ಕಾಯ್ದಿಟ್ಟುಕೊಳ್ಳುವ ಬಗ್ಗೆ 26 (86.66%) ಜನ ರೈತರು ತೃಪ್ತಿ ವ್ಯಕ್ತಪಡಿಸುತ್ತಾರೆ ಉಳಿದ 4 (13.33%) ಜನ ಸಂಪೂರ್ಣ ತೃಪ್ತಿ ವ್ಯಕ್ತಪಿಸುವುದಿಲ್ಲ. ಹೆಸರು ಘಟ್ಟದಲ್ಲಿ ಸುಮಾರು ಎರಡು ಸಹಕಾರಿ ಸಂಘಗಳಿವೆ ಹಾಗೂ 5 ಖಾಸಗಿ ಮಳಿಗೆಗಳು ಇವೆ. ಇಲ್ಲಿ ಖಾಸಗಿ ಮಳಿಗೆಗಳಿಗೆ ಬರಿ ಬಿಳಿ ಜಾಜಿ ಗ್ರಾಮದ ರೈತರೆಷ್ಟು ಗ್ರಾಹಕರಲ್ಲಿ ಸುತ್ತಮುತ್ತಲ್ಲಿ ಗ್ರಾಮಗಳವರೂ ಸಹ ಗ್ರಾಹಕರಾಗಿದ್ದಾರೆ, ಸಹಕಾರ ಸಂಘ ಸಂಸ್ಥೆಗಳಿಗೂ ಸುತ್ತಮುತ್ತಲಿನ ಗ್ರಾಮಸ್ಥರು ಗ್ರಾಹಕರಾಗಿದ್ದಾರೆ. ಅಧಿಕೃತ ರಸಗೊಬ್ಬರಗಳ ವಿತರಕರ ಬಗ್ಗೆ ರೈತರರಿಗೆ 27 (90%) ರವರೆಕ್ಕೆ ಸರಿಯಾದ ಮಾಹಿತಿ ಇದೆ, ಆದರೆ 3 (10%) ಜನಕ್ಕೆ ಈ ಮಾಹಿತಿ ಇಲ್ಲ. ಇದು ಸ್ಪಷ್ಟಪಡಿಸುವುದೇನೆಂದರೆ ರಸಗೊಬ್ಬರಗಳು ಬಳಸುವುದು ಹಲವಾರು ವರ್ಷಗಳಿಂದ ರೂಢಿಗತವಾಗಿರುವುದರಿಂದ ಇಲ್ಲಿ ರಸಗೊಬ್ಬರಗಳ ಅಧಿಕೃತ ಮಾರಾಟಗಾರರ ಬಗ್ಗೆ ಬಳಷ್ಟು ಜನಕ್ಕೆ ಮಾಹಿತಿ ಇದೆ, ಇವರು ಗುಣ ಮಟ್ಟವನ್ನು ಕಾಯ್ದುಕೊಳ್ಳುವುದರ ಜೊತೆಗೆ ಸಾಲವನ್ನು ಕೊಡುವುದರಿಂದ ಅಧಿಕೃತ ಮಾರಾಟಗಾರರ ಬಗ್ಗೆ ಮಾಹಿತಿ ಇನ್ನೂ ಸ್ಪಷ್ಟವಾಗಿ ಇದೆ, ರೈತರು ನಿರಂತರವಾಗಿ ರಸಗೊಬ್ಬರಗಳನ್ನು ಬಳಸುವುದರಿಂದ ಹಾಗೂ ಪದೇ ಪದೇ ರಸಗೊಬ್ಬರಗಳನ್ನು ಕೊಳ್ಳುವುದರಿಂದ ಯಾರು ಯಾರು ಅಧಿಕೃತವಾಗಿ ಮಾರಾಟ ಮಾಡುತ್ತಾರೆ ಎಂಬುದು ಸ್ಪಷ್ಟವಾಗಿ ತಿಳಿದಿರುತ್ತದೆ. ಈ ಮಧ್ಯದಲ್ಲೂ ಒಮ್ಮೆ ಕೆಂಚಪ್ಪ ಎಂಬ ರೈತರು 4 ಚೀಲ ಡಿ.ಎ.ಪಿ. ರಸಗೊಬ್ಬರ ತಂದಿದ್ದರು, ಆದರೆ ಇದನ್ನು ಬೆಳೆಗಳಿಗೆ ಬಳಸಿದಾಗ ಇವು ಪರಿಣಾಮಕಾರಿಯಾಗಿ ಕೆಲಸ ಮಾಡುವಲ್ಲಿ ಸೋತಿತ್ತು ಏಕೆಂದರೆ ಈ ರಸಗೊಬ್ಬರ ಕಲ ಮಿಶ್ರಿತ ರಸಗೊಬ್ಬರವಾಗಿತ್ತು, ಈ ಗೊಬ್ಬರದಲ್ಲಿ ಮಣ್ಣಿನ ಪ್ರಮಾಣವೇ ಹೆಚ್ಚಾಗಿತ್ತು ಇಂತಹ ಅನುಭವ ಹಲವಾರು ರೈತರಿಗೆ ಆಗಿದೆ. ಎಂಬುದೇ ಕೆಂಚಪ್ಪನ ಅಳಲು, ಯಾಕೆಂದರೆ ಖಾಸಗಿ ವಿತರಕರು ಒಮ್ಮೊಮ್ಮೆ ಚೀಲದ ಮೇಲೆ ನಮೂದಿಸಿದ ಬೆಲೆಗಿಂತ ಕಡಿಮೆ ಪ್ರಮಾಣದಲ್ಲಿ ರೈತರಿಗೆ ಮಾರಾಟ ಮಾಡುತ್ತಾರೆ, ರೈತರು ನಂಬಿಕೆಯ ಮೇಲೆ ಈ ಖಾಸಗಿ ವಿತರಕರಿಂದ ಪಡೆದಿರುತ್ತಾರೆ, ಆದರೆ ಕಲಬೆರೆಕೆ ರಸಗೊಬ್ಬರ ಪೂರೈಕೆಯಾಗದಂತ ನೋಡಿಕೊಳ್ಳಬೇಕಾಗಿರುವುದು ಕೃಷಿ ಇಲಾಖೆ, ಕೃಷಿ ಇಲಾಖೆ ಖಾಸಗಿ ವಿತರಕರಿಗೆ ಪರವಾನಿಗೆ ನೀಡುವ ಇಲಾಖೆ, ಆದರೆ ಕೃಷಿ ಅಧಿಕಾರಿಗಳ ಬೇಜವಾಬ್ದಾರಿ ತನ ಹಾಗೂ ಭ್ರಷ್ಟಾಚಾರದಿಂದಾಗಿ ರಸಗೊಬ್ಬರಗಳ ಗುಣಮಟ್ಟ ಹಲವು ವೇಳೆ ಕಲಬೆರೆಕೆ ರಸಗೊಬ್ಬರಗಳನ್ನು ವಿತರಕರು ವಿತರಿಸುತ್ತಾರೆ, ಹೀಗೆ ವಿತರಿಸುವುದರಿಂದ ರೈತರ ಬದುಕಿನ ಜೊತೆ ಚೆಲ್ಲಾಟವಾಡಿದಂತೆ, ಯಾಕೆಂದರೆ ರೈತರು ಕಷ್ಟ ಪಟ್ಟು ಉಳಿಸಿರುವ ಹಣದಿಂದ ರಸಗೊಬ್ಬರಗಳನ್ನು ಕೊಳ್ಳುತ್ತಾರೆ, ಆದರೆ ಅವರಿಗೆ ಕಲಬೆರೆಕೆ ರಸಗೊಬ್ಬರ ನೀಡಿದರೆ ಇದಕ್ಕೆ ಉತ್ತರಿಸಬೇಕಾಗಿರುವವರು ಕೃಷಿ ಇಲಾಖೆಯವರು ಆದರೆ ಕೃಷಿ ಇಲಾಖೆಯವರು ನಿಷ್ಕ್ರಿಯರಾಗಿರುವುದರಿಂದ, ಇನ್ನು ಯಾರ ಬಳಿ ರೈತರು ತಮ್ಮ ಅಳಲನ್ನು ತೋಡಿಕೊಳ್ಳಲು ಸಾಧ್ಯ,. ಕೆಲವು ವೇಳೆ ಕೃಷಿ ಇಲಾಖೆ ಗಮನಕ್ಕೂ ಬಂದರು, ಅವರು ಒಂದು ತನಿಖೆ ಸಮಿತಿ ರಚಿಸಿ, ಕೈತೊಳೆದು ಕೊಳ್ಳುತ್ತದೆ, ಜೊತೆಗೆ ಇಂತಹ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವ

ರಸಗೊಬ್ಬರ ಮಾರಾಟಗಾರರ ಪರವಾನಿಗೆಯನ್ನು ತಾತ್ಕಾಲಿಕವಾಗಿ ತಡೆಹಿಡಿದು ನಂತರ ನವೀಕರಿಸುತ್ತಾರೆ, ರೈತರು ಈ ವಿಷಯವನ್ನು ಮರೆತೇ ಹೋಗಿರುತ್ತಾರೆ, ಹೀಗೆ ಸಂಪನ್ಮೂಲ ಮಾರುಕಟ್ಟೆಯಲ್ಲಿ ಹೊಸ ಹೊಸ ಕಂಪನಿಗಳು, ಹೊಸ ಹೊಸ ತರಕಾರಿ ತಳಿ ಬೀಜಗಳನ್ನು ಮಾರಾಟ ಮಾಡುವುದು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುವ ಅಂಶ. ಇವು ಕಡಿಮೆ ಗುಣಮಟ್ಟದ ಬೀಜಗಳೇ ಅಥವಾ ಅಲ್ಲವೇ ಗುಣಮಟ್ಟವನ್ನು ಕಾಯ್ದಿಟ್ಟುಕೊಂಡಿದ್ದಾರೆ, ಎಂಬುದನ್ನು ಕೃಷಿ ಇಲಾಖೆ, ಅಥವಾ ತೋಟಗಾರಿಕೆ ಇಲಾಖೆ ಅಧಿಕಾರಿಗಳೂ ಜವಾಬ್ದಾರಿ ಆದರೆ ಇಂತಹ ಕಳಪೆ ಗುಣಮಟ್ಟದ ಬೀಜಗಳು, ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಜಾಲವನ್ನು ಹೊಂದಿದೆ, ಇವುಗಳನ್ನು ಕೇಳುವವರು ಯಾರು ಇಲ್ಲ. ಪ್ರಾಥಮಿಕ ಸಮೀಕ್ಷೆಯ ಸಂದರ್ಭದಲ್ಲಿ ರೈತರು ವ್ಯಕ್ತಪಡಿಸಿದ ಅಭಿಪ್ರಾಯ ಒಮ್ಮೊಮ್ಮ ಈ ಬೀಜಗಳನ್ನು ಬಿತ್ತನೆ ಮಾಡಿದರೆ ಇವು ಮೊಳಕೆಯೊಡೆಯುವುದೇ ಇಲ್ಲ ಆಗ ಸಾವಿರಾರು ರೂಪಾಯಿ ನಷ್ಟಗಳನ್ನು ಅನುಭವಿಸಬೇಕಾಗುತ್ತದೆಂಬ ಅಳಲು ಇಲ್ಲಿ ರಸಗೊಬ್ಬರಗಳನ್ನು ಸಾಗಾಣಿಕೆ ಮಾಡಲು ಬಳಸುವ ಸಾರಿಗೆ ವ್ಯವಸ್ಥೆ ರಿಕ್ಷಾ ಮತ್ತು ಸೈಕಲ್ಲುಗಳನ್ನು ಬಳಸುತ್ತಾರೆ ಕೆಲವರು ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ, ಒಂದು ಮೂಟೆ ಸಾಗಾಣಿಕೆಗೆ ತಗಲುವ ವೆಚ್ಚ ರೂ. 30 ರಿಕ್ಷದಲ್ಲಿ ಸಾಗಾಣಿ ಮಾಡುವವರು 18 (60%) ಜನ ಸೈಕಲಲ್ಲಿ ಸಾಗಾಣಿಕೆ ಮಾಡುವವರು 6 (20%) ಜನ, 6 (20%) ಜನ ದ್ವಿಚಕ್ರವಾಹನದ ಮೂಲಕ ಸಾಗಾಣಿಕೆ ಮಾಡುತ್ತಾರೆ, ಬಿಳಿ ಜಾಜಿ ಹೆಸರು ಘಟ್ಟಕ್ಕೆ 3 ಕಿ.ಮೀ. ದೂರದಲ್ಲಿ ಇರುವುದರಿಂದ ಸಾಗಾಣಿಕೆಯಲ್ಲಿ ಅಂತಹ ಸಮಸ್ಯೆಗಳೇನೂ ಇರುವುದಿಲ್ಲ, ಆದರೆ ಒಟ್ಟು ಉತ್ಪನ್ನದ ಬೆಲೆಯಲ್ಲಿ ಶೇ. 20 ಕ್ಕಿಂತ ಜಾಸ್ತಿ ವೆಚ್ಚ ಮಾಡುವ ರೈತರು 12 (40%) ಶೇ. 15 ಕ್ಕಿಂತ ಜಾಸ್ತಿ ಶೇ. 20 ಕ್ಕಿಂತ ಕಡಿಮೆ, 8 (26.66%) ಜನ ಶೇ. 10 ಕ್ಕಿಂತ ಜಾಸ್ತಿ ಶೇ. 15 ಕ್ಕಿಂತ ಕಡಿಮೆ 6 (10%) ಜನ ಶೇ. 5 ಕ್ಕಿಂತ ಕಡಿಮೆ (13.33%) 4 ಜನ , ಈ ಸಮೀಕ್ಷೆ ಪ್ರಕಾರ ನಮಗೆ ತಿಳಿದುಬರುವುದೇನೆಂದರೆ, 12 ಜನ ರೈತರು ಶೇ. 20 ಕ್ಕಿಂತ ಜಾಸ್ತಿ ತಮ್ಮ ಉತ್ಪನ್ನದ ಬೆಲೆಯಲ್ಲಿ ವೆಚ್ಚ ಮಾಡುತ್ತಿದೆ. ಎಂಬುದು ಕೊಳವೆ ಬಾವಿಗಳು ಇರುವ ರೈತರು ಈ ಗುಂಪಿನಲ್ಲಿದ್ದಾರೆ ಯಾಕೆಂದರೆ ತರಕಾರಿಬೆಳೆಗಳಿಗೆ ಕೆ.ಆರ್. ಮಾರುಕಟ್ಟೆಯಲ್ಲಿ ಒಳ್ಳೆ ಬೆಲೆ ಸಿಗುವುದರಿಂದ ಇಲ್ಲಿನ ಬಹುತೇಕ ರೈತರು ಉತ್ತನ್ನದ ಬೆಲೆಯಲ್ಲಿ ಶೇ.20 ಕ್ಕಿಂತ ಹೆಚ್ಚು ವೆಚ್ಚ ಮಾಡುವುದು ಆರ್ಥಿಕವಾಗಿ ಭಾರವೆನಿಸುವುದಿಲ್ಲ, ಯಾಕೆಂದರೆ ತರಕಾರಿ ಬೆಳೆಗಳಿಗೆ ಉತ್ತಮ ಬೆಲೆ ಸಿಗುವುದರಿಂದ ಇಳುವರಿ ಹೆಚ್ಚಾದರೆ ಅಧಿಕ ಲಾಭ ಗಳಿಸುವುದು ಖಚಿತವೆಂಬುದು ಸ್ಪಷ್ಟ. ಆದರೆ ಉತ್ಪನ್ನದ ಬೆಲೆಗಿಂತ ಶೇ. 5 ಕ್ಕಂತ ರಸಗೊಬ್ಬರಗಳ ಮೇಲೆ ವೆಚ್ಚ ಮಾಡುವುದು ಸಾಮಾನ್ಯವಾಗಿ ಕಡಿಮ ಇಳುವರಿ ಪಡೆಯುತ್ತಾರೋ ಆದ್ದರಿಂದ ಅವರಿಗೆ ಲಾಭ ಗಳಿಸಲು ಸಾಧ್ಯವಾಗುವುದಿಲ್ಲ. ಎಂಬುದೇ ಸಮೀಕ್ಷೆ ಸಮಯದಲ್ಲಿ ವ್ಯಕ್ತವಾದ ಅಭಿಪ್ರಾಯ ಆದ್ದರಿಂದ ಕ್ಯಾರೆಟ್, ಹುರುಳಿಕಾಯಿ, ಈರುಳ್ಳಿ, ಎಲೆಕೋಸು, ಹೂಕೋಸು ಮುಂತಾದವುಗಳು ಕೆಲವು ಅವಧಿ ಬಿಟ್ಟು ಎಲ್ಲಾ ಋತುಮಾಸದಲ್ಲಿಒಳ್ಳೆ ಬೆಲೆ ಸಿಗುತ್ತದೆ

ಎಂಬುದು ಅಂಬೋಣ, ಆದರೆ ಇಂತಹ ಬೆಲೆ ಇದ್ದಾಗ ಉತ್ಪನ್ನವನ್ನು ಜಾಸ್ತಿ ಪೂರೈಸಿದರೆ, ಹೆಚ್ಚು ಲಾಭಗಳಿಸಬಹುದು ಆದ್ದರಿಂದ ತಮ್ಮಲ್ಲಿರುವ ಸಣ್ಣ ಹಿಡುವಳಿಯ ಉತ್ಪಾದಕತೆ ಹೆಚ್ಚಿಸಿ, ಹೆಚ್ಚು ಇಳುವರಿ ಪಡೆಯುವದು ಮುಖ್ಯ ಗುರಿಯಾಗಿದೆ. ಆದ್ದರಿಂದ ಈ ಗುರಿಯನ್ನು ತಲುಪಲು ಹೆಚ್ಚು ಹೆಚ್ಚಾಗಿ ರಸಗೊಬ್ಬರಗಳನ್ನು ಬಳಸುವುದು ಅಮೂಲ್ಯ ಆದ್ದರಿಂದ ಬಹುತೇಕ ರೈತರು ಉತ್ಪನ್ನದ ಬೆಲೆಯಲ್ಲಿ ಶೇ. 20 ಕ್ಕಿಂತ ಹೆಚ್ಚು ವೆಚ್ಚ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟ.

ಒಟ್ಟು ಉತ್ಪಾದನಾ ವೆಚ್ಚದಲ್ಲಿ ಶೇ. 25 ಕ್ಕಿಂತ ಅಧಿಕವಾಗಿ ರಸಗೊಬ್ಬರಗಳಿಗೆ ವೆಚ್ಚ ಮಾಡುತ್ತಿರುವವರು ಸಂಖ್ಯ 20 (66.66%) ಜನ, ಶೇ. 15 ಕ್ಕಿಂತ ಅಧಿಕ ಉತ್ಪಾದನಾ ವೆಚ್ಚದಲ್ಲಿ ರಸಗೊಬ್ಬರಗಳಿಗೆ ಬಳಸುತ್ತಿರುವವರು 6 (20%) ಜನ ಶೇ. 10 ಕ್ಕಿಂತ ಅಧಿಕ ಉತ್ಪಾದನಾ ವೆಚ್ಚದಲ್ಲಿ ರಸಗೊಬ್ಬರ ಗಳನ್ನು ಬಳಸುತ್ತಿರುವವರು 4 (13.33%) ಜನ ಆದ್ದರಿಂದ ಬಹುತೇಕ ರೈತರು ಶೇ. 20 ಕ್ಕಿಂತ ಅಧಿಕವಾಗಿ ತಮ್ಮ ಉತ್ಪಾದನ ವೆಚ್ಚದಲ್ಲಿ ರಸಗೊಬ್ಬರಗಳಿಗೆ ಮೀಸಲಾಗಿರುತ್ತಿರುವುದು ಸರ್ವೇ ಸಾಮಾನ್ಯವಾದ ವಿಷಯವಾಗಿದೆ. ಉತ್ಪನ್ನದ ಬೆಲೆ ಮತ್ತು ಉತ್ಪಾದನಾ ವೆಚ್ಚಕ್ಕಿಂತ ಯಾವಾಗಲು ಜಾಸ್ತಿ ಇದ್ದರೆ ರೈತರಿಗೆ ಲಾಭವಾಗುತ್ತದೆ, ಆದರೆ ಉತ್ಪನ್ನದ ಬೆಲೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಇದ್ದರೆ ರೈತರಿಗೆ ನಷ್ಟವುಂಟಾಗುತ್ತದೆ.

ಉತ್ಪನ್ನದ ಬೆಲೆಯಲ್ಲಾಗಲಿ ಅಥವಾ ಉತ್ಪಾದನಾ ವೆಚ್ಚದಲ್ಲಾಗಲಿ ಅಧಿಕವಾಗಿ ರಸಗೊಬ್ಬರಗಳಿಗಷ್ಟೆ ಖರ್ಚು ಮಾಡುತ್ತಿರುವದು ಮತ್ತಿತರ ಸಂಪನ್ಮೂಲಗಳಾದ ಬೀಜ ನೀರು ಇವುಗಳಿಗೆ ಉತ್ಪನ್ನದ ಬೆಲೆ ಹಾಗೂ ಉತ್ಪಾದನಾ ವೆಚ್ಚದಲ್ಲಿ ನಂತರದ ಸ್ಥಾನಮಾನ, ಇದರ ಜೊತೆಗೆ ಸಾರಿಗೆ, ಪೊಟ್ಟಣ ಕಟ್ಟುವುದು ಮುಂತಾದವುಗಳು ನಂತರದ ಸ್ಥಾನಮಾನ ಪಡೆಯುತ್ತಿವೆ. ಆದ್ದರಿಂದ ರಾಗಿ, ಭತ್ತ ಇವುಗಳಿಗೆ ಇಷ್ಟು ರಸಗೊಬ್ಬರಗಳ ಖರ್ಚು ಬರುವುದಿಲ್ಲ. ಆದ್ದರಿಂದ ರೈತರಿಗೆ ಉತ್ಪನ್ನವಾದ ಬೆಲೆ ಯಾವಾಗಲೂ ಉತ್ಪಾದನಾ ವೆಚ್ಚಕ್ಕಿಂತ ಅಧಿಕವಾಗಿಯೇ ಇರಬೇಕು.

ಈ) ಕುಂಬಳಹಳ್ಳಿಯ ಗ್ರಾಮ:

ಗ್ರಾಮ ಪರಿಚಯ:

ಕುಂಬಳ ಹಳ್ಳಿಯ ಗ್ರಾಮ ಬೆಂಗಳೂರು ಗ್ರಾಮಾಂತರ ಹೊಸಕೋಟೆ ಕಸಬಾ ಗೆ ಬರುತ್ತದೆ. ಈ ಗ್ರಾಮ ಬೆಂಗಳೂರಿನಿಂದ ಮುವ್ವತ್ತು ಕಿ.ಮೀ. ದೂರದಲ್ಲಿದೆ. ಹೊಸಕೋಟೆಯಿಂದ 5 ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ ಬಸ್ಸುಗಳ ಸಂಚಾರ ಇದೆ, ಇದರ ಜೊತೆಗೆ ರಿಕ್ಷಾ ಓಡಾಟವು ಇದೆ. ಈ ಗ್ರಾಮದಲ್ಲಿ ರಸ್ತೆಗಳ ಅಭಿವೃದ್ಧಿ ತೃಪ್ತಿಕರ ಪ್ರಮಾಣದಲ್ಲಿ ನಡೆದಿದೆ ಈ ಗ್ರಾಮ ಹೊಸಕೋಟೆಗೆ ಉತ್ತರ ದಿಕ್ಕಿನಲ್ಲಿ ಇದೆ, ಈ ಗ್ರಾಮಸ್ಥರ ಒಡನಾಟ ಬೆಂಗಳೂರು ಹಾಗೂ ಹೊಸಕೋಟೆಯೊಂದಿಗೆ ಇದೇ, ಈ ಗ್ರಾಮ ಬೆಂಗಳೂರಿಗೆ 30 ಕಿ.ಮೀ. ದೂರದಲ್ಲಿರುವುದರಿಂದ ಹೊಸಕೋಟೆಗೆ ಬಂದರೆ, ರಾಷ್ಟೀಯ ಹೆದ್ದಾರಿ 4 ರಲ್ಲಿ ಕೋಲಾರ, ಚಿಂತಾಮಣಿಯಿಂದ ವಿಪುಲವಾದ ಬಸ್ ಸೌಲಭ್ಯಗಳು ಸಿಗುತ್ತದೆ. ಆದ್ದರಿಂದ ಗ್ರಾಮಸ್ಥರು ಬಹಳಷ್ಟು ಜನ ಬೆಂಗಳೂರಿಗೆ ಹೋಗಿ ಬರುತ್ತಾರೆ. ಜೊತೆಗೆ ಹೊಸಕೋಟೆಯಿಂದ ಬೆಂಗಳೂರಿಗೆ ಬಿ.ಟಿ.ಎಸ್. ಬಸ್ಸು ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆದ್ದರಿಂದ ಈ ಗ್ರಾಮ ಬೇರೆ ಗ್ರಾಮಗಳಿಗಿಂತ ವಿಭಿನ್ನವಾಗೇನು ಇಲ್ಲ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಬಿಳಿ ಜಾಜಿ ಗ್ರಾಮಕ್ಕೂ ಸಹ ಹೆಸರು ಘಟ್ಟಕ್ಕೆ ಬಂದರೆ ಬೆಂಗಳೂರಿಗೆ ನೇರ ಬಸ್ಸು ವ್ಯವಸ್ಥೆ ಇದೆ. ಹಾಗೆಯ ಕುಂಬಳ ಹಳ್ಳಿಗೆ ಹೊಸಕೋಟೆಗೆ ಬಂದರೆ ಬೆಂಗಳೂರಿಗೆ ನೇರ ಬಸ್ಸು ಸೌಲಭ್ಯವನ್ನು ಹೊಂದಿದೆ, ಆದರೆ ಇಲ್ಲಿ ಇರುವ ನ್ಯೂನತೆ ಎಂದರೆ ಈ ಹಳ್ಳಿಯಿಂದ ಹೊಸಕೋಟೆಗೆ ಬಸ್ಸು ಸೌಲಭ್ಯ ಇದ್ದರೂ ಅದು ಕಡಿಮೆ ಪ್ರಮಾಣದಲ್ಲಿರುವುದು, ಇಲ್ಲಿನ ರೈತರು ರಿಕ್ಷಾಗಳನ್ನೇ ಅವಲಂಬಿಸಬೇಕಾಗಿದೆ. ಆದ್ದರಿಂದ ರಿಕ್ಷಾಗಳವರಿಗೆ ಬೇಡಿಕೆ ಹೆಚ್ಚು ಒಮ್ಮೊಮ್ಮೆ ಗ್ರಾಮಸ್ಥರಿಂದ 15-20 ರೂಗಳನ್ನು ಕೇಳುತ್ತಾರೆ ಎಂಬುದೇ ರೈತರ ಅಭಿಪ್ರಾಯ ಆದ್ದರಿಂದ ಇದು ಸಾರಿಗೆ ದೃಷ್ಟಿಯಿಂದ ಹೊಸಕೋಟೆಗೆ ಹೆಚ್ಚು ಸಂಬಂಧ ಹೊಂದಿದೆ, ಅಲ್ಲಿಂದ ಈ ಗ್ರಾಮ ಬೆಂಗಳೂರಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಗ್ರಾಮ ಬಿಳಿ ಜಾಜಿಗೆ ಹೋಲಿಸಿದರೆ ಮುಂದುವರೆದ ಗ್ರಾಮವಾಗಿದೆ. ಇಲ್ಲಿ 700 ಕುಟುಂಬಗಳಿವೆ, ಜನಸಂಖ್ಯೆ 4000 ದಷ್ಟಿದೆ. 700 ಕುಟುಂಬಗಳಲ್ಲಿ ತಿಗಳರದು 400 (57.14%) ಮನೆಗಳು, ಕುರುಬರದು 250 (35.71 %) ಮನೆಗಳು ಪರಿಶಿಷ್ಟ ಜಾತಿ ಮಾದಿಗರದು 50 (7.14%) ಮನೆಗಳು ಇವೆ. ಇಲ್ಲಿ ತಿಗಳರು ಜನ ಸಂಖ್ಯೆಯಲ್ಲಿ ಮೊದಲನೆ ಸ್ಥಾನದಲ್ಲಿದ್ದರೆ ಕುರುಬರು ಎರಡನೇ ಸ್ಥಾನದಲ್ಲಿದ್ದಾರೆ ವಿಶಿಷ್ಟತೆಯೆಂದರೆ ಇಲ್ಲಿ ಒಕ್ಕಲಿಗರ ಮನೆಗಳು ಇಲ್ಲದೇ ಇರುವುದು, ಕುರುಬರು ಮತ್ತು ತಿಗಳರು ಒಂದೆ ಸಾಮಾಜಿಕ ಅಂತಸ್ತನ್ನು ಹೊಂದಿದ್ದರೆ ಪರಿಶಿಷ್ಟ ಜಾತಿಯವರು ಈ ಎರಡೂ ಜಾತಿಗಳಿಗಿಂತ ಕೆಳ ಅಂತಸ್ತನ್ನು ಹೊಂದಿದ್ದಾರೆ. ಇಲ್ಲಿ ಕುರುಬ ಮತ್ತು ತಿಗಳರ ನಡುವೆ ಸಾಮರಸ್ಯವಿದೆ, ಹೋದ ವಿಧಾನ ಸಭೆಯಲ್ಲಿ ತಿಗಳರೂ ಹಾಗೂ ಕುರುಬರು ಇಬ್ಬರು ಸೇರಿ ಇಲ್ಲಿ ಕಾಂಗ್ರೆಸ್ ಕುರುಬ ಅಭ್ಯರ್ಥಿಗೆ ಮತದಾನ ಮಾಡಿದ್ದರು, ಇದನ್ನು ತಿಗಳರು ಮತ್ತು ಕುರುಬ ಜನಾಂಗದವರು ನಾನು ಸಮೀಕ್ಷೆ ಮಾಡಿದ ಸಂದರ್ಭದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಹೊಸಕೋಟೆ ವಿಧಾನಸಭಾ ಕ್ಷೇತ್ರ ದಲ್ಲಿ ಕುರುಬರ ಜನಸಂಖ್ಯೆ 45 ಸಾವಿರಕ್ಕಿಂತಲೂ ಅಧಿಕ

ಎಂಬುದೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯ ಅಭಿಪ್ರಾಯ. ಮತದಾರರ ಸಂಖ್ಯೆಯಿಂದ ಕುರುಬರು ಮೊದಲನೆ ಸ್ಥಾನದಲ್ಲಿ ವಕ್ಕಲಿಗರು ಎರಡನೆಯ ಸ್ಥಾನದಲ್ಲಿ ನಿಲ್ಲುತ್ತಾರೆ ಎಂಬುದೇ ಈತನ ಅಭಿಪ್ರಾಯ. ಆದರೆ ಕುರುಬರಿಗೂ ವಕ್ಕಲಿಗರಿಗೂ ನೇರ ಪೈಪೋಟಿ ಇರುವುದು, ಇಲ್ಲಿ ಕಂಡು ಬಂತು ಕುರುಬರು 50 ವರ್ಷಗಳಿಂದ ಒಬ್ಬ ಶಾಸಕನನ್ನು ವಿಧಾನಸಭೆಗೆ ಆಯ್ಕೆ ಮಾಡಿ ಕಳಿಸಲು ಸಾಧ್ಯವಾಗಲಿಲ್ಲ. ಆದರೆ 2004 ರಲ್ಲಿ ಕುರುಬರು ಮತ್ತು ಇನ್ನುಳಿದ ಹಿಂದುಳಿದ ವರ್ಗಗಳವರು ಒಂದಾಗಿ ಕುರುಬ ಅಭ್ಯರ್ಥಿ ಜೆ.ಡಿ.ಎಸ್. ನ ವಕ್ಕಲಿಗ ಅಭ್ಯರ್ಥಿಯನ್ನು ಸೋಲಿಸುವಲ್ಲಿ ಸಫಲರಾದರು, ಆದರೆ ಈ ಅಸಮಾಧಾನ ಕುರುಬರಲ್ಲಿ ಕಳೆದ ಎರಡು ದಶಕಗಳಿಂದ ಮಡುಗಟ್ಟಿತ್ತು ಜನಸಂಖ್ಯೆಯಿಂದ ಅಧಿಕವಾಗಿದ್ದರು, ವಕ್ಕಲಿಗರೆ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತ ಬಂದಿದ್ದು ಅಸಮಾಧಾನಕ್ಕೆ ಕಾರಣವಾಗಿತ್ತು. ಆದರೆ ಈ ಬಾರಿ ಚುನಾವಣೆಯಲ್ಲಿ ಕುರುಬ ಅಭ್ಯರ್ಥಿ ವಕ್ಕಲಿಗ ಅಭ್ಯರ್ಥಿಯನ್ನು ಸೋಲಿಸುವುದರ ಮೂಲಕ ಕಳೆದ 60 ವರ್ಷಗಳಿಂದ ವಕ್ಕಲಿಗರ ಏಕ ಸ್ವಾಮ್ಯವಾಗಿದ್ದ ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳಿಂದ ಬಂದ ಕುರುಬರ ಅಭ್ಯರ್ಥಿ ಎಂ.ಟಿ.ಬಿ. ನಾಗರಾಜ್, ಜೆ.ಡಿ.ಎಸ್. ನ. ಪ್ರತಿಷ್ಠಿತ ಅಭ್ಯರ್ಥಿಯಾಗಿದ್ದ ಬಚ್ಚೇಗೌಡರನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ, ಇವರ ಸ್ಪರ್ಧೆ ಇದು ಎರಡನೇ ಬಾರಿ ನಡೆದಿದ್ದು, ಇದಿಷ್ಟು ಹೊಸಕೋಟೆ ವಿಧಾನಸಭೆಯ ಸಂಕ್ಷಿಪ್ತ ನೋಟ, ಕುಂಬಳ ಹಳ್ಳಿಯಲ್ಲಿ ವಕ್ಕಲಿಗರು ಇಲ್ಲದೇ ಇರುವುದು, ಒಂದು ವಿಸ್ಮಯಕಾರಿ ಅಂಶ, ಯಾಕೆಂದರೆ ಎಂ.ಟಿ.ಬಿ. ನಾಗರಾಜ್, ಗೆಲ್ಲುವ ಮೊದಲು, ವಕ್ಕಲಿಗರು ಜನಸಂಖ್ಯೆಯಿಂದ ಪ್ರಬಲರು ಎಂದು ಪ್ರಚಾರ ಗಿಟ್ಟಿಸಿದ್ದು ಕ್ಷೇತ್ರ ಆದರೆ ಕುಂಬಳ ಹಳ್ಳಿ ಯಂತೆ, ಅಲಪನಹಳ್ಳಿ ಶಂಕರಪುರ, ಕುರುಬರಹಳ್ಳಿಗಳಲ್ಲಿ ವಕ್ಕಲಿಗರೇ ಇಲ್ಲ ಎಂಬ ಅಂಶ ಸಮೀಕ್ಷೆ ಸಮಯದಲ್ಲಿ ಬೆಳಕಿಗೆ ಬಂದಿತು. ತಿಗಳರು ಕೆಲವು ಹಳ್ಳಿಗಳಲ್ಲಿ ಮಾತ್ರ ಇದ್ದಾರೆ, ಕುಂಬಳ ಹಳ್ಳಿಯಲ್ಲಿ ತಿಗಳರದೇ ಮೇಲುಗೈ ಕುರುಬರು ಮತ್ತು ತಿಗಳರ ನಡುವೆ ಸಾಮರಸ್ಯವಿದೆ ಎಂದು ಈಗಾಗಲೇ ತಿಳಿದಿದ್ದೇವೆ, ಆದರೂ ಕುರುಬರು ಪಕ್ಕದ ಇನ್ನಿತರ ಹಳ್ಳಿಗಳಲ್ಲಿ ಪ್ರಾಬಲ್ಯ ವಿರುವುದರಿಂದ ತಿಗಳರು ಉಳಿದ ಹಳ್ಳಿಗಳಲ್ಲಿ 5-6 ಮನೆಗಳು ಇರುವುದರಿಂದ ತಿಗಳರು ರಾಜಕೀಯವಾಗಿ ಪ್ರಾಬಲ್ಯ ಸಾಧಿಸುವಲ್ಲಿ ಸೋತಿದ್ದಾರೆ, ಬಿಳಿಜಾಜಿಯಲ್ಲೂ,ತಿಗಳರು ಬಹುಸಂಖ್ಯಾತರಾಗಿದ್ದಾರೆ ಹಾಗೆಯೇ ಕುಂಬಳ ಹಳ್ಳಿಯಲ್ಲಿ ತಿಗಳರು ಪ್ರಬಲರಾಗಿದ್ದಾರೆ. ಆದರೆ ಬೆಂಗಳೂರಿನ ಕೆಲವು ಪ್ರದೇಶಗಳಿಗಷ್ಟೆ ತಿಗಳರು ಜನಸಂಖ್ಯೆಇದೆ. ಆದರೆ ವೆಂಕಟಸ್ವಾಮಿ ಮತ್ತು ಚಿನ್ನಪ್ಪ ರೆಡ್ಡಿಯ ವರದಿ ಪ್ರಕಾರ ತಿಗಳರ ರಾಜ್ಯಮಟ್ಟದ ಜನಸಂಖ್ಯೆ ಶೇ. 0.60 ಅಷ್ಟೆ. ಇದು ಅಲ್ಪ ಸಂಖ್ಯಾತ ಜಾತಿ, ಆದರೂ ಕುಂಬಳ ಹಳ್ಳಿಯ ಗ್ರಾಮ ಪಂಚಾಯಿತಿಯಲ್ಲಿ ತಿಗಳರ ಪ್ರಾಬಲ್ಯ ಎದ್ದು ಕಾಣುತ್ತದೆ. ಹಾಗೆಯೇ ಕುರುಬರ ಪ್ರಾಬಲ್ಯವೂ ಸಹ ಎದ್ದು ಕಾಣುತ್ತದೆ. ಕುಂಬಳ ಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರ ಮೀಸಲಾತಿ ಇದ್ದಿದ್ದುದರಿಂದ ಈ ಎರಡು ಜಾತಿಗಳು ಪ್ರವರ್ಗ 2ಎ ನಲ್ಲಿ ಬರುವುದರಿಂದ, ಒಂದೆಡೆ ಬರುವದಕ್ಕೆ ಕಾರಣವಾಗಿದೆ. ಆದರೆ ತಿಗಳರು ರಾಜ್ಯಾದ್ಯಂತ ಜನಸಂಖ್ಯೆಯಲ್ಲಿ

ಅಲ್ಪಸಂಖ್ಯಾತರಾಗಿರುವುದರಿಂದ ರಾಜಕೀಯವಾಗಿ ಮೇಲೆ ಬರಲು ಸಾಧ್ಯವಾಗಿಲ್ಲ ರಾಜ್ಯದಲ್ಲಿ ಕುರುಬರ ಜನಸಂಖ್ಯೆ ಶೇ.7 ರಷ್ಟಿದ್ದರು, ಕುರುಬರು ರಾಜಕೀಯವಾಗಿ ಸಬಲರಾಗುವಲ್ಲಿ ಸಾಧ್ಯವಾಗಿಲ್ಲ, ಕುರುಬರ ಸಾಮಾಜಿಕ ಅಂತಸ್ತನ್ನು ಹೊಂದಿರುವ ತಿಗಳರು ಅಲ್ಪಸಂಖ್ಯಾತರಾಗಿದ್ದುಕೊಂಡು ರಾಜ್ಯರಾಜಕಾರಣದಲ್ಲಿ ಮೇಲೆ ಬರಲು ಸಾಧ್ಯವೆ ? ನಾನು ಅಧ್ಯಯನ ಮಾಡಿದ 30 ಜನರಲ್ಲಿ ತಿಗಳರು 10 (33.33%) ಜನ, ಕುರುಬರು 15 (50%) ಜನ, 5 (16.66%) ಜನ ಮಾದಿಗರು, ತಿಗಳರಲ್ಲಿ 7 (23.%) ಜನ ಸಣ್ಣ ರೈತರು, 3 (10%) ಜನ 10 ಎಕರೆಗಿಂತ ಜಾಸ್ತಿ ಹೊಂದಿರುವವರು, ಕುರುಬರಲ್ಲಿ 10 (33%) ಜನ ಸಣ್ಣ ರೈತರು ಮೂರು (10%) ಜನ ದೊಡ್ಡ ರೈತರು, 2 (6.6%) ಕೂಲಿಗಳು. ಮಾದಿಗರಲ್ಲಿ 4 (13.33%) ಜನ ಕೃಷಿ ಕೂಲಿಗಳು, ಒಬ್ಬರು (3%) ಸಣ್ಣ ರೈತರು, ಇದು ಕುಂಬಳ ಹಳ್ಳಿಯ ಹಿಡುವಳಿಗಳ ಸ್ವರೂಪ, ಇಲ್ಲಿ ತಿಗಳರಲ್ಲಿ ಕುರಬರಲ್ಲಿ ಸಣ್ಣ ರೈತರ ಪ್ರಮಾಣ ಅಧಿಕವಾಗಿದೆ. ಕೃಷಿ ಕೂಲಿಗಳ ಪ್ರಮಾಣ ಮಾದಿಗರಲ್ಲಿ ಅಧಿಕವಾಗಿದ್ದರೆ ಕುರುಬರಲ್ಲಿ ಗಣನೀಯ ಪ್ರಮಾಣದಲ್ಲಿದೆ ಕೃಷಿಕೂಲಿಗಳು ಇದ್ದಾರೆ, ತಿಗಳರಲ್ಲಿ ಕೃಷಿ ಕೂಲಿಗಳಿಗೆ ಇಲ್ಲ.

ಜಾತಿ ಮತ್ತು ಭೂಮಿ:

ಇಲ್ಲಿ ಹಿಡುವಳಿಗಳ ಸ್ವರೂಪವನ್ನು ನೋಡಿದರೆ ಕುರುಬರು ಮತ್ತು ತಿಗಳರೂ ಒಂದೆ ಸಾಮಾಜಿಕ ಅಂತಸ್ತನ್ನು ಹೊಂದಿದ್ದರೂ, ತಿಗಳರಲ್ಲಿ ಕೃಷಿ ಕೂಲಿಗಳು ಇಲ್ಲ (ಸಮೀಕ್ಷೆಯ ಪ್ರಕಾರ) ಇದಕ್ಕೆ ಕಾರಣವೆಂದರೆ ತಿಗಳರು ಸಣ್ಣ ಪ್ರಮಾಣದ ಹಿಡುವಳಿಯನ್ನು ಹೊಂದಿ, ಕೃಷಿಯನ್ನು ವೈವಿದ್ಯ ಕರೀಸಿರುವುದು ಹೆಚ್ಚಾಗಿದೆ, ಗ್ರಾಮದಲ್ಲಿ ಅತಿ ದೊಡ್ಡ ಜನಸಂಖ್ಯೆಯುಳ್ಳ ತಿಗಳರು ಸಮಾಜದ ಸುಧಾರಣೆಗಾಗಿ ಹಾಕಿಕೊಂಡಿರುವ ಕಾರ್ಯಕ್ರಮ ಹಾಗೂ ಕುರುಬರೊಂದಿಗೆ ಹೊಂದಿರುವ ಸಾಮರಸ್ಯ ತಿಗಳರು ಹೆಚ್ಚು ಆರ್ಥಿಕವಾಗಿ ಸಬಲರಾಗಲು ಇರುವ ಕಾರಣಗಳು, ತಿಗಳರು ವಕ್ಕಲಿಗರೊಂದಿಗೂ ಸಾಮರಸ್ಯದಿಂದಿದ್ದರು, ವಕ್ಕಲಿಗರು ತಿಗಳರನ್ನು ಅಷ್ಟಾಗಿ ಹಚ್ಚಿಕೊಳ್ಳದಿದ್ದರಿಂದ ಈಗ ಕುರುಬರ ಜೊತೆ ಸೇರಲೂ ಪ್ರಯತ್ನಿಸುತ್ತಿದ್ದಾರೆ, ಕುರುಬರು ಮೊದಲು ವಕ್ಕಲಿಗರ ಹಿಂಬಾಲಕರಾಗಿದ್ದರು ಆದರೆ ಕಳೆದ ಒಂದೂವರೆ ದಶಕಗಳಿಂದ ಕುರುಬರಲ್ಲಿ ಸಾಮಾಜಿಕ ಜಾಗೃತಿ ಮೂಡುತ್ತಾ ಬಂದಿದೆ, ಈ ಸಾಮಾಜಿಕ ಜಾಗೃತಿ ಮೊನ್ನೆ ನಡೆದ ಚುನಾವಣೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಆದ್ದರಿಂದ ಕುಂಬಳಹಳ್ಳಿಯಲ್ಲಿ ತಿಗಳರು ಮತ್ತು ಕುರುಬರಲ್ಲಿ ಕೃಷಿ ಕೂಲಿಗಳ ಸಂಖ್ಯೆ ಗಣನೀಯ ಪ್ರಾಣದಲ್ಲಿ ಇಳಿಮುಖ ವಾಗಲು ಕಾರಣವಾಯಿತು. ನನ್ನ ಸಮೀಕ್ಷೆ ಮಾದರಿಗಳಲ್ಲಿ ಕೃಷಿ ಕೂಲಿಗಳು ಗಣನೀಯ ಪ್ರಮಾಣದಲ್ಲಿ ಇರಲಿಲ್ಲ, ಆದರೆ ಗ್ರಾಮದಲ್ಲಿ ಕೂಲಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಎಂಬುದೇ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯ ಅಭಿಪ್ರಾಯ. ನನ್ನ ಸಮೀಕ್ಷೆ ಮಾದರಿಯಲ್ಲಿ ಕೃಷಿ ಕೂಲಿಗಳು ಕಡಿಮೆಯೇ ಇದ್ದಾರೆ, ಒಟ್ಟು ಕೃಷಿಯಲ್ಲಿ ತೊಡಗಿಸಿ ಕೊಂಡಿರುವವರ

ಸಂಖ್ಯೆ ಅಧಿಕವಾಗಿದೆ 410 ಒಟ್ಟು ಜನಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಇವರಲ್ಲಿ ತಿಗಳರಲ್ಲಿ 275(68.75%) ಜನ ಕುರುಬರಲ್ಲಿ 120(30%) ಜನ ಮಾದಿಗರಲ್ಲಿ 15(3.75%) ಜನ ರಿದ್ದಾರೆ.

4000 ಜನ ಸಂಖ್ಯೆಯಲ್ಲಿ 410 ಜನ ಕೃಷಿಯಲ್ಲಿ ತೊಡಗಿಸಿ ಕೊಂಡಿದ್ದಾರೆ, ಕೃಷಿ ಕೂಲಿಗಳು ತಿಗಳರಲ್ಲಿ ಕಡಿಮೆ ಇದೆ. ಕುರುಬರಲ್ಲಿ ವಿಪುಲವಾಗಿದೆ, ಮಾದಿಗರಲ್ಲೂ , ವಿಪುಲವಾಗಿದ್ದಾರೆ ಇಲ್ಲಿ ನಾವು ಕಂಡುಕೊಳ್ಳಬೇಕಾದ ಅಂಶವೆಂದರೆ ತಿಗಳರೆಲ್ಲರು ಸಣ್ಣ ಹಿಡುವಳಿದಾರರಿದ್ದರೂ ಇವರು, ಹೂವಿನ ಬೆಳೆ, ತರಕಾರಿ ಬೆಳೆಗಳಾದ ಕ್ಯಾರೆಟ್, ಬೀಟ್ ರೂಟ್, ಪುದೀನ ಮುಂತಾದವುಗಳನ್ನು ಬೆಳೆಯುತ್ತಾರೆ, ಇವುಗಳಿಗೆ ಬೆಂಗಳೂರಿನಲ್ಲಿ ಒಳ್ಳೆ ಮಾರುಕಟ್ಟೆ ಇದೆ.

ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದು ಗಮನಿಸಿದರೆ ಕೃಷಿಯಲ್ಲಿ 410 ಜನ (24.55%) ಕೂಲಿಗಳಾಗಿ, 300 (12.96%) ಜನ ಕಾರ್ಖಾನೆ ಕಾರ್ಮಿಕರಾಗಿ, 350 (20.95%) ಜನ ಗಾರೆ ಕೆಲಸದವರು 160 (9.58%) ಜನ ಹೂವಿನ ವ್ಯಾಪಾರಸ್ಥರು, 300 (17.96%) ಜನ ಸೊಪ್ಪಿನ ವ್ಯಾಪಾರ 150 (8.98%) ಜನ, ಅರ್ಧದಷ್ಟು ಜನ ಕೃಷಿಯಲ್ಲಿ ತೊಡಗಿಸಿ ಕೊಂಡಿದ್ದಾರೆ, ಇನ್ನು ಅರ್ಧದಷ್ಟು ಜನ ಕೃಷಿಯೇತರ ಚಟುವಟಿಕೆಗಳಾದ ಹೂವಿನ ವ್ಯಾಪಾರ, ಸೊಪ್ಪಿನ ವ್ಯಾಪಾರ, ಕೃಷಿ ಕೂಲಿಗಳು, ಗಾರೆ ಕೆಲಸದವರು, ಕಾರ್ಖಾನೆ ಕಾರ್ಮಿಕರಾಗಿ ತೊಡಗಿಸಿಕೊಂಡಿದ್ದಾರೆ ಹೀಗೆ ತೊಡಗಿಸಿಕೊಳ್ಳಲು ಬೆಂಗಳೂರಿಗೆ ಕುಂಬಳ ಹಳ್ಳಿ ಹತ್ತಿರವಿರುವುದೇ ಕಾರಣವಾಗಿದೆ. ಇಲ್ಲಿ ಹೂವಿನ ವ್ಯಾಪಾರದಲ್ಲಿ ಗಣನೀಯ, ಪ್ರಮಾಣದಲ್ಲಿ ರೈತರು ತೊಡಗಿಸಿಕೊಂಡಿದ್ದಾರೆ, ಇವರ ಹೂಗಳಿಗೆ ಬೆಂಗಳೂರು ಹೊರತುಪಡಿಸಿ ಬಾಂಬೆ , ಚನ್ನೈ, ಕಲ್ಕತ್ತದಲ್ಲಿ ಮಾರುಕಟ್ಟೆ ಇದೆ, ಹೂವಿನ ಬೆಳೆಗಾರರು ಬೆಳೆದ ಹೂಗಳನ್ನು ಪೇಟೆಗಳಲ್ಲಿ ಕೊಳ್ಳುವ ವ್ಯಾಪಾರಸ್ಥರು ಬೆಂಗಳೂರಿಗೆ ಸಾಗಿಸಿ, ಕೆ.ಆರ್. ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ, ಕೆಲವರು ಮುಂಬೈ, ಕಲ್ಕತ್ತ, ಚನ್ನೈಗೂ ಹೂಗಳನ್ನು ಕಳಿಸಿಕೊಡುತ್ತಾರೆ, ಹೂವಿನ ವ್ಯಾಪಾರಸ್ಥರಿಗೆ ಹೂವಿನ ಬೆಳೆಗಾರರಿಗೆ ಈ ಹೂ ಬೆಳೆಯುವದರಿಂದ ಹೆಚ್ಚಿನ ಲಾಭ ಬರುತ್ತದೆ. ಎಂಬುದರಲ್ಲಿ ಸಂದೇಹವಿಲ್ಲ.

ಕುಂಬಳಹಳ್ಳಿ ಸೊಪ್ಪಿನಮಯ

ಕುಂಬಳಹಳ್ಳಿಯ ಒಟ್ಟು ವಿಸ್ತೀರ್ಣ 100.00 (250 ಎಕರೆ) ಹೆಕ್ಟೇರುಗಳು ಖುಷ್ಕಿ 43.4 (108.5ಎಕರೆ) ಹೆಕ್ಟೇರುಗಳು ತೋಟಗಾರಿಕೆ 40.00 (100 ಎಕರೆ) ಹೆಕ್ಟೇರುಗಳು ಇದು ಕೃಷಿ ಇಲಾಖೆಯ ಅಂಕಿ ಅಂಶ 4000 ಜನಸಂಖ್ಯೆಯಲ್ಲಿ ಕೃಷಿ ಮೇಲೆ ಅವಲಂಬಿತರಾಗಿರುವವರ ಸಂಖ್ಯೆ 410 (10.25%) ಎಂದು ಪ್ರಾಥಮಿಕ ಸಮೀಕ್ಷೆಯ ಮಾಹಿತಿ ಮೂಲಕ ಸಂಗ್ರಹಿಸಿರುವೆ. ಆದರೆ ಸಣ್ಣ ರೈತರದೆ ಪ್ರಾಮುಖ್ಯತೆ ಎಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಸೊಪ್ಪಿನ ತೋಟ, ಪುದೀನ ಇಲ್ಲಿ ಜಾಸ್ತಿ ಬೆಳೆಯುವುದರಿಂದ ಸೊಪ್ಪಿನ ತೋಟಗಳಿಗೆ ಹಲವು ಗುಂಟೆಗಳಾದರೆ ಸಾಕು, 3 ಗುಂಟೆಯಿಂದ 4 ಗುಂಟೆಗಳವರೆಗೂ, ಸೊಪ್ಪಿನ

ತೋಟ ಹೊಂದಿರುವವರೆ ಹೆಚ್ಚು ಇರುವುದರಿಂದ ಕೃಷಿಕರ ಸಂಖ್ಯೆ ಜಾಸ್ತಿ ಇದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಸೊಪ್ಪು ಇಪ್ಪತ್ತು ದಿವಸದಿಂದ ಒಂದು ತಿಂಗಳ ಬೆಳೆ, ಇದನ್ನು ನೆರೆಯ ಬೆಂಗಳೂರಿಗೆ ಸರಬರಾಜು ಮಾಡಲಾಗುತ್ತದೆ. ಸೊಪ್ಪಿಗೆ ಎಲ್ಲಿಲ್ಲದ ಬೇಡಿಕೆ, ಬೆಂಗಳೂರು ನಗರದಲ್ಲಿರುವುದರಿಂದ ಸೊಪ್ಪು ಅಲ್ಪಕಾಲದ ಬೆಳೆಯು ಹೌದು ಹಾಗೂ ಹೆಚ್ಚು ರಸಗೊಬ್ಬರ, ಕ್ರಿಮಿನಾಶಕಗಳ ಬಳಕೆ ಅನಗತ್ಯ, ಆದ್ದರಿಂದ ಒಂದು ತಿಂಗಳು ಬೆಳೆಯುವ ಸೊಪ್ಪು ಎಲ್ಲ ಋತಮಾನದಲ್ಲೂ ಬೆಳೆಯಬಹುದು, ಆದರೆ ನೀರಿನ ಅವಶ್ಯಕತೆ ಇರುತ್ತದಷ್ಟೆ, ದಿನಕ್ಕೊಮ್ಮೆ ನೀರು ಹಾಯಿಸಿದರೆ ಸೊಪ್ಪು ಕೈಗೆ ಬರುತ್ತದೆ. ಹಾಗೆಯೇ ಇದಕ್ಕೆ ಮಾರುಕಟ್ಟೆಯೂ ಸಹ ಇದೆ, ಸೊಪ್ಪು ಮಾರುಕಟ್ಟೆಯಲ್ಲಿ ಲಾಭದಾಯಕ ಬೆಲೆಗೆ ಹೋಗುತ್ತದೆ. ಇಲ್ಲಿ ಸೊಪ್ಪು ಬೆಳೆಯುವವರು ನೇರವಾಗಿ ಗ್ರಾಹಕರಿಗೆ ಒದಗಿಸುತ್ತಾರೆ, ಇವರು ಬಸ್ಸುಗಳಲ್ಲಿ ಸೊಪ್ಪನ್ನು ಹಾಕಿಕೊಂಡು ಕೆ.ಆರ್. ಮಾರುಕಟ್ಟೆಗೆ ಅಥವಾ ಬೆಂಗಳೂರಿನಲ್ಲಿರುವ ಬಡಾವಣೆಗಳ ಮಾರುಕಟ್ಟೆಗೆ ತೆಗೆದುಕೊಂಡು, ಹೋದರೆ ಸೊಪ್ಪು ಮಾರಾಟವಾಗುತ್ತದೆ, ಇದರಲ್ಲಿ ತಿಗಳರೂ ಕುರುಬರು ಮಾದಿಗರು ಎಲ್ಲರೂ ಇದ್ದಾರೆ, ಇದು ಬಡಜನರಿಗೆ ಹಣ ತರುವ ಬೆಳೆ, ಆದ್ದರಿಂದ 150 ಕ್ಕೂ ಹೆಚ್ಚು ಜನ ಸೊಪ್ಪಿನ ಮಾರಾಟದಲ್ಲಿ ತೊಡಗಿಸಿ ಕೊಂಡಿದ್ದಾರೆ, ಇಲ್ಲಿ ಸೊಪ್ಪು ಬೆಳೆಯುವವರೆ, ಸೊಪ್ಪಿನ ಮಾರಾಟ ಮಾಡುವುದು, ಆದ್ದರಿಂದ ಮಧ್ಯವರ್ತಿಗಳು ಸೊಪ್ಪಿನ ಮಾರುಕಟ್ಟೆಯಲ್ಲಿ ಇಲ್ಲ, ಆದರೆ ಸೊಪ್ಪು ಬಹಳ ಬೇಗ ನಾಶವಾಗುವುದರಿಂದ ಇದನ್ನು ಕಿತ್ತ ದಿವಸವೆ ಮಾರಾಟ ಮಾಡಬೇಕು ಅಥವಾ ಮುಂದಿನ ದಿನ ಬೆಳಿಗ್ಗೆಯೇ ಮಾರಾಟ ಮಾಡಿ ಮುಗಿಸಬೇಕು. ಇಲ್ಲದೇ ಹೋದರೆ ಸೊಪ್ಪು ಬಾಡಿ ಹೋಗುವುದರಿಂದ ತಿರಸ್ಕರಿಸಲ್ಪಡುತ್ತದೆ. ಮಧುಮೇಹಿಗಳಿಗೆ, ರಕ್ತದೊತ್ತಡದವರಿಗೆ, ಸ್ಥೂಲ ದೇಹಿಗಳಿಗೆ, ಸೊಪ್ಪು ಆರೋಗ್ಯಕ್ಕೆ ಸಿದ್ಧೌಷಧವಾಗಿರುವುದರಿಂದ, ಬೆಂಗಳೂರು ನಗರದಲ್ಲಿ ತಾಜ ಸೊಪ್ಪಿಗೆ ಭಾರಿ ಬೇಡಿಕೆ ಇದೇ ಈ ಭಾರಿ ಬೇಡಿಕೆಗೆ ಬೆಂಗಳೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಸೊಪ್ಪನ್ನು ಬೆಳೆಯಲಾಗುತ್ತದೆ. ಹೀಗೆ ಬೆಳೆದ ಸೊಪ್ಪನ್ನು ಬೆಂಗಳೂರಿನ ವಿವಿಧ ಬಡಾವಣೆಗಳ ತರಕಾರಿ ಮಾರುಕಟ್ಟೆಯಲ್ಲಿ ಸೊಪ್ಪನ್ನು ಬೆಳೆಯುವವರೆ ಖುದ್ದಾಗಿ ಮಾರಾಟ ಮಾಡುತ್ತಾರೆ, ಬೆಂಗಳೂರಿನಿಂದ ಸುತ್ತ ಮುತ್ತಲ ಹಳ್ಳಿಗಳಿಗೆ ಬೆಂಗಳೂರಿನ ನಗರ ಸಾರಿಗೆ ಬಸ್ಸುಗಳಿರುವುದರಿಂದ ಇವುಗಳಲ್ಲೂ ಸಾಗಾಣಿಕೆ ನಡೆಯುತ್ತದೆ. ಸೊಪ್ಪಿನ ಸಾಗಾಣಿಕೆಗೆ ಪ್ರತ್ಯೇಕ ಸಾರಿಗೆ ಅವಶ್ಯಕತೆ ಇಲ್ಲ, ಆದ್ದರಿಂದ ಇದರ ಸಾಗಾಣಿಕೆ ಬಸ್ಸುಗಳ ಮೂಲಕವೆ ಬೆಂಗಳೂರಿನ ಮಾರುಕಟ್ಟೆಗೆ ಸಾಗಿಸಲಾಗುತ್ತದೆ. ಇದು ಎಲ್ಲ ಋತುಮಾನದ ಬೆಳೆಯಾಗಿರುವುದರಿಂದ, ನಿರಂತರವಾಗಿ ಸಣ್ಣ ಸಣ್ಣ ಜಾಗಗಳಲ್ಲಿ ಬೆಳೆಯುತ್ತಾರೆ. ಇದು ಬೆಳೆಯುವವರ ದೈಹಿಕ ಶ್ರಮದ ಮೇಲೆ ನಿಂತಿರುತ್ತದೆ ಇದಕ್ಕೆ ನೇಗಿಲಿನ ಉಳುಮೆಯಾಗಲಿ ಟ್ರಾಕ್ಟರ್ ಆಗಲಿ ಅವಶ್ಯಕತೆ ಇಲ್ಲ ಆದ್ದರಿಂದ ಬೆಳೆಗಾರರನು ಮತ್ತು ಈತನ ಕುಟುಂಬ ಗುದ್ದಲಿ ಪಿಕಾಸಿಗಳ ಮೂಲಕ ನೆಲ ಅಗೆದು ಹದಗೊಳಿಸಿ ನಂತರ ಕೊಟ್ಟಿಗೆ ಗೊಬ್ಬರ ನಾಲ್ಕೈದು ಬಾಣಲಿಗಳಷ್ಟು

ಹಾಕಿ ಬಿಟ್ಟು, ನೀರನ್ನು ನೆರೆ ಹೊರೆಯವರ ಬಾವಿಯಿಂದಲೋ, ಕೊಳವೆ ಬಾವಿಗಳಿಂದಲೂ ಹರಿಸಿ ಬೆಳೆಯುತ್ತಾರೆ ಆದ್ದರಿಂದ ಈ ಕಸಬು ಬಡ ಕುಟುಂಬಗಳಿಂದ ಬಂದವರು ಜೀವನ ಕ್ಕಾಗಿ ಮಾಡುವ ಒಂದು ಕಸುಬು ಇದು ಈ ಹಳ್ಳಿಯಲ್ಲಿ ವ್ಯಾಪಕವಾಗಿದೆ.

ಸಾಂಸ್ಕೃತಿಕ ನೋಟ:

ಕುಂಬಳಹಳ್ಳಿಯಲ್ಲಿ ಎರಡು ದೇವಸ್ಥಾನವಿದೆ ಒಂದು ವೆಂಕಟರಮಣ ಸ್ವಾಮಿ ದೇವಸ್ಥಾನ ಮತ್ತೊಂದು ಮಾರಮ್ಮನ ದೇವಸ್ಥಾನ, ಈ ಎರಡೂ ದೇವಸ್ಥಾನಗಳು ತಿಗಳರು ಮತ್ತು ಕುರುಬರ ಅಧೀನದಲ್ಲಿವೆ, ಈ ದೇವಸ್ಥಾನಗಳ ಒಳಕ್ಕೆ ಪರಿಶಿಷ್ಟ ಜಾತಿಯವರನ್ನು ಬಿಟ್ಟುಕೊಳ್ಳಲಾಗುತ್ತಿದೆ, ಇಲ್ಲಿ ಅಸ್ಪೃಶ್ಯತೆ ಆಚರಿಸುತ್ತಿಲ್ಲ, ಯಾಕೆಂದರೆ ಸಿದ್ದರಾಮಯ್ಯನವರು ಸಂಘಟಿಸಿದ್ದು ಅಹಿಂದ ಸಂಘಟನೆ ಇಲ್ಲಿ ಬೇರು ಬಿಟ್ಟಿದೆ, ಇದರಿಂದಾಗಿ, ತಿಗಳ ಮತ್ತು ಕುರುಬರು ಪರಿಶಿಷ್ಟ ಜಾತಿಯವರನ್ನು ಅಸ್ಪೃಶ್ಯತೆ ಆಚರಣೆಯ ಮೂಲಕ ಬೇರ್ಪಡಿಸುವ ಆಚರಣೆಗಳು ಇಲ್ಲಿ ಮೌಲ್ಯ ಕಳೆದುಕೊಂಡಿವೆ. ಪರಿಶಿಷ್ಟ ಜಾತಿಯವರ ತಿಗಳ ಮತ್ತು ಕುರುಬರ ಮನೆಗಳ ಒಳಕ್ಕೆ ಪ್ರವೇಶಿಸುತ್ತಾರೆ. ಹಾಗೆಯೇ ಊಟೋಪಚಾರಗಳು ಕೆಲವು ಧಾರ್ಮಿಕ ಸಂದರ್ಭಗಳ ಆಚರಣೆಯ ಸಂದರ್ಭದಲ್ಲಿ ನಡೆಯುತ್ತದೆ. ತಿಗಳ ಮತ್ತು ಕುರುಬರು ಜನ ಸಂಖ್ಯೆಯಿಂದ ಗಣನೀಯ ಪ್ರಮಾಣದಲ್ಲಿದ್ದರೂ ಅಲ್ಪಸಂಖ್ಯಾತ ಪರಿಶಿಷ್ಟ ಜಾತಿಯ ಮೇಲೆ ಯಾವುದೇ ಕಿರುಕಳ ಹಾಗೂ ತಾರತಮ್ಯ ಅನುಸರಿಸುತ್ತಿಲ್ಲ ಇದಕ್ಕೆಲ್ಲ ಕಾರಣವೆಂದರೆ ಈಗಾಗಲೇ ತಿಳಿದಿರುವಂತೆ ಕುರುಬ ಮತ್ತು ತಿಗಳರು ಆರ್ಥಿಕವಾಗಿ ಅಷ್ಟು ಸದೃಢರಾಗಿಲ್ಲದಿರುವುದು, ಬಹುತೇಕರು ಸಣ್ಣ ರೈತರು ಆಗಿರುವುದು ಇದರ ಜೊತೆಗೆ ಸಾಮಾಜಿಕ ಪರಿವರ್ತನೆ ತರಬಲ್ಲ ಅಹಿಂದ ಸಂಘಟನೆಯ ಗಾಳಿ ಬೀಸುತ್ತಿರುವುದು, ಇಲ್ಲಿ ತಿಗಳರಲ್ಲಿ, ಕುರುಬರಲ್ಲಿ ಕೈ ಬೆರಳೆಣಿಕೆಯಷ್ಟು ಜನ ದೊಡ್ಡ ಹಿಡುವಳಿದಾರರು ಇದ್ದಾರೆ, ಇದರ ಜೊತೆಗೆ ಈ ಎರಡೂ ಜಾತಿಗಳು ಮೊದಲಿನಿಂದಲೂ ಸಾಮರಸ್ಯದಿಂದಿರುವುದು. ಆದರೆ ಈ ಜಾತಿಗಳ ಮೇಲ್ಮುಖಿ ಚಲನೆ ಅಷ್ಟಾಗಿ ನಡೆಯದೆ ಇರುವುದು ಇಲ್ಲ ಎದ್ದು ಕಾಣುವ ಅಂಶ, ಯಾಕೆಂದರೆ ಈ ಎರಡು ಜಾತಿಗಳು ಪ್ರವರ್ಗವಿ ಎ ನಲ್ಲಿ ಗ್ರಾಮಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬಂದರೆ ಪ್ರವರ್ಗ II ಎ ನಲ್ಲಿ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯನ್ನು ಈ ಎರಡೂ ಜಾತಿಗಳು ಪಡೆಯುತ್ತಿವೆ. ಈ ಎಲ್ಲ ಅಂಶಗಳಿಂದಾಗಿ ಅಸ್ಪೃಶ್ಯತೆ ಇಲ್ಲಿ ಇಲ್ಲ.

ಸಮೀಕ್ಷೆ ಮಾಡಿದಾಗ ಎರಡು ಜಾತಿಯವರು ಅಸ್ಪೃಶ್ಯತೆ ಆಚರಿಸುವುದರಿಂದ ಉಪಯೋಗವೇನು ಎಂದು ಹೇಳಿದರು ನಾವು ಅವರ ರೀತಿಯಲ್ಲೆ ಬಡವರು, ಬಡವರ ಬಡವರ ಮಧ್ಯೆ ಯಾವ ತಾರತಮ್ಯ ಎಂಬ ಮಾತು ಕೇಳಿ ಬಂತು, ಆದರು ಅಸ್ಪೃಶ್ಯತೆಯ ಬೇರುಗಳು ನಾನು ಗಮನಿಸಿದಂತೆ ಅಲ್ಲಾಡುತ್ತಿವೆ, ತಿಗಳ ಮತ್ತು ಕುರುಬರ ಎಲ್ಲ ಜನರನ್ನು ಒಂದೇ ಮಾನದಂಡದಲ್ಲಿಟ್ಟು ತೂಗಲು ಸಾಧ್ಯವಿಲ್ಲ,

ಅಲ್ಲೊಂದು ಇಲ್ಲೊಂದು ಅಸ್ಪೃಶ್ಯತೆಯ ಘಟನೆಗಳು ನಡೆಯುತ್ತಿವೆ. ಆದರೂ ಅಹಿಂದ ಸಂಘಟನೆ ಈ ಗ್ರಾಮದಲ್ಲಿ ಶಕ್ತಿಯುತವಾಗಿರುವುದರಿಂದ ಇತ್ತೀಚಿಗೆ ಈ ಜಾಗೃತಿ ಗ್ರಾಮದಲ್ಲೇ ಹರಡಿದೆ. ಅಹಿಂದ ತಿಗಳ ಕುರುಬರ ನಡುವೆ ಇದ್ದ ಪೈಪೋಟಿಯ ಕಂದರವನ್ನು ಕುಗ್ಗಿಸಿದೆ , ತಿಗಳರು ಕುರುಬರದು ಒಂದೇ ಸಾಮಾಜಿಕ ಸ್ಥಾನಮಾನ ಇದ್ದರೂ ರಾಜಕೀಯವಾಗಿ ಈ ಗ್ರಾಮ ದಲ್ಲಿ ಪೈಪೋಟಿ ಇರುತ್ತಿತ್ತು. ಆದರೆ ಇದನ್ನು ಅಹಿಂದ ಸಂಘಟನೆ ಕುಗ್ಗಿಸುವಲ್ಲಿ ಸಾಫಲ್ಯ ಸಾಧಿಸಿದೆ, ಹಾಗೆಯೇ ಅಸ್ಪೃಶ್ಯತೆಯನ್ನು ಸಹ ಈ ಸಂಘಟನೆ ಹೋಗಲಾಡಿಸುವ ನಿಟ್ಟಿನಲ್ಲಿ ಸಾಫಲ್ಯ ಸಾಧಿಸಿದೆ, ಆದ್ದರಿಂದ ಈ ಗ್ರಾಮದಲ್ಲಿ ತಿಗಳ, ಕುರುಬ ಹಾಗೂ ಮಾದಿಗ ಜಾತಿಗಳು ಅಹಿಂದ ಸಂಘಟನೆಯ ವ್ಯಾಪ್ತಿಗೆ ಬರುವಲ್ಲಿ ಯಶಸ್ವಿಯಾಗಿವೆ, ಹೀಗೆ ಒಂದೇ ಸಂಘಟನೆ ಅಡಿಯಲ್ಲಿ ಬಂದಿರುವುದರಿಂದ ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟರ ಮಧ್ಯೆ ಇದ್ದ ಸಾಮಾಜಿಕ ಅಸಮಾನತೆಯ ಕಂದರ ಕುಗ್ಗತೊಡಗಿದೆ. ಆದ್ದರಿಂದ ಇಲ್ಲಿ ದೇವಸ್ಥಾನಗಳ ಒಳಕ್ಕೆ ಪರಿಶಿಷ್ಟ ಜಾತಿಯವರನ್ನು ಬಿಟ್ಟುಕೊಳ್ಳುವಲ್ಲಿ ಯಾವುದೆ ತಗಾದೆ ಇಲ್ಲ, ಇದರಿಂದಾಗಿ ಅಸ್ಪೃಶ್ಯತೆ ಈ ಗ್ರಾಮದಲ್ಲಿ ಅಷ್ಟಾಗಿ ಕಂಡು ಬರುತ್ತಿಲ್ಲ. ಅಹಿಂದ ಸಂಘಟನೆಯ ಫಲಶ್ರುತಿ ಕುರುಬ ಹಾಗೂ ಮಾದಿಗ ಜಾತಿಗಳ ರಾಜಕೀಯ ಧ್ರುವೀಕರಣ ಈ ಹಳ್ಳಿಯಲ್ಲಿ ಪ್ರಾರಂಭವಾಗಿದೆ. ಕುಂಬಳಹಳ್ಳಿ ಗ್ರಾಮ ಪಂಚಾಯಿತಿಗೆ ಕುಂಬಳಹಳ್ಳಿಯು ಸೇರಿ ಆರು ಹಳ್ಳಿಗಳು ಬರುತ್ತವೆ. ಈ ಆರು ಹಳ್ಳಿಗಳ ಒಟ್ಟು ಗ್ರಾಮ ಪಂಚಾಯಿತಿ ಸದಸ್ಯರು 20 ಮಂದಿ, ಈ 20 ಮಂದಿ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ತಿಗಳರು 5 ಮಂದಿ ಇದ್ದಾರೆ ಕುರುಬರು 5 ಮಂದಿ ಇದ್ದು, ವಕ್ಕಲಿಗರು, ಪರಿಶಿಷ್ಟ ಜಾತಿ 3. ಇಲ್ಲಿನ ಗ್ರಾಮ ಪಂಚಾಯಿತಿಯ ಜಾತೀವಾರು ಸ್ವರೂಪವನ್ನು ಗಮನಿಸಿದರೆ ತಿಗಳ, ಕುರುಬ , ವಕ್ಕಲಿಗ, ಸಮಸಮನಾಗಿ ಈ ಗ್ರಾಮ ಪಂಚಾಯತಿಯಲ್ಲಿದ್ದಾರೆ, ಈ ಗ್ರಾಮ ಪಂಚಾಯಿತಿಯಲ್ಲಿ ತಿಗಳ ಮತ್ತು ಕುರುಬರ ಪ್ರಾತಿನಿದ್ಯ ಪಡೆಯಲು, ಗ್ರಾಮ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗಗಳಿಗೆ ಜಾರಿಯಾಗಿರುವ ಮೀಸಲಾತಿಯ ಕಾರಣ ಎಂದರೆ ತಪ್ಪಾಗಲಾರದು, ಗ್ರಾಮ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿ, ಮೊದಲಿಂದಲೂ ರಾಜಕೀಯ ಪ್ರಾತಿನಿದ್ಯ ವಿಲ್ಲದೆ ಬರುತ್ತಿದ್ದ ಕುರುಬ, ತಿಗಳರಂತಹ ಜಾತಿಗಳು ಗ್ರಾಮದ ಆಡಳಿತದಲ್ಲಿ ಪ್ರವೇಶಿಸಿದ್ದಾರೆ, ಗ್ರಾಮದ ಆಡಳಿತದಲ್ಲಿ ಪ್ರವೇಶಿಸುವುದರ ಮೂಲಕ ಸಾಂಪ್ರದಾಯಿಕವಆಗಿ ವಕ್ಕಲಿಗರ ಹಿಡಿತದಲ್ಲಿದ್ದ ಗ್ರಾಮಾಡಳಿತ ಇನ್ನಿತರ ಹಿಂದುಳಿದ ವರ್ಗಗಳ ಕೈಗೆ ಹಸ್ತಾಂತರ ಗೊಂಡಿದೆ. ಇಂತಹ ಕ್ರಾಂತಿಕಾರಕ ಕಾರ್ಯಕ್ರಮದಿಂದಾಗಿ ಕರ್ನಾಟಕದಾದ್ಯಂತ ಹಳ್ಳಿಗಳ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿವರ್ತನೆ ನಡೆದಿದೆ, ಎಂದರೆ ತಪ್ಪಾಗಲಾರದು, ಗ್ರಾಮ ಪಂಚಾಯಿತಿಗಳಲ್ಲಿ ರಾಜಕೀಯ ಮೀಸಲಾತಿ ಬರುವ ಮೊದಲು, ಹಳ್ಳಿಗಳ ಗ್ರಾಮಾಡಳಿತ ಪ್ರಬಲ ಕೋಮುಗಳ ಕೈಯಲ್ಲಿದ್ದವು ಆದರೆ, ಈ ಮೀಸಲಾತಿಯಿಂದಾಗಿ ಅನಿವಾರ್ಯವಾಗಿ , ಕುರುಬ, ತಿಗಳ, ಈಡಿಗ ಕುಂಬಾರ , ವಿಶ್ವ ಕರ್ಮ ರಂತಹ ಜಾತಿಗಳು ಗ್ರಾಮ ಆಡಳಿತ ಪ್ರವೇಶಿಸುವಂತಹ ಕ್ರಾಂತಿಕಾರ ಬೆಳವಣಿಗೆ ಕರ್ನಾಟಕದಲ್ಲಿ

ನಡೆದಿದೆ ಎಂದರೆ ತಪ್ಪಾಗಲಾರದು.

ವಿಕೇಂದ್ರೀಕರಣದ ವೈಫಲ್ಯ:

ಕುಂಬಳಹಳ್ಳಿ ಗ್ರಾಮ ಪಂಚಾಯತಿ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ ಎಂಬುದೆ ಸಮೀಕ್ಷೆಯಲ್ಲಿ ವ್ಯಕ್ತಪಟ್ಟ ಅಭಿಪ್ರಾಯಗಳು ಆದರೆ ಗ್ರಾಮ ಪಂಚಾಯಿತಿಯು ಕಾರ್ಯದರ್ಶಿಯನ್ನು ಕೇಳಿದಾಗ ಈ ವರ್ಷದ ಅವಧಿಯಲ್ಲಿ ಅನೇಕ ಕಾಮಗಾರಿಕೆಗಳು ನಡೆದಿವೆ ಎಂದು ಹೇಳುತ್ತಾನೆ, ಇದರಲ್ಲಿ ಸಂಪೂರ್ಣ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಚರಂಡಿ, ರಸ್ತೆ, ಸಮುದಾಯ ಭವನ, ಮುಂತಾದವುಗಳ ಕಾಮಗಾರಿಕೆ ನಡೆದಿದೆ, ವರ್ಷಕ್ಕೆ 3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಎಂಬುದೆ ಈತನ ಅಭಿಪ್ರಾಯ, ಇದರ ಜೊತೆಗೆ ಶಾಸನಬದ್ದ ಅನುಧಾನ ಅಥವಾ ಅಭಿವೃದ್ಧಿ ಅನುದಾನ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಅನುದಾನದಲ್ಲಿ ಪಂಪು ದುರಸ್ತಿ, ರಸ್ತೆ ನಿರ್ಮಾಣ, ರೈತರ ವೈಯುಕ್ತಿಕ ಸೌಲಭ್ಯಗಳಿಗೆ ಪರಿಶಿಷ್ಟ ಜಾತಿ, ಪಂಗಡಗಳಿಗೆ ಮನೆ ಕಟ್ಟಿಸುವುದಕ್ಕೆ ಅನುಧಾನವನ್ನು ಉಪಯೋಗಿಸಲಾಗುತ್ತಿದೆ ಎಂದು ಹೇಳಿದರು ಆದರೆ ಗ್ರಾಮಾಡಳಿತ ಗ್ರಾಮದ ಅಭಿವೃದ್ಧಿಗೆ ಶ್ರಮಿಸುವಲ್ಲಿ ಸಾಫಲ್ಯ ಸಾಧಿಸಿಲ್ಲ ಎಂಬುದೆ, ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯ. ಬಡವರಿಗೆ ಮತ್ತು ಪರಿಶಿಷ್ಟ ಜಾತಿ ಪಂಗಡಕ್ಕೆ ಅಂತಹ ಹೇಳಿಕೊಳ್ಳುವಂತಹ ರೀತಿಲ್ಲಿ ಮನೆಗಳನ್ನು ಕಟ್ಟಿಸಿಲ್ಲ ಎಂಬುದು ದೂರು, ಶೌಚಾಲಯಗಳ ನಿರ್ಮಾಣವೂ ಸಹ ನಡೆದಿಲ್ಲ ಎಂಬುದು ಮತ್ತೊಂದು ಅಪಾದನೆ, ಆದರೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯ ಹೇಳಿಕೆಯ ಬೇರೆಯಾಗಿತ್ತು ಇಲ್ಲಿ ಅಭಿವೃದ್ಧಿ ಕಾರ್ಯ ನಡೆದಿದೆ, ಆದರೆ ರೈತರ ಅಭಿಪ್ರಾಯ ಎಲ್ಲಾ ಅಭಿವೃದ್ಧಿ ಕಾರ್ಯಗಳ ನಡೆದಿರುವ ಬಗ್ಗೆ ಪಾರದರ್ಶಕತೆ ಇಲ್ಲ, ಮನಸ್ಸಿಗೆ ಬಂದಂತೆ ಅನವಶ್ಯಕ ಕಾರ್ಯಗಳಿಗೆ ಖರ್ಚು ಮಾಡುತ್ತಾರೆ, ಭ್ರಷ್ಟಾಚಾರವು ನಡೆಯುತ್ತದೆ ಎಂಬುದೆ ಸಮೀಕ್ಷೆಯಲ್ಲಿ ಬಹಳಷ್ಟು ರೈತರು ವ್ಯಕ್ತಪಡಿಸಿದ ಅಭಿಪ್ರಾಯ, ಆದ್ದರಿಂದ ಗ್ರಾಮಾಡಳಿತ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತ ವಾಗಬೇಕಾಗಿದೆ.

ಗ್ರಾಮ ಪಂಚಾಯಿತಿ ಕಾರ್ಯದರ್ಶಿಯ ಪ್ರಕಾರ ಸುಮುರಾ 40 ಫಲಾನುಭವಿಗಳಿಗೆ ರೂ. 20000 ಕೊಟ್ಟು ಅಂಬೇಡ್ಕರ್ ಆಶ್ರಯ ಇಂದಿರ ಆವಾಜ್ ಕಾರ್ಯಕ್ರಮದಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ ಎಂದು ಹೇಳಿದರು. ಆದರೆ ಇಲ್ಲಿ ನಡೆದಿರುವ ವ್ಯವಹಾರವೇ ಬೇರೆ ಎಂಬುದು ಸಮೀಕ್ಷೆ ಸಂದರ್ಭದಲ್ಲಿ ವ್ಯಕ್ತವಾದ ಅಭಿಪ್ರಾಯ ಗ್ರಾಮ ಪಂಚಾಯಿತಿಯಿಂದ ಫಲಾನುಭವಿಗಳಿಗೆ ನಿವೇಶನ ಮಂಜೂರಾತಿಯಿಂದ ಒಡಿದು ಮನೆಗಳನ್ನು ಕಟ್ಟಿಸುವವರೆಗೂ ಭ್ರಷ್ಟಾಚಾರ ನಡೆದಿದೆ, ಎಂಬುದೆ ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯ ನಿವೇಶನ ಮಂಜೂರಾತಿಗೆ ಪಂಚಾಯಿತಿಗೆ ವರ್ಷಾನುಗಟ್ಟಲೆ ಎಡತಾಕಬೇಕು. ಹೀಗೆ ನೂರಾರು ಸರಿ ಗ್ರಾಮ ಪಂಚಾಯಿತಿಗೆ ಸುತ್ತಿದ್ದರು, ನಿವೇಶನ ಮಂಜೂರಾತಿ ಕಷ್ಟಕರವಾದದ್ದು ಇದು ಗ್ರಾಮ ಪಂಚಾಯಿತಿ

ಸದಸ್ಯರ ಹಿಂಬಾಲಕರಿಗೆ ಅವರಿಗೆ ಹತ್ತಿರದವರಿಗೆ ಮಂಜೂರಾತಿಯಾಗುತ್ತದೆ. ರೂ. 20,000 ರ ಮಂಜೂರಾತಿಯೂ ಅಷ್ಟೆ ಇದು ಗ್ರಾಮ ಪಂಚಾಯಿತಿ ಸದಸ್ಯರಿಗೆ ಹತ್ತಿರದವರಿಗೆ ಸಿಗುವುದು, ಯಾವುದೇ ಪ್ರಭಾವ ಇಲ್ಲದೆ ಹಾಗೂ ಸಾಮಾನ್ಯ ಬಡವರಿಗೆ ನಿವೇಶನ, ಹಣ ಸಿಗುವುದು ದುರ್ಲಭ ಆದ್ದರಿಂದ ಎಷ್ಟೇ ಇಂತಹ ಗ್ರಾಮೀಣಾಭಿವೃದ್ಧಿ ಯೋಜನೆಗಳು ಬರಲಿ, ಅವು ರಾಜಕೀಯ ಮತ್ತು ಪ್ರಭಾವಶಾಲಿಗಳ ಭ್ರಷ್ಟಾಚಾರದಿಂದ ಮುಕ್ತರಾಗದೆ ಬಡವರಿಗೆ ತಲುಪುವುದು ಕಷ್ಟಕರವಾದದ್ದು. ಆದ್ದರಿಂದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ವಿಫಲವಾಗುತ್ತಿರುವುದು. ಆದ್ದರಿಂದ ಈಗಾಗಲೆ ನಾನು ತಿಳಿಸಿರುವಂತೆ ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ ಪರಿಣಾಮಕಾರಿಯಾಗುವಂತೆ ಸರಕಾರಗಳು ರೂಪಿಸಬೇಕಾಗಿದೆ ಆದರೆ ಹೇಗೆ ರೂಪಿಸಬೇಕೆಂಬುದನ್ನು ಸರಕಾರಗಳು ಯೋಚಿಸಬೇಕಾಗಿದೆ. ಇಲ್ಲದೆ ಹೋದರೆ ಈ ಕಾರ್ಯಕ್ರಮಗಳು ಪರಿಣಾಮಕಾರಿಯಾಗುವಲ್ಲಿ ವಿಫಲವಾಗುವುದರಲ್ಲಿ ಸಂದೇಹವಿಲ್ಲ, ಆದ್ದರಿಂದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಎಷ್ಟೇ ಹೇಳಿಕೊಂಡರು ಕಾರ್ಯಕ್ರಮದ ಸಾಫಲ್ಯದ ಬಗ್ಗೆ ಅದರಿಂದ ಏನು ಪ್ರಯೋಜನವಿಲ್ಲ ಎಂಬುದು ಸ್ಪಷ್ಟವಾಗಿದೆ.

ಮನೆಗಳ ಸ್ವರೂಪ ಇತ್ಯಾದಿ:

ಕುಂಬಳಹಳ್ಳಿಯಲ್ಲಿ ಸುಸಜ್ಜಿತ ಮನೆಗಳು ಜಾಸ್ತಿ ಸಂಖ್ಯೆಯಲ್ಲೆ ಇವೆ. ಇಲ್ಲಿ 700 ಮನೆಗಳ ಪೈಕಿ ಹೆಂಚಿನ ಮನೆ 50 (7.14%) ಕಲ್ಲು ಚಪ್ಪಡಿ ಮನೆ 50 (7.14%) ಆರ್ ಸಿಸಿ ಮನೆಗಳು 100 (14.28%) ಇವೆ, ಸಿಮೆಂಟ್ ಅಥವಾ ತಗಡಿನ ಷೀಟ್ ಮನೆಗಳ 500 (71%) ಇವೆ. ಇಲ್ಲಿ ಎಲ್ಲ ಮನೆಗಳಿಗೂ ಶೌಚಾಲಯಗಳು ಇವೆ. ಅಂಕಿ ಅಂಶಗಳ ಪ್ರಕಾರ ಕುಂಬಳಹಳ್ಳಿ ಗುಡಿಸಲು ರಹಿತ ಮನೆಗಳನ್ನು ಹೊಂದುವಲ್ಲಿ ಯಶಸ್ವಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಬಹುತೇಕ ಸಣ್ಣ ರೈತರು ಹೂವಿನ ಬೆಳೆಗಳು ಬೆಳೆಯುವವರು ಹಾಗೂ ಹೂವಿನ ವ್ಯಾಪಾರಸ್ಥರು, ಹೂವಿನ ಬೆಳೆಗಳು ವಾಣಿಜ್ಯ ಬೆಳೆಗಳಾಗಿರುವುದರಿಂದ ಅಧಿಕ ಲಾಭವನ್ನು ಪಡೆಯುತ್ತಾರೆ, ಆದ್ದರಿಂದ ಈ ಗ್ರಾಮದಲ್ಲಿ ಬಹಳಷ್ಟು ಜನ ಅಂದರೆ 700 ರಲ್ಲಿ 100 ಮನೆಗಳು ಆರ್ ಸಿಸಿ ಮನೆಗಳಾಗಿವೆ, ಈಗಾಗಲೆ ನಾನು ಅಧ್ಯಯನ ಮಾಡಿದ ಗ್ರಾಮಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸುಸಜ್ಜಿತ ಮನೆಗಳು ಕಂಡುಬಂದಿಲ್ಲ. ಈ ಗ್ರಾಮ ಬೆಂಗಳೂರಿನ ಎಲ್ಲ ಪ್ರಭಾವಗಳಿಗೆ ಒಳಗಾಗಿದೆ. ಆದ್ದರಿಂದ ಇಲ್ಲಿ ಬರಿ ಕೃಷಿಯಷ್ಟೆ ಅಲ್ಲ, ರಿಯಲ್ ಎಸ್ಟೇಟ್ ವ್ಯವಹಾರವು ಇದೆ. 2-3 ಎಕರೆ ಜಮೀನಿದ್ದರು ಇದಕ್ಕೆ ಚಿನ್ನದ ಬೆಲೆ, ಇದರ ಜೊತೆಗೆ ಇವರು ಬೆಳೆಯುವ ಹೂ ಹಾಗೂ ತರಕಾರಿಗಳು ಬೆಂಗಳೂರಿನಲ್ಲಿ ಭಾರಿ ಬೇಡಿಕೆ ಇರುವುದರಿಂದ ಅಲ್ಲಿ ಲಾಭದಾಯಕ ಬೆಲೆಗೆ ಮಾರಾಟವಾಗುತ್ತವೆ. ಇದರ ಜೊತೆಗೆ ಕೃಷಿಯೇತರ ಕಸುಬುಗಳಲ್ಲಿ ಬಹಳಷ್ಟು ಜನ ತೊಡಗಿಸಿಕೊಂಡಿರುವುದರಿಂದ ಇದು ಅಧಿಕ ಆದಾಯ ತರುತ್ತದೆ, ಈ ಗ್ರಾಮದಲ್ಲಿರುವ ರೈತರು ಬರಿ ರೈತರಿಗಾಗಿ ಉಳಿದಿಲ್ಲ. ಇವರು ಬೇರೆ ಬೇರೆ

ವ್ಯವಹಾರಸ್ಥರಾಗಿಯೇ ಇದ್ದಾರೆ ಆದ್ದರಿಂದ ಈ ವ್ಯವಹಾರ ಇವರಿಗೆ ಅಧಿಕ ಆಧಾಯ ತರುತ್ತದೆ, ಆದ್ದರಿಂದ ಈ ಗ್ರಾಮ ಗುಡಿಸಲು ರಹಿತ ಗ್ರಾಮ ಹಾಗೂ ಹೆಂಚಿನ ಮನೆಗಳು ಹಾಗೂ ಷೀಟ್ ಮನೆಗಳು ಮಾತ್ರ ಇಲ್ಲ. ಇಲ್ಲಿ ಕಡಿಮೆ ದರ್ಜೆಯ ಮನೆಗಳೆಂದು ಪರಿಗಣಿಸಲಾಗಿದೆ. ಈ ಗ್ರಾಮದಲ್ಲಿ ಹಣ ಹರಿದಾಡಲು ಕಾರಣವೇನು ಎಂಬುದನ್ನು ಸ್ಪಷ್ಟವಾಗಿ ಗಮನಿಸಿರುವೆ. ಇಲ್ಲಿ ಬಹಳಷ್ಟು ಜನ ಬಡ್ಡಿಗೆ ಹಣ ಕೊಟ್ಟು ಬಡ್ಡಿಯನ್ನು ವಸೂಲು ಮಾಡುತ್ತಾರೆ, ಇವರು ಇಲ್ಲಿನ ನವ ಶ್ರೀಮಂತ ವರ್ಗ ಈ ಬಡ್ಡಿ ವ್ಯವಹಾರದಲ್ಲಿ ಹೆಚ್ಚಿನವರು ಆರ್.ಸಿ.ಸಿ. ಮನೆಗಳನ್ನು ಹೊಂದಿದ್ದಾರೆ ಹಾಗೂ ಕಾರುಗಳನ್ನು ಸಹ ಹೊಂದಿದ್ದಾರೆ, ಕೃಷಿಯ ಮೇಲೆಷ್ಟೆ ಅವಲಂಬಿತವಾದರೆ ಇಷ್ಟು ಐಷಾರಾಮಿ ಜೀವನ ನಡೆಸಲು ಸಾದ್ಯವಿಲ್ಲ. ಆದರೆ ಕೃಷಿ ಮೇಲೆ ಅವಲಂಬಿತರಾಗಿರುವವರು ನಾನು ಈಗಾಗಲೆ ಹೇಳಿದಂತೆ ವಾಣಿಜ್ಯ ಬೆಳೆಗಳ್ನನು ಬೆಳೆಯುತ್ತಿರುವುದರಿಂದ ಇವರು ಸಹ ಸುಸಜ್ಜಿತ ಮನೆಗಳನ್ನು ಹೊಂದಿದ್ದಾರೆ, ಒಟ್ಟಾರೆಯಾಗಿ ಬಡ್ಡಿ ವ್ಯವಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವ ರೈತರು ಹೆಚ್ಚು ಶ್ರೀಮಂತರಾಗಿದ್ದಾರೆ, ಇಲ್ಲಿ ಎರಡೂ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬೇಕಾದಂತಹ ವಾತಾವರಣವಿದೆ ಈ ಚಟುವಟಿಕೆಗಳಿಗೆ ಬೇಕಾದ ವಾತಾವರಣವೆಂದರೆ ಬೆಂಗಳೂರಿನ ಸಂಸ್ಕೃತಿಯ ಪ್ರಭಾವ, ಇಲ್ಲಿ ಕಾಂಟ್ರಾಕ್ಟರುಗಳು ಇದ್ದಾರೆ, ಈ ಕಾಂಟ್ರಾಕ್ಟರುಗಳು ಶ್ರೀಮಂತಿಕೆಯಿಂದ ನಳ ನಳಸುತ್ತಿದ್ದಾರೆ, ಹೀಗೆ ಬಡ್ಡಿ ವ್ಯಾಪಾರ ಮಾಡುವವರು, ವಾಣಿಜ್ಯ ಬೆಳೆಗಳನ್ನು ಬೆಳೆಯುವವರು ಕಾಂಟ್ರಾಕ್ಟರುಗಳು ಶ್ರೀಮಂತಿಕೆಯನ್ನು ಹೊಂದಿದ್ದಾರೆ, ಇವರೆಲ್ಲ ಸುಸಜ್ಜಿತ ಆರ್.ಸಿ.ಸಿ. ಮನೆಗಳನ್ನು ಕಟ್ಟಿಸಿದ್ದಾರೆ, ಆದರೆ ಬಹುತೇಕ ರೈತರು ರಾಗಿ, ಬೇಳೆಕಾಳುಗಳನ್ನು ಬೆಳೆಯುವವರು ಅಂತಹ ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ, ಇಂತಹ ರೈತರು ಹೆಂಚಿನ ಮನೆಗಳನ್ನು ಅಥವಾ ಷೀಟ್ ಮನೆಗಳನ್ನು ಹೊಂದಿದ್ದಾರೆ, ಹಳ್ಳಿಗಳಲ್ಲಿ ಹೆಂಚಿನ ಮತ್ತು ಷೀಟ್ ಮನೆಗಳನ್ನು ಹೊಂದುವುದು, ಅತ್ಯಂತ ಪ್ರಯಾಸಕಾರಿಯಾದದ್ದು, ಆದರೆ ಈ ಹಳ್ಳಿಯಲ್ಲಿ 500 ಷೀಟ್ ಮನೆಗಳಿವೆ ಎಂದರೆ ನಿಮಗೆ ಗೊತ್ತಾಗುತ್ತದೆ, ಇದು ಮಧ್ಯಮ ಆದಾಯದ ಜನರ ಮನೆಗಳೆಂದು ಉಳಿದ 100 ಜನ ಆರ್.ಸಿ.ಸಿ. ಮನೆಗಳನ್ನು ಹೊಂದಿದ್ದಾರೆ ಎಂದರೆ ಈ ಗ್ರಾಮದಲ್ಲಿ ಸಮೃದ್ಧಿ ಎಷ್ಟರ ಮಟ್ಟಿಗೆ ಇದೆ ಎಂದು ಇಲ್ಲಿ ಬಡತನ ಮತ್ತು ಸಮೃದ್ಧಿ ಒಂದರ ಜೊತೆಯಲ್ಲಿ ಒಂದು ಇವೆ. ಅದೇ ಈ ಗ್ರಾಮದ ವಿಶಿಷ್ಟ ಲಕ್ಷಣ ಬಡತನ ಸಮೃದ್ಧಿ ಒಂದೇ ಕಡೆ, ಜೊತೆಯಲ್ಲಿ ಇದ್ದರೆ ಅಲ್ಲಿ ವರ್ಗತಾರತಮ್ಯವನ್ನು ನಾವು ಕಾಣಬಹುದಾಗಿದೆ. ಮಧ್ಯಮ ಆದಾಯದ ರೈತರು ಇಲ್ಲಿ ಸಂಪೂರ್ಣವಾಗಿ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುವವರು, ಶ್ರೀಮಂತರ ರೈತರು ಕೃಷಿಯೊಂದೆ ಅಲ್ಲ ಇವರು ತಮ್ಮ ಆರ್ಥಿಕ ಚಟುವಟಿಕೆಗಳನ್ನು ವೈವಿಧ್ಯೀಕರಿಸಿ ಕೊಂಡಿದ್ದಾರೆ. ಇವರ ಆದಾಯದ ಮೂಲ ಕೃಷಿಯೇತರ ಲಾಭದಾಯಕ ರಂಗಗಳಲ್ಲಿ ತೊಡಗಿಸಿಕೊಂಡಿದ್ದಾರೆ ಆದ್ದರಿಂದ ನಾನು ಅಧ್ಯಯನಿಸಿದ, ಎಲ್ಲಾ ಗ್ರಾಮಗಳಿಗಿಂತಲು ವಿಶಿಷ್ಟವಾಗಿರುವುದು, ಇಲ್ಲಿ ಬಂಡವಾಳ ಶಾಹಿ ಅಥವಾ

ಕೆಲವು ರೈತರು ಕಾರು, ರಿಪ್ರಿಜರೇಟರ್ ಮುಂತಾದ ಐಷಾರಾಮಿ ವಸ್ತುಗಳನ್ನು ಹೊಂದಿದ್ದಾರೆ, ಇವರಲ್ಲಿ ಮಧ್ಯಮ ಸಣ್ಣ, ದೊಡ್ಡ ಹಿಡುವಳಿದಾರರೂ ಇದ್ದಾರೆ, ಇವರ ಗುಣಲಕ್ಷಣ , ಹಣವನ್ನು ದ್ವಿಗುಣಗೊಳ್ಳುವಂತೆ ಮಾಡುವ ವ್ಯವಹಾರಗಳಲ್ಲಿ ತೊಡಗಿಸುವುದು, ಇಂತಹ ವ್ಯವಹಾರಗಳನ್ನು ನೋಡಿಕೊಳ್ಳಲು ಮನೆಯಲ್ಲಿ ಒಬ್ಬರೂ ಇಬ್ಬರೂ ಕಾಯಂ ಸದಸ್ಯರಿರುತ್ತಾರೆ, ಅಥವಾ ಮನೆಯವರೆಲ್ಲ ಇಂತಹ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ, ಹೀಗೆ ಗ್ರಾಮದಲ್ಲಿ ಬಂಡವಾಳ ಷಾಹಿಯ ಬೆಳವಣಿಗೆಯ್ನನು ಗಮನಿಸಬಹುದು., ಬಂಡವಾಳ ಶಾಹಿ ವ್ಯವಸ್ಥೆಯ ಬೆಳವಣಿಗೆಗೆ ಬೇಕಾದ ಸೌಕರ್ಯಗಳೆಂದರೆ ನಗರ ಪ್ರದೇಶಗಳಲ್ಲಿ ಈ ಗ್ರಾಮದ ರೈತರು ವ್ಯವಹಾರ ನಡೆಸುವ ಚಾತುರ್ಯ , ಇದಕ್ಕೆ ಶ್ರಮ ಕಡಿಮೆ ಆದರೆ ವಹಿವಾಟು, ವ್ಯವಹಾರ ಮುಖ್ಯ ಈ ಎಲ್ಲ ಅಂಶಗಳಿಂದಾಗಿ ಇಲ್ಲಿ ಇಂದು ಪಕ್ಕ ಪಕ್ಕದಲ್ಲೆ ಬಡತನ ಮತ್ತು ಶ್ರೀಮಂತಿಕೆ ನೆಲೆಸಿದೆ. ಇದು ಸ್ಪಷ್ಟವಾಗಿ ಗೋಚರಿಸುತ್ತದೆ . ಇಲ್ಲಿ ಸಾಕ್ಷರತೆ ಶೇ. 75 ರಿಂದ 80 ರಷ್ಟಿದೆ. ಇಲ್ಲಿ ಸಾಕ್ಷರತೆ ಇರುವುದಕ್ಕೆ ಮುಂದುವರೆದ ಶಿಕ್ಷಣ ಸಂಸ್ಥೆ ಕೆಲಸ ಮಾಡುತ್ತಿದೆ, ಈ ಸಂಸ್ಥೆ ಸಂಜೆ ವೇಳೆಯಲ್ಲಿ ಕೆಲಸ ಮಾಡುವುದರಿಂದ , ದಿನಕ್ಕೆ 50 -60 ಜನ ವಯಸ್ಕರರು ಈ ಸಂಸ್ಥೆಗೆ ಹಾಜರಾಗಿರುತ್ತಾರೆ, ಈ ಸಂಸ್ಥೆಯಲ್ಲಿ ಒಬ್ಬರು ಅಧ್ಯಾಪಕರಿದ್ದಾರೆ, ಈ ಅಧ್ಯಾಪಕರು ವಯಸ್ಕರ ಶಿಕ್ಷಣವನ್ನು ನೀಡುತ್ತಾರೆ, ಬಹಳಷ್ಟು ಜನ ಇಲ್ಲಿ ಕಲೆತು ವರ್ತಮಾನ ಪತ್ರಿಕೆಗಳನ್ನು ಓದಲು ಕನ್ನಡದಲ್ಲಿ ಬರೆಯಲು ಹಾಗೂ ಸಹಿ ಮಾಡುವುದನ್ನು ಕಲಿತಿದ್ದಾರೆ, ಹೀಗೆ ಮಾನವ ಸಂಪನ್ಮೂಲದ ಗುಣಮಟ್ಟ ಹೆಚ್ಚಾಗುವುದರಿಂದ ಗ್ರಾಮ ಅಭಿವೃದ್ಧಿಯಾಗುತ್ತದೆಂಬ ಒಂದು ಪರಿಕಲ್ಪನೆ ಇದೆ., ಆದರೆ, ಈ ಪರಿಕಲ್ಪನೆಯನ್ನು ಪರೀಕ್ಷಿಸಿದಾಗ ಅಕ್ಷರಸ್ಥರೂ ಎಷ್ಟೋ ಜನ ಕೂಲಿನಾಲಿನ ಮಾಡುತ್ತಿದ್ದಾರೆ, ಈ ಅಂಶ ಸ್ಪಷ್ಟಪಡಿಸುವುದೇನೆಂದರೆ ಅಕ್ಷರತೆ ಸಹ , ಮನುಷ್ಯ ಗುಣಾತ್ಮಕತೆಯ್ನನು ಹೆಚ್ಚಿಸಿದರು, ಗೌರವಯುತವಾಗಿ ಬಾಳುವಂತೆ ಮಾಡುವ ಪರ್ಯಾಯ ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದೆ. ಅಕ್ಷರಸ್ಥರಾದರೆ, ಗೌರಯುತ ಉದ್ಯೋಗ ಸೃಷ್ಟಿ ಮಾಡಿ ಕೊಂಡಿಲ್ಲ, ಆದರೆ ಅಕ್ಷರಸ್ಥರಿಗೆ ಉದ್ಯೋಗದ ಅವಕಾಶರಗಳನ್ನೇನು ತೆರೆಯುವುದಿಲ್ಲ. ಇದು ಇಲ್ಲಿ ಮಾಡಿದ ಪ್ರಾಥಮಿಕ ಸಮೀಕ್ಷೆಯಲ್ಲಿ ವ್ಯಕ್ತವಾದ ಅಂಶ. ಆದ್ದರಿಂದ ಅಕ್ಷರತೆ, ದಿನದ ಆಗು ಹೋಗುಗಳು ಬಗ್ಗೆ ರೈತರು ತಿಳಿದುಕೊಳ್ಳುವಂತೆ ಮಾಡಿದೆ, ಆದರೆ ದಿನದ ಆಗು ಹೋಗುಗಳಲ್ಲಿ ರಾಜಕೀಯ ಸರಕಾರಿ, ಇನ್ನಿತರ ಸಾಮಾನ್ಯ ವಿಷಯವನ್ನು ತಿಳಿದುಕೊಂಡಿದ್ದಾರೆ. ಆದರೆ ಇಲ್ಲಿ ಇದು ಎಷ್ಟರ ಮಟ್ಟಿಗೆ ದೈನಂದಿನ ಜೀವನಕ್ಕೆ ಸಹಾಯಕವಾಗುತ್ತದೆ ಎಂಬ ಅಂಶವನ್ನು ಸ್ಪಷ್ಟಪಡಿಸುವುದೇನೆಂದರೆ ಗ್ರಾಮ ಪಂಚಾಯಿತಿಗೆ ಬರುವ ಅನುದಾನ ಗಳು ಗ್ರಾಮ ಪಂಚಾಯಿತಿಯೂ ಯಾವುದರ ಮೇಲೆ ಖರ್ಚು ಮಾಡುತ್ತಿದೆ ಎಂಬುದು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಯ ಜೊತೆ ಸಂವಾದ, ಅವರನ್ನು ಪ್ರಶ್ನಿಸುವುದು ಮುಂತಾದವುಗಳಿಗೆ ಅಕ್ಷರತೆ ಸಹಾಯಕವಾಗಿದೆ ಆದ್ದರಿಂದ ಅಕ್ಷರತೆ ಗೌರವಯುತ ಉದ್ಯೋಗ ಸೃಷ್ಟಿಸುವುದರಲ್ಲಿ ವಿಫಲವಾಗಿದ್ದರೂ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸುವಲ್ಲಿ ಸಾಫಲ್ಯವನ್ನು ಕಂಡಿದೆ.

ಶಿಕ್ಷಣ:

ಇಲ್ಲಿ ಎರಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ, 8 ಅಧ್ಯಾಪಕರಿದ್ದಾರೆ, ಒಟ್ಟು 290 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ, ಒಂದು ಕಿರಿಯ ಪ್ರಾಥಮಿಕ ಶಾಲೆ ಇದೆ ಇಲ್ಲಿ 74 ಜನ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ, 3 ಜನ ಅಧ್ಯಾಪಕರಿದ್ದಾರೆ, ಹೊಸಕೋಟೆ ಕಾನ್ವೆಂಟುಗಳಿಗೆ 300 ಜನ ವಿದ್ಯಾರ್ಥಿಗಳು ಹೋಗುತ್ತಿದ್ದಾರೆ, ನಾನು ಸಮೀಕ್ಷೆ ಮಾಡಿದ ಎಲ್ಲ ಹಳ್ಳಿಗಳಲ್ಲೂ ಪ್ರಾಥಮಿಕ ಶಾಲೆಗಳು ಇವೆ, ಆದರೆ ಯಾವ ಹಳ್ಳಿಯಲ್ಲಿ ಪ್ರೌಢಶಾಲೆ ಇಲ್ಲ, ಇದು ಎಲ್ಲ ಹಳ್ಳಿಗಳ ಸ್ಪಷ್ಟ ಚಿತ್ರಣ ಆದರೆ ಕುಂಬಳ ಹಳ್ಳಿಯ ಬಡವರು ಹಳ್ಳಿಯ ಪ್ರಾಥಮಿಕ ಶಾಲೆಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಕಳಿಸಿದರೆ ಹಾಗೂ ಇರುವವರು ಹೊಸಕೋಟೆಯಲ್ಲಿರುವ ಕಾನ್ವೆಂಟ್ ಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದು, ಹಳ್ಳಿಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಕಾನ್ವೆಂಟುಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದಾರೆ, ಸಮೀಕ್ಷೆಯ ಸಂದರ್ಭಲ್ಲಿ ಇವರನ್ನು ಮಾತನಾಡಿಸಿದಾಗ ಇವರು ಸರಕಾರಿ ಪ್ರಾಥಮಿಕ ಶಾಲೆಗಳು ಕನ್ನಡ ಮಾಧ್ಯಮವಾಗಿರುವುದರಿಂದ ಕನ್ನಡ ಮಾಧ್ಯಮದಲ್ಲಿ ಕಲಿಯುವುದರಿಂದ, ಮಕ್ಕಳ ಭವಿಷ್ಯತ್ ದೃಷ್ಟಿಯಿಂದ ಉಪಯೋಗವಿಲ್ಲದ್ದು ಎಂಬುದೇ ಅಭಿಪ್ರಾಯ. ಕನ್ನಡ ಕಲಿತು, ಸ್ಥಳೀಯ ಕಾಲೇಜುಗಳಲ್ಲಿ ಬಿ.ಎ. ಬಿ.ಎಸ್ಸಿ ಕಲಿಯುವುದರಿಂದ ಏನು ಉಪಯೋಗ ವಿಲ್ಲವೆಂದು ಮಕ್ಕಳು ಡಾಕ್ಟರ್ ಇಂಜಿನಿಯರ್ ಗಳಾಗಬೇಕಾದರೆ ಇಂಗ್ಲೀಷ್ ಮಾಧ್ಯಮ ಅತ್ಯವಶ್ಯಕ ಆದ್ದರಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುವ ಕಾನ್ವೆಂಟ್ ಶಾಲೆಗಳಲ್ಲಿ ಮಕ್ಕಳು ಕಲಿಯುವದು ಪೋಷಕರ ಅಂತಸ್ತನ್ನು ಸಮಾಜದಲ್ಲಿ ಹೆಚ್ಚಿಸುತ್ತದೆ. ಆದ್ದರಿಂದ ಪೋಷಕರು ಈ ಕಾರಣಕ್ಕಾಗಿಯೇ ಕಾನ್ವೆಂಟುಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದಾರೆ. ಕುಂಬಳಹಳ್ಳಿಯಲ್ಲಿರುವ ಸರಕಾರಿ ಶಾಲೆಗಳು ಗುಣಮಟ್ಟದಲ್ಲಿ ಕೆಳ ಮಟ್ಟವನ್ನು ಹೊಂದಿವೆ. ಆದ್ದರಿಂದ ಬಹಳಷ್ಟು ಸ್ಥಿತಿವಂತ ಪೋಷಕರು, ತಮ್ಮ ಮಕ್ಕಳನ್ನು ಹತ್ತಿರ ಹೊಸಕೋಟೆ ಕಾನ್ವೆಂಟುಗಳಿಗೆ ಕಳಿಸುತ್ತಾರೆ, ಈ ಸಮೀಕ್ಷೆ ಮಾಡಿದ ಪ್ರಕಾರ 26 (86%) ಜನ ಸರಕಾರಿ ಶಾಲೆಗಳು ಗುಣಮಟ್ಟದಲ್ಲಿ ಸರಿಯಾಗಿಲ್ಲ ಎಂದು ಹೇಳಿದರು ಉಳಿದ ನಾಲ್ಕು (13.33%) ಜನ ನಾವು ಅನಿವಾರ್ಯವಾಗಿ ಈ ಶಾಲೆಗಳಿಗೆ ಮಕ್ಕಳನ್ನು ಕಳಿಸಬೇಕಾಗಿದೆ. ಎಂದು ಹೇಳಿದರು, ಇಲ್ಲಿನ ಬಹುತೇಕ ಕೂಲಿಗಳು, ಕಡಿಮೆ ಆದಾಯದವರು, ಸರಕಾರಿ ಶಾಲೆಗಳಿಗೆ ತಮ್ಮ ಮಕ್ಕಳಿಗೂ ಕಳಿಸುತ್ತಿದ್ದಾರೆ, ಬಿಸಿಯೂಟ ಕೊಡುವುದರಿಂದ ಮಕ್ಕಳನ್ನು ಸಾಕುವ ಬಾಧೆ ತಪ್ಪಿತು ಎಂದು ಹೇಳುತ್ತಾರೆ, ಯಾಕೆಂದರೆ ಬಹಳಷ್ಟು ಮಕ್ಕಳು ಬಿಸಿಯೂಟ ಕೊಡುವುದರಿಂದ ಶಾಲೆಗಳಿಗೆ ಬರುತ್ತಾರೆ, ಇಲ್ಲದೆ ಹೋಗಿದ್ದರೆ ತಮ್ಮ ಪೋಷಕರಿಗೆ ಸಹಾಯಮಾಡಲು ಕೂಲಿ ಕೆಲಸಕ್ಕೆ ಅಥವಾ ಅವರದೇ ಹೊಲಗಳಲ್ಲಿ ದುಡಿಯುವುದಕ್ಕೆ ಹೋಗುತ್ತಿದ್ದರು. ಬಿಸಿಯೂಟದಿಂದಾಗಿ , ಅನಿಯಮಿತವಾಗಿ ಶಾಲೆಗಳಿಗೆ ಹಾಜರಾಗುತ್ತಿದ್ದ ಮಕ್ಕಳು ಈಗ ನಿಯಮಿತವಾಗಿ ಹಾಜರಾಗುತ್ತಿದ್ದಾರೆ, ಆದ್ದರಿಂದ ಹಳ್ಳಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ನಿಯಮಿತವಾಗಿ ಇರುವುದಿಲ್ಲ ವಿದ್ಯಾರ್ಥಿಗಳು ಬಂದರೆ ಬಂದರೂ ಅಥವಾ ಬಿಟ್ಟರು, ಹಾಗೆಯೇ ಅಧ್ಯಾಪಕರು ಸಹ ವಿದ್ಯಾರ್ಥಿಗಳ ಹಾಜರಾತಿಯ

ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗುತ್ತಿರಲಿಲ್ಲ, ಅಧ್ಯಾಪಕರು ತಮ್ಮದೇ ವ್ಯವಹಾರಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳ ಬಗ್ಗೆ ಆಸ್ಥೆವಹಿಸುತ್ತಿಲ್ಲ. ಇಲ್ಲಿನ ಅಧ್ಯಾಪಕರಿಗೆ ಬಹುತೇಕವಾಗಿ ತಮ್ಮ ಅಧ್ಯಾಪಕೇತರ ವ್ಯವಹಾರಗಳೇ ಜಾಸ್ತಿ, ಹೀಗಿರುವಾಗ ಅವರು ವಿದ್ಯಾರ್ಥಿಗಳಿಗೆ ಕಲಿಸಲು ಸಮಯವೆಲ್ಲಿರುತ್ತದೆ? ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಇಲ್ಲಿನ ಸರಕಾರಿ ಶಾಲೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗದೇ ಇರುವುದು.

ಬೆಳೆ ಸ್ವರೂಪ : ಕುಂಬಳಹಳ್ಳಿಯ 250 ಎಕರೆ ಜಮೀನಿನಲ್ಲಿ ರಾಗಿ 15 ಎಕರೆ, ಗುಲಾಬಿ ಹೂ 100 ಎಕರೆ, ತರಕಾರಿ ಬೆಳೆ 60 ಕರೆ, ಹೂ 30 ಎಕರೆ ಬೆಳೆಯಲಾಗುತ್ತದೆ. ಇಲ್ಲಿನ ಬೆಳೆ ಪದ್ಧತಿಯನ್ನು ಗಮನಿಸಿದರೆ, ರಾಗಿಯನ್ನು ಅತ್ಯಲ್ಪ ಜನರು ಬೆಳೆಯುತ್ತಾರೆ, ಎಂಬುದ ಸ್ಪಷ್ಟವಾಗಿದೆ. ಏಕೆಂದರೆ ರಾಗಿ ಅಧಿಕ ಲಾಭ ತರುವ ಬೆಳೆಯಲ್ಲ ಹಾಗೂ ಇದು ಮಾರುಕಟ್ಟೆಯ ಬೆಲೆಗಳ ಏರಿಳಿತಕ್ಕೊಳಗಾಗುತ್ತದೆ. ಆದ್ದರಿಂದ ಬಹಳಷ್ಟು ರೈತರು ಇದನ್ನು ಬೆಳೆಯುವುದಿಲ್ಲ. ಇದು ಶ್ರಮದಾಯಕ ಬೆಳೆಯ ಹೌದು, ಆದ್ದರಿಂದ ಶ್ರಮ ಹಣ ಹಾಕಿ ಬೆಳೆದರೆ ಲಾಭ ತರದೇ ಹೋದರೆ ಅಂತ ಬೆಳೆಯನ್ನು ಬೆಳೆಯುವುದರಿಂದ ಉಪಯೋಗವೇನು ಎಂಬುದನ್ನು ರೈತರು ಅರಿತುಕೊಂಡಿರಬೇಕು. ಇದು ಮುಖ್ಯವಾಗಿ ಹೂ ಬೆಳೆಯುವ ಹಳ್ಳಿ ಆದ್ದರಿಂದ 100 ಎಕರೆಗಳುಷ್ಟು ಬರಿ ಗುಲಾಬಿ ಹೂವನ್ನೇ ಬೆಳೆಯುತ್ತಾರೆ, ಹೀಗೆ ಅತ್ಯಧಿಕ ಪ್ರಮಾಣದಲ್ಲಿ ಗುಲಾಬಿ ಹೂ ಬೆಳೆಯುತ್ತಿರುವುದು ರಾಜ್ಯದ ಮತ್ತು ರಾಷ್ಟದ ಆಚೆ ಗುಲಾಬಿ ಹೂಗಳಿಗೆ ಬೇಡಿಕೆ ಇರುವುದರಿಂದ, ಒಂದು ಹೂ ಬಂದು 2 ರಿಂದ ರೂ 2.50 ಗಳಿಗೆ ಮಾರಾಟವಾಗುತ್ತದೆ. ಇದು ಒಳ್ಳೆ ಇಳುವರಿಯನ್ನು ಸಹ ಕೊಡುತ್ತದೆ. ಒಂದು ಎಕರೆಗೆ ರೂ. 70,000 ರಿಂದ 80,000ವರಿಗೂ ಲಾಭವನ್ನು ಗಳಿಸಬಹುದು ಆದ್ದರಿಂದ ಅಧಿಕವಾಗಿ ಇಲ್ಲಿ ಭೂಮಿಯನ್ನು ಗುಲಾಬಿ ಹೂ ಬೆಳೆಯಲು ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದ ಗುಲಾಭಿ ಹೂ ಗ್ರಾಮದ ಮುಖ್ಯ ಬೆಳೆ, ಇದು ನಗರೀಕರಣದ ಪ್ರಭಾವವು ಆಗಿರುವುದರಿಂದ ಗುಲಾಬಿ ಹೂ ಬೆಳೆಗೆ ಒಳ್ಳೆ ಮಾರುಕಟ್ಟೆ ಇರುವುದರಿಂದ ಬಹುತೇಕ ರೈತರು ಗುಲಾಬಿ ಹೂ ಬೆಳೆಗೆ ಜೋತು ಬಿದ್ದಿದ್ದಾರೆ, ಆದ್ದರಿಂದ ಈ ಗ್ರಾಮದ ಮುಖ್ಯ ಬೆಳೆಯಾದ ಗುಲಾಬಿ ಹೂ ಬಗ್ಗೆ ಅಂತಹ ವಿವರವಾಗಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಈ ಬೆಳೆ ಈ ಹಳ್ಳಿಯ ಅಧ್ಯಯನಕ್ಕೆ ವಿಶಿಷ್ಟತೆಯನ್ನು ತಂದಿದೆ.

ತರಕಾರಿ ಬೆಳೆಗಳು ಹಾಗೂ ದ್ರಾಕ್ಷಿ ಬೆಳೆಗಳನ್ನು ಗಮನಾರ್ಹ ಪ್ರಮಾಣದಲ್ಲಿ ಕುಂಬಳಹಳ್ಳಿಯ ವ್ಯವಸಾಯ ಮಾಡಲಾಗುತ್ತಿದೆ. ತರಕಾರಿ ಮತ್ತು ದ್ರಾಕ್ಷಿ ಬೆಳೆ ಬೆಳೆಯಲು, ಇವು ಅಧಿಕ ಬಂಡವಾಳ ಹಾಗೂ ಅಧಿಕ ನೀರನ್ನು ಉಪಯೋಗಿಸಬೇಕಾದಂತಹ ಬೆಳೆಗಳು, ಹಾಗೆ ಅಧಿಕ ಇಳುವರಿ ಮತ್ತು

ಆದಾಯವನ್ನು ತರುವಂತಹ ಬೆಳೆಗಳು, ಈಬೆಳೆಗಳು ಕುಂಬಳಹಳ್ಳಿ ಹೂವಿನ ಬೆಳೆಯ ನಂತರದ ಬೆಳೆಗಳು ಇಲ್ಲಿ ಅಧಿಕ ಬಂಡವಾಳವಿರುವ ಹಾಗೂ ಕೊಳವೆ ಬಾವಿಗಳ ನೀರಾವರಿಯನ್ನು ಹೊಂದಿರುವ ರೈತರು ಹೊಂದಿರುವ ಬೆಳೆಗಳು, ದ್ರಾಕ್ಷಿಯನ್ನು ಬೆಳೆಯಬೇಕಾದರೆ 1 ಎಕರೆಗೆ ರೂ. 1.25 ಲಕ್ಷ ಬೇಕಾಗಿದೆ. ಇದಕ್ಕೆ ನೀರಾವರಿಯ ಅವಶ್ಯಕತೆ ಇದೆ, ಪಕ್ಕದ ದೊಡ್ಡಬಳ್ಳಾಪುರದಲ್ಲಿ ಒಬ್ಬೊಬ್ಬ ರೈತರು 100 ರಿಂದ 150 ಹೆಕ್ಟೇರ್ ದ್ರಾಕ್ಷಿ ತೋಟವನ್ನು ಬೆಳೆಸಿ ಅದನ್ನು ವೈನ್ ಮಾಡಿ ವಿದೇಶಗಳಿಗೆ ರಫ್ತು ಮಾಡುವ ಮಾದರಿಗಳು ಇವೆ, ಆದರೆ ಇಲ್ಲಿನ ರೈತರು ಇದನ್ನು ತಿನ್ನುವುದಕ್ಕೆ ಬಳಸುವ ತಳಿಗಳನ್ನು ಬೆಳೆಯುತ್ತಾರೆ, ಇದಕ್ಕೆ ಮಾರುಕಟ್ಟೆ ಬೆಂಗಳೂರು ಮುಂಬೈ, ಚನ್ನೈ, ಕಲ್ಕತ್ತಾ ಮುಂತಾದ ಕಡೆ ಸಿಗುತ್ತದೆ, ಇಲ್ಲಿ ಕೊಳ್ಳುವ ಸಗಟು ವ್ಯಾಪಾರಿಗಳು ದ್ರಾಕ್ಷಿ ತೋಟಗಳಿಗೆ ಭೇಟಿ ನೀಡಿ, ದ್ರಾಕ್ಷಿ ಬೆಳೆಯ ಗುಣಮಟ್ಟವನ್ನು ಕಂಡು ಅದನ್ನು ಕೊಳ್ಳುತ್ತಾರೆ, ಕೊಂಡ ಬೆಳೆಯನ್ನು ಕತ್ತರಿಸಿ ಅವನ್ನು ಪ್ಯಾಕ್ ಮಾಡಿ ಮುಂಬೈ, ಚನ್ನೈ ಕೊಲ್ಕತ್ತ ಮುಂತಾದ ಕಡೆ ಕಳಿಸಿಕೊಡುತ್ತಾರೆ, ಆದ್ದರಿಂದ ರೈತರಿಗೆ ತೋಟದ ಮಟ್ಟದಲ್ಲಿ ಕೆ.ಜಿ.ಗೆ ರೂ. 10 ರಿಂದ 15 ರೂ. ಸಿಗುತ್ತದೆ. ಇದು ಒಂದು ಎಕರೆಗೆ 1 ಟನ್ ಗಳಷ್ಟು ದ್ರಾಕ್ಷಿಯನ್ನು ಸಿಗುತ್ತದೆ, ಆದ್ದರಿಂದ ದ್ರಾಕ್ಷಿಯನ್ನು 1 ಎಕರೆ ಅಥವಾ ಎರಡು ಎಕರೆ ಬೆಳೆಯುವುದರಿಂದ ಅಧಿಕ ಲಾಭ ಪಡೆಯಬಹುದು. ಇದು ಒಮ್ಮೆ ಬೆಳೆದರೆ 25 ವರ್ಷಗಳ ವರೆಗೂ ದ್ರಾಕ್ಷಿ ತೋಟ ದಲ್ಲಿ ಫಲ ಪಡೆಯಬಹುದು ಹೊಸಕೋಟೆ ತಾಲ್ಲೂಕಿನ ಕುಂಬಳ ಹಳ್ಳಿ ಗ್ರಾಮದಲ್ಲಿ ಎಲ್ಲಾ 30 ಎಕರೆ ಹಳೆ ತೋಟಗಳೇ ಇವೆ. ಈ ತೋಟಗಳು 10-12 ವರ್ಷ ವಯಸ್ಸಾಗಿದೆ ಆದ್ದರಿಂದ ಇಳುವರಿ ಸಹ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿದೆ.

ದಿನಸಿ ಅಂಗಡಿಗಳು:

ಒಂದು ನ್ಯಾಯಬೆಲೆ ಅಂಗಡಿ ಇದೆ, 3 ದಿನಸಿ ಅಂಗಡಿಗಳಿವೆ ನ್ಯಾಯ ಬೆಲೆ ಅಂಗಡಿ ಬಡತನದ ರೇಖೆಗಿಂತ ಕೆಳಗಿನವರ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ, ಎಂಬುದೇ ರೈತರ ಅಭಿಪ್ರಾಯ, ಆದೆರ ಕೆಲವು ರೈತರು ನ್ಯಾಯ ಬೆಲೆ ಅಂಗಡಿ ನಿಯಮಿತವಾಗಿ ತೆರೆಯುತ್ತದೆ ಹಾಗೂ ಪಡಿತರವನ್ನು ನಿಯಮಿತವಾಗಿ ನೀಡುತ್ತಾನೆ, ಎಂದು ಅಭಿಪ್ರಾಯ ಪಡುತ್ತಾರೆ. ನಾನು ಸಮೀಕ್ಷೆ ಮಾಡಿದ 30 ಜನರಲ್ಲಿ 18 (60%) ಜನರು ನ್ಯಾಯಬೆಲೆ ಅಂಗಡಿಯ ಬಗ್ಗೆ ಅಂತಹ ಒಳ್ಳೆ ಅಭಿಪ್ರಾಯವನ್ನೇನು ಹೇಳುವುದಿಲ್ಲ ಇನ್ನೂ 12 (40%) ಜನ ರೈತರು ನ್ಯಾಯಬೆಲೆ ಅಂಗಡಿ ನಿಯಮಿತವಾಗಿ ತೆಗೆಯುತ್ತಾನೆ, ಹಾಗೂ ಪಡಿತರ ನೀಡುತ್ತಾನೆ ಎಂದು ಹೇಳುತ್ತಾರೆ. ಆದರೆಬಹುತೇಕ ರೈತರು ನ್ಯಾಯಬೆಲೆ ಅಂಗಡಿಯ ಬಗ್ಗೆ ದೂರು ಗಳನ್ನು ಹೇಳಿದರು ಸಕ್ಕರೆ, ಸೀಮೆಎಣ್ಣೆಯನ್ನು ನಿಗದಿಪಡಿಸಿರುವ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀಡುತ್ತಾನೆ ಎಂದು ಹಾಗೂ ತಿಂಗಳಿಗೆ ಎರಡು ಬಾರಿ ಮಾತ್ರ ಅಂಗಡಿಯನ್ನು ತೆರೆಯಲಾಗುತ್ತದೆಂದು ದೂರುಗಳಿವೆ ಆದರೆ ನ್ಯಾಯಬೆಲೆ ಅಂಗಡಿ ಗ್ರಾಮಸ್ಥರ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸೋತಿದೆ, ಎಂಬುದು ಅಲ್ಲಿನ ಸಮೀಕ್ಷೆಯ ಪ್ರಕಾರ ಕಂಡು ಬಂದ ಅಂಶ. ಆದರೆ ಇಲ್ಲಿ ಗ್ರಾಮಸ್ಥರು ಅದರಲ್ಲೂ

ಬಡತನ ರೇಖೆಗಿಂತ ಕೆಳಗಿನವರ ಕಷ್ಟ ಹೇಳಲಸಾಧ್ಯವಾದದ್ದು ಯಾಕೆಂದರೆ, ಅವರು ತಮ್ಮ ಜೀವನೋಪಾಯಕ್ಕೆ ನಿಯಂತ್ರಿತ ಬೆಲೆಯಲ್ಲಿ ನೀಡುವ ಪಡಿತರದ ಮೇಲೆ ಅವಲಂಬಿತರಾಗಿರುತ್ತಾರೆ, ಇಂತಹವರಿಗೆ ಸರಿಯಾಗಿ ಪಡಿತರ ನೀಡದಿದ್ದರೆ ಹಸಿರು ಕಾರ್ಡುಗಳ ಮೌಲ್ಯವಾದರೂ ಏನಾಗಬೇಕು? ಸರಕಾರ ಗ್ರಾಮೀಣ ಬಡಜನರಿಗೆ ಆಹಾರ ಭದ್ರತೆ ಸೃಷ್ಟಿಸುವ ಸಲುವಾಗಿ, ಈ ನ್ಯಾಯಾಬೆಲೆ ಅಂಗಡಿಯ ಪರಿಕಲ್ಪನೆಯನ್ನು ಪರಿಚಯಿಸಿದ್ದಾರೆ, ಆದರೆ ಈ ಪರಿಕಲ್ಪನೆಯೇ ಇಂದು ಉಲ್ಟಾಪಲ್ಟಾ ಹೊಡೆದಿದೆ. ಇಲ್ಲಿ ಪಡಿತರ ಯಾರಿಗೆ ನೀಡಬೇಕೋ ಅವರಿಗೆ ಸರಿಯಾಗಿ ನೀಡದೆ ಶ್ರೀಮಂತರಿಗೂ ಸಹ ಪಡಿತರವನ್ನು ನೀಡಲಾಗುತ್ತಿದೆ ಎಂಬ ಆರೋಪ, ಆದ್ದರಿಂದ ನ್ಯಾಯಬೆಲೆಯ ಅಂಗಡಿಯಿಂದ ಗ್ರಾಮದ ಬಡ ಜನರಿಗೆ ಅಂತಹ ಉಪಯೋಗವೇನು ಇಲ್ಲ ಎಂಬುದೇ ಗ್ರಾಮಸ್ಥರ ಅಭಿಪ್ರಾಯ. ಈ ಗ್ರಾಮದಲ್ಲಿ 3 ದಿನಸಿ ಅಂಗಡಿಗಳು ಇದ್ದರೂ, ಬಹುತೇಕ ಗ್ರಾಮಸ್ಥರು ಈ ದಿನಸಿ ಅಂಗಡಿಗಳಲ್ಲಿ ಕೊಳ್ಳೋದಿಲ್ಲ ನಾನು ಸಮೀಕ್ಷೆ ಮಾಡಿದ ಪ್ರಕಾರ 26 (86%) ಜನ ಹೊಸಕೋಟೆಯಿಂದ ದಿನಸಿ ಕೊಳ್ಳುತ್ತಾರೆ ಉಳಿದ ನಾಲ್ಕು (13.3%) ಜನ, ಕುಂಬಳಹಳ್ಳಿಯಲ್ಲೆ ದಿನಸಿಕೊಳ್ಳುತ್ತಾರೆ. ಹೊಸಕೋಟೆಯಿಂದ ದಿನಸಿಕೊಳ್ಳುವರು ಸುಸಜ್ಜಿತ ಮನೆಗಳಲ್ಲಿ ಇರುವವರು ಹಾಗೂ ಶ್ರೀಮಂತ ರೈತರು ಇದರ ಜೊತೆಗೆ ಮಧ್ಯಮ ಆದಾಯದ ರೈತರು ಸಹ ಹೊಸಕೋಟೆಯಿಂದ ದಿನಸಿ ಕೊಳ್ಳುತ್ತಾರೆ. ಏಕೆಂದರೆ ಇಲ್ಲಿನ ದಿನಸಿ ಅಂಗಡಿಗಳು ವ್ಯವಸ್ಥಿತವಾಗಿ ಕೊಳ್ಳುಗರಿಗೆ ಆಯ್ಕೆ ಇರುವಂತೆ ಪದಾರ್ಥಗಳನ್ನು ಇಟ್ಟಿರುವುದಿಲ್ಲ ಹಾಗೂ ಇವು ಕಳಪೆ ಗುಣಮಟ್ಟದ ಪದಾರ್ಥಗಳನ್ನು ಇಟ್ಟಿರುತ್ತಾರೆ. ಆದ್ದರಿಂದ ಬಹಳಷ್ಟು ಗ್ರಾಮಸ್ಥರು ಹೊಸಕೋಟೆಯಿಂದ ದಿನಸಿ ಪದಾರ್ಥಗಳನ್ನು ತರುತ್ತಾರೆ, ಈ ದಿನಸಿ ಪದಾರ್ಥಗಳು ಗುಣಮಟ್ಟದಲ್ಲಿ ಚೆನ್ನಾಗಿರುತ್ತವೆ. ಆದರೆ ಇಲ್ಲಿ ನಗದು ಕೊಟ್ಟು ತರುವವರೆ ಜಾಸ್ತಿ ಸಾಲ ತರುವವರು ಇದ್ದರು ಅತಿ ಕಡಿಮೆ ಪ್ರಮಾಣದಲ್ಲಿದ್ದಾರೆ, ಆದ್ದರಿಂದ ಕುಂಬಳ ಹಳ್ಳಿಯಲ್ಲಿರುವ ದಿನಸಿ ಅಂಗಡಿಗಳಿಗೆ, ಅಂತಹ ವ್ಯಾಪಾರವೇನು ಆಗುವುದಿಲ್ಲ. ಇಲ್ಲಿ ಕೊಳ್ಳುವವರ ಸಂಖ್ಯೆ ಬಹಳ ಕಡಿಮೆ ಇದೆ, ಆದರೆ ಇಲ್ಲಿ ಕೊಳ್ಳುವವರೆಲ್ಲರೂ ಸಾಲ ಕೊಟ್ಟು ಪದಾರ್ಥಗಳನ್ನು ಕೊಳ್ಳುತ್ತಾರೆ, ಹೀಗೆ ಸಾಲಾ ಪಡೆದು ಪದಾರ್ಥಗಳನ್ನು ಕೊಳ್ಳುವುದರಿಂದ ಅಂಗಡಿಗಳ ಮಾಲೀಕರು ಕಳಪೆ ಗುಣಮಟ್ಟದ ಪದಾರ್ಥಗಳನ್ನು ಕೊಡುತ್ತಾರೆ, ಆದರೆ ಇವರಿಗೆ ಸಾಲ ಸಿಗುವುದರಿಂದ ಈ ಪದಾರ್ಥಗಳನ್ನು ಕೊಳ್ಳುವವರು ಹೆಚ್ಚಿಗೆ ತಲೆ ಕೆಡಿಸಿ ಕೊಳ್ಳುವುದಿಲ್ಲ. ಆದ್ದರಿಂದ ದಿನಸಿ ಅಂಗಡಿಗಳ ವ್ಯಾಪಾರ ಕುಂಬಳ ಹಳ್ಳಿಯಲ್ಲಿ ಕಡಿಮೆ ಪ್ರಮಾಣದಲ್ಲಿ ನಡೆಯುತ್ತದೆ. ಆದರೆ ಇಲ್ಲಿನ ಅಂಗಡಿಗಳವರೆಗೂ ಇಲ್ಲಿ ವ್ಯಾಪಾರ ಹೆಚ್ಚಿಸಿಕೊಳ್ಳಬೇಕೆಂಬ ಹಂಬಲವಿಲ್ಲ ಆದ್ದರಿಂದ ಇವು ಕೆಳವರ್ಗಗಳ ಗ್ರಾಹಕರಿಗಷ್ಟೆ ಸೀಮಿತಗೊಂಡ ಅಂಗಡಿಗಳಾಗಿವೆ . ಆದರೆ ಹೊಸ ಕೋಟೆಯಲ್ಲಿರುವ ದಿನಸಿ ಅಂಗಡಿಗಳು ಉನ್ನತ ವರ್ಗದ ಗ್ರಾಹಕರಿಂದ ಹಿಡಿದು ಕೆಳ ವರ್ಗದ ಗ್ರಾಹಕವರೆಗೂ ತಮ್ಮ ಉತ್ಪನ್ನಗಳನ್ನು ಸರಬರಾಜು ಮಾಡುತ್ತಾರೆ, ಆದ್ದರಿಂದ ಈ ಹಳ್ಳಿ ಎಲ್ಲ ದೃಷ್ಟಿಯಿಂದಲೂ ಅಭಿವೃದ್ಧಿ ಹೊಂದಿ ಒಳ್ಳೆ ಆದಾಯ ಬರುವಂತಹ ವರ್ಗವಿದ್ದರೂ ಸುಸಜ್ಜಿತ ದಿನಸಿ ಅಂಗಡಿಗಳು ಈ ಹಳ್ಳಿಯಲ್ಲಿ

ತಲೆಯೆತ್ತದೆ ಇರುವುದು ಹೊಸಕೋಟೆ ಹಾಗೂ ಬೆಂಗಳೂರು ಹತ್ತಿರವಿರುವುದರಿಂದ ಬಟ್ಟೆ ಅಂಗಡಿಗಳು ಸಹ ಈ ಹಳ್ಳಿಯಲ್ಲಿ ಇಲ್ಲ ಈ ಹಳ್ಳಿಯ ಗ್ರಾಮಸ್ಥರು ಹೊಸಕೋಟೆ ಅಥವಾ ಬೆಂಗಳೂರಿಗೆ ಹೋಗಿ ಬಟ್ಟೆ ಕೊಳ್ಳುತ್ತಾರೆ.

ನೀರಾವರಿ ಮೂಲಗಳು:

ಕುಂಬಳಹಳ್ಳಿಯಲ್ಲಿ 150 (33%) ಕಲ್ಲಿನ ಬಾವಿಗಳಿವೆ 300(66%) ಕೊಳವೆಬಾವಿಗಳಿವೆ ಕೆರೆ ಇಲ್ಲ 2 ಕುಂಟೆಗಳಿವೆ, ಇದು ನಾನು ಈಗಾಗಲೆ ತಿಳಿಸಿರುವಂತೆ ಹೂವಿನ ಬೆಳೆ, ತರಕಾರಿ ಬೆಳೆ ದ್ರಾಕ್ಷಿ ಬೆಳೆ ಬೆಳೆಯುವುದರಿಂದಾಗಿ ಕೊಳವೆ ಬಾವಿಗಳ ಸಂಖ್ಯೆ 300 ನ್ನು ತಲುಪಿದೆ. 150 ಕಲ್ಲಿನ ಬಾವಿಗಳಲ್ಲಿ ಬಹುತೇಕ ಬಾವಿಗಳು ಬತ್ತಿ ಹೋಗಿವೆ. ಹೀಗೆ ಬತ್ತಿ ಹೋಗಲು ಕಾರಣವೇನಂದರೆ ಮಳೆಯು ವರ್ಷ ವರ್ಷವೂ ಸರಿಯಾಗಿ ಆಗದೆ ಇರುವುದು ವರ್ಷವರ್ಷಕ್ಕೆ ಮಳೆ ಬಿದ್ದಿದ್ದರೆ ಬಹುತೇಕ ಕಲ್ಲಿನ ಬಾವಿಗಳು ಬತ್ತಿ ಹೋಗುವ ಸಂದರ್ಭವೇ ಸೃಷ್ಟಿಯಾಗುತ್ತಿರಲಿಲ್ಲ, ಆದರೆ ಎರಡನೇ ಅಂಶವೆಂದರೆ ತೀವ್ರ ಗತಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸುತ್ತಿರುವುದು ಅಂತರ್ಜಲ ಕುಸಿಯಲು ಕಾರಣವಾಗಿದೆ. ಹಾಗೂ ಇರುವ ಎರಡು ಕುಂಟೆಗಳ ಅಂತರ್ಜಲ ಕುಸಿದು ಒಣಗಿ ಹೋಗಿವೆ. ಎರಡು ಮೂರು ಎಕರೆ ಹೊಂದಿರುವ ರೈತ 3 ಕೊಳವೆ ಬಾವಿಗಳನ್ನು ಕೊರೆಸಿ ಹೂವಿನ ಹಾಗೂ ತರಕಾರಿ ಬೆಳೆಗಳನ್ನು ವರ್ಷ ಪೂರ್ತಿ ಬೆಳೆಯುತ್ತಾನೆ, ಹಾಗೂ ಅಧಿಕ ಲಾಭವನ್ನು ಪಡೆಯುತ್ತಾನೆ, ಆದರೆ ಈ ಕೊಳವೆ ಬಾವಿಗಳನ್ನು 800 ರಿಂದ 1000 ಅಡಿಗಳಿಗೆ ಕೊರೆಸಿದರೆಯೇ ನೀರು ಸಿಗುವುದು ಈಗಾಗಲೆ ಈ ಗ್ರಾಮದಲ್ಲಿ ಅಂತರ್ಜಲ ಮಟ್ಟ ಕುಸಿದು ಇದು ಮುಂದಿನವರ್ಷಗಳಲ್ಲಿ ನೀರಿನ ಅಭಾವ ತೀವ್ರ ಗತಿಯಲ್ಲಿ ಪ್ರಕ್ರಿಯೆ ನಡೆಯುವ ವಿದ್ಯಮಾನಗಳು ಸ್ಪಷ್ಟವಾಗಿ ಕಂಡುಬರುತ್ತದೆ. ಕುಂಬಳ ಹಳ್ಳಿಯಲ್ಲಿ ಅಂತರ್ಜಲ ಕುಸಿಯದಂತೆ ನೋಡಿಕೊಳ್ಳುವ ಯಾವ ಕಾರ್ಯಕ್ರಮಗಳನ್ನು, ಕೃಷಿ ಇಲಾಖೆಯಾಗಲಿ, ತೋಟಗಾರಿಕೆ ಇಲಾಖೆಯಾಗಲಿ, ಹಾಕಿಕೊಂಡಿಲ್ಲ ನಾನು ಸಮೀಕ್ಷೆ ಮಾಡಿದ ಪ್ರಕಾರ 28 (93%) ಜನ ಕೊಳವೆ ಬಾವಿಗಳನ್ನು ಹೊಂದಿದ್ದಾರೆ ಹಾಗೂ ಇನ್ನೂ ಹೆಚ್ಚಿನ ಜನ ಕೊಳವೆ ಬಾವಿಗಳನ್ನು ಹೊಂದಲು ಕಾತರರಾಗಿದ್ದಾರೆ ಇನ್ನೂ ಇಬ್ಬರು (6.6%) ಮಾತ್ರ ಕೊಳವೆ ಬಾವಿಗಳನ್ನು ಹೊಂದಲು ಆಸಕ್ತಿ ತೋರಿಸಲಿಲ್ಲ ಯಾಕೆಂದರೆ ಇವರು ಹೆಚ್ಚಾಗಿ ಒಣಬೇಸಾಯದ ಬೆಳೆಗಳನ್ನು ಬೆಳೆಯುವವರು ಹಾಗೂ ಕೊಳವೆ ಬಾವಿಗಳಲ್ಲಿ ನೀರು ಸಿಗದಿದ್ದರೆ ಆ ನಷ್ಟವನ್ನು ಭರಿಸಲು ಕಷ್ಟಕರವಾಗುವುದರಿಂದ, ಇಬ್ಬರು ರೈತರು ಮಾತ್ರ ಕೊಳವೆ ಬಾವಿಗಳನ್ನು ಹೊಂದಲು ನಿರಾಸಕ್ತಿ ತೋರಿಸಿದ್ದಾರೆ. ಆದರೆ ಕೊಳವೆ ಬಾವಿಗಳು ಹೊಂದುವುದರಿಂದ ಹೆಚ್ಚು ಲಾಭದಾಯಕ ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದು ಹೀಗೆ ಲಾಭದಾಯಕ ವಾಣಿಜ್ಯ ಬೆಳೆಗಳು ರೈತರಿಗೆ ಅಧಿಕ ಲಾಭವನ್ನು ತರುತ್ತದೆ. ಈ ತರಹದ ಕ್ರಿಯೆಯಿಂದಾಗಿ ಬಹಳಷ್ಟು ರೈತರು ಕೊಳವೆಬಾವಿಗಳನ್ನು ಹೊಂದಿದ್ದಾರೆ, ಹಾಗೂ ಹೊಂದಲು ಉತ್ಸುಕರಾಗಿದ್ದಾರೆ. ಆದರೆ ಇದೇ ಪ್ರಮಾಣದಲ್ಲಿ ಕುಂಬಳ ಹಳ್ಳಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು

ಪ್ರಾರಂಭಿಸಿದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಪರದಾಡಬೇಕಾದಂತಹ ಸ್ಥಿತಿ ನಿರ್ಮಾಣವಾಗಬಹುದು. ಯಾಕೆಂದರೆ ಈಗಾಗಲೆ ಅಂತರ್ಜಲ ಮಟ್ಟ ಕುಸಿದು ಕೆಲವು ಕೊಳವೆ ಬಾವಿಗಳು ವಾರಗಟ್ಟಲೆ ಉಪಯೋಗಿಸಿದ ಮರು ಒರತೆ ಬರುವವರೆಗೂ (Recharge) ಈ ಬಾವಿಗಳನ್ನು ಹಾಗೆ ಬಿಟ್ಟಿರುತ್ತಾರೆ. ಮರು ಒರತೆ ಬಂದ ಮೇಲೆ ಬೆಳೆಗಳಿಗೆ ಉಪಯೋಗಿಸುತ್ತಾರೆ. ಇದು ಎಲ್ಲ ಹಳ್ಳಿಗಳ ಸಾಮಾನ್ಯ ದೃಶ್ಯಾವಳಿ ಆದ್ದರಿಂದ ಈ ಹಳ್ಳಿಯಲ್ಲಿ ಕಲ್ಲಿನ ಬಾವಿಗಳಂತು ಈಗ ನಿರುಪಯುಕ್ತವಾಗಿವೆ, ಆದರೆ ಕೊಳವೆ ಬಾವಿಗಳು ನಿರುಪಯುಕ್ತವಾಗುವ ಕಾಲ ಬರುವುದರಲ್ಲಿ ಸಂದೇಹವಿಲ್ಲ. ಆಗ ಕುಡಿಯುವ ನೀರಿಗೂ ಪರದಾಡಬೇಕಾಗುತ್ತದೆ.

ಮೂರು ಸಾರಾಯಿ ಅಂಗಡಿಗಳು ಕುಂಬಳ ಹಳ್ಳಿಯಲ್ಲಿದೆ, ಒಂದು ಸಾರಾಯಿ ಅಂಗಡಿಗೆ 1 ದಿನಕ್ಕೆ ಕನಿಷ್ಟ ಪಕ್ಷ 100 ಜನ ಹೋಗುತ್ತಾರೆ, ಒಂದು ಅಂಗಡಿಯಲ್ಲಿ 300 ಪ್ಯಾಕೆಟ್ (100 ಎಂ.ಎಲ್) ಖರ್ಚಾಗುತ್ತದೆ, ಇನ್ನೊಂದು ಅಂಗಡಿಯಲ್ಲಿ 400 ಪ್ಯಾಕೆಟ್ಸ್ ಮತ್ತೊಂದು ಅಂಗಡಿಯಲ್ಲಿ 300 ಪ್ಯಾಕೆಟ್ಸ ಸಾರಾಯಿ ಖರ್ಚಾಗುತ್ತದೆ. ಸಾರಾಯಿ ಅಂಗಡಿಗಳಿಗೆ ಹೋಗುವ ಬರುವ ಸಂಖ್ಯೆ ಗಣನೀಯವಾಗಿದೆ, ಇಲ್ಲಿ ದಿನಂಪ್ರತಿ ಸರಾಸರಿ 300 ಜನ ಸಾರಾಯಿ ಅಂಗಡಿಗೆ ಹೋಗುತ್ತಾರೆ, ಇವರಿಗೆ ಬಹುತೇಕರು ಕೂಲಿಗಳು ಕೆಳವರ್ಗದವರ ಸಂಖ್ಯೆಯೇ ಜಾಸ್ತಿ, ಇಲ್ಲಿನ ವಹಿವಾಟು ಕನಿಷ್ಟ ಪಕ್ಷ 1000 ರೂ ಗಳವರೆಗೂ ಪ್ರತಿ ದಿನ ನಡೆಯುತ್ತದೆ. ಸರಕಾರಕ್ಕೆ ಇದ್ದರಿಂದಲೆ ಹೆಚ್ಚು ಆದಾಯವಿರುವುದು ಎಂಬುದೆ ಎಲ್ಲರು ಸಾಮಾನ್ಯವಾಗಿ ನಂಬಿರುವುದು. ಇದು ನಂಬಿಕೆಯಲ್ಲ ವಸ್ತು ಸ್ಥಿತಿಯೂ ಹೌದು., ಈರಪ್ಪ ಎಂಬ ಕೂಲಿಯ ಪ್ರಕಾರ ಈತ ದಿನಕ್ಕೆ 75 - 80 ರೂಗಳನ್ನು ಸಂಪಾದನೆ ಮಾಡುತ್ತಾನೆ ಇದರಲ್ಲಿ ರೂ. 30-40 ಗಳವರೆಗೆ ದಿನಂಪ್ರತಿ ಸಾರಾಯಿಗೆ ಖರ್ಚು ಮಾಡುತ್ತೇವೆ. ಆದರೆ ಈತ ದುಡ್ಡಿಲ್ಲದ ಸಂದರ್ಭದಲ್ಲಿ ಸಾಲ ಹೇಳಿ ಇಲ್ಲಿ ಸಾರಾಯಿ ಕುಡಿದು ಬರುತ್ತಾನೆ. ಒಮ್ಮೊಮ್ಮೆ ಹೊಸಕೋಟೆಯಲ್ಲಿರುವ ಬಾರ್ ಗಳಿಗೆ ಹೋಗಿ ಕಡಿಮೆ ದರ್ಜೆಯ ವಿಸ್ಕಿಯನ್ನು ಕುಡಿಯುವುದಾಗಿ ಹೇಳಿದ, ಆದರೆ ಕುಡಿತ ತನಗೆ ತನ್ನ ಶ್ರಮದಾಯಕ ಬದುಕಿಗೆ ಶಮನಕಾರಿಯಾದದ್ದು ಎಂಬುದೇ ಈತನ ಅನಿಸಿಕೆ ಈತ ಒಂದು ದಿವಸವೂ ಗಡಂಗಿಗೆ ಹೋಗದೆ ಇರಲಾರ ಒಂದು ಹಳ್ಳಿಯಲ್ಲಿ ಪ್ರತಿದಿನ 1000 ಪ್ಯಾಕ್ ಸಾರಾಯಿ ಖರ್ಚಾಗಬೇಕಾದರೆ ಕರ್ನಾಟಕದಲ್ಲಿ ಈ ಸಾರಾಯಿ ಲಾಭದ ವಹಿವಾಟು ಎಷ್ಟು ಎಂಬುದು ಊಹಿಸಿಕೊಳ್ಳಲು ಸಾಧ್ಯವೆ ? ಇದನ್ನು ಊಹಿಸಿಕೊಂಡರೆ ಎಷ್ಟು ಲಕ್ಷ ಲೀಟರ್ ಸಾರಾಯಿ ಪ್ರತಿದಿನ ಖರ್ಚಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಸಾರಾಯಿ ನಿಷೇಧವೇನಾದರೂ ತಂದರೆ ಪರ್ಯಾಯ ಕಳ್ಳಭಟ್ಟಿ ತಲೆ ಎತ್ತುವುದರಲ್ಲಿ ಸಂಶಯವಿಲ್ಲ, ಆದ್ದರಿಂದ ಸಾರಾಯಿ, ಗ್ರಾಮಗಳಲ್ಲಿ ಎಷ್ಟೋ ಕುಟುಂಬಗಳನ್ನು ನಾಶ ಮಾಡುತ್ತಿದ್ದರು, ಇದರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗಬೇಕಾದ ಸಂದರ್ಭಗಳೇ ಹೆಚ್ಚಾಗಿ ಕಂಡುಬರುತ್ತದೆ., ಇದು ಸ್ಪಷ್ಟವಾಗಿ

ನಾವು ಗುರುತಿಸಿದ್ದೇವೆ, ಆದ್ದರಿಂದ ಸಾರಾಯಿ ನಿಷೇದ ಕೇವಲ ಪರ್ಯಾಯ ಅಕ್ರಮ ಸಾರಾಯಿ ಅಂಗಡಿಗಳು ಹುಟ್ಟಲು ಕಾರಣವಾಗುತ್ತದೆ. ಇದನ್ನು ಸ್ಪಷ್ಟವಾಗಿ ಗಮನಿಸಿದ ನಾವು ಈ ಸಾರಾಯಿ ನಿಷೇದದ ನೀತಿಗಳು ಅನೇಕ ಬಾರಿ ವೈಫಲ್ಯಕ್ಕೊಳಗಾಗಿವೆ.

ಹೈನುಗಾರಿಕೆ:

ಇಲ್ಲಿ ರಾಸುಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲೆ ಇದೆ, 150 (23 %) ಕ್ಕಿಂತ ಹೆಚ್ಚು ಹಾಲು ಕೊಡುವ ಹಸುಗಳ ಸಂಖ್ಯೆ ಇದೆ, ಇವುಗಳಿಗೆ ನೆರೆ ಹಳ್ಳಿಗಳಿಂದ ಹುಲ್ಲು ಹಾಗೂ ಹಸುರು ಮೇವನ್ನು ಹಾಗೂ ತಾವೇ ಬೆಳೆದ ತರಕಾರಿ ಹೂವಿನ ತ್ಯಾಜ್ಯಗಳನ್ನು ಉಪಯೋಗಿಸುತ್ತಾರೆ. ಇಲ್ಲಿ 4 ಸ್ವಸಹಾಯ ಸಂಘಗಳಿವೆ ಈ ಸ್ವಸಹಾಯ ಸಂಘಗಳಿಗೆ ತಲಾ 20 ಜನ ಸದಸ್ಯರಿದ್ದಾರೆ, ಬಹುತೇಕ ಸ್ವಸಸಾಹ ಸಂಘಗಳ ಸದಸ್ಯರು ಹೈನೂಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಯಾಕೆಂದರೆ ಹೈನುಗಾರಿಕೆ ಲಾಭದಾಯಕವಾಗಿದೆ. ಎಂಬುದೇ ಇಲ್ಲಿನ ರೈತರ ಅನಿಸಿಕೆ, ಈ ಹೈನುಗಾರಿಕೆಲ್ಲಿ 2-3 ಹಸುಗಳಿಂದ ಹಿಡಿದು 10-12 ಹಸುಗಳನ್ನು ಹೊಂದಿರುವವರು ಇದ್ದಾರೆ, ಇಲ್ಲಿ ಬಹುತೇಕ ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವವರು ಸಣ್ಣರೈತರು ಇವರಿಗೆ ಸಣ್ಣ ಪ್ರಮಾಣದ ಸಾಲವನ್ನು ಹೊಸಕೋಟೆಯಲ್ಲಿರುವ ಎಸ್.ಬಿ.ಐ. ಬ್ಯಾಂಕ್ ನೀಡುತ್ತದೆ. 10-15 ಸಾವಿರ ರೂಪಾಯಿಗಳನ್ನು ಸಾಲ ಪಡೆದ ಈ ರೈತರು ಇದನ್ನು ಹೈನೋದ್ಯಾಯದಲ್ಲಿ ತೊಡಗಿಸಿಕೊಂಡಿದ್ದಾರೆ, ಹೈನೋದ್ಯಮ ಇಲ್ಲಿ ಲಾಭದಾಯಕವಾಗಿರುವುದು ಸ್ಥಳೀಯವಾಗಿಯೇ ಹಾಲು ಉತ್ಪಾದಕರ ಸಂಘವಿರುವುದರಿಂದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 90 ಜನ ಸದಸ್ಯರಿದ್ದಾರೆ, ದಿನಕ್ಕೆ 600 ರಿಂದ 700ಲೀಟರ್ ವರೆಗೂ ಹಾಲು ಸಂಗ್ರಹವಾಗುತ್ತದೆ. ತಿಂಗಳಿಗೆ ಒಂದು ಲಕ್ಷ ರೂಪಾಯಿ ವಹಿವಾಟು ಇರುತ್ತದೆ ಎಂಬುದೆ ಹಾಲು ಉತ್ಪಾದಕರ ಸಹಕಾರಿ ಸಂಘದ ಕಾರ್ಯದರ್ಶಿಯ ಅನಿಸಿಕೆ, ಹಾಲು ಉತ್ಪಾದಕರ ಸಹಕಾರಿ ಸಂಘ ಅಸ್ತಿತ್ವಕ್ಕೆ ಬಂದಿದ್ದು 9 ವರ್ಷಗಳಷ್ಟು ಹಿಂದೆ ಈಗ ಇದು ಸುಸಜ್ಜಿತ ವ್ಯವಸ್ಥೆಯಾಗಿ ರೂಪುಗೊಂಡಿದೆ. ಇಲ್ಲಿ ಹೈನೋದ್ಯಮದಲ್ಲಿ ತೊಡಗಿಸಿಕೊಂಡಿರುವ ರೈತರು ಹಾಲು ಉತ್ಪಾದನೆಯ ವ್ಯವಹಾರದಲ್ಲಿ ಪರಿಣತಿಯನ್ನು ಸಾಧಿಸಿದ್ದಾರೆ, ಹೀಗೆ ಪರಿಣತಿ ಸಾಧಿಸಲು ಹಾಲು ಉತ್ಪಾದಕರ ಸಹಕಾರಿ ಸಂಘವಿರುವುದೇ ಕಾರಣವಾಗಿದೆ. ಆದ್ದರಿಂದ ಸ್ವಸಹಾಯ ಗುಂಪುಗಳು ಬಹುತೇಕ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಹೈನುಗಾರಿಕೆ ಚಿಕ್ಕಪ್ರಮಾಣದಲ್ಲೆ ಲಾಭದಾಯಕ ಕಸುಬು ಇಂತಹ ಲಾಭದಾಯಕ ಕಸಬನ್ನು ಕೈಗೊಳ್ಳಲು ಎಸ್.ಬಿ.ಐ ಒತ್ತಾಸೆಯಾಗಿ ನಿಂತಿದೆ. ಎಸ್.ಬಿ.ಐ. ನೀಡುವ ಸಣ್ಣ ಸಾಲದಿಂದ ಬಹಳಷ್ಟು ರೈತರೂ ಹೈನೋದ್ಯಮದಲ್ಲಿ ತೊಡಗಿಸಿ ಕೊಂಡಿದ್ದಾರೆ, ಹೀಗೆ ಹೈನೋದ್ಯಮದಲ್ಲಿ ತೊಡಗಿಸಿಕೊಂಡಿರುವವರ ಸಮಸ್ಯ ಎಂದರೆ ಕೆಲವರಿಗೆ ಎಸ್.ಬಿ.ಐ. ಸಾಲ ಮರುಪಾವತಿಸಲು ಆಗಿಲ್ಲ, ಏಕೆಂದರೆ ಬಂದ ದುಡ್ಡಿನಲ್ಲಿ ಹಸುಗಳ ನಿರ್ವಹಣೆಯ ಖರ್ಚು ಹೋಗಿ ಉಳಿಯುವುದು ಅತ್ಯಲ್ಪ ಇದನ್ನು ಜೀವನ ನಿರ್ವಹಣೆಗೆ ಉಪಯೋಗಿಸಲಾಗುತ್ತಿದೆ. ಆದ್ದರಿಂದ ಬ್ಯಾಂಕ್

ಸಾಲವನ್ನು ನಿಗಧಿತ ವೇಳೆಯಲ್ಲಿ ಮರುಪಾವತಿಸಲು ಸಾಧ್ಯವಾಗಿಲ್ಲ ಎಂಬುದೆ ಕೆಲವು ಹೈನುಗಾರರ ಅನಿಸಿಕೆ, ಆದರೆ ಬಹಳಷ್ಟು ಹೈನುಗಾರರು ಸಣ್ಣ ಪ್ರಮಾಣದ ಸಾಲವನ್ನು ಬಡ್ಡಿ ಸಹಿತ ಹಿಂತಿರುಗಿಸಿದ್ದೇವೆ ಎಂದು ಹೇಳುತ್ತಿದ್ದಾರೆ, ಹೀಗೆ ಬಡ್ಡಿ ಸಹಿತ ಹಿಂತಿರುಗಿಸಿರುವುದರಿಂದ ಈಗ ದುಡಿಯುವ ದುಡ್ಡನ್ನು ಉಳಿತಾಯ ಮಾಡಿ ಇನ್ನಷ್ಟು ಹಸುಗಳನ್ನು ಕೊಂಡು ಹೈನುಗಾರಿಕೆಯ ಪ್ರಮಾಣವನ್ನು ವಿಸ್ತರಿಸುವ ಬಯಕೆಯನ್ನು ವ್ಯಕ್ತಪಡಿಸಿದರು. ಆದರೆ ಇಲ್ಲಿ ಕೆಲವು ರೈತರು ಬರಿ ಮೇವಿನ ಬೆಳೆ ಬೆಳೆದು ಮತ್ತೇನನ್ನು ಬೆಳೆಯದೆ ಹಸುಗಳನ್ನು ಸಾಕುತ್ತಿದ್ದರು, ಹೀಗೆ ಮೇವಿನ ಬೆಳೆಯನ್ನು ನೆರೆ ಹೊರೆ ಹಳ್ಳಿಗಳಲ್ಲೂ ಬೆಳೆಯಲಾಗುತ್ತದೆ.

ಈ ಬೆಳೆಯನ್ನು ಹಸುಗಳು ಇಲ್ಲದವರು ಬೆಳೆಯುತ್ತಾರೆ, ಒಂದು ಎಕರೆ ಮೇವಿನ ಜೋಳಕ್ಕೆ ರೂ. 2000 ರಿಂದ ಮೂರು ಸಾವಿರ ರೂಪಾಯಿಗಳ ವರೆಗೂ ಮಾರಾಟ ಮಾಡಲಾಗುತ್ತಿದೆ ಆದರೆ ಇದನ್ನೇ ನೆಚ್ಚಿಕೊಂಡು ರೈತರು ಕುಳಿತಿಲ್ಲ, ಇವರು ಹೊಸಕೋಟೆ ವೇಮಗಲ್ಲು ಮುಂತಾದ ಕಡೆಯಿಂದ ಒಣ ಹುಲ್ಲನ್ನು ಖರೀದಿಸಿ ತಂದು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಹೀಗೆ ಹೈನುಗಾರಿಕೆಯಲ್ಲಿ ತೊಡಗಿಸಿ ಕೊಳ್ಳುವುದು ಲಾಭದಾಯಕವಾದದ್ದು ಎಂದು ಬಹುತೇಕ ರೈತರು ಅನಿಸಿಕೆ, ಆದ್ದರಿಂದ ಹೈನುಗಾರಿಕೆ ಇಲ್ಲಿ ಲಾಭದಾಯಕವಾಗಲು ಹಾಲು ಉತ್ಪಾದಕರ ಸಹಕಾರ ಸಂಘವಿರುವುದೇ ಕಾರಣವಾಗಿದೆ. ಹಾಲು ಉತ್ಪಾದಕರ ಸಹಕಾರಿ ಸಂಘದ ಕೆಲಸ ದಿನನಿತ್ಯ ಬೆಳಿಗ್ಗೆ ಹಾಲನ್ನು ಸಂಗ್ರಹಿಸಿ ಪ್ರತಿ ಹೈನುಗಾರರು ಎಷ್ಟು ಹಾಲು ಮಾರಿದ್ದಾರೆ, ಎಂಬುದನ್ನು ಲೆಖ್ಖವಿಡುವುದು. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಹಾಲಿನ ದುಡ್ಡನ್ನು ರೈತರಿಗೆ ಪಾವತಿಸಲಾಗುತ್ತದೆ. ಬಹಳಷ್ಟು ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವುದು ಹಾಲು ಉತ್ಪಾದಕರ ಸಂಘ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವುದರಿಂದ, ಇಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಭ್ರಷ್ಟಾಚಾರವಿಲ್ಲ ಎಲ್ಲಾ ತರದಲ್ಲೂ ಪಾರದರ್ಶಕತೆ ಇದೆ. ರೈತರು ಮಾರಿದ ಹಾಲಿಗೆ ಲೆಖ್ಖ ವಿಡುವುದರಲ್ಲಿ ಮೋಸವಿಲ್ಲ. ಆದ್ದರಿಂದ ಬಹಳಷ್ಟು ಬಡ ರೈತರು ಹೈನುಗಾರಿಕೆಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿತರಾಗಿದ್ದಾರೆ, ಇದರಿಂದಾಗಿ ಹೊಸ ಹೊಸ ರೈತರು ಹೈನುಗಾರಿಕೆಲ್ಲಿ ತೊಡಗಿಸಿಕೊಳ್ಳಲು ಮುಂದೆಬರುತ್ತಿದ್ದಾರೆ, ಹಳೆ ರೈತರು ತಮ್ಮ ಹೈನುಗಾರಿಕೆ ಉದ್ಯಮವನ್ನು ವಿಸ್ತರಿಸುವ ಹಾದಿಯಲ್ಲಿದ್ದಾರೆ ಆದರೆ ಇಲ್ಲಿ ಇರುವ ಸಮಸ್ಯೆಯೆಂದರೆ ಮೇವಿನದು, ಮೇವನ್ನು ತರಲು ಕೋಲಾರ ಚಿಂತಾಮಣಿಗೆ ಕಡೆಯ ಹಳ್ಳಿಗಳವರೆಗೂ ಹೈನುಗಾರರು ಹೋಗುತ್ತಾರೆ, ಈ ಮೇವನ್ನು ಸಂಗ್ರಹಿಸಲು ಏಪ್ರಿಲ್, ಮೇ ತಿಂಗಳುಗಳಲ್ಲಿ ಹೈನುಗಾರರು ಹೋಗುತ್ತಾರೆ, ಇವರೆಲ್ಲ ಸಣ್ಣ ಹಿಡುವಳಿದಾರರಾಗಿರುವುದರಿಂದ ಹಸಿರು ಮೇವನ್ನು ಬೆಳೆದುಕೊಳ್ಳುವುದಿಲ್ಲ ಇನ್ನು ಹಿಂಡಿ ಬೂಸ, ಇವುಗಳಲ್ಲಿ ಹೊಸಕೋಟೆ ದಿನಸಿ ಅಂಗಡಿಗಳಲ್ಲಿ ಸಿಗುತ್ತದೆ, ಆದ್ದರಿಂದ ಈ ನಿಟ್ಟಿನಲ್ಲಿ ಕಷ್ಟಪಡಬೇಕಾದ ಪ್ರಮೇಯವಿಲ್ಲ, ಆದರೆ ಹಾಲಿನ ಇಳುವರಿ ಹೆಚ್ಚಿಸುವ

ಹಸುರು ಮೇವನ್ನು ಪಡೆಯಲು ರೈತರು ಹೆಚ್ಚು ಶ್ರಮ ಪಡಬೇಕಾಗಿದೆ. ಹಾಗೂ ಪರದಾಡಬೇಕಾಗಿದೆ ಆದರೂ ಹೈನುಗಾರಿಕೆ ಒಂದು ಆಕರ್ಷಕವಾದ ಉದ್ಯಮ.

ಸಂಪನ್ಮೂಲ ಮಾರುಕಟ್ಟೆಯಲ್ಲಿ ಸಾಲ:

ಸಂಪನ್ಮೂಲ ಮಾರುಕಟ್ಟೆಯಲ್ಲಿ ಸಾಲ ಅತ್ಯಂತ ಮುಖ್ಯವಾದ ಸಂಪನ್ಮೂಲ, ಕುಂಬಳ ಹಳ್ಳಿಯಲ್ಲಿ ಒಟ್ಟು 4000 ಜನ ಸಂಖ್ಯೆಯಲ್ಲಿ 500 ಕ್ಕಿಂತ ಹೆಚ್ಚು ಜನನ ಎಸ್.ಬಿ.ಐ. ನಲ್ಲಿ ಸಾಲ ಮಾಡಿದ್ದಾರೆ, ಪಿ.ಎಲ್.ಡಿ. ಬ್ಯಾಂಕಿನಲಲ್ಲಿ 150 ಕ್ಕಿಂತ ಹೆಚ್ಚು ಜನ ಸಾಲ ಮಾಡಿದ್ದಾರೆ, ಖಾಸಗಿ ಲೇವಾ ದೇವಿಗಾರರಿಂದ 500 ಜನ ಸಾಲ ಪಡೆದಿದ್ದಾರೆ ಇದು ಸ್ಪಷ್ಟಪಡಡಿಸುವುದೇನೆಂದರೆ ಶೇ. 12 ರಷ್ಟು ಜನ ಎಸ್.ಬಿ.ಐ. ನಿಂದ ವಿವಿಧ ರೀತಿಯ ಸಾಲ ಪಡೆದಿದ್ದಾರೆ, ಹೊಸಕೋಟೆಯಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಬಹಳಷ್ಟು ಪ್ರಮಾಣದಲ್ಲಿ ರೈತರು ಸಾಲ ಪಡೆದಿದ್ದಾರೆ, ಇಲ್ಲಿ ಶೇ. 12 ಬಡ್ಡಿ ದರದಲ್ಲಿ ಇವರು ಸಾಲ ಪಡೆದಿದ್ದಾರೆ, ಬ್ಯಾಂಕುಗಳು ನಗರ ಪ್ರದೇಶದ ಹತ್ತಿರವಿರುವುದರಿಂದ ಸಾಕ್ಷರತೆಯ ಪ್ರಮಾಣ ಹೆಚ್ಚಿರುವುದರಿಂದ ಜಾಗೃತಿ ರೈತರ ನಡುವೆ ಹೆಚ್ಚಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ನಿಂದ ಸಾಲ ಪಡೆದು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ, ಇಲ್ಲಿ ವಿವಿಧ ಆರ್ಥಿಕ ಚಟುವಟಿಕೆಗಳೆಂದರೆ ಗುಲಾಬಿ ಹೂವಿನ ತೋಟ, ದ್ರಾಕ್ಷಿ ತೋಟ, ತರಕಾರಿ ಬೆಳೆಗಳು ಇದನ್ನು ಈಗಾಗಲೆ ನಾನು ತಿಳಿಸಿರುವೆ, ಈ ಕಾರಣಕ್ಕಾಗಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕುಗಳಿಂದ ಸಾಲ ಪಡೆಯಲು ಉತ್ಸುಕರಾಗಿರುವುದು ಈ ಸಾಲಗಳಲ್ಲಿ ಅಲ್ಪಾವಧಿ , ಮಧ್ಯಮಾವಧಿ ದೀರ್ಘಾವಧಿ ಸಾಲಗಳು ಇವೆ, ಈ ಸಾಲಗಳನ್ನು ಬಹುತೇಕ ರೈತರು, ಮರು ಪಾವತಿಸಿಲ್ಲ ಮರುಪಾವತಿಸುವ ರೈತರ ಸಂಖ್ಯೆ 60 ಕ್ಕಿಂತ ಕಡಿಮೆ ಆದರು ರೈತರಲ್ಲಿ ಸಾಲ ಪಡೆಯುವ ಉತ್ಸಾಹ ಇದೆ. ಮರುಪಾವತಿ ಮಾಡದಿರುವುದಕ್ಕೆ ಕಾರಣಗಳು ಅನೇಕ, ರೈತರು ಇಲ್ಲಿ ತೊಡಗಿಸಿಕೊಂಡಿರುವ ಆರ್ಥಿಕ ಚಟುವಟಿಕೆಗಳು ನಿರಂತರವಾಗಿ ಲಾಭದಾಯಕವಾಗಯೇನು ಉಳಿದಿಲ್ಲ, ಕೆಲವು ಋತುಮಾನಗಳಲ್ಲಿ ಲಾಭದಾಯಕವಾದರೆ, ಉಳಿದ ಋತುಮಾನಗಳಲ್ಲಿ ಬೆಲೆ ಏರಿಳಿತ ಅಥವಾ ಇಳುವರಿ ಕಡಿಮೆಯಾಗುವ ಪ್ರತಿಕೂಲ ವಾತಾವರಣದಿಂದ ಬೆಳೆ ನಷ್ಟ ಉಂಟಾಗುತ್ತದೆ. ಈ ಬೆಳೆ ನಷ್ಟವುಂಟಾಗುವುದರಿಂದ ರೈತರಿಗೆ ಬ್ಯಾಂಕುಗಳ ಸಾಲ ಮರುಪಾವತಿಸುವುದಕ್ಕೆ ಸಾಧ್ಯವಾಗುವುದಿಲ್ಲ ಹಾಗೆಯೇ ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆದವರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದವರಷ್ಟೆ ಸಂಖ್ಯೆಯಲ್ಲಿದ್ದಾರೆ, ಯಾಕೆಂದರೆ ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆಯುವ ವಿಧಾನಗಳು ಸರಳವಾರಗಿರುತ್ತದೆ. ಈ ಕಾರಣಕ್ಕಾಗಿ ಹೆಚ್ಚ ಜನ ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆಯಲು ಮುಂದಾಗುತ್ತಾರೆ. ಇಲ್ಲಿ ನಾನು ಸಮೀಕ್ಷೆ ಮಾಡಿದ ಮಾದರಿಗಳಲ್ಲಿ 15 ಜನ ಮಧ್ಯಮಾವಧಿ ಸಾಲ, 50% 5 ರೈತರು (16.66%) ಜನ ದೀರ್ಘಾವಧಿ ಸಾಲ, 3 (10%) ಅಲ್ಪಾವಧಿ ಸಾಲ ಪಡೆದಿದ್ದಾರೆ,

ಖಾಸಗಿ ಲೇವಾದೇವಿಗಾರರಿಂದ 7 (23.33%) ಜನ ಸಾಲ ಪಡೆದಿದ್ದಾರೆ, ಪ್ರಾಥಮಿಕ ಸಮೀಕ್ಷೆಯಿಂದ ತಿಳಿದು ಬರುವುದೇನೆಂದರೆ ಬಹುತೇಕರು ರಾಷ್ಟ್ರೀಕೃತ ಬ್ಯಾಂಕಿನಿಂದ ವಿವಿಧ ಅವಧಿಯ ಸಾಲ ಪಡೆದಿದ್ದಾರೆ ಇಲ್ಲಿ ಬ್ಯಾಂಕುಗಳ ನಿಯಮಾವಳಿಗಳು ಹಾಗೂ ಬ್ಯಾಂಕು ವಿಧಾನಗಳು ಸಂಕೀರ್ಣವಾಗಿದ್ದರು ಹೆಚ್ಚು ಜನ ಬ್ಯಾಂಕುಗಳಿಗೆ ಮುಗಿ ಬಿದ್ದಿದ್ದಾರೆ, ಬ್ಯಾಂಕುಗಳಿಗೆ ತಮ್ಮ ಆಸ್ತಿಯನ್ನು ಬರೆದದುಕೊಟ್ಟು ಸಾಲ ಪಡೆದಿದ್ದಾರೆ, ಆದರೆ ಈ ಬ್ಯಾಂಕುಗಳು ಈಗ ಕೃಷಿಯನ್ನು ಆದ್ಯತ ವಲಯವಾಗಿ ಪರಿಗಣಿಸುವುದರಿಂದ ಹೆಚ್ಚು ಹೆಚ್ಚು ಸಾಲವನ್ನು ಕೃಷಿಕರಿಗೆ ನೀಡುವ ನಿಟ್ಟಿನಲ್ಲಿ ಉತ್ಸುಕವಾಗಿದೆ. ಎಂಬುದು ಸ್ಪಷ್ಟವಾಗಿದೆ. ಆದರೆ ಬ್ಯಾಂಕ್ ಅಧಿಕಾರಿಗಳು ಹೇಳುವ ಪ್ರಕಾರ ಮರು ಪಾವತಿ ಬಹಳ ಕಡಿಮೆ ಇದೆ ಎಂಬುದು , ಆದರೆ ಮರುಪಾವತಿ ರೈತರಲ್ಲಿ ಹೆಚ್ಚಿಸಲು ಬ್ಯಾಂಕ್, ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆ ಸಮನ್ವಯ ಸಾಧಿಸಬೇಕಾಗಿರುವುದು ಅತ್ಯವಶ್ಯವಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಆಡಳಿತ ಈ ನಿಟ್ಟಿನಲ್ಲಿ ತೊಡಗಿಸಿಕೊಳ್ಳುವುದು ಅವಶ್ಯವಾಗಿದೆ. ಆದ್ದರಿಂದ ಹೆಚ್ಚು ಜನ ಸಾಲ ಪಡೆಯುವುದರೊಂದಿಗೆ ಮರುಪಾವತಿಗೂ ಅಷ್ಟೇ ಉತ್ಸಾಹ ತೋರಬೇಕೆಂಬುದೇ ಬ್ಯಾಂಕ್ ಅಧಿಕಾರಿಗಳ ಪ್ರತಿಪಾದನೆ, ಬ್ಯಾಂಕ್ ಸಾಲ ಪಡೆಯುವಲ್ಲಿ ಮಧ್ಯವರ್ತಿಗಳ ಕಾಟ ಯಾವುದೇ ಗ್ರಾಮವಾದರು ಇದ್ದೇ ಇರುತ್ತದೆ. ಹಾಗೆಯೇ ಈ ಗ್ರಾಮದಲ್ಲಿಯೂ ಸಹ ಮಧ್ಯವರ್ತಿಗಳ ಕಾಟ ಇದೆ. ಆದರೂ ಈ ಗ್ರಾಮದಲ್ಲಿ ಒಟ್ಟು ಸಾಲದ ಶೇ. 10 ರಷ್ಟು ಮಧ್ಯವರ್ತಿಗಳಿಗೆ ಹಣ ಕೊಡುವವರು ಶೇಕಡಾವಾರು ಸಂಖ್ಯೆ 22 (73.33%) ಜನ ಶೇ. 20 ರಷ್ಟು ಮಧ್ಯವರ್ತಿಗಳಿಗೆ ಹಣ ಕೊಡುವವರ ಸಂಖ್ಯೆ 4 (13.33%) ಜನ ಶೇ. 40 ರಷ್ಟು ಮಧ್ಯವರ್ತಿಗಳಿಗೆ ಹಣ ಕೊಡುವವರ ಸಂಖ್ಯೆ 4 (13.33%) ಜನ ಶೇ. 50 ರಷ್ಟು ಮಧ್ಯವರ್ತಿಗಳಿಗೆ ಕೊಡುವವರ ಸಂಖ್ಯೆ ಇಲ್ಲ, ಇದು ಸ್ಪಷ್ಟಪಡಿಸುವುದೇನೆಂದರೆ ಕುಂಬಳ ಹಳ್ಳಿಯಲ್ಲಿ ಮಧ್ಯವರ್ತಿಗಳ ಕಾಟ ಇದೆ. ಆದೆರ ಮಧ್ಯವರ್ತಿಗಳು ಒಟ್ಟು ಸಾಲದ ಹಣದಲ್ಲಿ ಪಡೆಯುವ ಹಣದ ಮೊತ್ತ ಶೇ. 10 ರಷ್ಟು ಇವರ ಸಂಖ್ಯೆಯೇ ಅಧಿಕವಾಗಿದೆ. ಅಧಿಕ ಕಮೀಷನ್ ಪಡೆಯವ ಮಧ್ಯವರ್ತಿಗಳ ಸಂಖ್ಯೆ ಇಲ್ಲಿ ಗಣನೀಯವಾಗಿ ಕಡಿಮೆ ಇದೆ. ಇದು ಏಕೆ, ನಾನು ಅಧ್ಯಯನ ಮಾಡಿದ ಹಳ್ಳಿಗಳಲ್ಲೂ ಶೇ. 20 ಕ್ಕಿಂತ ಅಧಿಕ ಮೊತ್ತವನ್ನು ಮಧ್ಯ ವರ್ತಿಗಳಿಗೆ ಕೊಡಲಾಗುತ್ತದೆ. ಆದರೆ ಈ ಮಧ್ಯವರ್ತಿಗಳ ಕಾಟ, ಕುಂಬಳಹಳ್ಳಿ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿದೆ ಎಂಬುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದ ಅಂಶ ಯಾಕೆಂದರೆ ಈ ಹಳ್ಳಿಯೂ ನಗರೀಕರಣದ ಪ್ರಕ್ರಿಯೆಗೆ ಒಳಗಾಗಿದೆ. ಓೀಗೆ ನಗರೀಕರಣದ ಪ್ರಕ್ರಿಯೆಗೆ ಒಳಗಾಗದ ಹಳ್ಳಿಯಾಗಿರುವುದರಿಂದ, ರೈತರಲ್ಲಿ ಜಾಗೃತಿಯೂ ಮೂಡಿದೆ, ಓೀಗೆ ಜಾಗೃತಿ ಮೂಡಿರುವುದರಿಂದ ಮಧ್ಯವರ್ತಿಗಳ ಒತ್ತಡವನ್ನು ತಡೆಯುವಲ್ಲಿ ಇಲ್ಲಿನ ಬಹಳಷ್ಟು ರೈತರು ಯಶಸ್ವಿಯಾಗಿದ್ದಾರೆ, ಆದ್ದರಿಂದ ಶೇ. 50 ರಷ್ಟು ಮಧ್ಯವರ್ತಿಗಳಿಗೆ ಕಮೀಷನ್ ಕೊಡುವ ರೈತರ ಸಂಖ್ಯೆಯೇ ಇಲ್ಲ, ಆದ್ದರಿಂದ ಇಲ್ಲಿನ ಬ್ಯಾಂಕುಗಳಲ್ಲಿ ಸಾಲ ರೈತರು ಹೆಚ್ಚು ಪಡೆಯುತ್ತಿದ್ದಾರೆ. 7 (23.33%)

ಜನ ಸಾಲ ಪಾವತಿಸಿದ್ದಾರೆ, ಉಳಿದ 23 (76.66%) ಜನ ಸಾಲ ಮರುಪಾವತಿ ಮಾಡಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ಈಗಾಗಲೆ ತಿಳಿಸಿರುವೆ. ಮುನಿವೆಂಕಟಪ್ಪ ಎಂಬ ರೈತನ ಪ್ರಕಾರ ಈತ ರೂ. 50000 ರೂಗಳನ್ನು 2003 ರಲ್ಲಿ ಸಾಲ ಪಡೆದಿದ್ದು ಆದರೆ ರೈತ ಈ ಸಾಲವನ್ನು ಮರುಪಾವತಿಸುವಲ್ಲಿ ವಿಫಲವಾದ, ಆದ್ದರಿಂದ ಇವನ ಸಾಲ 2005 ರಷ್ಟರಲ್ಲಿ ಬಡ್ಡಿಯಾಗಿ ಬೆಳೆಯತೊಡಗಿತು, ಈತನ ಹೇಳುವ ಪ್ರಕಾರ, ಸಾಲ ಮಾಡಬಾರದು ಎಂಬುದು, ಬ್ಯಾಂಕುಗಳಿಂದ ಪಡೆದ ಸಾಲದ ಬಗ್ಗೆಗಿನ ಪ್ರತಿಕ್ರಿಯೇ ಹಾಗೇಯೇ ಈತ 50,000 ರೂಗಳಷ್ಟು ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆದಿದ್ದಾನೆ, ಇವರೆಡು ಸೇರಿ ಈಗ ಸಾಲ ಎರಡು ಲಕ್ಷ ರೂಪಾಯಿಗಳು ದಾಟಿದೆ, ಆದರೆ ಈತನ ತರಕಾರಿ ತೋಟದಿಂದ ಬರುವ ಆದಾಯ ಸಾಲ ಮರುಪಾವತಿ ಮಾಡಲು ಆಗುವುದಿಲ್ಲ, ಈತನ ದೈನಂದಿನ ಜೀವನ ನಿರ್ವಹಣೆಗೆ ಇವನ ದುಡಿಮೆ ಸಾಕಾಗುತ್ತದೆ. ಆದ್ದರಿಂದ ಈತ ಸಾಲವನ್ನು ಮರುಪಾವತಿಸಲು ಆಗಿಲ್ಲ, ಇದೇ ಕತೆ ಉಳಿದ ರೈತರಿಗೂ ಅನ್ವಯಿಸುತ್ತದೆ. ಆದ್ದರಿಂದ ಮರುಪಾವತಿ ಕಡಿಮೆ ಜನ ಮಾಡುತ್ತಿರುವುದು, ಹೀಗೆ ಮರುಪಾವತಿ ಸಾಮಾನ್ಯವಾಗಿ ಬ್ಯಾಂಕುಗಳಿಗೆ ಖಾಸಗಿ ಲೇವಾದೇವಿಗಾರರಿಗೆ ಮಾಡಲಾಗುವುದು. ಆಗ ಅವರು ರೈತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ, ಆದರೆ ಇದನ್ನು ಎಲ್ಲ ಹಳ್ಳಿಗಳಿಗೂ ಅನ್ವಯಿಸಬಹುದು. ಆದ್ದರಿಂದ ಮರುಪಾವತಿಯಲ್ಲಿ ಬ್ಯಾಂಕುಗಳ ಬಡ್ಡಿ ದರ, ಖಾಸಗಿಯವರ ದುಬಾರಿ ಬಡ್ಡಿದರ, ಈ ಎಲ್ಲಾ ಅಂಶಗಳಿಂದ ರೈತ ನರಳುತ್ತಿದ್ದಾನೆ. ಇದನ್ನು ರಾಷ್ಟ್ರೀಕೃತ ಬ್ಯಾಂಕುಗಳ ಬಗ್ಗೆ ಅಧ್ಯಯನ ನಡೆಸಿ, ನಂತರ ರೈತರಿಗೆ ಆದ್ಯತೆ ವಲಯವಾಗಿರುವುದರಿಂದ ಸಾಲ ಕೊಡುವ ನೀತಿ ನಿಯಮವಾಳಿಗಳಿಂದ ಹಿಡಿದು, ಮರುಪಾವತಿ ಪ್ರಮಾಣ ಕಡಿಮೆ ಇರುವುದನ್ನು ಹೆಚ್ಚಿಸಲು ನೀತಿಗಳನ್ನು ರೂಪಿಸಬೇಕಾಗಿದೆ. ಇಲ್ಲದೆ ಹೋದರೆ ರೈತ ಸಮುದಾಯ ದಿವಾಳಿ ಹೇಳುವುದರಲ್ಲಿ ಸಂಶಯವಿಲ್ಲ.

ರಸಗೊಬ್ಬರಗಳ ಬಳಕೆ

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ಅತ್ಯಂತ ಮುಖ್ಯವಾದ ಸಂಪನ್ಮೂಲ ಎಂಬುದರಲ್ಲಿ ಸಂಶಯವಿಲ್ಲ. ಕುಂಬಳ ಹಳ್ಳಿಯಲ್ಲಿ ನಾನು ಸಮೀಕ್ಷೆ ಮಾಡಿದ 30 ಜನರು ರಸಗೊಬ್ಬರ ಹಾಗೂ ಕೊಟ್ಟಿಗೆ ಗೊಬ್ಬರವನ್ನು ಬಳಸುವಂತಹವರು. ರಸಗೊಬ್ಬರಗಳನ್ನು ಸಹಕಾರಿ ಸಂಘದಿಂದ ಕೊಳ್ಳುವವರು. 20 (66.66%) ಜನ ಖಾಸಗಿ ಮಳಿಗೆಗಳಿಂದ ಕೊಳ್ಳುವವರು 10 (33.33%) ಜನ, ಕೃಷಿ ಇಲಾಖೆಯಿಂದ ಕೊಳ್ಳುವವರು ಯಾರು ಇಲ್ಲ, ಇಲ್ಲಿ ಕೃಷಿ ಇಲಾಖೆ ರಸಗೊಬ್ಬರಗಳನ್ನು ವಿತರಿಸುತ್ತದೆಯೇ ಅಥವಾ ಇಲ್ಲವೆ ಎಂಬುದು ಸಹ ರೈತರಿಗೆ ತಿಳಿಯದು. ಹೀಗೆ ಕೃಷಿ ಇಲಾಖೆಯಿಂದ ರಸಗೊಬ್ಬರ ವಿತರಿಸಲಾಗುತ್ತದೆ ಎಂಬ ಮಾಹಿತಿ ಯಾವೊಬ್ಬ ರೈತನಿಗೂ ಇಲ್ಲ. ಇಲ್ಲಿ ಅಧಿಕ ಪ್ರಮಾಣದ ರೈತರು ಸಹಕಾರಿ ಸಂಘದಿಂದ ರಸಗೊಬ್ಬರಗಳನ್ನು ಕೊಳ್ಳುತ್ತಾರೆ ಯಾಕೆಂದರೆ ಗುಣಾತ್ಮಕತೆ ಹಾಗೂ ಸುಲಭವಾಗಿ

ದೊರೆಯುವುದರಿಂದ ಸಹಕಾರಿ ಸಂಘಗಳ ಮೂಲಕ ರಸಗೊಬ್ಬರಗಳನ್ನು ಕೊಳ್ಳುತ್ತಾರೆ. ಸಹಕಾರಿ ಸಂಘಗಳು ರಸಗೊಬ್ಬರವನ್ನು ಸಾಲ ಕೊಡುವುದರ ಮೂಲಕ ವಿತರಿಸುವುದರಿಂದ ಕೊಳ್ಳುತ್ತಾರೆ; ಸಾಲ ಸಹಕಾರಿ ಸಂಘಗಳಲ್ಲಿ ಸಿಗುವಷ್ಟು ಸುಲಭದಲ್ಲಿ ಖಾಸಗಿ ಮಳಿಗೆಗಳಿಂದ ಸಿಗುವುದಿಲ್ಲ, ಎಂಬುದೇ ರೈತರ ಅಭಿಪ್ರಾಯ ಆದರೆ ಸಹಕಾರಿ ಸಂಘಗಳಿಂದ ಪೂರೈಕೆಯಾಗುವ ರಸಗೊಬ್ಬರಗಳ ಕೊರತೆಯಿಂದ ಕೂಡಿದೆ. ಬೇಡಿಕೆ ವಿಪುಲವಾಗಿದ್ದರೂ ಪೂರೈಕೆ ಕಡಿಮೆ. ಇದರಿಂದಾಗಿ ಬಹಳಷ್ಟು ರೈತರು ರಸಗೊಬ್ಬರ ಬಳಸುವ ಋತುಮಾನದಲ್ಲಿ ಸಹಕಾರಿ ಸಂಘಗಳಿಗೆ ಬಹಳಷ್ಟು ರೈತರು ಧಾವಿಸುತ್ತಾರೆ. ಇಲ್ಲಿ ಸಹಕಾರಿ ಸಂಘಗಳು ರಸಗೊಬ್ಬರವನ್ನು ಬಹಳಷ್ಟು ಪ್ರಮಾಣದಲ್ಲಿ ಪೂರೈಸಿದರು ಇನ್ನೂ ಅಧಿಕ ಸಂಖ್ಯೆಯ ರೈತರಿಗೆ ಪೂರೈಕೆ ಮಾಡುವಲ್ಲಿ ಸೋಲುತ್ತದೆ. ಆದ್ದರಿಂದ ರೈತರು ಕೆಲವು ಸಾರಿ ಧರಣಿ ನಡೆಸಿದ್ದಾರೆ. ಆದರೂ ಪೂರೈಕೆಯನ್ನು ಸಹಕಾರಿ ಸಂಘಗಳು, ಖಾಸಗಿ ಮಳಿಗೆಗಳಿಂದ ರಸಗೊಬ್ಬರ ಕೊಳ್ಳುವವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿಯೇ ಇದೆ. ಯಾಕೆಂದರೆ ಖಾಸಗಿ ಮಳಿಗೆಗಳವರು ರಸಗೊಬ್ಬರದ ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳುವಲ್ಲಿ ಆಸ್ಥೆ ತೋರಿಸುವುದಿಲ್ಲ, ಎಂಬುದೇ ರೈತರ ಅನಿಸಿಕೆ ಕೆಲವು ಬಾರಿ ನಕಲಿ ಮೂಟೆಗಳನ್ನು ಖಾಸಗಿ ಮಳಿಗೆಗಳವರು ಸರಬರಾಜು ಮಾಡುತ್ತಾರೆ ಎಂಬುದೇ ರೈತರ ಆಪಾದನೆ, ಆದರೆ ಇದನ್ನು ತಡೆ ಹಿಡಿಯಲು ರೈತರು ಮುಂದಾಗಿಲ್ಲ ರಸಗೊಬ್ಬರಗಳ ಗುಣಮಟ್ಟ ನಕಲಿ ಮೂಟೆಗಳನ್ನು ಸರಬರಾಜು ಮಾಡುವುದು ಮುಂತಾದವುಗಳ ಪರಿಶೀಲನೆ, ತನಿಖೆ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ತಿಂಗಳಿಗೊಮ್ಮೆ ನಡೆಸಬೇಕು. ಆದರೂ ಕೃಷಿ ಇಲಾಖೆ ಅಧಿಕಾರಿಗಳು ಹೇಳುವಂತೆ ತನಿಖೆ ನಡೆಸಿ , ಗುಣಮಟ್ಟವನ್ನು ದೃಢೀಕರಿಸುತ್ತಾರೆ, ಹೀಗೆ ದೃಢೀಕರಿಸಿದರು ನಕಲಿ ರಸಗೊಬ್ಬರಗಳ ಹಾವಳಿ ತೀವ್ರವಾಗಿದೆ. ಯಾಕೆಂದರೆ ಇಲ್ಲಿ ರಸಗೊಬ್ಬರಗಳಿಗೆ ಅಪಾರ ಬೇಡಿಕೆ ಇರುವುದರಿಂದ ಖಾಸಗಿ ಮಳಿಗೆಗಳಲ್ಲೂ ರಸಗೊಬ್ಬರ ಮಾರಾಟ ರಭಸದಿಂದಲೇ ನಡೆಯುತ್ತದೆ. ಆದರೆ ಇದು ಅನಿವಾರ್ಯವಾಗಿ ರೈತರು, ಇಲ್ಲಿ ಕೊಳ್ಳಬೇಕಾಗಿರುತ್ತದೆ. ಯಾಕೆಂದರೆ ಸಹಕಾರಿ ಸಂಘಗಳು ಪೂರೈಕೆಯ ಕೊರತೆಯನ್ನು ಎದುರಿಸುತ್ತಿರುವುದರಿಂದ, ಖಾಸಗಿ ಮಳಿಗೆಗಳಿಗೆ ರೈತರು ಹೋಗಬೇಕಾಗಿರುವುದು ಅನಿವಾರ್ಯವಾಗಿದೆ, ಆದರೆ ಇಲ್ಲಿ ಖ್ಯಾತ ನಾಮಾಂಕಿತ ಕಂಪನಿಗಳ ಗೊಬ್ಬರ ನಕಲಿ ಚೀಲಗಳನ್ನು ಮಾರಾಟ ಮಾಡುತ್ತಾರೆ ಎಂಬುದು ರೈತರ ಅನಿಸಿಕೆ, ಆದರೆ ದಂಧೆಯನ್ನು ತಡೆಹಿಡಿಯಲು ಕೃಷಿ ಇಲಾಖೆ ವಿಫಲವಾಗಿದೆ. ಎಂಬುದು ರೈತರ ಅನಿಸಿಕೆ, ಇಲ್ಲಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಖಾಸಗಿ ಮಳಿಗೆಗಳ ವ್ಯಾಪಾರಸ್ಥರಿಗೂ ಅಪವಿತ್ರ ಸಂಬಂಧ ಇದೆ ಎಂಬುದೆ ರೈತರ ಅನಿಸಿಕೆ ಆದರೆ ರೈತರು ಇದನ್ನು ಸರಿಪಡಿಸಲು ಚಳುವಳಿಗಳು ಮಾಡಿದ್ದುಂಟು ಆದರೆ ಮೇಲಧಿಕಾರಿಗಳು ಸ್ಥಳಕ್ಕೆ ಬಂದು ಕಣ್ಣೊರೆಸುವ ಹೇಳಿಕೆಗಳನ್ನು ನೀಡಿ ಹೋಗಿದ್ದಾರೆ. ಆದರೆ ಈ ವ್ಯವಹಾರ ಹೀಗೆ ನಡೆಯುತ್ತದೆ ಇಲ್ಲಿ ಬರುವ 5 ಖಾಸಗಿ ಮಳಿಗೆಗಳಲ್ಲಿ ರಸಗೊಬ್ಬರಗಳಲ್ಲದೆ ಬೀಜಗಳು, ಔಷಧಿಗಳನ್ನು ಮಾರಾಟ

ಮಾಡಲಾಗುತ್ತದೆ ಅಂದರೆ ರೈತರು ಇವುಗಳನ್ನು ಖಾಸಗಿ ಮಳಿಗೆದಾರರ ಮೇಲೆ ನಂಬಿಕೆ ಇಟ್ಟು ಅನಿವಾರ್ಯವಾಗಿ ಕೊಳ್ಳುತ್ತಾರೆ, ಆದರೆ ಇವರು ಕೊಳ್ಳುವ ಉತ್ಪನ್ನಗಳು ಕಡಿಮೆ ಗುಣಮಟ್ಟದ್ದು ಎಂಬುದು ರೈತರಿಗೆ ತಿಳಿದಿರುವುದಿಲ್ಲ, ಯಾಕೆಂದರೆ ಈಗಾಗಲೆ ಇವು ಕೃಷಿ ಇಲಾಖೆಯಿಂದ ದೃಢೀಕರಿಸಲ್ಪಟ್ಟಿವೆ, ಹೀಗೆ ದೃಢೀಕರರಿಸದ ಉತ್ಪನ್ನಗಳು ಇವರ ಬಳಿಯಿದೆ ಎಂದ ರೈತರು ನಂಬಿಕೊಂಡಿದ್ದಾರೆ. ಹಾಗೂ ಸಹಕಾರಿ ಸಂಘಗಳು ಪೂರೈಕೆಯ ಕೊರತೆಯನ್ನು ಎದುರಿಸುತ್ತಿರುವುದರಿಂದ ಖಾಸಗಿ ಮಾರಾಟಗಾರರಿಗೆ ಇಲ್ಲಿ ಸುಗ್ಗಿ. ಇಲ್ಲಿ ಬಹುತೇಕ ರೈತರು ಹೂವಿನ ಹಣ್ಣಿನ ಹಾಗೂ ತರಕಾರಿ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ರಸಗೊಬ್ಬರಗಳನ್ನು ವರ್ಷ ಪೂರ್ತಿ ಬಳಸಬೇಕಾಗುತ್ತದೆ. ಹೀಗೆ ವರ್ಷ ಪೂರ್ತಿ ಬಳಸಬೇಕಾಗುವುದರಿಂದ ರೈತರು ಖಾಸಗಿ ಮಾರಾಟಗಾರರನ್ನು ಆಶ್ರಯಿಸಬೇಕಾಗುತ್ತದೆ. ಒಮ್ಮೆ ಕ್ಯಾರೇಟ್ ಬೆಳೆಗೆ ರಂಜಕ ರಸಗೊಬ್ಬರವನ್ನು ಒಂದು ಖಾಸಗಿ ಮಳಿಗೆಯಿಂದ ತಂದು ಹಾಕಿದಾಗ ಅದು ಇಳುವರಿ ಹೆಚ್ಚಿಸುವ ಬದಲು ಗೆಡ್ಡೆಗಳು ಗಾತ್ರ ಹೆಚ್ಚಿಸುದರಲ್ಲಿ ವಿಫಲವಾದವು. ಏಕೆಂದರೆ ಅದು ನಕಲಿ ರಸಗೊಬ್ಬರವಾಗಿತ್ತು ಎಂದು ಮುನಿಯಪ್ಪ ಎಂಬ ರೈತ ವಿವರಿಸಿದರು ಇದು ಒಬ್ಬ ರೈತರ ಕಥೆಯಲ್ಲ ಇದು ಬಹಳಷ್ಟು ಜನ ರೈತರಿಗೆ ಆಗಿರುವ ಅನುಭವ, ಆದರೂ ಕೃಷಿ ಇಲಾಖೆ ಅಧಿಕಾರಿಗಳು ಇಂತಹ ಘಟನೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದಿದ್ದಾರೆ, ಸರಕಾರ ಈ ನಿಟ್ಟಿನಲ್ಲಿ ಸರಿಯಾಗಿ ನೀತಿ ರೂಪಿಸಬೇಕಾಗಿದೆ. ಯಾಕೆಂದರೆ ಇದು ಕುಂಬಳ ಹಳ್ಳಿಯೊಂದರ ಕಥೆಯಲ್ಲ ಎಲ್ಲಾ ಹಳ್ಳಿಗಳ ಕಥೆಯಾಗಿದೆ. ಆದ್ದರಿಂದ ಅಧಿಕ ಪ್ರಮಾಣದಲ್ಲಿ ರೈತರು ಸಹಕಾರಿ ಸಂಘಗಳಿಗೆ ಮುಗಿಬೀಳುವುದು ಇದು ಕುಂಬಳ ಹಳ್ಳಿಯಲ್ಲಿ ಕಂಡು ಬರದ ಅಂಶ.

ಅಧಿಕೃತ ರಸಗೊಬ್ಬರ ವಿತರಕರ ಬಗ್ಗೆ 25 (83.33%) ಜನ ರೈತರಿಗೆ ಮಾಹಿತಿ ಇದೆ. 5 (16.66%) ಜನ ರೈತರಿಗೆ ಮಾಹಿತಿ ಇಲ್ಲ, ಸಹಕಾರಿ ಸಂಘಗಳು ಖಾಸಗಿ ಮಾರಾಟಗಾರರು ಇವರಲ್ಲಿ ಬರುತ್ತಾರೆ, ಆದರೆ ಈಗಾಗಲೆ ತಿಳಿಸಿರುವಂತೆ ಅಧಿಕೃತ ರಸಗೊಬ್ಬರ ವಿತರಕರ ಬಗ್ಗೆ ಅಧಿಕ ಸಂಖ್ಯೆ ರೈತರಿಗೆ ಮಾಹಿತಿ ಇದ್ದರೂ ರೈತರು ಖಾಸಗಿ ಮಾರಾಟಗಾರರಿಂದ ನಾನಾ ರೀತಿಯಿಂದ ವಂಚಿತರಾಗುತ್ತಿದ್ದಾರೆ. ಇವರು ಸರಕಾರದಿಂದ ಪರವಾನಿಗೆ ಪಡೆದ ವಿತರಕರಾಗಿದ್ದರೂ, ಸರಕಾರದ ಪ್ರಾಮಾಣಿಕ ಪ್ರಯತ್ನವಿಲ್ಲವಾಗಿದ್ದರಿಂದ ಪೂರೈಕೆ, ಗುಣಮಟ್ಟ, ಬೆಲೆಯಲ್ಲಿ ವಂಚಿತರವಾಗುತ್ತಿದ್ದಾರೆ ಎಂಬುದು ಅಧ್ಯಯನದ ಸಂದರ್ಭದಲ್ಲಿ ಬೆಳಕಿಗೆ ಬಂದ ಅಂಶ, ಆದರೆ ಇವುಗಳಿಂದ ರೈತರನ್ನು ಪಾರುಮಾಡಬೇಕಾದರೆ ಸರಕಾರ ಅಂದರೆ ಕೃಷಿ ಇಲಾಖೆ ರೈತರಿಗೆ ರಸಗೊಬ್ಬರಗಳ ಕೊಳ್ಳುವ ಬಗ್ಗೆ ಹಾಗೂ ಗುಣಮಟ್ಟದ ಬಗ್ಗೆ ಅಧಿಕೃತ ವಿತರಕರ ಮಾರಾಟದ ಬಗ್ಗೆ ತರಬೇತಿ ನೀಡಬೇಕಾಗುತ್ತದೆ. ಆದರೆ ಸರಕಾರ ಈ ನಿಟ್ಟಿನಲ್ಲಿ ಉದ್ಯುಕ್ತವಾಗಿಲ್ಲ, ಯಾಕೆಂದರೆ ಕೃಷಿ ಇಲಾಖೆ ಅಧಿಕಾರಿಗಳು ಅಧಿಕೃತ ವಿತರಕರ ಜೊತೆಯಲ್ಲೆ ಅಪವಿತ್ರ ಸಂಬಂಧ ಹೊಂದಿರುವುದರಿಂದ ರಸಗೊಬ್ಬರ ಗ್ರಾಹಕರಿಗೆ ಜಾಗೃತಿ ತರಬೇತಿ ನೀಡುವುದಾದರು ಎಲ್ಲಿ ಎಂಬುದು ಸ್ಪಷ್ಟವಾದ ಅಂಶ.

[illegible]

ಆದರೆ ಈ ಕಾರಣ ಒಂದೇ ಅಲ್ಲ ರೈತರು ಅಸಂಘಟಿತರಾಗಿ ರಸಗೊಬ್ಬರ ಮಾರಾಟಗಾರರು ಕೊಟ್ಟಿದ್ದಕ್ಕೆ ಒಮ್ಮೊಮ್ಮೆ ಹೆಚ್ಚಿನ ದುಡ್ಡುಕೊಟ್ಟು ತರುವುದರಿಂದ ರಸಗೊಬ್ಬರ ಮಾರಾಟಗಾರರಲ್ಲೂ ರೈತರಬಗ್ಗೆ ಕಾಳಜಿ ಇಲ್ಲ ಭಯವೂ ಇಲ್ಲ, ಆದ್ದರಿಂದ ಒಮ್ಮೊಮ್ಮೆ ಚೀಲದ ಮೇಲೆ ನಮೂದಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಅಧಿಕ ಪ್ರಮಾಣದ ರೈತರಿಗೆ ಅಧಿಕೃತ ರಸಗೊಬ್ಬರ ವಿತರಕರ ಬಗ್ಗೆ ತಿಳಿದಿದ್ದರೂ, ರಸಗೊಬ್ಬರ ಮಾರುಕಟ್ಟೆಯ ಸಮಸ್ಯೆಗಳಿಂದ ಹೊರಬರಲು ಆಗುತ್ತಿಲ್ಲ,

ರಸಗೊಬ್ಬರ ಮಾರುಕಟ್ಟೆಯ ಸಮಸ್ಯೆಗಳ, ಪೂರೈಕೆ ಅಸಮರ್ಪಕವಾಗಿದೆ. ಉತ್ತಮ ಗುಣಮಟ್ಟದ ರಸಗೊಬ್ಬರದ ಪೂರೈಕೆ, ಬೆಲೆಯಲ್ಲಿ ಪಾರದರ್ಶಕತೆ ಇರುವಂತೆ ಮಾಡುವುದು ಮುಂತಾದವುಗಳು ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕೃಷಿ ಇಲಾಖೆ ಈ ನಿಟ್ಟಿನಲ್ಲಿ ಹೆಚ್ಚು ಕಾರ್ಯಪ್ರವೃತ್ತರಾಗಬೇಕು.

ಸಾರಿಗೆ ಸಮಸ್ಯೆಯೇನು ರೈತರಿಗೆ ಇಲ್ಲ, ಇಲ್ಲಿ ಬಸ್ಸುಗಳ ಸಮಸ್ಯೆ ಇದ್ದರೂ, ರೈತರು ರಿಕ್ಷಾಗಳ ಮೂಲಕ ರಸಗೊಬ್ಬರವನ್ನು ಸಾಗಿಸುತ್ತಾರೆ, ಕಡಿಮೆ ಪ್ರಮಾಣದಲ್ಲಿ ದ್ವಿಚಕ್ರವಾಹನಗಳು ಹಾಗೂ ಸೈಕಲ್ ಮೂಲಕ ಸಾಗಿಸುತ್ತಾರೆ ಆದರೆ ಹೊಸಕೋಟೆಯಿಂದ ಕುಂಬಳಹಳ್ಳಿಗೆ ಬಸ್ಸುಗಳ ಪ್ರಮಾಣ ಕಡಿಮೆ ಇರುವುದರಿಂದ ಅಧಿಕ ಸಂಖ್ಯೆಯ ರೈತರು ರಿಕ್ಷಾಗಳಲ್ಲಿ ರಸಗೊಬ್ಬರಗಳನ್ನು ಸಾಗಿಸುತ್ತಾರೆ. ರಿಕ್ಷಾಗಳಲ್ಲಿ 25-30 ರೂಪಾಯಿಗಳು ಕೊಟ್ಟರೆ 7-8 ಚೀಲ ರಸಗೊಬ್ಬರವನ್ನು ಕುಂಬಳಹಳ್ಳಿಗೆ ತರಬಹುದು. ಆದ್ದರಿಂದ ಸಾರಿಗೆ ಸಮಸ್ಯೆ ಅಷ್ಟಾಗಿ ರೈತರನ್ನು ಕಾಡುತ್ತಿಲ್ಲ. ರೈತರಿಗೆ ಬಸ್ಸಲ್ಲೂ ಇಷ್ಟು ಪ್ರಮಾಣದ ರಸಗೊಬ್ಬರ ಸಾಗಿಸಲು ಇಷ್ಟೇ ಸಾರಿಗೆ ವೆಚ್ಚವನ್ನು ತೆರಬೇಕಾಗುತ್ತದೆ. ಆದ್ದರಿಂದ ರಿಕ್ಷಾ ಮೂಲಕ ಸಾಗಿಸುವುದು ಅನುಕೂಲಕರ ಮತ್ತು ಸುಲಭವಾಗಿರುವುದರಿಂದ ಬಹುತೇಕ ರೈತರು ರಿಕ್ಷಾ ಮೂಲಕ ರಸಗೊಬ್ಬರಗಳನ್ನು ಸಾಗಿಸುತ್ತಾರೆ, ದ್ವಿಚಕ್ರ ವಾಹನದಲ್ಲಿ ಸಣ್ಣ ಪ್ರಮಾಣದಲ್ಲಿ ರಸಗೊಬ್ಬರ ಸಾಗಿಸಬೇಕಾಗಿರುವುದರಿಂದ ಇದು ಅಷ್ಟು ಜನಪ್ರಿಯ ಇದು ಅಷ್ಟು ಜನಪ್ರಿಯ ಸಾಧನವಾಗಿಲ್ಲ ಆದ್ದರಿಂದ ಬಸ್ಸಿನ ಅನುಕೂಲ ಕಡಿಮೆ ಇರುವುದರಿಂದ, ರಿಕ್ಷಾ ರಸಗೊಬ್ಬರ ಸಾಗಿಸಲು ಇರುವ ಜನಪ್ರಿಯ ಸಾಧನೆ ಇದು ಸಮೀಕ್ಷೆಯ ಸಂದರ್ಭದಲ್ಲಿ ಕಂಡು ಬಂದ ಅಂಶ ರಸಗೊಬ್ಬರಗಳ ಉತ್ಪನ್ನದ ಬೆಲೆ ಶೇ. 20 ಕ್ಕಿಂತ ಅಧಿಕ ವೆಚ್ಚ ಮಾಡುವವರ ಸಂಖ್ಯೆ ಅಧಿಕವಾಗಿದೆ. ಏಕೆಂದರೆ ಇಲ್ಲಿ 300 ರಷ್ಟು ಕೊಳವೆಬಾವಿಗಳನ್ನು ಹೊಂದಿ ನೀರಾವರಿ ಇರುವುದರಿಂದ ಹೆಚ್ಚು ಹೆಚ್ಚಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ, ಹೆಚ್ಚು ಹೆಚ್ಚಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ರಸಗೊಬ್ಬರಗಳ ಬಳಕೆ ಅತಿ ಹೆಚ್ಚಾಗಿ ಇರುತ್ತದೆ. ಇವರು ಬೆಳೆಯುವ ಬೆಳೆಗಳು ರಸಗೊಬ್ಬರಗಳಿಗೆ ಹೆಚ್ಚು ಪ್ರತಿಕ್ರಿಯೆ ತೋರಿಸುತ್ತವೆ, ಹೀಗೆ ಪ್ರತಿಕ್ರಿಯೆ ತೋರಿಸುವುದರಿಂದ ಗೊಬ್ಬರಗಳು ಬಳಸಿದಷ್ಟು ಇಳುವರಿ

ಹೆಚ್ಚಾಗಿ ರಸಗೊಬ್ಬರಗಳನ್ನು ಉತ್ಪನ್ನಗಳಾಗಿ ಪರಿವರ್ತಿಸುತ್ತವೆ., ಇಲ್ಲಿ ಇವು ಮಣ್ಣಿನ ಪೋಷಕಾಂಶಗಳ ಗುಣಮಟ್ಟವನ್ನು ಹೆಚ್ಚಿಸುತ್ತವೆ ಎಂಬುದಾಗಿ ರೈತರ ಅಭಿಪ್ರಾಯ ನೀರಾವರಿ ಮತ್ತು ರಸಗೊಬ್ಬರಗಳ ಬಳಕೆ ಒಂದಕ್ಕೊಂದು ಪೂರಕವಾಗುತ್ತದೆ. ಆದ್ದರಿಂದ ಕುಂಬಳಹಳ್ಳಿಯಲ್ಲಿ ರೈತರು ಹೆಚ್ಚು ಹೆಚ್ಚಾಗಿ ರಸಗೊಬ್ಬರಗಳನ್ನು ಬಳಸುತ್ತಿರುವುದು ಇವು ಉತ್ಪನ್ನವಾದ ಬೆಲೆಯಲ್ಲಿ ಶೇ. 20 ಕ್ಕಿಂತ ಹೆಚ್ಚು ರಸಗೊಬ್ಬರಗಳ ಮೇಲೆ ವೆಚ್ಚ ಮಾಡುವವರು 15 (50%) ಜನ, ಶೇ. 15 ಕ್ಕಿಂತ ಹೆಚ್ಚು ವೆಚ್ಚ. ಮಾಡುವವರು 9 (30%) ಜನ, ಶೇ 10 ಕ್ಕಿಂತ ಜಾಸ್ತಿ ಶೇ. 15 ಕ್ಕಿಂತ ಕಡಿಮೆ ವೆಚ್ಚ ಮಾಡುವವರು 4 (13.33%) ಜನ, ಶೇ. 5 ಕ್ಕಿಂತ ಕಡಿಮೆ ಮಾಡುವರು ಇಬ್ಬರು (6.6%), ಸಮಿಕ್ಷೆಯಲ್ಲಿ ವ್ಯಕ್ತವಾದ ಈ ಅಂಶಗಳನ್ನು ಪರಿಗಣಿಸಿದರೆ, ಉತ್ಪನ್ನದ ಬೆಲೆಯಲ್ಲಿ ಶೇ. 20 ರಷ್ಟು ವೆಚ್ಚ ಮಾಡುವವರ ಸಂಖ್ಯೆ ಅಧಿಕವಾಗಿದೆ ಎಂದು ಈಗಾಗಲೆ ನಾವು ತಿಳಿದಿದ್ದೇವೆ ಉತ್ಪನ್ನದ ಬೆಲೆಯಲ್ಲಿ ರಸಗೊಬ್ಬರಗಳಿಗೆ ಹೆಚ್ಚು ವೆಚ್ಚ ಮಾಡಿ, ಇನ್ನಿತರ ವೆಚ್ಚಗಳನ್ನು ಕಡಿತಗೊಳಿಸುವುದರಿಂದ, ಇದು ಲಾಭದಾಯಕವಾಗಿದೆ, ಆದ್ದರಿಂದ ರೈತರ ಇನ್ನಿತರ ಅನವಶ್ಯಕ ವೆಚ್ಚಗಳನ್ನು ಕಡಿತಗೊಳಿಸಿ, ರಸಗೊಬ್ಬರಗಳ ಕೊಳ್ಳುವ ಕಡೆ ಹೆಚ್ಚು ಆಸಕ್ತರಾಗಿದ್ದಾರೆ, ಉತ್ಪನ್ನದ ಬೆಲೆ ವೆಚ್ಚ ಹಾಗೂ ಉತ್ಪಾದದ ವೆಚ್ಚಬೇರೇ ಬೇರೆ ಎಂದು ಪರಿಗಣಿಸಬಹುದು. ಉತ್ಪಾದನ ವೆಚ್ಚ ವ್ಯತ್ಯಾಸಗೊಳ್ಳುವುದಿಲ್ಲ. ಆದೆರ ಉತ್ಪನ್ನದಬೆಲೆ ವ್ಯತ್ಯಾಸಗೊಳ್ಳುತ್ತಿರುತ್ತದೆ. ಉತ್ಪನ್ನದ ಬೆಲೆ ಏರಿದಷ್ಟು ರೈತ ಮಾಡಿರುವ ವೆಚ್ಚ ಕಡಿಮೆಯಾಗುತ್ತ ಹೋಗುತ್ತದೆ. ಯಾಕೆಂದರೆ ಒಂದು ಋತುಮಾನದಲ್ಲಿ ಒಂದು ಗುಲಾಬಿ ಹೂವಿಗೆ 2 ರೂಗಳಿದ್ದರೆ ಆಗ ರಸಗೊಬ್ಬರಗಳ ಮೇಲೆ ಮಾಡಿರುವ ವೆಚ್ಚ ಮುಂದಿನ ಋತುಮಾನದಲ್ಲಿ ಗುಲಾಬಿ ಹೂವು ರೂ. 3 ಇದ್ದಾರೆ, ಕಳೆದ ಸಾರಿಗೂ ಈ ಸಾರಿಗೂ ಉತ್ಪನ್ನದ ವೆಚ್ಚದಲ್ಲಿ ರಸಗೊಬ್ಬರಗಳ ವೆಚ್ಚ ಕಡಿಮೆಯಾಗಿರುತ್ತದೆ. ಆದರೆ ಉತ್ಪಾದನ ವೆಚ್ಚ ಕಳೆದು ಋತುಮಾನಕ್ಕೂ ಈಗಿನ ಋತುಮಾನಕ್ಕೂ ಒಂದೇ ಆಗಿರುತ್ತದೆ. ಯಾಕೆಂದರೆ ತಂತ್ರಜ್ಞಾನ ಬದಲಾಗಿರುವುದಿಲ್ಲ. ಆದ್ದರಿಂದ ಉತ್ಪಾದನಾ ವೆಚ್ಚದಲ್ಲಿ ಅಧಿಕವಾಗಿ ರಸಗೊಬ್ಬರಗಳಿಗೆ ವೆಚ್ಚ ಮಾಡಿದರೆ, ಇಳುವರಿ ಹಾಗೂ ಬೆಲೆಯಲ್ಲಿ ಹೆಚ್ಚಳವಾದರೆ ಆಗ ಇದು ಲಾಭದಾಯಕವಾಗುತ್ತದೆ. ಆದರೆ ಉತ್ಪನ್ನದ ಬೆಲೆ ಅತಿ ತೀವ್ರವಾಗಿ ವ್ಯತ್ಯಾಸಗೊಳ್ಳುತ್ತಿರುತ್ತದೆ. ಆದ್ದರಿಂದ ಉತ್ಪನ್ನದ ಬೆಲೆ ಹೆಚ್ಚಾದಂತೆಲ್ಲ ಅಧಿಕ ಲಾಭವನ್ನು ರೈತರು ಗಳಿಸುತ್ತಾರೆ. ಈ ಅಧ್ಯಯನದ ಅವಶ್ಯಕತೆಯೆಂದರೆ ಯಾವಾಗಲೂ ರಸಗೊಬ್ಬರಗಳ ವೆಚ್ಚ ಉತ್ಪಾದನಾ ವೆಚ್ಚದಲ್ಲಿ ಶೇ. 15 ಕ್ಕಿಂತ ಹೆಚ್ಚಿರಬಾರದು. ಯಾಕೆಂದರೆ ಉಳಿದ ಸಂಪನ್ಮೂಲಗಳಾದ ಬೀಜ, ಬೇಸಾಯದ ಕ್ರಿಯೆಗಳು, ಕೀಟನಾಶಕ/ ಕೂಲಿ ಮುಂತಾದವುಗಳಿಗೆಲ್ಲ ವೆಚ್ಚ ಮಾಡಬೇಕಾಗುತ್ತದೆ. ಇದು ಕುಟುಂಬ ಉದ್ಯಮ ಆದರೆ ಬೀಜ ಮತ್ತು ರಸಗೊಬ್ಬರಗಳ ಮೇಲೆ ಹೆಚ್ಚು ವೆಚ್ಚ ಮಾಡಬಹುದು. ಆದರೆ ಇದು ಕೂಲಿ ಆಧಾರಿತ ಉದ್ಯಮವಾದರೆ ಬೀಜ , ರಸಗೊಬ್ಬರ ಇತ್ಯಾದಿ ಗಳ ವೆಚ್ಚದಲ್ಲಿ ಕಡಿತಗೊಳಿಸಬೇಕಾಗುತ್ತದೆ. ಆದ್ದರಿಂದ ಈ ಅಂಶಗಳನ್ನು ನಾವು ಪರಿಗಣಿಸಬೇಕಾಗಿದೆ.

ರಸಗೊಬ್ಬರಗಳ ಚಿಲ್ಲರೆ ವ್ಯಾಪಾರಿಗಳ ಅಧ್ಯಯನ

ಕೋಲಾರದಲ್ಲಿ ರಸಗೊಬ್ಬರಗಳ ಹಾಗೂ ಕೀಟನಾಶಕಗಳ 26 ಮಳಿಗೆಗಳು ಇವೆ. ಈ 26 ಮಳಿಗೆಗಳಲ್ಲಿ 10 (35%) ಜನ ಸಂಪೂರ್ಣವಾಗಿ ರಸಗೊಬ್ಬರಗಳಷ್ಟೇ ಮಾರಾಟ ಮಾಡಿದರೆ 12(46%) ಜನ ವರ್ತಕರು ರಸಗೊಬ್ಬರ ಹಾಗೂ ಕೀಟನಾಶಕ ಬೀಜಗಳನ್ನು ಮಾರಾಟ ಮಾಡುತ್ತಾರೆ, ಇನ್ನು ಉಳಿದ ನಾಲ್ಕು (15%) ಜನ ಬರೀ ಬೀಜ ಹಾಗೂ ಕೀಟನಾಶಕಗಳನ್ನು ಮಾರಾಟ ಮಾಡುತ್ತಾರೆ, ಇಲ್ಲಿ ಚಿಲ್ಲರೆ ವ್ಯಾಪಾರಿಗಳ ಬಳಿ ರಸಗೊಬ್ಬರಗಳು ಮುಂಗಾರಿನಲ್ಲಿ ರಭಸದಿಂದ ಮಾರಾಟವಾಗುತ್ತದೆ. ಆದರೆ ಉಳಿದ ಋತುಮಾನದಲ್ಲಿ ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರಗಳು ಮಾರಾಟವಾಗುತ್ತದೆ. ನಾನು ಸಮೀಕ್ಷೆ ಮಾಡಿದ 10 ಜನ ರಸಗೊಬ್ಬರ ಚಿಲ್ಲರೆ ವ್ಯಾಪಾರಿಗಳಲ್ಲಿ 4 (40%) ಜನ ಎಲ್ಲ ಋತುಮಾನಗಳಲ್ಲಿ ದಾಸ್ತಾನು ಹೊಂದಿರುತ್ತಾರೆ. ಹಾಗೆಯೇ 3 (30%) ಜನ ವ್ಯಾಪಾರಿಗಳು ತಕ್ಷಣ ಕಂಪನಿಗೆ ಸಂಪರ್ಕಿಸಿ ಉಳಿದ ಋತುಮಾನಗಳಲ್ಲಿ ಬೇಕಾದ ದಾಸ್ತಾನನ್ನು ತರಿಸುತ್ತಾರೆ, ಉಳಿದ 3 (30%) ಜನ ವರ್ತಕರು ಬರಿ ಮುಂಗಾರುವಿನಲ್ಲಷ್ಟೇ ರಸಗೊಬ್ಬರ ಮಾರುತ್ತಾರೆ, ಉಳಿದಂತ ವೇಳೆಯಲ್ಲಿ ಬೀಜ ಹಾಗೂ ಕೀಟನಾಶಕಗಳನ್ನು ಮಾರುತ್ತಾರೆ ಆದರೆ ದಾಸ್ತಾನು ಎಷ್ಟು ಇರುತ್ತವೆ ಎಂದು ದಾಸ್ತಾನು ಮಾಡುವ ವ್ಯಾಪಾರಿಗಳ್ನನು ಕೇಳಿದಾಗ ದಾಸ್ತಾನು ಮಾಡುವ ವ್ಯಾಪಾರಿಗಳು ಇದಕ್ಕೆ ಉತ್ತರಿಸಲು ಹಿಂದು ಮುಂದು ನೋಡಿದರು ಆದರೆ ವಾರ್ಷಿಕವಾಗಿ 30 ರಿಂದ 40 ಟನ್‌ರಷ್ಟು ರಸಗೊಬ್ಬರಗಳನ್ನು ದಾಸ್ತಾನು ಮಾಡುವುದಾಗಿ ಹೇಳಿದರೂ ಆದರೆ ಈ ದಾಸ್ತಾನು ಮಾಡುವುದರಿಂದ ಅನದಿಕೃತ ಋತುಮಾನಗಳಲ್ಲಿ, ತೋಟಗಾರಿಕೆ ಹಾಗೂ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುವವರಿಗೆ ರಸಗೊಬ್ಬರ ಕೊಳ್ಳಲು ಅನೂಕೂಲಕರ ವಾತಾವರಣವನ್ನು ನಿರ್ಮಿಸುತ್ತದೆಂದು ವರ್ತಕರ ಅಭಿಪ್ರಾಯ ಮತ್ತೊಬ್ಬ ವರ್ತಕರನ್ನು ಪ್ರಶ್ನಿಸಿದಾಗ 400 ಟನ್ ರಸಗೊಬ್ಬರ ಗಳನ್ನು ದಾಸ್ತಾನು ಮಾಡುವುದಾಗಿ ಹೇಳಿದರು,

ಹೀಗೆ ಒಬ್ಬೊಬ್ಬ ವರ್ತಕರು ಒಂದೊಂದು ರೀತಿಯಲ್ಲಿ ದಾಸ್ತಾನಿನ ಬಗ್ಗೆ ಉತ್ತರಿಸಿದರು ನಾನು ಅಧ್ಯಯನ ಮಾಡಿದ ಪ್ರಕಾರ ಬಹಳಷ್ಟು ಅಂಗಡಿ ಮಾಲೀಕರು ರಸಗೊಬ್ಬರಗಳಿಗೆ ಪ್ರತ್ಯೇಕ. ದಾಸ್ತಾನು ಮಳಿಗೆಗಳನ್ನು ಹೊಂದಿದ್ದಾರೆ. ಈ ದಾಸ್ತಾನು ಮಳಿಗೆಗಳಲ್ಲಿ 40 - 50 ಟನ್ ರಸಗೊಬ್ಬರಗಳನ್ನು ಸಂಗ್ರಹಿಸಿಬಹುದು. ಈ ರಸಗೊಬ್ಬರಗಳಿಗೆ ಇಲ್ಲಿ ಕೀಟಗಳ ಕಾಟವಿಲ್ಲದಿರುವುದರಿಂದ ದಾಸ್ತಾನನ್ನು ಸಂಗ್ರಹಿಸಿಡಲು ಹೆಚ್ಚು ಅನುಕೂಲಕರವಾಗಿದೆ. ಎಂದು ಹೇಳುತ್ತಾರೆ, ಆದರೆ ಇವು ಒಮ್ಮೊಮ್ಮೆ ಗುಣಮಟ್ಟ ಕೆಡುವುದು ಉಂಟು ಎಂದು ಹೇಳಲು ಹಿಂಜರಿತ್ತಾರೆ, ಯಾಕೆಂದರೆ ವಾತಾವರಣದಲ್ಲಿರುವ ಉಷ್ಣಾಂಶ ಹಾಗೂ ತೇವಾಂಶಗಳಿಂದಾಗಿ ರಸಗೊಬ್ಬರಗಳು ಅದರಲ್ಲೂ ಯೂರಿಯಾ ಮೆತ್ತಗಾಗುವುದುಂಟು. ಆದರೆ ದಾಸ್ತಾನು ಮಾಡುವುದು ಅನಧಿಕೃತ ಋತುಮಾನದಲ್ಲಿ, ಚೀಲದ ಮೇಲೆ ನಮೂದಿಸಿರುವ ಬೆಲೆಗಿಂತ

ಹೆಚ್ಚಾಗಿ ಮಾರಾಟ ಮಾಡುವುದಕ್ಕಾಗಿ ಎಂಬುದು ಸಂಶಯವಿಲ್ಲ, ಆದರೆ ಈ ವಿಷಯವನ್ನು ಅಲ್ಲೆ ಇದ್ದ ಗ್ರಾಹಕರು ವರ್ತಕರು ಯಾವುದೋ ಕೆಲಸಕ್ಕೆ ಅಂಗಡಿಯಿಂದ ಆಚೆ ಹೋದಾಗ ಹೇಳಿದರು. ಏಕೆಂದರೆ ಕೃಷಿ ಇಲಾಖೆ ತೆರಿಗೆ ಸಹಿತ ಚಿಲ್ಲರೆ ಬೆಲೆಯನ್ನು ನಿಗದಿಪಡಿಸುತ್ತದೆ ಆ ನಿಗದಿತ ಚಿಲ್ಲರೆ ಬೆಲೆಗೆ ರಸಗೊಬ್ಬರಗಳನ್ನು ಮಾರಾಟ ಮಾಡಬೇಕು. ಆದರೆ ಅನಧಿಕೃತ ಋತುಮಾನಗಳಲ್ಲಿ ಗ್ರಾಹಕರು ಹೆಚ್ಚಾದಾಗ, ಚಿಲ್ಲರೆ ಬೆಲೆಯನ್ನು ಹೆಚ್ಚಿಸಿ ರೈತರಿಗೆ ಮಾರಾಟ ಮಾಡುತ್ತಾರೆ ಎಂಬ ಅಂಶ ಬೆಳಕಿಗೆ ಬಂದಿತು. ಆದರೆ ಇದನ್ನು ವರ್ತಕರು ಅಲ್ಲಗೆಳೆಯುತ್ತಾರೆ, ನಾವು ಚಿಲ್ಲರೆ ಬೆಲೆಯಲ್ಲಿ 50 ಕೆ.ಜಿ. ಚೀಲಕ್ಕೆ 5 ರಿಂದ 10 ರೂಪಾಯಿಗಳನ್ನು ಹೆಚ್ಚಿಸಬಹುದು ಆದರೆ ಇದು ದಾಸ್ತಾನಿನ ವೆಚ್ಚ ಯಾಕೆಂದರೆ ರಸಗೊಬ್ಬರಗಳ ಬಾರಿ ಮಟ್ಟದಲ್ಲಿ ದಾಸ್ತಾನು ಮಾಡಿದರೆ ಅವುಗಳ ನಿರ್ವಹಣೆ ವೆಚ್ಚವನ್ನು ನಾವು ವಾಪಸ್ಸು ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ದಾಸ್ತಾನು ವೆಚ್ಚವನ್ನು ವಾಪಸ್ಸು ಪಡೆಯಲು ಹೆಚ್ಚಿನ ಬೆಲೆಗೆ ಮಾರಬೇಕಾಗುತ್ತದೆಂದು ವರ್ತಕರ ಸಮಜಾಯಿಷಿ/ ಕೃಷಿ ಇಲಾಖೆಯಿಂದ ಬಂದಿರುವ ಅಧಿಕಾರಿಯೆಂದು ತಿಳಿದು ಎಲ್ಲಿಲ್ಲದ ಮರ್ಯಾದೆ ನೀಡಿದರು. ಯಾಕೆಂದರೆ ಕೃಷಿ ಇಲಾಖೆ ರಸಗೊಬ್ಬರಗಳಿಗೆ ತೆರಿಗೆಯು ಸೇರಿ ಬೆಲೆ ನಿಗಧಿ ಮಾಡಿ ಆ ಬೆಲೆಗೆ ರೈತರಿಗೆ ಅಥವಾ ಗ್ರಾಹಕರಿಗೆ ರಸಗೊಬ್ಬರಗಳನ್ನು ಮಾರಾಟ ಮಾಡಬೇಕೆಂಬುದನ್ನು ಪರೀಕ್ಷಿಸಲು ಬಂದ ಅಧಿಕಾರಿಯೆಂದು ಭಾವಿಸಿಕೊಂಡರು. ಏಕೆಂದರೆ ಕೃಷಿ ಇಲಾಖೆ ನಿಗದಿಪಡಿಸಿದ ಬೆಲೆಗೆ ರಸಗೊಬ್ಬರಗಳನ್ನು ಮಾರಾಟ ಮಾಡದೇ ಹೋದರೆ ಅದು ಅಪರಾಧವಾಗುತ್ತದೆ. ಆದ್ದರಿಂದ ವರ್ತಕರು ಕೃಷಿ ಇಲಾಖೆ ಅಧಿಕಾರಿಗಳಿಗೆ ಭಯ ಬೀಳುವುದು. ಅವರಿಗೆ ಮಾಮೂಲಿ ಹಣ ಕೊಟ್ಟು ತಮ್ಮ ಅನುಕೂಲಕ್ಕೆ ತಕ್ಕಂತೆ ವರ್ತಿಸಬೇಕೆಂದು ಇಷ್ಟಪಡುತ್ತಾರೆ. ಏಕೆಂದರೆ ವರ್ಷಕ್ಕೆ 100 ರಾರು ಟನ್ ರಸಗೊಬ್ಬರಗಳ ವಹಿವಾಟು, ಇದೆ ಒಂದು ಚೀಲಕ್ಕೆ ರೂ. 5 ಜಾಸ್ತಿ ತೆಗೆದುಕೊಂಡರು ವರ್ಷಕ್ಕೆ ಬಾರಿ ಲಾಭವನ್ನೇ ಮಾಡಿಕೊಳ್ಳಬಹುದು. ಇದು ರೈತರಿಗೂ ಸರಿಯಾಗಿ ತಿಳಿದಿರುವುದಿಲ್ಲ. ಆದ್ದರಿಂದ ಮಾರುಕಟ್ಟೆಯಲ್ಲಿ ಎಲ್ಲ ಪದಾರ್ಥಗಳ ಬೆಲೆ ಏರುತ್ತಿದೆ. ಆದ್ದರಿಂದ ರಸಗೊಬ್ಬರ ಬೆಲೆಯೂ ಸಹ ಏರುತ್ತದೆ. ಎಂದು ಗ್ರಾಹಕರಿಗೆ ನಂಬಿಸಿ ಚೀಲದ ಮೇಲೆ ನಮೂದಿಸಿದ ಬೆಲೆಗಿಂತ ಹೆಚ್ಚಿನಬೆಲೆಗೆ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ. ಆದೆರ ಇದರಿಂದ ಸ್ಪಷ್ಟವಾಗಿ ನಮಗೆ ತಿಳಿಯುವುದೆಂದರೆ, ನಾವು ತನಿಖಾ ಅಧಿಕಾರಿಗಳಾಗಿ ಅಂಗಡಿಗಳಿಗೆ ಹೋದಾಗ, ಆದರೆ ಸಾಮಾನ್ಯವಾಗಿ ವರ್ತಕರು ತಮ್ಮ ವ್ಯಾಪಾರದ ವಹಿವಾಟಿನ ಬಗ್ಗೆ ಋಣಾತ್ಮಕವಾಗಿಯೇ ಮಾತನಾಡುತ್ತಾರೆ. ಆದ್ದರಿಂದ ರಸಗೊಬ್ಬರಗಳ ದಾಸ್ತಾನು ಮಾಡುವವರು ಲಾಭವನ್ನು ಗುರಿಯಾಗಿಟ್ಟುಕೊಂಡು ದಾಸ್ತಾನು ಮಾಡುತ್ತಾರೆ. ಆದರೆ ಈ ದಾಸ್ತಾನು ಬಹಳ ಬೇಗ ಕರಗಿ ಹೋಗಿ ಬಿಡುತ್ತದೆ. ಆಗ ದಾಸ್ತಾನನ್ನು ನಿರಂತರವಾಗಿ ಮಾಡಲು ಕೆಲವು ವರ್ತಕರು ಇಚ್ಚಿಸುತ್ತಾರೆ, ಹೀಗೆ ನಿರಂತರವಾಗಿ ದಾಸ್ತಾನನ್ನು ನಾನು ಸಮೀಕ್ಷೆ, ಮಾಡಿದ ವರ್ತಕರಲ್ಲಿ 4 ಜನ ಮಾಡುತ್ತಿದ್ದಾರೆ. ಇಲ್ಲಿ ಮತ್ತೊಂದು ಅಂಶ ಗಮನಿಸಬೇಕಾಗುತ್ತದೆ. ದಾಸ್ತಾನು ಇಲ್ಲದೆ ಹೋದರೆ ಎಲ್ಲ ಋತುಮಾನಗಳಲ್ಲಿ ನಿರಂತರರಾಗಿ ನುರಿಯುವ

ಹಣಕ್ಕೆ ಅಡಚಣೆಯುಂಟಾಗುತ್ತದೆ. ಆದ್ದರಿಂದ ಈ ವರ್ತಕರು ದಾಸ್ತಾನು ಇಲ್ಲದೆ ಇರುವುದಿಲ್ಲ. ದಾಸ್ತಾನು ನಮಗೆ ತಿಳಿದಿರುವಂತೆ ಅನೇಕ, ವ್ಯಾಪಾರ ವಹಿವಾಟನ್ನು ಮಾರಾಟವನ್ನು ನಿರಂತರವಾಗಿ ಇಡಲು ರೂಪಿಸಿರುವ ಒಂದು ತಂತ್ರ, ಆದರೆ ಬಹಳಷ್ಟು ರೈತರು ರಸಗೊಬ್ಬರಗಳ ದಾಸ್ತಾನನ್ನು ಮಾಡದಿರಲು ಕಾರಣ. ಇವರು ಬೀಜ ಹಾಗೂ ಕೀಟನಾಶಕಗಳನ್ನು ಮುಖ್ಯ ವ್ಯಾಪಾರದ ಅಂಶವನ್ನಾಗಿ ಪರಿಗಣಿಸಿದ್ದಾರೆ, ಒಬ್ಬ ವರ್ತಕರು ರಸಗೊಬ್ಬರಗಳ ಜೊತೆ ಕೀಟನಾಶಕ ಹಾಗೂ ಬೀಜಗಳನ್ನು ಮಾರಾಟ ಮಾಡುತ್ತಾರೆ. ಕೀಟನಾಶಕ, ಬೀಜಗಳಲು ಖಾಸಗಿ ಕಂಪನಿಗಳಾಗಿರುವುದರಿಂದ ಇವುಗಳ ಬೆಲೆಯು ಜಾಸ್ತಿ ಇರುತ್ತದೆ. ಹಾಗೂ ಇವುಗಳ ಮೇಲೆ ವರ್ತಕರಿಗೆ ಸಿಗುವ ಕಮೀಷನ್ ಸಹ ಜಾಸ್ತಿ ಇರುತ್ತದೆ. ಹೀಗೆ ಕಮೀಷನ್ ಕೀಟನಾಶಕ ಹಾಗೂ ಬೀಜಗಳ ಮೇಲೆ ಜಾಸ್ತಿ ಇರುವುದರಿಂದ ಬಹಳಷ್ಟು ವಿತರಕರು ರಸಗೊಬ್ಬರಗಳಿಗೆ ಬದಲಿಯಾಗಿ ಕೀಟನಾಶಕ ಹಾಗೂ ಬೀಜಗಳನ್ನು ಮಾರಾಟ ಮಾಡುತ್ತಾರೆ, ಈ ಬೀಜಗಳು ಕೀಟನಾಶಕಗಳು ಹೊಸ ಹೊಸ ಕಂಪನಿಗಳು ಮಾರುಕಟ್ಟೆಗೆ ಬಿಡುಗಡೆ ಮಾಡುವುದರಿಂದ ರೈತರು ಹೊಸ ಬೀಜ ಕಂಪನಿಗಳಿಗೆ ಮುಗಿ ಬೀಳುತ್ತಾರೆ, ಹಾಗೂ ವರ್ತಕರಿಗೂ ಈ ಉತ್ಪನ್ನಗಳು ಅಧಿಕ ಲಾಭವನ್ನು ತರುತ್ತವೆ. ಆದ್ದರಿಂದ ರೈತರು ಎಲ್ಲ ಋತುಮಾನಗಳಲ್ಲಿ ತರಕಾರಿ ಬೆಳೆಗಳನ್ನು ಬೆಳೆಯುವುದರಿಂದ ತರಕಾರಿಬೀಜಗಳಿಗೆ ಹೆಚ್ಚು ಬೇಡಿಕೆ ಇದೆ, ಹೀಗೆ ತರಕಾರಿ ಬೀಜಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ರಸಗೊಬ್ಬರಗಳಿಗಿಂತ ತರಕಾರಿಬೀಜಗಳ ಮಾರಾಟ ಹೆಚ್ಚು ಲಾಭದಾಯಕವೆನ್ನುವುದು ವರ್ತಕರ ಅಭಿಪ್ರಾಯ. ರಸಗೊಬ್ಬರಗಳು ಬೆಲೆಯನ್ನು ಸರಕಾರ ನಿಯಂತ್ರಿಸುವುದರಿಂದ ಇಲ್ಲಿ ಲಾಭ ಮಾಡಲು ವರ್ತಕರಿಗೆ ಅನೇಕ ಅಡಚಡಣೆಗಳು ಎದುರಾಗುತ್ತವೆ. ಆದ್ದರಿಂದ ರಸಗೊಬ್ಬರಗಳ ಸಾಗಾಣಿಕೆಯಲ್ಲಿ ಅನೇಕ ಅಡಚಣೆಗಳನ್ನು ನಾವು ಕಾಣುವುದರಿಂದ, ಕಂಪನಿಗಳು, ಬೆಂಗಳೂರಿನಿಂದ ರಸಗೊಬ್ಬರಗಳನ್ನು ಸಾಗಾಣಿಕೆ ಮಾಡಬೇಕಾಗಿರುವುದರಿಂದ ಇವು ಸ್ವಲ್ಪ ಕಷ್ಟಕರವಾದ ಕ್ರಿಯೆ ಆದರೆ ಬೀಜಗಳು ಕೀಟನಾಶಕಗಳನ್ನ ಮಳಿಗೆಗಳಿಗೆ ಕಂಪನಿಗಳು ನೇರವಾಗಿ ಕೊಡುವುದರಿಂದ ಕೀಟನಾಶಕ ಬೀಜಗಳಲ್ಲಿ ಹೆಚ್ಚು ಲಾಭವಿರುತ್ತದೆಂದು ವರ್ತಕರ ಅಭಿಪ್ರಾಯ. ಇಲ್ಲಿ ರೈತರಿಗೆ ದಿನನಿತ್ಯ ಕೃಷಿ ಪರಿಕರಗಳನ್ನು ಸರಬರಾಜು ಮಾಡಿ ಲಾಭ ಗಳಿಸುವುದು ಮುಖ್ಯವಾದದ್ದು. ರಸಗೊಬ್ಬರಗಳು ಋತುಮಾನ ಅವಲಂಬಿ ಎಂಬುದು ಈಗಾಗಲೆ ತಿಳಿದಿದೆ. ಆದರೆ ಬೀಜಗಳು ಅದರಲ್ಲೂ ತರಕಾರಿ ಬೀಜಗಳು ಎಲ್ಲ ಋತುಮಾನದಲ್ಲೂ ಬೇಡಿಕೆ ಇರುತ್ತದೆಂಬುದನ್ನು ವರ್ತಕರು ಹೇಳಿದರು. ಆದ್ದರಿಂದರಸಗೊಬ್ಬರಗಳನ್ನು ಮಾರಾಟ ಮಾಡುವ 10 ಮಳಿಗೆಗಳು ಇವೆ, ಇದು ಸ್ಪಷ್ಟಪಡಿಸುವುದೇನೆಂದರೆ ವರ್ತಕರು ಕೃಷಿ ಸಂಪನ್ಮೂಲಗಳನ್ನು ವೈವಿಧ್ಯೀಕರಿಸಬೇಕಾಗಿರುವುದು ಹೀಗೆ ವೈವಿಧ್ಯಕರಿಸುವುದರಿಂದ ಒಂದರಲ್ಲಿ ನಷ್ಟವಾದರೆ ಮತ್ತೊಂದರಲ್ಲಿ ಲಾಭವಾಗುತ್ತದೆ. ಹೀಗೆ ಲಾಭ ಮಾಡಲು ಮಾರಟಗಾರರು ಬರಿ ರಸಗೊಬ್ಬರಗಳ ಮಾರಾಟಕಷ್ಟೇ ಸೀಮಿತವಾಗಿಲ್ಲ ಇವರು ಬೀಜ, ಕೀಟನಾಶಕ ಇತ್ಯಾದಿಗಳನ್ನು ಸಹ ಮಾರಾಟ ಮಾಡುತ್ತಾರೆ, ರಸಗೊಬ್ಬರಗಳ

ಮಾರಾಟದಿಂದ ಲಾಭವಿದೆ ಎನ್ನುವವರು 4 (40%) ಜನ ಆದರೆ ಇದರಿಂದಲಾಭವಿಲ್ಲ ಎನ್ನುವವರು 6 (60%) ಜನ, ಆದ್ದರಿಂದ ಅಧಿಕ ಪ್ರಮಾಣದ ವರ್ತಕರು ಏಕ ಉತ್ಪನ್ನ ಮಾರಾಟ ಮಾಡುವ ಬಗ್ಗೆ ಆಸ್ಥೆ ತೋರಿಸುವುದಿಲ್ಲ. ಬಹು ಉತ್ಪನ್ನ ಮಾರಾಟದ ಬಗ್ಗೆ ಆಸ್ಥೆ ವಹಿಸುತ್ತಾರೆ, ಆದ್ದರಿಂದ ಇವರು ತಮ್ಮ ವ್ಯಾಪಾರ, ವ್ಯವಹಾರವನ್ನು ವೈವಿಧ್ಯೀಕರಿಸಿಕೊಂಡಿದ್ದಾರೆ ಆದ್ದರಿಂದ ಬರಿ ರಸೊಗೊಬ್ಬರ ಮಾರಾಟಕ್ಕೆ ಸೀಮಿತಗೊಳಿಸಿಕೊಂಡಿರುವ ಮಾರಾಟಗಾರರ ಪ್ರಮಾಣ ಕಡಿಮೆಯಾಗುತ್ತ ಹೋಗುತ್ತಿದೆ. 15-20 ವರ್ಷಗಳ ಹಿಂದೆ ಆಧುನಿಕ ಬೇಸಾಯದ ಪದ್ಧತಿಗಳು ಇರಲಿಲ್ಲ. ಜೊತೆಗೆ ಸುಧಾರಿತ ಬೀಜಗಳ ಕೀಟನಾಶಕಗಳು ಸಹ ಮಾರುಕಟ್ಟೆಗೆ ಬಂದಿರಲಿಲ್ಲ. ಕೊಳವೆ ಬಾವಿಗಳ ನೀರಾವರಿ ಸಹ ಕಡಿಮೆ ಪ್ರಮಾಣದಲ್ಲಿತ್ತು. ರೈತರು ತಮ್ಮ ಉಪಯೋಗಕ್ಕೆ ಮಾತ್ರಬೆಳೆದುಕೊಳ್ಳುತ್ತಿದ್ದರು. ಕೃಷಿ ವಾಣಿಜ್ಯೀಕರಣ ಗೊಂಡಿರಲಿಲ್ಲ. ಇಂತಹ ಸಂದರ್ಭವಿದ್ದಾಗ ವರ್ತಕರಿಗೆ ಹೆಚ್ಚು ಗ್ರಾಹಕರಿರಲಿಲ್ಲ. ಆದ್ದರಿಂದ ಏಕಉತ್ಪನ್ನ ಮಾರಾಟ ಮಳಿಗೆಗಳು ಬಹಳಷ್ಟು ಇದ್ದವು, ಆಗ ಬಂದಷ್ಟು ಲಾಭವನ್ನು ವರ್ತಕರು ಪಡೆಯುತ್ತಿದ್ದರೂ, ಇವರ ಜೀವದ ಶೈಲಿಯೂ ಸಹ ಮಧ್ಯಮವರ್ಗದ ಜೀವನ ಶೈಲಿಯಾಗಿತ್ತು. ಆದರೆ ಈ ವರ್ತಕರ ಜೀವನ ಶೈಲಿ, ಬದಲಾಗಿದೆ. ಹೆಚ್ಚು ಹಣ ಮಾಡಬೇಕೆಂಬ ಹಂಬಲ ಜಾಸ್ತಿಯಾಗಿದೆ ಇದರಿಂದಾಗಿ ಈ ವರ್ತಕರು ತಮ್ಮ ವ್ಯಾಪಾರ ವಹಿವಾಟನ್ನು ನಾವಿನ್ಯಗೊಳಿಸಿ ಕೊಂಡಿದ್ದಾರೆ. ಕಳೆದ 15-20 ವರ್ಷಗಳಿಂದ ಕೃಷಿ ಸಂಪನ್ಮೂಲ ಮಾರಾಟ ಮಾಡುವ ವರ್ತಕ ವರ್ಗಗಳಲ್ಲಿ ಬದಲಾವಣೆಯ ಗಾಳಿ ಬೀಸಿದೆ. ಇವರು ಬರಿ ರಸಗೊಬ್ಬರಗಳಿಗಷ್ಟೆ ಸೀಮಿತವಾಗಿಲ್ಲ. ಕೊಳವೆ ಬಾವಿಗಳ ನೀರಾವರಿಡಿಯಲ್ಲಿ ಹೆಚ್ಚು ಹೆಚ್ಚು ಭೂಮಿ ವ್ಯಾಪಿಸುತ್ತಿದೆ. ಹೀಗೆ ಹೆಚ್ಚು ಹೆಚ್ಚು ಭೂಮಿ ವ್ಯಾಪಿಸುತ್ತಿರುವುದರಿಂದ ಹೈಬ್ರಿಡ್ ಬೀಜಗಳಿಗೆ, ಕೀಟನಾಶಕಗಳಿಗೆ ಹೆಚ್ಚಾಗಿ ಬೇಡಿಕೆ ಬೆಳೆಯುತ್ತಿದೆ. ಈ ಬೇಡಿಕೆಯನ್ನು ಪೂರೈಸಲು ವರ್ತಕರು ತಯಾರಾಗಿದ್ದಾರೆ. ಹೀಗೆ ತಯಾರಾಗಿರುವುದರಿಂದ ವರ್ತಕರು ತಮ್ಮ ವ್ಯಾಪಾರವನ್ನು ವೈವಿಧ್ಯೀಕರಿಸಿದ್ದಾರೆ, ಹೀಗೆ ವ್ಯಾಪಾರ ವೈವಿಧ್ಯೀಕರಣವೂ ಸಹ ವರ್ತಕರಿಗೆ ಲಾಭ ತರುತ್ತಿದೆ.

ಇಲ್ಲಿ ರೈತರು ಅಂದರೆ ಗ್ರಾಹಕರು ಮತ್ತು ವರ್ತಕರ ನಡುವೆ ವ್ಯಾಪಾರ ಸಂಬಂಧಗಳ ಜೊತೆಗೆ ವೈಯುಕ್ತಿಕ ಸ್ನೇಹವೂ ಇದೆ. ರೈತರು ಸಾಲ ಪಡೆಯಲು ವರ್ತಕರ ಜೊತೆ ಸಲುಗೆಯಿಂದ ಇರುತ್ತಾರೆ. ವರ್ತಕರು ಸಾಲ ಕೊಟ್ಟರೆ ಸಾಕು ಎಂಬ ಮನೋಭಾವವನ್ನು ರೈತರು ಹೊಂದಿರುತ್ತಾರೆ. ವರ್ತಕರು ಸಾಲ ಕೊಡುವುದು ಅಷ್ಟೆ ಅನೇಕ ವ್ಯವಹಾರಿಕ ಮಾತುಗಳನ್ನಾಡಿ, ತಾವು ಸಾಲ ಕೊಡುವುದೆ ರೈತರ ಉದ್ದಾರ ಮಾಡುವುದಕ್ಕಾಗಿ ಎಂಬ ಮನೋಸ್ಥಿತಿಯನ್ನು ರೈತರಲ್ಲಿ ವ್ಯಾಪಾರಿಗಳು ಹುಟ್ಟು ಹಾಕುತ್ತಾರೆ. ರೈತರು ಅಷ್ಟೆ ನಮ್ಮ ಬಳಿಗೆ ಇಂತಹ ಕೀಟದ ಕಾಟ, ರೋಗದ ಕಾಟ ಅದಕ್ಕೆ ಯಾವ ಔಷದ ಸಿಂಪಡಿಸಬೇಕು ಎಂದು ವರ್ತಕರನ್ನು ಕೇಳುತ್ತಾರೆ, ಆಗ ವರ್ತಕರು ಹೇಳಿ, ಕೊಟ್ಟಿದ್ದೆ ಅವರ ಬೆಳೆಗಳಿಗೆ ಸಿದ್ಧ ಔಷಧ, ಆದ್ದರಿಂದ

ರೈತರು ಇಂತಹ ವೈಜ್ಞಾನಿಕ ಮಾಹಿತಿಗಳಿಗೆ ಕೃಷಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸುವುದು ಬಿಟ್ಟು, ವರ್ತಕರಿಂದಲೇ ಚಿಕಿತ್ಸೆಯ ಮಾಹಿತಿ ಪಡೆದು ಅವರಿಂದಲೇ ಗೊಬ್ಬರ, ಕೀಟನಾಶಕಗಳನ್ನು ಪಡೆಯುತ್ತಾರೆ, ವರ್ತಕರಿಗೂ ಇದೇ ಬೇಕಾಗಿರುವುದುರು ಇವರು ತಮ್ಮ ಬಳಿಯಲ್ಲಿ ದಾಸ್ತಾನಿರುವ ರಸಗೊಬ್ಬರ, ಕೀಟನಾಶಕವನ್ನು ಇದೇ ಸರಿಯಾದ ಔಷಧಿ ಎಂದು ನಂಬಿಕೆ ಹುಟ್ಟಿಸಿ ರೈತರಿಗೆ ಮಾರಾಟ ಮಾಡುತ್ತಾರೆ, ಇದು ಬೆಳೆಗಳ ಮೇಲೆ ಪರಿಣಾಮ ಬೀರದೆ, ಬೆಳೆಗಳು ಸರಿಯಾದ ಇಳುವರಿ ಕೊಡದಿದ್ದರೆ, ರೈತರು ವರ್ತಕರಿಗೆ ದೂರು ನೀಡದರೆ, ಹಾರಿಕೆ ಉತ್ತರ ಕೊಟ್ಟು ನುಣಚಿ ಕೊಳ್ಳುತ್ತಾರೆ. ಆದ್ದರಿಂದ ರೈತರ ಸಲುಗೆ ಸ್ನೇಹ ಇತ್ಯಾದಿಗಳನ್ನು ವರ್ತಕರು ದುರುರಪಯೋಗ ಪಡಿಸಿಕೊಳ್ಳುವುದು ವಿಪುಲವಾಗಿದೆ. ಒಬ್ಬ ಕೃಷಿ ತಜ್ಞನ ಪಾತ್ರವನ್ನು ವರ್ತಕರೆ ವಹಿಸುವುದು ಎಷ್ಟರ ಮಟ್ಟಿಗೆ ಸಾಧು ಎಂಬುದು ಪ್ರಶ್ನಿಸಬೇಕಾಗುತ್ತದೆ. ಆದರೆ ರೈತರು ಈ ಮನೋಭಾವದಿಂದ ಹೊರಗೆ ಬಂದಿಲ್ಲ.

ರೈತರಿಗೆ ಸಾಲ ಕೊಡುವ ಪದ್ಧತಿಯನ್ನು ವರ್ತಕರು ಬಹಳ ಎಚ್ಚರಿಕೆಯಿಂದ ಬೆಳೆಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಸಾಲ ಕೊಡುತ್ತೇವೆ ಎಂದು 6 (60%) ಜನ ವರ್ತಕರು ಹೇಳಿದರು ಇನ್ನೂ 4 (40%) ಜನ ವರ್ತಕರು ಸಾಲ ಕೊಡುವುದಿಲ್ಲ ಎಂದು ಹೇಳಿದರು. ಇದು ಏನನ್ನು ಸೂಚಿಸುತ್ತದೆ ಎಂದರೆ ಅಧಿಕ ಪ್ರಮಾಣದ ವರ್ತಕರು ರೈತರಿಗೆ ಸಾಲವನ್ನು ರಸಗೊಬ್ಬರ ಕೀಟನಾಶಕ ಹಾಗೂ ಬೀಜಗಳನ್ನು ಕೊಳ್ಳಲು ಕೊಡುತ್ತಾರೆ. ಆದರೆ ಅಧಿಕ ಪ್ರಮಾಣದ ವರ್ತಕರು ಅಂದರೆ 7 (70%) ಜನ ವರ್ತಕರು ಸಾಲ ಕೊಟ್ಟ ರೈತರು ಮತ್ತೆ ಸಾಲ ಮರುಪಾವತಿಸುವುದಿಲ್ಲ ಎಂದು ಹೇಳಿದರು. ಇದರಿಂದಾಗಿ ನಷ್ಟ ಅನುಭವಿಸ ಬೇಕಾಯಿತು. ಎಂದು ಸಂದರ್ಶನದ ಸಮಯದಲ್ಲಿ ಹೇಳಿದರು. ಆದರೆ ನಾನು ಸಂದರ್ಶಿಸಿದ ಎಲ್ಲ 10 ಜನ ವರ್ತಕರಲ್ಲಿ ಸರಿ ಸುಮಾರು ಶಾಶ್ವತ ಗ್ರಾಹಕರು ಜಾಸ್ತಿ ಇದ್ದಾರೆ, ಏನಿಲ್ಲವೆಂದರು ಒಬ್ಬ ವರ್ತಕನಿಗೆ 50 ರಿಂದ 60 ಜನ ಸಾಲ ಪಡೆಯುವ ಶಾಶ್ವತ ಗ್ರಾಹಕರು ಇರುತ್ತಾರೆ, ಆದರೆ ಈ ಶಾಶ್ವತ ಗ್ರಾಹಕರು ಉತ್ಪನ್ನಗಳ ಗುಣಮಟ್ಟ ಹಾಗೂ ಬೆಲೆಯಲ್ಲಿ ವರ್ತಕರಿಂದ ವಂಚನೆಗೆಗೊಳಗಾವುದು ಸಹಜವಾದದ್ದು. ಹೀಗೆ ವಂಚನೆಗೆ ಒಳಗಾದರು ಸಾಲವನ್ನು ಮರುಪಾವತಿಸುತ್ತಾರೆ, ಯಾಕೆಂದರೆ ಭವಿಷ್ಯತ್ತಿನಲ್ಲಿ ವರ್ತಕರು ಸಾಲ ಕೊಡುವುದಿಲ್ಲ ಎಂಬ ಭಯದಿಂದ ಅವರು ಮರು ಪಾವತಿಸುತ್ತಾರೆ, ಆದರೆ ವರ್ತಕರು ಉತ್ಪನ್ನಗಳನ್ನು ಹೆಚ್ಚಿನ ಬೆಲೆಗೆ ಮಾರಿರುತ್ತಾರೆ, ಹೀಗೆ ಸಾಲದ ವ್ಯವಹಾರದಿಂದ ವರ್ತಕರಿಗೆ ಹೆಚ್ಚಿನ ಹಣ ಹರಿದು ಬರುತ್ತದೆ. ಹೀಗೆ ಹೆಚ್ಚಿನ ಹಣ ಹರಿದು ಬರುವುದರಿಂದ ವರ್ತಕರು, ಗಿರಾಕಿಗಳನ್ನು ಹಿಡಿದಿಟ್ಟುಕೊಳ್ಳಲು ಸತತ ಪ್ರಯತ್ನ ಮಾಡುತ್ತಲೇ ಇರುತ್ತಾರೆ, ರೈತ ಅಷ್ಟೆ, ಸಮಯದಲ್ಲಿ ದುಡ್ಡಿಲ್ಲದಿದ್ದರೆ ಬೆಳೆಗಳು ಹಾಳಾಗುತ್ತವೆ. ಆದ್ದರಿಂದ ಆ ಸಮಯಕ್ಕೆ ಸರಿಯಾಗಿ ಯಾವುದೇ ಒಂದು ಔಷಧ ಸಿಂಪಡಿಸಿ ನೆಮ್ಮದಿ ನಿಟ್ಟುಸಿರು ಬಿಡಲು ವರ್ತಕರಿಗೆ ಹೆಚ್ಚು ಹಣ ಕೊಟ್ಟು ಸಾಲಗಾರರಾಗಿರುತ್ತಾರೆ. ಕೆಲವು ವರ್ತಕರು

ಹೇಳಿದ ಪ್ರಕಾರ ಸುಮಾರು ಶೇ. 80 ರಷ್ಟು ಸಾಲದ ರೂಪದಲ್ಲಿ ರೈತರಿಗೆ ಉತ್ಪನ್ನಗಳನ್ನು ಕೊಡುತಿದ್ದಾರೆ ಆದರೆ ಇವರು ಆಯಾ ಬೆಳೆಗಳು ಕಟಾವಾದ ಮೇಲೆ ಮಾರಿ ಅಲ್ಪ ಪ್ರಮಾಣದ ಹಣ ಕೊಡುತ್ತಾರೆ. ನಂತರ ಅಂಗಡಿಗಳ ಕಡೆಗೆ ಸುಳಿಯುವುದಿಲ್ಲ. ವರ್ಷಾನುಗಟ್ಟಲೆ ಸಾಲವನ್ನು ಉಳಿಸಿಕೊಂಡು ಬಂದು ಕೊನೆಗೆ ಮುಳುಗಿಸಿ ಬಿಡುತ್ತಾರೆ. ಹೀಗೆ ನಾನು ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಂಡಿದ್ದೇನೆ ಎಂದು ಹೇಳಿದ. ಮತ್ತೊಬ್ಬ ವರ್ತಕ ಈ ರಸಗೊಬ್ಬರ ಕೀಟನಾಶಕ ಬೀಜಗಳ ಮಾರಾಟದ ವ್ಯಾಪಾರ ಅಂತಹ ಲಾಭದಾಯಕ ವ್ಯಾಪಾರವಲ್ಲವಾಗಿದೆ. 15 -20 ವರ್ಷಗಳ ಹಿಂದೆ ಕೇವಲ 5-6 ಅಂಗಡಿಗಳು ಇದ್ದವು. ಈಗ 26 ಕ್ಕಿಂತ ಹೆಚ್ಚು ಅಂಗಡಿಗಳಾಗಿವೆ. ಆದ್ದರಿಂದ ಈ ವ್ಯಾಪಾರದಲ್ಲಿ ಸ್ಪರ್ಧೆ ಎದುರಿಸಬೇಕಾಗಿದೆ. ಹೀಗೆ ಸ್ಪರ್ಧೆ ಎದುರಿಸಲು ನಮ್ಮ ಕಮೀಷನ್ ನಲ್ಲಿ ಒಂದು ಚೀಲದ ರಸಗೊಬ್ಬರದ ಮೇಲೆ 2 ಮೂರು ರೂಪಾಯಿ ಕಡಿತಗೊಳಿಸಿ ನಮ್ಮ ಕಮೀಷನ್ ಪಡೆದುಕೊಂಡು ರೈತರಿಗೆ ಹತ್ತಾರು ಮೂಟೆಗಳನ್ನು ಕಡಿಮೆ ಬೆಲೆಗೆ ಕೊಡುತ್ತೇವೆ. ಹೀಗೆ ಕಡಿಮೆ ಬೆಲೆಗೆ ಕೊಡುವುದರಿಂದ ಗ್ರಾಹಕರು ಆಕರ್ಷಿತರಾಗಿ ಈ ಕಡೆ ಬರುತ್ತಾರೆ. ಯೂರಿಯ ಬೆಲೆ ಪ್ರತಿಕ್ವಿಂಟಾಲ್ ಗೆ ತೆರಿಗೆಯೂ ಸೇರಿ 257.16 ರೂಪಾಯಿ ಹಾಗೆಯೇ ಡಿ.ಎ.ಪಿ. ತೆರಿಗೆಯೂ ಸೇರಿ 486.20 ರೂಪಾಯಿಗಳು, ಕಾಂಪ್ಲೆಕ್ಸ್ ರಸಗೊಬ್ಬರಗಳು ತೆರಿಗೆಯೂ ಸೇರಿ ರೂ. 350 ರಿಂದ ಹಿಡಿದು ರೂ. 450 ರೂಗಳವರೆಗೂ ಇದೆ. ಹೀಗೆ ರಸಗೊಬ್ಬರಗಳ ಬೆಲೆ ಇರಬೇಕಾದರೆ ನಮಗೆ ಒಂದು ಮೂಟೆಗೆ ಸಿಗುವುದು 6 ರಿಂದ ರೂ. 7 ಇದರಲ್ಲಿ ರೂ. 2-3 ರೂ. ಬಿಟ್ಟುಕೊಟ್ಟು ಮಾರಾಟ ಮಾಡಲಾಗುತ್ತದೆ. ಆದ್ದರಿಂದ ಎರಡು ಮೂರು ಫರ್ಟಿಲೈಸರ್ಸ್ ಅಂಗಡಿಗಳು ಬಿಟ್ಟರೆ ಉಳಿದ ಅಂಗಡಿಗಳಿಗೆ ಗ್ರಾಹಕರು ಅಷ್ಟಾಗಿ ಇರುವುದಿಲ್ಲ. ಪ್ರಮುಖ ರಸಗೊಬ್ಬರಗಳ ಮಾರಾಟಗಾರರು ಮುಖ್ಯವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರಾಧಾನ್ಯತೆ ಪಡೆದ ಮಾರಾಟಗಾರರು, ಇವರ ಪ್ರಕಾರ ಇವರು ಚೀಲದ ಮೇಲೆ ನಮೂದಿಸಿದಿಕ್ಕಿಂತ ಕಡಿಮೆ ಬೆಲೆಯಲ್ಲಿ ರಸಗೊಬ್ಬರಗಳನ್ನು ಮಾರಾಟ ಮಾಡುವುದು ಸಾಲಗಾರನ್ನು ಹಿಡಿದಿಟ್ಟುಕೊಳ್ಳುವುದು ಹಾಗೂ ಸಾಲಗಾರರು ಅರೆಬರೆಯಾಗಿ ಸಾಲ ಪಾವತಿಸಿದರು ಮಂದಿನ ಋತುಮಾನದಲ್ಲಿ ಅವರು ಸಾಲ ಕೇಳಲು ಬಂದರೆ ಸಾಲ ಕೊಟ್ಟ ಹಣವಿದ್ದಾಗ ಉಳಿದ ಸಾಲ ತೀರಿಸು ಎಂದು ಹೇಳುವುದು. ಇವರ ವರ್ಷಕ್ಕೆ 60 ರಿಂದ 70 ಟನ್ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ. ಇವರ ವ್ಯವಹಾರ 50 ಲಕ್ಷ ರೂಪಾಯಿಯ ವಹಿವಾಟು ಇದರಲ್ಲಿ ಶೇ. 5 ರಷ್ಟು ಕಮೀಷನ್ ಎಂದು ಭಾವಿಸಿದರು, ಇವರ ವಹಿವಾಟು ನೋಡಿದರೆ ವರ್ಷಕ್ಕೆ ರಸಗೊಬ್ಬರಗಳ ಮಾರಾಟದಿಂದ 2.5 ಲಕ್ಷಕ್ಕೂ ಕಡಿಮೆ ಇಲ್ಲದೆ ಲಾಭ ಬರುತ್ತದೆ, ಆದರೆ ಇದರಲ್ಲಿ ಸಾಲ ಇನ್ನಿತರ ಖರ್ಚುಗಳು ಕಳೆದು, ರಸಗೊಬ್ಬರ ಮಾರಾಟದಿಂದ ವರ್ಷಕ್ಕೆ ಲಕ್ಷ ರೂಪಾಯಿ ಆದಾಯವಿದೆ, ಆದರೆ ವ್ಯಾಪಾರಿಗಳು ಹೇಳುವುದು ಇದು ದೈನಂದಿನ ಜೀವನ ನಡೆಸಲು ಸಾಕಾಗುತ್ತದೆ. ಯಾಕೆಂದರೆ ಅವರಿಗೆ ಹೊಡೆತ ಬೀಳುವುದೆ ಸಾಲ ಸರಿಯಾಗಿ ಮರುಪಾವತಿಸದಿರುವುದರಿಂದ. ಆದ್ದರಿಂದ ಕೋಲಾರ ನಗರದಲ್ಲಿ ಮೂವರು ವ್ಯಾಪಾರಿಗಳು ರಸಗೊಬ್ಬರ ಮಾರಾಟದಲ್ಲಿ ಮುಂಚೂಣಿಯಲ್ಲಿರುವವರು ಇವರು ಅನೇಕ ಮಾರುಕಟ್ಟೆಯ ಕಾರ್ಯತಂತ್ರಗಳನ್ನು ಉಪಯೋಗಿಸುತ್ತಾರೆ, ರೈತರು ಬಂದರೆ ಅವರ ಸ್ನೇಹ ಬೆಳೆಸಿ ಅವರನ್ನು ಕಾಯಂ ಗಿರಾಕಿಯಾಗುವಂತೆ ಮಾಡಿಕೊಳ್ಳುತ್ತಾರೆ. ಈ ಮೂರು ಅಂಗಡಿಗಳ ವಹಿವಾಟು

ರೂ.30 ಲಕ್ಷಗಳಿಗೂ ಮೀರುತ್ತದೆ. ಉಳಿದಂತೆ ಅಂಗಡಿಗಳ ವಹಿವಾಟು ವರ್ಷಕ್ಕೆ 2 ಲಕ್ಷದಿಂದ ಹಿಡಿದು 7 ಲಕ್ಷಗಳವರೆಗೂ ಇದೆ, ಇದು ನಾನು ಸಮೀಕ್ಷೆ ಮಾಡಿದಾಗ ತಿಳಿದ ಅನುಭವ. ಆದ್ದರಿಂದ ಚಿಲ್ಲರೆ ರಸಗೊಬ್ಬರ ವ್ಯಾಪಾರಿಗಳು ಬೆಂಗಳೂರಿನಿಂದ ರಸಗೊಬ್ಬರಗಳನ್ನು ಕೋಲಾರಕ್ಕೆ ಕಂಪನಿಯ ವೆಚ್ಚದಲ್ಲಿ ಸಾಗಾಣಿಕೆ ಮಾಡಿ ಇವನ್ನು ದಾಸ್ತಾನು ಮಳಿಗೆಗಳಲ್ಲಿ ಇಟ್ಟು, ಗಿರಾಕಿಗಳಿಗೆ ಚೀಲದ ಮೇಲೆ ನಮೂದಿಸಿದ ಬೆಲೆಗಳಿಗಿಂತ ಜಾಸ್ತಿ ಮಾರಾಟ ಮಾಡುವಲ್ಲಿ ಮೂವರು ವ್ಯಾಪಾರಿಗಳು ಕರತಲಾ ಮಲಕ ಮಾಡಿಕೊಂಡಿದ್ದಾರೆ. ಏಕೆಂದರೆ ಇವರು ಹೇಳುವಂತೆ ಸಾಲಗಾರರು ಸಾಲ ಮರುಪಾರತಿ ಮಾಡದೆ ಇರುವುದು ಜಾಸ್ತಿ ಪ್ರಮಾಣದಲ್ಲೇನೂ ಇಲ್ಲ ಏಕೆಂದರೆ ಸಾಲ ಕೊಡುವಾಗ ಇವರು ಅವರಿಗೊಂದು ಸಣ್ಣ ಪುಸ್ತಕ ಕೊಟ್ಟು ಅದರಲ್ಲಿ ಉತ್ಪನ್ನಗಳ ಪ್ರಮಾಣ ಬೆಲೆ ಹಾಗೂ ಸಹಿಯನ್ನು ಪಡೆಯುತ್ತಾರೆ, ಆ ಪುಸ್ತಕವನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಳ್ಳುತ್ತಾರೆ, ನಂತರ ಸಾಲ ಹಿಂತಿರುಗಿಸಬೇಕಾದ ಅವಧಿಯನ್ನು ನಮೂದಿಸುತ್ತಾರೆ, ಇದಕ್ಕೆ ರಸೀತಿಯನೇನು ಸಹ ನೀಡುವುದಿಲ್ಲ. ಆದ್ದರಿಂದ ರೈತರು ಸಾಲ ಪಡೆದು ಬೆಳೆದು ಬಂದ ತಕ್ಷಣ ಮಾರಿ ಸಾಲ ಚುಕ್ತಾ ಮಾಡುತ್ತಾರೆ, ಇದನ್ನು ಅಲ್ಲಿಗೆ ಬಂದಿದ್ದ ರೈತನೊಬ್ಬನಿಂದ ಕೇಳಿ ತಿಳಿದುಕಂಡ ಅಂಶ. ಇಲ್ಲದೇ ಹೋದರೆ ವರ್ತಕರು ಮುಂದೆ ರೈತರು ಸಾಲ ಪಡೆಯಲು ಬಂದಾಗ, ಎರಡು ಬಾಬತ್ತಿನ ಹಣವನ್ನು ವಸೂಲು ಮಾಡುತ್ತಾರೆ, ಆದರು ಕಡಿಮೆ ಪ್ರಮಾಣದಲ್ಲಿ ಸಾಲ ಮರು ಪಡೆಯಲಾಗದ ಪ್ರಸಂಗವೂ ನಡೆಯುತ್ತದೆ. ಆದರೆ ರಸಗೊಬ್ಬರಗಳ ವ್ಯಾಪಾರ ಹೆಚ್ಚು ಲಾಭದಾಯಕವಾದದ್ದು, ಎಂಬುದರಲ್ಲಿ ಸಂಶಯವಿಲ್ಲ, ಕೋಲಾರ ಮಾರುಕಟ್ಟೆಯಲ್ಲಿ ಮೂರು ಚಿಲ್ಲರೆ ರಸಗೊಬ್ಬರ ವ್ಯಾಪಾರಿಗಳು ಸಿಂಹಪಾಲು ಪಡೆದಿದ್ದಾರೆ ಉಳಿದವರು ಗಿರಾಕಿಗಳನ್ನು ಆಕರ್ಷಿಸುವಲ್ಲಿ ಸೋತಿದ್ದಾರೆ, ಇದಕ್ಕೆ ಕಾರಣವೆಂದರೆ ಈ ಅಂಗಡಿಗಳಲ್ಲಿ ಕಳೆದ 7-8 ವರ್ಷಗಳಿಂದ ಪ್ರಾರಂಭವಾಗಿವೆ. ಈ ಮೂರು ಅಂಗಡಿಗಳಿಗೆ ಕನಿಷ್ಟ ಪಕ್ಷ 20 ವರ್ಷಗಳ ಚರಿತ್ರೆಯಿದೆ. ಚಿಲ್ಲರೆ ರಸಗೊಬ್ಬರ ಮಾರುಕಟ್ಟೆಯಲ್ಲಿ ಈ ಮೂವರು ವ್ಯಾಪಾರಿಗಳು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ, ಈ ಮೂವರು ವ್ಯಾಪಾರಿಗಳದೆ ಏಕಸ್ವಾಮ್ಯ ಈ ರೀತಿಯಾಗಿರುವಾಗ ಚಿಲ್ಲರೆ ರಸಗೊಬ್ಬರ ಮಾರುಕಟ್ಟೆಯಲ್ಲಿ ಅಲ್ಲಿನ ಉಳಿದ ವ್ಯಾಪಾರಿಗಳು ಸ್ಪರ್ಧೆ ನೀಡುವಲ್ಲಿ ಅಸಾಮರ್ಥ್ಯ ಹೊಂದಿದ್ದಾರೆ, ಆದ್ದರಿಂದ ರೈತರಿಗೂ ಗ್ರಾಹಕರಿಗೂ ಬ್ರಾಂಡ್ ಆಯ್ಕ ಇರುವುದರಿಂದ ರಸಗೊಬ್ಬರ ಕೊಳ್ಳಲು ಅಂಗಡಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ, ಹೀಗೆ ಆಯ್ಕೆ ಮಾಡಿಕೊಳ್ಳಲು ಈ ಮೂವರು ಸ್ಥಳೀಯ ಪತ್ರಿಕೆಗಳಲ್ಲಿ, ಸ್ಥಳೀಯ ಟಿ.ವಿ ವಾಹಿನಿಗಳಲ್ಲಿ ಜಾಹೀರಾತು ನೀಡುತ್ತಾರೆ, ಜಾಹೀರಾತು ಸ್ಥಳೀಯ ಪತ್ರಿಕೆಗಳಲ್ಲಿ ನೀಡುವುದರಿಂದ ಕಡಿಮೆ ದರ ಇದು ವರ್ತಕರಿಗೆ ತಗಲುತ್ತದೆ. ಆದ್ದರಿಂದ ಸುಮಾರು ಪ್ರಮಾಣದಲ್ಲಿ ವ್ಯಾಪಾರ ನಡೆಸುತ್ತಿರುವವರು ಸಹ ಈಗ ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತಿಗೆ ದಂಬಾಲು ಬಿದ್ದಿದ್ದಾರೆ ಆದ್ದರಿಂದ ಇದು ಈ ವರ್ತಕರ ಮಳಿಗೆಗಳ ಸಾಮಾಜಿಕ ಅಂತಸ್ತನ್ನು ಹೆಚ್ಚಿಸುತ್ತದೆ. ಹೀಗೆ ಸಾಮಾಜಿಕ ಅಂತಸ್ತು ಮಳಿಗೆಗೆ ಹೆಚ್ಚಾಗುವುದರಿಂದ ವಿಶ್ವಾಸರ್ಹತೆಯೂ ಹೆಚ್ಚಾಗುತ್ತದೆ. ಆದ್ದರಿಂದ ರೈತರು ಈ ಮಳಿಗೆಗಳಿಗೆ ಆಕರ್ಷಕರಾಗಿರುತ್ತಾರೆ. ವರ್ತಕರು ಸಹ ರೈತರಿಗೆ ಈ ಜಾಹಿರಾತಿನ ಪತ್ರಿಕೆ ಕೊಟ್ಟು ಇಷ್ಟಷ್ಟು ಜನಕ್ಕೆ ಇದನ್ನು ತೋರಿಸಿ, ಕರೆ ತರಲು ಹೇಳುತ್ತಾರೆ. ರೈತರು ಇದಕ್ಕೆ ಸಮ್ಮತಿಸುತ್ತಾರೆ. ಆದ್ದರಿಂದ ಜಾಹೀರಾತು ರಸಗೊಬ್ಬರಗಳ ಚಿಲ್ಲರೆ ವ್ಯಾಪಾರಿಗಳ ವ್ಯವಹಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಅಧ್ಯಾಯ-3

ರಸಗೊಬ್ಬರ ಮಾರುಕಟ್ಟೆ ಶಕ್ತಿಗಳು

(ಬೇಡಿಕೆ ಮತ್ತು ಪೂರೈಕೆ ರಾಜ್ಯ ಮತ್ತು ಜಿಲ್ಲಾವಾರು)

ಅಭಿವೃದ್ಧಿ ಮತ್ತು ರಸಗೊಬ್ಬರ ಮಾರುಕಟ್ಟೆ

ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಬೇರೇ ಬೇರೆ ವಲಯಗಳ ನಡುವೆ ಇರುವ ಶಕ್ತಿಯುತ ಸಂಬಂಧಗಳು ಉತ್ಪಾದನೆ ಹಾಗೂ ವ್ಯಾಪಾರ ವಹಿವಾಟಿನ ಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತದೆ. ಅಂದರೆ ಬೇರೆ ಬೇರೆ ವಲಯಗಳೆಂದರೆ ಹಣಕಾಸು, ತಂತ್ರಜ್ಞಾನ, ವಿಸ್ತರಣೆ, ಮಾರುಕಟ್ಟೆ, ಸಾರಿಗೆ, ದೂರ ಸಂಪರ್ಕ ಮುಂತಾದವು ಗಳಿಗೆ ಒಂದರಳಗೊಂದು ವಿಲೀನಗೊಳ್ಳುವ ಕ್ರಿಯೆ, ಆ ಪ್ರದೇಶದ ಉತ್ಪಾದನೆ ಮೇಲೆ ಪರಿಣಾಮ ಬೀರುತ್ತವೆ. ಉತ್ಪಾದನೆಯಾದ ಉತ್ಪನ್ನದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಉತ್ಪನ್ನ ಮಾರುಕಟ್ಟೆಗೆ ಪ್ರವೇಶಿಸಬೇಕು. ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ಉತ್ಪಾದನೆಯಾದ ಉತ್ಪನ್ನಗಳು ಮಾರುಕಟ್ಟೆಗೆ ಪ್ರವೇಶಿಸುತ್ತವೆ. ಆದರೆ ಇವು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗಿರುತ್ತವೆಯೇ ಅಥವಾ ಬೇಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಪೂರೈಕೆಯಾಗಿರುತ್ತವೆಯೇ ಯಾರಿಗೂ ಸರಿಯಾಗಿ ತಿಳಿದಿರುವುದಿಲ್ಲ. ಈ ಅಧ್ಯಾಯದಲ್ಲಿ ರಸಗೊಬ್ಬರಗಳ ಬೇಡಿಕೆ, ಪೂರೈಕೆಯನ್ನು ಚರ್ಚಿಸಲಾಗಿದೆ. ಬಹಳಷ್ಟು ಸಮಯದಲ್ಲಿ ರಸಗೊಬ್ಬರಗಳ ಪೂರೈಕೆಗಿಂತ ಬೇಡಿಕೆಯೇ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಆದ್ದರಿಂದ ಇಲ್ಲಿ ರೈತರು , ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಕೊಳ್ಳಲು ಆಗುವುದಿಲ್ಲ ಯಾರುಮೊದಲು ಬಂದು ಕೊಳ್ಳುತ್ತಾರೋ ಅವರು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳಬಹುದು. ಯಾರು ಕೊನೆಯಲ್ಲಿ ಕೊಳ್ಳಲು ಬರುತ್ತಾರೋ ಅವರಿಗೆ ಬೇಕಾಗುವಷ್ಟು ರಸಗೊಬ್ಬರಗಳು ಸಿಕ್ಕಿದರೆ ಸಿಕ್ಕಿತು ಇಲ್ಲದೆ ಹೋದರೆ ಮಳಿಗೆಗಳಲ್ಲಿ ಎಷ್ಟು ಇರುತ್ತದೋ ಅಷ್ಟನ್ನು ಕೊಳ್ಳಬಹುದು.

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮುಖ್ಯವಾದ ಉತ್ಪಾದನಾ ವಲಯ, ಹಾಗೆಯೇ ಗ್ರಾಮೀಣ ಕೈಗಾರಿಕೆಗಳು ಎರಡನೆ ಹಂತದವಲಯ, ಇವುಗಳಲ್ಲಿ ಮೂರು ವಿಧಾನದ ಉತ್ಪಾದನೆ ಇದೆ 1) ಬೇಡಿಕೆ ಆಧಾರಿತ ಉತ್ಪನ್ನ 2) ಕೌಶಲ್ಯ ಆಧಾರಿತ ಉತ್ಪನ್ನ 3) ಸಂಪನ್ಮೂಲ ಆಧಾರಿತ ಉತ್ಪನ್ನ ಅಥವಾ ಬಂಡವಾಳ ಆಧಾರಿತ ಉತ್ಪನ್ನ ಕೃಷಿ ವಲಯವನ್ನು ಹೊರತು ಪಡಿಸಿ ನಾವು ಗ್ರಾಮೀಣ ಕೈಗಾರಿಕೆಗಳನ್ನು ತೆಗೆದುಕೊಂಡರೆ ಹೆಚ್ಚು ಉತ್ಪನ್ನಗಳು ಬೇಡಿಕೆಯಾಧಾರಿತವಾದಂತಹವು ಎಂಬುದನ್ನು ಅಧ್ಯಯನಗಳು ತಿಳಿಸುತ್ತವೆ. ಕೌಶಲ್ಯ ಆಧಾರಿತ ಉತ್ಪನ್ನಗಳು ಸೀಮಿತ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತದೆ. ಯಾಕೆಂದರೆ ಬಡಗಿಗಳು, ಕುಂಬಾರರು, ಕಮ್ಮಾರರು ಉತ್ಪಾದಿಸುವ ಉತ್ಪನ್ನಗಳಿಗೆ ನಗರ ಆಧಾರಿತ ಕೈಗಾರಿಕೆಗಳಿಂದ ಪರ್ಯಾಯ ಉತ್ಪನ್ನಗಳು ಬರುವುದರಿಂದ ಇವುಗಳ ಉತ್ಪಾದನೆ ಕಡಿಮೆ ಪ್ರಮಾಣದಲ್ಲಿ ನಡೆಯುತ್ತದೆ. ಆದರೆ ಈ ಉತ್ಪನ್ನಗಳಿಗೆ ಪರ್ಯಾಯವಾಗಿ ನೇಗಿಲು, ಟ್ರಾಕ್ಟರ್ ಗಳು ವಿದ್ಯುಚ್ಛಕ್ತಿ ಚಾಲಿತ ಉಪಕರಣಗಳು ಗ್ರಾಮಗಳಿಗೆ ಪ್ರವೇಶಿಸಿರುವುದರಿಂದ ಗ್ರಾಮೀಣ ಕೌಶಲ್ಯ ಆಧಾರಿತ ಉತ್ಪನ್ನಗಳು ನೆಲಕಚ್ಚಿವೆ. ಸಂಪನ್ಮೂಲ ಆಧಾರಿತ ಅಥವಾ ಬಂಡವಾಳ ಆಧಾರಿತ ಉತ್ಪನ್ನ ಗಳು ನಗರಗಳಿಂದ

ವಲಸೆ ಬಂದ ಕೈಗಾರಿಕೋದ್ಯಮಿಗಳು ಉತ್ಪಾದಿಸುವ ಉತ್ಪನ್ನಗಳು, ಇವು ಗ್ರಾಮೀಣ ಪ್ರದೇಶದಲ್ಲಿ ಅಗ್ಗದ ಕಾರ್ಮಿಕರು, ಅಗ್ಗದ ಸಂಪನ್ಮೂಲಗಳು ಸಿಗುವುದರಿಂದ ನಗರದ ಕೈಗಾರಿಕೋದ್ಯಮಿಗಳು ಈ ಉತ್ಪನ್ನಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಾರೆ, ಇದಕ್ಕೆ ಉದಾಹರಣೆಯೆಂದರೆ ರಸಗೊಬ್ಬರ ಕಾರ್ಖಾನೆಗಳು, ಬೀಜೋತ್ಪಾದನೆ ಕಾರ್ಖಾನೆಗಳು ಮುಂತಾದವುಗಳನ್ನು ನೋಡಬಹುದು. ಸ್ಥಳೀಯ ಕಾರ್ಮಿಕ ಶಕ್ತಿಯನ್ನು ಬಳಸಿಕೊಂಡು,ಉತ್ಪಾದಿಸಿ ಅದೇ ರೈತರಿಗೆ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ. ಆದ್ದರಿಂದ ಕೃಷಿ ಉತ್ಪನ್ನಗಳ ಉತ್ಪಾದನೆ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತದೆ ಆದರೆ ಗ್ರಾಮೀಣ ಕೈಗಾರಿಕೆಗಳು ಎರಡನೆ ಪಾತ್ರ ವಹಿಸುತ್ತದೆ.

ಆದ್ದರಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಆ ಪ್ರದೇಶದ ವ್ಯಾಪಾರಿಗಳ ಪ್ರಭಾವದ ಮೇಲೆ ನಿಂತಿರುತ್ತದೆ. ಕೃಷಿ ಉತ್ಪನ್ನಗಳ ಮಾರಾಟ ಬಹುತೇಕವಾಗಿ ಕಮೀಷನ್ ಏಜೆಂಟರ ಮೂಲಕ ನಡೆಯುತ್ತದೆ. ಕೆಲವು ಪ್ಲಾಂಟೇಷನ್ ಬೆಳೆಗಳನ್ನು ಗುತ್ತಿಗೆ ಆಧಾರಿತ ಬೆಳೆದು ಗುತ್ತಿಗೆದಾರರ ಮೂಲಕ ಮಾರಾಟ ಮಾಡಲಾಗುತ್ತದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆ ಹಾಗೂ ಸಂಪನ್ಮೂಲ ಮಾರುಕಟ್ಟೆ ಮಧ್ಯವರ್ತಿಗಳು ಕಮೀಷ್ ಏಜೆಂಟರ್ ಮೂಲಕ ನಡೆಯುತ್ತದೆ. ಮಾರಾಟದಲ್ಲಿ ಎರಡು ವಿಧಾನಗಳನ್ನು ನೋಡಬಹುದು. ಮೊದಲನೆ ವಿಧಾನ ಖಾಸಗಿದಾರರಿಂದ, ಎರಡನೇ ವಿಧಾನ ಸರಕಾರ ವಲಯದಿಂದ, ಕೃಷಿ ಉತ್ಪನ್ನಗಳು ಹಾಗೂ ಸಂಪನ್ಮೂಲ ಉತ್ಪನ್ನಗಳು ಮಾರಾಟವಾಗುತ್ತದೆ. ಆದರೆ ಭಾರತದ ಕೃಷಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಇರುವುದರಿಂದಇವರು ಮಾರುಕಟ್ಟೆಯ ಹೆಚ್ಚಳ ಉತ್ಪನ್ನಗಳನ್ನು ಉತ್ಪಾದಿಸುವುದಿಲ್ಲ. ಹೀಗೆ ಉತ್ಪಾದಿಸಿದರು ಮಧ್ಯವರ್ತಿಗಳ ಮೂಲಕ ಲಾಭ ವಲ್ಲದೆ ಬೆಲೆ ಸಿಕ್ಕಿ, , ಶೋಷಣೆಗೆ ಒಳಗಾಗುತ್ತಾರೆ. ಇಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಉತ್ಪನ್ನಗಳು ಕಮೀಷನ್ ಏಜೆಂಟ್, ದೊಡ್ಡ ರೈತರು, ಸಂಸ್ಕರಣ ಕ್ಷೇತ್ರದವರು ಸಣ್ಣ ವ್ಯಾಪಾರಸ್ಥರ ಮೂಲಕ ಸಣ್ಣ ರೈತರು ತಮ್ಮ ಉತ್ಪನ್ನಗಳು ಗ್ರಾಹಕರ ಕೈಗೆ ಸಿಗಬೇಕಾದರೆ, ಇಷ್ಟು ಮಾಧ್ಯಮ ಗಳ ಮೂಲಕ ಹೋಗಬೇಕಾಗುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಸಾಮಾಜಿಕವಾಗಿ , ಆರ್ಥಿಕವಾಗಿ ಸಾಂಸ್ಕೃತಿಕವಾಗಿ, ಹಾಗೂ ಮನೋವೈಜ್ಞಾನಿಕವಾಗಿ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಸೂತ್ರದಾರರು, ಇಂತಹ ರೈತರನ್ನು ಕಡೆಗಣಿಸಿವುದು ಸರಕಾರ ಮಾಡುವ ಅಕ್ಷಮ್ಯ ಅಪರಾಧ ರೈತರು ನಗರದ ಆರ್ಥಿಕ ವ್ಯವಸ್ಥೆ ಬೆಳವಣಿಗೆಗೆ ಸಹಾಯಕವಾಗಿ ನಿಲ್ಲುತ್ತಾರೆ, ಹೀಗೆ ಸಹಾಯಕವಾಗಿ ನಿಲ್ಲುವುದರ ಮೂಲಕ ನಗರ ಆರ್ಥಿಕ ವ್ಯವಸ್ಥೆಯ ಅರಾಜಕತೆ ಕಡೆ ನಡೆಯುವದನ್ನು ತಡೆಯುತ್ತಾರೆ. ನಗರ ಆರ್ಥಿಕ ವ್ಯವಸ್ಥೆಯೂ ಸಣ್ಣ ಅತಿ ಸಣ್ಣ ರೈತರ ಉತ್ಪಾದನೆಯ ಮೇಲೆಯೇ ನಿಂತಿರುತ್ತದೆ. ಹೀಗೆ ನಿಲ್ಲಬೇಕಾದರೆ ರೈತರ ವರ್ಷ ಪೂರ್ತಿ ಶ್ರಮ ಕಾರಣವಾಗುತ್ತದೆ. ರೈತರ ವರ್ಷ ಪೂರ್ತಿ ಶ್ರಮಕ್ಕೆ ಸರಿಯಾದ ಸಂಭಾವನೆ ಇಲ್ಲದೆ ರೈತರು ಸರಳಬೇಕಾಗಿರುತ್ತದೆ. ಇವರು ರಸಗೊಬ್ಬರ ಗಳನ್ನು ಉಪಯೋಗಿಸುತ್ತಾರೆಯೇ ಇಲ್ಲವೆ ಎಂಬುದು ನಗರ ಆಧಾರಿತ ಮನುಷ್ಯನಿಗೆ ಮುಖ್ಯವಾಗುವುದಿಲ್ಲ ಅಥವಾ ಅಧಿಕ ಇಳುವರಿ ತಳಿಗಳನ್ನು ಉಪಯೋಗಿಸುತ್ತಾರೆಯೇ ಎಂಬುದು ಸಹ ನಗರ ಆಧಾರಿತ ಜನರಿಗೆ ಪ್ರಮುಖವಾಗುವುದಿಲ್ಲ. ಆದ್ದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನಗರಗಳು ಚಿರಋಣಿಯಾಗಿರಬೇಕಾಗಿದೆ. ಎಂದು ಹಲವು ವಿದ್ವಾಂಸರು ಹೇಳುತ್ತಾರೆ, ಸಣ್ಣ ಮತ್ತು ಅತಿ ಸಣ್ಣ

ರೈತರು ಮಾರಾಟದಲ್ಲಿ ಎದುರಿಸುತ್ತಿರುವ ಸಮಸ್ಯೆಗಳೆಂದರೆ

1) ಉತ್ಪನ್ನಗಳಿಗೆ ಕಡಿಮೆ ಬೆಲೆ

2) ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ ಇದ್ದಾಗ ದಾಸ್ತಾನು ಮಳಿಗೆಗಳಿಲ್ಲದಿರುವುದು.

3) ಪರ್ಯಾಯ ಕೊಳ್ಳುವವರು ಇಲ್ಲದೆ ರೈತರು ಬಳಲುತ್ತಿರುವುದು

4) ಸಾಲ ಮತ್ತು ವೈಯುಕ್ತಿಕ ವೆಚ್ಚಕ್ಕಾಗಿ ಅತಿ ಕಡಿಮೆ ಬೆಲೆಯಲ್ಲಿ ಉತ್ಪನ್ನಗಳನ್ನು ಮಾರುವುದು.

5) ಸಾರಿಗೆ ಮತ್ತು ಸಂಪರ್ಕದ ಕೊರತೆ

6) ಮಾರುಕಟ್ಟೆಯ ವೆಚ್ಚ ಜಾಸ್ತಿಯಿರುವುದು

7) ಮಧ್ಯವರ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಕಮೀಷನ್ ಪಡೆಯುವದು

8) ಸಹಕಾರ ಮತ್ತು ನಿಯಂತ್ರಿತ ಮಾರುಕಟ್ಟೆಗಳಿಲ್ಲದಿರುವುದು

9) ರೈತರಿಗೆ ತಡವಾಗಿ ಹಣ ಕೊಡುವುದು ಮುಂತಾದವುಗಳಾಗಿವೆ.

ಸಹಕಾರ ಮಾರುಕಟ್ಟೆ : ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಮಾರುಕಟ್ಟೆಗಳ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವ ನೀತಿಗೆ ಅನುಮೋದನೆ ಸಿಕ್ಕಿತು. ಆಗ ಎರಡು ಅಥವಾ ಮೂರು ಸ್ತರದ ಸಹಕಾರ ಮಾರುಕಟ್ಟೆಗಳನ್ನು ಪ್ರತಿ ರಾಜ್ಯವೂ ಹೊಂದುವಂತೆ ಅನುಮೋದಿಸಲಾಯಿತು. ಕೆಲವು ರಾಜ್ಯಗಳು ಎರಡು ಸ್ತರದ ಮಾರುಕಟ್ಟೆಯನ್ನು ಹೊಂದಿದ್ದರೆ ಕೆಲವು ರಾಜ್ಯಗಳು ಮೂರು ಸ್ತರದ ಮೂರು ಕಟ್ಟೆಗಳನ್ನು ಹೊಂದಿದ್ದವು. ಎರಡು ಸ್ತರದ ಮೂರು ಕಟ್ಟೆಯೆಂದರೆ ಪ್ರಾಂತ್ಯದ ಹಂತ ಅಥವಾ ಜಿಲ್ಲಾ ಮಟ್ಟದಲ್ಲಿ ಸಹಕಾರಿ ಮಾರುಕಟ್ಟೆ ತಳದಲ್ಲಿ ಅಂದರೆ ಗ್ರಾಮ ಮಟ್ಟದಲ್ಲಿ ಮಾರುಕಟ್ಟೆ, ಇಲ್ಲಿ ಗ್ರಾಮಗಳ ಅಭಿವೃದ್ಧಿ ಸರಕು ಮಾರುಕಟ್ಟೆಯ ಮೇಲೆ ಅವಲಂಬಿತವಾಗಿದ್ದವು. ಹೀಗೆ ಅವಲಂಬಿತವಾಗಿದಿದ್ದರಿಂದಲೆ, ರೈತರ ಮಾರಾಟದ ಸಾಮರ್ಥ್ಯ ಅಧಿಕ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಇಲ್ಲಿ ಮಧ್ಯವರ್ತಿಗಳು, ಕಮೀಷನ್ ಏಜೆಂಟರ್ ಹಾವಳಿ ಇರುವುದಿಲ್ಲ (FAO) ಕೃಷಿ ಮತ್ತು ಆಹಾರ ಸಂಘಟನೆ ಈ ಸಹಕಾರಿ ಮಾರುಕಟ್ಟೆ ಸಂಘಗಳಿಗೆ ಧನ ಸಹಾಯದ ಮೂಲಕ ಉತ್ತೇಜನ ನೀಡಿವೆ. ಇಲ್ಲಿ ಈ ಸಂಘಟನೆಗಳು ವಾಣಿಜ್ಯ ಕೃಷಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರು ಕೈಗೊಳ್ಳುವ ವಾಣಿಜ್ಯ ಕೃಷಿಗೆ ಒತ್ತಾಸೆಯಾಗಿ ನಿಂತಿವೆ. ಆದರೂ ಈ ಸಹಕಾರ ಮಾರುಕಟ್ಟೆಗಳು ಇತ್ತೀಚೆಗೆ ಹಿನ್ನೆಡೆ ಕಂಡಿದೆ 1) ಬೆಳೆಗಾರ ಸದಸ್ಯತ್ವ ನೋಂದಾಣಿಕೆ ಅಲ್ಪ ಪ್ರಮಾಣದಲ್ಲಿ ನಡೆಯುವದು 2) ಮಾರುಕಟ್ಟೆಯ ಸೇವೆಗಳು ಅಲ್ಪ ಪ್ರಮಾಣದಲ್ಲಿರುವುದು 3) ಸಹಕಾರಿ ಮಾರುಕಟ್ಟೆಯ ಸಂಸ್ಕರಣ ಸಹಕಾರಿ ಸಂಘಟನೆಯೊಂದಿಗೆ ಸರಿಯಾಗಿ ಸಾಧಿಸದೆ ಇರುವುದು ಮುಂತಾದ ನ್ಯೂನತೆಗಳು ಸಹಕಾರಿ ಮಾರುಕಟ್ಟೆ ಸಣ್ಣ ಮತ್ತು ಅತಿ ಸಣ್ಣ ರೈತರು ಹಿತಾಸಕ್ತಿಯನ್ನು ಕಾಯುವಲ್ಲಿ ಸೋತಿರುವುದು. ಹೀಗೆ ಸಾಂಸ್ಥಿಕ ನ್ಯೂನತೆಗಳ ಜೊತೆಗೆ ಮಾನವ ನ್ಯೂನತೆಗಳು ಸೇರಿವೆ 1) ಸದಸ್ಯರು ಸಹಕಾರಿ ತತ್ವಗಳನ್ನು ತಿಳಿದುಕೊಳ್ಳುವಲ್ಲಿ ವಿಫಲರಾಗಿರುವುದು ಮತ್ತು ಸಂಘಗಳಿಗೆ ನಿಷ್ಠೆ ತೋರಿಸದೆ ಇರುವುದು 2) ಸದಸ್ಯರಿಗೆ ತರಬೇತಿ ಇಲ್ಲದಿರುವುದು ನಿರ್ವಹಣೆಯಲ್ಲಿ ಸೋತಿರುವುದು 3) ಅಲ್ಲಿನ ಕೆಲಸಗಾರರಿಗೆ ಕಡಿಮೆ ಸಂಬಳ ನೀಡುತ್ತಿರುವುದು. 3) ಅಲ್ಲಿ ಕೆಲಸಗಾರರಿಗೆ ಬಡ್ತಿ ನೀತಿ ಇಲ್ಲದೆ

ಇರುವುದು ಮುಖ್ಯ ನ್ಯೂನತೆಗಳು ಎಂಬುದರಲ್ಲಿ ಸಂದೇಹವಿಲ್ಲ. ಹಾಲು, ಕಬ್ಬು ಮತ್ತು ಹತ್ತಿ ಬೆಳೆಗಳ ಸಹಕಾರಿ ಸಂಘಗಳು ಹೆಚ್ಚಿನ ಪ್ರಮಾಣದಲ್ಲಿ ಸಾಧನೆಯನ್ನು ಮಾಡಿ ರೈತರ ಹಿತಾಸಕ್ತಿಗೆ ಪೂರಕವಾಗಿವೆ, ಆದರೆ ಉಳಿದಂತೆ ಬೆಳೆ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳು ಅಂತಹ ಹೇಳಿಕೊಳ್ಳುವಂತಹ ಪರಿಣಾಮಗಳನ್ನೇನನ್ನು ಬೀರಿಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರು ವಾಣಿಜ್ಯೀಕರಣಗೊಳ್ಳುವುದಕ್ಕೋಸ್ಕರವೇ ಮಾಡಿದ್ದ ಸಹಕಾರಿ ಸಂಘಗಳು, ಈ ವರ್ಗದ ಹಿತಾಸಕ್ತಿಯನ್ನು ಕಾಯ್ದಿಡುವಲ್ಲಿ ಸೋತಿವೆ. ಆದರೂ ಇದು ದೊಡ್ಡ ರೈತರ ಹಿತಾಸಕ್ತಿಯನ್ನು ಕಾಯ್ದಿಡುವಲ್ಲಿ ಯಶಸ್ವಿಯಾಗಿದೆ. ಆದ್ದರಿಂದ ಸಹಕಾರಿ ಮಾರುಕಟ್ಟೆಗಳು ಎಲ್ಲ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದರೂ, ಇವುಗಳು ಮೇಲೆ ಹೇಳಿದ ನ್ಯೂನತೆ ಗಳಿಂದ ದುರ್ಬಲಗೊಳ್ಳುತ್ತಿವೆ ಆದ್ದರಿಂದ ಬರಿ ಕೃಷಿ ಉತ್ಪನ್ನಗಳೇ ಅಲ್ಲ ಕೃಷಿ ಸಂಪನ್ಮೂಲ ಉತ್ಪನ್ನಗಳಲ್ಲೂ ಸಹಕಾರಿ ಸಂಘಗಳು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಆದರೆ ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ಸಹ ಸಹಕಾರಿ ಸಂಘಗಳ ದುರ್ಬಲ ಗೊಂಡಿವೆ.

ರಸಗೊಬ್ಬರಗಳ ಕಾರ್ಖಾನೆಗಳ ಆರಂಭ:

ಸ್ವಾತಂತ್ರ್ಯಕ್ಕೆ ಮುಂಚೆ ಅಂದರೆ ಬ್ರಿಟೀಷ್ ಅವಧಿಯಲ್ಲಿ 1906 ರಲ್ಲಿ ಇಐಡಿ ಪ್ಯಾರಿ ಲಿಮಿಟೆಡ್ ಕಂಪನಿ ಸಿಂಗಲ್ ಸೂಪರ್ ಫಾಸ್ಪೇಟನ್ನು ಉತ್ಪಾದಿಸಲು ಪ್ರಾರಂಭಿಸಿತು. ತಮಿಳುನಾಡಿನ ರಾಣಿಪೇಟೆಯಲ್ಲಿ ಈ ಕಾರ್ಖಾನೆ ಪ್ರಾರಂಭವಾಯಿತು.ನಂತರ ದಂಮಸಿ ಮುರಾರ್ಜಿ ಕೆಮಿಕಲ್ಸ್ 1924 ರಲ್ಲಿ, ನಂತರ ದೆಹಲಿ ಕ್ಲಾತ್ ಮಿಲ್ 1946 ರಲ್ಲಿ ಪ್ರಾರಂಭವಾಯಿತು. ಈ ಎರಡೂ ಕಂಪನಿಗಳು ಸಿಂಗಲ್ ಸೂಪರ್ ಫಾಸ್ಪೇಟನ್ನು ಉತ್ಪಾದಿಸಲಾರಂಭಿಸಿದವು. ಸಾರಜನಕ ರಸಗೊಬ್ಬರಗಳ ಉತ್ಪಾದನೆಯಲ್ಲಿ ಟಾಟಾ (TISCO) ಐರನ್ ಮತ್ತು ಸ್ಟೀಲ್ ಕಂಪನಿ 1933 ರಲ್ಲಿ ಅಮೋನಿಯಂ ಸಲ್ಫೇಟನ್ನು ಉತ್ಪಾದಿಸಲು ಪ್ರಾರಂಭಿಸಿತು. ಇದು ಸಣ್ಣ ಪ್ರಮಾಣದ ಉತ್ಪಾದನೆಯಿಂದ ವರ್ಷಕ್ಕೆ ಐದು ಟನ್ ಅಮೋನಿಯಂ ಸಲ್ಫೇಟನ್ನು ಉತ್ಪಾದಿಸಲಾಗುತ್ತಿತ್ತು. ಆದರೆ 1965 ರಲ್ಲಿ ಇದನ್ನು ಮುಚ್ಚಲಾಯಿತು. ಫರ್ಟಿಲೈಸರ್ ಮತ್ತು ಕೆಮಿಕಲ್ಸ್ ಟ್ರಾವಂಕೂರು ಲಿಮಿಟೆಡ್ (FACT) ಇದು ಪ್ರಥಮ ಸಾರಜನಕ ದೊಡ್ಡ ಪ್ರಮಾಣದ ಉತ್ಪಾದಿಸಿದ ಘಟಕ 1947 ರಲ್ಲಿ ಪ್ರಾರಂಭವಾದತಂಹದು. ಇದು ಅಮೋನಿಯಂ ಸಲ್ಫೇಟನ್ನು ಉತ್ಪಾದಿಸಲು ಪ್ರಾರಂಭಿಸಿತು. ಇದರ ಉತ್ಪಾದನಾ ಸಾಮರ್ಥ್ಯ 50,000 ಟನ್ ಗಳಷ್ಟು (ಅಮೋನಿಯಂ ಸಲ್ಫೇಟ್)

ಸ್ವಾತಂತ್ರ್ಯೋತ್ತರ ಭಾರತದಲ್ಲಿ 1951 ರಲ್ಲಿ ಬಿಹಾರದ ಸಿಂಧ್ರಿಯಲ್ಲಿ ರಸಗೊಬ್ಬರ ಉತ್ಪಾದನೆಯ ಕಾರ್ಖಾನೆ ಪ್ರಾರಂಭವಾಯಿತು. ಇದು ಗಾತ್ರ, ತಂತ್ರಜ್ಞಾನ ಮತ್ತು ಆಧುನಿಕತೆಯನ್ನು ವ್ಯಾಪಕವಾಗಿ, ಅಳವಡಿಸಿಕೊಂಡಿತ್ತು. ಫರ್ಟಿಲೈಜರ್ ಕಾರ್ಪೋರೇಷನ್ ಆಫ್ ಇಂಡಿಯ (FCI) 1961 ರಲ್ಲಿ ಸ್ಥಾಪಿಸಲಾಯಿತು. ನಂಗಲ್ ನಲ್ಲಿ ಕ್ಯಾಲ್ಸಿಯಂ ಅಮೋನಿಯಂ ಸಲ್ಫೇಟ್ ತನ್ನ ಉತ್ಪಾದನೆಯನ್ನು ಪ್ರಾರಂಭಿಸಿತು. ಸಿಂಧ್ರಿಯಲ್ಲಿ 1951 ರಲ್ಲಿ ಪ್ರಾರಂಭವಾದ ರಸಗೊಬ್ಬರ ಕಾರ್ಖಾನೆ ಅಮೋನಿಯಂ ಸಲ್ಫೇಟ್ ನೈಟ್ರೇಟ್ ಯೂರಿಯ, ಅಮೋನಿಯಂ ಕ್ಲೋರೈಡನ್ನು ಉತ್ಪಾದಿಸಲಾರಂಭಿಸಿತು. 1965 ರಲ್ಲಿ ಟ್ರಾಂಬೆಯಲ್ಲಿ ಆರ್.ಸಿ. ಎಫ್.ಎಲ್. ರಸಗೊಬ್ಬರಗಳ ಉತ್ಪಾದನೆ ಘಟಕಗಳನ್ನು ಪ್ರಾರಂಭಿಸಿತು. ಇದರ ಮುಖ್ಯ ಉತ್ಪನ್ನ ನೈಟ್ರೋಫಾಸ್ಪೇಟ್ 1967 ರಲ್ಲಿ ಗುಜರಾತ್

ಸ್ಟೇಟ್ ಫರ್ಟಿಲೈಜರ್ಸ್ ಮತ್ತು ಕೆಮಿಕಲ್ಸ್ ಲಿ. ನ್ನು ಬರೋಡದಲ್ಲಿ ಪ್ರಾರಂಭಿಸಲಾಯಿತು. ಇದರ ಮುಖ್ಯ ಉತ್ಪನ್ನ ಡೈ. ಅಮೋನಿಯಂ ಫಾಸ್ಪೇಟ್ , 1968 ರಲ್ಲಿ ಕೋರಮಂಡಲ್ ಫರ್ಟಿಲೈಜರ್ಸ್ ಲಿ., ವಿಶಾಖ ಪಟ್ಟಣದಲ್ಲಿ ಪ್ರಾರಂಭಿಸಲಾಯಿತು. ಇದು ಯೂರಿಯ ಮತ್ತು ಅಮೋನಿಯಂ ಸಲ್ಫೇಟನ್ನು ಉತ್ಪಾದಿಸಲಾರಂಭಿಸಿತು. 1968 ರಿಂದ ಆರ್.ಸಿ. ಎಫ್.ಎಲ್, ಎನ್. ಪಿ.ಕೆ. ಯ ಸಂಕೀರ್ಣಗೊಬ್ಬರಗಳನ್ನು ಉತ್ಪಾದಿಸಲಾರಂಭಿಸಿತು. ಹೀಗೆ ಇಲ್ಲಿಯವರೆಗೂ ಮೇಲಿನ ರಸಗೊಬ್ಬರಗಳ ಕಾರ್ಖಾನೆಗಳು ವಿವಿಧ ರಸಗೊಬ್ಬರಗಳ ಉತ್ಪಾದನೆಯಲ್ಲಿ ತೊಡಿಗಿಸಿಕೊಂಡಿವೆ.

ಮೇಲೆ ವಿವರಿಸಿರುವ ರಸಗೊಬ್ಬರಗಳ ಕಾರ್ಖಾನೆಗಳು ಇದುವರೆಗೂ ಹೊಂದಿರುವ ಶಾಖೆಗಳು ಈಗಿನ 1906 ನಲ್ಲಿ ಪ್ರಾರಂಭವಾದ Parry ಇದುವರೆಗೆ ರಾಷ್ಟ್ರಾದ್ಯಂತ 91 ಉತ್ಪಾದನಾ ಘಟಕಗಳನ್ನು ಹೊಂದಿದೆ. ಲಾಲಾ ಐರನ್ ಮತ್ತು ಸ್ಟೀಲ್ ಕಂಪನಿ ಲಿಮೆಟೆಡ್ ಇದುವರೆಗೂ 6 ಉತ್ಪಾದನಾ ಘಟಕಗಳನ್ನು ಹೊಂದಿದೆ. ಎಫ್.ಸಿ.ಐ.ಲಿಮಿಟೆಡ್ ಸಿಂದ್ರಿ 35 ಉತ್ಪಾದನಾ ಘಟಕಗಳನ್ನು ಹೊಂದಿದೆ. ಫ್ಯಾಕ್ಸ್ 3 ಉತ್ಪಾದನಾ ಘಟಕಗಳನ್ನು ಹೊಂದಿದೆ.

ಎನ್.ಎಫ್.ಎಲ್. ನಂಗಲ್ ಮೂರು ರಸಗೊಬ್ಬರಗಳ ಉತ್ಪಾದನಾ ಘಟಕವನ್ನು ಹೊಂದಿದೆ. ಆರ್.ಸಿ.ಎಫ್.ಎಲ್. 3 ಉತ್ಪಾದನಾ ಘಟಕಗಳನ್ನು ಹೊಂದಿದೆ. ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್ 12 ಉತ್ಪಾದನಾ ಘಟಕಗಳನ್ನು ಹೊಂದಿದೆ.

1961 ರಿಂದ 1971 ರವರೆಗೂ ಭಾರತದಲ್ಲಿ ರಸಗೊಬ್ಬರ ಕಾರ್ಖಾನೆಗಳು, ತೀವ್ರ ಗತಿಯಲ್ಲಿ ವಿಸ್ತರಣೆಗೊಳ್ಳಲಾರಂಭಿಸಿದವು. ಸಾರಜನಕದ ರಸಗೊಬ್ಬರ ಉತ್ಪಾದನೆ 1.52 ಲಕ್ಷ ಟನ್ ಗಳಿಂದ 8.07 ಲಕ್ಷ ಟನ್ ಗಳಿಗೆ ಏರಿತು. 1971 ರಿಂದ 2001 ರ ವೇಳೆಗೆ ಸಾರಜನಕ ರಸಗೊಬ್ಬರಗಳ ಉತ್ಪಾದನೆ 1.52 ಲಕ್ಷಟನ್ ಗಳಿಂದ 92.36 ಲಕ್ಷ ಟನ್ ಗಳು ಏರಿತು. ಮೂರು ದಶಕದ ಅವಧಿಯಲ್ಲಿ ಸಾರಜನಕ ರಸಗೊಬ್ಬರಗಳ ಉತ್ಪಾದನೆಯಲ್ಲಿ ತೀವ್ರ ಗತಿಯಲ್ಲಿ ಏರಿದೆ. ರಂಜಕ ರಸಗೊಬ್ಬರಗಳು 1971 - 72 ರ ಅವಧಿಯಲ್ಲಿ 1.27 ಲಕ್ಷ ಟನ್ ಗಳಷ್ಟಿದ್ದು 1981 - 82 ರಲ್ಲಿ 2.15 ಲಕ್ಷ ಟನ್ ಗಳಷ್ಟಾಯಿತು. 2001 ರವೇಳೆಗೆ 4.38 ಲಕ್ಷ ಟನ್ ಗಳಷ್ಟಾಯಿತು. 4.38 ಲಕ್ಷಟನ್ ಗಳಿಗೆ ಏರುವುದರ ಮೂಲಕ ಸಾರಜನಕ ರಸಗೊಬ್ಬರಗಳಿಗಿಂತ ರಂಜಕ ರಸಗೊಬ್ಬರಗಳು ಕಡಿಮೆ ಬಳಕೆಯಲ್ಲಿವೆ. ಪೊಟ್ಯಾಷ್ ರಸಗೊಬ್ಬರಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ರಸಗೊಬ್ಬರಗಳ ಕಾರ್ಖಾನೆಗಳ ಗಾತ್ರ, ರಚನೆಯಲ್ಲಿ ವಿಸ್ತರಣೆ ಗೊಳ್ಳುತ್ತಾ ಬದಲಾವಣೆಯಾಗುತ್ತ ಹೋಗುತ್ತಿದೆ. 1985 ರವರೆಗೆ ರಾಷ್ಟ್ರದಲ್ಲಿ 86 ರಸಗೊಬ್ಬರಗಳ ಕಾರ್ಖಾನೆಗಳು ಉತ್ಪಾದನೆಯಲ್ಲಿದ್ದವು ಇದರಲ್ಲಿ 33 ರಸಗೊಬ್ಬರ ಕಾರ್ಖಾನೆಗಳು. ಸಾರಜನಕ ರಸಗೊಬ್ಬರಗಳನ್ನು ಮತ್ತು ಮಿಶ್ರಣ ರಸಗೊಬ್ಬರಗಳನ್ನುಉತ್ಪಾದಿಸುತ್ತಿದ್ದವು ಇವುಗಳಲ್ಲಿ ಆರು ಉತ್ಪಾದನಾ ಘಟಕಗಳು ಮಧ್ಯಮ ಗಾತ್ರದವು.ಇವು

ಅಮೋನಿಯಂ ಸಲ್ಫೇಟನ್ನು ಉಪ ಉತ್ಪನ್ನವಾಗಿ ಉತ್ಪಾದಿಸುತ್ತಿದ್ದವು. ಉಳಿದ 47 ರಸಗೊಬ್ಬರ ಘಟಕಗಳು ರಂಜಕ ಗೊಬ್ಬರಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡು 2001 ರ ವೇಳೆಗೆ ಈಗ ರಾಷ್ಟ್ರಾದ್ಯಂತ ಉತ್ಪಾದನೆಯಲ್ಲಿರುವ ರಸಗೊಬ್ಬರ ಘಟಕಗಳ 176 ರಷ್ಟಿದೆ 1985 ಕ್ಕೆ ಹೋಲಿಸಿ ನೋಡಿದರೆ ರಸಗೊಬ್ಬರ ಕಾರ್ಖಾನೆಗಳು ರಾಷ್ಟ್ರದ್ಯಂತ ವ್ಯಾಪಕವಾಗಿ ವಿಸ್ತರಿಸುತ್ತೇವೆ. 80 ಉತ್ಪಾದನಾ ಘಟಕಗಳು ಸಾರಜನಕ ಮತ್ತು ಮಿಶ್ರ ರಸಗೊಬ್ಬರಗಳನ್ನು ಉತ್ಪಾದಿಸುತ್ತೇವೆ. 98 ಘಟಕಗಳು ರಂಜಕ ರಸಗೊಬ್ಬರಗಳ ಉತ್ಪಾದನೆಯಲ್ಲಿ ತೊಡಗಿವೆ. ಉಳಿದಂತೆ ಘಟಕಗಳು ಮಿಶ್ರ ರಸಗೊಬ್ಬರಗಳ ಉತ್ಪಾದನೆಯಲ್ಲಿ ತೊಡಗಿವೆ.


ರಸಗೊಬ್ಬರ ಉತ್ಪಾದನೆಯ ವಲಯವಾರು ರಚನೆಗಳು:

ರಸಗೊಬ್ಬರಗಳಳನ್ನು ಸಹಕಾರಿ, ಸರಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಉತ್ಪಾದಿಸಲಾಗುತ್ತಿದೆ. 1947 ಕ್ಕಿಂತ ಮುಂಚ 5000 ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು 63 ಸಾವಿರ ಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಉತ್ಪಾದಿಸುತ್ತಿದ್ದರು. ಆಗ ಬಂಡವಾಳ ಹೂಡಿಕೆ ಸರ್ಕಾರಿ ವಲಯದಲ್ಲಿ 0.8 ಕೋಟಿಗಳಷ್ಟು ಖಾಸಗಿ ವಲಯದಲ್ಲಿ 2.5 ಕೋಟಿಗಳಷ್ಟು ಹೂಡಲಾಗಿತ್ತು. ಅವಧಿಯಲ್ಲಿ ಒಟ್ಟು ಬಂಡವಾಳದ ಹೂಡಿಕೆ 3-3 ಕೋಟಿಗಳಷ್ಟು.

1951 - 56 ರ ಅವಧಿಯಲ್ಲಿ ಸಾರಜನಕ ರಸಗೊಬ್ಬರಗಳ ಉತ್ಪಾದನೆ 90,000 ಟನ್ ಗಳಷ್ಟು ರಂಜಕ ರಸಗೊಬ್ಬರಗಳ ಉತ್ಪಾದನೆ 4000 ಟನ್ ಗಳಷ್ಟು ಸರಕಾರಿ ವಲಯದಲ್ಲಿ ರಸಗೊಬ್ಬರ ಕಾರ್ಖನೆಗಳ ಮೇಲೆ ಹೂಡಿದ ಬಂಡಾವಳ 53.7 ಕೋಟಿಗಳು ಖಾಸಗಿ ವಲಯದಲ್ಲಿ ಹೂಡಿದ ಬಂಡವಾಳ 0.4 ಕೋಟಿಗಳ ಒಟ್ಟು ಬಂಡವಾಳ ಈ ಅವಧಿಯಲ್ಲಿ ಹೂಡಿದ್ದು 54-1 ಕೋಟಿಗಳು 1966-69 ರ ಅವಧಿಯಲ್ಲಿ 3.85 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಉತ್ಪಾಸಿದರೆ, ರಂಜಕ ರಸಗೊಬ್ಬರಗಳು 1.60 ಲಕ್ಷ ಟನ್‌ಗಳು ಉತ್ಪಾದಿಸಲಾಯಿತು. 95.6 ಕೋಟಿಗಳಷ್ಟು ಹಣವನ್ನು ಸರ್ಕಾರಿ ವಲಯದಲ್ಲಿ ಹೂಡಲಾಯಿತು. ಖಾಸಗಿವಲಯದಲ್ಲಿ 119.3 ಕೋಟಿಗಳಷ್ಟು ಹಣವನ್ನು ಬಿಡುಗಡೆ ಮಾಡಲಾಯಿತು. ಒಟ್ಟು ಹಣದ ಹೊಡಿಕೆ ಈ ಅವಧಿಯಲ್ಲಿ 213.8 ಕೋಟಿಗಳು

1980 - 85 ರಲ್ಲಿ 13.39 ಲಕ್ಷದಷ್ಟು ಸಾರಜನಕದ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. 4.38 ಲಕ್ಷದಷ್ಟ ರಂಜಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. ಸರ್ಕಾರಿ ವಲಯದಲ್ಲಿ 708 ಕೋಟಿ ರೂಗಳಷ್ಟು ಹಣವನ್ನು ಹೂಡಲಾಯಿತು. ಸಹಕಾರಿ ವಲಯದಲ್ಲಿ 233.5 ಕೋಟಿಗಳ ಹಣವನ್ನು ಹೂಡಲಾಯಿತು. ಖಾಸಗಿ ವಲಯದಲ್ಲಿ 233.5 ಕೋಟಿಗಳಷ್ಟು ಹಣವನ್ನು ಹೊಡಲಾಯಿತು. ಒಟ್ಟಾರೆಯಾಗಿ ಈ ಅವಧಿಯಲ್ಲಿ 1613.1 ಕೋಟಿಗಳಷ್ಟು ಹಣವನ್ನು ಹೂಡಲಾಯಿತು.

1991-92 ರ ಅವಧಿಯಲ್ಲಿ 64000 ಟನ್ ಗಳಷ್ಟು ಸಾರಾಜನಕ 20,000 ಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. 315 ಕೋಟಿ ಗಳಷ್ಟು ಸರಕಾರಿವಲಯದಲ್ಲಿ ಹೂಡಲಾಯಿತು. ಸಹಕಾರಿ ವಲಯದಲ್ಲಿ ಈ ಅವಧಿಯಲ್ಲಿ ಹೂಡಿಕೆ ಇಲ್ಲ. ಖಾಸಗಿ ವಲಯದಲ್ಲಿ 2475 ಕೋಟಿಗಳಷ್ಟು ಒಟ್ಟು



ಹಣಕಾಸು ಹೂಡಿಕೆ ಮತ್ತು ರಸಗೊಬ್ಬರಗಳ ಉತ್ಪಾದನೆ ಸಾಮರ್ಥ್ಯ
4000
3500
3000
2500
2000
1500
1000
500
0
1979-80
1980-85
1985-86
1986-87
1987-88
1988-89
1989-90
1990-91
1991-92
1992-93
1993-94
1994-95
1995-96
1996-97
1997-98
1998-99
1999-2000
2000-01
YEARS
N (000 TONS)
P (000 TONS)
PUBLIC (Cr)
COOP (Cr)
PRIVATE (Cr)
TOTAL (Cr)

ಹಣವನ್ನು ರಸಗೊಬ್ಬರಗಳ ಉತ್ಪಾದನೆಯಲ್ಲಿ ತೊಡಗಿಸಲಾಯಿತು. 1992-93 ರಲ್ಲಿ 2.99 ಲಕ್ಷ ಟನ್ ಸಾರಜನಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. 43000 ಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. ಈ ಅವಧಿಯಲ್ಲಿ ಸರಕಾರಿ ವಲಯ, ಸಹಕಾರಿ ವಲಯದಲ್ಲಿ ಹಣ ಹೂಡಿಕೆ ಇಲ್ಲವೆ ಇಲ್ಲ. ಖಾಸಗಿ ವಲಯದಲ್ಲಿ 1440 ಕೋಟಿಗಳ ಹಣ ವನ್ನು ಹೂಡಲಾಗಿತ್ತು. ಈ ಅವಧಿಯಲ್ಲಿ ಒಟ್ಟು ಹಣ ಹೂಡಿಕೆ 1440 ಕೋಟಿಗಳು 1997-988 ರಲ್ಲಿ 6.25 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. ಸರಕಾರಿ ವಲಯದಲ್ಲಿ 1483.7 ಕೋಟಿಗಳನ್ನು, ಸಹಕಾರಿ ವಲಯದಲ್ಲಿ 1079 ಕೋಟಿಗಳು ಖಾಸಗಿ ವಲಯದಲ್ಲಿ 158.9 ಕೋಟಿಗಳು. ಒಟ್ಟಾರೆಯಯಾಗಿ 2741.7 ಕೋಟಿಗಳಷ್ಟು ಹಣವನ್ನು ರಸಗೊಬ್ಬರ ವಲಯದಲ್ಲಿ ಹೂಡಲಾಯಿತು.

2000-01 ರಲ್ಲಿ 4.42 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. 10.35 ಲಕ್ಷ ಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಉತ್ಪಾದಿಸಲಾಯಿತು. ಇದೇ ಅವಧಿಯಲ್ಲಿ ಸರಕಾರಿ ಹಾಗೂ ಸಹಕಾರಿ ರಸಗೊಬ್ಬರಗಳ ಉತ್ಪಾದನೆ ವಲಯದಲ್ಲಿ ಯಾವುದ ತರಹದ ಹಾಗೂ ಹೂಡಿಕೆ ಇಲ್ಲ ಆದರೆ ಖಾಸಗಿ ವಲಯದಲ್ಲಿ 1955.4 ಕೋಟಿಗಳಷ್ಟು ಹಣ ಹೂಡಲಾಯಿತು. ಒಟ್ಟು ಹಣ ಹೂಡಿಕೆ 1955.4. ಆ ಅವಧಿಯಲ್ಲಿ ಈಗಾಗಲೇ ನಾನು ತಿಳಿಸಿರುವಂತೆ 50 ರ ದಶಕದಲ್ಲಿ ಸಾರಜನಕ ಹಾಗೂ ರಂಜಕ ರಸಗೊಬ್ಬರಗಳ ಉತ್ಪಾದನೆ ಅಷ್ಟು ಹೇಳಿಕೊಳ್ಳುವಂತಹದೇನು ಆಗಿರಲಿಲ್ಲ. ಹಣದ ಹೂಡಿಕೆಯೂ ಸಹ ಹೇಳಿಕೊಳ್ಳುವಂತಹ ರೀತಿಯಲ್ಲಿರಲಿಲ್ಲ. 60 ರ ದಶಕದಲ್ಲಿ ಸಾರಜನಕ ಹಾಗೂ ರಂಜಕ ರಸಗೊಬ್ಬರಗಳು ಮೂರು ನಾಲ್ಕು ಪಟ್ಟು ಹೆಚ್ಚಾಗಿದ್ದವು. ಹೂಡಿಕೆಯಲ್ಲೂ ಗಣನೀಯ ಪ್ರಮಾಣದಲ್ಲೇನೂ ಹೆಚ್ಚಲಿಲ್ಲ. 70 ರ ದಶಕಕ್ಕೆ ಬರುವಷ್ಟರಲ್ಲಿ ರಸಗೊಬ್ಬರಗಳ ಉತ್ಪಾದನೆಯ ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಾಯಿತು. ಹೂಡಿಕೆ ಹಣದ ಮೂರು ಪಟ್ಟ ಹೆಚ್ಚಾಯಿತು. ಈ ಅವಧಿಯಲ್ಲಿ ರಸಗೊಬ್ಬರ ಕಾರ್ಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯ ಉತ್ಪಾದಕತೆ ಹೆಚ್ಚಿಸಿಕೊಂಡಿದ್ದು. ತಂತ್ರಜ್ಞಾನ ನವೀಕರಿಸಿದ್ದು ಆದ್ದರಿಂದ ಈ ದಶಕದಲ್ಲಿ ರಸಗೊಬ್ಬರಗಳು ಉತ್ಪಾದನಾ ಪ್ರಮಾಣ ಹೆಚ್ಚಾಯಿತು. 80 ರ ದಶಕದಲ್ಲಿ ಗಮನಿಸಿದರೆ ರಸಗೊಬ್ಬರಗಳ ಉತ್ಪಾದನೆ ಮಾಂತ್ರಿಕ ಸದೃಶ ರೀತಿಯಲ್ಲಿ ಹೆಚ್ಚಾಯಿತು ಹಾಗೂ ಸರಕಾರಿ, ಸಹಕಾರಿ ಹಾಗೂ ಖಾಸಗಿ ವಲಯಗಳ ಬಂಡವಾಳ ಹೂಡಿಕೆಯೂ ಹೆಚ್ಚಾಯಿತು. ಈ ಅವಧಿಯಲ್ಲಿ ಹೊಸ ರಸಗೊಬ್ಬರ ಕಾರ್ಖಾನೆಗಳ ಸಂಖ್ಯೆಯು ಸಹ ಹೆಚ್ಚಾಯಿತು. 90 ರ ದಶಕಕ್ಕೆ ಬಂದರೆ ರಸಗೊಬ್ಬರ ಕಾರ್ಖಾನೆಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಯಥಾ ಸ್ಥಿತಿಯನ್ನು ಮುಂದುವರೆಸಿದವು.

ಇದಕ್ಕೆ ಕೋಷ್ಟಕದಲ್ಲಿ ಕೊಟ್ಟಿರುವ ಸಂಚಿತ ಬಂಡವಾಳ ಬಹುತೇಕ ವಾಗಿ ಅಲ್ಪಪ್ರಮಾಣದಲ್ಲಿ ಏರಿರುವುದು ಕಾರಣವಾಗುತ್ತದೆ.

50 ರ ದಶಕದಲ್ಲಿ 64.9 ಕೋಟಿಗಳಿದ್ದ ಸಂಚಿತ ಬಂಡವಾಳ

60 ರ ದಶಕದಲ್ಲಿ 410 ಕೋಟಿಗಳಾಯಿತು.

70 ರ ದಶಕದಲ್ಲಿ 1756 .7 ಕೋಟಿಗಳಾಯಿತು.

80 ರ ದಶಕದಲ್ಲಿ 7020.3 ಕೋಟಿಗಳಾಯಿತು.

90 ರ ದಶಕದಲ್ಲಿ 15477 ಕೋಟಿಗಳಾಯಿತು.

2000-2001 ರಲ್ಲಿ 25450.8 ಕೋಟಿಗಳಾಯಿತು.

ಸಂಚಿತ ಬಂಡವಾಳ ರಸಗೊಬ್ಬರಗಳ ವಲಯದಲ್ಲಿ ದಶಕಗಳಿಂದ ದಶಕಗಳಿಗೆ ಹೆಚ್ಚು ತಲೆ ನಡೆದಿದೆ ಅದರೆ 90 ಮತ್ತು 2000 ದಶಕದಲ್ಲಿ ಹಲವಾರು ಕಾರ್ಖಾನೆಗಳ ರೋಗಗ್ರಸ್ಥ ವಾಗಿದ್ದರಿಂದ ಉತ್ಪಾದನೆಯಲ್ಲಿ ಏರಿಳಿತಗಳ ನ್ನು ಕಾಣಬಹುದಾಗಿದೆ.

ರಸಗೊಬ್ಬರ ಕಾರ್ಖಾನೆಗಳ ತಂತ್ರಜ್ಞಾನ ಸುಧಾರಣೆ

ರಸಗೊಬ್ಬರ ಕಾರ್ಖಾನೆಗಳ ತಂತ್ರಜ್ಞಾನದಲ್ಲಿ ಸುಧಾರಣೆ ರಸಗೊಬ್ಬರ ಕಾರ್ಖಾನೆಗಳು 70 ಮತ್ತು 90 ರ ದಶಕದಿಂದೀಚಿಗೆ ಕಾರ್ಖಾನೆಗಳ ತಂತ್ರಜ್ಞಾನವನ್ನು ನವೀಕರಿಸುತ್ತಲೇ ಬಂದಿದ್ದಾರೆ. ವಿಶ್ವದ ಯಾವುದೇ ಕಾರ್ಖಾನೆಗೆ ಕಡಿಮೆ ಇಲ್ಲದ ಹಾಗೆ ತಂತ್ರಜ್ಞಾನವನ್ನು ವ್ಯವಸ್ಥಿತ ರೀತಿಯಲ್ಲಿ ಅಂದಿನ ಕಾಲ ಕ್ಕನುಗುಣವಾಗಿ ತಂತ್ರಜ್ಞಾನವನ್ನು ಸುಧಾರಿಸಲಾಗಿದೆ. ತಂತ್ರಜ್ಞಾನದ ಸುಧಾರಣೆಯಲ್ಲಿ ಹಿಂದೆ ಬಿದ್ದ ಕೈಗಾರಿಕೆಗಳು ಅಪ್ರಸ್ತುತ ವಾಗುತ್ತ ಹೋಗಿವೆ. ತಂತ್ರಜ್ಞಾನದ ಸುಧಾರಣೆಯಲ್ಲಿ ಮೂಲ ಅಂಶವೆಂದರೆ ಇಂಧ ಬಳಕೆಯಲ್ಲಿ ಕಾರ್ಯಗತಗೊಳಿಸಲಾದ ತಂತ್ರಜ್ಞಾನ. ಇಂಧನವೆ ರಸಗೊಬ್ಬರ ಕಾರ್ಖಾನೆಗಳಿಗೆ ಅತಿ ಭಾರದ ವೆಚ್ಚವಾಗಿ ಕಾಡುತ್ತಿತ್ತು. ಆದರೆ ಇಂಧನದಲ್ಲಿ ಹೆಚ್ಚು ಬೆಲೆಯ ಇಂಧನಕ್ಕೆ ಹೊರತಾಗಿ ಕಡಿಮೆ ವೆಚ್ಚದ ಇಂಧನವನ್ನು ಬಳಕೆಯಾಗುವಂತೆ ಮಾಡುವ ತಂತ್ರಜ್ಞಾನವನ್ನು 90 ರ ದಶಕದಲ್ಲಿ ಅಳವಡಿಸಲಾಯಿತು. ಆದ್ದರಿಂದ ರಸಗೊಬ್ಬರಗಳ ಉತ್ಪಾದನ ವೆಚ್ಚ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು. ಇದರ ಜೊತೆಗೆ ಉತ್ಪಾದನಾ ಘಟಕದ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಹೀಗೆ ಉತ್ಪಾದನಾ ಘಟಕದ ಸಾಮರ್ಥ್ಯ ಹೆಚಿಸುವುದರೊಂದಿಗೆ ರಸಗೊಬ್ಬರಗಳು ಒಂದು ಘಟಕ ಉತ್ಪಾದಿಸುವ ಪ್ರಮಾಣವೂ ಹೆಚ್ಚಾಯಿತು. ಆದ್ದರಿಂದ ವಿಶ್ವದ ಯಾವುದೇ ಮೂಲೆಯಲ್ಲಿ ಅಳವಡಿಸಲಾದ ವೆಚ್ಚ ನಿಯಂತ್ರಣ ತಂತ್ರಜ್ಞಾನವನ್ನು ಭಾರತದ ಹಲವಾರು ರಸಗೊಬ್ಬರ ಕಾರ್ಖಾನೆಗಳು ಅಳವಡಿಸಿಕೊಂಡವು. ತಂತ್ರಜ್ಞಾನದಲ್ಲಿ ಸುಧಾರಣೆಯಲ್ಲಿ ಹಿಂದೆ ಬಿದ್ದ ಹಲವಾರು ಕಾರ್ಖಾನೆಗಳು ರೋಗಗ್ರಸ್ಥವಾಗಿ ನಷ್ಟ ಅನುಭವಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಆದರೆ ಇವುಗಳ ಪ್ರಮಾಣ ಕಡಿಮೆ ಎಂಬುದೊಂದೆ ಸಮಾಧಾನಕರ ಅಂಶ ಆದರೆ ಭಾರತದಲ್ಲಿ ರಸಗೊಬ್ಬರ ಕಾರ್ಖಾನೆಗಳು ಸುದಾರಣೆಗೆ ತಮ್ಮನ್ನು ಒಡ್ಡಿಕೊಂಡಿರುವುದಂತು ಸ್ಪಷ್ಟ.

ತಂತ್ರಜ್ಞಾನದಲ್ಲಿ ನಿರ್ದಿಷ್ಟವಾಗಿ ಹೇಳಬೇಕೆಂದರೆ ಇಂಜನಿಯರ್‌ಗಳು ತಂತ್ರಜ್ಞರ ಸಹಾಯ ಮತ್ತು ಯಂತ್ರೋಪಕರಣಗಳ ತಯಾರಿಕೆ ಭಾರತದಲ್ಲೇ ಲಭ್ಯ. ತಂತ್ರಜ್ಞಾನದ ಮಾಹಿತಿ ಭಾರತದಲ್ಲೇ ಲಭ್ಯವಿರುವುದರಿಂದಿದರ ವೆಚ್ಚ ಸಹ ರಸಗೊಬ್ಬರ ಕಾರ್ಖಾನೆಗಳ ನವೀಕರಣ ಸಂದರ್ಭದಲ್ಲಿ ಅನುಕೂಲಕರವಾಗಿ ಪರಿಣಮಿಸಿದೆಇದಕ್ಕೆ ಸಂಬಂಧಪಟ್ಟಂತೆ ತಂತ್ರಜ್ಞಾನದ ಮತ್ತು ಸೇವಾ ಪರಿಣಿತರ ಆಮದು ಅಲ್ಪಮಟ್ಟದ್ದು. ಇದು ಸುಮಾರು ಶೇ. 20-25 ರಷ್ಟಿದೆ

ಉತ್ಪನ್ನ ಮಿಶ್ರಣ :

ಭಾರತದ ರಸಗೊಬ್ಬರ ಕಾರ್ಖಾನೆಗಳು ವೈವಿಧ್ಯಮಯ ರಸಗೊಬ್ಬರ ಉತ್ಪನ್ನಗಳನ್ನು ಉತ್ಪಾದಿಸುತ್ತವೆ.

2000-2001 ಉತ್ಪನ್ನ ಅನ್ವಯ ರಸಗೊಬ್ಬರಗಳ ಉತ್ಪಾದನೆ (000 ಟನ್‌ಗಳಲ್ಲಿ)

ಯೂರಿಯ ಉತ್ಪಾದನೆ	9777.31
ಅಮೋನಿಯಂ ಸಲ್ಫೇಟ್	587.66
ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್	249.89
ಅಮೋನಿಯಂ ಕ್ಲೋರೈಡ್	77.50
ಸಿಂಗಲ್ ಸೂಪರ್ ಫಾಸ್ಫೇಟ್	2720.11
ಡಿ.ಎ.ಪಿ.	4839.78
ಅಮೋನಿಯಂ ಫಾಸ್ಫೇಟ್	195.28
ಅಮೋನಿಯಂ ಫಾಸ್ಫೇಟ್ ಸಲ್ಫೇಟ್	388.00
ಅಮೋನಿಯಂ ನಟ್ರೇಟ್ ಸಲ್ಫೇಟ್ ಫಾಸ್ಫೇಟ್	158.00
ನೇಟ್ರೋಫಾಸ್ಫೇಟ್	248.00
ವಿವಿಧ NPK	920

ಈ ಕೋಷ್ಟಕದ ಮೂಲಕ ನಮಗೆ ತಿಳಿದು ಬರುವುದೇನೆಂದರೆ ಯೂರಿಯ ಬಹಳ ಜನಪ್ರಿಯ, ವಿಸ್ತೃತವಾಗಿ ರೈತರಲ್ಲಿ ಬಳಕೆಯಿರುವ ರಸಗೊಬ್ಬರ ನಂತರದ ಸ್ಥಾನ ಡಿ.ಎ. ಪಿ. ರಸಗೊಬ್ಬರಕ್ಕೆ ಸಿಗುತ್ತದೆ.

ರಸಗೊಬ್ಬರಗಳ ಉತ್ಪಾದನೆ ಅಂಕಿ ಅಂಶಗಳು

ಸಾರಜನಕ ರಸಗೊಬ್ಬರಗಳು

1951-52 ರಲ್ಲಿ 28900 ರಷ್ಟಿದ್ದ ಸಾರಜನಕ ರಸಗೊಬ್ಬರದ ಉತ್ಪಾದನೆ

1961-62 ರಲ್ಲಿ 1.52 ಲಕ್ಷ ಟನ್‌ಗಳಿಗೆ ಏರಿತು ಐದು ಪಟ್ಟು ಸಾರಜನಕ ಗೊಬ್ಬರಗಳ

ಉತ್ಪಾದನೆ ಹೆಚ್ಚಾಯಿತು.

1971-72 ರಲ್ಲಿ 8.07 ಲಕ್ಷ ಟನ್ ಗಳಿಗೆ ಸಾರಜನಕ ರಸಗೊಬ್ಬರ ಹೆಚ್ಚಾಯಿತು.

1981-82 ರಲ್ಲಿ 27.73 ಲಕ್ಷ ಟನ್ ಗಳಷ್ಟಾಯಿತು. 73.01 ಲಕ್ಷ ಟನ್ ಗಳಷ್ಟಾಯಿತು.

2000-01 ರಲ್ಲಿ 92.30 ಕೋಟಿ ಟನ್ ಗಳಷ್ಟು ಉತ್ಪಾದಿಸಲಾಯಿತು.

ರಂಜಕ ರಸಗೊಬ್ಬರಗಳು

1951-52 ರಲ್ಲಿ 9000 ಟನ್ ಗಳಷ್ಟಿತ್ತು.

1961-62 ರಲ್ಲಿ 62800 ಟನ್ ಗಳಷ್ಟಾಯಿತು.

1971-72 ರಲ್ಲಿ 1.27 ಲಕ್ಷ ಟನ್ ಗಳಷ್ಟಾಯಿತು.

1981-82 ರಲ್ಲಿ 2.15 ಲಕ್ಷಟನ್ ಗಳಷ್ಟಾಯಿತು.

1991-92 ರಲ್ಲಿ 3.72 ಲಕ್ಷಟನ್ ಗಳಷ್ಟಾಯಿತು

2000-01ರಲ್ಲಿ 4.38 ಲಕ್ಷ ಟನ್ ಗಳಷ್ಟಾಯಿತು.

ಆಮದು ಮಾಡಿಕೊಳ್ಳುವ ಪೊಟ್ಯಾಷ್ ರಸಗೊಬ್ಬರ ಹಾಗೂ ಇನ್ನಿತರ ಮಿಶ್ರಣ ರಸಗೊಬ್ಬರಗಳು ಸೇರಿ ಒಟ್ಟು ರಸಗೊಬ್ಬರಗಳ ಉತ್ಪಾದನೆಯಲ್ಲಿ

1951-52 ರಲ್ಲಿ	2.01 ಲಕ್ಷಟನ್ ಗಳಷ್ಟಾಯಿತು.
1961-62 ರಲ್ಲಿ	11-135 ಲಕ್ಷ ಟನ್ ಗಳು
1971-72 ರಲ್ಲಿ	37.41 ಲಕ್ಷಟನ್ ಗಳು
1981-82 ರಲ್ಲಿ	1.03 ಕೋಟಿ ಟನ್ ಗಳಷ್ಟಾಯಿತು.
1991-92	2.32 ಕೋಟಿ ಟನ್ ಗಳಷ್ಟಾಯಿತು.
2000-2001 ರಲ್ಲಿ	3.29 ಕೋಟಿ ಟನ್ ಗಳಷ್ಟಾಯಿತು.

ಇಲ್ಲಿ ಅಂಕಿ ಅಂಶಗಳು ಸಾದಪಡಿಸುವುದೇನೆಂದರೆ ಸಾರಜನಕ ಹಾಗೂ ರಂಜಕ ರಸಗೊಬ್ಬರಗಳ ಉತ್ಪಾದನೆ 1951-52 ರಲ್ಲಿ ಅಲ್ಪ ಪ್ರಮಾಣದಲ್ಲಿತ್ತು ಪ್ರತಿ ಹತ್ತು ವರ್ಷದ ಅಂಕಿ ಅಂಶಗಳನ್ನು ಹೋಲಿಸಿದಾಗ ಸಾರಜನಕ ಹಾಗೂ ರಂಜಕ ರಸಗೊಬ್ಬರಗಳ ಉತ್ಪಾದನೆ ಏರುತ್ತಲೇ ಹೋಯಿತು. 1951-52 ರಲ್ಲಿ ಕೇವಲ 28900 ಟನ್‌ಗಷ್ಟು , ಸಾರಜನಕ ರಸಗೊಬ್ಬರಗಳ ಉತ್ಪಾದನೆ 2000-01 ರಷ್ಟರಲ್ಲಿ 1.094 ಕೋಟಿ ಟನ್ ಗಳಷ್ಟು ಏರಿತು. ಹಾಗಂಯೇ ರಂಜಕ ರಸಗೊಬ್ಬರಗಳ 1951-52 ರಲ್ಲಿ 9000 ಟನ್ ಗಳಷ್ಟಿತ್ತು 4-38 ಲಕ್ಷ ಟನ್ ಗಳಷ್ಟಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 1951-52 ರಲ್ಲಿ 2.01 ಲಕ್ಷ ಟನ್ ಗಳಷ್ಟಿತ್ತು. 2000-01

ಒಟ್ಟು ರಸಗೊಬ್ಬರಗಳ ಉತ್ಪಾದನೆ 3-29ಕೋಟಿ ಟನ್ ಗಳಷ್ಟಾಯಿತು.

ಈ ಎಲ್ಲ ಅಂಕಿ ಅಂಶಗಳ ಮೂಲಕ ನಮಗೆ ತಿಳಿದು ಬರುವುದೇನೆಂದರೆ ರಸಗೊಬ್ಬರಗಳ ಉತ್ಪಾದನೆ ಬಳಕೆ ಅದರಲ್ಲೂ ಸಾರಜನಕ ರಸಗೊಬ್ಬರಗಳ ಒಟ್ಟು ರಸಗೊಬ್ಬರ ಉತ್ಪಾದನೆಯಲ್ಲಿ ಸಿಂಹ ಪಾಲು ಪಡೆದಿರುವುದು. ನಂತರದ ಪಾಲು ರಂಜಕ ರಸಗೊಬ್ಬರಗಳದು. ರಸಗೊಬ್ಬರಗಳ ಉತ್ಪಾದನೆಯಲ್ಲಿ ಏರಿಕೆಗೆ ಕಾರಣ ಅಂದಿನ ಹಸಿರು ಕ್ರಾಂತಿಯ ಪರಿಕಲ್ಪನೆಯಾದ, ಅಧಿಕ ಇಳುವರಿ ತಳಿಗಳು ಮತ್ತು ನೀರಾವರಿ ಕ್ಷೇತ್ರ ವಿಸ್ತರಣೆ. ಅಧಿಕ ಇಳುವರಿ ತಳಿಗಳು ಮತ್ತು ನೀರಾವರಿಯಿಂದಾಗಿ ಇವು ಅಧಿಕ ರಸಗೊಬ್ಬರಗಳ ಬಳಕೆಗೆ ದಾರಿ ಮಾಡಿಕೊಟ್ಟವು, ಇದರಿಂದಾಗಿ ಬೇಡಿಕೆ ಹೆಚ್ಚಾಯಿತು. ಇದರಿಂದಾಗಿ ದಶಕದಿಂದ ದಶಕಕ್ಕೆ ರಸಗೊಬ್ಬರಗಳ ಉತ್ಪಾದನೆಯೂ ಹೆಚ್ಚಾಯಿತು. ರಸಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸುವುದನ್ನು ಭಾರತದ ಸರಕಾರ ಆದ್ಯತೆಯನ್ನಾಗಿ ಪರಿಗಣಿಸಿತ್ತು. ರಸಗೊಬ್ಬರಗಳ ಉತ್ಪಾದನೆಯ ಕೈಗಾರಿಕೋದ್ಯಮಿಗಳಿಗೆ ಕಾರ್ಖಾನೆಯ ಹಂತದಲ್ಲೇ ಸಹಾಯಧನ ನೀಡಲಾಗುತ್ತಿತ್ತು. ಇಂತಹ ಉತ್ತೇಜನಕಾರಿ ನೀತಿಯಿಂದ ರಸಗೊಬ್ಬರ ದಶಕದಿಂದ ದಶಕಕ್ಕೆ ಏರುತ್ತಲೇ ಹೋಯಿತು. ರಸಗೊಬ್ಬರಗಳನ್ನು ಬಳಸಿದಂತೆಲ್ಲ ಬೆಳೆಗಳ ಇಳುವರಿ ಹೆಚ್ಚಾಯಿತು. ಒಂದು ಕ್ವಿಂಟಾಲ್ ಬೆಳೆಯುವ ಕಡೆ 10-12 ಕ್ವಿಂಟಾಲ್ ರೈತರಿಗೆ ಸಿಗತೊಡಗಿತ್ತು. ಇದರಿಂದಾಗಿ ರಸಗೊಬ್ಬರಗಳ ಬಳಕೆ ರೈತರಲ್ಲಿ ಹೆಚ್ಚಾಗಿ ವ್ಯಾಪಕ ಬೇಡಿಕೆ ಇತ್ತು. ರಸಗೊಬ್ಬರಗಳು ರೈತರಿಗೆ ಸಹಾಯಧನ ನೀಡುವುದರ ಮೂಲಕ ಪೂರೈಸಲಾಗುತ್ತಿತ್ತು. ಆದ್ದರಿಂದ ರಸಗೊಬ್ಬರಗಳ ಉತ್ಪಾದನೆ ಇದು ಸ್ವಾತಂತ್ರ್ಯ ನಂತರ ಆರಂಭಿಕ ವರ್ಷಗಳಿಗೆ ಹೋಲಿಸಿದರೆ ಹೆಮ್ಮರವಾಗಿ ಬೆಳೆದು ನಿಂತಿದೆ.

ಉತ್ಪಾದನ ಸಾಮರ್ಥ್ಯದ ಬಳಕೆಯಲ್ಲಿ ವಿಫಲತೆ

ಭಾರತದಲ್ಲಿ ರಸಗೊಬ್ಬರ ಕಾರ್ಖಾನೆಗಳು ಹೆಮ್ಮರವಾಗಿ ಬೆಳೆದು ನಿಂತಿದ್ದರು, ಕೈಗಾರಿಕೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳುವಲ್ಲಿ ವಿಫಲಗೊಂಡಿವೆ. ಕೆಲವು ದಶಕಗಳಲ್ಲಿ ರಸಗೊಬ್ಬರಗಳ ಉತ್ಪಾದನೆ ಸಾಮರ್ಥ್ಯ ಶೇ. 45 ರಿಂದ 70 ರವರೆಗೆ ಉಪಯೋಗಿಸಿಕೊಳ್ಳಲಾಗಿದೆ. ಅತ್ಯಂತ ಕಡಿಮೆ ಸಾಮರ್ಥ್ಯ ಬಳಸಿಕೊಂಡಿದ್ದು ಎಂದರೆ 1980 - 81 ರಲ್ಲಿ ಸಾರಜನಕ ಉತ್ಪಾದನೆಯಲ್ಲಿ ಶೇ. 50 ರಷ್ಟು ಮಾತ್ರ ಬಳಕೆ ಮಾಡಿಕೊಂಡಿದ್ದು, 1983-84 ರಲ್ಲಿ ಸಾರಜನಕ ರಸಗೊಬ್ಬರಗಳ ಉತ್ಪಾದನಾ ಸಾಮರ್ಥ್ಯ ಶೇ. 67 ರಷ್ಟಿತ್ತು ರಂಜಕದ ಕೈಗಾರಿಕೆಯಲ್ಲಿ ಶೇ. 70 ರಷ್ಟಿತ್ತು. 1992-93 ರಲ್ಲಿ ಇದು 88.1 ಕ್ಕೆ ರಿತು ಸಾರಜನಕ ರಸಗೊಬ್ಬರಗಳ ಕಾರ್ಖಾನೆಯಲ್ಲಿ ಶೇ. 85.3 ರಷ್ಟು. 1998-99 ರಲ್ಲಿ ಸಾರಜನಕ ಕಾರ್ಖಾನೆಯಲ್ಲಿ ಶೇ. 99.2 ರಷ್ಟಿತ್ತು. ರಂಜಕ ರಸಗೊಬ್ಬರ ಕಾರ್ಖಾನೆಯಲ್ಲಿ 96.3 ಉತ್ಪಾದನಾ ಸಾಮರ್ಥ್ಯ ಬಳಸಿಕೊಳ್ಳಲಾಯಿತು. 1999-2000 ದಲ್ಲಿ 100 ರಷ್ಟು ಸಾರಜನಕ ರಸಗೊಬ್ಬರ ಕಾರ್ಖಾನೆಯಲ್ಲಿ ಉತ್ಪಾದನಾ ಸಾಮರ್ಥ್ಯ ಬಳಕೆಯಲ್ಲಿತ್ತು. ರಂಜಕ ರಸಗೊಬ್ಬರ ಕಾರ್ಖಾನೆಯಲ್ಲಿ 91.00 ರಷ್ಟಿತ್ತು. ಪ್ರಾರಂಭಿಕ ದಿನಗಳ ರಸಗೊಬ್ಬರ ಕಾರ್ಖಾನೆಗಳು ಅದರಲ್ಲೂ ಸಾರಜನಕ ಹಾಗೂ ರಂಜಕ ಕಾರ್ಖಾನೆ, ಯಲ್ಲಿ ಉತ್ಪಾದನ ಸಾಮರ್ಥ್ಯ ಕಡಿಮೆ, ಪ್ರಮಾಣದಲ್ಲಿತ್ತು. ಆದರೆ ದಶಕಗಳಿಂದ ದಶಕಗಳಿಗೆ ರಸಗೊಬ್ಬರಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಳವಾಗುತ್ತ ನಡೆದಿದೆ. 1998 ರಲ್ಲಿ ಶೇ. 100

ರಷ್ಟು ಉತ್ಪಾದನಾ ಸಾಮರ್ಥ್ಯ ಬಳಸಿಕೊಳ್ಳಲಾಗಿದೆ. ಇದು ಸಾರಜನಕ ರಸಗೊಬ್ಬರದ ಕಾರ್ಖಾನೆಯ ಮಾತಾದರೆ ರಂಜಕ ರಸಗೊಬ್ಬರಗಳ ಸಾಮರ್ಥ್ಯ ಶೇ. 91 ರಷ್ಟು ಬಳಸಿಕೊಳ್ಳಲಾಯಿತು. ಆದರೆ ಸ್ವಾತಂತ್ರ್ಯ ದಿನಗಳ ಪ್ರಾರಂಭದಲ್ಲಿ ಸಾರಜನಕ ಹಾಗೂ ರಂಜಕ ರಸಗೊಬ್ಬರಗಳ ಕಾರ್ಖಾನೆಗಳು ಅಲ್ಪ ಬಳಕೆಯಲ್ಲಿತ್ತು. ಆದರೆ ಮೂರು ದಶಕಗಳಲ್ಲಿ ಕಾರ್ಖಾನೆಗಳ ರಸಗೊಬ್ಬರ ಬಳಕೆ ಸಾಮರ್ಥ್ಯ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುವುದಕ್ಕೆ ತಂತ್ರಜ್ಞಾನ ದಲ್ಲಿ ಮಾಡಲಾದಗಣನೀಯ ಸುಧಾರಣೆ ಹಾಗೂ ಇಂಧನ ಬಳಕೆಯಲ್ಲಾದ ಸುಧಾರಣೆಗಳು ಮುಖ್ಯವಾಗುತ್ತದೆ.


ರಸಗೊಬ್ಬರ ಬಳಕೆ (ಬೇಡಿಕೆ):


ರಸಗೊಬ್ಬರಗಳ ಬಳಕೆ ದಶಕಗಳಿಂದ ದಶಕಕ್ಕೆ ಹೆಚ್ಚುತ್ತಲೆ ಇದೆ. ರಾಷ್ಟ್ರ ಮಟ್ಟದಲ್ಲಿ ರಸಗೊಬ್ಬರ ಬಳಕೆಯನ್ನು 1951-52 ರ (ಕೋಷ್ಟಕ-2) ಸಾರಜನಕ ರಸಗೊಬ್ಬರ ಬಳಕೆ 55000 ಟನ್ ಗಳು ರಂಜಕ ರಸಗೊಬ್ಬರಗಳ ಬಳಕೆ 8800 ಟನ್ ಗಳು, ಪೊಟ್ಯಾಷ್ ರಸಗೊಬ್ಬರಗಳು 6000 ಟನ್ ಗಳಷ್ಟು ಈ ಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 69000 ಟನ್ ಗಳಷ್ಟಿತ್ತು. ಒಂದು ದಶಕದನಂತರ ಅಂದರೆ 1960-62 ರಲ್ಲಿ ಸಾರಜನಕದ ರಸಗೊಬ್ಬರ 2.11 ಲಕ್ಷ ಟನ್ ಗಳಷ್ಟಾಯಿತು. ರಂಜಕ ರಸಗೊಬ್ಬರಗಳ ಬಳಕೆ 53000 ಟನ್ ಗಳಷ್ಟಾಯಿತು. ಪೊಟ್ಯಾಷ್ ರಸಗೊಬ್ಬರಗಳು 29000 ಟನ್ ಗಳಷ್ಟಾಯಿತು. 1970 - 71 ರ ಅವಧಿಯಲ್ಲಿ 14.79 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳ ಬಳಕೆ 5.41 ಲಕ್ಷ ಟನ್ ಗಳಷ್ಟು ರಂಜಕ ರಸಗೊಬ್ಬರಗಳ ಬಳಕೆ 2.36 ಲಕ್ಷ ಟನ್ ಗಳಷ್ಟು ಪೊಟ್ಯಾಷ್ ರಸಗೊಬ್ಬರಗಳ ಬಳಕೆ 1980 - 81 ರಲ್ಲಿ ಅವಧಿಗೆ 36.78 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳ ಬಳಕೆ 12.13 ಲಕ್ಷ ಟನ್ ಗಳಷ್ಟು ರಂಜಕ ರಸಗೊಬ್ಬರಗಳು 6.25 ಲಕ್ಷಟನ್ ಗಳಷ್ಟು, ಪೊಟ್ಯಾಷ್ ರಸಗೊಬ್ಬರಗಳು ಬಳಸಲಾಗುತ್ತಿತ್ತು. ಒಟ್ಟು ರಸಗೊಬ್ಬರಗಳ ಬಳಕೆ ಈ ಅವಧಿಯಲ್ಲಿ 55.15 ಲಕ್ಷಟನ್‌ಗಳಷ್ಟು, 1990-91 79.97 ಲಕ್ಷ ಟನ್ ಗಳಷ್ಟು, ಸಾರಜನಕ ರಸಗೊಬ್ಬರಗಳು 32.25 ಲಕ್ಷ ಟನ್‌ಗಳಷ್ಟು, ರಂಜಕ ರಸಗೊಬ್ಬರಗಳು 13.28 ಲಕ್ಷಟನ್‌ಗಳಷ್ಟು, ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 1.25 ಕೋಟಿ ಟನ್‌ಗಳಷ್ಟು, 2000-01 1.091 ಕೋಟಿ ಟನ್‌ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. 42.14 ಲಕ್ಷ ಟನ್‌ಗಳಷ್ಟು ರಂಜಕ ರಸಗೊಬ್ಬರಗಳನ್ನು ಬಳಸಲಾಯಿತು. ಈಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 1.67 ಕೋಟಿ ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು.

ರಾಜ್ಯವಾರು ರಸಗೊಬ್ಬರಗಳ ಬಳಕೆ:


ರಾಷ್ಟ್ರದಲ್ಲಿ ನಾಲ್ಕು ವಲಯಗಳನ್ನಾಗಿ ವಿಭಜಿಸಲಾಗಿದೆ. (1) ಪೂರ್ವ (2) ಉತ್ತರ (3) ದಕ್ಷಿಣ (4) ಪಶ್ಚಿಮ ಪೂರ್ವ ವಲಯದಲ್ಲಿ 11 ರಾಜ್ಯಗಳು ಒಳಗೊಂಡಿವೆ :- ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ್, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒರಿಸ್ಸಾ, ಸಿಕ್ಕಿಂ ತ್ರಿಪುರ, ಪಶ್ಚಿಮ ಬಂಗಾಳ.

ರಾಷ್ಟ್ರ ಮಟ್ಟದಲ್ಲಿ ರಸಗೊಬ್ಬರಗಳ ಉತ್ಪಾದನೆ ಪೌಷ್ಠಿಕಾಂಶಗಳ ರೂಪದಲ್ಲಿ







ಎಲ್ಲಾ ರಸಗೊಬ್ಬರಗಳ ಉತ್ಪಾದನೆ ಒಟ್ಟು ಪ್ರಮಾಣ ಪೌಷ್ಠಿಕಾಂಶಗಳ ರೂಪದಲ್ಲಿ




ಅಮೋನಿಯಂ ಸಲ್ಫೇಟ್ ಉತ್ಪಾದನೆ







ರಾಷ್ಟ್ರ ಮಟ್ಟದಲ್ಲಿ ರಸಗೊಬ್ಬರಗಳ ಬಳಕೆ ಪೌಷ್ಠಿಕಾಂಶಗಳ ಪ್ರಮಾಣ




ಒಟ್ಟು ರಸಗೊಬ್ಬರಗಳ ಬಳಕೆ ಪೌಷ್ಠಿಕಾಂಶಗಳ ಪ್ರಮಾಣ



ಒಟ್ಟು ರಸಗೊಬ್ಬರಗಳ ಬಳಕೆ ಪೌಷ್ಠಿಕಾಂಶಗಳ ಪ್ರಮಾಣ



ಒಟ್ಟು ರಸಗೊಬ್ಬರಗಳ ಬಳಕೆ ಪೌಷ್ಠಿಕಾಂಶಗಳ ಪ್ರಮಾಣ



ಪೂರ್ವ ವಲಯ:

ರಸಗೊಬ್ಬರ ಬೇಡಿಕೆ ಅಥವಾ ಬಳಕೆಯನ್ನು ನೋಡೋಣ. 1998-99 ರ ಅವಧಿಯಲ್ಲಿ ಮುಂಗಾರಿನಲ್ಲಿ 7.61 ಲಕ್ಷ ಟನ್ ಸಾರಜನಕ, ಹಿಂಗಾರಿನ ಒಟ್ಟು ರಸಗೊಬ್ಬರ 7.75 ಲಕ್ಷ ಟನ್ ಗಳಷ್ಟು ಸಾರಜನಕ ರಸ ಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 15.36 ಲಕ್ಷ ಟನ್ ಗಳ ಬಳಕೆ 1991-92 ಅವಧಿಯಲ್ಲಿ 8.19 ಲಕ್ಷ ಟನ್ ಮುಂಗಾರಿನಲ್ಲಿ ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. 8.49 ಲಕ್ಷ ಟನ್ ಗಳಷ್ಟು ಹಿಂಗಾರಿನಲ್ಲಿ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 16.69 ಲ ಕ್ಷ ಟನ್ ಗಳಷ್ಟನ್ನು ಬಳಸಲಾಯಿತು. 2000-01 ರ ಅವಧಿಯಲ್ಲಿ 7.9 ಲಕ್ಷ ಟನ್‌ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 8.19 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ಸಾರಜನನಕ ರಸಗೊಬ್ಬರಗಳ 16.18 ಲಕ್ಷಟನ್ ಗಳು.

ರಂಜಕ ರಸಗೊಬ್ಬರಗಳು 1998-99 ರ ಅವಧಿಯಲ್ಲಿ 2.32 ಲಕ್ಷ ಟನ್ ಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 3.39 ಲಕ್ಷ ಟನ್ ಗಳಷ್ಟು ಬಳಸಲಾಯಿತು. ಮುಂಗಾರಿನಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 5.72 ಲಕ್ಷಟನ್ ಗಳಷ್ಟು ಬಳಸಲಾಯಿತು. 1999-2000 ದ ಅವಧಿಯಲ್ಲಿ ಮುಂಗಾರಿನಲ್ಲಿ 2.87 ಲಕ್ಷ ಟನ್ ಗಳು, ಹಿಂಗಾರಿನಲ್ಲಿ 3.88 ಲಕ್ಷ ಟನ್ ಗಳು ಒಟ್ಟು ಸರಾಸರಿ ರಂಜಕ ಗೊಬ್ಬರಗಳು ಈ ಅವಧಿಯಲ್ಲಿ ಬಳಸಿದ್ದು 6.76 ಲಕ್ಷ ಟನ್ ಗಳು., 2000-01 ಮುಂಗಾರಿನಲ್ಲಿ 2.74 ಲಕ್ಷಟನ್ ಗಳ ಬಳಕೆ 3.71 ಲಕ್ಷ ಟನ ಗಳ ಬಳಕೆ ಅವಧಿಯಲ್ಲಿ ಒಟ್ಟು ರಂಜಕ ರಸಗೊಬ್ಬರಗಳ ಬಳಕೆ 5.91 ಲಕ್ಷ ಟನ್ ಗಳು. ಪೊಟ್ಯಾಷ್ ರಸಗೊಬ್ಬರಗಳ ಬಳಕೆ 1998-99 ರ ಅವಧಿಯಲ್ಲಿ 0.71 ಲಕ್ಷ ಟನ್ ಗಳ ಪೊಟ್ಯಾಷ್ ಗೊಬ್ಬರಗಳ ಬಳಕೆ ಹಿಂಗಾರಿನಲ್ಲಿ 2.32 ಲಕ್ಷ ಟನ್ ಗಳು ರಸಗೊಬ್ಬರಗಳ ಬಳಕೆ ಒಟ್ಟು ಪೊಟ್ಯಾಷ್ ರಸಗೊಬ್ಬರಗಳ ಬಳಕೆ 3.04 ಲಕ್ಷ ಟನ್ ಗಳು 1999-2000 ರ ಅವಧಿಯಲ್ಲಿ 1.42 ಲಕ್ಷ ಟನ್ ಗಳು ಮುಂಗಾರಿನಲ್ಲಿ ಬಳಸಲಾಯಿತು. 2.34 ಲಕ್ಷ ಟನ್ ಗಳಷ್ಟು ಹಿಂಗಾರಿನಲ್ಲಿ ಬಳಸಲಾಯಿತು. 3.77 ಲಕ್ಷ ಟನ್ ಗಳಷ್ಟುಒಟ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. 2000-01 ರ ಅವಧಿಯಲ್ಲಿ ಮುಂಗಾರಿನಲ್ಲಿ 1-24 ಲಕ್ಷ ಟನ್ ಗಳಷ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 2.36 ಲಕ್ಷ ಟನ್ ಗಳನ್ನು ಬಳಸಲಾಯಿತು. ಒಟ್ಟು ಪೊಟ್ಯಾಷ್ ರಸಗೊಬ್ಬರಗಳ ಬಳಕೆ 3.77 ಲಕ್ಷ ಟನ್ ಗಳನ್ನು 1998-99 ಒಟ್ಟು ರಸಗೊಬ್ಬರಗಳ ಮುಂಗಾರಿನಲ್ಲಿ ಬಳಕೆಯಾಗಿದ್ದು 10.66 ಲಕ್ಷ ಟನ್ ಗಳು ಹಿಂಗಾರಿನಲ್ಲಿ ಬಳಕೆಯಾಗಿದ್ದು 13.47 ಲಕ್ಷ ಟನ್ ಗಳು ಒಟ್ಟು ರಸಗೊಬ್ಬರಗಳ ಬಳಕೆ 24.13 ಲಕ್ಷ ಟನ್‌ಗಳಷ್ಟು. 1999-00 ರ ಅವಧಿಯಲ್ಲಿ ಮುಂಗಾರಿನಲ್ಲಿ ರಸಗೊಬ್ಬರಗಳ ಬಳಕೆ 12.49 ಲಕ್ಷ ಟನ್ ಗಳು ಹಿಂಗಾರಿನಲ್ಲಿ 14.73 ಲಕ್ಷ ಟನ್ ಗಳು ಒಟ್ಟು ರಸಗೊಬ್ಬರಗಳ ಬಳಕೆ 27.22 ಲಕ್ಷ ಟನ್ ಗಳು, 2000-01 ರ ಅವಧಿಯಲ್ಲಿ 11.37 ಲಕ್ಷ ಟನ್‌ಗಳು ರಸಗೊಬ್ಬರಗಳ ಬಳಕೆಯಾಯಿತು. ಹಿಂಗಾರಿನಲ್ಲಿ 14.32 ಲಕ್ಷ ಟನ್ ಗಳಷ್ಟು ಬಳಕೆಯಾಯಿತು. ಈ ಅವಧಿಯಲ್ಲಿ ಒಟ್ಟು 25.74 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳ ಬಳಕೆಯಾಯಿತು.

ಪೂರ್ವ ವಲಯದ ಕೆಲವು ಆಯ್ದ ರಾಜ್ಯಗಳ ರಸಗೊಬ್ಬರಗಳ ಬಳಕೆಯನ್ನು ನೀಡಲಾಗಿದೆ.

ಬಿಹಾರ್ ರಾಜ್ಯದಲ್ಲಿ ರಸಗೊಬ್ಬರಗಳ ಬಳಕೆ:

ಬಿಹಾರ ರಾಜ್ಯದ ರಸಗೊಬ್ಬರಗಳ ಬಳಕೆ ಹೀಗಿದೆ. 1998-99 ರ ಅವಧಿಗೆ ಮುಂಗಾರಿನಲ್ಲಿ 3.42 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 3.23 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ಸಾರಜನಕ ರಸಗೊಬ್ಬರಗಳ ಬಳಕೆ (ಮುಂಗಾರು ಮತ್ತು ಹಿಂಗಾರು ಸೇರಿ) 6.66 ಲಕ್ಷ ಟನ್ ಗಳು 199-00 ಅವಧಿಯಲ್ಲಿ ಮುಂಗಾರಿನಲ್ಲಿ 3.5 ಲಕ್ಷ ಟನ್ ಗಳು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. 3.54 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. 7.10 ಲಕ್ಷ ಟನ್ ಗಳಷ್ಟು ಒಟ್ಟು ರಸಗೊಬ್ಬರಗಳ ಬಳಕೆಯಾಯಿತು.

2000-01 ರ ಅವಧಿಯಲ್ಲಿ ಮುಂಗಾರಿನಲ್ಲಿ 3.78 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 3.67 ಲಕ್ಷಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ಸಾರಜನಕ ರಸಗೊಬ್ಬರಗಳ ಬಳಕೆ 7.45 ಲಕ್ಷ ಟನ್ ಗಳಷ್ಟು

ರಂಜಕ ರಸಗೊಬ್ಬರಗಳ ಬಳಕೆ:

1998-99 ರ ಅವಧಿಗೆ 0.66 ಲಕ್ಷ ಟನ್‌ಗಳಷ್ಟು ಮುಂಗಾರಿನಲ್ಲಿ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 1.05 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 1.72 ಲಕ್ಷ ಟನ್ ಗಳಷ್ಟು 1999-2000 ದ ಅವಧಿಯಲ್ಲಿ 0.99 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 1.11 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಂಜಕ ರಸಗೊಬ್ಬರಗಳ ಬಳಕೆ ಈ ಅವಧಿಯಲ್ಲಿ 2.11 ಲಕ್ಷ ಟನ್ ಗಳು 2000-01 ರ ಅವಧಿಯಲ್ಲಿ ಮುಂಗಾರಿನಲ್ಲಿ 0.55 ಲಕ್ಷಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 1.24 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಈ ಎರಡು ಋತುಮಾನ ಗಳಲ್ಲಿ ಬಳಸಿದ ರಂಜಕ ರಸಗೊಬ್ಬರ 1.8 ಲಕ್ಷಟನ್ ಗಳು.

ಪೊಟ್ಯಾಷ್ ರಸಗೊಬ್ಬರಗಳ ಬಳಕೆ:

1998-99 ರ ಅವಧಿಯ ಮುಂಗಾರಿನಲ್ಲಿ 0.7 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 4.8 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ಪೊಟ್ಯಾಷ್ ರಸಗೊಬ್ಬರಗಳ ಬಳಕೆ 5.5 ಲಕ್ಷ ಟನ್ ಗಳು 1999-2000 ದ ಅವಧಿಯಲ್ಲಿ ಮುಂಗಾರಿನಲ್ಲಿ 2-3 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 4.00 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವದಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 6.4 ಲಕ್ಷಟನ್ ಗಳು 2000-01ರ ಅವಧಿಯಲ್ಲಿ ಮುಂಗಾರಿನಲ್ಲಿ 2.1 ಲಕ್ಷ ಟನ್ ಗಳಷ್ಟು ರಸಗೊಬ್ಬರ ಬಳಸಲಾಯಿತು. ಹಿಂಗಾರಿನಲ್ಲಿ 3.9 ಲಕ್ಷ

ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟುರಸಗೊಬ್ಬರ ಬಳಕೆ 6.00 ಲಕ್ಷ ಟನ್ ಗಳಷ್ಟು.

ಒಟ್ಟು ರಸಗೊಬ್ಬರಗಳು ಬಳಕೆ ಬಿಹಾರದಲ್ಲಿ ಹೀಗಿದೆ. 1998-99 4-16 ಲಕ್ಷಟನ್ ಗಳು ಮುಂಗಾರಿನಲ್ಲಿ, ಹಿಂಗಾರಿನಲ್ಲಿ 4.78 ಲಕ್ಷ ಟನ್ ಗಳು ಒಟ್ಟು ಈ ಅವಧಿಯಲ್ಲಿ 8.94 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಗಿದೆ.

1999-2000 ದ ಅವಧಿಗೆ ಮುಂಗಾರಿನಲ್ಲಿ 4.79 ಲಕ್ಷ ಟನ್ ಗಳು ಹಿಂಗಾರಿನಲ್ಲಿ 5.06 ಲಕ್ಷ ಟನ್ ಗಳು ಒಟ್ಟು ರಸಗೊಬ್ಬರಗಳ ಬಳಕೆ 9.85 ಲಕ್ಷ ಟನ್ ಗಳು.

2000-01 ರ ಅವಧಿಗೆ ಮುಂಗಾರಿನಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 4.55 ಲಕ್ಷ ಟನ್ ಗಳು ಹಿಂಗಾರಿನಲ್ಲಿ 5.31 ಲಕ್ಷ ಟನ್ ಗಳು ಒಟ್ಟು ರಸಗೊಬ್ಬರಗಳ ಬಳಕೆ 9.87 ಲಕ್ಷ ಟನ್ ಗಳು.

ಪಶ್ಚಿಮ ಬಂಗಾಳದಲ್ಲಿ ರಸಗೊಬ್ಬರಗಳ ಬಳಕೆ:

1998 - 99 ರ ಅವಧಿಯ ಮುಂಗಾರಿನಲ್ಲಿ 2.27 ಲಕ್ಷ ಟನ ಗಳ ಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 3.51 ಲಕ್ಷಟನ್‌ಗಳಷ್ಟು ಬಳಸಲಾಯಿತು. ಒಟ್ಟುಸಾರಜನಕ ರಸಗೊಬ್ಬರಗಳ ಬಳಕೆ 5.79 ಲಕ್ಷಟನ್ ಗಳು.

ರಂಜಕ ರಸಗೊಬ್ಬರಗಳ ಬಳಕೆ:

1998-99 ರಲ್ಲಿ ಮುಂಗಾರಿನಲ್ಲಿ 1.09 ಲಕ್ಷ ಟನ್ ಗಳಷ್ಟು ರಂಜಕರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 1.95 ಲಕ್ಷ ಟನ್ ಗಳಷ್ಟು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಂಜಕ ರಸಗೊಬ್ಬರಗಳ ಬಳಕೆ 3.05 ಲಕ್ಷ ಟನ್ ಗಳಷ್ಟು.

1999-2000 ದ ಅವಧಿಗೆ 1.20 ಲಕ್ಷ ಟನ್ ಗಳಷ್ಟು ಮುಂಗಾರಿನಲ್ಲಿ ರಸಗೊಬ್ಬರಗಳನ್ನು ಬಳಸಲಾಯಿತು. 2.35 ಲಕ್ಷ ಟನ್ ಗಳು ರಸಗೊಬ್ಬರಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ ಈ ಅವಧಿಯಲ್ಲ 3.55 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಈ ಅವಧಿಯಲ್ಲಿ ಬಳಸಲಾಯಿತು.

2000-01 ರ ಅವಧಿಗೆ ಮುಂಗಾರಿನಲ್ಲಿ 0.84 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 2.12 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 2.96 ಲಕ್ಷ ಟನ್‌ಗಳು.

ಪೊಟ್ಯಾಷ್ ರಸಗೊಬ್ಬರಗಳ ಬಳಕೆ:

1998-99 0.47 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಮುಂಗಾರಿನಲ್ಲಿ ಬಳಸಲಾಯಿತು. 1.51 ಲಕ್ಷ ಟನ್ ಗಳಷ್ಟು ಹಿಂಗಾರಿನಲ್ಲಿ ಬಳಸಲಾಯಿತು. 1.92 ಲಕ್ಷ ಟನ್ ಗಳಷ್ಟು ಒಟ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಈ ಸಾಲಿನಲ್ಲಿ ಬಳಸಲಾಗಿದೆ.

1999-2000 ದ ಅವಧಿಯಲ್ಲಿ 0.77 ಲಕ್ಷ ಟನ್ ಗಳಷ್ಟು ಮುಂಗಾರಿನಲ್ಲಿ ಬಳಸಲಾಯಿತು. 1.59 ಲಕ್ಷಟನ್ ಹಿಂಗಾರಿನಲ್ಲಿ ಬಳಸಲಾಯಿತು. 2.37 ಲಕ್ಷ ಟನ್ ಗಳಷ್ಟು ಒಟ್ಟುರಸಗೊಬ್ಬರಗಳನ್ನು ಈ ಸಾಲಿನಲ್ಲಿ ಬಳಸಲಾಯಿತು.

2000-01 ರ ಅವಧಿಯಲ್ಲಿ 0.56 ಲಕ್ಷ ಟನ್ ಗಳ ಷ್ಟು ರಸಗೊಬ್ಬರಗಳನ್ನು ಮುಂಗಾರಿನಲ್ಲಿ ಬಳಸಲಾಯಿತು. ಹಿಂಗಾರಿನಲ್ಲಿ 1.69 ಲಕ್ಷಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 2.26 ಲಕ್ಷ ಟನ್ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 1998-99 ರ ಅವಧಿಯಲ್ಲಿ 3.78 ಲಕ್ಷ ಟನ್ ಮುಂಗಾರಿನಲ್ಲಿ ಬಳಸಿದ ಒಟ್ಟು ರಸಗೊಬ್ಬರಗಳು ಹಿಂಗಾರಿನಲ್ಲಿ 6.99 ಲಕ್ಷ ಟನ್ ರಸಗೊಬ್ಬರಗಳನ್ನು ಬಳಸಲಾಯಿತು. 10.77 ಲಕ್ಷ ಟನ್ ರಸಗೊಬ್ಬರಗಳನ್ನು ಬಳಸಲಾಯಿತು.

1999-2000 ಮುಂಗಾರಿನಲ್ಲಿ 4.52 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 7.78 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳು ಒಟ್ಟು ರಸಗೊಬ್ಬರಗಳ ಬಳಸಲಾಯಿತು.12.31 ಲಕ್ಷ ಟನ್ ಗಳಷ್ಟು 2000-01 ರ ಅವಧಿಯಲ್ಲಿ 3.45 ಲಕ್ಷ ಟನ್ ಗಳಷ್ಟು ಮುಂಗಾರುವಿನಲ್ಲಿ ರಸಗೊಬ್ಬರಗಳು ಬಳಕೆಯಾಗಿದೆ. ಹಿಂಗಾರಿನಲ್ಲಿ 7.39 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳ ಬಳಸಲಾಗಿದೆ. 10.85 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು.

ಉತ್ತರ ವಲಯದ ಆಯ್ದ ಎರಡು ರಾಜ್ಯಗಳ ಅಂಕಿ ಅಂಶಗಳು ಇಲ್ಲಿವೆ:

ಉತ್ತರ ವಲಯದಲ್ಲಿ ರಸಗೊಬ್ಬರಗಳ ಬಳಕೆಯ ಚಿತ್ರಣ ಉತ್ತರವಲಯ ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮುಮತ್ತು ಕಾಶ್ಮೀರ, ಪಂಜಾಬ್, ಉತ್ತರ ಪ್ರದೇಶ, ಚಂಡಿಗಡ್, ದೆಹಲಿಗಳನ್ನು ಒಳಗೊಂಡಿದೆ.

ಪಂಜಾಬ್ ರಾಜ್ಯದ ರಸಗೊಬ್ಬರಗಳ ಬಳಕೆ:

ಸಾರಜನಕ ರಸಗೊಬ್ಬರಗಳ ಬಳಿಕ 1998-99 ರ ಅವಧಿಗೆ 4-97 ಲಕ್ಷ ಟನ್ ಗಳು ಮುಂಗಾರಿನಲ್ಲಿ ಓಂಗಾರಿನಲ್ಲಿ 5.83 ಲಕ್ಷ ಟನ್ ಗಳು ಈಅವಧಿಯಲ್ಲಿ ಒಟ್ಟು ಸಾರಜನಕ ರಸಗೊಬ್ಬರಗಳಬಳಕೆ 10.81 ಲಕ್ಷ ಟನ್ 1999-2000 ಅವಧಿಯಲ್ಲಿ 5-03 ಲಕ್ಷ ಟನ್ ಗಳು ಮುಂಗಾರಿನಲ್ಲಿ ಹಿಂಗಾರಿನಲ್ಲಿ 5.82 ಲಕ್ಷ ಟನ್ ಗಳು ಈ ಅವಧಿಯಲ್ಲಿ ಒಟ್ಟು ಸಾರಜನಕ ರಸಗೊಬ್ಬರಗಳ ಬಳಕೆ 10-86 ಲಕ್ಷ ಟನ್ ಗಳು 2000-2001 ರ ಅವಧಿಯಲ್ಲಿ ಮುಂಗಾರಿನಲ್ಲಿ 4.58 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 5.49 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ಸಾರಜನಕ ರಸಗೊಬ್ಬರಗಳು ಈ ಅವಧಿಯಲ್ಲಿ ಬಳಕೆಯಾಗಿದ್ದೆಂದರೆ 10.08 ಲಕ್ಷ ಟನ್ ಗಳು.

ರಂಜಕ ರಸಗೊಬ್ಬರಗಳು:

1998-99 ರ ಅವಧಿಗೆ 0.97 ಲಕ್ಷ ಟನ್ ಗಳಷ್ಟು ಮುಂಗಾರಿನಲ್ಲಿ ಬಳಸಲಾಯಿತು. ಹಿಂಗಾರಿನಲ್ಲಿ 1.77 ಲಕ್ಷ ಟನ್ ಗಳನ್ನು ಒಟ್ಟು ರಂಜಕ ರಸಗೊಬ್ಬರಗಳ ಬಳಕೆ 2.75 ಲಕ್ಷ ಟನ್ 1999-2000 ರ ದ ಅವಧಿಯಲ್ಲಿ 1.52 ಲಕ್ಷ ಟನ್ ರಂಜಕ ರಸಗೊಬ್ಬರ ಮುಂಗಾರಿನಲ್ಲಿ ಬಳಸಲಾಯಿತು. 1.81 ಲಕ್ಷಟನ್ ಗಳು ಹಿಂಗಾರಿನಲ್ಲಿ ಒಟ್ಟು ರಂಜಕ ರಸಗೊಬ್ಬರಗಳ ಬಳಕೆ 3.34 ಲಕ್ಷ ಟನ್ ಗಳು.

2000-01 ಅವಧಿಯಲ್ಲಿ 0.96 ಲಕ್ಷ ಟನ್ ಮುಂಗಾರಿನಲ್ಲಿ ಬಳಸಲಾಗಿತ್ತು. 1.85 ಲಕ್ಷ ಟನ್ ಗಳಷ್ಟು ರಂಜಕ ರಸಗೊಬ್ಬರಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಂಜಕ ರಸಗೊಬ್ಬರಗಳ ಬಳಕೆ 2.81 ಲಕ್ಷ ಟನ್ ಗಳು.

ಪೊಟ್ಯಾಷ್ ರಸಗೊಬ್ಬರಗಳ ಬಳಕೆ:

1998-99 ರ ಅವಧಿಯಲ್ಲಿ 0.051 ಲಕ್ಷ ಟನ್ ಗಳು ಪೊಟ್ಯಾಷ್ ರಸಗೊಬ್ಬರಗಳನ್ನು ಮುಂಗಾರಿನಲ್ಲಿ ಬಳಸಲಾಯಿತು. 0.12 ಲಕ್ಷ ಟನ್ ಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. ಒಟ್ಟು ಪೊಟ್ಯಾಷ್ ರಸಗೊಬ್ಬರ ಬಳಕೆ 0.18 ಲಕ್ಷ ಟನ್ ಗಳು.

1999-2000 ರ ದ ಅವಧಿಗೆ 0.20 ಲಕ್ಷ ಟನ್ ಗಳನ್ನು ಮುಂಗಾರಿನಲ್ಲಿ ಬಳಸಲಾಯಿತು. 0.051 ಲಕ್ಷ ಟನ್ ಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. 0.26 ಲಕ್ಷ ಟನ್ ಗಳು ಎರಡೂ ಋತುಮಾನಗಳಲ್ಲಿ ಬಳಸಿದ ಒಟ್ಟು ಪೊಟ್ಯಾಷ್ ರಸಗೊಬ್ಬರಗಳು.

2000-01 ರ ಅವಧಿಯಲ್ಲಿ ಪೊಟ್ಯಾಷ್ ರಸಗೊಬ್ಬರಗಳ ಬಳಕೆ ಹೀಗಿದೆ. 0.015 ಲಕ್ಷ ಟನ್ ಗಳಷ್ಟು ಪೊಟ್ಯಾಷ್ ರಸಗೊಬ್ಬರ ಗಳನ್ನು ಮುಂಗಾರಿನಲ್ಲಿ ಬಳಸಲಾಯಿತು. 0.08 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. ಒಟ್ಟು ಪೊಟ್ಯಾಷ್ ರಸಗೊಬ್ಬರಗಳ ಬಳಕೆ 0.23 ಲಕ್ಷ ಟನ್ ಗಳು. ಒಟ್ಟು ರಸಗೊಬ್ಬರಗಳ ಬಳಕೆ 1998-99 ರಲ್ಲಿ 6.01 ಲಕ್ಷ ಟನ್ ಗಳು ಮುಂಗಾರಿನಲ್ಲಿ ಬಳಸಲಾಯಿತು. 7.7 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಹಿಂಗಾರಿನಲ್ಲಿ ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 13.75 ಲಕ್ಷ ಟನ್ ಗಳು.

1999-2000 ಅವಧಿಗೆ ಮುಂಗಾರಿನಲ್ಲಿ ಬಳಸಿದ ರಸಗೊಬ್ಬರಗಳು 6.77 ಲಕ್ಷ ಟನ್ ಹಿಂಗಾರಿನಲ್ಲಿ 7.70 ಲಕ್ಷ ಟನ್ ಗಳು ಒಟ್ಟುರಸಗೊಬ್ಬರಗಳ ಬಳಕೆ 14-47 ಲಕ್ಷ ಟನ್ ಗಳು 2000-01 ರ ಅವಧಿಗೆ 5.70 ಲಕ್ಷ ಟನ್ ಗಳು ಮುಂಗಾರಿನಲ್ಲಿ ಬಳಸಿದ್ದು, ಹಿಂಗಾರಿನಲ್ಲಿ ಬಳಸಿದ್ದು 7.45 ಲಕ್ಷ ಟನ್‌ಗಳು ಒಟ್ಟು ರಸಗೊಬ್ಬರಗಳ ಬಳಕೆ 13.13 ಲಕ್ಷ ಟನ್ ರಸಗೊಬ್ಬರಗಳು.

ಉತ್ತರ ಪ್ರದೇಶದಲ್ಲಿ ರಸಗೊಬ್ಬರಗಳ ಬಳಕೆ:

ಸಾರಜನಕ ರಸಗೊಬ್ಬರಗಳ ಬಳಕೆ 1998-99 ರಲ್ಲಿ ಮುಂಗಾರಿನಲ್ಲಿ 11.26 ಲಕ್ಷ ಟನ್ ಗಳು, ಹಿಂಗಾರಿನಲ್ಲಿ 13.21 ಲಕ್ಷ ಟನ್ ಗಳು ಒಟ್ಟು ಈ ಅವಧಿಯಲ್ಲಿ ಬಳಕೆಯಾದ ರಸಗೊಬ್ಬರಗಳು 24.47 ಲಕ್ಷ ಟನ್ ಗಳು 1999-2000 ರ ದ ಅವಧಿಯ ಮುಂಗಾರಿನಲ್ಲಿ ಬಳಕೆಯಾದ ಸಾರಜನಕ ರಸಗೊಬ್ಬರಗಳು 11.85 ಲಕ್ಷ ಟನ್ ಗಳು ಹಿಂಗಾರಿನಲ್ಲಿ ಬಳಕೆಯಾದ ರಸಗೊಬ್ಬರಗಳು 12.01 ಲಕ್ಷಟನ್ ಗಳು. ಈ ಅವಧಿಯಲ್ಲಿ ಒಟ್ಟು ಬಳಕೆಯಾದ ಸಾರಜನಕ ರಸಗೊಬ್ಬರಗಳು 23.86 ಲಕ್ಷ ಟನ್ ಗಳು 2000-01 ರ ಅವಧಿಯಲ್ಲಿ ಬಳಕೆಯಾದ ಸಾರಜನಕ ರಸಗೊಬ್ಬರಗಳು 10.18 ಲಕ್ಷ ಟನ್ ಗಳು ಹಿಂಗಾರಿನಲ್ಲಿ ಬಳಕೆಯಾದ ರಸಗೊಬ್ಬರಗಳು 12.65 ಲಕ್ಷ ಟನ್‌ಗಳುಒಟ್ಟು ಬಳಕೆಯಾದ ರಸಗೊಬ್ಬರಗಳು 22.81 ಲಕ್ಷ ಟನ್ ಗಳು.

ರಂಜಕ ರಸಗೊಬ್ಬರಗಳ ಬಳಕೆ:

1998-99 ರ ಅವಧಿಯ ಮುಂಗಾರಿನಲ್ಲಿ ಬಳಕೆಯಾದ ರಂಜಕ ರಸಗೊಬ್ಬರಗಳು 1.88 ಲಕ್ಷ ಟನ್ ಗಳು ಹಿಂಗಾರಿನಲ್ಲಿ ಬಳಕೆಯಾದ ರ ರಂಜಕ ರಸಗೊಬ್ಬರಗಳು 3.68 ಲಕ್ಷ ಟನ್ ಗಳು ಒಟ್ಟು ಬಳಕೆಯಾದ ರಂಜಕ ರಸಗೊಬ್ಬರಗಳು 5.57 ಲಕ್ಷ ಟನ್ ಗಳು, 1999-2000 ರದ ಅವಧಿಯಲ್ಲಿ ಮುಂಗಾರಿನಲ್ಲಿ ಬಳಕೆಯಾದ ರಂಜಕ ರಸಗೊಬ್ಬರಗಳು 2.79 ಲಕ್ಷ ಟನ್ ಗಳು ಹಿಂಗಾರಿನಲ್ಲಿ ಬಳಕೆಯಾದ 4.95 ಲಕ್ಷ ಟನ್ ಗಳು ಒಟ್ಟುರಂಜಕ ರಸಗೊಬ್ಬರಗಳ ಬಳಕೆ 7.75 ಲಕ್ಷ ಟನ್ ಗಳು 2000-01 ರ ಅವಧಿಯಲ್ಲಿ ಮುಂಗಾರಿನಲ್ಲಿ ರಂಜಕ ರಸಗೊಬ್ಬರಗಳ ಬಳಕೆ 1.39 ಲಕ್ಷ ಟನ್ ಗಳು ಹಿಂಗಾರಿನಲ್ಲಿ 5.45 ಲಕ್ಷ ಟನ್ ಗಳು. ಒಟ್ಟು ರಸಗೊಬ್ಬರಗಳ ಬಳಕೆ ಈ ಅವಧಿಯಲ್ಲಿ 6.85 ಲಕ್ಷ ಟನ್ ಗಳು.

ಪೊಟ್ಯಾಷ್ ರಸಗೊಬ್ಬರಗಳ ಬಳಕೆ:

1998-99 ರ ಅವಧಿಯ ಮುಂಗಾರಿನಲ್ಲಿ ಪೊಟ್ಯಾಷ್ ರಸಗೊಬ್ಬರ ಗಳ ಬಳಕೆ 0.21 ಲಕ್ಷ ಟನ್ ಗಳು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 0.64 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು 0.86 ಲಕ್ಷ ಟನ್ ಗಳಷ್ಟು ಈ ಅವಧಿಯಲ್ಲಿ ಬಳಸಲಾಯಿತು. 1999-2000 ರ ಅವಧಿಗೆ ಮುಂಗಾರಿನಲ್ಲಿ 0.48 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 0.65 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು 1.13 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 2000-01 ರ ಅವಧಿಯಲ್ಲಿ 0.18 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರಿನಲ್ಲಿ 0.83 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 1.01 ಲಕ್ಷ ಟನ್ ಗಳು.

ಒಟ್ಟು ಎಲ್ಲ ರಸಗೊಬ್ಬರಗಳ ಬಳಕೆ:

1998-99 ರ ಮುಂಗಾರಿನ ಅವಧಿಯಲ್ಲಿ 13.36 ಲಕ್ಷ ಟನ್ ರಸಗೊಬ್ಬರಗಳನ್ನು ಬಳಸಲಾಯಿತು.

ಹಿಂಗಾರಿನಲ್ಲಿ 17.55 ಲಕ್ಷ ಟನ್ ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಗಿ ಒಟ್ಟು ರಸಗೊಬ್ಬರಗಳ ಬಳಕೆ 30 ಲಕ್ಷ ಟನ್ ಗಳು 1999-2000 ದ ಅವಧಿಯಲ್ಲಿ 15.13 ಲಕ್ಷ ಟನ್ ಗಳಷ್ಟು ಮುಂಗಾರುವಿನಲ್ಲಿ ರಸಗೊಬ್ಬರಗಳ್ನ ಬಳಸಲಾಯಿತು. ಹಿಂಗಾರುವಿನಲ್ಲಿ 17.62 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 17.62 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಈ ಅವಧಿಯಲ್ಲಿ ಒಟ್ಟು ರಸಗೊಬ್ಬರಗಳ ಬಳಕೆ 32.75 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 2000-01 ರ ಅವಧಿ ಮುಂಗಾರಿನಲ್ಲಿ 11.75 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರುವಿನಲ್ಲಿ 18-92 ಲಕ್ಷ ಟನ್ ಗಳಷ್ಟು ರಸಗೊಬ್ಬರ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ ಈ ಅವಧಿಯಲ್ಲಿ 30.63 ಲಕ್ಷ ಟನ್ ಗಳು.

ದಕ್ಷಿಣ ವಲಯ:

ಈ ವಲಯದಲ್ಲಿ ಬರುವ ರಾಜ್ಯಗಳೆಂದರೆ ಆಂದ್ರ ಪ್ರದೇಶ, ಕರ್ನಾಟಕ, ಕೇರಳ ತಮಿಳುನಾಡು, ಪಾಂಡಿಚೆರಿ ಅಂಡಮಾನ್ ನಿಕೋಬಾರ್ ದ್ವೀಪಗಳು, ಲಕ್ಷ್ ದ್ವೀಪ ಗಳು ವಲಯದಲ್ಲಿ ಎರಡು ಆಯ್ದ ರಾಜ್ಯಗಳ ರಸಗೊಬ್ಬರ ಬಳಕೆಯನ್ನು ಕೊಡಲಾಗಿದೆ.

ಕರ್ನಾಟಕದಲ್ಲಿ ರಸಗೊಬ್ಬರಗಳ ಬಳಕೆ:

1998-99ರ ಅವಧಿಯ ಮುಂಗಾರುವಿನಲ್ಲಿ 3.70 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರ ಗಳನ್ನು ಬಳಸಲಾಯಿತು. ಹಿಂಗಾರುವಿನಲ್ಲಿ 2.68 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟ ಸಾರಜನಕ ರಸಗೊಬ್ಬರಗಳ ಬಳಕೆ 6.38 ಲಕ್ಷ ಟನ್ ಗಳಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 1999-2000 ದ ಅವಧಿಯಲ್ಲಿ ಮುಂಗಾರುವಿನಲ್ಲಿ 4.21 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಹಿಂಗಾರುವಿನಲ್ಲಿ 2.5 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ಸಾರಜನಕ ರಸಗೊಬ್ಬರಗಳ ಬಳಕೆ 6.81 ಲಕ್ಷ ಟನ್ ಗಳ್ಟು 2000-01 ರ ಅವಧಿಯಲ್ಲಿ 4.51 ಲಕ್ಷ ಟನ್ ಗಳ ಸಾರಜನಕ ರಸಗೊಬ್ಬರಗಳನ್ನು ಮುಂಗಾರುವಿನಲ್ಲಿ ಬಳಸಲಾಯಿತು. ಹಿಂಗಾರುವಿನಲ್ಲಿ 2.80 ಲಕ್ಷ ಟನ್ ಗಳಷ್ಟು ಸಾರಜನಕ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟುಸಾರಜನಕ ರಸಗೊಬ್ಬರಗಳ ಬಳಕೆ 7.31 ಲಕ್ಷ ಟನ್ ಗಳು.

23.52 ಲಕ್ಷ ಹೆಕ್ಟೇರುಗಳಲ್ಲಿ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 80 ರಷ್ಟು ರಸಗೊಬ್ಬರಗಳನ್ನು ಬಳಸಿದ್ದಾರೆ. ಪ್ರತಿ ಹೆಕ್ಟೇರುವಾರು ಬಳಸಿದ ರಸಗೊಬ್ಬರಗಳ ಪ್ರಮಾಣ ಇಂತಿದೆ. 25.5 ಕೆ.ಜಿ.ಗಳಷ್ಟು ಸಾರಜನಕ ರಸಗೊಬ್ಬರ 30.3 ಕೆ.ಜಿ.ಗಳಷ್ಟು ರಂಜಕ ರಸಗೊಬ್ಬರ 5.9 ಕೆ.ಜಿ.ಗಳಷ್ಟು ಪೋಟ್ಯಾಷ್ ರಸಗೊಬ್ಬರ, ಒಟ್ಟು ರಸಗೊಬ್ಬರಗಳ ಬಳಕೆ 61.8 ಕೆ.ಜಿ.ಗಳಷ್ಟು.

ದೊಡ್ಡ ಹಿಡುವಳಿದಾರರು :

8.82 ಲಕ್ಷ ಹೆಕ್ಟೇರುವಾರು ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ.79.7 ರಷ್ಟು ರಸಗೊಬ್ಬರಗಳನ್ನು ಬಳಸಲಾಗಿದೆ. ಪ್ರತಿ ಹೆಕ್ಟೇರುವಾರು ಸಮಗ್ರ ಬೆಳೆ ಕ್ಷೇತ್ರದಲ್ಲಿ ಬಳಸಿದ ರಸಗೊಬ್ಬರಗಳು. 18-00 ಕೆ.ಜಿ., ಸಾರಜನಕ ರಸಗೊಬ್ಬರಗಳು 26.5 ಕೆ.ಜಿ. ರಂಜಕ ರಸಗೊಬ್ಬರಗಳು 4.4 ಕೆ.ಜಿ. ಪೊಟ್ಯಾಷ್ ರಸಗೊಬ್ಬರಗಳು. ಒಟ್ಟು ಬಳಸಿದ ರಸಗೊಬ್ಬರಗಳು 48.9 ಕೆ.ಜಿ.ಗಳಷ್ಟು.

ಎಲ್ಲ ಹಿಡುವಳಿಗಳಲ್ಲೂ ಬಳಸಲಾದ ರಸಗೊಬ್ಬರಗಳು :

74.43 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ.77.0 ರಷ್ಟು ರಸಗೊಬ್ಬರಗಳ ಬಳಕೆ ಸರಾಸರಿ 26.7 ಕೆ.ಜಿ. ಸಾರಜನಕ ರಸಗೊಬ್ಬರಗಳು 30.3 ಕೆ.ಜಿ. ರಂಜಕ ರಸಗೊಬ್ಬರಗಳು 8.1 ಕೆ.ಜಿ. ಪೊಟ್ಯಾಷ್ ರಸಗೊಬ್ಬರಗಳು ಒಟ್ಟು ರಸಗೊಬ್ಬರಗಳ ಬಳಕೆ 65.1 ಕೆ.ಜಿ.ಗಳಷ್ಟು

ಹತ್ತಿಯಲ್ಲಿ ರಸಗೊಬ್ಬರಗಳ ಬಳಕೆ

ಅತಿ ಸಣ್ಣ ಹಿಡುವಳಿದಾರರು :

3.92 ಲಕ್ಷ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 86.5 ರಷ್ಟು ರಸಗೊಬ್ಬರಗಳನ್ನು ಬಳಸಿರುವರು. 79.8 ಕೆ.ಜಿ.ಗಳಷ್ಟು ಸಾರಜನಕ ರಸಗೊಬ್ಬರ, 43.2 ಕೆ.ಜಿ. ರಂಜಕ ರಸಗೊಬ್ಬರ 9.0 ಕೆ.ಜಿ. ಪೊಟ್ಯಾಷ್

ರಸಗೊಬ್ಬರ ಪ್ರತಿ ಹೆಕ್ಟೇರಿಗೆ ಬಳಸಿರುವರು ಒಟ್ಟು ರಸಗೊಬ್ಬರಗಳ ಬಳಕೆ 132.1 ಕೆ.ಜಿ. ಹೆಕ್ಟೇರಿಗೆ.

ಸಣ್ಣ ಹಿಡುವಳಿದಾರರು 10.95 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 85.5 ರಷ್ಟು ರಸಗೊಬ್ಬರಗಳನ್ನು ಬಳಸಿರುವರು 65.4 ಕೆ.ಜಿ.ಯಷ್ಟು, ಸಾರಜನಕ ರಸಗೊಬ್ಬರ 34.7 ಕೆ.ಜಿ. ಯಷ್ಟು ರಂಜಕ ರಸಗೊಬ್ಬರ 7.7 ಕೆ.ಜಿ.ಯಷ್ಟು ಪೊಟ್ಯಾಷ್ ರಸಗೊಬ್ಬರ ಗಳನ್ನು ಪ್ರತಿ ಹೆಕ್ಟೇರಿಗೆ ಬಳಸಲಾಯಿತು. ಒಟ್ಟು 107.8 ಕೆ.ಜಿ.ಗಳಷ್ಟು ಪ್ರತಿ ಹೆಕ್ಟೇರಿಗೆ ಬಳಸಲಾಯಿತು.

ಅರೆ ಮಧ್ಯಮ ಹಿಡುವಳಿದಾರರು :

17.17 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 84.1 ರಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 61.7 ಕೆ.ಜಿ.ಗಳಷ್ಟು ಸಾರಜನಕ ರಸಗೊಬ್ಬರಗಳು 27.2 ಕೆ.ಜಿ.ಯಷ್ಟು ರಂಜಕ ರಸಗೊಬ್ಬರಗಳು 6.3 ರಷ್ಟು ಪೋಟ್ಯಾಷ್ ರಸಗೊಬ್ಬರಗಳನ್ನು ಪ್ರತಿ ಹೆಕ್ಟೇರಿಗೂ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 95.2 ಕೆ.ಜಿ.ಗಳಷ್ಟು ಪ್ರತಿ ಹೆಕ್ಟೇರಿಗೆ.

ಮಧ್ಯಮ ಹಿಡುವಳಿದಾರರು :

25-08 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ.81.9 ರಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 53.2 ಕೆ.ಜಿ.ಗಳಷ್ಟು ಸಾರಜನಕ, 20.9 ಕೆ.ಜಿ.ಗಳಷ್ಟು ರಂಜಕ 4.3 ಕೆ.ಜಿ.ಗಳಷ್ಟು ಪೋಟ್ಯಾಷ್ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 77.9 ಕೆ.ಜಿ.ಗಳಷ್ಟು.

ದೊಡ್ಡ ಹಿಡುವಳಿದಾರರು :

11.05 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 77.8 ರಷ್ಟು ರಸಗೊಬ್ಬರ ಬೆಳೆಸಲಾಯಿತು. 51.2 ಕೆ.ಜಿ. ಸಾರಜನಕ ರಸಗೊಬ್ಬರ 15.8 ಕೆ.ಜಿ. ರಂಜಕ ರಸಗೊಬ್ಬರ 2.5 ಕೆ.ಜಿ. ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. 58.5 ಕೆ.ಜಿ. ಸಾರಜನಕ ರಸ ಗೊಬ್ಬರಗಳು 25 ಕೆ.ಜಿ. ರಂಜಕ ರಸಗೊಬ್ಬರಗಳು 5.3 ಕೆ.ಜಿ. ಪೋಟ್ಯಾಷ್ ರಸಗೊಬ್ಬರಗಳು ಒಟ್ಟು ಸರಾಸರಿ ಹತ್ತಿಯಲ್ಲಿ ಎಲ್ಲ ವರ್ಗದ ಹಿಡುವಳಿದಾರರು ಬಳಸಿದ ರಸಗೊಬ್ಬರಗಳು 88.8 ಕೆ.ಜಿ.ಗಳಷ್ಟು.

ಸೆಣಬಿನಲ್ಲಿ ರಸಗೊಬ್ಬರಗಳ ಬಳಕೆ

ಅತಿ ಸಣ್ಣ ರೈತರು :

3.12 ಲಕ್ಷ ಹೆಕ್ಟೇರುಗಳಲ್ಲಿ ಸಮಗ್ರ ಬೆಳೆ ಕ್ಷೇತ್ರ ಶೇ. 65.7 ರಷ್ಟು ರಸಗೊಬ್ಬರಗಳನ್ನು ಬಳಸಲಾಯಿತು.

22.9 ಕೆ.ಜಿ. ಸಾರಜನಕ 7.9 ಕೆ.ಜಿ. ರಂಜಕ 3.9 ಕೆ.ಜಿ. ಪೋಟ್ಯಾಷ್ ರಸಗೊಬ್ಬರಗಳನ್ನು ಪ್ರತಿ ಹೆಕ್ಟೇರಿಗೂ ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 34.6 ಕೆ.ಜಿ.ಗಳಷ್ಟು

ಸಣ್ಣ ಹಿಡುವಳಿದಾರರು :

2.39 ಲಕ್ಷ ಹೆಕ್ಟೇರು ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 69.5 ರಷ್ಟು ರಸಗೊಬ್ಬರವನ್ನು ಬಳಸಲಾಯಿತು. 23.8 ಕೆ.ಜಿ.ಗಳಷ್ಟು ಸಾರಜನಕ 7.8 ಕೆ.ಜಿಗಳಷ್ಟು ರಂಜಕ, 3.8 ಕೆ.ಜಿ.ಗಳಷ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 35.5 ಕೆ.ಜಿ.ಗಳಷ್ಟು.

ಅರೆ ಮದ್ಯಮ ಹಿಡುವಳಿದಾರರು:

1.29 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ.69 ರಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 22.3 ಕೆ.ಜಿ.ಯಷ್ಟು ರಸಗೊಬ್ಬರಗಳನ್ನು ಅವಧಿಯಲ್ಲಿ ಬಳಸಲಾಗಿದೆ.

ಮಧ್ಯಮ ಹಿಡುವಳಿದಾರರು:

0.944 ಲಕ್ಷ ಹೆಕ್ಟೇರು ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ. 63.8 ರಷ್ಟು ರಸಗೊಬ್ಬರಗಳನ್ನು ಬಳಸಲಾಯಿತು. 225 ಕೆ.ಜಿ. ಸಾರಜನಕ ರಸಗೊಬ್ಬರ 4.6 ಕೆ.ಜಿ. ರಂಜಕ ರಸಗೊಬ್ಬರ 8.2 ಕೆ.ಜಿ. ಪೊಟ್ಯಾಷ್ ರಸಗೊಬ್ಬರ 35.3 ಕೆ.ಜಿ.ಯಷ್ಟು, ಒಟ್ಟು ರಸಗೊಬ್ಬರಗಳನ್ನು ಪ್ರತಿ ಹೆಕ್ಟೇರಿಗೂ ಬಳಸಲಾಗಿದ.

ದೊಡ್ಡ ಹಿಡುವಳಿದಾರರು :

0.11 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರದಲ್ಲಿ ಶೇ.45.5 ರಷ್ಟು ರಸಗೊಬ್ಬರಗಳನ್ನು ಬಳಸಲಾಗಿದೆ. 18.6 ಕೆ.ಜಿ.ಗಳಷ್ಟು ಸಾರಜನಕ, 1.4 ಕೆ.ಜಿ.ಗಳಷ್ಟು ರಂಜಕ ರಸಗೊಬ್ಬರ 11.5 ಕೆ.ಜಿ.ಗಳಷ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸಲಾಯಿತು. ಒಟ್ಟು ರಸಗೊಬ್ಬರಗಳ ಬಳಕೆ 31.8 ಕೆ.ಜಿ.ಗಳಷ್ಟು ಪ್ರತಿ ಹೆಕ್ಟೇರಿಗೆ. ಎಲ್ಲ ಹಿಡುವಳಿದಾರರು ಸೇರಿ ಸರಾಸರಿ ಹಿಡುವಳಿ 8.34 ಲಕ್ಷ ಹೆಕ್ಟೇರುಗಳು ಶೇ. 66.7 ರಷ್ಟು ರಸಗೊಬ್ಬರಗಳನ್ನು ಬಳಸಲಾಗಿದೆ.

ಭತ್ತದ ಬೆಳೆ

4.54 ಕೋಟಿ ಹೆಕ್ಟೇರುಗಳಷ್ಟು ಸಮಗ್ರ ಬೆಳೆ ಕ್ಷೇತ್ರದಲ್ಲಿ ರಾಷ್ಟ್ರಾದ್ಯಂತ ಹರಡಿಕೊಂಡಿದೆ ಇಲ್ಲಿ ಸಾರಜನಕ 53.3 ಕೆ.ಜಿ. / ಹೆಕ್ಟೇರ್ 19.1 ಕೆ.ಜಿ. / ಹೆಕ್ಟೇರಿಗೆ ರಂಜಕ, 7-4 ಕೆ.ಜಿ. ಹೆಕ್ಟೇರಿಗೆ / ಪೊಟ್ಯಾಷ್ ರಸಗೊಬ್ಬರ ಒಟ್ಟು 79.8 ಕೆ.ಜಿ. / ಹೆಕ್ಟೇರಿಗೆ ರಸಗೊಬ್ಬರಗಳು ಬಳಸಲಾಗಿದೆ.

ಗೋಧಿಯ ಬೆಳೆ:

ಕ್ಷೇತ್ರ 23-36 ಕೋಟಿ ಹೆಕ್ಟೇರುಗಳ ಸಮಗ್ರ ಬೆಳೆ ಕ್ಷೇತ್ರದಲ್ಲಿ ಹರಡಿಕೊಂಡಿದೆ 61.6 ಕೆ.ಜಿ. / ಹೆಕ್ಟೇರಿಗೆ ಸಾರಜನಕ 21.3 ಕೆ.ಜಿ. / ಹೆಕ್ಟೇರಿಗೆ ರಂಜಕ ರಸಗೊಬ್ಬರ 2.4 ಕೆ.ಜಿ. ಪೊಟ್ಯಾಷ್ ರಸಗೊಬ್ಬರಗಳು ಸರಾಸರಿ 85.3 ಕೆ.ಜಿ. / ಹೆಕ್ಟೇರಿಗೆ.

ಜೋಳದ ಬೆಳೆ:

1.24 ಕೋಟಿ ಹೆಕ್ಟೇರುಗಳು ಸಮಗ್ರ ಬೆಳೆ ಕ್ಷೇತ್ರದಲ್ಲ 17.7 ಕೆ.ಜಿ.ಗಳಷ್ಟು ಸಾರಜನಕ ರಸಗೊಬ್ಬರ 9.7 ಕೆ.ಜಿ.ಯಷ್ಟು ರಂಜಕ ರಸಗೊಬ್ಬರ 2.1 ಕೆ.ಜಿ.ಗಳಷ್ಟು ಪೊಟ್ಯಾಷ್ ರಸಗೊಬ್ಬರಗಳನ್ನು ಪ್ರತಿ ಹೆಕ್ಟೇರಿಗೂ ಬಳಸಲಾಯಿತು.

ಮುಸುಕಿನ ಜೋಳ :

57.78 ಲಕ್ಷ ಹೆಕ್ಟೇರುಗಳ ಸಮಗ್ರ ಬೆಳೆ ಕ್ಷೇತ್ರದಲ್ಲಿ 31.9 ಕೆ.ಜಿ. ಸಾರಜನಕ ರಸಗೊಬ್ಬರ, 12.6 ಕೆ.ಜಿ.ಗಳಷ್ಟು ರಂಜದಕ ರಸಗೊಬ್ಬರ 2.6 ಕೆ.ಜಿ.ಗಳಷ್ಟು ಪೋಟ್ಯಾಷ್ ರಸಗೊಬ್ಬರಗಳು ಬಳಸಲಾಗಿದೆ.

ಬೇಳೆಗಳಲ್ಲಿ :

39-19 ಲಕ್ಷ ಹೆಕ್ಟೇರುಗಳಲ್ಲಿ ಸಮಗ್ರ ಬೆಳೆ ಕ್ಷೇತ್ರವನ್ನು 8.5 ಕೆ.ಜಿ.ಗಳಷ್ಟು ಸಾರಜನಕ 6.7 ರಷ್ಟು ರಂಜಕ 0.3 ರಷ್ಟು ಪೋಟ್ಯಾಷ್ ರಸಗೊಬ್ಬರಗಳನ್ನು ಪ್ರತಿ ಹೆಕ್ಟೇರಿಗೆ ಬಳಸಲಾಗಿದೆ.

ಕಬ್ಬಿನಲ್ಲಿ :

35.37 ಲಕ್ಷ ಹೆಕ್ಟೇರುಗಳಲ್ಲಿ ಸಮಗ್ರ ಬೆಳೆ ಕ್ಷೇತ್ರದಲ್ಲಿ 97.1 ಕೆ.ಜಿ. ಸಾರಜನಕ 38.7 ಕೆ.ಜಿ. ರಂಜಕ 25.1 ಕೆ.ಜಿ. ಪೊಟ್ಯಾಷ್ ಪ್ರತಿ ಹೆಕ್ಟೇರಿಗೆ ಬಳಸಿದ್ದಾರೆ.

ಕಡಲೆ ಕಾಯಿ ಬೆಳೆ :

74.43 ಲಕ್ಷ ಹೆಕ್ಟೇರ್ ಸಮಗ್ರ ಬೆಳೆ ಕ್ಷೇತ್ರ

26.7 ಸಾರಜನಕ ರಸಗೊಬ್ಬರ, 30.3 ಕೆ.ಜಿ. ಯಷ್ಟು ರಂಜಕ ರಸಗೊಬ್ಬರ 8.1 ಕೆ.ಜಿ.ಯಷ್ಟು ಪೊಟ್ಯಾಷ್ ಇಲ್ಲಿ ಅಧ್ಯಯನ ಗೊಂಡಿರುವ ಬೆಳೆಗಳಲ್ಲಿ ಅತಿ ಹೆಚ್ಚು ಬೆಳೆಯುತ್ತಿರುವುದು ಗೋಧಿ ಬೆಳೆ ಎಲ್ಲಾ ಗಾತ್ರದ ಹಿಡುವಳಿದಾರರು ಸೇರಿ ಗೋಧಿ ಬೆಳೆ ಒಟ್ಟು ಸಮಗ್ರ ಬೆಲೆ ಕ್ಷೇತ್ರದಲ್ಲಿ 23.36 ಕೋಟಿ ಹೆಕ್ಟೇರುಗಳಷ್ಟು ಅಕ್ರಮಿಸಿಕೊಂಡಿದೆ. ಅತಿ ಹೆಚ್ಚು ರಸಗೊಬ್ಬರಗಳು ಬಳಕೆಯಾಗಿರುವುದು ಗೋಧಿ ಬೆಳೆಯಲ್ಲಿ ನಂತರದ ಸ್ಥಾನ ಭತ್ತದ ಬೆಳೆಗೆ ದಕ್ಕುತ್ತದೆ. ಉಳಿದ ಬೆಳೆಗಳು ಗೋಧಿ ಮತ್ತು ಭತ್ತದ ಬೆಳೆಗಳ ಮುಂದೆ ಸಮಗ್ರ ಬೆಳೆ ಕ್ಷೇತ್ರ ಮತ್ತು ರಸಗೊಬ್ಬರಗಳ ಬಳಕೆ ಅತಿ ಕಡಿಮೆ ಪ್ರಮಾಣದಲ್ಲಿದೆ. ಎಣ್ಣೆಗಳು ಬೆಳೆಗಳಲ್ಲೊಂದಾದ ಕಡಲೆ ಕಾಯಿ ಬೆಳೆ ಸಹ ನಿರೀಕ್ಷಿತ ಮಟ್ಟದಲ್ಲಿ ಬೆಳೆಯಲಾಗಿಲ್ಲ ಹಾಗೂ ರಸಗೊಬ್ಬರಗಳನ್ನು ಬಳಸಲಾಗಿಲ್ಲ. ಆದ್ದರಿಂದ ಭಾರತ ಇನ್ನು ಎಣ್ಣೆ ಕಾಳುಗಳಲ್ಲಿ ಸ್ವಾವಲಂಭನೆ ಸಾಧಿಸುವಲ್ಲಿ ಸೋತಿರುವುದು. ಆದ್ದರಿಂದ ಎಣ್ಣೆಕಾಳುಗಳ ಬೆಳೆಯ ಸಮಗ್ರ ಬೆಳೆ ಕ್ಷೇತ್ರ ಹಾಗೂ ರಸಗೊಬ್ಬರಗಳ ಬಳಕೆ ಹೆಚ್ಚಾಗಬೇಕಾಗಿದೆ.

ಅಧ್ಯಾಯ-5
ರಸಗೊಬ್ಬರಗಳ ಬೆಲೆ ಮತ್ತು ಸಹಾಯಧನ

ಆಹಾರಧಾನ್ಯಗಳ ಹೆಚ್ಚಳ ಮತ್ತು ರಸಗೊಬ್ಬರಗಳು:

ಭಾರತದಲ್ಲಿ ಶೇ. 70 ರಷ್ಟು ರೈತರು, ಇನ್ನೂ ಕೃಷಿ ಮೇಲೆಯೇ ಅವಲಂಬಿತರಾಗಿದ್ದಾರೆ, ಅದರಲ್ಲೂ ಕೃಷಿ ಶೇ. 27 ರಷ್ಟು ತನ್ನ ಕೊಡುಗೆಯನ್ನು ಆಂತರಿಕ ಉತ್ಪನ್ನಕ್ಕೆ ನೀಡುತ್ತಿದೆ ಇಂತಹ ಸಂದರ್ಭದಲ್ಲಿ ಕೃಷಿ ಲಾಭದಾಯಕವಾಗಬೇಕಾದರೆ ಕೃಷಿಯ ಉತ್ಪಾದಕತೆ ಹೆಚ್ಚಾಗಬೇಕು. ಕೃಷಿ ಉತ್ಪಾದಕತೆ ಹೆಚ್ಚಾಗುವುದೆಂದರೆ ಆಧುನಿಕ ತಂತ್ರಜ್ಞಾನ ಬಳಸುವುದು, ಆಧುನಿಕ ತಂತ್ರಜ್ಞಾನದ ಪ್ರಮುಖ ಅಂಶಗಳೆಂದರೆ ಸಂಕಿರಣಗೊಂಡ ಬೀಜಗಳು, ನೀರು ಮತ್ತು ರಸಗೊಬ್ಬರಗಳ ಬಳಕೆ ರಸಗೊಬ್ಬರಗಳ ಬಳಕೆ ರೈತರಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ. ಇದರ ಜೊತೆಯಲ್ಲಿ ಕೃಷಿ ವಲಯದ ಉತ್ಪಾದಕತೆಯು ಹೆಚ್ಚುತ್ತಿದೆ ರಸಗೊಬ್ಬರಗಳ ಬಳಕೆ ಮತ್ತು ಪೂರೈಕೆಯನ್ನು ಈಗಾಗಲೆ ಬೇರೆ ಅಧ್ಯಾಯದಲ್ಲಿ ನೀಡಿರುವೆ. ರಸಗೊಬ್ಬರಗಳು ಕೃಷಿ ಸಂಪನ್ಮೂಲಗದಲ್ಲಿ ಅತಿ ಪ್ರಮುಖವಾದದ್ದು. ರೈತರು ಆಧುನಿಕ ಕೃಷಿ ತಂತ್ರಜ್ಞಾನವನ್ನು ಅಳವಡಿಸದಿದ್ದರೆ ಉತ್ಪನ್ನಗಳ ಉತ್ಪಾದಕತೆ ಹೆಚ್ಚಾಗುವುದಿಲ್ಲ. ಇಲ್ಲಿ ಉತ್ಪಾದನೆಯ ಹೆಚ್ಚಳವನ್ನು ಸ್ಪಷ್ಟವಾಗಿ ಗಮನಿಸಬಹುದು 1950 - 51 ರಲ್ಲಿ ಪ್ರತಿ ಹೆಕ್ಟೇರಿಗೆ 668 ಕೆ.ಜಿ. ಗಳಿದ್ದ ಭತ್ತ 1960 - 61 ರಲ್ಲಿ 1013 ಕೆ.ಜಿ.ಗಳಷ್ಟಾಯಿತು. 1970 - 71 ರಲ್ಲಿ 1123 ಕೆ.ಜಿಗಳಷ್ಟಾಯಿತು 1980-81 ರಲ್ಲಿ 1336 ಕೆ.ಜಿ.ಗಳಷ್ಟಾಯಿತು. 1990 - 91 ರಲ್ಲಿ 1740 ಕೆ.ಜಿಗಳಷ್ಟಾಯಿತು. 1999-2000 ಅವಧಿಯಲ್ಲಿ 1990 ಕೆ.ಜಿ.ಗಳಷ್ಟಾಯಿತು. ಕಳೆದ ಶತಮಾನದ ಪ್ರಾರಂಭಾವಧಿ ಯಲ್ಲಿ ಕೇವಲ 668 ಕೆ.ಜಿಗಳಿದ್ದ ಭತ್ತ 1999 - 2000 ದ ವೇಳೆಗೆ 1990 ಕೆ.ಜಿ.ಗಳಷ್ಟಾಯಿತು. ಇದು ಮೂರು ಪಟ್ಟು ಹೆಚ್ಚಾಗಿದೆ. ಹಾಗೆಯೇ ಉಳಿದ ಬೆಳೆಗಳನ್ನು ಪರಿಶೀಲಿಸೋಣ 1950 - 51 ರಲ್ಲಿ ಪ್ರತಿ ಹೆಕ್ಟೇರಿಗೆ 663 ಕೆ.ಜಿ. ಇದ್ದ ಗೋಧಿ 1960 - 61 ರಲ್ಲಿ 1013 ಕೆ.ಜಿ.ಗಳಷ್ಟಾಯಿತು. 1970-71 ರಲ್ಲಿ 1307 ಕೆ.ಜಿಗಳಾಯಿತು. 1980 -81 ರಲ್ಲಿ 1630 ಕೆ.ಜಿಗಳಾಯಿತು. 1990 -91 ರಲ್ಲಿ 2281 ಕೆ.ಜಿಗಳಷ್ಟಾಯಿತು. 1999 - 2000 ದ ಅವಧಿಗೆ 2755 ಕೆ.ಜಿ.ಗಳಾಯಿತು. ಇಲ್ಲಿಯು ಸಹ ನಾಲ್ಕು ದಶಕಗಳ ಅವಧಿಯಲ್ಲಿ ಗೋಧಿಯ ಬೆಳೆಯೂ ಸಹ ದ್ವಿಗುಣಗೊಂಡಿದೆ ಜೋಳದ ಬೆಳೆಯನ್ನು ತೆಗೆದುಕೊಂಡರೆ 1950-51 ರಲ್ಲಿ 353 ಕೆ.ಜಿ. / ಹೆಕ್ಟೇರಿಗೆ ಇದ್ದ ಇಳುವರಿ, 1960 - 61 ರಲ್ಲಿ 533 ಕೆ.ಜಿ.ಗಳಾಯಿತು. 1970 - 71 ರಲ್ಲಿ 466 ಕೆ.ಜಿ.ಗಳಾಯಿತು. 1980 - 81 ರ ಅವಧಿಯಲ್ಲಿ 660 ಕೆ.ಜಿಗಳಾಯಿತು. 1990 -91 ರ ಅವಧಿಯಲ್ಲಿ 814 ಕೆ.ಜಿಗಳಷ್ಟಾಯಿತು. 1999 - 2000 ದ ಅವಧಿಗೆ 852 ಕೆ.ಜಿ.ಗಳಷ್ಟಾಯಿತು. ಬಹುತೇಕವಾಗಿ ಜೋಳದ ಇಳುವರಿ ಹತ್ತತ್ತಿರ ಮೂರು ಪಟ್ಟು ಹೆಚ್ಚಾಯಿತು. ಮುಸುಕಿನ ಜೋಳ 1950 51 ರಲ್ಲಿ 547 ಕೆ.ಜಿಗಳ

ಷ್ಟಿತ್ತು 1960 - 61 ರಲ್ಲಿ 926 ಕೆ.ಜಿ.ಗಳಷ್ಟಾಯಿತು. 1970 - 71 ರಲ್ಲಿ 1279 ಕೆ.ಜಿಗಳಷ್ಟಾಯಿತು. 1980 -81 ರಲ್ಲಿ 1159 ಕೆ.ಜಿಗಳಷ್ಟಾಯಿತು. 1999 - 2000 ದಲ್ಲಿ ಕೆ.ಜಿಗಳಷ್ಟಾಯಿತು. ಮುಸುಕಿನ ಜೋಳದಲ್ಲೂ ರಸಗೊಬ್ಬರಗಳ ಬಳಕೆಯಾದ 4 ದಶಕಗಳ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಾಗಿದೆ. ಒಟ್ಟಾರೆಯಾಗಿ ಆಹಾರ ಧಾನ್ಯಗಳಲ್ಲಿ 1950 - 51 ರ ಅವಧಿಯಲ್ಲಿ 542 ಕೆ.ಜಿ.ಗಳಷ್ಟಾಯಿತು. 1960 - 61 ರಲ್ಲಿ 753 ಕೆ.ಜಿ.ಗಳಷ್ಟಾಯಿತು. 1970 -71 ರಲ್ಲಿ 949 ಕೆ.ಜಿ.ಗಳಷ್ಟಾಯಿತು. 1980 -81 ರಲ್ಲಿ 1142 ಕೆ.ಜಿಗಳಷ್ಟಾಯಿತು. 1990 -91 ರ ಅವಧಿಯಲ್ಲಿ 1571 ಕೆ.ಜಿಗಳಷ್ಟಾಯಿತು. 1999 - 2000 ರ ದ ಅವಧಿಯಲ್ಲಿ 1919 ಕೆ.ಜಿ.ಗಳಷ್ಟಾಯಿತು. 4 ದಶಕಗಳಲ್ಲಿ ಒಟ್ಟು ಆಹಾರ ಧಾನ್ಯಗಳ ಉತ್ಪಾದಕತೆ ನಾಲ್ಕು ಪಟ್ಟು ಹೆಚ್ಚಾಗಿದೆ.

ದ್ವಿದಳ ಧಾನ್ಯಗಳ ಉತ್ಪಾದಕತೆಯೂ ಸಹ 1950 - 51 ರಲ್ಲಿ 441 ಕೆ.ಜಿಗಷ್ಟು ಪ್ರತಿ ಹೆಕ್ಟೇರಿಗೂ ಇತ್ತು 1960 - 61 ರಲ್ಲಿ 539 ಕೆ.ಜಿಗಳಾಯಿತು. 1970 - 71 ರಲ್ಲಿ 524 ಕೆ.ಜಿಗಳಾಯಿತು. 1999 - 2000 ದಲ್ಲಿ 630 ಕೆ.ಜಿಗಳಾಯಿತು. ನಾಲ್ಕು ದಶಕಗಳಲ್ಲಿ ದ್ವಿದಳ ಧಾನ್ಯಗಳ ಉತ್ಪಾದಕತೆ ಸ್ವಲ್ಪ ಮಟ್ಟಿಗೆ ಹೆಚ್ಚಿದೆ.

ಭತ್ತ ಗೋಧಿ ಇನ್ನಿತರ ಆಹಾರ ಧಾನ್ಯಗಳಲ್ಲಿ ಬಂದ ಅಧಿಕ ಇಳುವರಿ ತಳಿಗಳು 60 ದಶಕದಲ್ಲಿ ಬಿಡುಗಡೆಯಾಗಿ, ರೈತರ ಹೊಲಗಳಿಗೆ ಬಂದವು ಆದರೆ ದ್ವಿದಳ ಧಾನ್ಯಗಳ ಸಂಶೋಧನೆ ತಡವಾಗಿ ಆಯಿತು. ದ್ವಿದಳ ಧಾನ್ಯಗಳ ಸಂಶೋಧನೆಗೆ ಅಷ್ಟು ಮಹತ್ವ ನೀಡಿರಲಿಲ್ಲ. ದ್ವಿದಳ ಧಾನ್ಯಗಳನ್ನು ತೃಣ ಧಾನ್ಯಗಳು (Cereals) ಗಳಲ್ಲಿ ಬೇಕಾ ಬಿಟ್ಟಿಯಾಗಿ ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದರು. ತೃಣ ಧಾನ್ಯಗಳಲ್ಲಿ ಸಂಶೋಧನೆ ಹೇರಳವಾಗಿ ನಡೆದಿದೆ. ಆದರೆ ದ್ವಿದಳ ಧಾನ್ಯ ಮತ್ತು ಎಣ್ಣೆ ಕಾಳುಗಳಲ್ಲಿ ಆಧುನಿಕ ಕೃಷಿ ತಂತ್ರಜ್ಞಾನ ತಡವಾಗಿ ಪ್ರವೇಶಿಸಿತು. ರೈತರಲ್ಲೂ ದ್ವಿದಳ ಧಾನ್ಯಗಳು ಹಾಗೂ ಎಣ್ಣೆ ಕಾಳುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬೆಳೆಯುವ ಅಭ್ಯಾಸವಿರಲಿಲ್ಲ ರೈತರ ಸ್ವಉಪಯೋಗಕ್ಕಾಗಿ ಅದರಲ್ಲೂ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು.ಅಧಿಕ ಇಳುವರಿ ತಳಿಗಳು, ಸಂಕರಗೊಂಡ ತಳಿಗಳು ಅತಿ ತಡವಾಗಿ ರೈತರ ಹೊಲಗಳಿಗೆ ಪ್ರವೇಶಿಸಿದವು ಅದರಲ್ಲೂ ರೈತರಿಗೆ ದ್ವಿದಳ ಧಾನ್ಯಗಳಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲು, ಉತ್ಸಾಹ ವಿರಲಿಲ್ಲ ಸಂಶೋಧನೆಗೆ ಹೆಚ್ಚು ಮಹತ್ವವನ್ನು ದ್ವಿದಳ ಧಾನ್ಯಗಳಲ್ಲಿ ನೀಡದಿದ್ದು. ರೈತರ ತೃಣ ಧಾನ್ಯಗಳನ್ನು ಹೆಚ್ಚಾಗಿ ಬಳಸುವ ಪದ್ಧತಿ ಹಾಗೂ ದ್ವಿದಳ ಧಾನ್ಯಗಳ ಬಳಕೆಯು ಕಡಿಮೆ ಪ್ರಮಾಣದಲ್ಲಿರುವದರಿಂದ ತೃಣ ಧಾನ್ಯಗಳಾದ ಭತ್ತ, ಗೋಧಿ, ರಾಗಿ ಮುಂತಾದವುಗಳಿಗೆ ನೀಡಿದ

ಸಂಶೋಧನೆ ಪ್ರಾಮುಖ್ಯತೆ ದ್ವಿದಳ ಧಾನ್ಯಗಳಿಗೆ ಸಿಗದೇ ಇರುವುದೆ ದ್ವಿದಳ ಧಾನ್ಯಗಳ ಉತ್ಪಾದಕತೆಯಲ್ಲಿ ಅಷ್ಟರ ಮಟ್ಟಿಗೆ ಏರಿಕೆ ನಡೆಯಲಿಲ್ಲ.

ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಯೋ ಅಥವಾ ಕೃಷಿ ಸಂಪನ್ಮೂಲಗಳಿಗೆ ಬೆಲೆ ಕಡಿತವೋ:

ಆಧುನಿಕ ತಂತ್ರಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿಕೊಂಡ ಮೇಲೆ ಕೃಷಿಯ ಉತ್ಪಾದಕತೆ ಹೆಚ್ಚಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಕೃಷಿ ಉತ್ಪಾದಕತೆ ಹೆಚ್ಚಾಗುವುದಕ್ಕೆ ಅಧಿಕ ಇಳುವರಿ ತಳಿಗಳು, ನೀರಾವರಿ ಹಾಗೂ ರಸಗೊಬ್ಬರಗಳ ಬಳಕೆ ಎಂಬುದರಲ್ಲಿ ಸಂಶಯವಿಲ್ಲ, ಅಧಿಕ ಇಳುವರಿ ತಳಿಗಳು ರಸಗೊಬ್ಬರಗಳಿಗೆ ಉತ್ಸಾಹಕರ ಪ್ರತಿಕ್ರಿಯೆ ತೋರಿವೆ, ಈ ತಳಿಗಳು ಇಳುವರಿ ಮೂರು ಪಟ್ಟು ನಾಲ್ಕು ಪಟ್ಟು ಹೆಚ್ಚಾಗುವುದರಲ್ಲಿ ಯಶಸ್ವಿಯಾಗಿರುವುದನ್ನು ಈಗಾಗಲೆ ನಾವು ನೋಡಿದ್ದೇವೆ. ಆದರೆ ಇಲ್ಲಿ ನಮಗೆ ತಿಳಿಯಬೇಕಾಗಿರುವ ಪ್ರಮುಖವಾದ ಅಂಶವೆಂದರೆ ರಸಗೊಬ್ಬರಗಳ ಬೆಲೆ ನಿಗಧಿ ಮಾಡುವುದು, ಏಕೆಂದರೆ ರಸಗೊಬ್ಬರಗಳ ಬೆಲೆ ಮತ್ತು ಕೃಷಿ ವಲಯದ ಉತ್ಪಾದಕತೆ ನೇರ ಸಂಬಂಧ ಹೊಂದಿದೆ, ರಸಗೊಬ್ಬರಗಳ ಬೆಲೆ ಕಡಿಮೆಯಾದಂತೆ , ರಸಗೊಬ್ಬರಗಳ ಬೇಡಿಕೆ ಹೆಚ್ಚಾಗುತ್ತದೆ. ರಸಗೊಬ್ಬರಗಳ ಬಳಕೆಯು ಜಾಸ್ತಿಯಾಗುತ್ತದೆ. ರಸಗೊಬ್ಬರ ಬಳಕೆ ಜಾಸ್ತಿಯಾಗುವುದರಿಂದ , ಕೃಷಿ ವಲಯದ ಉತ್ಪಾದಕತೆಯು ಹೆಚ್ಚಾಗುತ್ತದೆ. ಕೃಷಿ ವಲಯದ ಉತ್ಪಾದಕತೆ ಹೆಚ್ಚಾದರೆ, ಕೃಷಿ ಉತ್ಪನ್ನಗಳಲ್ಲಿ ಸ್ವಾವಲಂಬಿ ಸಾಧಿಸಿ ಕೃಷಿ ಉತ್ಪನ್ನಗಳ ಆಮದುವಿನಲ್ಲಿ ಕಡಿತಗೊಳಿಸಬಹುದು. ಇದು ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೀಗೆ ವಿದೇಶಿ ವಿನಿಮಯ ಹೆಚ್ಚಳದಿಂದ ವಿದೇಶಿ ಪಾವತಿಯನ್ನು ತೀವ್ರ ಗತಿಯಲ್ಲಿ ಹೆಚ್ಚಿಸಬಹುದು. ಆದ್ದರಿಂದ ರಸಗೊಬ್ಬರಗಳ ಬೆಲೆ ನಿಗಧಿ ಅತಿ ಮುಖ್ಯವಾಗುತ್ತದೆ.

ಇಲ್ಲಿ ಮತ್ತೊಂದು ವಾದವಿದೆ ವಿದ್ವಾಂಸರಾದ (ಸ್ವಾಮಿ) ತಮ್ಮ ಸಂಶೋಧನೆಯಲ್ಲಿ, ಹೀಗೆ ಹೇಳುತ್ತಾರೆ ಕೃಷಿ ಸಂಪನ್ಮೂಲಗಳಿಗೆ ಕಡಿಮೆ ಬೆಲೆ ಇರಬೇಕೋ ಅಥವಾ ಕೃಷಿ ಉತ್ಪನ್ನಗಳಿಗೆ ಹೆಚ್ಚು ಬೆಲೆ ಇರಬೇಕೋ? ಎಂಬುದನ್ನು ಚರ್ಚಿಸುತ್ತಾರೆ ಕೃಷಿ ಉತ್ಪನ್ನಗಳಿಗೆ ಹೆಚ್ಚು ಬೆಲೆ ನಿಗದಿ ಮಾಡುವುದರಿಂದ ಇದು ಆರ್ಥಿಕ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದು ಹಣ ದುಬ್ಬರಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ರೈತರಿಗೆ ಅನುಕೂಲವಾಗಬೇಕೆಂದರೆ ಕೃಷಿ ಉತ್ಪನ್ನಗಳಿಗೆ ಅಧಿಕ ಬೆಲೆ ನಿಗದಿ ಮಾಡುವುದಕ್ಕಿಂತ ಕೃಷಿ ಸಂಪನ್ಮಲಗಳನ್ನು ಕಡಿಮೆ ಬೆಲೆಗೆ ರೈತರಿಗೆ ಸರಬರಾಜು ಮಾಡುವುದು ಔಚಿತ್ಯ ಪೂರ್ಣವಾದದ್ದು ಆದ್ದರಿಂದ ರೈತರಿಗೆ ತಾವು ಬೆಳೆದ ಉತ್ಪನ್ನಗಳಿಗೆ ಹೆಚ್ಚು ಬೆಲೆ ನಿಗದಿ ಮಾಡುವುದಕ್ಕಿಂತ ರೈತರಿಗೆ ಆರ್ಥಿಕ ಫಲಗಳನ್ನು ಸಂಪನ್ಮೂಲಗಳನ್ನು ಕಡಿಮೆ ಬಲೆಗೆ ಪೂರೈಸುವುದರಿಂದ ರೈತರಿಗೂ ಅನುಕೂಲವಾಗುತ್ತದೆ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆಯೂ ಕೆಟ್ಟ ಪರಿಣಾಮ ಬೀರುವುದಿಲ್ಲ. ಇದು ಒಂದು ವಾದವಿರಬಹುದು ಆದರೆ ಕೃಷಿ ಸಂಪನ್ಮೂಲ ಬೆಲೆ ಹಾಗೂ ಕೃಷಿ ಉತ್ಪನ್ನಗಳ ಬೆಲೆ ನಡುವೆ ಸಮಾನತೆ ಇರಬೇಕು ಎಂಬ ಚರ್ಚೆ ಇದೆ. ಸರಕಾರ ಎಷ್ಟೇ ಹೇಳಲಿ ಕೃಷಿ ಸಂಪನ್ಮೂಲಗಳ ಬೆಲೆ ಅಧಿಕ ಪ್ರಮಾಣದಲ್ಲಿ ಏರುತ್ತಿರುತ್ತದೆ. ಹಾಗೆಯೇ ಕೃಷಿ ಉತ್ಪನ್ನಗಳ ಬೆಲೆ ತೀವ್ರ ಗತಿಯಲ್ಲಿ ಕುಸಿಯುತ್ತಿರುತ್ತದೆ. ಈ

ವಿದ್ಯಮಾನಗಳಿಂದಾಗಿ ಕೃಷಿಕರು ಹೆಚ್ಚು ಪಾವತಿಸುತ್ತಾರೆ. ಕಡಿಮೆ ಪಡೆಯುತ್ತಾರೆ. ಎಂದು ಅನೇಕ ಅರ್ಥ ಶಾಸ್ತ್ರಜ್ಞರು ವಾದಿಸುತ್ತಾರೆ ಕೃಷಿಕರು ಪಡೆಯುವುದಕ್ಕಿಂತ ಪಾವತಿಸುವುದು ಅಧಿಕವಾಗಿರುವುದರಿಂದ , ರೈತರಿಗೆ ಕೃಷಿ ಲಾಭದಾಯಕವಾಗಿಲ್ಲದಿರುವುದು. ಆದ್ದರಿಂದ ರೈತರು ಪಡೆಯುವ ಮತ್ತು ಪಾವತಿಸುವುದರ ಮಧ್ಯೆ ಸಮಾನತೆ ಇರಬೇಕು ಈ ವಾದ ಇದ್ದೇ ಇದೆ. ಆದರೆ ವಾಸ್ತವವಾಗಿ ಈ ವಾದಕ್ಕೆ ಪುಷ್ಠಿ ನೀಡುವಂತೆ ರೈತರು ಯಾವುದೇ ಬೆಳೆ ಬೆಳೆದರು ಅದರಿಂದ ಅವರಿಗೆ ಬರುವ ಆದಾಯ ಮಾತ್ರ ಗಣನೀಯವಲ್ಲ, ಒಟ್ಟು ಗ್ರಾಮೀಣಾಭಿವೃದ್ಧಿಯಾಗುವಲ್ಲಿ ಸೋಲುತ್ತದೆ. ಇಂದಿಗೂ ಶೇ. 80 ರಷ್ಟು ರೈತರು ಕಚ್ಚಾ ಮನೆಗಳಲ್ಲಿ ವಾಸ ಮಾಡಿಕೊಂಡು ಅಪೌಷ್ಠಿಕತೆಯಿಂದ ನರಳುತ್ತಿರುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಆದರೆ ರೈತರ ಸಂಪನ್ಮೂಲಗಳಿಗಲ್ಲ ಕೊಟ್ಟ ಸರಕಾರದ ಬೆಂಬಲ ರೈತರ ಅಭಿವೃದ್ಧಿಗೆ ಏನೂ ಕೆಲಸ ಮಾಡಿಲ್ಲವೆ ಎಂಬ ಹಲವು ಸಂಶಯಗಳು ಏಳುತ್ತವೆ.

ಆದರೆ ರೈತರಿಗೆ ಸರಕಾರ ನೀಡುವ ಸಂಪನ್ಮೂಲಗಳ ಸಹಾಯಧನ, ಅವರಿಗೆ ತಲುಪುವಷ್ಟರಲ್ಲಿ ಕುಗ್ಗುತ್ತ ಹೋಗುತ್ತದೆ, ಹೀಗೆ ಸರಕಾರಿ ಫಲಗಳು ರೈತರಿಗೆ ವಿವಿಧ ವಾಹಿನಿಗಳ (channels) ಮೂಲಕ ಬರುವಷ್ಟರಲ್ಲಿ ರೈತರಿಗೆ ಬದುಕನ್ನು ಸಮೃದ್ಧಗೊಳಿಸಬಲ್ಲಂತಹ ಫಲಗಳಾಗುವಲ್ಲಿ ಸೋಲುತ್ತವೆ. ಆದ್ದರಿಂದ ರೈತರು ಬಳಸುವ ಸಂಪನ್ಮೂಲಗಳಿಗೆ ನೀಡುವ ಸರಕಾರದ ಬೆಂಬಲ ಅಂದರೆ ಸಹಾಯಧನ ಇತರ ಉತ್ತೇಜಕಗಳನ್ನು ಮಧ್ಯವರ್ತಿಗಳು ಕಬಳಿಸುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ರೈತರಿಗೋಸ್ಕರ ರಸಗೊಬ್ಬರ ನಂತರ ಸಂಪನ್ಮೂಲಕ್ಕೆ ನೀಡುವ ಸಹಾಯಧನ ಇನ್ನಿತರ ಉತ್ತೇಜಕಗಳು ರಸಗೊಬ್ಬರ ಉತ್ಪಾದಿಸುವ ಕಾರ್ಖಾನೆ ಮಾಲೀಕರಿಗೆ ತಲುಪುತ್ತದೆಯೇ ಹೊರತು ರೈತರಿಗಲ್ಲ. ರಸಗೊಬ್ಬರ ಕಾರ್ಖಾನೆಯ ಮಾಲೀಕರು ಆ ಹಂತದಲ್ಲಿ ಹೆಚ್ಚು ಪ್ರಯೋಜನ ಪಡೆದಿದ್ದಾರೆ ಆದರೆ ರೈತರು ರಸಗೊಬ್ಬರ ಗಳು ಪಡೆಯುವಾಗ ಕಾರ್ಖಾನೆ ಬೆಲೆಗೂ ಕಾರ್ಖಾನೆಯೋತ್ತರ ಬೆಲೆ ಯ ನಡುವೆ ಅಪಾರ ಅಂತರವನ್ನು ನೋಡಬಹುದು. ರೈತರಿಗೆ ಈ ಉತ್ತೇಜನದಿದಂದ ಸಹಾಯವಾಗುತ್ತದೆ. ಎಂಬುದು ಮಿಥ್ಯೆಯಾಗಿದೆ. ಆದ್ದರಿಂದ ಸಂಪನ್ಮೂಲಗಳ ಕಡಿಮೆ ಬೆಲೆಗೆ ಪೂರೈಸುವುದು ಅರ್ಥಪೂರ್ಣವಾದರು, ಸರಕಾರ ಅಂದುಕೊಂಡಂತೆ ಸಂಪನ್ಮೂಲಗಳು ರೈತರಿಗೆ ಕೈಗೆಟುಕುವ ಬೆಲೆಯಲ್ಲಿ ಸಿಗುವುದಿಲ್ಲ. ಈ ಕಾರಣಕ್ಕಾಗಿ ರೈತರ ಉತ್ಪನ್ನಗಳಿಗೆ ಅಧಿಕ ಬೆಲೆ ಕೊಡುವುದು ಬಡತನದ ನೆರಳಿನಲ್ಲಿರುವ ಗ್ರಾಹಕರಿಗೆ ತೊಂದರೆಯಾಗುತ್ತದೆಂಬುದು ವಾಸ್ತವವಾದರು, ಬಡತನದ ನೆರಳಲ್ಲಿರುವ ಗ್ರಾಹಕರಿಗೆ ಪಡಿತರ ವ್ಯವಸ್ಥೆಯಿರುವುದರಿಂದ ರೈತರ ಉತ್ಪನ್ನಗಳ ಬೆಲೆಯನ್ನು ಏರಿಸುವುದೂ ಸೂಕ್ತವಾದದ್ದು ಎಂಬ ಚರ್ಚೆಯೂ ಇದೆ. ಆದರೆ ಸಂಪನ್ಮೂಲಗಳನ್ನ ಕಡಿಮೆ ಬೆಲೆಗೆ ಸರಕಾರ ಪೂರೈಸುತ್ತದೆಂಬುದು ಸಹ ಮಿಥ್ಯ

ರಸಗೊಬ್ಬರಗಳ ಉತ್ಪಾದನಾ ವಿಧಾನದಲ್ಲಿ ಸುಧಾರಣೆ

ಈಗಾಗಲೆ ಕೃಷಿ ಸಂಪನ್ಮೂಲ ಬೆಲೆಗಳು ಹಾಗೂ ಕೃಷಿ ಉತ್ಪನ್ನ ಬೆಲೆಗಳು ಮಧ್ಯೆ ಸಮಾನತೆ ಸಾಧಿಸಬೇಕೆಂಬುದನ್ನು ಚರ್ಚೆ ಮಾಡಿರುವೆ. ಸಹಾಯಧನವನ್ನು ರೈತರು ಮೂರು ರೀತಿಯಲ್ಲಿ ಪಡೆಯುತ್ತಾರೆ ಎಂಬುದನ್ನು ಕೆಲವರು ವಾದಿಸುತ್ತಾರೆ.

ಅ) ಸಂಪನ್ಮೂಲ ಸಹಾಯಧನ

ಆ) ಉತ್ಪನ್ನ ಸಹಾಯಧನ (ಸಂಗ್ರಹಣ ಬೆಲೆಗಳು)

ಇ) ಕೃಷಿ ಉತ್ಪನ್ನಗಳ ವಿತರಣೆ ವೆಚ್ಚಕ್ಕೆ ನೀಡುವ ಸಹಾಯಧನ

ಇಲ್ಲಿ ಸ್ಪಷ್ಟವಾಗುವುದೇನೆಂದರೆ ಸರಕಾರ ರೈತರಿಗೆ ಸಹಾಯಕವಾಗುವಂತೆ, ಮೂರು ರೀತಿಯ ಸಹಾಯಧನ ನೀಡುತ್ತದೆ. ಆದರೆ ಈ ಸಹಾಯಧನ ಅತ್ಯಂತ ಸಂಕೀರ್ಣವಾದದ್ದು. ಸಂಕೀರ್ಣವಾದ ಸಹಾಯಧನದ ದೃಷ್ಟಿಕೋನದಿಂದಾಗಿ ಸಂಪನ್ಮೂಲ ಸಹಾಯಧನ ಹಾಗೂ ಉತ್ಪನ್ನ ಸಹಯಾಧನದ ನಡುವೆ ಸಮನ್ವಯತೆ ಸಾಧಿಸುವುದು ಅತ್ಯಂತ ಸಂಕೀರ್ಣವಾದದ್ದು ಏಕೆಂದರೆ ಕೃಷಿ ಸಂಪನ್ಮೂಲಗಳಲ್ಲಿ ರಸಗೊಬ್ಬರ ಒಂದು ಮುಖ್ಯವಾದ ಸಂಪನ್ಮೂಲ. ಭಾರತದಲ್ಲಿ ಗಾತ್ರ ಮತ್ತು ಸಾಮರ್ಥ್ಯದಿಂದ ಹಾಗೆಯೇ ವೆಚ್ಚ ಮತ್ತು ತಂತ್ರಜ್ಞಾನ ಬಳಕೆ ಹಾಗೂ ಇಂಧನ ಬಳಕೆಯಲ್ಲಿ ಈ ಕಾರ್ಖಾನೆಗಳು ವೈವಿಧ್ಯಮಯವಾಗಿದೆ. ಆದ್ದರಿಂದ ಕೃಷಿ ಸಂಪನ್ಮೂಲವಾದ ರಸಗೊಬ್ಬರ ಹಾಗೂ ಕೃಷಿ ಉತ್ಪನ್ನ ಬೆಲೆಯ ನಡುವೆ ಸಾಮ್ಯತೆ ಸಾಧಿಸುವುದು ಕಷ್ಟಕರವಾದದ್ದು ಹಾಗೂ ಸಂಕೀರ್ಣಯವಾದದ್ದು ಉದಾಹರಣೆಗೆ ಸಾರಜನಕ ರಂಜಕ ಹಾಗೂ ಸಂಕೀರ್ಣಗೊಬ್ಬರಗಳನ್ನು ಉತ್ಪಾದಿಸುವ ಸಿ.ಎಫ್.ಎಲ್ (ವಿಜಗ) ಆಂದ್ರಪ್ರದೇಶದಲ್ಲಿರುವ ರಸಗೊಬ್ಬರ ಕಾರ್ಖಾನೆ. ಈ ಕಾರ್ಖಾನೆಯಲ್ಲಿ ಇಂಧನವಾಗಿ ಬಳಸುವುದು ನ್ಯಾಫ್ತ (Naphtha) ಇಲ್ಲಿ ಉತ್ಪಾದಿಸುವುದು ಯೂರಿಯಾ, 28-20 - 0 , 14-35 - 14., 20 -20 - 20, ಡಿ.ಎಪಿ ಒಟ್ಟು ಸಾಮರ್ಥ್ಯ 6.00 ಲಕ್ಷ ಟನ್, ಇಲ್ಲಿ ಉತ್ಪಾದಿಸುತ್ತಿರುವುದು 5.7 ಲಕ್ಷ ಟನ್ ಇನ್ನು ಕಾರ್ಖಾನೆ ತನ್ನ ಸಂಪೂರ್ಣ ಸಾಮರ್ಥ್ಯ ವನ್ನು ಬಳಸಿಕೊಂಡಿಲ್ಲ. ಇದು ಇಂಧನವಾಗಿ ಉಪಯೋಗಿಸುತ್ತಿರುವ ಉತ್ಪನ್ನ ನ್ಯಾಪ್ತ , ನ್ಯಾಪ್ತ ಹೆಚ್ಚು ಬೆಲೆ ಹೊಂದಿರುವಂತಹದು ಇದನ್ನು ಚಂಬಲ್ ರಸಗೊಬ್ಬರ (ರಾಜಸ್ಥಾನ) ಕಾರ್ಖಾನೆಗೆ ಹೋಲಿಕೆ ಮಾಡಿ ನೋಡಿದರೆ ತಿಳಿಯುತ್ತದೆ. ಇಲ್ಲಿ ಇಂಧನವಾಗಿ ಉಪಯೋಗಿಸುತ್ತಿರುವ ಉತ್ಪನ್ನ ಸ್ವಾಭಾವಿಕ ಅನಿಲ, ಸ್ವಾಭಾವಿಕ ಅನಿಲ ನ್ಯಾಫ್ತಗೆ ಹೋಲಿಸಿದರೆ ಕಡಿಮೆ ಬೆಳೆಯುಳ್ಳಂತಹುದು. ಇದು ಉತ್ಪಾದಿಸುವ ರಸಗೊಬ್ಬರ ಯೂರಿಯ, ಇದರ ಸಾಮರ್ಥ್ಯ 7.7 ಲಕ್ಷ ಟನ್ ಇದು ಉತ್ಪಾದಿಸುತ್ತಿರುವುದು 8.5 ಲಕ್ಷ ಟನ್. ಇಲ್ಲಿ ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಈ ಕಾರ್ಖಾನೆ ಯೂರಿಯಾ ರಸಗೊಬ್ಬರವನ್ನು ಉತ್ಪಾದಿಸುತ್ತದೆ. ಇ.ಐ.ಡಿ. ಪ್ಯಾರಿ ತಮಿಳುನಾಡಿನಲ್ಲಿರುವ ರಸಗೊಬ್ಬರ ಕಾರ್ಖಾನೆ ಇದು ಇಂಧನವಾಗಿ ಬಳಸುತ್ತಿರುವುದು ಸ್ವಾಭಾವಿಕ ಅನಿಲ, ರಸಗೊಬ್ಬರಗಳ ಉತ್ಪನ್ನ ಅಮೋನಿಯಂ ಫಾಸ್ಪೇಟ್

ಸಲ್ಫೇಟ್, 16-20-00 ಇದರ ಸಾಮರ್ಥ್ಯ 1.7 ಲಕ್ಷ ಟನ್ ಆದರೆ ಇದು ಉತ್ಪಾದಿಸುತ್ತಿರುವುದು 1.98 ಲಕ್ಷ ಟನ್, ದೀಪಕ್ ಫರ್ಟಿಲೈಸರ್ಸ್ ಮತ್ತು ಪೆಟ್ರೋಕೆಮಿಕಲ್ಸ್ ಕಾರ್ಪೊರೇಷನ್ ಮಹಾರಾಷ್ಟ್ರದಲ್ಲಿದೆ ಇದು ಇಂಧನವಾಗಿ ಉಪಯೋಗಿಸುತ್ತಿರುವುದು ಸ್ವಾಭಾವಿ ಅನಿಲ ಇನ್ನು ಉತ್ಪಾದಿಸುವ ಉತ್ಪನ್ನ ಅಮೋನಿಯಂ ನೈಟ್ರೋ ಫಾಸ್ಪೇಟ್ (23-23-0) ಇದರ ಸಾಮರ್ಥ್ಯ 2.29 ಲಕ್ ಟನ್ ಇದು ಉತ್ಪಾದಿಸುತ್ತಿರುವುದು 1.44 ಲಕ್ಷ ಟನ್. ಗೋಧಾವರಿ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಕಾರ್ಖಾನೆ ಆಂದ್ರ ಪ್ರದೇಶದಲ್ಲಿದೆ. ಇದು ಉತ್ಪಾದಿಸುತ್ತಿರುವ ಉತ್ಪನ್ನ ಡಿ.ಎ.ಪಿ. 18.46-0, 20 -20 -0 ಉಪಯೋಗಿಸುತ್ತಿರುವ ಇಂಧನ ಸ್ವಾಭಾವಿಕ ಅನಿಲ 5.67 ಲಕ್ಷ ಟನ್ ಈ ಕಾರ್ಖಾನೆಯ ಸಾಮರ್ಥ್ಯ ಉತ್ಪಾದನೆ 6.66 ಲಕ್ಷ ಟನ್ ಹೀಗೆ ಕೆಲವು ಕಾರ್ಖಾನೆಗಳ ಸ್ವರೂಪವನ್ನು ಇಲ್ಲಿ ನೀಡಿರುವೆ. ಈ ಅಂಕಿ ಅಂಶಗಳ ಮೇಲೆ ನಾವು ಚರ್ಚಿಸಿದರೆ ಕಾರ್ಖಾನೆ ಗಾತ್ರ ಸಾಮರ್ಥ್ಯ ಉತ್ಪಾದನೆ ವಿಭಿನ್ನವಾಗಿದೆ. ಹಾಗೆ ಇಂಧನ ಬಳಕೆ ವೆಚ್ಚ ಇದರಲ್ಲೂ ವಿಭಿನ್ನವಾಗಿವೆ.

ಉತ್ಪನ್ನದ ವೈವಿಧ್ಯತೆ ಇವುಗಳಲ್ಲೂ ನಾವು ವಿಭಿನ್ನತೆಯನ್ನು ನೋಡಬಹುದು. ಈ ಕಾರಣಗಳಿಂದಾಗಿಯೇ ಪ್ರತಿಯೊಂದು ಕಾರ್ಖಾನೆಯ, ಉತ್ಪಾದನೆ ವೆಚ್ಚ, ನಿರ್ವಹಣೆ ವೆಚ್ಚ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ನ್ಯಾಪ್ತ ಇಂಧನವಾಗಿ ಬಳಸುವ ಕಾರ್ಖಾನೆಗಳಲ್ಲಿ ಇಂಧನ ವೆಚ್ಚ ಜಾಸ್ತಿ ಇರುತ್ತದೆ, ಹಾಗೆಯೇ ಸ್ವಾಭಾವಿಕ ಅನಿಲ ಬಳಸುವ ಕಾರ್ಖಾನೆಗಳಲ್ಲಿ ಇಂಧನ ವೆಚ್ಚ ಕಡಿಮೆ ಇರುತ್ತದೆ. ಈಗಾಗಲೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಗಗನಕ್ಕೇರಿರಬೇಕಾದರೆ, ಪೆಟ್ರೋಲಿಯಂ ಉತ್ಪನ್ನಗಳನ್ನು ಇಂಧನವಾಗಿ ಉಪಯೋಗಿಸುವ ಕಾರ್ಖಾನೆಗಳಲ್ಲಿ ಸಹಜವಾಗಿಯೇ ಅದರ ಉತ್ಪಾನದ ವೆಚ್ಚ ಏರಿಕೆಯಾಗುತ್ತದೆ. ಈಗಾಗಿ ರಸಗೊಬ್ಬರ ಕಾರ್ಖನೆಗಳಲ್ಲಿ ಉತ್ಪಾದನ ತಂತ್ರಜ್ಞಾನ, ನಿರ್ವಹಣೆ ತಂತ್ರಜ್ಞಾನ, ವಿತರಣಾ ತಂತ್ರಜ್ಞಾನ, ವೈವಿದ್ಯಮಯವಾಗಿರುವುದರಿಂದ ರಸಗೊಬ್ಬರಗಳ ಉತ್ಪಾದನೆ ಒಂದೊಂದು ಕಾರ್ಖಾನೆಗೆ ಒಂದೊಂದು ರೀತಿಯಲ್ಲಿರುತ್ತದೆ. ಆದ್ದರಿಂದ ಸರಕಾರ ಈ ಕಾರ್ಖಾನೆಗಳಿಗೆ ಸಹಾಯಧನ ನೀಡುವುದು ಒಂದೇ ಮಾನದಂಡದ ಮುಖಾಂತರ, ಹೀಗೆ ಒಂದೇ ಮಾನದಂಡದ ಮುಖಾಂತರ ಸಹಾಯಧನ ನೀಡಿದರೆ. ಅತ್ಯಂತ ಆಧುನಿಕ ತಂತ್ರಜ್ಞಾನ ವನ್ನು ಅಳವಡಿಸಿಕೊಂಡು ಕಡಿಮೆ ಉತ್ಪಾದನಾ ವೆಚ್ಚವಿರುವ ಕಾರ್ಖಾನೆಗಳಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಹಳೆ ತಂತ್ರಜ್ಞಾನ ಅಳವಡಿಸಿಕೊಂಡು ಹೆಚ್ಚು ಉತ್ಪಾದನಾ ವೆಚ್ಚವಿರುವ ಕಾರ್ಖಾನೆಗಳು ನಷ್ಟದಿಂದ ನಡೆಯುತ್ತವೆ. ಇಲ್ಲಿ ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚು ಉತ್ಪಾದಿಸುವ ನಾಗಾರ್ಜುನ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್, FACT ಕಾರ್ಖಾನೆ, ಗೋಧಾವರಿ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಕಾರ್ಖಾನೆಗಳಿಗೆ ಸಹಾಯಧನ ವರಧಾನವಾಗಿದೆ. ಆದರೆ ಸಿ.ಎಫ್.ಎಲ್, ವಿಜನ್‌ದ ಚಿಂಬಲ್ ಸ್ಯೆನ್‌ಡ್, ಮತ್ತು ಕೆಮಿಕಲ್ಸ್ ಸೂರತ್, ಕಾರ್ಖಾನೆಗಳು ತಮ್ಮ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸುವುದು ಸರಕಾರ ನೀಡುವ ಸಹಾಯಧನ ನಷ್ಟವನ್ನು ಭರಿಸಲಾಗದು, ಹೀಗೆ ನಷ್ಟವನ್ನು ಭರಿಸಲಾಗದ ಕಾರ್ಖಾನೆಗಳು ರೋಗಗ್ರಸ್ತವಾಗಿ ನಡೆಯುತ್ತಿರುತ್ತವೆ. ದಿನೇ ದಿನೇ ರಸಗೊಬ್ಬರಗಳ ಬೇಡಿಕೆ ಹೆಚ್ಚುತ್ತಿರುವುದರಿಂದ ಎಲ್ಲ

ಕಾರ್ಖಾನೆಗಳು ತಮ್ಮ ಸಾಮರ್ಥ್ಯಕ್ಕನುಗುಣವಾಗಿ, ಇಲ್ಲವೆ ಸಾಮರ್ಥ್ಯ ಮೀರಿ ಉತ್ಪಾದಿಸಬೇಕಾಗಿದೆ. ಬಹಳಷ್ಟು ವಿಖ್ಯಾತ ಕಾರ್ಖಾನೆಗಳು ಸಹ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಉತ್ಪಾದಿಸುತ್ತಿಲ್ಲ. ಇಂತಹ ಸ್ಥಿತಿ ಇರಬೇಕಾದರೆ ರಸಗೊಬ್ಬರಗಳ ಸಹಾಯಧನ ಯಾವ ರೀತಿಯಲ್ಲಿ ರೋಗಗ್ರಸ್ಥ ಕಾರ್ಖಾನೆಗಳಿಗೆ ಉಪಯೋಗಕ್ಕೆ ಬರುತ್ತದೆ. ಎಂಬುದು ಚರ್ಚಾರ್ಹ. ಏಕೆಂದರೆ ಈ ಕಾರ್ಖಾನೆಗಳು ಅಭಿವೃದ್ಧಿಯಾಗಬೇಕಾದರೆ ಈ ಕಾರ್ಖಾನೆಗಳು ಹೆಚ್ಚು ವ್ಯಾಪಕವಾಗಿ ಬೆಳೆಯಬೇಕಾದರೆ, ಮಾರುಕಟ್ಟೆಯ ಬೇಡಿಕೆಯನ್ನು ಈಡೇರಿಸಬೇಕಾದರೆ, ಇವು ತಮ್ಮ ತಂತ್ರಜ್ಞಾನ, ನಿರ್ವಹಣೆ ಮತ್ತು ವಿತರಣಾ ವಲಯಗಳಲ್ಲಿ ವ್ಯಾಪಕ ಸುಧಾರಣೆಯನ್ನು ತರಬೇಕು. ಸರಕಾರ ಈ ನಿಟ್ಟಿನಲ್ಲಿ ಯೋಚಿಸುತ್ತಿಲ್ಲ ಇದು ಯಾವುದೇ ಮಾರ್ಗದರ್ಶಿ ಸೂತ್ರ ಹಾಗೂ ಸುಧಾರಣಾ ಕಾರ್ಯಕ್ರಮಗಳನ್ನು ನೀಡುತ್ತಿಲ್ಲ. ಇದು ಕೇವಲ ಏಕಮಾನದಂಡದ ಪ್ರಕಾರ ಸಹಾಯಧನವನ್ನು ನೀಡುತ್ತಿದೆ. ಹಾಗೆಯೇ ರಸಗೊಬ್ಬರ ಉತ್ಪನ್ನಗಳ ಗುಣಮಟ್ಟದ ಬಗ್ಗೆಯೂ ಅಷ್ಟೇನು ತಲೆ ಕೆಡಿಸಿಕೊಂಡಿಲ್ಲ. ಕೆಲವು ಕಾರ್ಖಾನೆಗಳ ಹಳೆತಂತ್ರಜ್ಞಾನ ಬಳಕೆಯಿಂದಾಗಿ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು ಸಾಧ್ಯವಾಗದೆ ಹೋಗಬಹುದು. ಆದರೆ ಕಡಿಮೆ ಗುಣಮಟ್ಟದ ರಸಗೊಬ್ಬರಗಳು ರೈತರು ಬಳಸದೆ. ಈ ರಸಗೊಬ್ಬರಗಳ ಬೇಡಿಕೆ ಕುಗ್ಗಬಹುದು. ಹೀಗೆ ಬೇಡಿಕೆ ಕುಗ್ಗುವುದರಿಂದ ಕಾರ್ಖಾನೆಗಳ ಮಾಲೀಕರು ತಮ್ಮ ತಂತ್ರಜ್ಞಾನವನ್ನು ನವೀಕರಿಸಲು ಉತ್ಸುಕತೆ ತೋರದಿರಬಹುದು. ಈ ವಿದ್ಯಮಾನಗಳು ಹೀಗೆ ಮುಂದುವರೆದರೆ ಕಾರ್ಖಾನೆಗಳು ರೋಗಗ್ರಸ್ಥವಾಗಿ, ಚೇತರಿಸಿಕೊಳ್ಳಲಾರದ ಹಂತ ತಲುಪಬಹುದು. ಇವೆಲ್ಲ ಏನೇ ಇರಲಿ ಹೀಗೆ ವೈವಿಧ್ಯಮಯವಾಗಿರುವ ರಸಗೊಬ್ಬರಗಳ ಕಾರ್ಖಾನೆಗಳ ಮಾಲೀಕರಿಗೆ ಏಕರೂಪದ ಬೆಲೆಯನ್ನು ರಸಗೊಬ್ಬರಗಳಿಗೆ ನಿಗದಿ ಮಾಡಿ ರೈತರಿಗ ಮಾರುವಂತೆ ಸೂಚಿಸಿದರೆ, ಇದು ಸರಿಯಾದ ನೀತಿಯಾಗಲಾರದು. ಆದರೂ ಇಂದು ಎಲ್ಲಾ ಕಾರ್ಖಾನೆಗಳು ಕಾರ್ಖಾನೋತ್ತರ ಬೆಲೆಗಳು ರೈತರಿಗೆ ಏಕರೂಪದಲ್ಲಿ ಸಿಗುತ್ತಿದೆ. ಈ ಕಾರಣಗಳಿಗಾಗಿ ರೈತರು ಸಮಸ್ಯೆಗಳ ಸುಳಿಯಲ್ಲಿ ಸಿಲುಕುತ್ತಾರೆ, ಯಾಕೆಂದರೆ ರೈತರಿಗೆ ಕೃಷಿ ಸಂಪನ್ಮೂಲಕಗಳು ನಿಗದಿತ ವೇಳೆಯುಲ್ಲಿ ಸಿಗಲೇಬೇಕು ಆದರೆ ರಸಗೊಬ್ಬರ ಕಾರ್ಖಾನೆಗಳು ರೋಗಗ್ರಸ್ಥ ವಾಗುವುದರಿಂದಬೇಡಿಕೆಗನುಗುಣವಾಗಿ ಪೂರೈಕೆ ಇರದೆ ಹೋಗಬಹುದು. ಅದರಿಂದಾಗಿ ರಸಗೊಬ್ಬರಗಳಿಗೆ ಕಾರ್ಖಾನೆ ಮಟ್ಟದಲ್ಲಿ ನೀಡುವ ಸಹಾಯಧನ ರೈತರು ಸರಿಯಾಗಿ ಬಳಸಿಕೊಳ್ಳದೇ ಹೋಗಬಹುದು. ಆದ್ದರಿಂದ ಎಲ್ಲ ಕಾರ್ಖಾನೆಗಳು ರೈತರಿಗೆ ರಸಗೊಬ್ಬರಗಳನ್ನು ಮಾರುವಾಗ ಏಕ ಸ್ವರೂಪದ ಬೆಲೆ ನಿಗದಿ ಪಡಿಸಬೇಕೆಂಬ ಸರಕಾರದ ಸಂಕಲ್ಪ ಪ್ರಶ್ನಾರ್ಹವಲ್ಲ. ಇದು ರೈತರಿಗೆ ಉಪಯೋಗಾತ್ಮಕವಾದ ಅಂಶ, ಆದರೆ ಕಾರ್ಖಾನೆ ಮಾಲೀಕರು ಈ ಸಹಾಯಧನವನ್ನು ದುರುಪಯೋಗ ಪಡಿಸಿಕೊಳ್ಳಬಹುದು. ಹೇಗೆಂದರೆ ಕಡಿಮೆ ಸಾಮರ್ಥ್ಯ ಉತ್ಪಾದನಾ ಘಟಕಗಳು ಸಹಾಯಧನ ಲಾಭದಾಯಕವಲ್ಲ. ಇನ್ನೂ ಹೆಚ್ಚಿನ ನೆರವು ಕೇಳುವ ಸಂದರ್ಭ ಉಂಟಾಗಬಹುದು. ಇಂತಹ ಸಂದರ್ಭ ಉಂಟಾದರೆ ಇದು ಅಂತಿಮವಾಗಿ ರೈತರಿಗೆ ಮಾರಕವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ರಸಗೊಬ್ಬರ ಬೆಲೆ ನಿರ್ಣಯಿಸುವುದು ಸಂಕೀರ್ಣವಾದ

ಸಮಸ್ಯೆ, ಈಗ ದೇಶಾದ್ಯಂತ ಎಲ್ಲಿ ಹೋದರೂ ರಸಗೊಬ್ಬರಗಳ ಬೆಲೆ ಏಕ ಸ್ವರೂಪದಲ್ಲಿದೆ.

ರಸಗೊಬ್ಬರಗಳ ಬೆಲೆ ನಿಗದಿ:

ರಸಗೊಬ್ಬರಗಳ ಬೆಲೆ ನಿಗದಿ ಪರಂಪರಾನುಗತವಾಗಿ (vogue) ರೈತರ ಹಾಗೂ ರಸಗೊಬ್ಬರ ಕಾರ್ಖಾನೆಯ ಮಾಲೀಕರ ಹಿತಾಸಕ್ತಿಯನ್ನು ರಕ್ಷಿಸುವ ನೀತಿಯಲ್ಲಿ ವಿಕಾಸವಾಗಿದೆ. ಒಂದೆಡೆ ಧಾರಣ ಬೆಲೆ (Retention price) ಕಾರ್ಖಾನೆ ಮಾಲೀಕರಿಗೆ ಉತ್ತೇಜಕವಾದರೆ, ರಾಷ್ಟ್ರಾದ್ಯಂತ ಏಕರೂಪ ಬೆಲೆಗೆ ರೈತರಿಗೆ ಮಾರುವುದು, ರಸಗೊಬ್ಬರಗಳ ಬೆಲೆಯ ಇನ್ನೊಂದು ಮುಖ, ಧಾರಣ ಬೆಲೆಯೆಂದರೆ (Retention Price) ಕಾರ್ಖಾನೆ ಮಾಲೀಕರಿಗೆ ರಸಗೊಬ್ಬರಗಳ ತಯಾರಿಕೆಯಲ್ಲಿ ತಗಲುವ ವೆಚ್ಚ ಹಾಗೂ ಕಾರ್ಖಾನೆಯ ಹಂತದ ಬೆಲೆ ಮತ್ತು ಸರಕಾರ ಕಾರ್ಖಾನೆ ಮಾಲೀಕರಿಗೆ ನೀಡುವ ಬೆಂಬಲ ಅಂದರೆ ಸಹಾಯಧನ ಇದನ್ನು ಧಾರಣ ಬೆಲೆ ಎಂದು ಕರೆಯಬಹುದು. ಇದು ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಅನುಚಾನವಾಗಿ ಬಂದ ಪದ್ಧತಿಯಾಗಿದೆ. ಕಾರ್ಖಾನೆ ಹಂತದಲ್ಲೇ ಮಾಲೀಕರಿಗೆ ಸಹಾಯ ಧನ ನೀಡಿ. ಚಿಲ್ಲರೆ ಮಾರಾಟಗಾರರು ಕಾರ್ಖಾನೆ ಮಾಲೀಕರು ನಿಗದಿಪಡಿಸಿದ ಬೆಲೆಗೆ ದೇಶಾದ್ಯಂತ ಮಾರಾಟ ಮಾಡಬೇಕಾಗಿದೆ. ರೈತರು ಕಾರ್ಖಾನೆ ಮಾಲೀಕರ ಅನುಕಂಪದ ಮೇಲೆ ರಸಗೊಬ್ಬರ ಬೆಲೆಗಳನ್ನು ಪಡೆಯಬೇಕು. ಆದರೆ, ಒಂದು ಚರ್ಚೆ ನಡೆದಿತ್ತು ಈ ಚರ್ಚೆಯೆಂದರೇ ಕಾರ್ಖಾನೆ ಹಂತದಲ್ಲಿ ಸಹಾಯಧನ ನೀಡಿ ರೈತರಿಗೆ ಚಿಲ್ಲರೆ ಮಳಿಗೆಗಳ ಮೂಲಕ ಮಾರುವಾಗ ಕಾರ್ಖಾನೆ ಮಾಲೀಕರು ನಿಗದಿ ಪಡಿಸಿದ ಬೆಲೆಗೆ ಮಾರಾಟ ಮಾಡುವುದು ಸಾಧ್ಯವಿಲ್ಲ ಎಂಬುದಾಗಿದೆ, ಆದ್ದರಿಂದ ಚಿಲ್ಲರೆ ಮಾರಾಟದ ಮಳಿಗೆಗಳ ಹಂತದಲ್ಲಿ ಅಥವಾ ರೈತರ ಹಂತದಲ್ಲಿ ಸಹಾಯಧನ ನೀಡುವ ಅಂಶದ ಬಗ್ಗೆ ವ್ಯಾಪಕ ವಿಚಾರ ವಿತ್ತು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕಾರ್ಖಾನೆ ಮಾಲೀಕರ ಹಂತದಲ್ಲಿ ಸಹಾಯಧನ ನೀಡಿದರೆ ಕಾರ್ಖಾನೆ ಮಾಲೀಕರು ಸಹಾಯಧನ ಪಡೆದು ಹೆಚ್ಚು ಬೆಲೆಯನ್ನು ಕಾರ್ಖಾನೆಯೋತ್ತರ (Ex factory price) ಸಂದರ್ಭ ನಿಗದಿಪಡಿಸಿದರೆ. ಆ ಬೆಲೆಗೆ ರೈತರು ರಸಗೊಬ್ಬರಗಳನ್ನು ಪಡೆಯಬೇಕು, ಆಗ ಕಾರ್ಖಾನೆ ಮಾಲೀಕರಿಗೆ ಲಾಭವಾಗಿ ರೈತರಿಗೆ ಏನೂ ಸಿಗದೆ ಹೋಗಬಹುದು. ಈ ನಿಲುವಿನಿಂದಾಗಿ ಬೇರೆ ಬೇರೆ ಆಯಾಮಗಳನ್ನು ಈ ಚರ್ಚೆ ಪಡೆದುಕೊಂಡಿತು. ಕಾರ್ಖಾನೆ ಮಾಲೀಕರ ಹಂತದಲ್ಲಿ ಸಹಾಯಧನ ನೀಡಿದರೆ ಸಹಾಯಧನದ ದುರುಪಯೋಗವನ್ನು ತಡೆಯಬಹುದು. ಆದರೆ ಕಾರ್ಖಾನೆ ಹಂತದಲ್ಲಿ ಸಹಾಯಧನ ನೀಡಿದರೆ ಇದು ರೈತರಿಗೆ ಸಕಾರಾತ್ಮಕ ಅಂಶವಾಗುತ್ತದೆ. ಆದರೆ ಚಿಲ್ಲರೆ ಮಳಿಗೆಗಳ ಮಾಲೀಕರಿಗೆ ಸಹಾಯಧನ ನೀಡಿದರೆ, ಅಲ್ಲಿ ಸಹಾಯದನ ದುರಪಯೋಗವಾಗಬಹುದು. ಏಕೆಂದರೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಸಹಾಯಧನ ನೀಡುವುದು ಚಿಲ್ಲರೆ ಮಾರಾಟ ಮಳಿಗೆಗಳ ಮಾಲೀಕರು ಸೂಕ್ತ ರೀತಿಯಲ್ಲಿ. ಇದರ ಫಲಗಳನ್ನು ರೈತರಿಗೆ ತಲುಪಿಸಲಾರರು. ಚಿಲ್ಲರೆ ಮಳಿಗೆಗಳ ಮಾಲೀಕರಿಗೆ ರೈತರ ಸಮಸ್ಯೆಗಳ ಬಗ್ಗೆ ಅನುಕಂಪವಾಗಲಿ ಅಥವಾ ತಾತ್ವಿಕ ದೃಷ್ಟಿಕೋನವಾಗಲಿ ಇರುವುದಿಲ್ಲ. ಇವರು ಅಪ್ಪಟ ವ್ಯವಹಾರಸ್ಥರು, ವ್ಯವಹಾರಸ್ಥರಾಗಿರುವುದರಿಂದ ಇವರಿಗೆ ಸಹಾಯದನ ಮುಖ್ಯವೇ ಹೊರತು, ರೈತರ ಸಮಸ್ಯೆಗಳು, ಅಭಿವೃದ್ಧಿ ಕ್ಷೇಮಾಭಿವೃದ್ಧಿ ನೀತಿಗಳು

ಇವರಿಗೆ ದಕ್ಕದ ವಿಚಾರಗಳು, ಆದ್ದರಿಂದ ರೈತರಿಗೆ ಚಿಲ್ಲರೆ ಮಳಿಗೆಗಳ ಮೂಲಕ ಸಹಾಯಧನ ನೀಡಿ ರಸಗೊಬ್ಬರಗಳನ್ನು ಮಾರುವುದು ಸಾಧುವಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ರೈತರಿಗೆ ಸಹಾಯಧನ ನೇರವಾಗಿ ಕೂಪನ್ ವಿತರಿಸುವುದರ ಮೂಲಕ ನೀಡುವುದು ಇನ್ನೊಂದು ವಿಚಾರ. ರೈತರನು ಬೆಳೆ ಅವಧಿಯಲ್ಲಿ ಎಷ್ಟು ರಸಗೊಬ್ಬರ ಗಳು ಬಳಸುತ್ತಾರೆ ಎಂದು ಪ್ರತಿಯೊಬ್ಬ ರೈತರ ರಸಗೊಬ್ಬರಗಳ ಅವಶ್ಯಕತೆಗನುಗುಣವಾಗಿ ಪ್ರತಿಯೊಬ್ಬ ರೈತರಿಗೂ ಸಹಾಯಧನದ ಕೂಪನ ಗಳನ್ನು ವಿತರಿಸುವುದು, ಇದು ಕಾರ್ಯಸಾಧುವಲ್ಲ. 70 ಕೋಟಿಗೂ ಅಧಿಕ ಇರುವರೈತರಿಗೆ ಕೃಷಿ ಇಲಾಖೆ, ಸಹಕಾರ ಸಂಘಗಳ ಮೂಲಕ ರಿಯಾಯಿತಿ ಕೂಪನ್ ಗಳು ನೀಡುವುದು ವ್ಯಾಪಕ ಭ್ರಷ್ಟಾಚಾರ ಹಾಗೂ ದುರುಪಯೋಗ ಆಗುವ ಸಂದರ್ಭಗಳು ಹೆಚ್ಚಾಗಿರುತ್ತದೆ. ಅದರಲ್ಲೂ ಚಿಲ್ಲರೆ ಮಾರುಕಟ್ಟೆ ಮಳಿಗೆಗಳ ಮಾಲೀಕರು ಅನುಕಂಪದಡಿಯಲ್ಲಿ ರೈತರು ಬದುಕಬೇಕಾಗುತ್ತದೆ. ಆದ್ದರಿಂದ ಸಹಾಯಧನವಾಗಿ ಚಿಲ್ಲರೆ ಮಾರಾಟ ಮಳಿಗೆಗಳು ಅಂದರೆ ವಿತರಕರ ಹಂತದಲ್ಲಿ ನೀಡುವುದು ಕಾರ್ಯಸಾಧುವಲ್ಲ ಹಾಗೆ ರೈತರಿಗೆ ಕೂಪನ್ ಗಳು ಮೂಲಕ ನೀಡುವುದು ಕಾರ್ಯಸಾಧುವಲ್ಲ ಎಂದು ಸರಕಾರ ಭಾವಿಸಿ, ಕಾರ್ಖಾನೆ ಹಂತಗಳಲ್ಲಿ ಸಹಾಯಧನ ನೀಡಿ ಚಿಲ್ಲರೆ ಮಳಿಗೆಗಳ ಮೂಲಕ ದೇಶಾದ್ಯಂತ ರೈತರಿಗೆ ಏಕರೂಪದ ಬೆಲೆಯನ್ನು ರಸಗೊಬ್ಬರಗಳನ್ನು ವಿತರಿಸುವುದು ಸರಿಯಾದ ಕ್ರಮವಾಗಿದೆ. ಆದ್ದರಿಂದ ಸರಕಾರ ರಸಗೊಬ್ಬರಗಳ ಸಹಾಯಧನವ್ನು ಕಾರ್ಖಾನೆಗಳ ಹಂತದಲ್ಲೇ ನೀಡುತ್ತಿರುವುದು ನಕಾರಾತ್ಮಕ ಅಂಶಗಳನ್ನು ಒಳಗೊಂಡಿದೆ. ಯಾಕೆಂದರೆ ಈಗಾಗಲೆ ಸ್ಥಾಪಿಸಿ ಉತ್ಪಾದನೆಯಲ್ಲಿರುವ ಘಟಕಗಳು, ಸಹಾಯಧನವನ್ನೇನೊ ಪಡೆಯಬಹುದು, ಆದರೆ ಇವರ ಉತ್ಪಾದನೆ ವೆಚ್ಚ, ರೈತರ ಬೆಲೆಗಳಿಗಿಂತ ಜಾಸ್ತಿಯಾದರೆ ಹೇಗೆ ಎಂಬ ಅಂಶವೂ ಸೇರಿದೆ. ಇವರು ಸಹಾಯಧನ ಪಡೆದ ಮೇಲು, ರೈತರಿಗೆ ಮಾರುವ ಬೆಲೆಗಳು ಉತ್ಪಾದನಾ ವೆಚ್ಚವನ್ನು ಸರಿದೂಗಿಸದಿದ್ದರೆ ಕಾರ್ಖಾನೆ ಮಾಲೀಕರು ಏನು ಮಾಡಬೇಕು ? ಎಂಬುದನ್ನು ಸರಕಾರ ವ್ಯಾಖ್ಯಾನಿಸಿಲ್ಲ ಆದ್ದರಿಂದ ಈ ಸಂದರ್ಭದಲ್ಲಿ ಕಾರ್ಖಾನೆ ಮಾಲೀಕರು ಉತ್ಪಾದನಾ ವೆಚ್ಚವನ್ನು ಸರಿದೂಗಿಸಲು ಉತ್ಪಾದನೆಯನ್ನು ಕಡಿತಗೊಳಿಸಬಹುದು. ಅಥವಾ ಬೇರೆ ಉತ್ಪನ್ನಗಳ ಉತ್ಪಾದನೆ ಕಡೆಗೆ ಹೊರಳಬಹುದು. ಎಂಬ ಅಭಿಪ್ರಾಯವಿದೆ. ಇದರ ಜೊತೆಗೆ ಮತ್ತೊಂದು ಅಂಶವೆಂದರೆ ಭವಿಷ್ಯತದಲ್ಲಿ ಸ್ಥಾಪಿಸಲ್ಪಡುವ ಕಾರ್ಖಾನೆಗಳ ಬಂಡವಾಳ ಹೂಡಿಕೆ ವೆಚ್ಚ ಜಾಸ್ತಿಯಾಗುವುದು ಸಹಜ, ಹೀಗೆ ಜಾಸ್ತಿಯಾಗುವುದರಿಂದ ಬಂಡವಾಳ ಹೂಡಿಕೆ ವೆಚ್ಚವನ್ನು ಸರಿದೂಗಿಸಲು ಸರಕಾರ ಏನಾದರೂ ಕ್ರಮ ಕೈಗೊಂಡಿದೆಯೇ ? ಎಂಬುದು ಸ್ಪಷ್ಟವಾಗಿಲ್ಲ. ಏಕೆಂದರೆ ರಸಗೊಬ್ಬರ ಗಳಿಗೆ ವರ್ಷದಿಂದ ವರ್ಷಕ್ಕೆ ಬೇಡಿಕೆ ಏರುತ್ತಿದೆ. ಈ ಏರುತ್ತಿರುವ ಬೇಡಿಗನುಗುಣವಾಗಿ ಉತ್ಪಾದನೆ ಮಾಡಬೇಕಾದದು. ಸರ್ಕಾರದ ಧೋರಣೆಯಾಗಿರಬೇಕೆಂಬುದೇ ಬಹಳಷ್ಟು ಜನ ತಜ್ಞರ ಅಭಿಪ್ರಾಯ.

ಮರಾಥೆ ಆಯೋಗದ ಶಿಫಾರಸ್ಸುಗಳು

ಧಾರಣ ಬೆಲೆಯನ್ನು ಮರಾಥೆ ಆಯೋಗದನ್ವಯವಾಗಿ ವಿವಿಧ ರಸಗೊಬ್ಬರಗಳ ಕಾರ್ಖಾನೆಗೆ ಜಾರಿಗೊಳಿಸಲಾಯಿತು. 1976 ರಲ್ಲಿ ರಸಗೊಬ್ಬರಗಳ ಹಾಗೂ ರಾಸಾಯನಿಕ ಸಚಿವರು ರಸಗೊಬ್ಬರ ಬೆಲೆ ಆಯೋಗ ರಚಿಸಿತು. ಈ ಆಯೋಗ ರಸಗೊಬ್ಬರ ಕಾರ್ಖಾನೆಗಳ ಸ್ವರೂಪ ಮತ್ತು ರಚನೆಯನ್ನು ಅಧ್ಯಯನಿಸಿ ವಾಸ್ತವ ನೆಲೆಯಲ್ಲಿ ರಸಗೊಬ್ಬರ ಬೆಲೆಗಳನ್ನು ಶಿಫಾರಸ್ಸು ಮಾಡುವಂತೆ ಕೋರಿತು ಸರಕಾರ ಮರಾಥೆ ಆಯೋಗಕ್ಕೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಯಿತು. ಈ ಮಾರ್ಗದರ್ಶಿ ಸೂತ್ರಗಳು ಇಂತಿವೆ.

ಅ) ವಿವಿಧ ರಸಗೊಬ್ಬರಗಳ ಕಾರ್ಖಾನೆಗಳ ಉತ್ಪಾದನಾ ವೆಚ್ಚ ಹೇಗೆ ಎಂಬುದನ್ನು ಅಧ್ಯಯನಿಸ ಬೇಕು. ಇದರ ಜೊತೆಗೆ ತೊಡಗಿಸಿದ ಬಂಡವಾಳದ ಮೇಲೆ ಎಷ್ಟು ಆದಾಯ ಬರುತ್ತದೆ ಎಂಬು ದನ್ನು ಸಹ ಅಧ್ಯಯನಿಸಬೇಕು. ಇದರಿಂದ ಮುಂದೆ ಕಾರ್ಖಾನೆಗಳು ಬಂಡವಾಳ ಹೂಡಿಕೆಯನ್ನು ಆಕರ್ಷಿಸುವಂತೆಯಾಗಬೇಕು.

ಆ) ಧಾರಣ ಬೆಲೆಯನ್ನು ನೀಡಲು ಯಾವ ರಸಗೊಬ್ಬರ ಕಾರ್ಖಾನೆಯಲ್ಲಿ ಯಾವ ಇಂಧನ (Feed Stock) ಬಳಸುತ್ತಿದ್ದಾರೆ, ರಸಗೊಬ್ಬರ ಉತ್ಪಾದನೆಯಲ್ಲಿರುವ ಅಡಚಣೆಗಳು ಮುಂತಾದವುಗ ಳನ್ನು ಅಧ್ಯಯನಿಸುವಂತೆ ಕೋರಲಾಯಿತು.

ಇ) ಇಂಧನವನ್ನು (Feed Stock) ಮತ್ತು ಸಂಪನ್ಮೂಲಗಳನ್ನು ರಸಗೊಬ್ಬರ ಕಾರ್ಖಾನೆಗಳು ಬಳಸು ತ್ತಿರುವುದು ಪರಿಶೀಲಿಸಬೇಕು ಇಂಧನ ಮತ್ತು ಸಂಪನ್ಮೂಲ ಬೆಲೆಗಳನ್ನು ಪರಿಶೀಲಿಸಿ ಅದನ್ನು ಹೇಗೆ ವೈಚಾರಿಕರಿಸಬೇಕು.

ಈ) ರಸಗೊಬ್ಬರ ತಯಾರಿಕಾದಾರರು ಕಾರ್ಖಾನೆಯೊತ್ತರ ಬೆಲೆಗಳ ಮೂಲಕ ಹೇಗೆ ಆದಾಯ ಪಡೆ ಯುತ್ತಿದ್ದಾರೆ ಎಂದು ಪ್ರತಿ ಕಾರ್ಖಾನೆ ಅನ್ವಯ ಕಾಲದಿಂದ ಕಾಲಕ್ಕೆ ಅಧ್ಯಯನಿಸಬೇಕು.

ಉ) ಆಮದು ರಸಗೊಬ್ಬರಗಳ ಬೆಲೆಯನ್ನು ಇವುಗಳ ಉತ್ಪಾದನಾ ವೆಚ್ಚ, ಪೋಷಕಾಂಶಗಳು, ಹೊಂದಿ ರುವುದನ್ನು ಸ್ಥಳೀಯರಸಗೊಬ್ಬರಗಳೊಂದಿಗೆ ಹೋಲಿಸಿ, ಆಮದು ರಸಗೊಬ್ಬರಗಳಿಗೆ ಒಂದು ನೀತಿಯನ್ನು ಸಿದ್ಧಪಡಿಸುವುದು.

ಮರಾಥೆ ಆಯೋಗ ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ತನ್ನ ವರದಿಯನ್ನು ಭಾಗ I ಮತ್ತು ಭಾಗ II ಎಂದು ನೀಡಿತು. ಭಾಗ I ರಲ್ಲಿ ಎಲ್ಲ ಸಾರಜನಕ ರಸಗೊಬ್ಬರಗಳ ಬೆಲೆಗಳನ್ನು ವಿವರವಾಗಿ ಅಧ್ಯಯ ನಿಸಲಾಯಿತು ಇದರಲ್ಲಿ ಯೂರಿಯ ಅಮೋನಿಯಂ ಸಲ್ಫೇಟ್ ಮತ್ತು ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟನ್ನು ಒಳಗೊಳ್ಳಲಾಯಿತು.

ಭಾಗ II ರಲ್ಲಿ ಸಂಕೀರ್ಣಗೊಬ್ಬರಗಳ ಬೆಲೆ ನಿಗದಿ ಮತ್ತು ಇದರ ಜೊತೆಗೆ ಎಲ್ಲ ರಸಗೊಬ್ಬರಗಳ ಮಾರುಕಟ್ಟೆ ಮತ್ತು ವಿತರಣೆಯನ್ನು ಸಹ ಅಧ್ಯಯನಿಸಿ ಶಿಫಾರಸ್ಸುಗಳನ್ನು ನೀಡಲಾಯಿತು. ಆಮದು

ರಸಗೊಬ್ಬರಗಳ ಬೆಲೆಯನ್ನು ಸಹ ಅಧ್ಯಯನಿಸಲಾಯಿತು. ಇದರ ಜೊತೆಗೆ ಎಲ್ಲ ರಸಗೊಬ್ಬರಗಳ ವೆಚ್ಚದ ಚಿತ್ರಣವನ್ನು ನೀಡಲಾಯಿತು. ವಿವಿಧ ಕಾರ್ಖಾನೆಗಳ ಉತ್ಪಾದನಾ ವೆಚ್ಚ ಸಹ ವ್ಯತ್ಯಾಸಗೊಂಡಿದ್ದವು ಈ ವ್ಯತ್ಯಾಸಗಳನ್ನು ಈ ರೀತಿ ಪಟ್ಟಿ ಮಾಡಬಹುದು.

ಅ) ತಂತ್ರಜ್ಞಾನ ಬಳಕೆಯಲ್ಲಿ ವ್ಯತ್ಯಾಸ

ಆ) ಕಾರ್ಖಾನೆಗಳ ಸ್ಥಾಪಿಸುವುದರೊಂದಿಗೆ ಇದರ ಬಂಡವಾಳ ಹೂಡಿಕೆಯಲ್ಲಿ ವ್ಯತ್ಯಾಸಗಳು

ಇ) ಹಣಕಾಸು ಪೂರೈಕೆ ವಿಧಾನದಲ್ಲಿ ವಿವಿಧ ಸ್ಥಾವರ ಗಳಲ್ಲಿರುವ ವ್ಯತ್ಯಾಸಗಳು.

ಈ) ವಿವಿಧ ಕಾರ್ಖಾನೆಗಳು ವಯಸ್ಸಿನಲ್ಲಿ ವ್ಯತ್ಯಾಸ

ಉ) ಕಾರ್ಖಾನೆಯು ಸ್ಥಾಪಿಸಲ್ಪಟ್ಟ ಸ್ಥಳದ ವ್ಯತ್ಯಾಸ

ಊ) ಇಂಧನ ಬಳಕೆಯಲ್ಲಿ ವ್ಯತ್ಯಾಸ

ಹಳೆ ಕಾರ್ಖಾನೆ ಘಟಕಗಳು ಕಡಿಮೆ ಬಂಡವಾಳ ಹೂಡಿದ ಘಟಕಗಳು, ಹೊಸ ರಸಗೊಬ್ಬರ ಕಾರ್ಖಾನೆ ಘಟಕಗಳು, ಹೆಚ್ಚು ಬಂಡವಾಳ ಹೂಡಿದ ಘಟಕಗಳು. ಈ ಎರಡೂ ಘಟಕಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಸರಿಯಾಗಲಾರದು, ಎಂಬುದೇ ಮಾರಥನ್ ಆಯೋಗದ ನಿಲುವು. ಬಂಡವಾಳ ಹೂಡಿಕೆ ಮತ್ತು ರಸಗೊಬ್ಬರಗಳ ವೆಚ್ಚದ ದೃಷ್ಟಿಯಿಂದ ಈ ಎರಡೂ ಘಟಕಗಳು ವಿಭಿನ್ನ ಬಂಡವಾಳ ಹೂಡಿಕೆ ಮತ್ತು ಉತ್ಪಾದನಾ ವೆಚ್ಚ ಹೊಂದಿರುವಂತಹವು. ಆದ್ದರಿಂದ ರೈತರಿಗೆ ಈ ಎರಡೂ ಘಟಕಗಳು ಒಂದೇ ರೀತಿಯಲ್ಲಿ ನೋಡಿ, ರೈತರಿಗೆ ಏಕರೂಪ ಬೆಲೆಯಲ್ಲಿ ರಸಗೊಬ್ಬರ ಮಾರುವುದು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಮರಾಥನ್ ಆಯೋಗ ವ್ಯಕ್ತಪಡಿಸಿತು. ಹಳೆ ಕಾರ್ಖಾನೆ ಘಟಕಗಳಿಗೆ ಉತ್ಪಾದನಾ ವೆಚ್ಚ ಕಡಿಮೆ ಬರುತ್ತದೆ. ಹಾಗೆಯೇ ಹೊಸ ಘಟಕಗಳಿಗೆ ಉತ್ಪಾದನಾ ವೆಚ್ಚ ಜಾಸ್ತಿ ಬರುತ್ತೆ. ಆದ್ದರಿಂದ ರೈತರಿಗೆ ಏಕರೂಪದ ಬೆಲೆಗೆ ರಸಗೊಬ್ಬರ ಮಾರುವುದರಿಂದ ಹೊಸ ಉತ್ಪಾದನಾ ಘಟಕಗಳಿಗೆ ಆಗುವ ನಷ್ಟವನ್ನು ಬೇರೆ ರೀತಿಯೇ ಭರಿಸಬೇಕು ಎಂದು ಮರಾಥಿಯನ್ ಆಯೋಗ ಅಭಿಪ್ರಾಯಪಟ್ಟಿತು. ಆದ್ದರಿಂದ ಹೊಸ ಘಟಕಗಳ ತಮ್ಮ ನಿವ್ವಳ ಆಸ್ತಿಯ ಮೇಲೆ ತೆರಿಗೆಯೋತ್ತರ ಆದಾಯ ಕನಿಷ್ಠ ಪಕ್ಷ ಶೇ. 12 ರಷ್ಟಿರಬೇಕು. ಆದ್ದರಿಂದ ಒಂದೊಂದೇ ಘಟಕಗಳನ್ನು ಅಧ್ಯಯನಿಸಿ, ಅವುಗಳಿಗೆ ಸಾಕಷ್ಟು ಪ್ರಮಾಣದ ಆದಾಯ ಬರುತ್ತದೆಯೇ ಇಲ್ಲವೆ ಎಂದು ಪರಿಶೀಲಿಸಿ, ಸಾಕಷ್ಟು ಆದಾಯವಿಲ್ಲದ ಘಟಕಗಳಿಗೆ, ಧಾರಣ ಬೆಲೆಯನ್ನು ನೀಡಬೇಕು, ರೈತರಿಗೆ ಒದಗಿಸುವ ರಸಗೊಬ್ಬರಗಳಿಗೆ ಏಕಸ್ವರೂಪದ ಬೆಲೆ ಇರಬೇಕು. ಎಂಬುದೆ ಇದರ ತಿರುಳಾಗಿದೆ. ಮಾರಥಾನ್ ಆಯೋಗ ಸರಳ ಉತ್ಪಾದನಾ ವೆಚ್ಚದ ಮೇಲೆ ಕಾರ್ಖಾನೆಗಳ ಲಾಭ ನಷ್ಟವನ್ನು ಅಳೆಯಲಿಲ್ಲ. ಇದು ಉತ್ಪಾದನಾ ಘಟಕಗಳು ಸಾಮರ್ಥ್ಯ ಬಳಕೆಯ ಮೇಲೆ ಕಾರ್ಖಾನೆ ಲಾಭದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ ಎಂಬ ಸರಳ ಸೂತ್ರದ ಮೇಲೆ ಇದು ಉತ್ಪಾದನಾ ಘಟಕಗಳ ಸಾಧನೆ (Performance) ಕ್ರಿಯಾಶೀಲತೆಯನ್ನು ಅಳೆ

ಯುತ್ತ ಒಂದಿಷ್ಟು ರಸಗೊಬ್ಬರ ಕಾರ್ಖಾನೆಗಳು ಶೇ. 90 ಕ್ಕಿಂತ ಹೆಚ್ಚು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಂಡಿವೆ. ಕೆಲವು ಘಟಕಗಳು ಶೇ. 80 ರಷ್ಟು ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಂಡಿವೆ. ಕೆಲವು ಘಟಕಗಳು ಇದಕ್ಕಿಂತ ಕಡಿಮೆ ಉತ್ಪಾದನಾ ಸಾಮರ್ಥ್ಯವನ್ನು ಒಳಗೊಂಡಿವೆ. ಉತ್ಪಾದನಾ ವೆಚ್ಚ ಕಡಿಮೆಯಾಗಬೇಕಾದರೆ ಕಾರ್ಖಾನೆಗಳು ತಮ್ಮ ಉತ್ಪಾದನೆ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು ಹೀಗೆ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳುವುದರ ಮೂಲಕ ಉತ್ಪಾದನಾ ವೆಚ್ಚವನ್ನು ತಗ್ಗಿಸಬಹುದು. ಇದರ ಜೊತೆಗೆ ಕಚ್ಚಾ ಉತ್ಪನ್ನಗಳ ಬಳಕೆ, ಇಂಧನ ಬಳಕೆ ಇದನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿದರೆ, ಘಟಕದ ಉತ್ಪಾದನಾ ವೆಚ್ಚವನ್ನು ತಗ್ಗಿಸಬಹುದು ಎಂಬುದೇ ಮಾರಥಾನ್ ಆಯೋಗದ ಅಭಿಪ್ರಾಯ.

ಧಾರಣ ಬೆಲೆಯ ನಿಗದಿ:

ಶೇ. 80 ರಷ್ಟು ಉತ್ಪಾದನಾ ಸಾಮರ್ಥ್ಯದ ಬಳಕೆ ಹಾಗೂ ನಿವ್ವಳ ಆಸ್ತಿಯ ಮೇಲೆ ಶೇ. 12 ರಷ್ಟು ಆದಾಯವನ್ನು ಮೂಲಮಾನ ದಂಡವನ್ನಾಗಿಟ್ಟುಕೊಂಡು ಪ್ರತಿಯೊಂದು ರಸಗೊಬ್ಬರಗಳ ಉತ್ಪಾದನಾ ಘಟಕಕ್ಕೆ ಧಾರಣ ಬೆಲೆನಯ್ನು 1-11-1977 ರಲ್ಲಿ ಸರಕಾರ ನಿರ್ಧರಿಸಿತು. ಆದರೆ ಇದರ ಬಗ್ಗೆ ರಸಗೊಬ್ಬರ ಕಾರ್ಖಾನೆಯ ಮಾಲೀಕರಿಂದ ವಿಭಿನ್ನ ಅಭಿಪ್ರಾಯ ಬಂತು. ಏಕೆಂದರೆ ವಿವಿಧ ಘಟಕಗಳಿಗೆ ವಿವಿಧ ಧಾರಣ ಬೆಲೆಯನ್ನು ನಿಗಧಿಪಡಿಸಲಾಗಿತ್ತು. ಇಫ್ಕೋ ಘಟಕಕ್ಕೆ ಪ್ರತಿ ಟನ್ನಿಗೆ ರೂ. 948 ಆದರೆ ನೈವೇಲಿ ಲಿಗ್ನನೈಟ್ ಕಾರ್ಪೋರೇಷನ್ (NCL) ಉತ್ಪಾದಿಸುವ ಯೂರಿಯಾಗೆ ರೂ. 2,261 ನಿಗದಿಪಡಿಸಲಾಯಿತು ಆದರೂ ಸರಕಾರ ಈ ಸೂತ್ರವನ್ನು ಸಮರ್ಥಿಸಿಕೊಂಡಿತು, ಯಾಕೆಂದರೆ ದಾರಣ ಬೆಲೆ ಉತ್ಪಾದನಾ ಸಾಮರ್ಥ್ಯದ ಬಳಕೆ, ಹಾಗೂ ಕಚ್ಚಾ ಸಾಮಗ್ರಿಗಳ ಬಳಕೆಯಲ್ಲಿ ಹೆಚ್ಚು ಪರಿಣಾಮವನ್ನು ಕಾರ್ಖಾನೆ ಮಾಲೀಕರ ಮೇಲೆ ಬೀರುತ್ತದೆಂದು , ಆಗ ಕಾರ್ಖಾನೆ ಮಾಲೀಕರು ತಮ್ಮ (Efficiency) ಸಾಮರ್ಥ್ಯವನ್ನು ಹಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಶ್ರಮ ಪಡುತ್ತಾರೆಂದು ವಾದಿಸಿದರು. ಮರಾಥೆ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಂಡ ಸರಕಾರ ರಸಗೊಬ್ಬರ ಕೈಗಾರಿಕೆಗಳ ಸಮನ್ವಯ ಸಮಿತಿಯನ್ನು ರಚಿಸಿತು. ಈ ಸಮಿತಿಯನ್ನು 1977 ರಲ್ಲಿ ರಚಿಸಲಾಯಿತು. ಹೀಗೆ ರಚಿಸಿದ ಸಮಿತಿ ರಸಗೊಬ್ಬರಗಳಿಗೆ ಧಾರಣ ಬೆಲೆನಯ್ನು ನಿಗದಿಪಡಿಸಿತು. ರಸಗೊಬ್ಬರಗಳಿಗೆ ಎಂದರೆ ಸಾರಜನಕ ರಸಗೊಬ್ಬರಗಳಿಗೆ ಮಾತ್ರ, ಸಾರಜನಕ ರಸಗೊಬ್ಬರಗಳಲ್ಲಿ ಯೂರಿಯಾಗೆ ಮಾತ್ರ ಧಾರಣ ಬೆಲೆಯನ್ನು ನೀಡಲಾಯಿತು. 1979 ರಲ್ಲಿ ಸಂಕೀರ್ಣ ರಸಗೊಬ್ಬರಗಳಿಗೆ 1982 ರಲ್ಲಿ ಸೂಪರ್ ಫಾಸ್ಪೇಟ್‌ಗೆ, 1984 ರಲ್ಲಿ ಅಮೋನಿಯಂ ಸಲ್ಫೇಟೆಗೆ, 1985 ರಲ್ಲಿ ಅಮೋನಿಯಂ ಕ್ಲೋರೈಡ್‌ಗೆ, ಧಾರಣ ಬೆಲೆಯನ್ನು ನಿಗದಿಪಡಿಸಲಾಯಿತು. ಹೀಗೆ ಧಾರಣ ಬೆಲೆಯನ್ನು ನಿಗಧಿಪಡಿಸುವಾಗ ಮರಾಥೆ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸಲಾಯತು. ಹೀಗೆ ಪರಿಗಣಿಸಿದ ಶಿಫಾರಸ್ಸುಗಳನ್ನು ರಸಗೊಬ್ಬರ ಕೈಗಾರಿಕೆಗಳ ಸಮನ್ವಯ ಸಮಿತಿ ಜಾರಿಗೊಳಿಸಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲಾಯಿತು. ಮರಾಥೆ ಆಯೋಗದ ಅನ್ವಯ 1982 ರಲ್ಲಿ ರಂಜಕ ರಸಗೊಬ್ಬರಗಳಿಗೆ

ಧಾರಣ ಬೆಲೆಯನ್ನು ನಿಗದಿಪಡಿಸಲಾಯಿತು. ಹೀಗೆ ಮರಾಥೆ ಆಯೋಗದ ಮೂಲಕ ರಸಗೊಬ್ಬರಗಳಿಗೆ ಧಾರಣ ಬೆಲೆ ಅಸ್ತಿತ್ವಕ್ಕೆ ಬಂದಿತು, ಇದು ರಸಗೊಬ್ಬರ ಕೈಗಾರಿಕ ನೀತಿಯಲ್ಲಿ, ಮೈಲುಗಲ್ಲು ಇದ್ದಂತೆ.

ರಸಗೊಬ್ಬರಗಳ ಸಹಾಯಧನ ನೀತಿ:

ರಸಗೊಬ್ಬರ ಸಹಾಯಧನ ಮುಖ್ಯ ಉದ್ದೇಶಗಳು:

ಅ) ವೈಜ್ಞಾನಿಕ ಕೃಷಿಗೆ ಉತ್ತೇಜನ ನೀಡಿ, ರೈತರಿಗೆ ರಸಗೊಬ್ಬರಗಳ ಬಳಕೆ ಆಕರ್ಷಕವಾಗುವಂತೆ ಮಾಡುವುದು ಜೊತೆಗೆ ನಿಗಧಿತ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು.

ಆ) ಸ್ಥಳೀಯ ರಸಗೊಬ್ಬರ ಉತ್ಪಾದನೆ ಉತ್ಪಾದಕರಿಗೆ ಆಕರ್ಷಕ ವಾಗಿರುವಂತೆ ಮತ್ತು ಉತ್ಪಾದಕತೆಯ ರಸಗೊಬ್ಬರ ಉತ್ಪಾದನೆ ಮೇಲೆ ಹೂಡಿರುವ ಬಂಡವಾಳಕ್ಕೆ ನ್ಯಾಯೋಚಿತ ವರಮಾನ ಇರುವಂತೆ ನೋಡಿಕೊಳ್ಳುವುದು.

ಇ) ಸಣ್ಣ ರೈತರು ವಾಣಿಜ್ಯ ಉದ್ದೇಶಕ್ಕೆ ಉತ್ಪನ್ನಗಳನ್ನು ಉತ್ಪತ್ತಿ ಮಾಡುವುದಿಲ್ಲ ಅವರು ಸ್ವಂತ ಬಳಕೆಗಷ್ಟೇ ಉತ್ಪಾದನೆ ಮಾಡುತ್ತಾರೆ, ಆದ್ದರಿಂದ ಉತ್ಪನ್ನಕ್ಕೆ ಹೆಚ್ಚು ಬೆಲೆ ನಿಗದಿ ಮಾಡಿದರು ಸಣ್ಣ ರೈತರಿಗೆ ಇದರಿಂದ ಅನುಕೂಲವಿಲ್ಲ ಆದ್ದರಿಂದ ಸಣ್ಣ ರೈತರಿಗೆ ಉಪಯುಕ್ತವಾಗಲಿ ಎಂಬ ಉದ್ದೇಶದಿಂದ ಸಂಪನ್ಮೂಲ ಸಹಾಯಧನ ಹೆಚ್ಚು ಶಕ್ತಿಯುತವಾದದ್ದು, ಆದುದರಿಂದ ಬಹಳ ಮುಖ್ಯ ಸಂಪನ್ಮೂಲವಾದ ರಸಗೊಬ್ಬರಗಳಿಗೆ ಸಹಾಯಧನ ನೀಡವುದು ಸಣ್ಣ ರೈತರಿಗೆ ಅನುಕೂಲಕರ

ಇದರ ಜೊತೆಗೆ ರಸಗೊಬ್ಬರಗಳ ಸಹಾಯಧನದ ಮೂಲಕ ಹೊಸ ರೈತರನ್ನು ಹೊಸ ಕ್ಷೇತ್ರಗಳನ್ನು ಹೊಸ ಬೆಳೆಗಳನ್ನು ರಸಗೊಬ್ಬರ ಬಳಕೆಯ ವ್ಯಾಪ್ತಿಗೆ ತರುವುದು. ಹಾಗೆಯೇ ವಿವಿಧ ರಸಗೊಬ್ಬರ ಹಾಗೂ ಪೋಷಕಾಂಶಗಳ ಅಸಮತೋಲನವನ್ನು ಸರಿಪಡಿಸುವುದು ಸಹ ಸೇರುತ್ತದೆ. ಇದರ ಜೊತೆಗೆ ರಸಗೊಬ್ಬರಗಳು ದೇಶದ ಯಾವುದೇ ಪ್ರದೇಶದಲ್ಲಿ ಯಾವಾಗ ಬೇಕಾದರೂ ಸಿಗುವಂತೆ ಮಾಡುವುದು.

ಮೇಲೆ ನಮೂದಿಸಿರುವ ಉದ್ದೇಶಗಳು ರಸಗೊಬ್ಬರ ಸಹಾಯಧನ ಅಥವಾ ಧಾರಣ ಬೆಲೆ ನೀಡಲು ಕಾರಣವಾಗುತ್ತದೆ. ರಸಗೊಬ್ಬರಗಳ ಬಳಕೆ ಈಗಾಗಲೆ ನಾನು ಚರ್ಚಿಸಿರುವಂತೆ ಉತ್ಪಾದಕತೆಯ್ನನು ಹೆಚ್ಚಿಸಿದೆ. ಆದ್ದರಿಂದ ರಸಗೊಬ್ಬರಗಳ ಬಳಕೆ ಹೆಚ್ಚಿಸಿ ಅದು ಸಣ್ಣ ರೈತರಿಗೂ ತಲುಪುವಂತೆ ಆಗಬೇಕಾಗಿರುವುದು ಅನಿವಾರ್ಯ ಬೇರೆ ಅಧ್ಯಾಯದಲ್ಲಿ ಚರ್ಚಿಸಿರುವಂತೆ ಹೆಚ್ಚು ರಸಗೊಬ್ಬರ ಬಳಸುತ್ತಿರುವವರು ಸಣ್ಣ ರೈತರು ಮತ್ತು ಮಧ್ಯಮ ಹಿಡುವಳಿದಾರರು. ಆದರೂ ಇದು ಇನ್ನೂ ಹೊಸ ಕ್ಷೇತ್ರ ಹಾಗೂ ಹೊಸಬೆಳೆ ಹೊಸ ರೈತರಲ್ಲಿ ಆಕರ್ಷಣೆಯಾಗಿಲ್ಲ. ಈ ಆಕರ್ಷಣೆಯನ್ನು ಹೆಚ್ಚಿಸಬೇಕಾಗಿರುವುದು ಸರ್ಕಾರದ ಕರ್ತವ್ಯ ಸಹಾಯಧನವಿಲ್ಲದಿದ್ದರೆ ರಸಗೊಬ್ಬರವನ್ನು ಹಣವಿರುವಂತ ಶ್ರೀಮಂತ ರೈತರು ಬಳಸಬಹುದು. ಆದರೆ ಇದು ಗ್ರಾಮೀಣ ಪ್ರದೇಶಗಳಲ್ಲಿ ಅಸಮಾನತೆಯನ್ನು ತೀವ್ರ ಗೊಳಿಸುತ್ತದೆ.

ಹೀಗೆ ಅಸಮಾನತೆ ತೀವ್ರ ಗೊಳ್ಳುವುದುರಿಂದ ಬಡತನದ ರೇಖೆಗಿಂತ ಕೆಳಗೆ ಬರುವ ರೈತರ ಸಂಖ್ಯೆ ಜಾಸ್ತಿಯಾಗುತ್ತದೆ ಆದ್ದರಿಂದ ಇದನ್ನು ತಡೆಯಲು ಕೃಷಿ ಸಂಪನ್ಮೂಲಗಳನ್ನು ಕಡಿಮೆ ಬೆಲೆಗೆ ಅತಿ ಸಣ್ಣ ಮತ್ತು ಸಣ್ಣ ರೈತರಿಗೆ ಒದಗಿಸಬೇಕು. ಹೀಗೆ ಕಡಿಮೆ ಬೆಲೆಗೆ ಕೃಷಿ ಸಂಪನ್ಮೂಲಗಳನ್ನು ಒದಗಿಸಿದರೆ, ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಸಂಪನ್ಮೂಲಗಳನ್ನು ಬಳಸಲು ಸಾಧ್ಯ ಸಣ್ಣ ಮತ್ತ ಅತಿ ಸಣ್ಣ ರೈತರು ಮಾರುಕಟ್ಟೆ ಹೆಚ್ಚಳಕ್ಕಾಗಿ ಉತ್ಪನ್ನಗಳನ್ನು ಉತ್ಪಾದಿಸುವುದಿಲ್ಲ ಆದ್ದರಿಂದ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುವುದು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಲುಪುವುದಿಲ್ಲ. ಆದ್ದರಿಂದ ಈ ಮೂದರಿ ಸಹಾಯಧನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುತ್ತದೆ. ಆದರೆ ಕೃಷಿ ಸಂಪನ್ಮೂಲಗಳಿಗೆ ಸಹಾಯಧನ ನೀಡಿದರೆ ಇದು ಸಣ್ಣ ರೈತರಿಗೆ ಪರಿಣಾಮಕಾರಿಯಾಗಿ ಸಹಾಯವಾಗುತ್ತದೆ.

ಇದರ ಜೊತೆಗೆ ಕೃಷಿ ಸಂಪನ್ಮೂಲ ಸಹಾಯಧನ ಅದರಲ್ಲೂ ರಸಗೊಬ್ಬರಗಳ ಸಹಾಯಧನ ರಸಗೊಬ್ಬರ ಉತ್ಪಾದಕರಿಗೆ ಆಕರ್ಷಕವಾಗಿದೆ ಹಾಗೂ ಉತ್ತೇಜನ ಕರವಾಗಿದೆ. ರಸಗೊಬ್ಬರ ಕಾರ್ಖಾನೆಯ ಮಾಲೀಕರು, ತಮ್ಮ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯಧನ ಮುಖ್ಯವಾಗುತ್ತದೆ. ಉತ್ಪಾದನೆ ಹೆಚ್ಚಿಸಲು ಹೂಡುವ ಬಂಡವಾಳಕ್ಕ ಆದಾಯ ಹೆಚ್ಚಾಗಬೇಕಾದರೆ ರಸಗೊಬ್ಬರ ಕಾರ್ಖಾನೆಗಳಿಗೆ ಸಹಾಯಧನವಿಲ್ಲದಿದ್ದರೆ ಸಾಧ್ಯವಿಲ್ಲ. ಇಲ್ಲದೆ ಹೋದರೆ ಮಾರುಕಟ್ಟೆ ಬೆಲೆಗೆ ರಸಗೊಬ್ಬರಗಳನ್ನು ಮಾರಬೇಕು ಆಗ ಬೇಡಿಕೆ ಕುಸಿದು ರಸಗೊಬ್ಬರ ಕಾರ್ಖಾನೆಗಳ ಮಾಲೀಕರು ತಮ್ಮ ಉತ್ಪಾದನೆಯನ್ನು ಕಡಿತಗೊಳಿಸಬೇಕಾಗುತ್ತದೆ. ಆದ್ದರಿಂದ ಸಹಾಯ ಧನ ರಸಗೊಬ್ಬರ ಕಾರ್ಖಾನೆಗಳ ಮಾಲೀಕರು ನಿರಂತರವಾಗಿ ಉತ್ಪಾದನೆಯಲ್ಲಿ ಉಳಿಯಲು ಸಹಾಯಕವಾಗುತ್ತದೆ. ಸಹಾಯಧನವಿಲ್ಲದಿದ್ದರೆ ಮಾರುಕಟ್ಟೆ ಬೆಲೆಗೆ ಮಾರಬೇಕಾಗುತ್ತದೆ. ರಸಗೊಬ್ಬರಗಳಿಗೆ ಬೇಡಿಕೆ ಕುಸಿಯುತ್ತದೆ. ರಸಗೊಬ್ಬರ ಉತ್ಪಾದನೆಯೆಂದರೆ ಅತಿ ವೆಚ್ಚದ ಕೆಲಸ, ಆದ್ದರಿಂದ ಸರಕಾರ ಸಹಾಯ ಧನ ನೀಡಿದರೆ ರಸಗೊಬ್ಬರ ಕಾರ್ಖಾನೆ ಮಾಲೀಕರು ಉತ್ಪಾದನೆಯಲ್ಲಿ ಉಳಿಯುತ್ತಾರೆ. ಯಾಕೆಂದರೆ ಅವರು ಹೂಡುವ ಬಂಡವಾಳಕ್ಕೆ ನ್ಯಾಯೋಚಿತ ಆದಾಯ ಬರುತ್ತದೆ. ಆದ್ದರಿಂದ ರಸಗೊಬ್ಬರ ಉತ್ಪಾದನೆಯಲ್ಲಿ ತೊಡಗಲು ಹೊಸ ಉದ್ಯಮಿಗಳನ್ನು ಆಕರ್ಷಿಸಬಹುದು. ಹೊಸ ಉದ್ಯಮಿಗಳು ರಸಗೊಬ್ಬರ ಉತ್ಪಾದನೆ ವಲಯದಲ್ಲಿನ ತೊಡಗಿಸಿಕೊಂಡರೆ ಒಟ್ಟು ರಸಗೊಬ್ಬರಗಳ ತ್ಪಾದನೆಯೂ ಹೆಚ್ಚಾಗುತ್ತದೆ.

ರಸಗೊಬ್ಬರಗಳ ಸಹಾಯಧನದ ವಿಧಗಳು:

ಅ) ರಸಗೊಬ್ಬರಗಳನ್ನು ಉತ್ಪಾದಿಸುವ ಸ್ಥಳೀಯ ಕಾರ್ಖಾನೆಗಳಿಗೆ ಧಾರಣ ಬೆಲೆ ನೀತಿಯನ್ವಯ, ರಸಗೊಬ್ಬರ ಕೈಗಾರಿಕೆಗಳ ಸಮನ್ವಯ ಸಮಿತಿ ಮೇಲ್ವಿಚಾರಣೆಯಲ್ಲಿ ಸಹಾಯಧನವನ್ನು ನೀಡುವುದು ಈ ಸಹಾಯಧನ ಒಟ್ಟು ಸಹಾಯಧನದಲ್ಲಿ ಸಿಂಹಪಾಲು ಪಡೆದಿದೆ.

ಆ) ಆಮದು ರಸಗೊಬ್ಬರಗಳಿಗೆ ಸಹಾಯಧನವನ್ನು ನೀಡುವುದು ಅಂದರೆ ಮಾರಾಟ ಬೆಲೆ ಮತ್ತು

ಕೈಗಾರಿಕೆ ಹಂತದ ಬೆಲೆ ನಡುವೆ ಬರುವ ವ್ಯತ್ಯಾಸವನ್ನು ಹಾಗೂ ವಿತರಣಾ ವೆಚ್ಚವನ್ನು ಒಳಗೊಂಡಂತೆ ಸಹಾಯಧನ ನೀಡುವುದು.

೯) ನಿರ್ದಿಷ್ಟ ರೈತರ ಗುಂಪುಗಳ ಅವಶ್ಯಕತೆಯನ್ನು ಪೂರೈಸಲು ರಸಗೊಬ್ಬರಗಳ ಸಹಾಯಧನವನ್ನು ನೀಡುವುದು

(i) ಸಣ್ಣ ಮತ್ತು ಅತಿ ಸಣ್ಣ ರೈತರು (ಎಸ್.ಎಫ್.ಡಿ.ಎ) ಒಳಗೊಂಡಿರುತ್ತಾರೆ.

(ii) ಬರಗಾಲ ಪೀಡಿತ ಪ್ರದೇಶ ರೈತರಿಗೆ ಸಹಾಯಧನ ನೀಡುವುದು.

(iii) ಬುಡಕಟ್ಟು ಜನಾಂಗಗಳಿಗೆ ಹಾಗೂ ಕುಗ್ರಾಮಗಳಲ್ಲಿರುವ ರೈತರಿಗೆ ಸಹಾಯಧನವನ್ನು ವಿಸ್ತರಿಸುವುದು.

ಹೀಗೆ ರಸಗೊಬ್ಬರ ಸಹಾಯಧನದಲ್ಲಿರುವ ವೈವಿಧ್ಯತೆಗಳು ಗಮನಿಸಬಹುದು, ವರ್ಷದಿಂದ ವರ್ಷಕ್ಕೆ ರಸಗೊಬ್ಬರಗಳ ಸಹಾಯಧನ ಹೆಚ್ಚುತ್ತಲೇ ಇದೆ, ಅದರಲ್ಲೂ 1972 ರಲ್ಲಿ ಸಾರಜನಕ ರಸಗೊಬ್ಬರಗಳಿಗೆ ನೀಡಿದ ಸಹಾಯಧನ ಅಪಾರ ಪ್ರಮಾಣದಲ್ಲಿತ್ತು, ನಂತರ ರಂಜಕ ರಸಗೊಬ್ಬರಗಳಿಗೆ ನೀಡುವ ಸಹಾಯಧನ ಹೆಚ್ಚುತ್ತಲೇ ಹೋಯಿತು.

ಇಲ್ಲಿ ಕೋಷ್ಟಕವನ್ನು ಗಮನಿಸಬಹುದು ಆಹಾರ ಧಾನ್ಯಗಳಿಗೆ ಮತ್ತು ರಸಗೊಬ್ಬರಗಳಿಗೆ ನೀಡಿರುವ ಸಹಾಯಧನ 1976 - 77 ರಿಂದ 2001 - 02 (ರೂ. ದಶಲಕ್ಷಗಳಲ್ಲಿ)

ವರ್ಷ	ಆಹಾರ ಧಾನ್ಯಗಳು	ರಸಗೊಬ್ಬರಗಳು		ಒಟ್ಟು
		ಆಮದು	ಸ್ಥಳೀಯ	
1976 - 77	4773	NA	NA	600
1977 - 78	4801	2410	250	2660
1978 -79	5694	1710	1722	3432
1979-80	6000	2830	3208	6038
1980-81	6500	3350	1700	5050
1981-82	7000	1000	2750	3750
1982-83	7110	550	5500	6050
1983-84	8350	1420	9000	0420
1984-85	11010	7273	12000	9273
1905-86	16500	3237	16000	9237
1986-87	20000	1971	17000	8971

1987-88	20000	1140	20500	1640
1988-89	22000	2007	30000	2007
1989-90	24,760	7711	37710	45421
1990-91	24500	6593	37297	43890
1991-92	28500	12996	35000	47996
1992-93	28000	9961	48000	57961
1993-94	58370	7620	38000	45670
1994-95	51000	11660	40750	52410
1995-96	53770	19350	43000	62350
1996-97	60660	11630	47430	59060
1997-98	79000	7220	66000	73220
1998-99	91000	3330	74730	78060
1990-2000	94350	2930	86700	89630
2000-01	121250	10	94800	94810
2001-02	136750	500	79560	84560

ಮೂಲ ಫರ್ಟಿಲೈಸರ್ಸ್ ಸ್ಟ್ಯಾಟಸ್ಟಿಕ್ಸ್:

ಆಹಾರ ಸಹಾಧನ ಮತ್ತು ರಸಗೊಬ್ಬರಗಳ ಸಹಾಯಧನ:

ಆಹಾರ ಸಹಾಯಧನ ಕೃಷಿ ಉತ್ಪನ್ನಗಳಿಗೆ ನೀಡುವ ಬೆಂಬಲ ಬೆಲೆ ಮತ್ತು ಸಾರ್ವಜನಿಕ ಆಹಾರ ಧಾನ್ಯಗಳ ವಿತರಣಾ ವ್ಯವಸ್ಥೆಮೊದಲಾದವುಗಳನ್ನು ಒಳಗೊಂಡಿದೆ, ಹಾಗೆಯೇ ರಸಗೊಬ್ಬರಗಳ ಸಹಾಯದನದಲ್ಲಿ ಸಿಂಹಪಾಲು ಸಾರಜನಕ ರಸಗೊಬ್ಬರಗಳಿಗೆ ಹೋಗಿದೆ. ಇದರಲ್ಲಿ ಸ್ಪಷ್ಟವಾಗಿ ವಿಭಜಿಸಬಹುದಾದ್ದು ಉತ್ಪನ್ನ ನಿರ್ಧಿಷ್ಟ ಸಹಾಯಧನ ಹಾಗೂ ಉತ್ಪನ್ನೇತರ ಸಹಾಯಧನ, ಈಗಾಗಲೆ ತಿಳಿದಿರುವಂತೆ ಉತ್ಪನ್ನ ನಿರ್ದಿಷ್ಟ ಸಹಾಯಧನವಾದ ಬೆಂಬಲ ಬೆಲೆ ಹಾಗೂ ಸಾರ್ವಜನಿಕ ಆಹಾರ ಧಾನ್ಯಗಳ ವಿತರಣಾ ವ್ಯವಸ್ದೆ ಸಹಾಯಧನ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೆ ಹೋಗುತ್ತಿದೆ 1976 - 77 ರಲ್ಲಿ 4773 ದಶಲಕ್ಷ ರೂಗಳಿದ್ದ ಆಹಾರ ಸಹಾಯಧನ 1986 - 87 ರಲ್ಲಿ ರೂ. 20000 ದಶಲಕ್ಷವಾಯಿತು. 1996 - 97 ರಲ್ಲಿ ಇದೇ ಸಹಾಯಧನ ರೂ. 60660 ದಶಲಕ್ಷಗಳಿಗೆ ಏರಿತು 2001-02 ರಲ್ಲಿ ಇದೇ ಸಹಾಯದನ 136750 ದಶಲಕ್ಷಗಳಿಗೆ ಏರಿತು ಹೀಗೆ ಆಹಾರ ಧಾನ್ಯಗಳ ಸಹಾಯಧನ ವರ್ಷದಿಂದ ವರ್ಷಕ್ಕೆ ಏರುತ್ತಲೇ ಹೋಯಿತು. ಹೀಗೆ ಏರುವುದು ಆರ್ಥಿಕ ವ್ಯವಸ್ಥೆಗೆ ಆರೋಗ್ಯಕರವಲ್ಲ ಎಂದು

ಕೆಲವು ಅರ್ಥಶಾಸ್ತ್ರಜ್ಞರು ವಾದಿಸಿದರೆ, ಜನಕ್ಷೇಮಾಭಿವೃದ್ಧಿಯ ಬಗ್ಗೆ ಕಾಳಜಿಯಿರುವ ಅರ್ಥಶಾಸ್ತ್ರಜ್ಞರು ಇದು ಇನ್ನಷ್ಟು ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಸುತ್ತದೆ ಎಂದು ವಾದಿಸಿರುವರು ಆಹಾರ ಸಹಾಯಧನದಿಂದು ಆರ್ಥಿಕ ವ್ಯವಸ್ಥೆ ದುರ್ಬಲಗೊಳ್ಳುತ್ತದೆ. ಏಕೆಂದರೆ ಆಹಾರ ಸಹಾಯಧನ ಕೆಲಸ ಮಾಡುವ ಸಾಮರ್ಥ್ಯಗನುಗುಣವಾಗಿಲ್ಲ, ಇದು ಕೆಲಸಗಾರರ ಕೆಲಸದ ಸಾಮರ್ಥ್ಯವನ್ನು ಕುಗ್ಗಿಸಿ, ಒಟ್ಟು ಉತ್ಪಾದಕತೆಗೆ ಅಡಚಣೆಯುಂಟು ಮಾಡುತ್ತದೆ. ಆದ್ದರಿಂದ ಇಂತಹ ಸಹಾಯ ಧನವನ್ನು ಉತ್ತೇಜಿಸುವುದು ಸರಿಯಾದ ನೀತಿಯಲ್ಲಿ ಎಂಬ ಚರ್ಚೆ ಪ್ರಾರಂಭವಾಗಿದೆ.

ಇದರ ಜೊತೆಗೆ ಇನ್ನೊಂದಿಷ್ಟು ಚರ್ಚೆಯನ್ನು ನೋಡಬಹುದು. ಆಹಾರ ಸಹಾಯಧನದಿಂದಾಗಿ ರೈತರಬೆಲೆಗಳಿಗೆ ಸರಿಯಾದ ಆರ್ಥಿಕ ಬೆಲೆಸಿಗುವುದಿಲ್ಲ ಬೆಂಬಲ ಬೆಲೆಯಾವಾಗಲೂ ಮಾರುಕಟ್ಟೆಯ ಬೆಲೆಗಿಂತ ಕಡಿಮೆಯೇ ಇರುತ್ತದೆ. ಆದರೆ ಬೆಂಬಲ ಬೆಲೆಯ ಪರಿಕಲ್ಪನೆ ಇರುವುದು, ಮಾರುಕಟ್ಟೆಯ ಬೆಲೆ ಕುಸಿದಾಗ ಸರಕಾರ ರೈತರ ನೆರವಿಗೆ ದಾವಿಸುವುದು ಎಂಬ ಅಂಶವನ್ನು ಗಮನಿಸಬೇಕು. ಆದರೆ ಈ ಪರಿಕಲ್ಪನೆಯ ಚೌಕಟ್ಟಿನಲ್ಲಿ ಬೆಂಬಲ ಬೆಲೆ ನಡಾವಳಿಕೆ ಇರುವುದಿಲ್ಲ. ಇದು ಯಾವಾಗಲೂ ಮಾರುಕಟ್ಟೆಯ ಬೆಲೆಗಿಂತ ಕಡಿಮೆಯೇ ಇರುತ್ತದೆ. ಆದ್ದರಿಂದ ಆಹಾರ ಸಹಾಧನ ನೀಡುವುದು ಕೇವಲ ಕಣ್ಣೊರೆಸುವ ತಂತ್ರ ಹಾಗೂ ರೈತರನ್ನು ಓಲೈಸುವ ತಂತ್ರ ಎಂಬ ವಾದವೂ ಇದರಲ್ಲಿ ಸೇರುತ್ತದೆ, ಜಾಗತೀಕರಣ ಉದಾರೀಕರಣದ ನೀತಿಗನುಗುಣವಾಗಿ ಸಹಾಯಧನವನ್ನು ಕಡಿತಗೊಳಿಸಬೇಕೆಂಬ ವಿಶ್ವವ್ಯಾಪಾರ ಸಂಘಟನೆ ಹಾಗೂ ಐ.ಎಂ.ಎಫ್. ಗಳವಾದವಾದರೆ, ಭಾರತದಲ್ಲಿ ಇದಕ್ಕೆ ವಿರೋಧ ಪ್ರಮುಖ ಶ್ರೀಮಂತ ರೈತರ ಗುಂಪಿನಿಂದ ವ್ಯಕ್ತವಾಗುತ್ತದೆ ಎಂಬ ವಾದವೂ ಇದೆ. ಆದರೆ ಆಹಾರ ಸಹಾಯಧನವನ್ನು ಕಡಿತಗೊಳಿಸುವುದರಿಂದ ಆರ್ಥಿಕ ವ್ಯವಸ್ಥೆಯ ಮೇಲಾಗುವ ದುಷ್ಪರಿಣಾಮಗಳನ್ನು ನೋಡೋಣ. ಕೃಷಿ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳು ಉದ್ದೇಶಪೂರ್ವಕವಾಗಿಯೇ ಕೃಷಿ ಉತ್ಪನ್ನಗಳ ಬೆಲೆಯನ್ನು ಕಡಿಮೆ ಮಟ್ಟದಲ್ಲಿರುಸುತ್ತಾರೆ, ಹಾಗೆಯೇ ಅವನ್ನು ಕಡಿಮೆ ಬೆಲೆಗೆ ಕೊಂಡು, ದಾಸ್ತಾನು ಮಾಡಿ ಆಹಾರ ಧಾನ್ಯಗಳ ದೊರೆಯದ ಋತುಮಾನದಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಾರೆ, ಮತ್ತು ಲಾಭ ಮಾಡಿಕೊಳ್ಳುತ್ತಾರೆ. ಆದ್ದರಿಂದ ಮಧ್ಯವರ್ತಿಗಳು, ದಲ್ಲಾಳಿಗಳು ಮತ್ತು ಕಮೀಷನ್ ಏಜೆಂಟರ ಹಿಡಿತದಿಂದ ಕೃಷಿ ಮಾರುಕಟ್ಟೆಯನ್ನು ತಪ್ಪಿಸಲು ಆಹಾರ ಸಹಾಯ ಧನ ಪ್ರಮುಖ ನೀತಿಯಾಗುತ್ತದೆ. ಆದ್ದರಿಂದ ಬೆಂಬಲ ಬೆಲೆ ನೀತಿ ಹಾಗೆಯೇ ಮುಂದುವರೆಯಬೇಕು. ಆಹಾರ ಸಹಾಯಧನದಲ್ಲಿ ಮತ್ತೊಂದು ಪ್ರಮುಖವಾದ ಅಂಶವೆಂದರೆ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆ ಅಥವಾ ಪಡಿತರ ವ್ಯವಸ್ಥೆ ಪಡಿತರ ವ್ಯವಸ್ಥೆ, ಬಡತನ ರೇಖೆಗಿಂತ ಕೆಳಗಿನವರಿಗೆ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ವಿತರಿಸುವುದಾಗಿದೆ. ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ವಿತರಿಸಬೇಕಾದರೆ ರೈತರಿಂದ ಆಹಾರ ಧಾನ್ಯಗಳನ್ನು ಆಹಾರ ನಿಗಮ ಕಡಿಮೆ ಬೆಲೆಯಲ್ಲಿ ಖರೀದಿಸಿ

ಅದನ್ನು ದಾಸ್ತಾನಿಕರಿಸಿ ಎಲ್ಲ ರಾಜ್ಯಗಳಿಗೂ ಇಂತಿಷ್ಟು ಎಂದು ಬಿಡುಗಡೆ ಮಾಡಲಾಗುತ್ತದೆ. ಬಡತನ ರೇಖೆಗಿಂತ ಕೆಳಗೆ ಬರುವವರಿಗೆ ಈ ಆಹಾರ ಧಾನ್ಯಗಳನ್ನು ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ವಿತರಿಸುವುದು. ಇದು ಒಳ್ಳೆಯ ಜನ ಕ್ಷೇಮಾಭಿವೃದ್ಧಿ ತತ್ವ ಎಂಬುದರಲ್ಲಿ ಸಂದೇಹವಿಲ್ಲ ಆದರೆ, ರೈತರಿಗೆ ಕಡಿಮೆ ಬೆಲೆ ನೀಡುವುದರಿಂದ ರೈತರು ಇಲ್ಲಿ ಈ ಪಡಿತರ ವ್ಯವಸ್ಥೆಯಿಂದ ಅಷ್ಟೇನು ಪ್ರಯೋಜನ ಪಡೆಯುವುದಿಲ್ಲ, ಆದರೆ ಬಡತನ ರೇಖೆಗಿಂತ ಕೆಳಗೆ ಬರುವವರು ಅಂದರೆ ದಿನಕ್ಕೆ ಒಂದು ಡಾಲರ್ ಖರ್ಚು ಮಾಡುವ ಜನರಿಗೆ ಇದು ಉಪಯೋಗಕರವಾದ ವ್ಯವಸ್ಥೆ ಎಂದು ಸಹ ಹೇಳಲು ಬರುವುದಿಲ್ಲ. ಏಕೆಂದರೆ ಆಹಾರ ಧಾನ್ಯಗಳ ದಾಸ್ತಾನುವಿನಲ್ಲಿ ಅಧಿಕಾರಿಗಳು, ತೋರುವ ನಿರ್ಲಕ್ಷ್ಯದಿಂದಾಗಿ ಆಹಾರ ಧಾನ್ಯಗಳು ಕೆಡುವ, ಗುಣಾತ್ಮಕವಾಗಿ ಕಳಪೆ ಮಟ್ಟದಾಗುವ ಅವಕಾಶಗಳೇ ಹೆಚ್ಚು ಈ ಕಾರಣದಿಂದ ಬಡತನದ ರೇಖೆಗಿಂತ ಕೆಳಗೆ ಬರುವ ಜನರು ಪಡಿತರ ವ್ಯವಸ್ಥೆಯಿಂದ ಪಡೆಯುವದು ಕಳಪೆ ಮಟ್ಟದ ಉತ್ಪನ್ನಗಳನ್ನು, ಈ ಕಳಪೆ ಗುಣಮಟ್ಟದ ಉತ್ಪನ್ನಗಳನ್ನು ಬಡತನದ ರೇಖೆಗಿಂತ ಕೆಳಗೆ ಬರುವ ಜನ ಖರೀದಿಸುವುದು ಅನಿವಾರ್ಯವಾಗಿದೆ. ಒಂದು ಅಂದಾಜು ಪ್ರಕಾರ ಆಹಾರಕ್ಕೆ ನೀಡುವ ಸಹಾಯಧನವನ್ನು ಮಧ್ಯವರ್ತಿಗಳು ಹಾಗೂ ದಲ್ಲಾಳಿಗಳು ಗಣನೀಯ ಪ್ರಮಾಣದಲ್ಲಿ ಕಬಳಿಸುತ್ತಾರೆ.

ಆದ್ದರಿಂದ ಆಹಾರ ಧಾನ್ಯಗಳಿಗೆ ನೀಡುವ ಸಹಾಯಧನ ಜನ ಕ್ಷೇಮಾಭಿವೃದ್ಧಿ ದೃಷ್ಟಿಯಿಂದ ಒಳ್ಳೆ ನೀತಿಯಾದರು ಭ್ರಷ್ಟಾಚಾರ ಪಾರದರ್ಶಕತೆ ಇಲ್ಲದೇ ಇರುವುದು ಮತ್ತು ವಿತರಣಾ ವ್ಯವಸ್ಥೆಯಲ್ಲಿರುವ ತೊಡಕುಗಳಿಂದಾಗಿ ಉದ್ದೇಶಿತ ವರ್ಗಗಳಿಗೆ ತಲುಪುವಲ್ಲಿ ಸೋಲುತ್ತದೆ. ಈಹಿನ್ನೆಲೆಯಲ್ಲಿ ರಸಗೊಬ್ಬರಗಳ ಸಹಾಯಧನವನ್ನು ಚರ್ಚಿಸಬೇಕು.

ನಾನು ಈಗಾಗಲೇ ಚರ್ಚಿಸಿರುವಂತೆ ಆಹಾರ ಸಹಾಯಧನ ಮತ್ತು ಕೃಷಿ ಸಂಪನ್ಮೂಲಗಳಲ್ಲೊಂದಾಗುವ ರಸಗೊಬ್ಬರ ಸಹಾಯಧನವನ್ನು ಗಮನಿಸಿದರೆ ಆಹಾರ ಸಹಾಯಧನ ರಸಗೊಬ್ಬರ ಸಹಾಯಧನ ದನಕ್ಕಿಂತ ದುಪ್ಪಟ್ಟು ಇದೆ, ಈಗಾಗಲೆ ಚರ್ಚೆಯಾಗಿದೆ. ರೈತರು ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ನೀಡಿ ಸಂಪನ್ಮೂಲಗಳ ಬೆಲೆಯನ್ನು ಹೆಚ್ಚಿಸಬೇಕೆಂದು ರೈತರ ದೃಷ್ಟಿಯಿಂದ ಗ್ರಾಹಕರ ದೃಷ್ಟಿಯಿಂದ ಹಾಗೂ ಒಟ್ಟಾರೆಯಾಗಿ ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದ ಸಾಧುವಲ್ಲ . ಏಕೆಂದರೆ ಆಹಾರ ಸಹಾಯಧನ ನೀಡುತ್ತಿರುವುದೇ ರೈತರು ಮತ್ತು ಗ್ರಾಹಕರಿಗೆ ಉತ್ತೇಜನಕಾರಿಯಾಗಿ, ರೈತರು ತಮ್ಮ ಉತ್ಪನ್ನಗಳನ್ನು ನ್ಯಾಯೋಚಿತ ಬೆಲೆಗೆ ಮಾರಬೇಕೆಂಬ ದೃಷ್ಟಿಕೋನದಿಂದ. ಹಾಗೆಯೇ ಬಡವರು ನ್ಯಾಯೋಚಿತ ಬೆಲೆಗೆ ನ್ಯಾಯಬೆಲೆ ಅಂಗಡಿಗಳಿಂದ ಆಹಾರ ಪಡೆಯಬೇಕೆಂಬ ಆಸ್ಥೆ ಇದೆ. ಹಾಗೆಯೇ ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರ ತಡೆಯಬೇಕೆಂಬ ಇಚ್ಛೆ ಇದೆ, ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ಆಹಾರ ಸಹಾಯಧನ ನ್ಯಾಯೋಚಿತವಾದದ್ದು ಹಾಗೂ ರಸಗೊಬ್ಬರಗಳ ಸಹಾಯಧನ ಆಹಾರ ಸಹಾಯ ಧನಕ್ಕೆ ಪೂರಕವಾಗಿದ್ದಂತೆ

ರಸಗೊಬ್ಬರಗಳ ಸಹಾಯಧನ ವರ್ಷದಿಂದ ವರ್ಷಕ್ಕೆ ತೀವ್ರ ಗತಿಯಲ್ಲಿ ಏರುತ್ತ ಹೊರಟಿದೆ, ಹೀಗೆ ತೀವ್ರ ಗತಿಯಲ್ಲಿ ಏರುವುದರಿಂದ ಆಹಾರ ಸಹಾಯಧನ ಹಾಗೂ ರಸಗೊಬ್ಬರ ಸಹಾಯಧನ ಪರಸ್ಪರ ಪೂರಕವಾಗಿರುವ ಅಂಶ ಎಂದು ಭಾವಿಸಬೇಕಾಗಿದೆ. ರಸಗೊಬ್ಬರಗಳ ಸಹಾಯಧನದಲ್ಲಿ ಆಮದು ರಸಗೊಬ್ಬರಗಳಿಗೆ ಹೋಗುತ್ತಿದ್ದದ್ದು ಮೊದಲಿನ ಮೂರು ನಾಲ್ಕು ದಶಕಗಳಲ್ಲಿ ಸ್ಥಳೀಯ ರಸಗೊಬ್ಬರಗಳಿಗೆ ನೀಡುತ್ತಿದ್ದ ಸಹಾಯಧನಕ್ಕಿಂತ ಹೆಚ್ಚಾಗಿತ್ತು. ಇದು ತೋರಿಸುವುದೇನೆಂದರೆ ಭಾರತ ರಸಗೊಬ್ಬರಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿಲ್ಲ ಎಂಬುದು ಸ್ಪಷ್ಟವಾಗಿದೆ. 1977 - 78 ರಲ್ಲಿ ರೂ 2410 ದಶಲಕ್ಷಗಳಷ್ಟು ಹಣ ಆಮದು ರಸಗೊಬ್ಬರಗಳಿಗೆ ಹೋಗುತ್ತಿತ್ತು ಇದೇ ಅವಧಿಯಲ್ಲಿ ಸ್ಥಳೀಯ ರಸಗೊಬ್ಬರಗಳಿಗೆ ಕೇವಲ 250 ದಶಲಕ್ಷ ರೂಪಾಯಿಗಳು ಹೋಗುತ್ತಿತ್ತು 1987 - 88 ರ ಅವಧಿಯಲ್ಲಿ 1140 ದಶಲಕ್ಷ ರೂಗಳು ಆಮದು ರಸಗೊಬ್ಬರಗಳಿಗೆ ಹೋಗುತ್ತಿತ್ತು ಸ್ಥಳೀಯ ರಸಗೊಬ್ಬರಗಳಿಗೆ 20500 ದಶಲಕ್ಷ ರೂಪಾಯಿಗಳಷ್ಟು ಹೋಗುತ್ತಿದೆ. ಇದು ಸ್ಪಷ್ಟ ಪಡಿಸುವುದೇನೆಂದರೆ ಕ್ರಮೇಣವಾಗಿ ಹೊರದೇಶಗಳ ಮೇಲೆ ರಸಗೊಬ್ಬರಗಳಿಗೆ ಅವಲಂಬಿತವಾಗಿರುವುದು ಕಡಿಮೆಯಾಗಿ , ರಸಗೊಬ್ಬರ ಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಯಶಸ್ವಿಯಾಗಿರುವುದು. ಇದೇ ಪ್ರಕ್ರಿಯೆ ನಂತರದ ವರ್ಷಗಳಲ್ಲಿ ರಸಗೊಬ್ಬರಗಳ ಉತ್ಪಾದನೆಯಲ್ಲಿ ಮುಂದುವರೆದಿದೆ. 2001-02 ರಲ್ಲಿ ಆಮದು ರಸಗೊಬ್ಬರಗಳಿಗೆ ಹೋಗುತ್ತಿದ್ದ 5000 ದಶಲಕ್ಷ ರೂಪಾಯಿಗಳು, ಸ್ಥಳೀಯ ರಸಗೊಬ್ಬರ ಉತ್ಪಾದನೆಗೆ ಹೋಗುತ್ತಿದ್ದ 79560 ದಶಲಕ್ಷ ರೂಪಾಯಿಗಳು, ಇದು ಭಾರತ ರಸಗೊಬ್ಬರಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂಬುದರ ದ್ಯೋತಕ. ಆದರೆ ರಸಗೊಬ್ಬರಗಳ ಸಹಾಯಧನ ಸ್ಥಳೀಯರಿಗೆ ಸೇರದೆ, ಹೊರದೇಶಗಳವರಿಗೆ ಹೋದರೆ ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ ಸಕಾರಾತ್ಮಕವಾದ ನೀತಿಯಲ್ಲ ಎಂಬುದನ್ನು ನಾವು ತಿಳಿಯಬೇಕು. ಯಾಕೆಂದರೆ ಇದು ವಿದೇಶಿ ವಿನಿಮಯ ಗಳಿಕೆಯಲ್ಲಿ ಏರುಪೇರು ಆಗುತ್ತದೆ. ವಿದೇಶಿ ವಿನಮಯ ಏರಬೇಕಾದರೆ ಆಮದನ್ನು ಕಡಿತಗೊಳಿಸಿ ರಫ್ತನ್ನು ಹೆಚ್ಚಿಸಬೇಕು, ಆಮದು ಹೆಚ್ಚಿದಷ್ಟು ಹಣ ಹೊರಗಡೆಗೆ ಹರಿದು, ಒಳಗೆ ಬರುವ ಹಣ ಕಡಿಮೆಯಾಗಿ ವಿದೇಶಿವಿನಿಮಯ ಸಂಗ್ರಹದಲ್ಲೂ ಭಾರಿ ಏರು ಪೇರಾಗುತ್ತದೆ. ಅದರಲ್ಲೂ ಕೃಷಿ ಪ್ರಧಾನ ರಾಷ್ಟ್ರವಾದ ಭಾರತದಲ್ಲಿ ಈ ವಿದ್ಯಮಾನಗಳಿರಕೂಡದು. ಕೃಷಿ ಸಂಪನ್ಮೂಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕು. ಬೀಜವಿರಬಹುದು ಯಂತ್ರಗಳಿರಬಹುದು. ರಸಗೊಬ್ಬರಗಳಿರಬಹುದು ಯಾವುದೆ ಕೃಷಿ ಸಂಪನ್ಮೂಲಗಳ ಕೊರತೆಯೇನು ನೀಗಿಕೊಳ್ಳುವುದೆ ಕೃಷಿ ಪ್ರಧಾನ ಭಾರತದಂತಹ ಆರ್ಥಿಕ ವ್ಯವಸ್ಥೆ ಆರೋಗ್ಯವಾಗಿರಲು ಇರುವ ದಾರಿ. ಆದರೆ ಕೃಷಿ ಸಂಪನ್ಮೂಲಗಳಲ್ಲಿ ಸ್ವಾವಲಂಬನೆ ಸಾಧಿಸಲು ತಂತ್ರಜ್ಞಾನ , ಉತ್ಪಾದನಾ ಸಾಮರ್ಥ್ಯ, ವಿತರಣೆ, ಸಾಗಾಣಿಕೆ ಮುಂತಾದ ಮೂಲಭೂತ ಸೌಕರ್ಯಗಳನ್ನು ತೀವ್ರಗತಿಯಲ್ಲಿ ನಿರ್ಮಾಣ ಮಾಡಬೇಕಾಗಿರುವುದು ರಾಷ್ಟ್ರದ ಜವಾಬ್ದಾರಿ. ಈ ಜವಾಬ್ದಾರಿಯಿಂದ ನುಣುಚಿಕೊಂಡರೆ ಆರ್ಥಿಕ ವ್ಯವಸ್ಥೆ ತೀವ್ರ ಸಂಕಷ್ಟಕ್ಕೀಡಾಗಬೇಕಾಗುತ್ತದೆ. ಯಾಕೆಂದರೆ

ರಸಗೊಬ್ಬರಗಳ ಸಹಾಯಧನ ಸ್ಥಳೀಯ ಉತ್ಪಾದನೆಯಲ್ಲಿ ಹೆಚ್ಚು ಬಳಕೆಯಾದರೆ, ಇದು ಸೃಷ್ಟಿಸುವ ಆಸ್ತಿ,ಬಂಡವಾಳ ಮತ್ತೆ ಪುನರ್ ಹೂಡಿಕೆಗೆ ಅನುಗುಣವಾಗುವಂತೆಯಾಗುತ್ತದೆ. ಆದ್ದರಿಂದ ಸರಕಾರ ನೀಡುವ ರಸಗೊಬ್ಬರಗಳ ಸಹಾಯಧನ ಇತ್ತೀಚೆಗೆ ಗಣನೀಯ ಪ್ರಮಾಣದಲ್ಲಿ ಸ್ಥಳೀಯ ಉತ್ಪಾದನೆಯಲ್ಲೆ ತೊಡಗಿಸುವುದರಿಂದ ಆರ್ಥಿಕ ಬೆಳವಣಿಗೆಗೆ ಪೂರಕವಾಗುತ್ತದೆ.

ರಸಗೊಬ್ಬರಗಳ ಸಹಾಯಧನ ಯಥೇಚ್ಚವಾಗಿ ಹೆಚ್ಚಲು ಕಾರಣಗಳು

ಅ) ರಸಗೊಬ್ಬರಗಳ ಉತ್ಪಾದನೆಯಲ್ಲಿ ಪ್ರಮಾಣಾತ್ಮಕ ಹೆಚ್ಚಳ

ಆ) ಹೊಸ ರಸಗೊಬ್ಬರಗಳ ಘಟಕಗಳನ್ನು ಸ್ಥಾಪಿಸಿದ್ದರಿಂದ ಉಂಟಾದ ಹೆಚ್ಚು ಹೂಡಿಕೆ ಬಂಡವಾಳದಿಂದಾಗಿ , ರಸಗೊಬ್ಬರಗಳ ಉತ್ಪಾದನಾ ವೆಚ್ಚ ಏರಿದ್ದು.

ಇ) ರಸಗೊಬ್ಬರಗಳ ಉತ್ಪಾದನೆಯಲ್ಲಿ ಬಳಸುವ ಸಂಪನ್ಮೂಲಗಳ ವೆಚ್ಚ ಹೆಚ್ಚಳ.

ಈ) ಸಾರಿಗೆ, ಮಾರುಕಟ್ಟೆ ಹಾಗೂ ವಿತರಣಾ ವೆಚ್ಚದಲ್ಲಿ ಹೆಚ್ಚಳ.

ಉ) ರಸಗೊಬ್ಬರಗಳ ಉತ್ಪಾದನೆಯ ಎಲ್ಲ ವೆಚ್ಚಗಳು ಏರಿದ್ದರು ಸರಕಾರ ರಸಗೊಬ್ಬರಗಳ ಕಾರ್ಖಾನೆಯ ಮಟ್ಟದ ಬೆಲೆಯನ್ನು ಏರಿಸಲು ಹಿಂದು ಮುಂದು ನೋಡುತ್ತಿದ್ದು

ಊ) ಉತ್ಪಾದನೆ, ಮಾರುಕಟ್ಟೆ ಮತ್ತು ವಿತರಣೆಯಲ್ಲಿ ಕಾರ್ಖಾನೆಗಳು ಸಾಮರ್ಥ್ಯ ಹೆಚ್ಚಳಕ್ಕೆ ಪ್ರಯತ್ನಿಸದಿದ್ದದು.

ಅ) ರಸಗೊಬ್ಬರಗಳ ಸಹಾಯಧನದಲ್ಲಿ ಪ್ರಮಾಣಾತ್ಮಕ ಹೆಚ್ಚಳ

ರಸಗೊಬ್ಬರಗಳು ವರ್ಷದಿಂದ ವರ್ಷಕ್ಕೆ ಪ್ರಮಾಣಾತ್ಮಕವಾಗಿ ಹೆಚ್ಚಳ ಗೊಂಡಿದ್ದು, ರಸಗೊಬ್ಬರಗಳ ಉತ್ಪಾದನೆ ಹೆಚ್ಚಳಗೊಂಡಿದ್ದ ಪ್ರಮಾಣಕ್ಕನುಗುಣವಾಗಿ ಸಹಾಯಧನ ಹೆಚ್ಚಳಗೊಂಡಿಲ್ಲ, ಇದು ರಸಗೊಬ್ಬರಗಳ ಉತ್ಪಾದನೆ ಪ್ರಮಾಣದ ಅನುಪಾತಕ್ಕಿಂತ ಜಾಸ್ತಿಯಾಗಿ ಹೆಚ್ಚಳಗೊಂಡಿದೆ. ಉದಾಹರಣೆಗೆ ಸಾರಜನಕ ರಸಗೊಬ್ಬರಗಳು ಶೇ. 60 ರಷ್ಟು ರಂಜಕ ಶೇ. 45 ರಷ್ಟು ಏರಿಕೆಯಾದರೆ ರಸಗೊಬ್ಬರಗಳ ಸಹಾಯಧನ ಶೇ. 45 ರಷ್ಟು ಏರಿದೆ ಎಂಬ ಅಧ್ಯಯನಗಳಿವೆ, ಆದ್ದರಿಂದ ರಸಗೊಬ್ಬರ ಉತ್ಪಾದನೆಯ ಹೆಚ್ಚಳಗೊಂಡಿವೆ, ರಸಗೊಬ್ಬರಗಳ ನೀಡುವ ಸಹಾಯಧನ ಪ್ರಮಾಣಾತ್ಮಕವಾಗಿ ಏರಿಲ್ಲ, ಇದು ರಸಗೊಬ್ಬರ ಉತ್ಪಾದನೆಗಿಂತ ಜಾಸ್ತಿ ಪ್ರಮಾಣದ ಅನುಪಾತದಲ್ಲಿ ಏರಿಕೆಯಾಗಿದೆ ಎಂದು ಅಧ್ಯಯನಗಳು ಹೇಳುತ್ತವೆ. ಆದ್ದರಿಂದ ಕೆಲವು ಅಧ್ಯಯನಗಳ ಪ್ರಕಾರ ರಸಗೊಬ್ಬರ ಉತ್ಪಾದನೆ ಪ್ರಮಾಣಕ್ಕೆ ಸಮನಾಗಿ ರಸಗೊಬ್ಬರಗಳ ಸಹಾಯಧನ ಏರಿಕೆಯಾಗಬೇಕಾಗಿತ್ತು ಎಂಬವಾದಗಳಿವೆ. ಆದರೆ ರಸಗೊಬ್ಬರಗಳು ರೈತರಿಗೆ ಏಕಸ್ವರೂಪದ ಬೆಲೆಯಲ್ಲಿ ರಾಷ್ಟ್ರದ ಯಾವುದೇ ಮೂಲೆಯಲ್ಲೂ ಸಿಗಬೇಕಾದರೆ, ಸಹಾಯಧನ ಅವಶ್ಯಕತೆ ಇದೆ ಈಗ ನೀಡುತ್ತಿರುವ ಸಹಾಯಧನ ಸಾಕಾಗುವುದಿಲ್ಲ ಎಂಬ ಅಭಿಪ್ರಾಯವಿರುವುದರಿಂದ ಏರಿಕೆಯಾಗುತ್ತಿರುವ

ಸಹಾಯಧನವನ್ನು ಕಡಿತಗೊಳಿಸಲು ದುಸ್ಸಾಧ್ಯ ಎಂಬ ಅಭಿಪ್ರಾಯವಿದೆ. ರಸಗೊಬ್ಬರಗಳ ಉತ್ಪಾದನೆ ಏರುತ್ತಿರುವುದರಿಂದ ಸಹಾಯಧನದ ಅಂಶವೂ ಏರುತ್ತಿರುವುದು ಅನಿವಾರ್ಯವಾಗಿದೆ. ಆದ್ದರಿಂದ ಉತ್ಪಾದನೆ ಏರುತ್ತಿರುವುದು ಸಹಾಯಧನ ವರ್ಷದಿಂದ ವರ್ಷಕ್ಕೆ ಏರಲು ಕಾರಣವಾಗಿದೆ. ಸಹಾಯಧನ ಕಡಿತಗೊಳಿಸಿದರೆ ರಸಗೊಬ್ಬರಗಳ ಬಳಕೆಯ ರೈತರ ಮೇಲೆ ಹೊರೆಬೀಳಬಹುದು ಹೀಗೆ ಹೊರೆ ಬೀಳುವುದರಿಂದ ರೈತರ ಬೇಸಾಯದಿಂದ ನಿರ್ಗಮಿಸಬಹುದು. ಬೇಸಾಯದ ಉತ್ಪಾದಕತೆ ಕುಗ್ಗುವುದರಿಂದ ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ವಿಫಲಗೊಳ್ಳಬಹುದು.

ಆ) ಹೊಸ ರಸಗೊಬ್ಬರ ಘಟಕಗಳನ್ನು ಸ್ಥಾಪಿಸಿದ್ದರಿಂದ ವುಂಟಾದ ಹೆಚ್ಚು ಹೂಡಿಕೆ ಬಂಡವಾಳದಿಂದಾಗಿ ರಸಗೊಬ್ಬರಗಳ ಉತ್ಪಾದನಾ ವೆಚ್ಚದ ಏರಿಕೆಯಾಗಿದೆ. ಇದರಿಂದಾಗಿ ಸಹಾಯಧನದ ಬಹುಪಾಲು ಅಂಶ, ಈ ಹೊಸ ರಸಗೊಬ್ಬರದ ಘಟಕಗಳಿಗೆ ಹೋಗುತ್ತಿದೆ, ಈ ಉತ್ಪಾದನಾ ವೆಚ್ಚ ಜಾಸ್ತಿಯಾಗಲು ಇವು ಬಂಡವಾಳ ಸಾಂದ್ರ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದು ಕಾರಣವಾಗಿದೆ. ಬಂಡವಾಳ ಸಾಂದ್ರ ತಂತ್ರಜ್ಞಾನದ ಹೊಸ ಘಟಕಗಳು, ಹೆಚ್ಚು ತಂತ್ರಜ್ಞಾನದ ನಾವಿನ್ಯತೆಯನ್ನು ಪಡೆದಿವೆ, ಆದರೆ ಇವು ಹೆಚ್ಚು ಬಂಡವಾಳವನ್ನು ಆಕರ್ಷಿಸುತ್ತದೆ. ಹೀಗೆ ಹೆಚ್ಚು ಬಂಡವಾಳ ತೊಡಗಿಸಿದರೆ, ಉತ್ಪಾದನಾ ವೆಚ್ಚವು ಸಹ ಹೆಚ್ಚಾಗುತ್ತದೆ. ಉತ್ಪಾದನಾ ವೆಚ್ಚ ಹೆಚ್ಚಾದರೆ ರಸಗೊಬ್ಬರಗಳನ್ನು ರೈತರ ಕೈಗೆಟುಕುವ ಬೆಲೆಯಲ್ಲಿ ಪೂರೈಸಲು ಸಾಧ್ಯವಾಗುವುದಿಲ್ಲ ಇಂತಹ ಸಂದರ್ಭ ಸೃಷ್ಟಿಯಾದರೆ ರೈತರ ಬೇಡಿಕೆ ಸಹ ಕುಗ್ಗುತ್ತದೆ. ಆದ್ದರಿಂದ ಈ ಹೊಸ ಘಟಕಗಳಿಗೆ ಸಹಾಯಧನ ಕೆಲವು ಅಧ್ಯಯನಗಳ ಪ್ರಕಾರ ಶೇ. 25 ಕ್ಕಿಂತ ಹೆಚ್ಚು ಹೊಸ ಉತ್ಪಾದನಾ ಘಟಕಗಳಿಗೆ ಹೋಗುತ್ತದೆ. ಆದ್ದರಿಂದ ಸಹಾಯಧನದ ಹೆಚ್ಚಳವು ಸಹ ಅನಿವಾರ್ಯವಾಗಿದೆ.

ಇ) ರಸಗೊಬ್ಬರಗಳ ಉತ್ಪಾದನೆಯ ಸಂಪನ್ಮೂಲ ವೆಚ್ಚದಲ್ಲಿ ಏರಿಕೆ. ಒಂದು ಸಮಸ್ಯೆಯಾಗಿ ಕಾಡುತ್ತಿದೆ. ಶೇ. 50 ರಷ್ಟು ಸಹಾಯಧನ ಸಂಪನ್ಮೂಲ ವೆಚ್ಚಕ್ಕೆ ಹೋಗುತ್ತಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ, ಯಾಕೆಂದರೆ ವರ್ಷದಿಂದ ವರ್ಷಕ್ಕೆ ರಸಗೊಬ್ಬರ ಉತ್ಪಾದನೆಯ ಸಂಪನ್ಮೂಲ ವೆಚ್ಚ ಏರುತ್ತಿದೆ, ಈ ಸಂಪನ್ಮೂಲ ವೆಚ್ಚ ಏರಿಕೆ ಸರಕಾರವೇ ಕಾರಣ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ನಡೆಯುತ್ತಲೇ ಇದೆ, ಹಾಗೂ ಇನ್ನಿತರ ಸಂಪನ್ಮೂಲಗಳ ಆಡಳಿತಾತ್ಮಕ ಬೆಲೆಯನ್ನು ಸರಕಾರ ಹೆಚಿಸುತ್ತಲೇ ಇದೆ, ಈ ಕಾರಣಕ್ಕಾಗಿ ಸರಕಾರ ಹೆಚ್ಚುತ್ತಿರುವ ರಸಗೊಬ್ಬರಗಳ ಬೆಲೆಯನ್ನು ನಿಯಂತ್ರಿಸಲು, ಸಹಾಯಧನವನ್ನು ನೀಡಲೇಬೇಕಾದ ಅನಿವಾರ್ಯತೆಯಿಂದಾಗಿದೆ.

ಈ) ಸಾರಿಗೆ ಮತ್ತು ವಿತರಣಾ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ರೈಲ್ವೆ ಮೂಲಕ ಸಾಗಾಣಿಕೆ ಮಾಡುವ ವೆಚ್ಚ ಹೆಚ್ಚುತ್ತಲೇ ಇದೆ. ಹೀಗೆ ಹೆಚ್ಚುತ್ತಿರುವುದರಿಂದ ಸಾಗಾಣಿಕೆ ವೆಚ್ಚದಲ್ಲಿ ಅಪರಿಮಿತ ಏರಿಕೆಯನ್ನು

ಕಾಣಬಹುದು. ವಿತರಣಾ ವೆಚ್ಚ ಹೆಚ್ಚಳಕ್ಕೆ ವಿತರಕರಿಗೆ ಹೆಚ್ಚು ಕಮೀಷನ್ ಕೊಡಲು ನಿರ್ದರಿಸಿದ್ದೆ ಕಾರಣ, ವಿತರಣಾ ವೆಚ್ಚವನನು ಭರಿಸಲು ಒಟ್ಟು ಸಹಾಯ ಧನದಲ್ಲಿ ಶೇ. 24 ರಷ್ಟು ಕಾಯ್ದಿರಿಸಲಾಗಿತ್ತು. ಆದ್ದರಿಂದ ಸಹಾಯಧನದ ಅಂಶ ಸಾರಿಗೆ ಮತ್ತು ವಿತರಣಾ ವೆಚ್ಚಗಳಿಗೂ ಹೋಗುತ್ತದೆ ಎಂಬುದು ಈ ಮೂಲಕ ಸ್ಪಷ್ಟವಾಗಿದೆ. ಸಾಗಾಣಿಕೆಯೆನ್ನುವುದು ಅತ್ಯಂತ ಪ್ರಯಾಸಕಾರಿ ಅಂಶ, ರಸಗೊಬ್ಬರಗಳನ್ನು ಉತ್ಪಾದಿಸುವುದು ಅಷ್ಟು ಕಷ್ಟಕರವಲ್ಲ. ಆದರೆ ದೇಶಾದ್ಯಂತ ಈ ರಸಗೊಬ್ಬರಗಳು ಗ್ರಾಹಕರಿಗೆ ತಲುಪಿಸುವುದು ಅತಿ ಮುಖ್ಯವಾಗುತ್ತದೆ. ಹೀಗೆ ಸರಿಯಾದ ವೇಳೆಗೆ ರಸೊಬ್ಬರಗಳ್ಳನು ಗ್ರಾಹಕರಿಗೆ ತಲುಪಿಸಲು. ರೈಲ್ವೆ ಸೌಲಭ್ಯ ಕೇವಲ ನಗರಗಳಿಗೆ ಸೀಮಿತವಾಗಿದೆ. ಅಲ್ಲಿಂದ ಟ್ರಕ್ ಲಾರಿಗಳ ಮೂಲಕ ಬಳಕೆ ಕೇಂದ್ರಗಳಿಗೆ ತಲುಪಿಸಬೇಕು, ಬಳಕೆ ಕೇಂದ್ರಗಳ ತಾಲ್ಲೂಕು ಕೇಂದ್ರಗಳಲ್ಲಿ ಗ್ರಾಮ ಕೇಂದ್ರಗಳಲ್ಲಿ ಇವೆ, ಇಷ್ಟು ದೂರವಿರುವ ಬಳಕೆ ಕೇಂದ್ರಗಳಿಗೆ ತಲುಪಿಸಲು ಸಾಗಾಣಿಕೆ ಸಾರಿಗೆ ಸೌಲಭ್ಯದ ಜಾಲ ಅತಿ ಮುಖ್ಯವಾಗುತ್ತದೆ. ಆದರೆ ಸಾಗಾಣಿಕೆ ಸೌಲಭ್ಯ ಜಾಲ ನಾವು ತಿಳಿದುಕೊಂಡಷ್ಟು ಸರಳ ಸಮಸ್ಯೆಯಲ್ಲ ಇದು ಒಂದು ಮುಖ್ಯ ಸಮಸ್ಯೆ ಆದ್ದರಿಂದ ಸಾಗಾಣಿಕ ವೆಚ್ಚ ಏರಿಕೆ ಕಂಡು ಬರುತ್ತದೆ. ಸಾಗಾಣಿಕ ವೆಚ್ಚವ್ವನು ಸಹ ಸರಕಾರದ ಸಹಾಯಧನದ ಮೂಲಕ ಭರಿಸಬೇಕಾಗುತ್ತದೆ. ಅದರ ಜೊತೆ ಬಳಕೆ ಕೇಂದ್ರಗಳ ಮಾಲೀಕರಿಗೆ ಹೆಚ್ಚು ಹೆಚ್ಚು ಅವರು ಮಾರಾಟ ಮಾಡುವುದಕ್ಕೆ ಹೆಚ್ಚು ಹೆಚ್ಚ ಕಮೀಷನ್ ಕೊಡಬೇಕಾಗುತ್ತದೆ. ಈ ಕಮೀಷನ್ ಭರಿಸಲು ಸಹಾಯಧನದ ಅವಶ್ಯಕತೆ ಇದೆ ಎಂಬುದನ್ನು ಸರಕಾರ ಹೇಳುತ್ತದೆ.

ರಸಗೊಬ್ಬರಗಳಿಗೆ ಸಹಾಯಧನ ನೀಡುವುದೊಂದೆ ಕೃಷಿ ಅಭಿವೃದ್ಧಿಗೆ ಪರಿಹಾರವನ್ನು 2000-01 ರ ಅವಧಿಗೆ ರೂ. 94800 ದಶಲಕ್ಷಗಳು. ಇಷ್ಟು ಹಣ ಸಹಾಯಧನವಾಗಿ ನೀಡಿದರೂ ರಸಗೊಬ್ಬರ ಕಾರ್ಖಾನೆಗಳು ಕೆಲವು ಇನ್ನೂ ರೋಗಗ್ರಸ್ಥವಾಗರುವುದು ತಪ್ಪಿಲ್ಲ ಉದಾಹರಣೆ ಮಂಗಳೂರು ಕೆಮಿಕಲ್ ಪರ್ಟಿಲೈಜರ್ಸ್ ಅದರ ವಾರ್ಷಿಕ ವರದಿಗಳನ್ನು ಪರಿಶೀಲಿಸಿದರೆ ಅದು ನಷ್ಟದಲ್ಲಿ ನಡೆಯುತ್ತಿದೆ ಎಂಬ ಅಂಶ ಬೆಳಕಿಗೆ ಬರುತ್ತದೆ. ಆದ್ದರಿಂದ ರೋಗಗ್ರಸ್ಥ ಕಾರ್ಖಾನೆಗಳು ನಷ್ಟ ತಪ್ಪಿಸಿಕೊಳ್ಳಲು ಉತ್ಪಾದನಾ ತಂತ್ರಜ್ಞಾನದಲ್ಲಿ ಸುಧಾರಣೆ ತರಬೇಕೆಂಬ ವಾದವಿದೆ, ತಂತ್ರಜ್ಞಾನ ಮತ್ತು ಅಗ್ಗವಾಗಿಯೇನು ಉಳಿದಿಲ್ಲ ತಂತ್ರಜ್ಞರ ಕೊರತೆಯೂ ಇದೆ, ತಂತ್ರಜ್ಞರಿಲ್ಲದೆ, ತಂತ್ರದಜ್ಞಾನ ಸುಧಾರಣೆ ಮಾಡಿದರೆ ಅದು ಉತ್ಪದಾನೆಯ ಮೇಲೆ ಅಂತಹ ಪರಿಣಾಮವನ್ನೇನು ಬೀರುವುದಿಲ್ಲ. ಆದ್ದರಿಂದ ಸಹಾಯಧನ ನೀಡಿದರು, ಕೈಗಾರಿಕೆಗಳು ರೋಗಗ್ರಸ್ತವಾಗುವುದು ಆಶ್ಚರ್ಯಕರ ವಿಷಯವೇನಲ್ಲ. ಆದ್ದರಿಂದ ಕೆಲವು ರಸಗೊಬ್ಬರ ಕಾರ್ಖಾನೆಗಳು ರೋಗಗ್ರಸ್ಥ ಸನ್ನಿವೇಶದಿಂದ ಮುಕ್ತಗೊಳ್ಳಲು, ತಂತ್ರಜ್ಞಾನ ತಂತ್ರಜ್ಞರ ಜೊತೆಗೆ, ಮಾರುಕಟ್ಟೆಯ ಕಾರ್ಯ ತಂತ್ರ, ವಿತರಣಾ ಕಾರ್ಯತಂತ್ರಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಾಮುಖ್ಯತೆ ನೀಡಬೇಕು. ಮಾರುಕಟ್ಟೆಯಲ್ಲಿ ಎಲ್ಲ ರಸಗೊಬ್ಬರಗಳು ಏಕ ರೂಪದ ಬೆಲೆ ಇರುವುದರಿಂದ ಮಾರುಕಟ್ಟೆಯು ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಮಾರುಕಟ್ಟೆಯ ವ್ಯಾಪ್ತಿ ವಿವಿಧ ರಸಗೊಬ್ಬರಗಳಿಗೆ ಅವುಗಳು ಉತ್ಪಾದಿಸುವ

ರಾಜ್ಯಗಳಿಗಷ್ಟೇ ಸೀಮಿತ ಗೊಂಡಿದೆ. ಇವು ತಮ್ಮ ವ್ಯಾಪ್ತಿಯ ಭೌಗೋಳಿಕ ಮಿತಿಗಳನ್ನು ದಾಟಿ ಉತ್ಪನ್ನ ಚಲಿಸಬೇಕಾಗಿದೆ. ಉತ್ಪನ್ನ ಹೆಚ್ಚು ಮಾರಾಟವಾದಗಲೆ, ಉತ್ಪಾದಕರಿಗೆ ತಮ್ಮ ಉತ್ಪಾದನಾ ವೆಚ್ಚದಲ್ಲಿ ಸುದಾರಣೆಯಾಗುತ್ತದೆ, ಹೀಗೆ ಉತ್ಪಾದನಾ ವೆಚ್ಚದಲ್ಲಿ ಸುಧಾರಣೆ ಯಾಗುವುದರಿಂದ ಕಾರ್ಖಾನೆ ಲಾಭದಾಯಕವಾಗಿ ನಡೆಯುತ್ತದೆ ಆದ್ದರಿಂದ ಮಾರುಕಟ್ಟೆ ತಂತ್ರ ಅತಿ ಮುಖ್ಯವಾದ ಅಂಶ, ವಿತರಣೆ ತಂತ್ರವೆಂದರೆ ವಿತರಕರು ಹೆಚ್ಚು ಉತ್ಸಾಹಶೀಲ ಹಾಗೂ ಕ್ರಿಯಾಶೀಲರಾಗಿರಬೇಕು. ಅಂತಹ ವಿತರಕರನ್ನು ಉತ್ತೇಜಿಸಲು ಹೆಚ್ಚು ಕಮೀಷನ್ ಕೊಡಬೇಕು ಈ ರೀತಿಯ ಮಾರುಕಟ್ಟೆ ತಂತ್ರ ಅನುಸರಿಸುವುದರಿಂದ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ರೀತಿಯಲ್ಲಿ ಖರ್ಚಾಗುತ್ತದೆ. ಆಗ ಕಾರ್ಖಾನೆಗಳಿಗೆ ರಸಗೊಬ್ಬರ ಉತ್ಪಾದನೆ ಹೆಚ್ಚಿಸಲೇ ಬೇಕಾದ ಅನಿವಾರ್ಯತೆ ಬರುತ್ತದೆ. ರಸಗೊಬ್ಬರಗಳ ಉತ್ಪಾದನೆ ಹೆಚ್ಚಳವಾದರೆ ಸ್ಥಿರ ವೆಚ್ಚಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡಂತೆ ಆಗುತ್ತದೆ. ಸ್ಥಿರ ವೆಚ್ಚಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದರಿಂದ ಉತ್ಪಾದನಾ ವೆಚ್ಚ ಸಹ ತಗ್ಗುತ್ತದೆ. ಈ ದೃಷ್ಟಿಕೋನದಲ್ಲಿ ಕಾರ್ಖಾನೆ ಮಾಲೀಕರು ನೋಡಿದರೆ. ಹೆಚ್ಚು ಹೆಚ್ಚು ಹೊಳವುಗಳು ಕಾರ್ಖಾನೆ ಮಾಲೀಕರು, ತಮ್ಮ ಕಾರ್ಖಾನೆಗಳನ್ನು ರೋಗಗ್ರಸ್ಥ ಸನ್ನಿವೇಶದಿಂದ ತಪ್ಪಿಸಲು ಮಾರ್ಗೋಪಾಯಗಳು ಸಿಗುತ್ತವೆ. ಚರ ವೆಚ್ಚಗಳನ್ನು ತಂತ್ರಜ್ಞಾನ ಸುಧಾರಣೆಯ ಮೂಲಕ ತಗ್ಗಿಸಬಹುದು, ಚರ ವೆಚ್ಚಗಳಲ್ಲಿ ಇಂಧನ ವೆಚ್ಚ, ಇನ್ನಿತರ ಕಚ್ಚಾ ಸಾಮಗ್ರಿಗಳ ವೆಚ್ಚ ಅಧಿಕವಾಗಿರುತ್ತದೆ. ಇಂತಹ ವೆಚ್ಚಗಳನ್ನು ಆದಷ್ಟು ಪ್ರಮಾಣದಲ್ಲಿ ತಗ್ಗಿಸಬೇಕು. ಕಚ್ಚಾ ಸಾಮಗ್ರಿಗಳ ಬೆಲೆ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿರುವುದರಿಂದ. ಉತ್ಪಾದನಾ ವೆಚ್ಚ ಹೆಚ್ಚುತ್ತಲೇ ಇದೆ. ಕಚ್ಚಾ ಸಾಮಗ್ರಿಗಳ ಬೆಲೆ ಅಧಿಕವಾಗುವುದಕ್ಕೆ ಪೆಟ್ರೋಲಿಯಂ ಮತ್ತು ಇದಕ್ಕೆ ಸಂಬಂಧಿತ ಉತ್ಪನ್ನಗಳ ಬೆಲೆ ವರ್ಷದಿಂದ ವರ್ಷಕ್ಕೆ ಕಡಿವಾಣವಿಲ್ಲದೆ ಏರುತ್ತಿರುವುದು ಕಾರಣವಾಗುತ್ತದೆ. ಆದ್ದರಿಂದ ಇಂಧನ ಮತ್ತು ಕಚ್ಚಾ ಸಾಮಗ್ರಿಗಳ ಬೆಲೆಗಳಲ್ಲಿ ರಸಗೊಬ್ಬರ ಉತ್ಪಾದನಾ ಕಾರ್ಖಾನೆಗಳಿಗೆ ಕಳೆದ ಐದು ವರ್ಷಗಳ ಸ್ಥಿರ ಬೆಲೆಗಳಲ್ಲಿ ನೀಡುವುದು ಒಳಿತು. ಇಂಧನ ಮತ್ತು ಕಚ್ಚಾ ಸಾಮಗ್ರಿಗಳ ಬೆಲೆಗಳ ವರ್ಷದಿಂದ ವರ್ಷಕ್ಕೆ ಏರಿದರು ಕಳೆದ ಐದು ವರ್ಷಗಳಲ್ಲಿ ಯಾವ ಬೆಲೆ ಮತ್ತು ಅದೇ ಬೆಲೆಗೆ ಇಂಧನ ಮತ್ತು ಕಚ್ಚಾ ಸಾಮಗ್ರಿಗಳನ್ನು ಪೂರೈಸಿದರೆ ಅದೇ, ಯುಕ್ತವಾದ ನೀತಿಯಾಗುತ್ತದೆ. ಆದ್ದರಿಂದ ಕಾರ್ಖಾನೆಗಳು ಸಹಾಯಧನವನ್ನೆ ರಸಗೊಬ್ಬರಗಳ ಬೆಲೆ ನಿಗದಿ, ಕೆಲವು ಅಂಶಗಳನ್ನೊಳಗೊಂಡಿದೆ ಉತ್ಪಾದನಾ ವೆಚ್ಚ ಮಾರುಕಟ್ಟೆಯ ವ್ಯಾಪ್ತಿ ಮಾರುಕಟ್ಟೆಯಲ್ಲಿರುವ ಪಾಲು, ವೈವಿಧ್ಯಮಯ ರಸಗೊಬ್ಬರಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದು ಮಾರುಕಟ್ಟೆಗನುಗುಣವಾಗಿ ಬೆಲೆ ವ್ಯತ್ಯಾಸವನ್ನು ನಿಗದಿ ಮಾಡುವುದು ಮುಂತಾದ ಅಂಶಗಳನ್ನು (ನಂದ್) ಪ್ರತಿಪಾದಿಸುತ್ತಾರೆ. ರಸಗೊಬ್ಬರಗಳ ಉತ್ಪಾದನಾ ವೆಚ್ಚಕ್ಕೆ ಬೆಲೆ ನಿಗದಿಯನ್ನು ಸಂಬಂಧ ಕಲ್ಪಿಸುವುದರ ಮೂಲಕ ಬೆಲೆ ನಿಗದಿಪಡಿಸುವುದು ಒಂದು ಆಲೋಚನೆಯಾಗಬಹುದು. ಉತ್ಪಾದನಾ ವೆಚ್ಚದ ಬೆಲೆ ಸಾಗಾಣಿಕೆ ವಿತರಣೆ ವೆಚ್ಚದ ಬಗ್ಗೆ ಅಷ್ಟು ಪ್ರಾಮುಖ್ಯತೆಯನ್ನೇನು ನೀಡಿಲ್ಲ, ಆದರೆ ಮಾರಾಧಾಸಿಯಸ್

ಆಯೋಗ ಶೇ. 12 ರಷ್ಟು ಲಾಭ ವಿಟ್ಟುಕೊಳ್ಳಬೇಕು ಎಂದು ಸೂಚಿಸುತ್ತದೆ. ಆದರೆ ಉತ್ಪಾದನಾ ವೆಚ್ಚದ ಮೇಲೆ ನಿಗದಿ ಮಾಡಿದರೆ, ರೈತರಿಗೆ ಮಾರುವ ಚಿಲ್ಲರೆ ಬೆಲೆ ಏರಿಕೆಯಾಗಿ ರೈತರಿಗೆ ಹೊರೆಯಾಗುತ್ತದೆ. ಆದ್ದರಿಂದ (ನಂದ್) ವಾದ ಅಷ್ಟು ಪರಿಣಾಮಕಾರಿಯಲ್ಲ. ಮಾರುಕಟ್ಟೆಯ ವ್ಯಾಪ್ತಿಗೆ ಬೆಳೆ ನಿಗದಿ ಸಂಬಂಧ ಕಲ್ಪಿಸುವುದು. ಒಂದು ಚರ್ಚಾರ್ಹ ಅಂಶ, ಮಾರುಕಟ್ಟೆಯ ವ್ಯಾಪ್ತಿ ಬಹಳಷ್ಟು ರಸಗೊಬ್ಬರಗಳಿಗೆ ಸೀಮಿತವಾಗಿದೆ ಮಾರುಕಟ್ಟೆಯ ವ್ಯಾಪ್ತಿ ಹೆಚ್ಚಿದಂತೆಲ್ಲಾ ಉತ್ಪನ್ನದ ಮಾರಾಟ ಹೆಚ್ಚಾಗುತ್ತದೆ. ಉತ್ಪನ್ನದ ಮಾರಾಟ ಹೆಚ್ಚುತ್ತಲೆ ಪೂರೈಕೆ ಹೆಚ್ಚುತ್ತಲೆ, ಪೂರೈಕೆ ಹೆಚ್ಚಾಗುತ್ತದೆ. ಪೂರೈಕೆ ಹೆಚ್ಚಾದಂತೆಲ್ಲಾ ಉತ್ಪಾದನೆ ಹೆಚ್ಚಿಸಲೇಬೇಕು, ಆಗ ಉತ್ಪಾದನಾ ವೆಚ್ಚ ಕಡಿಮೆಯಾಗಬಹುದು ಆದ್ದರಿಂದ ಮಾರುಕಟ್ಟೆಯ ವ್ಯಾಪ್ತಿಯನ್ನು ಹೆಚ್ಚಿಸುವ ಅಂಶ ಒಂದು ಪ್ರಸ್ತುತ ಅಂಶವೆಂದರೆ ನನ್ನ ಅನಿಸಿಕೆ. ಮಾರುಕಟ್ಟೆಯಲ್ಲಿ ನಿರ್ದಿಷ್ಟ ಕಂಪನಿಯ ಉತ್ಪನ್ನದ ಪಾಲು ಹೆಚ್ಚಬೇಕು. ಆದೆರ ಉತ್ಪನ್ನ ಕಂಪನಿಯ ಉತ್ಪನ್ನದ ಪಾಲು ಹೆಚ್ಚಬೇಕು. ಅದರೆ ಉತ್ಪನ್ನ ಮಾರುಕಟ್ಟೆಯಲ್ಲಿ ತನ್ನ ಪಾಲು ಹೆಚ್ಚದಿದ್ದರೆ, ಉತ್ಪಾದಕರ ಮಾರುಕಟ್ಟೆ ಮಾರಾಟದ ಪಾಲನ್ನು ಹೆಚ್ಚಿಸಿಕೊಳ್ಳಬೇಕು. ಮಾರುಕಟ್ಟೆಯ ಪಾಲನ್ನು ಹೆಚ್ಚಿಕೊಳ್ಳಲು ಜಾಹಿರಾತು ತೀರ ಅವಶ್ಯಕವಾದದ್ದು ಇಂದಿನ ಸ್ಪರ್ಧಾತ್ಮಕಯುಗದಲ್ಲಿ ವರ್ಷದಿಂದ ವರ್ಷಕ್ಕೆ ಪ್ರತಿ ಕಂಪನಿಯ ಮಾರುಕಟ್ಟೆಯ ಮಾರಾಟದ ಪಾಲು ವ್ಯತ್ಯಾಸಗೊಳ್ಳುತ್ತಿರುತ್ತದೆ. ಆದ್ದರಿಂದ ಮಾರುಕಟ್ಟೆಯ ಪಾಲು ಹೆಚ್ಚಿಸಿ (Market Share) ಕೊಂಡರೆ, ಉತ್ಪಾದನೆ ವೆಚ್ಚ ತಗ್ಗುತ್ತದೆ ಬೆಲೆ ಏರಿಕೆಗೆ ಕಡಿವಾಣ ಹಾಕಬಹುದು. ರಸಗೊಬ್ಬರಗಳಿಗೆ ವಿವಿಧ ಮಾರುಕಟ್ಟೆ ಬೆಲೆಯ ಮಾರುಕಟ್ಟೆಗಳಲ್ಲಿ ಮಾರುಕಟ್ಟೆಯ ಬೆಲೆಯ ವ್ಯತ್ಯಾಸೀಕರಣವನ್ನು (ನಂದ್) ಕೆಲವು ತಜ್ಞರು ಪ್ರತಿಪಾದಿಸುತ್ತಾರೆ ಆದರೆ ವಿವಿಧ ಮಾರುಕಟ್ಟೆಗಳಲ್ಲಿ ವಿವಿಧ ಬೆಲೆ ಇರುವುದು ಈಗಿನ ಧಾರಣ ಬೆಲೆ ನೀತಿಗೆ ವಿರುದ್ಧವಾದದ್ದು, ಯಾಕೆಂದರೆ ಧಾರಣ ಬೆಲೆ ನೀತಿ ವಿವಿಧ ಮಾರುಕಟ್ಟೆಗಳಲ್ಲಿ ಒಂದೆ ತೆರನಾಗಿ, ಏಕ ಮುಖವಾಗಿರುವುದಕ್ಕೆ ಬೆಲೆಗೆ ಸರಕಾರ ಬದ್ಧವಾಗಿರುವಾಗ, ವಿವಿಧ ಮಾರುಕಟ್ಟೆ ವಿವಿಧ ರೀತಿಯ ಬೆಲೆ ವ್ಯತ್ಯಾಸೀಕರಣದ ಬಗ್ಗೆ ಮಾತನಾಡುವುದು ಅಸಂಬಂಧದ್ದ ವಾದದ್ದು ಆದ್ದರಿಂದ ಈ ಆಲೋಚನೆಯ ಮೇಲೆ ರಸಗೊಬ್ಬರಗಳ ಬೆಲೆ ನಿಗದಿಪಡಿಸುವುದು ಅಷ್ಟು ಸಮರ್ಪಕವಾಗಿಲ್ಲದಿರುವುದರಿಂದ ಈ ಅಂಶವನ್ನು ಚರ್ಚಿಸುವುದು ಅಷ್ಟು ಸೂಕ್ತವಾಗಲಾರದು. ಆದ್ದರಿಂದ ಈ ರೀತಿಬೆಲೆ ನಿಗದಿಪಡಿಸುವುದು ರೈತರಿಗೆ ವಿತರಕರಿಗೆ ಸ್ಪರ್ಧಿಗಳಿಗೆ ಈಗ ಸರಕಾರಕ್ಕೆ ಇದು ಸಮಸ್ಯೆಯನ್ನು ಸೃಷ್ಟಿಸುತ್ತದೆ. ಆದ್ದರಿಂದ ವಿವಿಧ ಮಾರುಕಟ್ಟೆಗಳಲ್ಲಿ ಬೆಲೆ ವೈವಿದ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ವಿತರಕರು ಹೆಚ್ಚು ಉಪಯೋಗ ಪಡೆಯುವ ಸಾಧ್ಯತೆಗಳು ಹೆಚ್ಚಾಗಿವೆ. ದಲ್ಲಾಳಿಗಳು ಕಾಟ ಹೆಚ್ಚಾಗುವ ಲಕ್ಷಣಗಳು ಈ ನೀತಿಯಲ್ಲಿ ಅಡಗಿದೆ. ಹೀಗೆ ಬೆಲೆ ನಿಗದಿಯನ್ನು ಸರಕಾರ ರೂಪಿಸಿರುವ ಧಾರಣ ಬೆಲೆ ನೀತಿಯನ್ನು ಒಪ್ಪಿಕೊಳ್ಳುವುದು ಸಕಾರಾತ್ಮಕ ಅಂಶ ಎಂಬುದರಲ್ಲಿ ಸಂಶಯವಿಲ್ಲ ರಸಗೊಬ್ಬರಗಳ ಬೆಲೆ ನಿರ್ಣಯಿಸುವ ನಿಯಂತ್ರಿಸುವ ಅಂಶಗಳೆಂದರೆ (Cost benefit ratio) ವೆಚ್ಚ ಮತ್ತು ಫಲಗಳ ಅನುಪಾತ. ಕೃಷಿಯಲ್ಲಿ ವೆಚ್ಚ ಮತ್ತು ಫಲಗಳ ಅನುಪಾತ

ರಸಗೊಬ್ಬರ ಬೆಲೆಗಳ ನಿರ್ಣಾಯಕ ಅನುಕೂಲಕರವಾಗಿರುವುದೆಂದರೆ ಅಧಿಕ ಇಳುವರಿಯ ಸಂಕರಣಗೊಂಡ ತಳಿಗಳನ್ನು ಬೆಳೆಯುವುದರಿಂದ, ಸಂಕರಣ ಗೊಂಡ ತಳಿಗಳು ರಸಗೊಬ್ಬರ ಬಳಕೆಗೆ ಉತ್ತಮ ಪ್ರತಿಕ್ರಿಯೆ ನೀಡುತ್ತವೆ, ಹೆಚ್ಚು ಹೆಚ್ಚು ರಸಗೊಬ್ಬರಗಳನ್ನು ಬಳಸುವುದರಿಂದ ಇಳುವರಿಯು ಸಮೂಹ ಪ್ರಮಾಣಾತ್ಮಕವಾಗಿ ಏರುತ್ತದೆ. ಇಳುವರಿ ಪ್ರಮಾಣಾತ್ಮಕವಾಗಿ ಏರುವುದರಿಂದ ರಸಗೊಬ್ಬರಗಳ ಬೆಲೆಯನ್ನು ಜಾಸ್ತಿ ಮಾಡಿದರೆ, ಅದು ರೈತರಿಗೆ ಹೊರೆಯಾಗಲಾರದು ಎಂಬ ಅಭಿಪ್ರಾಯವಿದೆ, ಯಾಕೆಂದರೆ ರಸಗೊಬ್ಬರಗಳ ಪ್ರಮಾಣಾತ್ಮಕ ಬಳಕೆಯಿಂದ, ಅದು ಮಾರಾಟದ ವೆಚ್ಚವನ್ನು ತಗ್ಗಿಸುತ್ತದೆ. ಮಾರಾಟದ ವೆಚ್ಚದಲ್ಲಿ ಪ್ರಮುಖವಾಗಿ ಬರುವ ಅಂಶಗಳೆಂದರೆ ಸಾರಿಗೆ ವೆಚ್ಚ ಮತ್ತು ವಿತರಣಾ ವೆಚ್ಚ ಈ ವೆಚ್ಚಗಳನ್ನು ತಗ್ಗಿಸಲು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಬೇಕೆಂಬುದೇ ಮಾರುಕಟ್ಟೆ ತಜ್ಞರ ಅಭಿಪ್ರಾಯ ಆದ್ದರಿಂದ ವೆಚ್ಚ ಮತ್ತು ಫಲಗಳ ಅನುಪಾತ ರಸಗೊಬ್ಬರ ಬೆಲೆಗಳ ಮೇಲೆ ಸಕಾರಾತ್ಮಕ ಪರಿಣಾಮವನ್ನುಂಟುಮಾಡುತ್ತದೆ.

ರಸಗೊಬ್ಬರಗಳ ಬೆಲೆಯ ಮೇಲೆ ಪ್ರಭಾವ ಬೀರುವ ಅಂಶ:

ಆದರೆ ವಿಸ್ತೃತ ಬೇಸಾಯದಲ್ಲಿ ಆದಾಯ ಇಳಿಮುಖ ನಿಯಮ (Law of Diminishing returns) ಕೆಲಸ ಮಾಡುವುದರಿಂದ ಮಾರಾಟ ವೆಚ್ಚ ಹೆಚ್ಚಳವಾಗುತ್ತದೆ. ಯಾಕೆಂದರೆ ರಸಗೊಬ್ಬರ ಬಳಕೆ ವಿಸ್ತೃತ ಬೇಸಾಯದಲ್ಲಿ ಕಡಿಮೆ ಇರುತ್ತದೆ. ಅಧಿಕ ಇಳುವರಿಯ ಸಂಕರಣಗೊಳ್ಳುವ ತಳಿಗಳು ಇಲ್ಲಿ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುತ್ತದೆ ಹೀಗೆ ಆಗುವುದರಿಂದ ವೆಚ್ಚ ಮತ್ತು ಫಲಗಳ ಅನುಪಾತ ರಸಗೊಬ್ಬರಗಳ ಮಾರಾಟ ಬೆಲೆಯ ಮೇಲೆ ನಕಾರಾತ್ಮಕ ಅಂಶಗಳನ್ನುಂಟು ಮಾಡುತ್ತದೆ.

ರಸಗೊಬ್ಬರ ಬೆಲೆಗಳ ಮೇಲೆ ಪ್ರಭಾವ ಬೀರುವ ಉಳಿದ ಅಂಶಗಳೆಂದರೆ ರೈತರ ಹಿಡುವಳಿ ಗಾತ್ರ, ನೀರಾವರಿ, ನಿರ್ವಹಣೆಯ ತಂತ್ರಗಳನ್ನು ಅಳವಡಿಸಿಕೊಳ್ಳುವ ಅಂಶ ಮುಂತಾದವುಗಳಾಗಿವೆ ರೈತರ ಹಿಡುವಳಿಗಳ ಗಾತ್ರ ತೆಗೆದುಕೊಂಡರೆ ಈಗಾಗಲೆ ಚರ್ಚಿಸಿರುವ ಅಧ್ಯಾಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಹೆಚ್ಚ ರಸಗೊಬ್ಬರಗಳನ್ನು ಬಳಸುತ್ತಾರೆ ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರು ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸುತ್ತಾರೆ ಎಂಬುದನ್ನು ತಿಳಿದಿದ್ದೇವೆ. ಇದಕ್ಕೆ ಕಾರಣಗಳ್ನನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ದೊಡ್ಡ ಪ್ರಮಾಣದ ರೈತರು ವಿಸ್ತೃತ ಬೇಸಾಯವನ್ನು ಅನುಸರಿಸುವುದರಿಂದ ನಿರ್ವಹಣೆಯ ತಂತ್ರಜ್ಞಾನವನ್ನು ಸರಿಯಾಗಿ ಬಳಸುವುದಿಲ್ಲ ದೊಡ್ಡ ಹಿಡುವಳಿಗಳನ್ನು ನಿರ್ವಹಿಸುವುದೇ ಅತಿ ಪ್ರಯಾಸಕಾರಿಯಾದದ್ದು, ಆದ್ದರಿಂದ ತಂತ್ರಜ್ಞಾನ, ಕಾರ್ಮಿಕರ ಬಳಕೆ, ಸಂಪನ್ಮೂಲ ಗಳ ಬಳಕೆ ಇತ್ಯಾದಿಗಳು ಅಷ್ಟು ವೈಜ್ಞಾನಿಕವಾಗಿ ಸುಸ್ಥಿತಿಯಲ್ಲಿ ಇರುವುದಿಲ್ಲ ಆದ್ದರಿಂದ ದೊಡ್ಡ ಪ್ರಮಾಣದ ರೈತರು ರಸಗೊಬ್ಬರಗಳನ್ನು ಕಡಿಮೆ ಪ್ರಮಾಮದಲ್ಲಿ ಬಳಸುತ್ತಾರೆ, ಆದರೆ ಸಣ್ಣ ಮತ್ತು ಅತಿ ಸಣ್ಣ ರೈತರ ಹಿಡುವಳಿಗಳು ನಿರ್ವಹಣಾತ್ಮಕವಾಗಿ ಅನುಕೂಲಕರವಾಗಿರುತ್ತವೆ ಹಾಗೂ ಸುಲಭವಾಗಿ ನಿರ್ವಹಿಸಬಹುದು. ಆದ್ದರಿಂದ ಸಣ್ಣ ರೈತರು ರಸಗೊಬ್ಬರಗಳನ್ನು ಹೆಚ್ಚು ಬಳಸುತ್ತಾರೆ ಹಾಗೂ ಬಳಸುವುದರಿಂದ ರೈತರಿಗೆ

ಲಾಭವಿದೆ. ಇಂತಹ ಸನ್ನಿವೇಶದಲ್ಲಿ ರಸಗೊಬ್ಬರ ಬೆಲೆ ಏರಿಸಿದರೂ ರೈತರುಗಳಿಸುವ ಲಾಭದ ದೃಷ್ಟಿಯಿಂದ ಬೆಲೆ ಏರಿಕೆ ಅಮೂಲ್ಯವಾಗುತ್ತದೆ. ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳನ್ನು 1991-92 ರಲ್ಲಿ ಅನಿಯಂತ್ರಣ ವ್ಯಾಪ್ತಿಗೆ ತರಲಾಯಿತು. ಇದರಿಂದಾಗಿ ತಕ್ಷಣವೆ ಅನಿಯಂತ್ರಿತ ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳ ಬೆಲೆ ಜಾಸ್ತಿಯಾಯಿತು ಪೊಟ್ಯಾಷ್ ಮತ್ತು ರಂಜಕ ರಸಗೊಬ್ಬರಗಳ ಬಳಕೆಯಲ್ಲಿ ಕಡಿಮೆಯಾಯಿತು ರಂಜಕ ರಸಗೊಬ್ಬರ ಬಳಕೆ 1991-92 ರಲ್ಲಿ 25.62 ಲಕ್ಷ ಟನ್ ಗಳಷ್ಟಿತ್ತು ಇದು 1992-93 ರಷ್ಟರಲ್ಲಿ 23.21 ಲಕ್ಷ ಟನ್ ಗಳಾಯಿತು. 1993-94 ರಲ್ಲಿ 18.74 ಲಕ್ಷ ಟನ್ ಗಳಾಯಿತು. ಅನಿಯಂತ್ರಿತ ರಸಗೊಬ್ಬರದ ನೀತಿಯಿಂದಾಗಿ ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರ ಉತ್ಪಾದಕರು ಸರಕಾರದಿಂದ ಸಹಾಯಧನ ಕೇಳುವ ಹಾಗೆ ಇರಲಿಲ್ಲ, ಸಹಾಯಧನವಿಲ್ಲದೆ ಉತ್ಪಾದಿಸಿದ ರಸಗೊಬ್ಬರಗಳನ್ನು ಉತ್ಪಾದನಾ ವೆಚ್ಚ ಮಾರುಕಟ್ಟೆ ವೆಚ್ಚ ಮುಂತಾದವುಗಳನ್ನೆಲ್ಲ ಸೇರಿಸಿ ಬೆಲೆ ದ್ವಿಗುಣ ಗೊಂಡಿತು. ಹೀಗೆ ದ್ವಿಗುಣಗೊಂಡ ಬೆಲೆಯಿಂದಾಗಿ ರೈತರು ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳನ್ನು ಬಳಸುವುದಕ್ಕೆ ಬದಲಾಗಿ ಸಹಾಯಧನದ ಮೂಲಕ ಲಭ್ಯವಾಗುತ್ತಿದ್ದ ಸಾರಜನಕ ರಸಗೊಬ್ಬರಗಳನ್ನು ಬಳಸಲಾರಂಭಿಸಿದರು. ಬಹಳಷ್ಟು ರಸಗೊಬ್ಬರ ಉತ್ಪಾದಕರಿಗೆ ಪೊಟ್ಯಾಷ್ ಮತ್ತು ರಂಜಕ ರಸಗೊಬ್ಬರಗಳ ಅನಿಯಂತ್ರಣದಿಂದಾಗಿ ತಮಗೆ ಇಷ್ಟ ಬಂದಷ್ಟು ಬೆಲೆಯನ್ನು ನಿಗದಿಗೊಳಿಸಲಾರಂಭಿಸಿದರು. ಇದರಿಂದಾಗಿ ಅನಿಯಂತ್ರಿತ ರಸಗೊಬ್ಬರ ಗಳಬೆಲೆ ತೀವ್ರ ಗತಿ ಯಲ್ಲಿ ಏರಲಾರಂಭಿಸಿತು ಹೀಗೆ ಬೆಲೆ ಏರಿಕೆಯಿಂದಾಗಿ ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳ ಬಳಕೆಯಲ್ಲೂ ಕಡಿಮೆಯಾಯಿತು ಇದರಿಂದಾಗಿ ನಂತರದ ವರ್ಷರಗಳಲ್ಲಿ ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳಿಗೆ ಅಡಾಹಕ್ ಬೆಲೆಯನ್ ಸರಕಾರ ಕೊಡಲು ನಿರ್ದರಿಸಿತು. ಈ ಅಡಹಾಕ್ ಬೆಲೆಯನ್ನು ಸರ್ಕಾರ ಕೊಡಲು ನಿರ್ದರಿಸಿದಾಗ ರಂಜಕ ಹಾಗೂ ರಸಗೊಬ್ಬರ ಗಳ ಬೆಲೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಅಡಹಾಕ್ ಬೆಲೆಯೆಂದರೆ ಅನಿಯಂತ್ರಣದ ವ್ಯಾಪ್ತಿಯಲ್ಲೇ ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳಿಗೆ ರೈತರಿಗೆ ಹೊರೆಯಾಗದಿರಲಿ ಎಂಬುದಕ್ಕೆ ಬದ್ದವಾಗಿ ರಸಗೊಬ್ಬರ ಕಂಪನಿಗಳ ಮಾಲೀಕರಿಗೆ ನೀಡಲಾಯಿತು.

ಅಧ್ಯಾಯ-6

ರಸಗೊಬ್ಬರಗಳ ಸಾಗಾಣಿಕೆ

ರಸಗೊಬ್ಬರಗ ಎಲ್ಲ ಗ್ರಾಮಗಳಿಗೆ ತಲುಪಲು ಸಾಗಾಣಿಕೆ ಮುಖ್ಯ

ಯಾವುದೇ ಉತ್ಪನ್ನ ಉತ್ಪಾದನೆಯಾದರೆ ಅದು ಉತ್ಪಾದನೆಯಾದ ಸ್ಥಳವಾದ ಕಾರ್ಖಾನೆಯಿಂದ, ಗ್ರಾಹಕರ ಪಡೆಯುವ ಚಿಲ್ಲರೆ ಮಾರಾಟದ ಮಳಿಗೆಗಳಲ್ಲಿ ದೊರಕುವಂತಿರಬೇಕು, ಹೀಗೆ ದೊರಕುವಂತಾಗಲು ಮುಖ್ಯ ಮಾರುಕಟ್ಟೆಯ ಕ್ರಿಯಾ ಅಂಶಗಳಿಂದ (Marketing Function) ಲೆ, ಸಾಗಾಣಿಕೆ ಮತ್ತು ದಾಸ್ತಾನು ಈಗ ಸಾಗಾಣಿಕೆಯ ಬಗ್ಗೆ ನೋಡೋಣ, ಸಾಗಾಣಿಕೆಯಾದರೆ ರೈಲ್ವೆ ಸಾಗಾಣಿಕೆ. ಭೂ ಸಾರಿಗೆ ಯಾಗಬಹುದು, ಸಮುದ್ರ ಸಾಗಾಣಿಕೆಯಾಗಬಹುದು, ಅಂತರಿಕ್ಷ ಸಾಗಾಣಿಕೆಯಾಗಬಹುದು. ಹೀಗೆ ಸಾಗಾಣಿಕೆ ವಿವಿಧ ರೀತಿಯಲ್ಲಿ ನಡೆಯುತ್ತದೆ. ರಸಗೊಬ್ಬರಗಳ ಸಾಗಾಣಿಕೆ ಸಾಮಾನ್ಯವಾಗಿ ಭೂ ಸಾರಿಗೆ ಮೂಲಕ ನಡೆಯುತ್ತದೆ. ರಸಗೊಬ್ಬರಗಳ ಮಾರುಕಟ್ಟೆ ವೆಚ್ಚದಲ್ಲಿ ಸಾಗಾಣಿಕೆ ಮತ್ತು ದಾಸ್ತಾನು ವೆಚ್ಚ ಶೇ. 60 ಕ್ಕಿಂತ ಜಾಸ್ತಿ ಇದೆ. ಸಾಗಾಣಿಕೆ ಮತ್ತು ದಾಸ್ತಾನು ವೇಳಾ ಉಪಯೋಗತ್ವ ಮೌಲ್ಯ (Time utility) ಮತ್ತು ಕ್ಷೇತ್ರ ಉಪಯೋಗತ್ವ ಮೌಲ್ಯ (Place utility) ಯನ್ನು ಹೊಂದಿರುತ್ತವೆ. ವೇಳೆ ಉಪಯೋಗತ್ವ ಮೌಲ್ಯವೆಂದರೆ ಸರಿಯಾದ ಸಮಯಕ್ಕೆ ಸರಿಯಾದ ಸಂದರ್ಭದಲ್ಲಿ ಗ್ರಾಹಕರಿಗೆ ಉತ್ಪನ್ನಗಳನ್ನು ದೊರೆಯುವಂತೆ ಮಾಡುವುದೇ ವೇಳೆ ಉಪಯೋಗತ್ವ ಮೌಲ್ಯ, ಉದಾಹರಣೆಗೆ ಯಾವುದೇ ಆಹಾರ ಧಾನ್ಯಗಳನ್ನು ತೆಗೆದುಕೊಳ್ಳಿ, ಗೋಧಿಯನ್ನು ಉದಾಹರಣೆಗೆ ತೆಗೆದುಕೊಂಡರೆ ಗೋದಿ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶದಲ್ಲಿ ಶೇ. 80 ಕ್ಕಿಂತ ಹೆಚ್ಚು ಉತ್ಪಾದನೆಯಾಗುತ್ತದೆ. ಈ ಗೋಧಿ ಕರ್ನಾಟಕದಲ್ಲೊ, ತಮಿಳು ನಾಡಿನಲ್ಲೊ, ಸಮಯಕ್ಕೆ ಸರಿಯಾಗಿ ಸಿಗಬೇಕಾದರೆ ಒಳ್ಳೆ ಸಾಗಾಣಿಕೆ ಜಾಲ ಇರಬೇಕು. ಒಳ್ಳೆ ಸಾಗಾಣಿಕೆ ಜಾಲವಿದ್ದರೆ, ಗೋಧಿಯೊಂದೆ ಅಲ್ಲ ಯಾವುದೇ ಉತ್ಪನ್ನ ನಿರ್ದಿಷ್ಟ ಅವಧಿಯಲ್ಲಿ ಗ್ರಾಹಕರ ಕೈ ಸೇರುತ್ತದೆ. ಇಲ್ಲದಿದ್ದ ಉತ್ಪನ್ನದ ಅಭಾವ ಸೃಷ್ಟಿಯಾಗಿ ತಾತ್ಕಾಲಿಕ ಕ್ಷಾಮ ತಲೆದೋರಬಹುದು. ಆದ್ದರಿಂದ ಸಾಗಾಣಿಕೆ ಅತ್ಯಂತ ಮುಖ್ಯವಾದ ಸಾಧನ ಎಂಬುದರಲ್ಲ ಅತಿಶಯೋಕ್ತಿಯೇನಲ್ಲ, ಸಾಗಾಣಿಕೆ ಬಹುಪಾಲು ಆಮದು ಉತ್ಪನ್ನಗಳನ್ನು ಬಿಟ್ಟು ಉಳಿದ ಉತ್ಪನ್ನಗಳು ಭೂ ಸಾರಿಗೆ ಮೂಲಕವೇ ನಡೆಯುತ್ತವೆ, ಹಾಗೆಯೇ ರಸಗೊಬ್ಬರಗಳು ರಾಷ್ಟ್ರದ ಒಳಗೆ ಭೂ ಸಾರಗೆ ಮೂಲಕವೇ ನಡೆಯುತ್ತದೆ. ಆದ್ದರಿಂದ ರಸಗೊಬ್ಬರಗಳ ಸಾಗಣಿಕೆ ನಾವು ತಿಳಿದುಕೊಂಡಂತೆ ಸರಳವಲ್ಲ. 3.2 ಕೋಟಿ ಟನ್ ರಸಗೊಬ್ಬರಗಳನ್ನು 2,94,964 ಮಾರಾಟ ಮಳಿಗೆಗಳಿಗೆ ಸಾಗಿಸುವುದು ಅತ್ಯಂತ ಪ್ರಯಾಸಕಾರಿಯಾದ ಅಂಶ, ರಾಷ್ಟ್ರದ ವಿವಿದೆಡೆಗಳಲ್ಲಿ ಉತ್ಪಾದನೆಯಾದ ರಸಗೊಬ್ಬರಗಳು ರಾಷ್ಟ್ರದ ಗ್ರಾಮಾಂತರ ಪ್ರದೇಶದ ಮೂಲೆ ಮೂಲೆಗಳಲ್ಲೂ ಸಾಗಿಸಬೇಕಾಗಿದೆ. ಹೀಗೆ ಗ್ರಾಮಾಂತರ ಪ್ರದೇಶದ ಮೂಲೆ ಮೂಲೆಗೂ ಸಾಗಿಸಬೇಕಾದರೆ

ಇದು ಅತ್ಯಂತ ಕ್ಲಿಷ್ಟಕವಾದದ್ದಂತದ್ದು, ಯಾಕೆಂದರೆ ಇದು ಅತಿ ಅವಶ್ಯ ಉತ್ಪನ್ನಗಳ ಮಸೂದೆಯ ವ್ಯಾಪ್ತಿಗೆ ಬರುತ್ತದೆ. (essential commodity act) ಇಲ್ಲ ಸಾಗಾಣಿಕೆ ಅಂದರೆ ರಸಗೊಬ್ಬರಗಳ ಸಾಗಾಣಿಕೆ ಅತಿ ಅವಶ್ಯ ಉತ್ಪನ್ನ ಮಸೂದೆಯ ಪ್ರಕಾರವೇ ಸಾಗಾಣಿಕೆ ಮಾಡಲ್ಪಡುತ್ತದೆ. ಇಲ್ಲಿ ರಸಗೊಬ್ಬರಗಳ ಸಾಗಾಣಿಕೆ ಮಾಡುವುದು ಅತಿ ಪ್ರಯಾಸಕಾರಿ ಯಾದದ್ದು ಎಂದು ಈಗಾಗಲೆ ಹೇಳಿರುವೆ, ಸಾಗಾಣಿಕೆ ಸಮಯದಲ್ಲಿ ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಬೇಡಿಕೆ ಇದೆ. ಎಂಬ ಅಂಶದ ಮೇಲೆ ಸಾಗಾಣಿಕೆ ಮಾಡಬೇಕಾಗುತ್ತದೆ, ಇದನ್ನು ಅತ್ಯಂತ ಎಚ್ಚರಿಕೆಯಿಂದ ಗುಣಮಟ್ಟ ಕಾಯ್ದಿಟ್ಟುಕೊಂಡೆ ಸಾಗಾಣಿಕೆ ಮಾಡಬೇಕಾಗುತ್ತದೆ. ಹೀಗೆ ಗುಣಮಟ್ಟ ಕಾಯ್ದಿಟ್ಟುಕೊಳ್ಳದೆ ಸಾಗಾಣಿಕೆಯಲ್ಲೇನಾದರೂ ವ್ಯತ್ಯಾಸವಾದರೆ ಸಂಬಂಧಪಟ್ಟ ವ್ಯಕ್ತಿಗಳು ಶಿಕ್ಷಾರ್ಹರು, ಇದರ ಜೊತೆಗೆ ರಸಗೊಬ್ಬರಗಳ ಸರಿಯಾದ ವೇಳೆಗೆ , ಎಲ್ಲ ಪ್ರದೇಶಗಳನ್ನು ತಲುಪಬೇಕು. ರಸಗೊಬ್ಬರಗಳು ವರ್ಷದ ಯಾವದೆ ಸಮಯದಲ್ಲಿ ಕೊಳ್ಳುವುದಿಲ್ಲ ನಿರ್ದಿಷ್ಟ ಋತುಮಾನದಲ್ಲಿ ರಸಗೊಬ್ಬರಗಳನ್ನು ಕೊಳ್ಳುತ್ತಾರಷ್ಟೆ. ಹೀಗೆ ನಿರ್ದಿಷ್ಟ ಋತುಮಾನದಲ್ಲಿ ರಸಗೊಬ್ಬರಗಳನ್ನು ಕೊಳ್ಳುವುದರಿಂದ ರಸಗೊಬ್ಬರ ಇಂತಿಂತಹ ಸಮಯದಲ್ಲೆ ಇಷ್ಟಿಷ್ಟು ಎಂದು ರಸಗೊಬ್ಬರಗಳನ್ನು ಕೊಳ್ಳುತ್ತಾರೆ. ರಸಗೊಬ್ಬರಗಳು ಹೆಚ್ಚ ಭಾರವಾದ (Bulky) ಉತ್ಪನ್ನ ಆದ್ದರಿಂದ, ಇದನ್ನು ಸಾಗಾಣಿಕೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. 1984 - 85 ರಲ್ಲಿ 18.5 ದಶಲಕ್ಷ ಟನ್ ಗಳನ್ನು ಸಾಗಾಣಿಕೆ ಮಾಡಬೇಕಾಗಿತ್ತು. ಆದರೆ 2000-01 ರ ಅವಧಿಯಲ್ಲಿ 3.2 ಕೋಟಿ ಟನ್ ರಸಗೊಬ್ಬರಗಳನ್ನು 2 84 964 ಮಾರಾಟ ಮಳಿಗೆಗಳಿಗೆ ಸಾಗಿಸಬೇಕಾಗಿದೆ. ಇದು ಕ್ಲಿಷ್ಟಕರವಾದದ್ದು 6 ಲಕ್ಷ ಗ್ರಾಮಗಳು, 1.5 ದಶಲಕ್ಷ ಮೈಲುಗಳಲ್ಲಿ ಹರಡಿಕೊಂಡಿವೆ, ಹೀಗೆ ಹರಡಿಕೊಂಡಿರುವ ಗ್ರಾಮಗಳಿಗೆ ರಸಗೊಬ್ಬರ ತಲುಪಲೇಬೇಕು, ನೀರಾವರಿ ಇರಲಿ ಒಣಬೇಸಾಯವಿರಲಿ, ರೈತರು ರಸಗೊಬ್ಬರಗಳು ಬಳಸುವುದು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ ಹೀಗೆ ವರ್ಷದಿಂದ ವರ್ಷಕ್ಕೆ ರಸಗೊಬ್ಬರಗಳ ಬಳಕೆ ಹೆಚ್ಚುತ್ತಿರುವುದರಿಂದ ರಸಗೊಬ್ಬರಗಳ ಪೂರೈಕೆಯು ಸಹ ಹೆಚ್ಚುತ್ತಿದೆ. ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪಿಸಲಾಗುತ್ತದೆ. ಈ ಕಾರ್ಖಾನೆಗಳಲ್ಲಿ ಹೆಚ್ಚು ಬಂಡವಾಳವನ್ನು ಹೂಡಲಾಗುತ್ತದೆ. ಹೀಗೆ ಬಂಡವಾಳವನ್ನು ಹೂಡಿ, ಹೆಚ್ಚು ರಸಗೊಬ್ಬರಗಳನ್ನು ಉತ್ಪಾದಿಸಲಾಗುತ್ತದೆ. ಆದ್ದರಿಂದಲೆ ಕಳೆದ ಎರಡು ದಶಕಗಳಲ್ಲಿ ರಸಗೊಬ್ಬರಗಳ ಉತ್ಪಾದನೆ ಹತ್ತು ಪಟ್ಟಷ್ಟು ಹೆಚ್ಚಾಗಿರುವುದು ಹೀಗೆ ರಸಗೊಬ್ಬರಗಳ ಉತ್ಪಾದನೆ ಹೆಚ್ಚಾಗುವುದರಿಂದ ಇವುಗಳನ್ನು ತಕ್ಷಣ ಗ್ರಾಹಕರ ಕೇಂದ್ರಗಳಿಗೆ ತಲುಪಿಸಬೇಕಾಗಿರುವ ಜವಾಬ್ದಾರಿ ಕಾರ್ಖಾನೆಯ ಮಾಲೀಕರ ಮೇಲೆ ಬಿದ್ದಿದೆ. ಆದ್ದರಿಂದ ಕಾರ್ಖಾನೆಯ ಮಾಲೀಕರು ರಸಗೊಬ್ಬರಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವುದು ಇವರ ಜವಾಬ್ದಾರಿಯನ್ನು ಹೆಚ್ಚಿಸಿದೆ, ಸಾಗಾಣಿಕೆ ಮೊದಲಿನಂತೆ ಉಳಿದಿಲ್ಲ, ಇದು ಆಧುನಿಕ ಸ್ವರೂಪವನ್ನು ಪಡೆದಿದೆ ಸಾಗಾಣಿಕೆಯಲ್ಲಿ ಅನೇಕ ಸಂಶೋಧನೆಗಳು ನಡೆಯುತ್ತವೆ ಜೊತೆಗೆ ಸುಧಾರಣೆಗಳು ನಡೆಯುತ್ತವೆ.

ರಸಗೊಬ್ಬರಗಳಿಗೆ ವರ್ಷಪೂರ್ತಿ ಬೇಡಿಕೆ ಇರುವುದಿಲ್ಲ

ರಸಗೊಬ್ಬರಗಳ ಬಳಕೆ ಋತುಮಾನ ಅವಲಂಬಿತವಾದದ್ದು ಬೆಳೆನಾಟಿ ಮಾಡಿದ ನಂತರ ಹಾಗೂ

ಮಧ್ಯಂತರ ಬೇಸಾಯದ ವೇಳೆಯಲ್ಲಿ ರಸಗೊಬ್ಬರಗಳ ಬಳಕೆಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಅದರಲ್ಲೂ ರಸಗೊಬ್ಬರಗಳ ಬಳಕೆ ಮುಂಗಾರು ಮಳೆಯ ಮೇಲೆ ಅವಲಂಬಿತವಾಗಿರುತ್ತದೆ. ಮುಂಗಾರುವಿನಲ್ಲಿ ಶೇ. 40 ರಷ್ಟು ರಸಗೊಬ್ಬರಗಳು ಬಳಸಿದರೆ ಹಿಂಗಾರಿನಲ್ಲಿ ಶೇ. 60 ರಷ್ಟು ರಸಗೊಬ್ಬರಗಳನ್ನು ಬಳಸುತ್ತಾರೆ. ರಸಗೊಬ್ಬರಗಳು ಮುಂಗಾರಿನಲ್ಲಿ ಏಕದಳ ಆಹಾರ ಧಾನ್ಯಗಳಿಗೆ ವಿಪುಲವಾಗಿ ಬೆಳೆದರೆ, ಹಿಂಗಾರಿನಲ್ಲಿ ದ್ವಿದಳ ದಾನ್ಯಗಳು ಬೆಳೆಯುತ್ತಾರೆ, ಆದ್ದರಿಂದ ಹೆಚ್ಚಾಗಿ ರಸಗೊಬ್ಬರಗಳನ್ನು ಉಪಯೋಗಿಸುತ್ತಾರೆ, ರಸಗೊಬ್ಬರಗಳನ್ನು ಇಡೀ ವರ್ಷಪೂರ್ತಿ ಉತ್ಪಾದಿಸಲಾಗುತ್ತದೆ. ರಸಗೊಬ್ಬರಗಳ ಉತ್ಪಾದನೆ ಋತುಮಾನ ಅವಲಂಬಿತವಾಗೇನು ಇಲ್ಲ. ಇದು ನಿರಂತರವಾಗಿ ವರ್ಷ ಪೂರ್ತಿ ಉತ್ಪಾದಿಸುವುದರಿಂದ ಈಗಾಗಲೆ ತಿಳಿದಂತೆ ವರ್ಷ ಪೂರ್ತಿ ಬೇಡಿಕೆ ಇರುವುದಿಲ್ಲ, ಪೂರೈಕೆ ಮಾತ್ರ ವರ್ಷ ಪೂರ್ತಿ ಇರುತ್ತದೆ. ಆದ್ದರಿಂದ ಸಾಗಾಣಿಕೆ ವ್ಯವಸ್ಥೆಯ ಮೇಲೆ ಹೆಚ್ಚು ಒತ್ತಡವಿದೆ. ಸಾಗಾಣಿಕೆ ಹೆಚ್ಚು ಒತ್ತಡವೆಂದರೆ, ತ್ವರಿತಗತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ತಲುಪಬೇಕು. ನಿಯಮಿತ ಅವಧಿಯಲ್ಲಿ ತಲುಪಬೇಕು, ಋತುಮಾನದ ಕೆಲವು ಸಂದರ್ಭದಲ್ಲಿ ರಸಗೊಬ್ಬರಗಳಿಗೆ ವಿಪರೀತ ಬೇಡಿಕೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಬೇಡಿಕೆಯನ್ನು ಪೂರೈಸುವುದು ಅನಿವಾರ್ಯ. ಈ ಸಂದರ್ಭದಲ್ಲಿ ರಸಗೊಬ್ಬರಗಳು ಪೂರೈಸುವುದು ತಡವಾದರೆ ಅಥವಾ ಬೇಡಿಕೆಗನುಗುಣವಾಗಿ ಪೂರೈಸಿದ್ದಾರೆ. ಉತ್ಪಾದಕತೆಯ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡುತ್ತದೆ ಆದ್ದರಿಂದ ಇಂತಹ ಸಂಕಷ್ಟ ಸಮಯಗಳಲ್ಲಿ ರಸಗೊಬ್ಬರಗಳನ್ನು ಬೇಡಿಕೆಗನುಗುಣವಾಗಿ ಪೂರೈಸುವುದು ಒಳ್ಳೆ ಸಾಗಾಣಿಕೆಯ ಲಕ್ಷಣವೆಂದರೆ ತಪ್ಪಾಗಲಾರದು. ಆದ್ದರಿಂದ ಸಾಗಾಣಿಕೆಯ ವೆಚ್ಚ ಸಹ ಇಂತಹ ಸಂದರ್ಭದಲ್ಲಿ ಹೆಚ್ಚಾಗಬಹುದು. ಆದರೆ ಸಾಗಾಣಿಕೆ ವೆಚ್ಚವನ್ನು ರೈತರ ಮೇಲೆ ಹಾಕುವ ಪ್ರಮೇಯವಿಲ್ಲ ಯಾಕೆಂದರೆ ಈಗಾಗಲೇ ನಾವು ತಿಳಿದಿರುವಂತೆ ಸಹಾಯಧನವನ್ನು ಸಾಗಾಣಿಕೆ ಹಾಗೂ ವಿತರಣ ಕ್ರಿಯೆಗೂ ನೀಡುವುದರಿಂದ ಕಾರ್ಖಾನೆಯ ಮಾಲೀಕರಿಗೆ ಹೊರೆಯಾಗುವುದಿಲ್ಲ ಆದರೆ ಇಲ್ಲಿ ತಿಳಿಯಬೇಕಾಗಿರುವುದೇನೆಂದರೆ ಕಾರ್ಖಾನೆಯ ಮಾಲೀಕರು ನಿರಂತರವಾಗಿ ವರ್ಷ ಪೂರ್ತಿ ಉತ್ಪಾದಿಸುವುದರಿಂದ ಸಾಗಾಣಿಕೆಯನ್ನು ಕರಾರುವಕ್ಕಾಗಿ ರೈತರ ಅವಶ್ಯಕತೆಗನುಗುಣವಾಗಿ ತಲುಪಿಸಬಹುದು. ಆದ್ದರಿಂದ ನಾವು ಗಮನಿಸಬೇಕಾಗಿರುವುದೇನೆಂದರೆ, ಕಾರ್ಖಾನೆ ಮಾಲೀಕರು ಸರಿಯಾದ ಸಾಗಾಣಿಕೆ ಜಾಲವಿದ್ದರೆ, ರೈತರ ಅವಶ್ಯಕತೆಗನುಗುಣವಾಗಿ ರಸಗೊಬ್ಬರಗಳನ್ನು ಸರಬರಾಜು ಮಾಡಬಹುದು, ಆದರೆ ಕೆಲವು ಕಾರ್ಖಾನೆ ಮಾಲೀಕರು ಸ್ವಂತ ಸಾಗಾಣಿಕೆ ಜಾಲವಿಲ್ಲದೆ, ಸರಬರಾಜು ಮಾಡುವ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯುತ್ತಾರೆ. ಇಂತಹ ಸ್ಥಿತಿ ಇರಬೇಕಾದರೆ ಇವರು ಸಾಗಾಣಿಕೆ ಜಾಲ ನ್ಯೂನತೆಯಿಂದ ಕೂಡಿರುತ್ತದೆ. ಇವು ದೂರದ ಪ್ರದೇಶಗಳಿಗೆ ಹೋಗುವುದೇ ಇಲ್ಲ, ದೂರದ ಪ್ರದೇಶಗಳಿಗೆ ರಸಗೊಬ್ಬರ ಸರಬರಾಜು ಮಾಡದಿದ್ದರೆ ರೈತರಿಗೆ ರಸಗೊಬ್ಬರಗಳು ತಲುಪುವುದು ಕಷ್ಟಕರವಾಗುತ್ತದೆ ಹೀಗೆ ಕಷ್ಟಕರವಾದರೆ ರೈತರು ರಸಗೊಬ್ಬರಗಳ ಬಳಕೆಯಿಂದ ವಂಚಿತರಾಗಬೇಕಾಗುತ್ತದೆ.

ಮತ್ತು ಭೂಮಿಯ ಉತ್ಪಾದಕತೆ ಇಳಿಮುಖದ ಹಾದಿಯಲ್ಲಿರುತ್ತದೆ. ಈ ಎಲ್ಲಾ ನಕಾರಾತ್ಮಕ ಪರಿಣಾಮಗಳಿಗೆ ಕಾರ್ಖಾನೆ ಮಾಲೀಕರು ಹೊಂದಿರುವ ನ್ಯೂನತೆಗೆ ಸಾಗಾಣಿಕೆಯೇ ಕಾರಣ ಎಂದರೆ ತಪ್ಪಾಗಲಾರದು, ನ್ಯೂನತಾ ಸಾಗಾಣಿಕೆಯಿಂದಾಗಿ ಕಾರ್ಖಾನೆ ಮಾಲೀಕರಿಗೆ ದಾಸ್ತಾನು ವೆಚ್ಚ ಹೆಚ್ಚಾಗಬಹುದು ಆದರೆ ಸರಕಾರ ರಸಗೊಬ್ಬರಗಳಿಗೆ ಧಾರಣಾ ಬೆಲೆಗಳನ್ನು ನೀಡುವುದರಿಂದ ಕಾರ್ಖಾನೆ ಮಾಲೀಕರು ರಸಗೊಬ್ಬರಗಳ ಸಾಗಾಣಿಕೆಯ ಜಾಲವನ್ನು ನಿರ್ಲಕ್ಷ್ಯಿಸಬಹುದು, ಹೀಗೆ ನಿರ್ಲಕ್ಷ್ಯಿಸುವುದನ್ನು ಸರಕಾರವೇ ಉತ್ತೇಜಿಸಿದಂತೆ ಆಗುತ್ತದೆ. ರಸಗೊಬ್ಬರ ಕಾರ್ಖಾನೆಯ ಮಾಲೀಕರು ಧಾರಣ ಬೆಲೆಯನ್ನು ಪಡೆಯುವುದರಿಂದ ಜವಾಬ್ದಾರಿ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ ಹೀಗೆ ಜವಾಬ್ದಾರಿ ತೆಗೆದುಕೊಳ್ಳದಿದ್ದರೆ ತಾವು ಉತ್ಪಾದಿಸಿದ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೃಷ್ಟಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ ರಸಗೊಬ್ಬರಗಳಿಗೆ ಮಾರುಕಟ್ಟೆ ಸೃಷ್ಟಿಯಾಗುವುದು ಭೂಮಿಯನ್ನು ಬೇಸಾಯಕ್ಕೆ ಅಳವಡಿಸುವ ಪ್ರಕ್ರಿಯೆ ಹೆಚ್ಚಾಗುವುದರಿಂದ, ಅಧಿಕ ಇಳುವರಿ ತಳಿಗಳನ್ನು ಅಳವಡಿಸಿಕೊಳ್ಳುವುದು, ನೀರಾವರಿಯನ್ನು ಅಳವಡಿಸಿಕೊಳ್ಳುವುದು, ಮುಂತಾದವುಗಳನ್ನು ರಸಗೊಬ್ಬರ ಬೇಡಿಕೆಯನ್ನು ಹೆಚ್ಚಿಸಬಹುದು, ಆದರೆ ಮಾರುಕಟ್ಟೆಯನ್ನು ಸೃಷ್ಟಿಸಲಾಗುವುದು ಏಕೆಂದರೆ ಮಾರುಕಟ್ಟೆ ಸೃಷ್ಟಿಯಾಗಬೇಕಾದರೆ ಸಾಗಾಣಿಕೆ ಜಾಲ ಮುಖ್ಯವಾಗುತ್ತದೆ. ಸಾಗಾಣಿಕೆ ಜಾಲ ಕಾರ್ಖಾನೆಯ ಸ್ವಂತವಾಗಿರಬಹುದು ಖಾಸಗಿಯವರಿಂದ ಗುತ್ತಿಗೆ ಪಡೆಯಬಹುದು, ಅಥವಾ ಖ್ಯಾತ ಸಾಗಾಣಿಕೆ ಕಂಪನಿಗಳಿಗೆ ಶಾಶ್ವತವಾಗಿ ಸಾಗಾಣಿಕೆಯ ಜವಾಬ್ದಾರಿಯನ್ನು ವಹಿಸಬಹುದು ಆದರೆ ಇಲ್ಲಿ ನಮಗೆ ಕಂಡು ಬರುವುದೇನೆಂದರೆ ಕಾರ್ಖಾನೆ ಮಾಲೀಕರು ಮತ್ತುಸಾಗಾಣಿಕೆದಾರರ ನಡುವೆ ಉತ್ತಮ ಬಾಂದವ್ಯವನ್ನು ಇರಬೇಕು. ಸಾಗಾಣಿಕೆದಾರರು ಕಾರ್ಖಾನೆಯ ಮಾಲೀಕರ ಅನಿಸಿಕೆಗನುಗುಣವಾಗಿ ಸ್ಪಂದಿಸದಿದ್ದರೆ ಸಾಗಾಣಿಕೆಯಲ್ಲಿ ಏರು ಪೇರಾಗಬಹುದು, ಸಾಗಾಣಿಕೆ ವೆಚ್ಚ ಜಾಸ್ತಿಯಾಗಬಹುದು ಹೀಗೆ ಹಲವಾರು ಸಂಕಷ್ಟಗಳು ಸಾಗಾಣಿಕೆಯಲ್ಲಿ ಎದ್ದು ಕಾಣುತ್ತದೆ. ಆದರೆ ರಸಗೊಬ್ಬರಗಳ ಬೇಡಿಕೆ ಋತುಮಾನ ಅನ್ವಯ ಆಗರುವುದರಿಂದ ಸ್ವಂತ ಸಾಗಾಣಿಕೆ ಜಾಲವನ್ನು ಇಟ್ಟುಕೊಂಡರೆ ಇದು ಅಷ್ಟು ಲಾಭದಾಯಕವಲ್ಲ ಎಂಬ ಅಭಿಪ್ರಾಯ ಕಾರ್ಖಾನೆ ಮಾಲೀಕರಲ್ಲಿದೆ. ಆದರೆ ಇಡೀ ಸಾಗಾಣಿಕೆ ವ್ಯವಸ್ಥೆಯನ್ನು ರಸಗೊಬ್ಬರಗಳ ಸಾಗಾಣಿಕೆಯನ್ನು ಹೊರತುಪಡಿಸಿ ಬೇರೆ ಉತ್ಪನ್ನಗಳ ಸಾಗಾಣಿಕೆಗೆ ಬಳಸಿಕೊಳ್ಳಬಹುದೆಂಬ ಅಭಿಪ್ರಾಯ ಹಲವರಲ್ಲಿದೆ. ಆದರೆ ಇಂಧನ ಸಾಗಾಣಿಕೆ ಯಂತ್ರೋಪಕರಣಗಳ ಸಾಗಾಣಿಕೆ ಮುಂತಾದವುಗಳಿಗೆ ಇದನ್ನು ಬಳಸಿಕೊಳ್ಳಬಹುದು, ಆದರೆ ಬಹಳಷ್ಟು ಕಾರ್ಖಾನೆ ಮಾಲೀಕರು ಸಾಗಾಣಿಕೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಅಂಶ ವ್ಯಕ್ತವಾಗುತ್ತದೆ. ಆದರೂ ಸಾಗಾಣಿಕೆ ಜಾಲದ ಬಗ್ಗೆ ಕಾರ್ಖಾನೆ ಮಾಲೀಕರು ಹೆಚ್ಚು ಒತ್ತು ಕೊಡಬೇಕಾಗಿದೆ.

ಬಂದರುಗಳ ಪಕ್ಕದಲ್ಲಿ ರಸಗೊಬ್ಬರ ಕಾರ್ಖಾನೆಗಳು:

ಬಹಳಷ್ಟು ರಸಗೊಬ್ಬರ ಕಾರ್ಖಾನೆಗಳು ಬಳಕೆದಾರರ ಸ್ಥಳಗಳಲ್ಲಿ ಸ್ಥಾಪಿಸಲ್ಪಡುವುದಕ್ಕಿಂತ,

ಬಂದರುಗಳ ಪಕ್ಕದಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪಿತಗೊಂಡಿದೆ. ರಸಗೊಬ್ಬರ ಕಾರ್ಖಾನೆಗಳು ರಾಷ್ಟ್ರಾದ್ಯಂತ ಎಲ್ಲ ಪ್ರದೇಶಗಳಲ್ಲಿ ಸಮಪ್ರಮಾಣದಲ್ಲಿರುವುದಕ್ಕಿಂತ ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿವೆ. ಇವು ಕರಾವಳಿ ಪ್ರದೇಶದ ಬಂದರುಗಳ ಹತ್ತಿರ ಇವೆ. ಏಕೆಂದರೆ ಹಡಗುಗಳಿಂದ ಬರುವ ಕಚ್ಚಾಸಾಮಗ್ರಿಗಳು ಬಹಳ ಸುಲಭವಾಗಿ ಕಾರ್ಖಾನೆಗಳಿಗೆ ತಲುಪುವುದರಿಂದ ಇವು ಸಾಗಾಣಿಕೆ ಅನುಕೂಲಕರ ವಲಯಗಳಲ್ಲಿ ಸ್ಥಾಪಿತಗೊಂಡಿವೆ. ಮಧ್ಯ ಮತ್ತು ಉತ್ತರ ವಲಯಗಳಲ್ಲಿ ರಸಗೊಬ್ಬಗಳನ್ನು ಈ ವಲಯಗಳಿಗೆ ಸಾಗಿಸಲು ಪ್ರಯಾಸಕಾರಿಯಾದದ್ದು ಧಾರಣ ಬೆಲೆ ನೀತಿಯಿಂದಾಗಿ ಕಚ್ಚಾ ಸಾಮಗ್ರಿಗಳು ಬಂದರುಗಳ ಮೂಲಕ ಸುಲಭವಾಗಿ ಬರುವುದರಿಂದ ಅದಕ್ಕೆ ಹತ್ತಿರವಾಗಿ ಬಹಳಷ್ಟು ಕಾರ್ಖನೆಗಳು ಸ್ಥಾಪಿಸಲ್ಪಟ್ಟಿವೆ. ಆದರೆ ರಸಗೊಬ್ಬರ ಸಾಗಾಣಿಕೆಯನ್ನು ಮಾತ್ರ ಅಷ್ಟಾಗಿ ಗಂಭೀರವಾಗಿ ಇವು ಪರಿಗಣಿಸಿಲ್ಲ. ಹೀಗೆ ರಸಗೊಬ್ಬರಗಳು ಕಾರ್ಖಾನೆಗಳು ರಾಷ್ಟ್ರಾದ್ಯಂತ ಸಮನಾಗಿ ಹಂಚಿಕೆ ಯಾಗದಿರುವುದು ಎದ್ದು ಕಾಣುತ್ತದೆ.

ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ರಸಗೊಬ್ಬರ ಕಾರ್ಖಾನೆಗಳ ಉತ್ಪಾದನೆ ಸಾಮರ್ಥ್ಯ ವಿಪುಲವಾಗಿರುತ್ತದೆ. ಕೆಲವು ಕಾರ್ಖಾನೆಗಳು 15 ರಿಂದ 20 ಲಕ್ಷ ಟನ್ ಗಳಷ್ಟು ರಸಗೊಬ್ಬರ ಉತ್ಪಾದನೆ ಮಾಡುತ್ತವೆ. ಇದು ಕೇವಲ ಕೆಲವೆ ಸ್ಥಳಗಳಲ್ಲಿ ಕೇಂದ್ರೀಕರಣಗೊಂಡಿರುತ್ತೆ. ತಂತ್ರಜ್ಞಾನ ಆರ್ಥಿಕ (Techno economic) ಸ್ಥಿತಿಯಿಂದಾಗಿ ರಸಗೊಬ್ಬರ ಕಾರ್ಖಾನೆಗಳು ಕೆಲವೇ ಪ್ರದೇಶಗಳಲ್ಲಿ ಕೇಂದ್ರೀಕರಣಗೊಂಡು, ರಾಷ್ಟ್ರದ ಮೂಲೆ ಮೂಲೆಗಳಿಗೆ ಸಾಗಾಣಿಕೆ ಮಾಡುವುದು ಕಷ್ಟಕರ ಅನುಭಗಳಾಗುತವೆ. ಈಗಾಗಲೆ ತಿಳಿದಿರುವಂತೆ ಬಂದರುಗಳಿಗೆ ಹತ್ತಿರವಾಗಿ ಸ್ಥಾಪಿಸಲ್ಪಡುವ ಕಾರ್ಖಾನೆಗಳು ಇರುತ್ತವೆ. ತಾಂತ್ರಿಕವಾಗಿ ಸಂಕೀರ್ಣವಾಗಿರುತ್ತವೆ. ಅತ್ಯಂತ ಆಧುನಿಕ ತಂತ್ರಜ್ಞಾನದ ಯಂತ್ರೋಪಕರಣಗಳು ಈ ಯಂತ್ರೋಪಕರಣಗಳ ನಿರ್ವಹಣೆ ದುರಸ್ತಿ ಇವೆಲ್ಲ ಅದೇ ಸ್ಥಳಗಳಲ್ಲಿ ಕೇಂದ್ರೀಕೃತಗೊಂಡಿರುತ್ತವೆ. ಯಾಕೆಂದರೆ ರಸಗೊಬ್ಬರ ಗಳ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕೆಂದರೆ ಅತ್ಯಂತ ಆಧುನಿಕ ತಂತ್ರಜ್ಞಾನ ಅಳವಡಿಸಿರುವ ಅವಶ್ಯಕತೆ ಇದೆ. ಆದರೆ ಸಾಗಾಣಿಕೆಯಲ್ಲಿ ಅಂತಹ ತಂತ್ರಜ್ಞಾನ ಅಳವಡಿಸಿಬೇಕಾದರೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಬೇಕಾಗಿರುತ್ತದೆ. ದೊಡ್ಡ ಪ್ರಮಾಣದಲ್ಲಿ ಉತ್ಪಾದನ ತಂತ್ರಜ್ಞಾನ ಹಾಗೂ ಸಾಗಾಣಿಕೆ ತಂತ್ರಜ್ಞಾನವನ್ನು ಅತ್ಯಂತ ಆಸ್ಥೆಯಿಂದ ಅಳವಡಿಸಬೇಕಾಗುತ್ತದೆ. ಈಗ ನಡೆದಿರುವುದೇನೆಂದರೆ ಉತ್ಪಾದನ ತಂತ್ರಜ್ಞಾನದಲ್ಲಿ ಕ್ರಾಂತಿಕಾರಕ ಬೆಳವಣಿಗೆಯಾಗಿದೆ. ಆದರೆ ಸಾಗಾಣಿಕೆ ತಂತ್ರಜ್ಞಾನದಲ್ಲಿ ಅಂತಹ ಬೆಳವಣಿಗೆಗಳು ಆಗಿಲ್ಲ ದಿರುವುದು ರಸಗೊಬ್ಬರಗಳ ಮಾರುಕಟ್ಟೆಗೆ ಬೀಳುವ ದೊಡ್ಡ ಹೊಡೆತ, ಆದರೆ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ಪರಿಣಿತರ ತಂಡದ ಅಭಿಪ್ರಾಯ ಪಡೆಯಬೇಕು. ಪರಿಣಿತರ ತಂಡ ನೀಡುವ ಸಲಹೆ ಅಭಿಪ್ರಾಯಗಳು ಕಾರ್ಖಾನೆಯ ಮಾಲೀಕರಿಗೆ ರುಚಿಸದೇಹೋಗಬಹುದು, ಅವರು ಪರಿಣಿತರ ಸಲಹೆಗಳನ್ನು ಅಳವಡಿಸಿಕೊಳ್ಳದೇ ಹೋಗಬಹುದು, ಉದಾಹರಣೆಗೆ ಕಾರ್ಖಾನೆಗಳಲ್ಲಿ

ಉತ್ಪಾದನೆಯಾನದ ರಸಗೊಬ್ಬರ ಉತ್ಪನ್ನಗಳು ಆದಷ್ಟು ಬೇಗ ರೈತರಿಗೆ ತಲುಪುವಂತೆ ನೋಡಿಕೊಳ್ಳಬೇಕೆಂದು ಪರಿಣಿತರು ಸಲಹೆ ನೀಡಬಹುದು. ಈ ಸಲಹೆಯನ್ನು ಕಾರ್ಖಾನೆ ಮಾಲೀಕರು ಅನುಸರಿಸಿದರೆ ಅವರಿಗೆ ಹೆಚ್ಚಿನ ಹಣದ ಹೊರೆ ಬೀಳಬಹುದು. ಯಾರೇ ಆಗಲಿ ಸದ್ಯದ ಆದಾಯವನ್ನು ನೋಡುತ್ತಾರೆ ಹೊರತು ದೀರ್ಘಕಾಲಿಕ ಆದಾಯವನ್ನು ನೋಡುವುದಿಲ್ಲ, ದೀರ್ಘಕಾಲಿಕ ಆದಾಯವು ನಿರಂತರವಾಗಿ ಹರಿಯಬೇಕಾದರೆ ಅಲ್ಪಾವಧಿ ಆದಾಯ ಹೆಚ್ಚಿಸುವುದನ್ನು ತ್ಯಾಗ ಮಾಡಬೇಕಾಗುತ್ತದೆ. ಆದರೆ ಯಾರೆ ಉತ್ಪಾದಕನಾಗಲಿ ಅಲ್ಪಾವಧಿ ಅಥವಾ ತತ್ ಕ್ಷಣ ಆದಾಯ ಹೆಚ್ಚಾಗಿರಬೇಕೆಂದು ಇಚ್ಚಿಸುತ್ತಾರೆ. ಆದ್ದರಿಂದ ದೀರ್ಘಕಾಲಿಕ ಆದಾಯ ತರಬಲ್ಲ ತಂತ್ರಜ್ಞಾನದ ಸುಧಾರಣೆಗೆ ಹೆಚ್ಚು ಗಮನಿಸುವುದಿಲ್ಲ, ರಸಗೊಬ್ಬರ ಕಾರ್ಖಾನೆಗಳಲ್ಲಿ ತಂತ್ರಜ್ಞಾನದ ಸುಧಾರಣೆ, ಮಾಲೀಕರು ಈ ನಿಟ್ಟಿನಲ್ಲಿ ಹೆಚ್ಚು ಉತ್ಸಾಹಕರಾಗಿರುವುದಿಲ್ಲ, ಅವರು ಹೆಚ್ಚು ಉತ್ಸಾಹಕರಾಗದಿದ್ದರೆ ಎರಡು ತಂತ್ರಜ್ಞಾನ ಅಂದರೆ ಉತ್ಪಾದನಾ ತಂತ್ರ ಜ್ಞಾನ ಹಾಗೂ ಸಾಗಾಣಿಕೆ ತಂತ್ರಜ್ಞಾನದಲ್ಲಿ ಹಿಂದೆ ಬೀಳುತ್ತಾರೆ. ಆದ್ದರಿಂದ ಸಾಗಾಣಿಕೆ ತಂತ್ರಜ್ಞಾನದಲ್ಲಿ ಹೊಸ ಅವಿಷ್ಕಾರ ಗಳು ನಡೆಯಲೇಬೇಕಾಗಿದೆ. ಸಾಗಾಣಿಕೆ ಜಾಲ ವಿಸ್ತತ ಗೊಳ್ಳಬೇಕಾದರೆ, ಬಂಡವಾಳ ಹೂಡಿಕೆ, ಉದ್ದಿಮೆದಾರರು ಉದ್ಯಮಶೀಲತೆ , ಆಧುನಿಕ ದೃಷ್ಟಿಕೋನ, ಚಲನಾತ್ಮಕ ವ್ಯಕ್ತಿತ್ವ, ಅವಶ್ಯವಾದ ಅಂಶಗಳು ಆದರೆ ಈ ಎಲ್ಲಾ ಅಂಶಗಳು ಉದ್ದಿಮೆದಾರನಲ್ಲಿ ಇಲ್ಲದಿದ್ದರೆ ಆತ ಕೈಗಾರಿಕೋದ್ಯಮಿಯಾಗಿ ಯಶಸ್ವಿಗಳಿಸಲಾರ ಬಹಳಷ್ಟು ಉದ್ದಿಮೆದಾರರು ತಟಸ್ಥ ಆದಾಯ (Breakeven) ಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಆ ವರ್ಷದಲ್ಲಿ ಎಷ್ಟು ಆದಾಯ ಬರಬೇಕು ಅಷ್ಟನ್ನು ಗಳಿಸಲು ಹಾತೊರೆಯುತ್ತಾರೆ ಆದರೆ ಹೆಚ್ಚಿನ ನಿವ್ವಳ ಆದಾಯ ಪಡೆಯಲು, ಜವಾಬ್ದಾರಿ ತೆಗೆದುಕೊಳ್ಳಲು ಸಿದ್ದರಿರುವುದಿಲ್ಲ. ಅರ್ಥಶಾಸ್ತ್ರದ ಪರಿಕಲ್ಪನೆಗಳ ಪ್ರಕಾರ ಒಬ್ಬ ಉದ್ಯಮಿ ಉತ್ಪಾದನೆಯಲ್ಲಿ ಉಳಿಯಬೇಕಾದರೆ ಕನಿಷ್ಟ ಪಕ್ಷ ಚರ ವೆಚ್ಚವನ್ನು ಪಡೆಯಬೇಕು. ಇದು ಅಲ್ಪಾವಧಿ ಕಾಲಕ್ಕೆ ಮಾತ್ರ. ಆದರೆ ರಸಗೊಬ್ಬರ ಕಾರ್ಖಾನೆಗಳಾಗಲಿ ಅಥವಾ ಇನ್ನಿತರ ಕಾರ್ಖಾನೆಗಳಾಗಲಿ ಅಲ್ಪಾವಧಿಯಲ್ಲಿ ಚರ ವೆಚ್ಚವನ್ನು ಪಡೆದರೆ ಬಹಳಷ್ಟು ಜನ ಅದಕ್ಕೆ ಸಂತುಷ್ಟರಾಗಿ ದೀರ್ಘಾವಧಿ ಫಲಗಳ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ ಆ ರೀತಿಯಲ್ಲಿ ನೋಡಿದರೆ ದೀರ್ಘಾವಧಿ ವೆಚ್ಚವನ್ನು ಪಡೆಯದೇ ಹೋದರೆ ಕಾರ್ಖಾನೆಗಳನ್ನು ಮುಚ್ಚಬೇಕಾಗುತ್ತದೆ. ಬಹಳಷ್ಟು ರೋಗಗ್ರಸ್ಥ ಕಾರ್ಖಾನೆಗಳ ಲಕ್ಷಣಗಳೇ ಇಷ್ಟಾಗಿರುತ್ತದೆ. ಇಲ್ಲಿ ಆದಾಯವನ್ನು ಬಹಳಷ್ಟು ಕಾರ್ಖಾನೆ ಮಾಲೀಕರು ಚರ ವೆಚ್ಚಕ್ಕಿಂತ ಅಧಿಕವಾಗಿದ್ದಲ್ಲಿ ಅಷ್ಟಕ್ಕೆ ಸಂತುಷ್ಟರಾಗುತ್ತಾರೆ, ಆದರೆ ಈ ನಿಯಮದ ಪ್ರಾರಂಭವಾಗುವುದೆ ಉತ್ಪಾದನೆ ಪ್ರಾರಂಭಿಸಿದ ಮೇಲೆ ಉತ್ಪಾದನೆ ಪ್ರಾರಂಭಿಸಿದ ಕೆಲವು ವರ್ಷಗಳವರೆಗೆ ಚರ ವೆಚ್ಚಗಳ ಮೇಲೆ ಲಾಭಗಳಿಸುವಂತೆ ನೋಡಿಕೊಳ್ಳುತ್ತಾರೆ. ಚರ ವೆಚ್ಚಕ್ಕಿಂತ ಕಡಿಮೆ ಪ್ರಮಾಣದಲ್ಲಿ ಆದಾಯ ಬಂದರೆ ಕಾರ್ಖಾನೆಗಳನ್ನು ಮುಚ್ಚಬೇಕಾಗುತ್ತದೆ. ಆದರೆ ಕಾರ್ಖಾನೆಗಳು ಅಲ್ಪಾವಧಿಯಲ್ಲಿ ಚರ ವೆಚ್ಚಕ್ಕಿಂತ ಅಧಿಕ ಆದಾಯ ಹಾಗೆಯೇ ದೀರ್ಘಾವಧಿಯಲ್ಲಿ ಸ್ಥಿರ ಮತ್ತು ಚರ ವೆಚ್ಚಗಳಿಗಿಂತ ಅಧಿಕ ಲಾಭ ಗಳಿಸಿದರೆ.

ಕೈಗಾರಿಕೆ ಉತ್ಪಾದನೆಯಲ್ಲಿ ಇರಬಹುದು ಇಲ್ಲದಿದ್ದರೆ ರೋಗಗ್ರಸ್ಥ ಕೈಗಾರಿಕೆಯಾಗಿ ಮುಚ್ಚಬೇಕಾಗುತ್ತದೆ. ಆದ್ದರಿಂದ ರಸಗೊಬ್ಬರ ಕಾರ್ಖಾನೆಗಳು ಉತ್ಪಾದನ ಹಾಗೂ ಸಾಗಾಣಿಕೆ ತಂತ್ರಜ್ಞಾನದಲ್ಲಿ ಸುಧಾರಣೆಗಳನ್ನು ತಂದರೆ ಲಾಭದಾಯಕವಾಗುತ್ತದೆ. ರೈತರಿಗೂ ಸಹ ಸುಲಭವಾಗಿ ಉತ್ಪನ್ನಗಳನ್ನು ತುಲುಪಿಸಬಹುದು ರೈತರಿಗೆ ಉತ್ಪನ್ನಗಳು ಸಕಾಲಿಕವಾಗಿ ತಲುಪದಿದ್ದರೆ ಹೆಚ್ಚು ದಿನಗಳವರೆಗೂ ಉತ್ಪನ್ನಗಳನ್ನು ದಾಸ್ತಾನೀಕರಿಸಲು ಸಾಧ್ಯವಿಲ್ಲ. ಅವುಗಳ ಗುಣಮಟ್ಟ ಕುಸಿದು ರಸಗೊಬ್ಬರಗಳು ಕೆಡಬಹುದು. ಆದ್ದರಿಂದ ರಸಗೊಬ್ಬರ ಕಾರ್ಖಾನೆಗಳು ರಸಗೊಬ್ಬರಗಳನ್ನು ಉತ್ಪಾದಿಸುವ ಕ್ರಿಯೆಗಿಂತ ಅವುಗಳ ಸಾಗಾಣಿಕೆ ಮಾಡುವ ಕ್ರಿಯೆ ಹೆಚ್ಚು ತರ್ಕ ಬದ್ಧವಾದ ಕ್ರಿಯೆ ಆಗುತ್ತದೆ. ಹೀಗೆ ಕಾರ್ಖಾನೆಗಳು ಉತ್ಪಾದನಾ ತಂತ್ರಜ್ಞಾನದಲ್ಲಿ ಸುಧಾರಣೆ ಮಾಡಿದರೆ ಇದರ ಒತ್ತಡ ಸಾಗಾಣಿಕೆಯ ಮೇಲೆ ಬೀಳುತ್ತದೆ. ಯಾಕೆಂದರೆ ಉತ್ಪಾದನೆ ಹೆಚ್ಚಾಗಿ ಅದೇ ಹಳೆಯ ಸಾಗಾಣಿಕೆಯ ತಂತ್ರಜ್ಞಾನ ವಿದ್ದರೆ ಉತ್ಪಾದನೆ ಮತ್ತು ವಿತರಣೆಯ ನಡುವೆ ಅಸಮತೋಲನ ಸಂಬಂಧಗಳು ಪ್ರಾರಂಭವಾಗುತ್ತವೆ. ಇಂತಹ ಅಸಮತೋಲನ ಸಂಬಂಧಗಳನ್ನು ಸರಿಪಡಿಸಬೇಕೆಂದರೆ ಸಾಗಾಣಿಕೆಯ ತಂತ್ರಜ್ಞಾನದಲ್ಲೂ ಅಳವಡಿಸಬೇಕಾಗುತ್ತದೆ. ಆದರೆ ಇಂದು ಸಾಗಾಣಿಕೆಯ ಜಾಲವನ್ನು ನವೀಕರಿಸುವುದು ಮುಖ್ಯ ಅಂಶವಾಗುತ್ತದೆ. ಆದ್ದರಿಂದ ಸಾಗಾಣಿಕೆ ಜಾಲ ಉತ್ಪಾದನೆಯೊಂದಿಗೆ ಜೊತೆ ಜೊತೆಯಲ್ಲೇ ನಡೆಯಬೇಕು.

ರೇಲ್ವೆ ಸಾಗಾಣಿಕೆಯಲ್ಲಿ ರಸಗೊಬ್ಬರಗಳು:

ರಾಷ್ಟ್ರ ಸಾಗಾಣಿಕೆ ನೀತಿಯ ಆಯೋಗ ಹೇಳುವುದೇನೆಂದರೆ ಭಾರತದಲ್ಲಿ ಸಾಗಾಣಿಕೆಯ ಜಾಲ ಸುಧಾರಣೆಗೊಂಡಿಲ್ಲ. ಸಾಗಾಣಿಕೆ ಜಾಲ ಸುಧಾರಣೆಗೊಳ್ಳದಿರುವುದರಿಂದ ಭಾರತದ ಆರ್ಥಿಕ ವ್ಯವಸ್ಥೆ ಅತ್ಯಂತ ಸರಾಗವಾಗಿ ವಹಿಸಬೇಕಾದ ಪಾತ್ರಕ್ಕೆ ಅಡಚಣೆಯಾಗಿದೆ. ಆರ್ಥಿಕ ವ್ಯವಸ್ಥೆಯ ಬೆಳವಣಿಗೆ ದೃಷ್ಟಿಯಿಂದಲೂ ಸಹ ಇದು ಪ್ರತಿಕೂಲ ಪರಿಣಾಮ ಬೀರಿದೆ. ಆದ್ದರಿಂದ ರಾಷ್ಟ್ರದಲ್ಲಿ ವಿವಿಧ ಅತ್ಯವಶ್ಯಕ ಉತ್ಪನ್ನಗಳ ಸಾಗಾಣಿಕೆಯಲ್ಲಿ ಅನೇಕ ತೊಡಕುಗಳನ್ನು ನಾವು ಕಾಣಬಹುದು. ಆದ್ದರಿಂದ ಭಾರತದ ಆರ್ಥಿಕ ವ್ಯವಸ್ಥೆ ಆರೋಗ್ಯಕರವಾಗಿರಬೇಕಾದರೆ , ಮತ್ತು ಬೆಳವಣಿಗೆಯ ದರ ಸುಧಾರಣೆಗೊಳ್ಳಬೇಕಾದರೆ ಸಾಗಾಣಿಕೆಯ ಜಾಲದಲ್ಲಿ ಮಹತ್ವದ ಸುಧಾರಣೆಗಳನ್ನು ತರಬೇಕಾಗಿದೆ. ಈ ಸುಧಾರಣೆಗಳು ಸಾಗಾಣಿಕೆಯ ಮುಖ್ಯವಾದ ಭೂ ಸಾರಿಗೆ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಾಗಿದೆ. ರೈಲ್ವೆ ಮೂಲಕವಾಗಿ ಬಹುತೇಕವಾಗಿ ದೂರದ ಪ್ರದೇಶಗಳಿಗೆ ವಿವಿಧ ಉತ್ಪನ್ನಗಳ ಸಾಗಾಣಿಕೆ ನಡೆಯುತ್ತಿದೆ. ಹೀಗೆ ರೈಲ್ವೆ ವ್ಯವಸ್ಥೆ ಸುಧಾರಣೆಯೂ ಸಹ ಒಂದಂಶವಾಗಿದೆ. ರೈಲ್ವೆ ವ್ಯವಸ್ಥೆಯಲ್ಲಿ ಸಾಗಾಣಿಕೆ, ಬಾಡಿಗೆ ಮತ್ತು ತಲುಪಬೇಕಾದ ಸ್ಥಳದ ಅತಿ ಮುಖ್ಯವಾಗುತ್ತದೆ. ರಾಷ್ಟ್ರದ ವಿವಿಧ ಭಾಗದ ಸ್ಥಳಗಳಿಗೆ ವಿವಿಧ ಉತ್ಪನ್ನಗಳನ್ನು ತಲುಪಿಸುವುದು ಪ್ರಮುಖವಾಗಿ ರೈಲ್ವೆ ಸಾಗಾಣಿಕೆಯಮೇಲೆ ಇರುವ ಹೊಣೆ, ಹೀಗೆ ರೈಲ್ವೆ ಸಾಗಾಣಿಕೆಯು ಹೊಣೆ ಇನ್ನೂ

ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿದೆ. ಜವಾಬ್ದಾರಿಯುತವಾಗಿ ರೈಲ್ವೆ ಸಾಗಾಣಿಕೆಯನ್ನು ಸುಧಾರಣೆಗೊಳಿಸಿದರೆ ಸಾಗಾಣಿಕೆಯ ಜಾಲ ಸಶಕ್ತಗೊಳ್ಳಬಹುದು ಹೀಗೆ ಸಶಕ್ತಗೊಂಡ ರೈಲ್ವೆ ಸಾಗಾಣಿಕೆಯ ಜಾಲದಿಂದಾಗಿ ರಾಷ್ಟ್ರದ ಆಂತರಿಕ ಉತ್ಪನ್ನಕ್ಕೆ ಹೆಚ್ಚಿನ ಪಾಲನ್ನು ನೀಡಬಹುದು ಹೆಚ್ಚಿನ ಪಾಲಿನಿಂದಾಗಿ, ರಾಷ್ಟ್ರದ ಬೆಳವಣಿಗೆ ದರ ಹೆಚ್ಚಬಹುದು ಈಗಾಗಲೇ ಸೇವಾ ವಲಯ ಶೇ. 51 ರಷ್ಟು ರಾಷ್ಟ್ರದ ಆಂತರಿಕ ಉತ್ಪನ್ನಕ್ಕೆ ತನ್ನ ಪಾಲನ್ನು ನೀಡುತ್ತಬಂದಿದೆ. ಶೇ. 51 ರಲ್ಲಿ ರೈಲ್ವೆ ದೂರಸಂಪರ್ಕದಂತಹ ವಲಯಗಳು ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿವೆ, ಸಾಗಾಣಿಕೆ ವಲಯ ಸೇವಾ ವಲಯದಲ್ಲಿ ಪ್ರಮುಖ ವಲಯ, ಇತ್ತೀಚೆಗೆ ರೈಲ್ವೆ ವಲಯದಲ್ಲಿ ಅನೇಕ ಸುಧಾರಣೆಗಳು ಆಗುತ್ತಿರುವುದುಗಮನಿಸಬೇಕಾಗಿದೆ. ವಿವಿಧ ದೂರದ ಪ್ರದೇಶಗಳಿಗೆ ರೈಲು ಸಂಪರ್ಕ ಕಲ್ಪಿಸುವಲ್ಲಿ ಸರಕಾರ ಪ್ರಯತ್ನಿಸುತ್ತಿದೆ. ಸರಕಾರದ ಈಪ್ರಯತ್ನಗಳು ಸಫಲವಾಗಬೇಕಾದರೆ ಆದಷ್ಟು ಬೇಗ ಈ ಯೋಜನೆಗಳನ್ನು ಪೂರ್ಣಗೊಳಿಸಬೇಕು. ರೈಲ್ವೆ ವಲಯ ಸೇವಾ ವಲಯದಲ್ಲಿ ಪ್ರಮುಖ ವಲಯ ಎಂದು ಈಗಾಗಲೆ ಹೇಳಿರುವೆ, ಇದಕ್ಕೆ ಪ್ರತ್ಯೇಕ ಖಾತೆ ಹಾಗೂ ಪ್ರತ್ಯೇಕ ಆಯವ್ಯಯ ಮಂಡಿಸುವ ಪದ್ಧತಿ ಭಾರತದಲ್ಲಿದೆ. ಈ ವಲಯವನ್ನು ಸಶಕ್ತಗೊಳಿಸಲು ಅನೂಚಾನವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆದರೆ ಈ ವಲಯ ಇನ್ನು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರಮುಖವಾದವೆಂದರೆ, ರೈಲ್ವೆ ಜಾಲವನ್ನು ಅಭಿವೃದ್ಧಿ ಪಡಿಸಲು ಆಯವ್ಯಯದಲ್ಲಿ ಸಾಕಷ್ಟು ಹಣ ಮೀಸಲಿಡದೆ ಇರುವುದು ಈ ಸಂಬಂಧವಾಗಿ ಪ್ರತಿ ವರ್ಷವೂ ರೈಲ್ವಯ ಆಯವ್ಯಯದಲ್ಲಿ ಇದನ್ನು ನಾವು ಕಾಣಬಹುದಾಗಿದೆ. ಆದರೆ ಸಾಗಣಿಕೆ ಆಯೋಗ ಹೇಳಿದಂತೆ ಸಾಗಾಣಿಕೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ. ಎಂಬುದು ಒಂದು ಮುಖ್ಯ ಅಂಶ.

ರೈಲ್ವೆಯಲ್ಲಿ ರಸಗೊಬ್ಬರಗಳ ಸಾಗಾಣಿಕೆ ಮಾಡಿದ ಪ್ರಮಾಣ

ವರ್ಷ	ಸಾಗಾಣಿಕೆಯ ಸರಾಸರಿ ದೂರ (ಕಿ.ಮಿ.)	ರೈಲ್ವೆಯಲ್ಲಿಸಾಗಾಣಿಕೆ ಮಾಡಿದ ರಸಗೊಬ್ಬರಗಳ ಪ್ರಮಾಣ(000 ಗಳಲ್ಲಿ)	ಶೇಕಡವಾರು ಸಾಗಾಣಿಕೆ
1980-81	1100	8108	66.5
1981-82	1013	9568	71.5
1982-83	969	8515	62.4
1983-84	1020	8147	53.2
1984-85	1089	12208	67.3
1985-86	1094	13620	69.00
1986-87	1073	14532	67.30
1987-88	1089	13177	68.20
1988-89	1011	16100	65.60
1989-90	975	16970	67.30
199091	940	18360	68.00
1991-92	935	18500	66.20
1992-93	908	18900	70.30
1993-94	922	21500	73.90
1994-95	920	23700	70.90
1996-97	854	27336	74.00
1999-2000	846	24410	76.00
2000-01	872	21280	79.00

1980-81 ರಲ್ಲಿ 1100 ಕಿ.ಮೀ. ಕ್ರಮಿಸುತ್ತಿದ್ದ ರೈಲು 81.08 ಲಕ್ಷ ಟನ್ ಗಳನ್ನು ರಾಷ್ಟ್ರದ ವಿವಿಧ ಸ್ಥಳಗಳಿಗೆ ರವಾನಿಸುತ್ತಿತ್ತು. ಅಂದರೆ ರೈಲ್ವೆ ಮೂಲಕ ಶೇ. 66.5 ರಷ್ಟು ರಸಗೊಬ್ಬರಗಳು ರಾಷ್ಟ್ರದ

ವಿವಿಧ ಮೂಲಗಳಿಂದ ರೈಲ್ವೆ ಮೂಲಕ ರವಾನಿಸಲಾಗುತ್ತಿತ್ತು. 1985 - 86 ರಲ್ಲಿ 1094 ಕಿ.ಮೀ. ಕ್ರಮಿಸುತ್ತಿದ್ದ ರೈಲು 1.36 ಕೋಟಿ ಪ್ರಮಾಣದ ರಸಗೊಬ್ಬರಗಳನ್ನು ರಾಷ್ಟ್ರದ ವಿವಿಧ ಮೂಲೆಗಳಿಗೆ ರವಾನಿಸಲಾಗುತ್ತಿತ್ತು ಶೇ. 69 ರಷ್ಟು ರಸಗೊಬ್ಬರ ಗಳ ಸಾಗಾಣಿಕೆ ರೈಲ್ವೆ ಮುಖಾಂತರ ನಡೆಯುತ್ತಿತ್ತು. 1995 -96 ರಲ್ಲಿ 920 ಕಿ.ಮೀ. ಕ್ರಮಿಸುತ್ತಿದ್ದ ರೈಲು 2.37 ಕೋಟಿ ಟನ್ ಗಳಷ್ಟು ರಸಗೊಬ್ಬರಗಳನ್ನು ರಾಷ್ಟ್ರದ ವಿವಿಧ ಮೂಲೆಗೆ ರವಾನಿಸಲಾಗುತ್ತಿತ್ತು 2000-01 ರಷ್ಟರಿಗೆ ಬಂದರೆ 872 ಕಿ.ಮೀ. ಕ್ರಮಿಸುತ್ತಿದ್ದ ರೈಲ್ವೆ. 2.12 ಕೋಟಿಗಳ ಟನ್‌ಗಳಷ್ಟು ರಸಗೊಬ್ಬರಗಳನ್ನು ರಾಷ್ಟ್ರದ ವಿವಿಧ ಮೂಲೆಗೆ ಕೊಂಡೊಯ್ಯುತ್ತಿತ್ತು. ರೈಲ್ವೆಯಲ್ಲಿ ಸಾಗಾಣಿಕೆಯಾಗುತ್ತಿದ್ದ ರಸಗೊಬ್ಬರಗಳು ಶೇ. 79.00 ರಷ್ಟು ಪ್ರಮಾಣ. ಇಲ್ಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ರೈಲ್ವೆ ಸಾಗಾಣಿಕೆ ಸಾಮರ್ಥ್ಯ 1980-81 ಅವಧಿಗಳನ್ನು 1985 - 86 ಕ್ಕೆ ಹೋಲಿಸಿದರೆ ಆಗ ಶೇ. 66 ರಷ್ಟಿದ್ದ ಸಾಗಾಣಿಕೆ ಸಾಮರ್ಥ್ಯ 5 ವರ್ಷಗಳಲ್ಲಿ ಶೇ. 69 ಕ್ಕೆ ಏರುತ್ತದೆ. ಹಾಗೆಯೇ 1995 - 96 ರಲ್ಲಿ ಶೇ. 70 ರಷ್ಟು ರಸಗೊಬ್ಬರಗಳು ರೈಲ್ವೆ ಮೂಲಕ ಸಾಗಾಣಿಕೆಯಾದರೂ 10 ವರ್ಷಗಳ ಅವಧಿಯಲ್ಲಿ ಶೇ. 1 ರಷ್ಟು ಸಾಗಾಣಿಕೆ ಸಾಮರ್ಥ್ಯ ಹೆಚ್ಚಾಗಿದೆ. ಆದರೆ 2000-01 ರ ಅವಧಿಯಲ್ಲಿ ಶೇ. 79 ರಷ್ಟು ರಸಗೊಬ್ಬರಗಳನ್ನು ರೈಲ್ವೆ ಮೂಲಕ ಸಾಗಾಣಿಕೆ ಮಾಡುತ್ತಿದ್ದನ್ನು ಗಮನಿಸಿದರೆ 5 ವರ್ಷಗಳ ಅವಧಿಯಲ್ಲಿ ಶೇ. 10 ರಷ್ಟು ಸಾಗಾಣಿಕೆ ಸಾಮರ್ಥ್ಯ ಹೆಚ್ಚಳವಾಗಿರುವುದು ಗಮನಾರ್ಹ ಅಂಶ. ಆದರೆ 1980 ರಿಂದ 2000 ದ ಅವಧಿಯಾದರೆ 20 ವರ್ಷಗಳ ಅವಧಿಯಲ್ಲಿ ಶೇ. 13 ರಷ್ಟು ಸಾಗಾಣಿಕೆ ಸಾಮರ್ಥ್ಯ ಹೆಚ್ಚಿರುವುದು ಅಷ್ಟು ಗಮನಾರ್ಹವಲ್ಲ ಆದರೂ ಎರಡು ದಶಕಗಳಲ್ಲಿ ರೈಲ್ವೆ ವಲಯದಲ್ಲಿ ತಂದ ಸುಧಾರಣೆ ಮಂದಗತಿಯಲ್ಲಿ ನಡೆದಿದೆ, ಹೀಗೆ ತೆವಳುತ್ತ ನಡೆಯಲು ಕಾರಣ, ರೈಲ್ವೆ ವಲಯದ ಮೇಲೆ ಹೂಡಿದ ಬಂಡವಾಳದ ಫಲಾನುಭವ ದೀರ್ಘವಾದದ್ದು ಎಂಬುದು ಎದ್ದು ಕಾಣುತ್ತದೆ. ಆದರೆ ಕಿ.ಮೀಗಳ ಸಾಗಾಣಿಕೆ ಕುಗ್ಗಿರುವುದು ರೈಲ್ವೇನಲ್ಲಿ ತಂದ ಸುದಾರಣೆ ಗಳಿಂದಾಗಿ 1980 -81 ರಲ್ಲಿ 1100 ಕಿ.ಮೀ. ಕ್ರಮಿಸುತ್ತಿದ್ದ ರೈಲ್ವೆ ಕೇವಲ 81.08 ಲಕ್ಷ ಟನ್ ರಸಗೊಬ್ಬರಗಳನ್ನು ಸಾಗಿಸುತ್ತಿತ್ತು 1985 - 86 ರಲ್ಲಿ 1094 ಕಿ.ಮೀ. ಕ್ರಮಿಸುತ್ತಿದ್ದ ರೈಲ್ವೆ 1.36 ಕೋಟಿ ಟನ್ ಗಳನ್ನು ಸಾಗಾಣಿಕೆ ಮಾಡುತ್ತಿತ್ತು ಆದರೆ ರೈಲ್ವೆ ಸುಧಾರಣೆ ಗಳು ಕಡಿಮೆ ಕ್ರಮಿಸುವುದರೊಂದಿಗೆ ಹೆಚ್ಚು ಪ್ರಮಾಣದ ರಸಗೊಬ್ಬರಗಳನ್ನು ಸಾಗಾಣಿಕೆ ಮಾಡುತ್ತಿತ್ತು. ಇದು ರೈಲ್ವೆಯ ಸುಧಾರಣೆಯ ಸ್ಥಿತ್ಯಂತರ ಅವಧಿ ಈ ಅವಧಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿರುವ ಲಕ್ಷಣಗಳು ಎಂದು ಕಾಣುತ್ತದೆ. ಪ್ರತಿ ಕಿ.ಮೀ. ಗೂ ಸಾಗಾಣಿಕೆಯ ಉತ್ಪಾದಕತೆ ಹೆಚ್ಚಿದೆ. (Transport Productivity) 1995 - 96 ರಲ್ಲಿ 920 ಕಿ.ಮೀ. ಕ್ರಮಿಸುತ್ತಿದ್ದ ರೈಲು 2.37 ಕೋಟಿ ಟನ್ ಗಳಷ್ಟು ರಸಗೊಬ್ಬರಗಳನ್ನು ಸಾಗಾಣಿಕೆ ಮಾಡುತ್ತಿತ್ತು. 2000-01 ರ ಅವಧಿಯಲ್ಲಿ 872 ಕಿ.ಮೀ. ಕ್ರಮಿಸುತ್ತಿದ್ದ ರೈಲು 2.12 ಕೋಟಿ ಟನ್ ರಸಗೊಬ್ಬರಗಳನ್ನು ಸಾಗಾಣಿಕೆ ಮಾಡುತ್ತಿತ್ತು. ಒಂದು ದಶಕದಲ್ಲಿ ಸಾಗಾಣಿಕೆಯ ಉತ್ಪಾದಕತೆ ಹೆಚ್ಚಿದೆ, ಹೆಚ್ಚು ಕಿ.ಮೀ. ಕ್ರಮಿಸಿ ಕಡಿಮೆ

ಪ್ರಮಾಣದ ರಸಗೊಬ್ಬರಗಳ ಸಾಗಾಣಿಕೆ ಮಾಡಿದರೆ, ಜಾಸ್ತಿ ಬಾಡಿಗೆ ವೆಚ್ಚವನ್ನು ರಸಗೊಬ್ಬರಗಳ ಸಾಗಾಣಿಕೆಯಲ್ಲಿ ಭರಿಸಬೇಕಾಗಿತ್ತು. ಆದರೆ ಕಡಿಮೆ ಕಿ.ಮೀ. ಕ್ರಮಿಸಿ ಹೆಚ್ಚು ಪ್ರಮಾಣದ ರಸಗೊಬ್ಬರಗಳನ್ನು ಸಾಗಾಣಿಕೆ ಮಾಡಿದರೆ ಕಡಿಮೆ ವೆಚ್ಚ ಬರುತ್ತದೆ.

ಸಾಗಾಣಿಕೆ ವೆಚ್ಚ ನಿಗದಿಪಡಿಸುವಿಕೆ : ಸಾಗಾಣಿಕೆ ವೆಚ್ಚವನ್ನು ನಿರ್ದಿಷ್ಟ ಬಾಡಿಗೆ (Normative price) ನೀಡುವುದರ ಮೂಲಕ ಭರಿಸಲಾಗುತ್ತಿತ್ತು. ಇದು ಧಾರಣ ಬೆಲೆಯಲ್ಲಿ ಸೇರಿಸುತ್ತಿಲ್ಲ. ಏಕೆಂದರೆ ಧಾರಣ ಬೆಲೆ ಉತ್ಪಾದನಾ ವೆಚ್ಚ ಯಂತ್ರೋಪಕರಣ ಉಪಯೋಗದಿಂದ ಬರುವ ವೆಚ್ಚ ಮತ್ತು ನಿವ್ವಳ ಆದಾಯವನ್ನು ಒಳಗೊಂಡಿರುತ್ತದೆ. ಸಾಗಾಣಿಕೆ ವೆಚ್ಚವನ್ನು ಧಾರಣ ಬೆಲೆಯಾಚೆ ಪರಿಗಣಿಸಲ್ಪಡುತ್ತದೆ, ಸಾಗಾಣಿಕೆ ವೆಚ್ಚ ಒಂದೇ ಕಾರ್ಖಾನೆಯ ಬೇರೆ ಬೇರೆ ಘಟಕಗಳಿಗೂ ವ್ಯತ್ಯಾಸಗೊಳ್ಳುತ್ತದೆ. ಒಂದೇ ಕಾರ್ಖಾನೆಯ ಬೇರೇ ಬೇರೆ ಘಟಕಗಳ ಸಾಗಾಣಿಕೆ ವೆಚ್ಚದಲ್ಲಿ ವ್ಯತ್ಯಾಸವಿರುವುದರಿಂದ ಬೇರೆ ಬೇರೆ ಘಟಕಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸಿ ಸಾಗಾಣಿಕೆ ವೆಚ್ಚನ್ನು ನಿಗದಿಪಡಿಸಲಾಗುತ್ತಿತ್ತು. ಸಾಗಾಣಿಕೆ ವೆಚ್ಚ ಪ್ರತಿ ವರ್ಷಕ್ಕೂ ವ್ಯತ್ಯಾಸಗೊಳ್ಳುವುದರಿಂದ, ಪ್ರತಿ ವರ್ಷವೂ ಹೊಸದಾಗಿ ಪರಿಷ್ಕೃತ ಗೊಳಿಸಲಾದ ಸಾಗಾಣಿಕೆ ವೆಚ್ಚವನ್ನು ಸರಕಾರ ನಿಗದಿಪಡಿಸುತ್ತಿದೆ. ಪ್ರತಿ ವರ್ಷದಲ್ಲಿ ರೈಲ್ವಯ, ಲಾರಿ ಮುಂತಾದ ವೆಚ್ಚಗಳು ಪರಿಷ್ಕರಿಸಲ್ಪಡುವುದರಿಂದ ಸಾಗಾಣಿಕೆ ವೆಚ್ಚವನ್ನು ಪ್ರತಿ ವರ್ಷ ಹೊಸದಾಗಿ ಪರಿಷ್ಕರಿಸುವುದು ಅನಿವಾರ್ಯವಾಗಿದೆ. ಆದರೆ ಇಲ್ಲಿ ನಮಗೆ ಕಂಡುಬರುವುದೇನೆಂದರೆ ಸರಕಾರ ಈ ಸಾಗಾಣಿಕೆ ವೆಚ್ಚವನ್ನು ಧಾರಣ ಬೆಲೆಗಳ ಆಚೆ ಪರಿಗಣಿಸುವುದು, ಧಾರಣ ಬೆಲೆಗಳ ಆಚೆ ಸಾಗಾಣಿಕೆ ವೆಚ್ಚವನ್ನು ಪರಿಗಣಿಸುವುದರಿಂದ, ರಸಗೊಬ್ಬರ ಕಾರ್ಖಾನೆಗಳಿಗೆ ನೀಡುತ್ತಿರುವ ಒಟ್ಟು ಸಹಾಯಧನ ಏರಿಕೆಯನ್ನು ನಾವು ಕಾಣಬಹುದು. ಆದ್ದರಿಂದ ಸಾಗಾಣಿಕೆ ವೆಚ್ಚವನ್ನು ಪ್ರತಿಯೊಂದು ಘಟಕಕ್ಕೂ ಒಂದೊಂದು ಉತ್ಪಾದನಾ ಘಟಕವು ಸಾಗಾಣಿಕೆ ವೆಚ್ಚದಲ್ಲಿ ವ್ಯತ್ಯಾಸಗೊಳ್ಳುವುದು. ಅವರು ಉಪಯೋಗಿಸುವ ಸಾಗಾಣಿಕೆ ಸಾಧನದ ಮೇಲೆ ನಿಂತಿರುತ್ತದೆ. ಸಾಗಾಣಿಕೆ ವೆಚ್ಚ ದೊಡ್ಡ ಪ್ರಮಾಣದ ಉತ್ಪಾದನಾ ಘಟಕಗಳಿಗಷ್ಟೇ ವ್ಯತ್ಯಾಸಗೊಳ್ಳುವುದಿಲ್ಲ. ಒಂದೇ ಘಟಕದಲ್ಲಿ ಉತ್ಪಾದಿಸಿದ ವಿವಿಧ ರಸಗೊಬ್ಬರಗಳ ಉತ್ಪನ್ನಗಳಿಗೂ ಈ ವೆಚ್ಚ ವ್ಯತ್ಯಾಸಗೊಳ್ಳುತ್ತದೆ. ಪ್ರತಿಯೊಂದು ರಸಗೊಬ್ಬರದ ಉತ್ಪನ್ನದ ಸಾಗಾಣಿಕೆ ವೈವಿಧ್ಯಯಮವಾಗಿರುವುದರಿಂದ ಸಾಗಾಣಿಕೆ ವೆಚ್ಚವು ವ್ಯತ್ಯಾಸಗೊಳ್ಳುತ್ತದೆ. ಸಾಗಾಣಿಕೆ ಬಾಡಿಗೆಯನ್ನು ನಿಗದಿಪಡಿಸಲು ಕೆಳಗಿನ ಅಂಶಗಳನ್ನ ಪರಿಗಣಿಸಲಾಗುತ್ತದೆ.

ಅ) ರಸಗೊಬ್ಬರಗಳ ವಿತರಣೆಯನ್ನು ವಲಯವಾರು ಮಾಲೀಕರ ಸಮ್ಮೇಳನದಲ್ಲಿ ನಿರ್ಧರಿಸಲಾಗುತ್ತದೆ, ಇದು ಋತುಮಾನಕ್ಕನುಗುಣವಾಗಿ ಪ್ರತಿ ಉತ್ಪಾದನಾ ಘಟಕ ಹಾಗೂ ಪ್ರತಿ ರಸಗೊಬ್ಬರ ಉತ್ಪನ್ನಕ್ಕೂ ಅನ್ವಯಿಸುತ್ತದೆ.

ಆ) ಪ್ರತಿಯೊಂದು ರಸಗೊಬ್ಬರಗಳ ಫಲ ನೀಡುವ ಸಾಗಾಣಿಕೆ ವೆಚ್ಚದ ಆಧಾರದ ಮೇಲೆ ಕೃಷಿ

ಸಚಿವಾಲಯ ಹಾಗೂ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವಾಲಯ, ಪ್ರತಿಯೊಂದು ಘಟಕಕ್ಕೂ ಪ್ರತಿ ರಸಗೊಬ್ಬರ ಉತ್ಪನ್ನಕ್ಕೂ ಸಾಗಾಣಿಕೆ ವೆಚ್ಚವನ್ನು ನಿರ್ಧರಿಸುತ್ತದೆ.

ಇ) ಪ್ರತಿಯೊಂದು ಉತ್ಪಾದನಾ ಘಟಕ್ಕೂ ರೈಲು ಮತ್ತು ರಸ್ತೆ ಮೂಲಕ ಸಾಗಿಸುವ ಮಿಶ್ರತೆಯನ್ನು ರೈಲ್ವೆ ಇಲಾಖೆ ನಿರ್ದರಿಸುತ್ತದೆ.

ಈ) ರಸ್ತೆ ಮತ್ತು ರೈಲು ಬಾಡಿಗೆಯನ್ನು ಪ್ರಸಕ್ತ ಬಾಡಿಗೆ ದರದನ್ವಯ ನಿಗದಿಪಡಿಸಲಾಗುತ್ತದೆ. ಅದು ಪ್ರತಿಯೊಂದು ಘಟಕಕ್ಕೂ , ಪ್ರತಿಯೊಂದು ಉತ್ಪನ್ನಕ್ಕೂ ಪ್ರತ್ಯೇಕವಾಗಿ ನೀಡಲಾಗುತ್ತದೆ.

ಉ) ಕೈ ನಿರ್ವಹಣೆ ವೆಚ್ಚ (Handling cost) (rate clearance cost) ಉತ್ಪಾದನಾ ಸ್ಥಳದಿಂದ ಉಗ್ರಾಣದ ವರೆಗಿನ ಕೊಂಡೊಯ್ಯುವ ಅಂಶಗಳನ್ನು ಬಾಡಿಗೆ ನಿರ್ಧರಿಸಲು ಪರಿಗಣಿಸಲಾಗುತ್ತದೆ.

ರಸಗೊಬ್ಬರಗಳ ಸಾಗಾಣಿಕೆಯ ಮಿಶ್ರಣ

ವರ್ಷ	ರಸಗೊಬ್ಬರಗಳ ಸಾಗಾಣಿಕೆಯ ಪ್ರಮಾಣ ದಶಲಕ್ಷ ಟನ್‌ಗಳಲ್ಲಿ			ಒಟ್ಟು ಮೊತ್ತ	ಶೇಕಡವಾರು		
	ರೈಲ್ವೇ	ರಸ್ತೆ	ಹಡಗು		ರೈಲ್ವೇ	ರಸ್ತೆ	ಹಡಗು
1976-77	7.8	1.2	ಅತಿ ಕಡಿಮೆ ಪ್ರಮಾಣ	9.00	87%	15%	ಅತಿ ಕಡಿಮೆ ಪ್ರಮಾಣ
1977-78	9.3	1.9	....	11.20	83%	17%	
1978 -79	8.6	3.8	0.04	12.44	69.2%	30.5%	
1979 -80	8.2	406	0.07	12.87	63.7	35%	
1980-81	8.1	5.6	0.67	13.80	58.8	40.8	

ರಸಗೊಬ್ಬರಗಳನ್ನು ರೈಲು ಮೂಲಕ ರಸ್ತೆಗಳ ಮೂಲಕ ಮತ್ತು ಹಡಗಿನ ಮೂಲಕ ಸಾಗಾಣಿಕೆ ಮಾಡಲ್ಪಡುತ್ತದೆ, ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ರೈಲು ಮೂಲಕ ಸಾಗಾಣಿಕೆಯಾಗುವುದು 1976 - 77 ರಲ್ಲಿ 7.8 ದಶಲಕ್ಷಟನ್ ಗಳು ರಸ್ತೆ ಮೂಲಕ 1.2 ದಶಲಕ್ಷ ಟನ್ ಗಳು ಹಡಗಿನ ಮೂಲಕ ಅತಿ ಕಡಿಮೆ ಪ್ರಮಾಣದಲ್ಲಿ ಸಾಗಾಣಿಕೆಯಾಗಿದೆ. ರಸಗೊಬ್ಬರ ಉತ್ಪನ್ನಗಳನ್ನು ಕಡಿಮೆ ಪ್ರಮಾಣದಲ್ಲಿ ರಸ್ತೆ ಹಾಗೂ ಹಡಗಿನ ಮೂಲಕ ಸಾಗಾಣಿಕೆಯಾಗದಿರುವುದಕ್ಕೆ ಉದಾರ ರೈಲ್ವೆ ನೀತಿಗಳೇ ಕಾರಣ ಎಂಬುದರಲ್ಲಿ ಸಂಶಯವಿಲ್ಲ. ರಸಗೊಬ್ಬರಗಳ ಸಾಗಾಣಿಕೆಗೆ ಅತಿ ಕಡಿಮೆ ವಾಹನಗಳನ್ನು ಮೀಸಲಿಟ್ಟಿದೆ ಕಾರಣ ಎಂಬುದರಲ್ಲಿ ಸಂದೇಹವಿಲ್ಲ ಏಕೆಂದರೆ ರೈಲ್ವೆ ಸಾಗಾಣಿಕೆಯಲ್ಲಿ ರಸಗೊಬ್ಬರಗಳಿಗೆ ಹೆಚ್ಚು ಒತ್ತು ಕೊಡಲಾಯಿತು. 1980-81 ರ ಅವಧಿಗೆ ಬರುವಷ್ಟರಲ್ಲಿ ರೈಲ್ವೆ ಸಾಗಾಣಿಕೆಯ ಪಾಲು ಶೇ. 58 ಕ್ಕೆ ಇಳಿದರೆ ರಸ್ತೆಗಳ ಸಾಗಾಣಿಕೆಯ ಪಾಲು ಶೇ. 40 ಕ್ಕೆ ಏರಿತು. ಹೀಗೆ ಸಾಗಣಿಕೆಯ ಪಾಲು ಹೆಚ್ಚಲು

ಈಗಾಗಲೆ ನಾವು ತಿಳಿದಿರುವಂತೆ ರೈಲ್ವೆ ಇಲಾಖೆ ರೂಪಿಸಿದ ನೀತಿಗಳೇ ಕಾರಣ. ಅದರಲ್ಲೂ ರೈಲಿನ ಸೌಕರ್ಯಗಳು ಎಲ್ಲ ಸ್ಥಳಗಳಿಗೂ ಇರುವುದಿಲ್ಲ, ಆದ್ದರಿಂದ ಸಾಗಾಣಿಕೆಗೆ ಲಾರಿ, ಟ್ರಕ್ಕು , ಇತ್ಯಾದಿಗಳನ್ನೇ ಆಶ್ರಯಿಸಬೇಕಾಗುತ್ತದೆ. ಲಾರಿ, ಟ್ರಕ್, ಮುಂತಾದವುಗಳು ಯಾವ ಸ್ಥಳಕ್ಕೆ ಬೇಕಾದರೂ ಉತ್ಪನ್ನಗಳನ್ನು ತಲುಪಿಸಬಲ್ಲವು. ಆದರೆ ರೈಲ್ವೆ ಈ ನ್ಯೂನತೆಗಳಿಂದ ನರಳುತ್ತಿದೆ, ರೈಲ್ವೆಯ ಸಂಪರ್ಕ ನಗರಗಳಿಗೆ ಮಾತ್ರ ಸೀಮಿತಗೊಳ್ಳುತ್ತದೆ. ನಗರಗಳಿಗೆ ಸೀಮಿತಗೊಳ್ಳುವುದರಿಂದ ಸಾಗಾಣಿಕೆಯಲ್ಲಿ ಅನೇಕ ಅಡಚಣೆಗಳು ಎದುರಾಗುತ್ತವೆ. ಯಾವ ಯಾವ ನಗರಗಳಿಗೆ ರೈಲು ಸಂಪರ್ಕ ಇರುತ್ತದೆಯೋ ಆ ನಗರಗಳಿಗೆ ಉತ್ಪನ್ನಗಳನ್ನು ಸಾಗಾಣಿಕೆ ಮಾಡಬಹುದು. ಆದರೆ ರೈಲ್ವೆ ಸಂಪರ್ಕ ಇಲ್ಲದ ನಗರಗಳು ಇವೆ; ಆಗ ರಸ್ತೆಯ ಮೂಲಕ ಸಾಗಾಣಿಕೆ ಮಾಡಬೇಕಾಗುತ್ತದೆ. ಲಾರಿ ಟ್ರಕ್ಕು ಇತ್ಯಾದಿ ಗಳ ಮೂಲಕ ಉತ್ಪನ್ನಗಳ ಸಾಗಾಣಿಕೆ ಮಾಡುವುದು ಸುಲಭ ಎಂದು ಪರಿಗಣಿಸಿದರು, ರೈಲ್ವೆ ಕೊರತೆಯಿಂದಾಗಿ ಉತ್ಪನ್ನಗಳ ರಾಷ್ಟ್ರಾದ್ಯಂತ ಮೂಲೆ, ಮೂಲೆ ಗ್ರಾಮಗಳಿಗೆ ತಲುಪಿಸುವುದು. ಕಷ್ಟಕರವಾದದ್ದು, ಯಾಕೆಂದರೆ ಇಂತಹ ಸಂದರ್ಭದಲ್ಲಿ ಲಾರಿ, ಟ್ರಕ್ ಗಳು ನ್ನು ಆಶ್ರಯಿಸಲೇಬೇಕು, ರಸಗೊಬ್ಬರಗಳು ರೈತರಿಗೆ ಸಕಾಲಕ್ಕೆ ಸರಿಯಾಗಿ ತಲುಪಬೇಕಾದರೆ ರಸ್ತೆ ಸಾಗಾಣಿಕೆ ಮುಖ್ಯ ಮತ್ತು ಅನಿವಾರ್ಯ ಆದ್ದರಿಂದ ರೈಲು ಸಾಗಾಣಿಕೆ ತನ್ನದೇ ಆದ ಇತಿಮಿತಿಗಳನ್ನು ಹೊಂದಿರುವುದು ಸ್ಪಷ್ಟವಾಗಿದೆ. ಈ ಇತಿಮಿತಿಗಳಿಂದ ರಸಗೊಬ್ಬರಗಳ ಸಾಗಾಣಿಕೆಗೆ ತೊಂದರೆಯಾಗಬಾರದೆಂಬ ನಿಲುವಿನಿಂದಾಗಿ ರಸ್ತೆ ಮುಖಾಂತರ ರಸಗೊಬ್ಬರಗಳನ್ನು ಸಾಗಿಸುವುದು ಜನಪ್ರಿಯವಾಗಿದೆ. ರೈಲ್ವೆ ಮುಖಾಂತರವಾದರೆ ನಗರಗಳಿಗೆ ಸೀಮಿತಗೊಂಡು ತಾಲ್ಲೂಕು ಹಾಗೂ ಗ್ರಾಮ ಮಟ್ಟಕ್ಕೆ ರಸಗೊಬ್ಬರಗಳು ತಲುಪಬೇಕಾದರೆ ರಸ್ತೆ ಸಾಗಾಣಿಕೆ ಮೂಲಕವೆ ಸಾಧ್ಯ. ಎಲ್ಲ ಕಡೆಗ ಗ್ರಾಮ ಮಟ್ಟದಲ್ಲಿ ಸುಮಾರಾಗಿ ರಸ್ತೆ ಸಂಪರ್ಕ ವಿರುವುದರಿಂದ ಸುಲಭವಾಗಿ ರೈತರಿಗೆ ರಸಗೊಬ್ಬರಗಳನ್ನು ತಲುಪಿಸಬಹುದು.

ರಸಗೊಬ್ಬರಗಳ ಮಾರುಕಟ್ಟೆಯಲ್ಲಿ ಸಾಗಾಣಿಕೆಯ ವೆಚ್ಚ

ರಸಗೊಬ್ಬರಗಳ ಸಾಗಾಣಿಕೆಯ ವೆಚ್ಚ ಒಟ್ಟು ಮಾರುಕಟ್ಟೆ ವೆಚ್ಚದಲ್ಲಿ ಶೇ. 31 ರಷ್ಟು ಇದೆ. ಸಾಗಾಣಿಕೆಯ ವೆಚ್ಚವನ್ನು 1982 - 83 ರ ಅವಧಿಗೆ ಪರಿಶೀಲಿಸಿದರೆ, ಇದರಲ್ಲಿ ರೂ. 243 ಕೋಟಿ ಸಾಗಾಣಿಕೆ ವೆಚ್ಚವಾಗಿದೆ. ಈಗಾಗಲೆ ತಿಳಿದಿರುವಂತೆ ಸಾಗಾಣಿಕೆಯ ವೆಚ್ಚ ರೈಲ್ವೆ, ರಸ್ತೆ, ಮುಖಾಂತರ ಸಾಗಿಸಲ್ಪಡುವ ವೆಚ್ಚ. ಹೀಗೆ ಸಾಗಿಸಲ್ಪಡುವ ರಸಗೊಬ್ಬರಗಳ ಸಾಗಾಣಿಕೆಯ ವೆಚ್ಚ ಒಟ್ಟು ಮಾರುಕಟ್ಟೆಯ ವೆಚ್ಚದಲ್ಲಿ ಗಣನೀಯ ಪ್ರಮಾಣದಲ್ಲಿದೆ. ಇದಕ್ಕೆ ಪೂರಕವಾಗಿ ಅಂಕಿ ಅಂಶಗಳನ್ನು ಹಿಂದಿನ ಪುಟಗಳಲ್ಲಿ ನೀಡಿರುವೆ, ರೈಲ್ವೆ ಮೂಲಕ ಶೇ. 70 ರಷ್ಟು ರಸಗೊಬ್ಬರಗಳು ಸಾಗಾಣಿಕೆಯಾದರೆ, ರಸ್ತೆ ಸಾರಿಗೆ ಮೂಲಕ ಶೇ. 25 ರಷ್ಟು ಶೇ. 2 ರಷ್ಟು ಹಡಗುಗಳ ಮೂಲಕ ಸಾಗಾಣಿಕೆಯಾಗಿದೆ. ರೈಲ್ವೆ ಸಾಗಾಣಿಕೆ ಕೆಲವು ನಗರ ಪ್ರದೇಶಗಳಿಗಳಷ್ಟೇ

ಸೀಮಿತಗೊಂಡಿದ್ದರೆ ರಸ್ತೆ ಸೌಲಭ್ಯ ರೈಲ್ವೆಗಿಂತ ವಿಸ್ತತರೂಪದಲ್ಲಿದೆ, ಹಡಗಿನ ವ್ಯವಸ್ಥೆ ಸೀಮಿತ ವ್ಯವಸ್ಥೆಯಾಗಿದೆ. ಒಂದು ಟನ್ ರಸಗೊಬ್ಬರಗಳ ಸಾಗಿಸಲು 100 ಕಿ.ಮೀ. ಗಳಿಗೆ ರೂ. 53.80 ರಷ್ಟು ವೆಚ್ಚ ತಗಲುತ್ತದೆ 200 ಕಿ.ಮೀ.ಗೆ ಮತ್ತು ರೂ. 92.20, 500 ಕಿ.ಮೀ. ಗಳಿಗೆ 201.30, 1000 ಕಿ.ಮೀ. 387.90, 1500 ಕಿ.ಮೀ. ಗಳಿಗೆ ರೂ. 551.30,2000 ಕಿ.ಮೀ 675.10 ಈ ಅಂಕಿ ಅಂಶಗಳ ಮುಖಾಂತರ ನಮಗೆ ತಿಳಿಯುವುದೇನೆಂದರೆ ಇಂತಿಷ್ಟು ದೂರಕ್ಕೆ ಪ್ರಮಾಣದ ರಸಗೊಬ್ಬರ ಸಾಗಿಸಲು ಇಂತಿಷ್ಟು ಬಾಡಿಗೆ ಕೊಡಬೇಕಾಗುತ್ತದೆ. ಕಂಪನಿಗಳು ಕೊಡುವ ಸಾಗಾಣಿಕೆ ಬಾಡಿಗೆ ಕಡಿಮೆ ಪ್ರಮಾಣದಲ್ಲಿದ್ದರು, ಸಾಗಾಣಿಕೆಯ ವೆಚ್ಚ ಶೇ. 30 ಕ್ಕಿಂತ ಹೆಚ್ಚು ಮಾರುಕಟ್ಟೆಯ ವೆಚ್ಚಗಳಲ್ಲಿ ಸೇರುತ್ತದೆ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ, 2001 ರ ಅವಧಿಯಲ್ಲಿ ಪ್ರತಿಯೊಂದು ಕಿ.ಮೀ. ರಿಗೆ ಯೂರಿಯಾ ಸಾಗಾಣಿಕೆಯ ವೆಚ್ಚ ಈ ರೀತಿಯಲ್ಲದೆ 100 ಕಿ.ಮೀ. ರೂ. 74.40 ಟನ್ 200 ಕಿ.ಮೀ. ರೂ. 121.30 / ಟನ್ 500 ಕಿ.ಮೀ. 266.80/ ಟನ್ 1000 ಕಿ.ಮೀ. ರೂ 522 / ಟನ್ 1500 ಕಿ.ಮೀ. ರೂ. 749.30/ ಟನ್ 2000 ಕಿ.ಮೀ. ಗೆ ರೂ. 926.10 / ಟನ್ ಹೀಗೆ 92 ರಿಂದ 2001 ರವರೆಗೆ ಯೂರಿಯಾ ಸಾಗಾಣಿಕೆ ವೆಚ್ಚದಲ್ಲಿ ಗಣನೀಯ ಪ್ರಮಾಮದಲ್ಲಿ ಯೂರಿಯಾ ಸಾಗಣಿಕೆಯ ವೆಚ್ಚ ಏರಿದೆ, ಹೀಗೆ ಯೂರಿಯ ಸಾಗಾಣಿಕೆಯ ವೆಚ್ಚ ಏರಲು ರೈಲ್ವೆ ಸಾಗಾಣಿಕೆಯ ದರಗಳಲ್ಲಿ ಏರಿಕೆ, ಟ್ರಕ್, ಲಾರಿ ಸಾಗಾಣಿಕೆಯ ದರಗಳಲ್ಲಿ ಏರಿಕೆ ಕಾಣಬಹುದು ಇಲ್ಲಿ ನಾವು ರೈಲ್ವೆ ದರಗಳ ಏರಿಕೆಯನ್ನಷ್ಟೆ ದಾಖಲಿಸಿದರೆ 8 ವರ್ಷದ ಅವಧಿಯಲ್ಲಿ ರೈಲ್ವೆ ಸಾಗಾಣಿಕೆಯ ದರದಲ್ಲಿ ಶೇ. 40 ರಿಂದ 50 ರಷ್ಟು ಏರಿಕೆಯಾಗಿದೆ. ಯಾಕೆಂದರೆ ಪ್ರತಿ ವರ್ಷ ಆಯವ್ಯಯದಲ್ಲಿ ಈ ಏರಿಕೆಯನ್ನು ನಾವು ಕಾಣಬಹುದಾಗಿದೆ. ಹೀಗೆ ಏರಿಕೆಯಾಗುವುದರಿಂದ ರಸಗೊಬ್ಬರಗಳ ಬೆಲೆ ಏರಿಕೆಯಾಗದಂತೆ ಇರಲು ಸರಕಾರ ಸಾಗಾಣಿಕೆಯ ವೆಚ್ಚವನ್ನು ಭರಿಸುತ್ತದೆ. ಹೀಗೆ ಸಾಗಾಣಿಕೆಯ ದರ ಭರಿಸುವುದರಿಂದ ರಸಗೊಬ್ಬರಗಳನ್ನು ಮನಸ್ಸಿಗೆ ಬಂದ ಹಾಗೆ, ಬೆಲೆ ಏರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ರಸಗೊಬ್ಬರ ಸಾಗಾಣಿಕೆ ವೆಚ್ಚ ಏರಿದರು ರಸಗೊಬ್ಬರಗಳ ಬೆಲೆ ಏರಲು ಸಾಧ್ಯವಾಗುವುದಿಲ್ಲ.

ಅಧ್ಯಾಯ-7

ರಸಗೊಬ್ಬರ ಮಾರುಕಟ್ಟೆಯ ವಿತರಣಾ ವಾಹಿನಿಗಳು

ಮಾರುಕಟ್ಟೆ ವಿತರಣ ವಾಹಿನಿಗಳ ಅರ್ಥ:

ಮಾರುಕಟ್ಟೆ ವಿತರಣಾ ವಾಹಿಗಳೆಂದರೆ ಉತ್ಪನ್ನ ಉತ್ಪಾದನೆಯಾದ ಮೇಲೆ, ಉತ್ಪಾದಕನಿಂದ ಗ್ರಾಹಕನಿಗೆ ತಲುಪುತ್ತವೆ ಹೇಗೆ, ಯಾವ ರೀತಿಯಲ್ಲಿ ಇವು ಉತ್ಪಾದಕನಿಂದ ಗ್ರಾಹಕನಿಗೆ ತಲುಪುತ್ತವೆ, ಯಾರ ಯಾರ ಮೂಲಕ ಈ ಉತ್ಪನ್ನಗಳು ಗ್ರಾಹಕರಿಗೆ ತಲುಪುತ್ತವೆ. ಉತ್ಪಾದಕರಿಂದ ಗ್ರಾಹಕನಿಗೆ ನೇರವಾಗಿ ತಲುಪಿದರೆ. ಅಲ್ಲಿ ವಿತರಣಾ ವಾಹನಿಗಳು ಇರುವುದಿಲ್ಲ ಆದರೆ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಇಂತಹ ಪ್ರಸಂಗಗಳನ್ನು ಕಾಣುವುದು, ಅಪರೂಪ ಯಾವುದೇ ಉತ್ಪಾಕನಿಂದ ಗ್ರಾಹಕನಿಗೆ ಉತ್ಪನ್ನಗಳು ಮುಟ್ಟಲು ಮಧ್ಯವರ್ತಿಗಳ ಮೂಲಕ ಹೋಗುತ್ತವೆ. ಮಧ್ಯವರ್ತಿಗಳು ಇಬ್ಬರಿರಬಹುದು. ಮೂವರು ಇರಬಹುದು, ನಾಲ್ಕು ಜನ ಇರಬಹುದು. ಹೀಗೆ ಉತ್ಪನ್ನಗಳು ಉತ್ಪಾದಕನಿಂದ ಗ್ರಾಹಕನಿಗೆ ತಲುಪಲು ವಿವಿಧ ಮಧ್ಯವರ್ತಿಗಳನ್ನು ನಾವು ಕಾಣಬಹುದಾಗಿದೆ. ಈ ಮಧ್ಯವರ್ತಿಗಳನ್ನೆ ವಿತರಣ ವಾಹಿನಿಗಳು ಎಂದು ಕರೆಯವುದು. ಈ ವಿತರಣೆ ವಾಹನಿಗಳು ಒಂದೊಂದು ಉತ್ಪನ್ನಕ್ಕೆ ಒಂದೊಂದು ರೀತಿಯಲ್ಲಿರುತ್ತವೆ. ಆದ್ದರಿಂದ ಮಾರುಕಟ್ಟೆ ವಿತರಣ ವಾಹಿನಿಗಳ ಉದ್ದ ಒಂದೊಂದು ಉತ್ಪನ್ನಕ್ಕೂ ವ್ಯತ್ಯಾಸಗೊಳ್ಳುತ್ತ ಹೋಗುತ್ತದೆ. ಹೀಗೆ ವ್ಯತ್ಯಾಸಗೊಳ್ಳುವುದರಿಂದ ಎಲ್ಲ ಉತ್ಪನ್ನಗಳಿಗೂ ಒಂದೇ ಮಾರುಕಟ್ಟೆಯ ವಿತರಣ ವಾಹಿನಿಗಳನ್ನು ಹೊಂದಿರುವುದಿಲ್ಲ. ಉದಾಹರಣೆಗೆ ಆಹಾರ ಧಾನ್ಯಗಳಲ್ಲಿ ವಿತರಣ ವಾಹಿನಿಗಳು, ರೈತರಿಂದ ಗ್ರಾಹಕರಿಗೆ ತಲಪಬೇಕಾದರೆ, ಮೂರು ನಾಲ್ಕು ಮಧ್ಯವರ್ತಿಗಳ ಮೂಲಕ ಹೋಗುತ್ತವೆ. ಮೊದಲು ರೈತರು ನಂತರ ಗ್ರಾಮದ ವ್ಯಾಪಾರಸ್ಥರು, ನಂತರ ಸಗಟು ವ್ಯಾಪಾರಸ್ಥರು ಅಲ್ಲಿಂದ, ಆಹಾರ ಧಾನ್ಯಗಳು ಗ್ರಾಹಕರಿಗೆ ತಲುಪುತ್ತದೆ, ಇಲ್ಲಿ ಆಹಾರ ಧಾನ್ಯಗಳಿಗೆ ಮಾರುಕಟ್ಟೆಯ ವಿತರಣ ವಾಹಿನಿಗಳು ರೈತರು ಗ್ರಾಮದ ವ್ಯಾಪಾರಸ್ಥರು, ಸಗಟು ವ್ಯಾಪಾರದಾರರು, ಅಲ್ಲಿಂದ ಚಿಲ್ಲರೆ ವ್ಯಾಪಾರಸ್ಥರು, ಅಲ್ಲಿಂದ ಗ್ರಾಹಕರು ಹೀಗೆ ಉತ್ಪನ್ನಗಳು ವಿವಿಧ ವಿತರಣ ವಾಹಿನಿಗಳ ಮೂಲಕ ಚಲಿಸುತ್ತವೆ ಹೀಗೆ ವಿತರಣ ವಾಹಿನಿಗಳನ್ನು ನಾವು ಗುರುತಿಸಬಹುದು.

ರಸಗೊಬ್ಬರಗಳಲ್ಲಿ ವಿತರಣ ವಾಹಿನಿಗಳು:

ರಸಗೊಬ್ಬರಗಳಲ್ಲೂ ಸಹ ವಿತರಣ ವಾಹಿನಿಗಳನ್ನು ನಾವು ಗುರುತಿಸಬಹುದಾಗಿದೆ. ಇಲ್ಲಿ ಕಾರ್ಖಾನೆಯಲ್ಲಿ ಉತ್ಪಾದನೆಯಾದ ರಸಗೊಬ್ಬರಗಳನ್ನು ಕಾರ್ಖಾನೆ ಮಾಲೀಕರು, ತಾವೇ ರಸಗೊಬ್ಬರಗಳನ್ನು ರೈತರಿಗೆ ತಲುಪಿಸುವ ಕಾರ್ಯ ನಿರ್ವಹಿಸುವುದಿಲ್ಲ ಹೀಗೆ ಕಾರ್ಯನಿರ್ವಹಿಸುವುದಕ್ಕೆ ಕಾರ್ಖಾನೆ ಮಾಲೀಕರಿಗೂ ಸಹ ಇಚ್ಛೆ ಇಲ್ಲ. ಏಕೆಂದರೆ ಉತ್ಪಾದಿಸಿದ ರಸಗೊಬ್ಬರಗಳನ್ನು ರೈತರಿಗೆ ಅಥವಾ ಗ್ರಾಹಕರಿಗೆ ಮುಟ್ಟಿಸುವ ಜವಾಬ್ದಾರಿಯನ್ನು ಸಹಕಾರಿ ಸಂಘಗಳಿಗೂ ಅಥವಾ ಖಾಸಗಿ ಮಾರಾಟದಾರರಿಗೂ ವಹಿಸಲಾಗುತ್ತದೆ. ಇಲ್ಲಿ ರಸಗೊಬ್ಬರ ಕಾರ್ಖಾನೆಗಳು ಅಲ್ಪ ವೆಚ್ಚದಲ್ಲಿ ರಸಗೊಬ್ಬರಗಳನ್ನು ರೈತರಿಗೆ

ಮುಟ್ಟಿಸಲು, ತಮ್ಮಿಂದ ಸಾಧ್ಯವಿಲ್ಲ, ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ತಾವೆ ಚಿಲ್ಲರೆ ಮಳಿಗೆಗಳನ್ನು ತೆರೆದು ಇವುಗಳ ಮೂಲಕ ರಸಗೊಬ್ಬರಗಳನ್ನು ರೈತರಿಗೆ ಮುಟ್ಟಿಸುವುದು ದುಬಾರಿ ಎಂಬುದೇ, ಕಾರ್ಖಾನೆ ಮಾಲೀಕರ ಅನಿಸಿಕೆ, ಆದ್ದರಿಂದ ರಸಗೊಬ್ಬರ ಉತ್ಪಾದಕರು ಮಾರುಕಟ್ಟೆ ವಿತರಣ ವಾಹಿನಿಗಳ ಮೇಲೆ ಹೆಚ್ಚು ಅವಲಂಬಿತರಾಗಿರುತ್ತಾರೆ. ಹೀಗೆ ಅವಲಂಬಿತವಾಗುವುದರ ಮೂಲಕ, ಬಹಳ ಪರಿಮಾಮಕಾರಿಯಾಗಿ ರಸಗೊಬ್ಬರಗಳನ್ನು ಕಾರ್ಖಾನೆಯಿಂದ ರೈತರಿಗೆ ತಲುಪಿಸಬಹುದು. ಆದ್ದರಿಂದ ರಸಗೊಬ್ಬರಗಳ ಕಾರ್ಖಾನೆಗಳ ಮಾಲೀಕರು ರಸಗೊಬ್ಬರಗಳನ್ನು ಉತ್ಪಾದಿಸಿ, ಅದನ್ನು ವಿವಿಧ ಮಧ್ಯವರ್ತಿಗಳ ಮೂಲಕ ಗ್ರಾಹಕರಿಗೆ ಅಂದರೆ ರೈತರಿಗೆ ತಲುಪಿಸುತ್ತಾರೆ. ಹೀಗೆ ತಲುಪಿಸುವುದರ ಮೂಲಕ ರಸಗೊಬ್ಬರಗಳ ವಿತರಣೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತಾರೆ, ಹೀಗೆ ಅತ್ಯಂತ ಪರಿಣಾಮಕಾರಿಯಾಗಿ ಸ್ವಂತ ವಿತರಣಾ ಮಳಿಗೆಗಳನ್ನು ಹೊಂದುವುದರ ಮೂಲಕ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ರಸಗೊಬ್ಬರ ಉತ್ಪಾದಕರಿಗೆ, ವಿತರಣಾ ವಾಹಿನಿಗಳು ಅತ್ಯಂತ ಮುಖ್ಯವಾಗುತ್ತದೆ. ಇದು ಕಡಿಮೆ ವೆಚ್ಚದಲ್ಲಿ ರೈತರಿಗೆ ರಸಗೊಬ್ಬರಗಳ ತಲುಪಲು ಸಾಧ್ಯವಾಗುತ್ತದೆ.

ಮಾರುಕಟ್ಟೆಯ ವಿತರಣಾ ವಾಹಿನಿಗಳು ರಸಗೊಬ್ಬರಗಳಲ್ಲಿ ಉದ್ದವಿದೆ, ಇಲ್ಲಿ ಉತ್ಪಾದಕರು ಉತ್ಪಾದಿಸಿದ ರಸಗೊಬ್ಬರ ಸಹಕಾರಿ ಸಂಘಗಳ ಮೂಲಕ ಹಾಗೂ ಖಾಸಗಿ ಸಗಟು ವ್ಯಾಪಾರಿಗಳ ಮೂಲಕ ರೈತರಿಗೆ ತಲಪುತ್ತದೆ. ಸಹಕಾರಿ ಸಂಘಗಳ ಮೂಲಕ ರಸಗೊಬ್ಬರಗಳು ರಾಜ್ಯ ಮಾರುಕಟ್ಟೆ ಮಂಡಳಿಗೆ ಬರುತ್ತವೆ. ಅಲ್ಲಿಂದ ಜಿಲ್ಲಾ ಸಹಕಾರ ಸಂಘಗಳಿಗೆ ಹೋಗುತ್ತವೆ. ಅಲ್ಲಿಂದ ಪ್ರಾಥಮಿಕ ಸಹಕಾರಿ ಸಂಘಗಳಿಗೆ ತಲುಪುತ್ತವೆ. ಈ ರೀತಿ ಸಂರಚನೆ ಹೊಂದಿರುವ ಸಹಕಾರಿ ಸಂಘಗಳ ಮೂಲಕ ರೈತರಿಗೆ ತಲುಪುತ್ತದೆ. ರಸಗೊಬ್ಬರ ವಿತರಣಾ ವಾಹಿನಿಗಳು ಒಂದು ಕಾರ್ಖಾನೆಗೂ ಒಂದೊಂದು ರೀತಿಯಲ್ಲಿರುತ್ತವೆ. ಉತ್ಪಾದಕರು ವಿತರಣಾ ವಾಹಿನಿಗಳು ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂಬುದನ್ನು ಬಯಸುತ್ತಾರೆ. ಉತ್ಪಾದಕರು ವಿತರಣಾವಾಹಿನಿಗಳು ಕಾರ್ಯ ನಿರ್ವಹಿಸುವುದನ್ನು ಈ ಕೆಳಗಿನಂತೆ ನಡೆಯಬೇಕೆಂದು ಇಚ್ಚಿಸುತ್ತಾರೆ.

ಅ) ಬೃಹತ್ ಪ್ರಮಾಣದ ರಸಗೊಬ್ಬರಗಳನ್ನು ಸಣ್ಣಸಣ್ಣ ಬಳಕೆದಾರರಿಗೆ ಅನುಕೂಲಕರವಾಗುವಂತೆ ವಿಭಜಿಸುವುದು.

ಆ) ಉಪ ವಿತರಣೆ ಮತ್ತು ಉಪ ವಿಂಗಡನೆ, ಇಲ್ಲಿ ಉಪ ವಿತರಕರಿಗೆ ಮಾರುವುದು, ಮರು ಸಾಗಾಣಿಕೆ ರಸಗೊಬ್ಬರಗಳ ಕೈ ನಿರ್ವಹಣೆ, ಲೆಖ್ಖ ಇಡುವುದು. ದಾಸ್ತಾನಿಗೆ ಸಂಬಂಧಿಸಿದಂತೆ ದಾಸ್ತಾನಿಗೆ ಹಣ ನೆರವು ನೀಡುವುದು, ರಿಸ್ಕನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮಾರಾಟ ಶೀಲತೆಯನ್ನು ಉತ್ತೇಜಿಸುವುದು ಮಾರಾಟ ಪೂರ್ವ ಹಾಗೂ ಮಾರಾಟೋತ್ತರ ಸೇವೆಗಳನ್ನು ನೀಡುವುದು.

ಮಾರಾಟವನ್ನು ಉತ್ತೇಜಿಸುವುದು. ಕಾರ್ಖಾನೆ ಮತ್ತು ರೈತರ ನಡುವೆ ಬೆಲೆ ಬಗ್ಗೆ ಕಾರ್ಯ ನಿರ್ವಹಿಸುವುದು ಇತ್ಯಾದಿಗಳಾಗಿವೆ.

ರಸಗೊಬ್ಬರ ಮಾರಾಟದಲ್ಲಿ ಮಾರಾಟ ವಾಹಿನಿಗಳು ಗಣನೀಯ ಪ್ರಮಾಣದ ಉದ್ದವಿದೆ. ಉತ್ಪನ್ನಗಳು ಎರಡು ಸ್ಥರದಲ್ಲಿ ಅಥವಾ ಮೂರು ನಾಲ್ಕು ಸ್ಥರದ ಲ್ಲಿ ಚಲಿಸುತ್ತವೆ. ಆದ್ದರಿಂದ ರಸಗೊಬ್ಬರಗಳು ಉತ್ಪಾದಕನಿಂದ ಗ್ರಾಹಕನವರೆಗೂ ಗಣನೀಯ ಸಂಖ್ಯೆಯ ಮಧ್ಯವರ್ತಿಗಳ ಮೂಲಕ ಚಲಿಸುತ್ತವೆ ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ.

ಸಹಕಾರ ವಿತರಣವಾಹಿನಿ ಮತ್ತು ರಸಗೊಬ್ಬರಗಳು:

ಇಲ್ಲಿ ಬಹು ಸ್ತರ ವಾಹಿನಿಗಳಿವೆ. ಬಹು ಸ್ತರವಾಹಿನಿಗಳು ಸಹಕಾರ, ಆಗ್ರೋ ಕೈಗಾರಿಕೆ ಸಂಸ್ಥೆ ಖಾಸಗಿ ವಿತರಣೆಯ ಮುಂತಾದವುಗಳ ಮೂಲಕ ಹಂಚಲ್ಪಡುತ್ತದೆ. ಇಲ್ಲಿ ರಸಗೊಬ್ಬರ ಉತ್ಪಾದಕರು ಬಹು ಸ್ತರ ವಾಹಿನಿ ವಿತರಣಾ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ. ರಸಗೊಬ್ಬರ ಮಾರಾಟಗಾರರು ಬಹು ಬ್ರ್ಯಾಂಡ್ ಮಾರಾಟವನ್ನು ಅಳವಡಿಸಿಕೊಂಡಿದ್ದು ಪ್ರತಿಯೊಬ್ಬ ವಿತರಕರು ವಿವಿಧ ಕಾರ್ಖಾನೆಗಳು ಉತ್ಪಾದಿಸಿದ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ, ಹೀಗೆ ಬಹು ಬ್ರ್ಯಾಂಡ್ ಗಳ ರಸಗೊಬ್ಬರಗಳನ್ನು ಮಾರಾಟ ಮಾಡುವುದರಿಂದ ರೈತರಿಗೆ ನಾನಾ ರೀತಿಯ ಆಯ್ಕೆಗಳನ್ನು ವಿತರಕರು ತೆರೆದಿಡುತ್ತಾರೆ, ಹೀಗೆ ಆಯ್ಕೆಗಳನ್ನು ತೆರೆದಿಟ್ಟ ವಿತರಕರು ಲಾಭವನ್ನ ಸಹ ಮಾಡುತ್ತಾರೆ, ರೈತರು ಸಹ ಒಂದೇ ಬ್ರಾಂಡ್‌ಗೆ ಗ್ರಾಹಕರಾಗುವ ಬದಲು ವಿವಿಧ ಬ್ರಾಂಡ್ ಗಳನ್ನು ಇಷ್ಟ ಪಡುತ್ತಾರೆ ಹೀಗೆ ರೈತರ ಅಭಿರುಚಿಗೆ ಅನುಗುಣವಾಗಿ ವಿತರಕರು ಉತ್ಪನ್ನಗಳನ್ನು ನೀಡುತ್ತಾರೆ. ರಸಗೊಬ್ಬರಗಳ ಉತ್ಪಾದಕರು ಬಹು ಸ್ತರ ವಾಹಿನಿಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟಾರೆ, ವಿತರಕರು ಬಹು ಬ್ರಾಂಡ್ ಗಳಿಗೆ ಹೆಚ್ಚು ಒತ್ತು ಕೊಡುತ್ತಾರೆ. ಆದರೆ ರಸಗೊಬ್ಬರಗಳಲ್ಲಿ ಮಾರುಕಟ್ಟೆಯ ವಿತರಣಾ ವಾಹಿನಿಗಳು ವೈವಿಧ್ಯಮಯವಾಗಿರುವುದರಿಂದ ಉತ್ಪಾದಕರಿಗೆ ರಸಗೊಬ್ಬರಗಳ ವಿತರಣೆ ಅಷ್ಟು ಕಷ್ಟಕರವಾಗುವುದಿಲ್ಲ ಆದ್ದರಿಂದ ಮಾರುಕಟ್ಟೆಯ ವಿತರಣ ವಾಹಿನಿಗಳು ರಸಗೊಬ್ಬರಗಳಲ್ಲಿ ಗಣನೀಯ ಪ್ರಮಾಣದ ಉದ್ದವನ್ನು ಹೊಂದಿವೆ. ಮಾರುಟ್ಟೆಯ ವಿತರಣಾ ವಾಹಿನಿಗಳಲ್ಲಿ ಸಹಕಾರಿ ಹಾಗೂ ಖಾಸಗಿ ವ್ಯಾಪಾರಸ್ಥರು ಪ್ರಮುಖ ಪಾತ್ರವನ್ನು ವಹಿಸುತ್ತಾ ಬಂದಿದ್ದಾರೆ. ರಸಗೊಬ್ಬರಗಳ ಮಾರುಕಟ್ಟೆಯಲ್ಲಿ ಶೇ. 50 ರಷ್ಟು ಸಹಕಾರಿ ಸಂಘಗಳ ಮೂಲಕ ರಸಗೊಬ್ಬರಗಳ ಮಾರುಕಟ್ಟೆಯ ನಡೆಯುತ್ತದೆ. 1995 ರವರೆಗೆ 79460 ಸಹಕಾರಿ ಸಂಘಗಳು ಕೆಲಸ ಮಾಡುತ್ತಿದ್ದವು. ಇದು ಒಟ್ಟು ರಸಗೊಬ್ಬರಗಳ ಮಾರುಕಟ್ಟೆಯಯ ಶೇ. 31 ರಷ್ಟು ಈ ಸಹಕಾರಿ ಸಂಘಗಳು ರೈತರಿಗೆ ರಸಗೊಬ್ಬರಗಳನ್ನು ತಲುಪಿಸುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತಾ ಬಂದಿವೆ. ಈ ಸಹಕಾರಿ ಸಂಘಗಳು ಬಹುತೇಕ ಎಲ್ಲಾ ಗ್ರಾಮಗಳಲ್ಲೂ ಕಾಣಸಿಗುತ್ತವೆ. ಆದದರಿಂದ ಇವು ಕಾರ್ಯ ನಿರ್ವಹಣಾ ಸಾಮರ್ಥ್ಯ ಅತ್ಯುತ್ತಮವಾದದ್ದು. ಹೀಗೆ ಅತ್ಯುತ್ತಮವಾದ ಕಾರ್ಯ ನಿರ್ವಹಣಾ ಸಾಮರ್ಥ್ಯವ್ವನು ಹೊಂದಿರುವ ಸಹಕಾರಿ ಸಂಘಗಳು ಹಲವು ಆಂತರಿಕ ಶಕ್ತಿಯನ್ನು ಹೊಂದಿವೆ. ಈಗಾಗಲೆ ತಿಳಿದಿರುವ ಇವು ರಾಷ್ಟ್ರವ್ಯಾಪಿ

ಉದ್ದಗಲಕ್ಕೂ ಹರಡಿಕೊಂಡಿವೆ. ರಾಷ್ಟ್ರಾದ್ಯಂತ ಬಹುತೇಕ ಗ್ರಾಮಗಳಲ್ಲಿ ಈ ಸಹಕಾರಿ ಸಂಘಗಳು ಹರಡಿಕೊಂಡಿವೆ. ಶೇ. 45 ರಷ್ಟು ಗ್ರಾಮೀಣ ಕುಟುಂಬಗಳು ಈ ಸಹಕಾರಿ ಸಂಘಗಳಿಗೆ ಸದಸ್ಯರಾಗಿದ್ದಾರೆ, ಈ ಸಹಕಾರಿಗಳು ರೈತರಿಗೆ ಒಳ್ಳೆ ಸೇವೆಯನ್ನು ಕೊಡುತ್ತದೆಂದು ಹೇಳಲಾಗುವುದಿಲ್ಲ. ಹೀಗೆ ಹೇಳಲಾಗುವುದರಿಂದ ಕೆಲವು ಕಡೆ ಒಳ್ಳೆ ಸೇವೆಗಳನ್ನು ಇನ್ನು ಕೆಲವು ಕಡೆ ಅಂತಹ ಹೇಳಿಕೊಳ್ಳುವಂತ ಸೇವೆಯನ್ನು ನೀಡುವುದಿಲ್ಲ ಆದರೆ ಇವುಗಳ ಆಂತರಿಕ ಶಕ್ತಿಯೆಂದರೆ ಬಹಳಷ್ಟು ಸಹಕಾರಿ ಸಂಘಗಳು ತಮ್ಮದೇ ಆದ ದಾಸ್ತಾನು ಮಳಿಗೆಗಳನ್ನು ಹೊಂದಿರುವುವು ಈ ದಾಸ್ತಾನು ಮಳಿಗೆಗಳು ಹೊಂದಿರುವುದರಿಂದ ಇವು ರಸಗೊಬ್ಬರಗಳನ್ನು ಪರಿಣಾಮಕಾರಿಯಾಗಿ ವಿತರಿಸಬಹುದು. ಆದ್ದರಿಂದ ಸಹಕಾರಿ ಸಂಘಗಳು, ರಸಗೊಬ್ಬರಗಳ ವಿತರಣೆಯಲ್ಲಿ ಗಣನೀಯ ಪಾತ್ರವನ್ನು ನಿರ್ವಹಿ ಸುತ್ತವೆ. ಇವು 40000 ಕ್ಕೂ ಹೆಚ್ಚು ದಾಸ್ತಾನು ಮಳಿಗೆಗಳನ್ನು ಹೊಂದಿವೆ. ಹೀಗೆ ದಾಸ್ತಾನು ಮಳಿಗೆಗಳನ್ನು ಹೊಂದಿರುವುದರಿಂದ ಇವು ಸುಸಜ್ಜಿತ ಮಾರುಕಟ್ಟೆಯ ಜಾಲವನ್ನು ಹೊಂದಿವೆ, ಹೀಗೆ ಸುಸಜ್ಜಿತ ಮಾರುಕಟ್ಟೆಯ ಜಾಲವನ್ನು ಹೊಂದಿರುವುದರಿಂದ ಹೆಚ್ಚು ಕಾರ್ಖಾನೆ ಮಾಲೀಕರು, ತಮ್ಮ ರಸಗೊಬ್ಬರಗಳ ವಿತರಣೆಗೆ, ಸಹಕಾರಿ ಸಂಘಗಳನ್ನು ಆಯ್ಕೆ ಮಾಡಿಕೊಳ್ಳುವುದು, ಹೀಗೆ ಆಯ್ಕೆ ಮಾಡಿಕೊಂಡ ಸಂಸ್ಥೆಗಳಿಗೆ ರಸಗೊಬ್ಬರಗಳನ್ನು ಸರಬರಾಜು ಮಾಡುತ್ತಾರೆ. ಸಹಕಾರಿ ಸಂಘವು ಮಾರಾಟಸ್ತರ ಸ್ವರೂಪವನ್ನು ಪಡೆದಿದೆ. ಈ ಮೂರು ಸ್ತರದ ಸ್ವರೂಪ.

ರಾಜ್ಯಮಟ್ಟದ ಸಹಕಾರಿ ಸಂಸ್ಥೆ ರಾಜ್ಯ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರಿ ಸಂಸ್ಥೆ, ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಸಹಕಾರ ಸಂಸ್ಥೆ. ಇಲ್ಲಿ ರಾಜ್ಯ ಮಟ್ಟದಲ್ಲಿರುವ ಸಹಕಾರಿ ಸಂಸ್ಥೆಯು ದಾಸ್ತಾನು ಮಳಿಗೆಗಳನ್ನು ಹೊಂದಿರುತ್ತವೆ. ಇವು ಉತ್ಪಾದಕರಿಂದ ರಸಗೊಬ್ಬರ ಪೂರೈಕೆಯನ್ನು ಪಡೆಯುತ್ತಾರೆ. ನಂತರ ತಮ್ಮ ಗೋದಾಮುಗಳಲ್ಲಿ ದಾಸ್ತಾನೀಕರಿಸುತ್ತಾರೆ. ಅಲ್ಲಿ ದಾಸ್ತಾನಿಕರಿಸಿದ ನಂತರ ಇದನ್ನು ಜಿಲ್ಲಾ ಮಟ್ಟದ ಸಹಕಾರಿ ಸಂಘಗಳಿಗೆ ವರ್ಗಾಯಿಸುತ್ತಾರೆ. ಇಲ್ಲಿಂದ ಇವು ಪ್ರಾಥಮಿಕ ಸಹಕಾರಿ ಸಂಘಗಳಿಗೆ ವರ್ಗಾವಣೆಯಾಗುತ್ತದೆ. ಹೀಗೆ ವರ್ಗಾವಣೆಯಾದ ರಸಗೊಬ್ಬರಗಳನ್ನು ಬೇಡಿಕೆಗನುಗುಣವಾಗಿ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಸಂಗ್ರಹಿಸಲಾಗುತ್ತದೆ., ಹೀಗೆ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಸಂಗ್ರಹಿಸಿಡಲಾದ ರಸಗೊಬ್ಬರಗಳನ್ನು ರೈತರಿಗೆ ವಿತರಿಸಲಾಗುತ್ತದೆ. ಆದ್ದರಿಂದ ರಸಗೊಬ್ಬರಗಳು ಸಹಕಾರಿ ಸಂಸ್ಥೆಗಳ ಮೂಲಕ ವಿತರಿಸಿದರೆ ಮೂರು ಹಂತಗಳಲ್ಲಿ ಚಲಿಸಬೇಕಾಗುತ್ತದೆ. ರಾಜ್ಯ ಮಟ್ಟದ ಸಹಕಾರ ಸಂಘ, ಜಿಲ್ಲಾ ಸಹಕಾರಿ ಸಂಘ, ಪ್ರಾಥಮಿಕ ಸಹಕಾರಿ ಸಂಘ, ಇಲ್ಲಿ ಎಲ್ಲ ತರಹದ ಬ್ರ್ಯಾಂಡುಗಳ ರಸಗೊಬ್ಬರಗಳನ್ನು ಮಾರಾಟ ಮಾಡಲಾಗುತ್ತದೆ. ಇಲ್ಲಿನ ಸಹಕಾರ ಸಂಘಗಳ ವಿತರಕರು, ಕೇವಲ ಕೆಲವೇ ಬ್ರ್ಯಾಂಡ್ ಗಳನ್ನು ಉತ್ತೇಜಿಸದೆ. ಎಲ್ಲ ಬ್ರ್ಯಾಂಡ್ ಗಳನ್ನು ಉತ್ತೇಜಿಸುತ್ತಾರೆ. ಆದ್ದರಿಂದ ರಾಜ್ಯ ಮಟ್ಟದ ಸಹಕಾರಿ ಸಂಘ ಸಗಟು ವ್ಯಾಪಾರಿಯಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ನಂತರ ಇದು ಬೇಡಿಕೆಗನುಗುಣವಾಗಿ,

ಪ್ರಾಥಮಿಕ ಸಹಕಾರಿ ಸಂಘಗಳಿಗೆ ರಸಗೊಬ್ಬರಗಳನ್ನು ಸರಬರಾಜು ಮಾಡಲಾಗುತ್ತದೆ. ಸಹಕಾರಿ ಸಂಘಗಳು, ಗ್ರಾಮಾಂತರ ಪ್ರದೇಶಗಳಲ್ಲಿ ಸಶಕ್ತವಾಗಿ ಬೆಳೆದಿರುವುದರಿಂದ ಹಾಗೂ ಇವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ತರಹದ ಗ್ರಾಹಕ ಉತ್ಪನ್ನಗಳನ್ನು ಸರಕಾರ ತಲುಪಿಸಬಹುದು. ರಸಗೊಬ್ಬರಗಳು ಖಾಸಗಿ ಕಂಪನಿಗಳಿಂದ ಉತ್ಪಾದಿಸಿದರು, ಇವರನ್ನು ಸಹಕಾರಿ ಸಂಘಗಳ ಸಂಪರ್ಕ ಸಾಧಿಸುವುದರ ಮೂಲಕ ರಸಗೊಬ್ಬರ ಕಾರ್ಖಾನೆಗಳು ತಮ್ಮ ಉತ್ಪನ್ನವನ್ನು ಅತ್ಯಂತ ಸುಲಭವಾಗಿ, ರೈತರಿಗೆ ತಲುಪಿಸುವ ನೀತಿಯನ್ನು ರೂಪಿಸಿಕೊಂಡಿವೆ. ಹೀಗೆ ಸಹಕಾರಿ ಸಂಘಗಳ ಸ್ವರೂಪ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ; ಕೆಲವು ರಾಜ್ಯಗಳಲ್ಲಿ ನಾಲ್ಕು ಸ್ತರದ ಸಹಕಾರಿ ಸಂಘಗಳಿದ್ದರೆ, ಕೆಲವು ರಾಜ್ಯಗಳಲ್ಲಿ ಮೂರು ಸ್ತರದ ಸಹಕಾರಿ ಸಂಘಗಳಿವೆ. ಇನ್ನೂ ಕೆಲವು ರಾಜ್ಯಗಳಲ್ಲಿ ಎರಡು ಸ್ತರದ ಸಹಕಾರಿ ಸಂಘಗಳಿವೆ. ಕರ್ನಾಟಕದಲ್ಲಿ ಮೂರು ಸ್ತರದ ಸಹಕಾರಿ ಸಂಘಗಳಿರುವುದು. ಇಲ್ಲಿ ಯಾವುದೇ ಉತ್ಪನ್ನಗಳನ್ನು ರೈತರಿಗೆ ಮುಟ್ಟಿಸುವುದು ಬಹಳ ಸುಲಭವಾದದ್ದು, ಆದ್ದರಿಂದ ರಸಗೊಬ್ಬರ ಕಾರ್ಖಾನೆಗಳಿಗೆ ರಾಜ್ಯ ಸಹಕಾರಿ ಸಂಘಗಳು ಸಗಟು ವ್ಯಾಪಾರಿಗಳಾಗಿ ಪರಿಣಮಿಸುತ್ತದೆ. ಇವುಗಳ ಮೂಲಕ ಇದು ನೇರವಾಗಿ ಪ್ರಾಥಮಿಕ ಸಹಕಾರಿ ಸಂಘಗಳಿಗೆ ತಲುಪುತ್ತದೆ. ಅಲ್ಲಿಂದ ಇದು ರೈತರಿಗೆ ತಲುಪುತ್ತದೆ. ಹೀಗೆ ಸಹಕಾರಿ ಸಂಘಗಳ ಮೂಲಕ ತಲುಪಿಸುವುದು ರೂಢಿಗತಗೊಂಡಿದೆ, ಆದ್ದರಿಂದ ಸಹಕಾರಿ ಸಂಘಗಳು ತಮ್ಮ ಪಾಲಿನ ಹಣವನ್ನು ರಸಗೊಬ್ಬರ ಕಾರ್ಖಾನೆಗಳ ಮಾಲೀಕರಿಗೆ ಹಾಕುತ್ತಾರೆ, ಹೀಗೆ ಒಂದು ಚೀಲಕ್ಕೆ ಇಂತಿಷ್ಟು ಪಾಲುಗಳಿಕೆ ಆದಾಯವನ್ನು ಹೇರಿದ ಮೇಲೆ ರಸಗೊಬ್ಬರಗಳನ್ನು ರೈತರಿಗೆ ತಲುಪಿಸುತ್ತಾ ಸಹಕಾರಿ ಸಂಘಗಳೆಂಬುದು ರಸಗೊಬ್ಬರಗಳ ಮಾರಾಟದಲ್ಲಿ ಸಶಕ್ತ ವಿತರಣಾ ವಾಹಿನಿ ಆಗಿದೆಂಬುದನ್ನು ಈಗಾಗಲೆ ನಾವು ನೋಡಿದ್ದೇವೆ. ಸಹಕಾರಿ ಸಂಘಗಳು ಮೂಲಭೂತವಾಗಿ ಒಬ್ಬರಿಗೊಬ್ಬರು ಸಹಾಯಕವಾಗಿರಬೇಕು ಎಂಬ ತತ್ವದಿಂದ ಪ್ರಾರಂಭವಾಗಿರುವುದರಿಂದ, ಇವರು ಯಾವುದೇ ಮೋಸ ದಗಲ್ಬಾಜಿತನ ಇಲ್ಲದೆ ನಿಸ್ಪೃಹವಾಗಿ ಕೆಲಸ ಮಾಡಬೇಕೆಂಬ ತತ್ವದಿಂದ ಪ್ರಾರಂಭವಾಗಿರುವುದರಿಂದ,ಇವುಗಳ ಜಾಲ ರಸಗೊಬ್ಬರ ಕಂಪನಿಗಳಿಗೆ ಆಕರ್ಷಕವಾಗಿ ಕಾಣುತ್ತದೆ. ಆದ್ದರಿಂದ ರಸಗೊಬ್ಬರ ಕಾರ್ಖಾನೆ ಮಾಲೀಕರು ತಮ್ಮ ಉತ್ಪನ್ನಗಳನ್ನು ಸಹಕಾರಿ ಸಂಘದ ಜಾಲದ ಮೂಲಕ ರೈತರಿಗೆ ತಲುಪಿಸುವುದು ಸುಲಭ ಎಂದು ಮನವರಿಕೆಯಾಗಿದೆ. ಏಕೆಂದರೆ ಸಹಕಾರಿ ಸಂಘಗಳು ಯಾವುದೇ ರೀತಿಯಲ್ಲಿ ಗುಣಾತ್ಮಕತೆಗೆ ಹಾದಿ ಮಾಡಿಕೊಳ್ಳದೆ ಕಾರ್ಖಾನೆ ಮಾಲೀಕರ ಇಂಗಿತಕ್ಕನುಗುಣವಾಗಿ ರಸಗೊಬ್ಬರಗಳನ್ನು ರೈತರಿಗೆ ತಲುಪಿಸುತ್ತಾರೆ. ಹಾಗೇನಾದರೂ ಸಹಕಾರಿ ಸಂಘಗಳಲ್ಲಿ ಗುಣಾತ್ಮಕತೆಗೆ ಕುಂದುಂಟಾದರೆ ಅದಕ್ಕೆ ಸಹಕಾರಿ ಸಂಘದ ಸದಸ್ಯರೆ ಜವಾಬ್ದಾರರು ; ಆದ್ದರಿಂದ ಈ ಜವಾಬ್ದಾರಿಯಿಂದ ನುಣಚಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಗುಣಾತ್ಮಕತೆ ನಿರ್ವಹಣೆಯಿಂದ ಸಹಕಾರಿ ಸಂಘಗಳು ರಾಜಿ ಮಾಡಿಕೊಳ್ಳುವುದಿಲ್ಲ. ಆದರೆ ಅಂತಹ ಮೋಸದ

ವ್ಯವಹಾರವೇನಾದರು ನಡೆದರೆ ಅಂತಹ ವ್ಯವಹಾರವನ್ನು ಬಯಲಿಗೆಳೆಯಲು ಸಹಕಾರಿ ಸಂಘದ ಸದಸ್ಯರೇ ಸಿದ್ಧರಾಗಿರುತ್ತಾರೆ., ಇಲ್ಲಿ ಗುಂಪುಗುಳಿತನ ಇರಬಹುದು. ರಾಜಕೀಯ ನುಸುಳಿರಬಹುದು. ಆದರೆ ಸಹಕಾರಿ ಸಂಘಗಳು ತಮ್ಮ ಕಾರ್ಯದಕ್ಷತೆಯಿಂದ ಆಚೆ ಬರಲು ಸಾಧ್ಯವಿಲ್ಲ.

ಖಾಸಗಿ ವಿತರಣವಾಹಿನಿ ಮತ್ತು ರಸಗೊಬ್ಬರಗಳು:

ಖಾಸಗಿ ಮಳಿಗೆಗಳ ಮೂಲಕ ರಸಗೊಬ್ಬರಗಳನ್ನು ವಿತರಣೆ ಮಾಡುವ ಕಾರ್ಖಾನೆ ಮಾಲೀಕರು ಈ ವಲಯದ ಬಗ್ಗೆ ಹೆಚ್ಚು ಉದಾರತೆಯಿಂದ ಹಾಗೂ ಹೆಚ್ಚು ಸಡಿಲವಾಗಿ ನಡೆದುಕೊಳ್ಳಬಹುದು. ಖಾಸಗಿ ವಿತರಕರಲ್ಲಿ ಎರಡು ರೀತಿಯ ಅಥವಾ ಬಹು ಮಾರುಕಟ್ಟೆ ವಿತರಣಾ ಸ್ತರಗಳಿರುತ್ತವೆ. ಒಮ್ಮೆ ಎರಡು ಸ್ತರದ ವಿತರಣಾ ವ್ಯವಸ್ಥೆ ಮತ್ತೊಮ್ಮೆ ಮೂರು ಸ್ತರದ ವಿತರಣ ವ್ಯವಸ್ಥೆ ಇರುತ್ತದೆ. ಬಹಳಷ್ಟು ರಸಗೊಬ್ಬರ ಕಾರ್ಖಾನೆಗಳ ಮಾಲೀಕರು ತಮ್ಮ ಅನುಕೂಲಕ್ಕೆ ತಕ್ಕೆ ಹಾಗೆ ಖಾಸಗಿ ವಿತರಕರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ, ಹೀಗೆ ಖಾಸಗಿ ವಿತರಕರೊಂದಿಗೆ ಮಾಡಿಕೊಂಡ ಒಪ್ಪಂದ. ರಸಗೊಬ್ಬರ ಕಾರ್ಖಾನೆ ಮಾಲೀಕರಿಗೂ ಹಾಗೂ ಖಾಸಗಿ ವಿತರಕರಿಗೂ ಇಬ್ಬರಿಗೂ ಎಲ್ಲ ರೀತಿಯಲ್ಲೂ ಅನುಕೂಲಕರವಾಗಿರಬೇಕೆಂಬುದೇ ಆಶಯ. ಆದರೆ ರಸಗೊಬ್ಬರ ಕಾರ್ಖಾನೆಯ ಮಾಲೀಕರು ಈ ಒಪ್ಪಂದಗಳನ್ನು ಬೇಕಾದರೆ ಬದಲಿಸಬಹುದು. ಆ ಸ್ವಾತಂತ್ರ್ಯವಿರುತ್ತದೆ. ವಿತರಕರು ರಸಗೊಬ್ಬರಗಳ ವಿತರಣೆಯಲ್ಲಿ ರಚನಾತ್ಮಕ ಹಾಗೂ ಸಹಕಾರಾತ್ಮಕವಾಗಿ ರಸಗೊಬ್ಬರ ಕಾರ್ಖಾನೆಯ ಮಾಲೀಕರ ಜೊತೆ ವರ್ತಿಸಬೇಕು. ವಿತರಕರನ್ನು ನಂಬಿಕೆಗೆ ಒಳಪಡಿಸಿ ಕೊಳ್ಳಬೇಕು. ಹಾಗೂ ಅವರೊಂದಿಗೆ ಸಡಿಲವಾದ (Flexible) ನಡವಳಿಕೆಗಳನ್ನು ಹೊಂದಿರಬೇಕು. ಹೀಗಿದ್ದಾಗ ಮಾತ್ರ ರಸಗೊಬ್ಬರ ಕಾರ್ಖಾನೆಯ ಮಾಲೀಕರು ಸುಲಭವಾಗಿ ರೈತರಿಗೆ ರಸಗೊಬ್ಬರಗಳನ್ನು ಖಾಸಗಿ ವಿತರಕರ ಮೂಲಕ ತಲುಪಿಸಬಹುದು. ಹೀಗೆ ತಲುಪಿಸಬೇಕಾದರೆ ಜಾಹೀರಾತು ಬೆಲೆ ಹಾಗೂ ಉತ್ಪನ್ನಗಳನ್ನು ಆಕರ್ಷಕ ಚೀಲಗಳಲ್ಲಿ ಅವನ್ನು ತುಂಬಿಸಿದರೆ ಖಾಸಗಿ ವಿತರಕರು ಹೆಚ್ಚು ಉತ್ಸಾಹ ಶೀಲರಾಗುತ್ತಾರೆ. ಏಕೆಂದರೆ ಜಾಹೀರಾತು ಹಾಗೂ ಆಕರ್ಷಕ ಚೀಲಗಳು ರಸಗೊಬ್ಬರ ಗುಣಮಟ್ಟವನ್ನು ಖಾತ್ರಿ ಪಡಿಸುವಂತಹವು, ಇಂತಹ ಬ್ರ್ಯಾಂಡಿನ ರಸಗೊಬ್ಬರಗಳು ಹೀಗಿರುತ್ತವೆ ಎಂಬುದನ್ನು ಸ್ಪಷ್ಟವಾಗಿ ರೈತರಿಗೆ ಸಂವಹಿಸುತ್ತವೆ, ಆದರೆ ಖಾಸಗಿ ವಿತರಕರು ಬಹು ಬ್ರ್ಯಾಂಡಿನ ರಸಗೊಬ್ಬರಗಳನ್ನು ಮಾರಾಟ ಮಾಡುವುದರಿಂದ ರಸಗೊಬ್ಬರಗಳ ಉತ್ಪಾದಕತೆ ಬೇರೆ ಕಾರ್ಖಾನೆಗಳ ಉತ್ಪನ್ನಗಳೊಂದಿಗೆ ಸ್ಪರ್ಧೆಗಿಳಿಯಬೇಕಾಗುತ್ತದೆ. ಹೀಗೆ ಸ್ಪರ್ಧೆಗಳಿಂದ ಜಾಹೀರಾತು ಬೆಲೆಯ ಉತ್ಪನ್ನ ಮಾರಾಟದಲ್ಲಿ ಅಧಿಕ ಪಾತ್ರ ವಹಿಸುವುದು, ಆದರೆ ಖಾಸಗಿ ವಿತರಕರು ಕಂಪನಿಗಳ ಒಂದು ಬೆಲೆಯ ಮೇಲೆ ಶೇಕಡ ಎಷ್ಟು ಕಮೀಷನ್ ಕೊಡುತ್ತಾರೆ ಎಂಬುದನ್ನು ಸಹ ಪರಿಗಣಿಸುತ್ತಾರೆ, ಆದ್ದರಿಂದ ರಸಗೊಬ್ಬರಗಳ ಉತ್ಪಾದಕರು ತಮ್ಮ ಉತ್ಪನ್ನಕ್ಕೆ ಮಾರುಕಟ್ಟೆಯ ಆಕರ್ಷಣೆ ಇಲ್ಲದಿದ್ದರೆ, ಮಾರುಕಟ್ಟೆಯಲ್ಲಿ

ಉತ್ಪನ್ನಗಳು ಹೆಚ್ಚಾಗಿ ಮಾರಾಟ ಮಾಡುವುದಕ್ಕೆ ಅನೇಕ ಕಾರ್ಯತಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ. ಜಾಹೀರಾತು, ಹಾಗೂ ವಿಸ್ತರಣಾ ಶಿಬಿರಗಳು, ಪ್ರಾತ್ಯಕ್ಷಿಕೆಗಳು ಮುಂತಾದ ಕಾರ್ಯತಂತ್ರ ರೂಪಿಸಬೇಕಾಗುತ್ತದೆ. ಪ್ರಾತ್ಯಕ್ಷಿಕೆಗಳಲ್ಲಿ ಆಯ್ದ ರೈತರ ಹೊಲಗಳಲ್ಲಿ ರಸಗೊಬ್ಬರಗಳನ್ನು ಉಪಯೋಗಿಸಿ ರೈತರಿಗೆ ಬೆಳೆಯ ಇಳುವರಿಯ ಮೇಲೆ ಆಗುವ ಪರಿಣಾಮಗಳನ್ನು ತೋರಿಸಬೇಕಾಗುತ್ತದೆ. ಇದರ ಜೊತೆಗೆ ವಿಸ್ತರಣಾ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ಬೆಳೆಯ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಹಾಗೂ ಇವುಗಳ ಜೊತೆ ರಸಗೊಬ್ಬರಗಳ ಪ್ರಾಮುಖ್ಯತೆಯನ್ನು ತಿಳಿ ಹೇಳಬೇಕಾಗುತ್ತದೆ. ಹೀಗೆ ರಸಗೊಬ್ಬರಗಳ ಪ್ರಾಮುಖ್ಯತೆಯನ್ನು ತಿಳಿಹೇಳುವುದರ ಮೂಲಕ ರಸಗೊಬ್ಬರಗಳ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಬಹುದು. ಹೀಗೆ ವಿಸ್ತರಿಸಬೇಕೆಂದರೆ ಇದಕ್ಕೆ ಕಾರ್ಖಾನೆ ಮಾಲೀಕರು ಹಣವನ್ನು ಖರ್ಚು ಮಾಡಲೇಬೇಕಾಗುತ್ತದೆ. ಹಾಗೂ ರಸಗೊಬ್ಬರಗಳು ರೈತರ ಆದಾಯವನ್ನು ಹೆಚ್ಚಿಸುವಲ್ಲಿ ವಹಿಸುವ ಪಾತ್ರವನ್ನು ಹೇಳಬೇಕಾಗುತ್ತದೆ. ಹೀಗೆ ಕಾರ್ಯತಂತ್ರಗಳನ್ನು ಜಾರಿಗೊಳಿಸಲು ಖಾಸಗಿ ವಿತರಕರು ಕಾರ್ಖಾನೆ ವತಿಯಿಂದ ಬರುವ ಅಧಿಕಾರಿಗಳೊಂದಿಗೆ ಸಹಕರಿಸಬೇಕಾಗುತ್ತದೆ. ಅಧಿಕಾರಿಗಳು ಸಹ ಖಾಸಗಿ ವಿತರಕರೊಂದಿಗೆ ಸಹಕರಿಸಬೇಕಾಗುತ್ತದೆ. ಈ ಅಧಿಕಾರಿಗಳಲ್ಲಿ ವಿಸ್ತರಣಾ ತಜ್ಞರು ಮತ್ತು ವಿಷಯ ತಜ್ಞರು ಮುಂತಾದ ಪರಿಣಿತರಿರುತ್ತಾರೆ. ಈ ಪರಿಣಿತರ ತಂಡ ರಸಗೊಬ್ಬರಗಳನ್ನು ಹೇಗೆ ಬಳಸಬೇಕು ಎಷ್ಟು ಪ್ರಮಾಣಾತ್ಮಕವಾಗಿರಬೇಕು., ಯಾವ ಯಾವ ಕಾಲದಲ್ಲಿ ಬಳಸಬೇಕು. ರಸಗೊಬ್ಬರಗಳ ಜೊತೆ ಎಷ್ಟು ಪ್ರಮಾಣದ ನೀರನ್ನು ಕೊಡಬೇಕು. ಹೀಗೆ ಮುಂತಾದ ಅಂಶಗಳನ್ನು ರೈತರಿಗೆ ಗದ್ದೆ , ಹೊಲ ಮಟ್ಟದಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ಮನವರಿಕೆ (Convince) ಮಾಡಬೇಕಾಗುತ್ತದೆ. ಇದು ಖಾಸಗಿ ವಿತರಕರ ಮೂಲಕ ರಸಗೊಬ್ಬರಗಳನ್ನು ವಿತರಿಸುವ ಕಂಪನಿಗಳು ಅನುಸರಿಸುವ ಕಾರ್ಯತಂತ್ರ. ಆದರೆ ಮಾರುಕಟ್ಟೆಯಲ್ಲಿ ಈಗಾಗಲೆ ಪ್ರಚಾರಕ್ಕೆ ಬಂದಿರುವ ರಸಗೊಬ್ಬರದ ಉತ್ಪನ್ನಗಳ ಮಧ್ಯೆ ಹೊಸದಾಗಿ ಮಾರುಕಟ್ಟೆಗೆ ಬಿಡುಗಡೆಯಾದ ರಸಗೊಬ್ಬರಗಳು ಸ್ಪರ್ಧಿಸಬೇಕಾದರೆ, ಅವರ ವಿಸ್ತರಣಾಧಿಕಾರಿಗಳ ಮೂಲಕ ರೈತರ ಪಟ್ಟಿಯನ್ನು ತಯಾರಿಸಿ ಅವರ ಜಮೀನಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಉಪಯೋಗಿಸಿ ನೋಡಿ ಅದರ ಫಲಿತಾಂಶದ ಮೇಲೆ ಈ ರಸಗೊಬ್ಬರಗಳನ್ನು ಬಳಸುವಂತೆ ಹೇಳಬಹುದು. ಆದರೆ ಹಳೆ ಬ್ರ್ಯಾಂಡುಗಳು ಜನಪ್ರಿಯವಾದಷ್ಟು ಹೊಸ ಬ್ರ್ಯಾಂಡ್‌ಗಳು ಜನಪ್ರಿಯವಾಗಲು ಬಹಳಷ್ಟು ಕಾಲಾವಕಾಶ ಬೇಕಾಗಿರುತ್ತದೆ. ಇಂತಹ ಕಾಲಾವಕಾಶ ದಾಟಿದ ಮೇಲೆ ಹೊಸ ಬ್ರ್ಯಾಂಡುಗಳು ಪ್ರಚಲಿತಕ್ಕೆ ಬರಬಹುದು. ಆದ್ದರಿಂದ ಖಾಸಗಿ ವಿತರಕರು, ರಸಗೊಬ್ಬರ Brand ನ ಪ್ರಚಾರದ ಮೇಲೆ ರಸಗೊಬ್ಬರಗಳ ಮಾರಾಟದ ಕಮೀಷನ್ ನಿರ್ಧರಿಸುವುದಕ್ಕೆ ಕಡಿಮೆ ಪ್ರಮಾಣದಲ್ಲಿ ಮಾರಾಟವಾಗುವ ಉತ್ಪನ್ನಕ್ಕೆ ಸ್ವಲ್ಪ ಹೆಚ್ಚು ಕಮೀಷನ್ ಅನ್ನು ಕಂಪನಿಗಳು ಕೊಡಬೇಕಾಗುತ್ತದದೆ. ಹಾಗೆಯೇ ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವ ಬ್ರ್ಯಾಂಡಿಗೆ ವಿತರಕರೆ ದುಂಬಾಲು ಬಿದ್ದು ಕಡಿಮೆ ಕಮೀಷನ್ ಪಡೆದು ಅವರು ಹೆಚ್ಚು ಒಟ್ಟು ಲಾಭವನ್ನು ಪಡೆಯುತ್ತಾರೆ.

ಏಕೆಂದರೆ ಕಡಿಮೆ ಕಮೀಷನ್ ಇದ್ದರು ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವ ಬ್ರ್ಯಾಂಡ್‌ಗಳು ಖಾಸಗಿ ವಿತರಕರಿಗೆ ಅಧಿಕ ಲಾಭ ತರುತ್ತವೆ. ಏಕೆಂದರೆ ವಹಿವಾಟು ಜಾಸ್ತಿ ಆದಷ್ಟು ಆ ರಸಗೊಬ್ಬರ ಖಾಸಗಿ ವಿತರಕರಿಗೆ ಹೆಚ್ಚು ಲಾಭ ತರುತ್ತದೆ. ಹೀಗೆ ಹೆಚ್ಚು ಲಾಭ ತರುವುದರಿಂದ ಖಾಸಗಿ ವಿತರಕರು ಪ್ರಚಲಿತ ಬ್ರ್ಯಾಂಡ್‌ಗಳನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ರಸಗೊಬ್ಬರ ಮಾರುಕಟ್ಟೆಯಲ್ಲಿ ಈಗಾಗಲೆ 20 ಕ್ಕೂ ಹೆಚ್ಚು ರಸಗೊಬ್ಬರಗಳ ಬ್ರ್ಯಾಂಡ್‌ಗಳಿವೆ. ಆದರೂ ಇದರಲ್ಲಿ ಕೆಲವೆ ಬ್ರ್ಯಾಂಡ್ ಗಳು ಮಾತ್ರ ಹೆಚ್ಚು ಮಾರಾಟವಾಗುತ್ತವೆ. ಹೀಗೆ ಮಾರಾಟವಾಗುವುದರಿಂದ ಖಾಸಗಿ ವಿತರಕರು ಈ ಬ್ರಾಂಡ್ ಗಳನ್ನು ಹೆಚ್ಚು ಇಚ್ಚಿಸುತ್ತಾರೆ, ಆದರೆ ಕಂಪನಿ ಮಾಲೀಕರು ತಮ್ಮ ಉತ್ಪನ್ನಗಳನ್ನು ವಿತರಕರಿಗೆ ಮಾರಬೇಕಾದರೆ ಸಗಟು ವ್ಯಾಪಾರಿಗಳಿಗೆ ಮಾರುವುದು ವಾಡಿಕೆ. ತಮ್ಮದೇ ಮಾರಾಟ ಕೇಂದ್ರಗಳನ್ನಿಟ್ಟು ಕೊಂಡು ರಸಗೊಬ್ಬರಗಳನ್ನು ಮಾರಲು ಯಾವ ಕಂಪನಿ ಮಾಲೀಕರು ಇಚ್ಚಿಸುವುದಿಲ್ಲ ಈ ಕಾರಣಕ್ಕಾಗಿ ಕಂಪನಿ ಮಾಲೀಕ ಖಾಸಗಿ ಸಗಟು ವಿತರಕರಿಗೆ ತನ್ನ ಉತ್ಪಾದನೆಯನ್ನು ಮಾರಾಟ ಕ್ಕೊಸ್ಕರ ವರ್ಗಾಯಿಸುತ್ತವೆ. ಹೀಗೆ ವರ್ಗಾಯಿಸುವುದೇ ಸ್ವಂತ ಮಾರಾಟದ ವ್ಯವಸ್ಥೆಗೆ ಆರ್ಥಿಕವಾಗಿ ಪರಿಣಾಮಕಾರಿಯಾದದ್ದು.

ಖಾಸಗಿ ವಿತರಕರಲ್ಲಿ ಎರಡು ವಿಧಗಳಿವೆ, ಒಂದು ಸ್ತರದ ವಿತರಣೆ ಮತ್ತು ಎರಡು ಸ್ತರದ ವಿತರಣೆ, ಇಲ್ಲಿ ರಸಗೊಬ್ಬರ ಕಂಪನಿಗಳವರು ಎರಡರ ಸಾಧಕ ಭಾದಕಗಳನ್ನು ಅಧ್ಯಯನಿಸಿ ಯಾವುದನ್ನು ಆಯ್ಕ ಮಾಡಿಕೊಳ್ಳಬೇಕೆಂದು ನಿರ್ಧರಿಸುತ್ತಾರೆ, ಏಕ ಸ್ತರದ ವಿತರಣೆಯೆಂದರೆ ರಸಗೊಬ್ಬರಗಳ ಕಂಪನಿಗಳ ಮಾಲೀಕರಿಗೆ ಹೆಚ್ಚು ಅನುಕೂಲಕರ ಎಂದು ಭಾವಿಸುತ್ತಾರೆ, ಏಕ ಸ್ತರದಲ್ಲಿ ರಸಗೊಬ್ಬರ ಕಂಪನಿಗಳ ಮಾಲೀಕರು ಮತ್ತು ಚಿಲ್ಲರೆ ಮಾರಾಟಗಾರರ ನಡುವೆ ಸಗಟು ವ್ಯಾಪಾರಿಗಳು ಇರುವುದಿಲ್ಲ. ಹೀಗೆ ಸಗಟು ವ್ಯಾಪಾರಿಗಳನ್ನು ಹೊರಗುಳಿಸುವುದರಿಂದ ಉತ್ಪಾದಕರಿಂದ ಚಿಲ್ಲರೆ ವ್ಯಾಪಾರಿಗಳಿಗೆ ರಸಗೊಬ್ಬರಗಳು ನೇರವಾಗಿ ಬರುತ್ತವೆ. ಇದರಿಂದಾಗಿ ಚಿಲ್ಲರೆ ವ್ಯಾಪಾರಿಗಳ ಕಮೀಷನ್ ಪಾಲು ಹೆಚ್ಚಾಗಿರುತ್ತದೆ. ಮತ್ತು ಸಾಗಾಣಿಕೆ ವೆಚ್ಚವು ಕಡಿಮೆಯಾಗುತ್ತದೆ. ಆದರೆ ಇಲ್ಲಿ ಚಿಲ್ಲರೆ ವ್ಯಾಪಾರಿಗಳ ಜಾಲಕ್ಕೆ ಸರಿಯಾಗಿ ರಸಗೊಬ್ಬರಗಳು ಸರಬರಾಜಾಗುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದರೆ ಚಿಲ್ಲರೆ ವ್ಯಾಪಾರಿಗಳಿಗೆ ಹೆಚ್ಚು ಕಮೀಷನ್ ಸಿಗುವುದರಿಂದ ಇವರು ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಆಸಕ್ತಿಯಿಂದ ಮಾರಾಟ ಮಾಡುತ್ತಾರೆ, ಯಾಕೆಂದರೆ ಹೀಗೆ ಹೆಚ್ಚು ಹೆಚ್ಚಾಗಿ ಉತ್ಪನ್ನಗಳನ್ನು ಮಾರುವುದರಿಂದ ಇವರ ಲಾಭದ ಶೇಕಡಾವಾರು ಸಹ ಹೆಚ್ಚಾಗುತ್ತದೆ. ಹೀಗೆ ಲಾಭದ ಶೇಕಡವಾರು ಹೆಚ್ಚಾಗುವುದರಿಂದ ಇವರು ಲಾಭಗಳಿಸುವುದು ಖಚಿತ. ಆದರೆ ಏಕ ಸ್ತರದ ಮುಖ್ಯ ಋಣಾತ್ಮಕ ಅಂಶವೆಂದರೆ ಇವರು ಒಳ್ಳೆ ದಾಸ್ತಾನು ಮಳಿಗೆಗಳನ್ನು ಹೊಂದಿರಬೇಕಾಗುತ್ತದೆ. ಹಾಗೆಯೇ ಈ ಮಳಿಗೆಗಳ ನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಆದರೆ ರಸಗೊಬ್ಬರ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಪಾತ್ರ ಕಡಿಮೆಯಾಗುತ್ತದೆ. ಹೀಗೆ

ಕಡಿಮೆಯಾಗುವುದರಿಂದ ಚಿಲ್ಲರೆ ವ್ಯಾಪಾರಿಗಳಿಗೆ ಅನುಕೂಲವು ಆಗುತ್ತದೆ ಹಾಗೂ ಅನನುಕೂಲವು ಆಗುತ್ತದೆ.

ಎರಡು ಸ್ತರಗಳ ವಿತರಣೆಯನ್ನು ಗಮನಿಸಿದರೆ ಇಲ್ಲಿ ಸಗಟು ವ್ಯಾಪಾರಿಗಳು ಹಾಗೂ ಚಿಲ್ಲರೆ ವ್ಯಾಪಾರಿಗಳು ಬರುತ್ತಾರೆ, ಸಗಟು ವ್ಯಾಪಾರಿಗಳು ತಮ್ಮ ಪಾಲಿನ ಕಮೀಷನ್‌ನ್ನು ಹಿಡಿದುಕೊಂಡು ರಸಗೊಬ್ಬರಗಳನ್ನು ಚಿಲ್ಲರೆ ವ್ಯಾಪಾರಿಗಳಿಗೆ ವಿತರಿಸುತ್ತಾರೆ. ಹೀಗೆ ವಿತರಿಸುವುದರಿಂದ ಚಿಲ್ಲರೆ ವ್ಯಾಪಾರಿಗಳು ಒಳ್ಳೆ ದಾಸ್ತಾನು ಮಳಿಗೆಗಳನ್ನು ಹೊಂದುವ ಅವಶ್ಯಕತೆ ಇಲ್ಲ. ಏಕೆಂದರೆ ಅಂದು ಬಂದ ರಸಗೊಬ್ಬರಗಳನ್ನು ಅಂದೆ ರೈತರಿಗೆ ಮಾರಿ ಬಿಡುವುದರಿಂದ ರಸಗೊಬ್ಬರಗಳಲ್ಲಿ ಕಡಿಮೆಯಾದರೆ ಕೂಡಲೆ ಸಗಟು ವ್ಯಾಪಾರಸ್ಥರನ್ನು ಸಂಪರ್ಕಿಸಿ, ರಸಗೊಬ್ಬರಗಳನ್ನು ಪಡೆಯಬಹುದು. ಇಲ್ಲಿ ಸಗಟು ವ್ಯಾಪಾರಿಗಳು ಒಳ್ಳೆ ದಾಸ್ತಾನು ಮಳಿಗೆ ಹಾಗೂ ಸಾಗಾಣಿಕೆಯ ವ್ಯವಸ್ಥೆಯನ್ನು ಹೊಂದಿರಬೇಕಾಗುತ್ತದೆ. ಆದರೆ ಈ ರೀತಿ ಸ್ವರೂಪ ಸ್ತರ ವಿತರಣೆಯಲ್ಲಿರಬೇಕಾದರೆ ಇಲ್ಲಿ ರಸಗೊಬ್ಬರಗಳ ನಿರ್ವಹಣೆ ವೆಚ್ಚ ಗಣನೀಯ ಪ್ರಮಾಣದಲ್ಲಿ ಏರುತ್ತದೆ. ಇದು ಒಂದು ಅನನುಕೂಲಕರ ಅಂಶವಾಗಿದೆ. ಆದರೆ ಸಗಟು ವ್ಯಾಪಾರಿಗಳು ಒಳ್ಳೆ ವಿತರಣಾ ವ್ಯವಸ್ಥೆಯ ಜಾಲವನ್ನು ಹೊಂದಿರುವುದರಿಂದ ರಸಗೊಬ್ಬರಗಳನ್ನು ಕುಗ್ರಾಮಗಳಿಗೂ ತಲುಪಿಸಬಹುದು. ಇದು ಒಂದು ಸಕಾರಾತ್ಮಕ ಅಂಶ, ಎರಡು ಸ್ತರಗಳ ವಿತರಣಾ ವ್ಯವಸ್ಥೆಯನ್ನು ಗಮನಿಸಿದಾಗ ಏಕ ಸ್ತರದಿಂದ ವ್ಯವಸ್ಥೆ ರಸಗೊಬ್ಬರಗಳನ್ನು ಮಾರಾಟ ಜಾಲದ ನ್ಯೂನತೆಯನ್ನು ಎದುರಿಸಬೇಕಾಗುತ್ತದೆ. ಆದರೆ ಚಿಲ್ಲರೆ ವಿತರಕರು ಇಲ್ಲಿ ಹೆಚ್ಚು ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ, ಅಧಿಕ ಉತ್ಪನ್ನಗಳನ್ನು ಗಳಿಸುತ್ತಾರೆ. ಆದರೆ ಏಕಸ್ತರ ಅಥವಾ ದ್ವಿಸ್ತರ ವಿತರಣೆಯ ಆಯ್ಕೆ ಕಂಪನಿಗಳ ಮಾಲೀಕರಿಗೆ ಬಿಟ್ಟಿದ್ದು, ಯಾಕೆಂದರೆ ಒಂದೊಂದು ಕಂಪನಿಯೂ ಒಂದೊಂದು ರೀತಿಯಲ್ಲಿ ಈ ವಿತರಣ ವಾಹಿನಿಗಳನ್ನು ಆಯ್ಕ ಮಾಡಿಕೊಳ್ಳುತ್ತದೆ. ಈ ಆಯ್ಕೆಗೆ ಅವರದೇ ಮಾರುಕಟ್ಟೆಯ ತರ್ಕಗಳು ಇರುತ್ತವೆ.

ಉದಾಹರಣೆಗೆ IFFCO ರಸಗೊಬ್ಬರ ಉತ್ಪಾದನಾ ಕಾರ್ಖಾನೆಯನ್ನು ತೆಗೆದುಕೊಂಡರೆ ಇವರಲ್ಲಿರುವ ವಿತರಣಾ ವಾಹಿನಿಗಳನ್ನು ಕೆಳಕಂಡಂತೆ ನೋಡಬಹುದು. ಇವರು ರಸಗೊಬ್ಬರಗಳನ್ನು ಸಹಕಾರಿ ವ್ಯವಸ್ಥೆಯ ಮೂಲಕ ವಿತರಿಸುತ್ತಾರೆ, ಹೀಗೆ ಸಹಕಾರಿ ಸಂಸ್ಥೆಗಳ ಮೂಲಕ ವಿತರಿಸುವ ರಸಗೊಬ್ಬರಗಳ ಈ ಕೆಳಕಂಡಂತೆ ಇವೆ, ರಾಜ್ಯ ಮಟ್ಟದ ಸಹಕಾರಿ ಮಾರುಕಟ್ಟೆ ಸಂಸ್ಥೆ ಸಗಟು ವ್ಯಾಪಾರದಾರರಾಗಿ ಕಾರ್ಯ ನಿರ್ವಹಿಸುತ್ತದೆ. ಕೆಲವು ರಾಜ್ಯಗಳಲ್ಲಿ ಸಹಕಾರಿ ಸಂಘಗಳಿಗೆ ನೇರ ಪೂರೈಕೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಹಾಮಂಡಳಿಯ ಮೂಲಕ ಪೂರೈಕೆ. ಆಗ್ರೋ ಕೈಗಾರಿಕಾ ಕೇಂದ್ರಗಳ ಮೂಲಕ ಹಾಗೂ 158 ಇಫ್ಕೋ ರೈತರ ಸೇವಾ ಕೇಂದ್ರಗಳ ಮೂಲಕ ರಸಗೊಬ್ಬರವನ್ನು ಪೂರೈಸಲಾಗುತ್ತದೆ. ಹೀಗೆ ಇಫ್ಕೋ ನಾಲ್ಕು ವಿತರಣಾ ವಾಹಿನಿಗಳ ಮೂಲಕ ರಸಗೊಬ್ಬರಗಳನ್ನು ವಿತರಿಸುತ್ತಾರೆ.

ಮಾರುಕಟ್ಟೆ ಪಾಲು ಪಡೆಯುವಿಕೆ ಮತ್ತು ರಸಗೊಬ್ಬರಗಳು:

ಮಾರುಕಟ್ಟೆಯ ಪಾಲು ಪಡೆಯಬೇಕಾದರೆ ಉತ್ಪನ್ನ ವನ್ನು ಉತ್ಪಾದಕನಿಂದ ಗ್ರಾಹಕನಿಗೆ ತಲುಪಿಸುವ ವಿವಿಧ ಕಾರ್ಯನಿರ್ವಹಣೆಗಳು ಇರುತ್ತವೆ. ಈ ಕಾರ್ಯನಿರ್ವಹಣೆ ಮಾಡುವುದಕ್ಕೆ ಹಣದ ಅವಶ್ಯಕತೆ ಇರುತ್ತದೆ. ಈ ಹಣದ ಅವಶ್ಯಕತೆಯನ್ನು ವಿತರಣ ಪಾಲು ಪಡೆಯುವುದು ಎಂದು ಹೇಳಬಹುದು. ಹೀಗೆ ವಿತರಣಾ ಪಾಲು ಪಡೆಯುವುದಕ್ಕೆ ಅನೇಕ ಅಂಶಗಳನ್ನು ಪರಿಗಣಿಸಲಾಗುತ್ತದೆ. ಈ ವಿತರಣಾ ಪಾಲನ್ನು ಆಯಾ ಉತ್ಪಾದಕರು ನಿರ್ಧರಿಸುತ್ತಾರೆ, ಸರಕಾರ ಇದರಲ್ಲಿ ಪ್ರವೇಶಿಸುವುದಿಲ್ಲ., ಇದರ ಬಗ್ಗೆ ಚರ್ಚೆ ಇದೆ. ವಿತರಣಾ ಪಾಲನ್ನು ನಿಗದಿಗೊಳಿಸಲು ಸರಕಾರ ಪ್ರವೇಶಿಸಬೇಕೋ ಅಥವಾ ಆಯಾ ಕಂಪನಿ ಮಾಲೀಕರೆ ವಿತರಣಾ ಪಾಲನ್ನು (Distributive Margins) ನಿಗದಿ ಪಡಿಸಬೇಕೋ ಎಂಬುದು ಮುಖ್ಯ. ವಿತರಣಾ ಪಾಲನ್ನು ನಿಗದಿಪಡಿಸುವಾಗ ಸರಕಾರ ಪ್ರವೇಶಿಸಿದರೆ ಸರಕಾರ ಸರಿಯಾದ ಪ್ರಮಾಣದಲ್ಲಿ ವಿತರಣಾ ಪಾಲನ್ನು ನಿಗದಿಗೊಳಿಸುತ್ತದೆ, ಎಂಬುದೆ ಕೆಲವರ ಚರ್ಚೆ ಆದರೆ ಸರಕಾರ ದಿಸ್ಟ್ರಿಬ್ಯೂಟರ್ ಮಾರ್ಜಿನ್ ವಿತರಣಾ ಪಾಲನ್ನು ಆಯಾ ರಸಗೊಬ್ಬರಗಳ ಉತ್ಪಾದನೆ ನಿಗದಿಪಡಿಸುತ್ತಾರೆ ಹೀಗೆ ಉತ್ಪಾದಕರು ನಿಗದಿ ಪಡಿಸುವುದರಿಂದ ಅವರ ದೃಷ್ಟಿಕೋನದಂತೆಯೇ ವಿತರಣಾಪಾಲನ್ನು ನಿಗದಿಪಡಿಸುತ್ತಾರೆ, ಆದ್ದರಿಂದ ಸರಕಾರ ನಿಗದಿ ಪಡಿಸಿದರೆ ಸರಕಾರ ಇದರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಜಾಸ್ತಿ ಪ್ರಮಾಣದಲ್ಲಿ ವಿತರಣಾ ಪಾಲನ್ನು ನಿಗದಿಪಡಿಸಿದರೆ ವ್ಯಾಪಾರಸ್ಥರಿಗೆ ಒಳ್ಳೆ ಕಮೀಷನ್ ಸಿಕ್ಕಿ, ಹೆಚ್ಚು ಮಾರಾಟ ಮಾಡಬಹುದು. ಆದರೆ ಈ ವಿತರಣಾ ಪಾಲು (Distributive Margins) ಗರಿಷ್ಠ ಚಿಲ್ಲರೆ ಬೆಲೆಯನ್ನು ಮೀರಕೂಡದು. ಇದು ಗರಿಷ್ಠ ಚಿಲ್ಲರೆಯ ಬೆಲೆಯ ಭಾಗವೇ ಹೊರತು, ಗರಿಷ್ಠ ಚಿಲ್ಲರೆ ಬೆಲೆಯಿಂದ ಪ್ರತ್ಯೇಕವಾಗಿ ಬರುವುದಿಲ್ಲ. ಆದ್ದರಿಂದ ಸರಕಾರ ವಿತರಣಾ ಪಾಲನ್ನು ಆಯಾ ಉತ್ಪಾದಕರಿಗೆ ಬಿಟ್ಟು ಕೊಟ್ಟಿದೆ. ಅಮದು ಮಾಡಿಕೊಂಡು ರಸಗೊಬ್ಬರಗಳಿಗೆ ಮಾತ್ರ ಸರಕಾರ ವಿತರಣಾ ಪಾಲನ್ನು ನಿಗದಿಗೊಳಿಸುತ್ತದೆ. ಬಹಳಷ್ಟು ರಸಗೊಬ್ಬರಗಳ ಉತ್ಪಾದಕರು ವಿತರಣಾ ಪಾಲನ್ನು ಆಯಾ ಉತ್ಪಾದಕರೇ ನಿರ್ಧರಿಸುವುದರ ಪರವಾಗಿ ಇದ್ದಾರೆ, ಯಾಕೆಂದರೆ, ಒಮ್ಮೆ ಸರಕಾರ ಇದರ ಮಧ್ಯ ಪ್ರವೇಶ ಮಾಡಿ ಒಂದೇ ರೀತಿಯ ವಿತರಣಾ ಪಾಲನ್ನು ನಿಗದಿಗೊಳಿಸಿದರೆ, ಎಲ್ಲ ರಸಗೊಬ್ಬರ ಉತ್ಪಾದಕರು ಇದಕ್ಕೆ ಬದ್ಧರಾಗಿರಬೇಕಾಗುತ್ತದೆ; ಆಗ ಗರಿಷ್ಠ ಚಿಲ್ಲರೆ ಬೆಲೆಯಲ್ಲಿ ವಿತರಣಾ ಪಾಲು ಕಡಿಮೆಯಾಗಬಹುದು. ಅಥವಾ ಜಾಸ್ತಿಯಾಗಬಹುದು, ಗರಿಷ್ಠ ಚಿಲ್ಲರೆ ಬೆಲೆಯಲ್ಲಿ ವಿತರಣಾ ಪಾಲು ಕಡಿಮೆಯಾದರೆ, ರಸಗೊಬ್ಬರಗಳ ಉತ್ಪಾದಕರು, ಸಗಟು ಹಾಗೂ ಚಿಲ್ಲರೆ ವ್ಯಾಪಾರಸ್ಥರಿಗೆ ಅಷ್ಟರ ಮಟ್ಟಿಗೆ ವಿತರಣಾ ಪಾಲನ್ನು ಕಡಿತಗೊಳಿಸಬೇಕಾಗುತ್ತದೆ. ಆಗ ರಸಗೊಬ್ಬರಗಳ ಬೇಡಿಕೆ, ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳಿಂದ ಕಡಿಮೆಯಾಗಬಹುದು, ಇಲ್ಲವೆ ಜಾಸ್ತಿಯಾದರೆ ಅಷ್ಟರ ಮಟ್ಟಿಗೆ ಹೊರೆಯನ್ನು ರಸಗೊಬ್ಬರಗಳ ಉತ್ಪಾದಕರು ಭರಿಸಬೇಕಾಗುತ್ತದೆ. ಇವರು ಭರಿಸುವ ವಿತರಣಾ ಪಾಲು ಇವರಿಗೆ ನಷ್ಟವುಂಟು ಮಾಡಬಹುದು. ಆದರೆ

ಈ ಎಲ್ಲಾ ಸಾಧಕ ಬಾಧಕಗಳನ್ನು ಚರ್ಚಿಸಿಯೇ ಸರಕಾರ ವಿತರಣಾ ಪಾಲನ್ನು ನಿರ್ಧರಿಸಲು ಆಯಾ ರಸಗೊಬ್ಬರಗಳ ಉತ್ಪಾದಕರಿಗೆ ಸ್ವಾತಂತ್ರ್ಯ ನೀಡಿದೆ. ಆದರೂ ಚಿಲ್ಲರೆ ವ್ಯಾಪಾರಿಗಳಿಂದ ಇರುವ ಬೇಡಿಕೆಯೆಂದರೆ, ರಸಗೊಬ್ಬರ ಉತ್ಪಾದಕರು ನೀಡುವ ವಿತರಣಾ ಪಾಲು ತಮಗೆ ಸಾಕಾಗುವುದಿಲ್ಲ ಎಂಬುದೇ ಆಗಿದೆ, ಆದರೆ ಈ ಅಂಶವನ್ನು ಪರಿಗಣಿಸಿಯೇ ಸರಕಾರ ವಿತರಣಾ ಪಾಲು ನಿಗದಿಪಡಿಸುವಲ್ಲಿ ಅನೇಕ ಸಮಸ್ಯೆಗಳು ಪ್ರಾರಂಭವಾಗುವುದರಿಂದ ಇದನ್ನು ಆಯಾ ರಸಗೊಬ್ಬರ ಉತ್ಪಾದಕರಿಗೆ ಬಿಟ್ಟು ಕೊಟ್ಟಿರುವುದು, ಶಿವರಾಂ ಆಯೋಗ (1965) ರಾಷ್ಟ್ರೀಯ ಕೃಷಿ ಆಯೋಗ (1972) ಕೊರೇ ಆಯೋಗ (1973) ವಿತರಣಾ ಪಾಲನ್ನು ಸರಕಾರ ನಿಗದಿಪಡಿಸುವುದನ್ನು ವಿರೋಧಿಸಿದವು, ಅಂದಿನಿಂದಲೂ ಈ ಚರ್ಚೆ ನಡೆಯುತ್ತಲೇ ಇದೆ ಆದ್ದರಿಂದ ನನ್ನ ಪ್ರಕಾರ ವಿತರಣಾ ಪಾಲನ್ನು ಆಯಾ ರಸಗೊಬ್ಬರಗಳ ಉತ್ಪಾದಕರು ನಿಗದಿಪಡಿಸುವುದೇ ಸರಿಯಾದ ಕ್ರಮ, ಏಕೆಂದರೆ ಒಂದೊಂದು ಉತ್ಪಾದನ ಘಟಕಕ್ಕೂ, ಮಾರುಕಟ್ಟೆಯ ಕಾರ್ಯತಂತ್ರಗಳು ವಿಭಿನ್ನವಾಗಿರುತ್ತದೆ. ಈ ರಸಗೊಬ್ಬರಗಳು 2500 ಕಿ.ಮೀ. ಗಳಷ್ಟು ದೂರ ಚಲಿಸಬೇಕಾಗುತ್ತದೆ. ಸಾಮಾನ್ಯ ರೈತರಿಗೆ ತಲುಪಲು. ಆದ್ದರಿಂದ ಇಂತಹ ಸಮಸ್ಯೆಗಳಿಗೆಲ್ಲ ಆಯಾ ರಸಗೊಬ್ಬರ ಉತ್ಪಾದಕರು ಚೆನ್ನಾಗಿ ಅಭ್ಯಸಿಸಿರುತ್ತಾರೆ. ಹೀಗೆ ಅಭ್ಯಸಿಸುವುದರಿಂದ ಸಾಗಾಣಿಕೆಯನ್ನು ಅತ್ಯಂತ ಆರ್ಥಿಕವಾಗಿ ನಿರ್ಧರಿಸಬಹುದು. ಹೀಗೆ ವಿತರಣೆ ಪಾಲನ್ನು ಆಯಾ ರಸಗೊಬ್ಬರ ಉತ್ಪಾದಕರು ನಿರ್ಧರಿಸುವುದು ಅತ್ಯಂತ ಸಮಂಜಸವಾದದ್ದು.

ಖಾಸಗಿ ವಿತರಣಾ ವಾಹಿನಿಗಳಿಗೂ ಹಾಗೂ ಸಾಂಸ್ಥಿಕ ವಿತರಣೆಗೂ ವಿತರಣ ಪಾಲು ರೂ. 50 ಕ್ಕಿಂತ ಜಾಸ್ತಿ ವ್ಯತ್ಯಾಸವಿದೆ. ಆದರೆ ಸಹಕಾರಿ ಸಂಘಗಳು ರಸಗೊಬ್ಬರಗಳ ವಿತರಣೆಯಲ್ಲಿ ಹೆಚ್ಚು ಸಮರ್ಥವಾಗಿ ಹಾಗೂ ವ್ಯಾಪಕವಾಗಿ ರಸಗೊಬ್ಬರ ಗಳನ್ನು ಹಂಚಿಕೆ ಮಾಡುವುದರಿಂದ ರೂ. 50 ಟನ್ ಗೆ ಸಹಕಾರಿ ಹಾಗೂ ಖಾಸಗಿ ವಿತರಕರ ಮಧ್ಯೆ ವ್ಯತ್ಯಾಸವಿದ್ದರೆ ಸಹಕಾರಿ ಸಂಘಗಳಿಗೆ ಉತ್ತೇಜನ ನೀಡದಂತೆ ಆಗುತ್ತದೆ. ಹೀಗೆ ಉತ್ತೇಜನ ನೀಡದಿದ್ದರೆ ಸಹಾರಿ ಸಂಘಗಳ ವ್ಯವಸ್ಥಿತ ವಿತರಣಾ ಜಾಲಕ್ಕೆ ಹೊಡೆತ ಬೀಳುವುದರಲ್ಲಿ ಸಂದೇಹವಿಲ್ಲ. ನಾನು ಕೈಗೊಂಡ ಅಧ್ಯಯನದಲ್ಲೂ ಕಂಡು ಬರುವ ಅಂಶವೇನೆಂದರೆ. ಸಹಕಾರಿ ಸಂಘಗಳು ಅತ್ಯಂತ ಸಮರ್ಥವಾಗಿ ರಸಗೊಬ್ಬರಗಳನ್ನು ರೈತರಿಗೆ ತಲುಪಿಸುತ್ತಿವೆ. ಆದ್ದರಿಂದ ವಿತರಣಾ ಪಾಲನ್ನು ಖಾಸಗಿಯವರಿಗೆ ಎಷ್ಟು ಕೊಡುತ್ತಾರೊ ಅಷ್ಟೇ ಪಾಲನ್ನು ಸಹಕಾರಿ ಸಂಘಗಳಿಗೂ ಕೊಡಬೇಕು. ಆದ್ದರಿಂದ ವಿತರಣಾ ಪಾಲಿನಲ್ಲಿ ಖಾಸಗಿ ಹಾಗೂ ಸಹಕಾರಿ ಸಂಘಕ್ಕೂ ನಡುವೆ ಇರುವ ಅಸಮಾನತೆಯನ್ನು ತೊಡೆದು ಹಾಕಬೇಕು. ಆದರೆ ಇದನ್ನು ಸರಕಾರ ಸ್ಪಷ್ಟವಾಗಿ ಅರ್ಥೈಸುವಲ್ಲಿ ಸೋತಿದೆ. ಆದರೆ ಇಲ್ಲಿ ಸರಕಾರ ಮಧ್ಯಪ್ರವೇಶಿಸುವ ಯಾವುದೇ ಕಾರ್ಯಕ್ರಮವಿಲ್ಲ, ಇದರಿಂದಾಗಿ ಸರಕಾರ ಇದನ್ನು ಸರಿಮಾಡಲು ಉತ್ಸುಕವಾಗದೆ ಇರುವುದು. ಆದರೆ ಈ ವಿಷಯವನ್ನು ರಸಗೊಬ್ಬರಗಳ ಉತ್ಪಾದಕರೇ ಬಗೆಹರಿಸಬೇಕಾಗಿದೆ. ಉತ್ಪಾದಕರಿಗೆ ಸಹಕಾರಿ ಸಂಘಗಳು ಖಾಸಗಿ ವಿತರಣ ವಾಹಿನಿಗಳಿಗಿಂತ ಸಮರ್ಥವಾಗಿ ಕಾರ್ಯ

ನಿರ್ವಹಿಸುತ್ತಿದ್ದರೂ ಈ ಅಸಮಾನತೆಗಳನ್ನು ನಾವು ನೋಡಬಹುದಾಗಿದೆ. ಆದರೆ ಇದನ್ನು ರಸಗೊಬ್ಬರ ಉತ್ಪಾದಕರೇ ನಿರ್ಧರಿಸುವುದರಿಂದ ಯಾವ ವಿತರಣಾ ವ್ಯವಸ್ಥೆ ಸರಿಯಾದದ್ದು ಅಥವಾ ಯಾವ ವಿತರಣಾ ವ್ಯವಸ್ಥೆ ನ್ಯೂನತೆ ಗಳಿಂದ ಕೂಡಿದೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ನಾನು ಅಧ್ಯಯನ ಮಾಡಿದ ಇಫ್ಕೋ ಮಾರುಕಟ್ಟೆಯ ತಂತ್ರವನ್ನು ಇಲ್ಲಿ ಹೇಳುವ ಅವಶ್ಯಕತೆ ಇದೆ. ಇಫ್ಕೋ ದ ಉತ್ಪಾದನಾ ಘಟಕಗಳು ಉತ್ತರ ಭಾರತದಲ್ಲಿವೆ. ಅಲ್ಲಿಂದ ತಯಾರಾದ ರಸಗೊಬ್ಬರಗಳನ್ನು ಬಹುತೇಕವಾಗಿ ರೈಲ್ವೆ ಮೂಲಕ ಸಾಗಾಣಿಕೆ ಮಾಡುತ್ತಾರೆ, ಇಲ್ಲಿ ಮಾರುಕಟ್ಟೆಯ ಪಾಲನ್ನು ಕೆಳಕಂಡಂತೆ ನೋಡಬಹುದು. ಒಂದು ಟನ್ ಯೂರಿಯ ಬೆಲೆ ರೂ. 4815 ಇದರಲ್ಲಿ ರೂ. 275 ರಷ್ಟು ವಿತರಣಾ ಪಾಲಿಗೆ ಹೋಗುತ್ತದೆ. ಇದು ಗರಿಷ್ಠ ಚಿಲ್ಲರೆ ಬೆಲೆಯಲ್ಲೇ ಸೇರಿರುತ್ತದೆ. ಒಂದು ಟನ್ ರಸಗೊಬ್ಬರಗಳ ವಿತರಣಾ ಪಾಲು ಈ ರೀತಿ ಇದೆ.


ಸಗಟು ವ್ಯಾಪಾರಿಗಳ ಕಮೀಷನ್	ರೂ. 50
ಸಾಗಾಣಿಕೆ ವೆಚ್ಚ ಕಿ.ಮೀ. ಗಳಿಗೆ 25 ಕಿ.ಮೀ. ಅನ್ವಯಿಸುವುದು	ರೂ. 98
ಮೂಟೆಗಳನ್ನು ಇಳಿಸಲು ಹಾಗೂ ತುಂಬಿಸಲು (ಲಾರಿ, ಟೆಂಪೋ, ರೈಲ್ವೇ ವ್ಯಾಗನ್‌ಗಳಿಗೆ) (Loading unloading)	ರೂ. 62
ದಾಸ್ತಾನು ಮಳಿಗೆಯ ಬಾಡಿಗೆ	ರೂ. 24
ಇತರೆ	ರೂ. 20
ಇದರಲ್ಲಿ ಚಿಲ್ಲರೆ ವ್ಯಾಪಾರಿಗಳು	ರೂ. 21

ಇದು ಒಟ್ಟು ಇಫ್ಕೋ ರಸಗೊಬ್ಬರಗಳ ಉತ್ಪಾದಕರು ನೀಡುವ ಒಂದು ಟನ್ ರಸಗೊಬ್ಬರಗಳಿಗೆ ವಿತರಣಾ ಪಾಲು. ವಿತರಣಾ ಪಾಲು ಬೇರೆ ಬೇರೆ ಅಂಶಗಳಿಗೆ ಹೋಗಿ ಚಿಲ್ಲರೆ ವ್ಯಾಪಾರಿಗಳಿಗೆ ಸಿಗುವುದು ರೂ. 21 ಮಾತ್ರ. ಒಂದು ಟನ್ನಿಗೆ ಹೀಗೆ ವಿತರಣ ಪಾಲು ಕೈಗಾರಿಕೆಯಿಂದ ಕೈಗಾರಿಕೆಗೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ಹೀಗೆ ವ್ಯತ್ಯಾಸಗೊಳ್ಳುವುದರಿಂದ ಇದನ್ನು ಆಯಾ ಉತ್ಪಾದಕರೆ ನಿರ್ಧರಿಸುವುದು ಸರಿಯಾದ ಕ್ರಮ.

ಅಧ್ಯಾಯ-8

ಕೃಷಿ ಆಧುನೀಕರಣ-ವಿವರಣೆ

ಆಧುನಿಕ ಕೃಷಿ ಎಂಬ ಪದ ವ್ಯುತ್ಪತ್ತಿಯಾದದೆ 1967 ರ ನಂತರ ಈ ಸಂದರ್ಭದಲ್ಲಿ ಹಸಿರು ಕ್ರಾಂತಿ ಪರಿಕಲ್ಪನೆಯನ್ನು ಪ್ರಚುರ ಪಡಿಸಲಾಯಿತು. ಹಸಿರು ಕ್ರಾಂತಿಯೆಂದರೆ ಅಧಿಕ ಇಳುವರಿ ತಳಿಗಳು , ನೀರಾವರಿ, ರಸಗೊಬ್ಬರಗಳ ಬಳಕೆ ಹಾಗೂ ಯಂತ್ರೀಕರಿಸುವ ಪ್ರಕ್ರಿಯೆ. ಹಸಿರು ಕ್ರಾಂತಿಗೆ ಮೊದಲು ಸಾಂಪ್ರದಾಯಿಕ ಕೃಷಿಯನ್ನು ಅನುಸರಿಸಲಾಗುತ್ತಿತ್ತು. ಈ ಸಾಂಪ್ರದಾಯಿಕ ಕೃಷಿ ಎಂದರೆ ಮಳೆ ಆಧಾರಿತ, ಸ್ಥಳೀಯ ತಳಿಗಳು, ಸಾಂಪ್ರದಾಯಿಕ ಗೊಬ್ಬರಗಳ ಬಳಕೆಯಾಗುತ್ತಿತ್ತು. ಆದ್ದರಿಂದ ಆಗ ಭಾರತ ಆಹಾರ ಕೊರತೆಯನ್ನು ಎದುರಿಸುತ್ತಿತ್ತು. ಕೃಷಿ ಭೂಮಿಯ ಉತ್ಪಾದಕತೆ ಅತಿ ಕಡಿಮೆ ಇತ್ತು. ರೈತರು ವಾಣಿಜ್ಯೀಕರಣಗೊಳ್ಳದೆ ಜೀವನಾವಶ್ಯಕ ಆಧಾರಿತ ಕೃಷಿಯಾಗಿತ್ತು. ಈ ಸಂದರ್ಭದಲ್ಲಿ ರಾಜ್ಯದ ಕೃಷಿ, ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸುವಲ್ಲಿ ವಿಫಲವಾಗಿತ್ತು. ಸಾಂಪ್ರದಾಯಿಕ ಕೃಷಿಯಲ್ಲಿ ರೈತರ ಬಳಿ, ಒಣಭೂಮಿ, ಹಾಗೂ ತಾವೇ ರೂಪಿಸಿಕೊಂಡಿದ್ದ ಉಪಕರಣಗಳು ಇದ್ದವು, ಜೊತೆಗೆ ಸಗಣಿ ಹಾಗೂ ಹಸಿರೆಲೆ ಗೊಬ್ಬರಗಳ್ಳನು ಬಳಸುತ್ತಿದ್ದರೂ. ಸ್ಥಳೀಯ ತಳಿಗಳ ಬೀಜಗಳನ್ನು ಸಂಗ್ರಹಿಸಿಟ್ಟುಕಂಡು ಬಳಸುತ್ತಿದ್ದರು, ಇವರು ಬೇಸಾಯ ಮಾಡುತ್ತಿದ್ದದು ಬರಿ ತಮ್ಮ ಆಹಾರ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಅಂದರೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಷ್ಟು ಉತ್ಪನ್ನಗಳನ್ನು ಉತ್ಪಾದಿಸುತ್ತಿರಲಿಲ್ಲ ಆದ್ದರಿಂದ ಸಾಂಪ್ರದಾಯಿಕ ಕೃಷಿ ರೈತರನ್ನು ಬಡತನದ ವಿಷ ವರ್ತುಲಕ್ಕೆ ನೂಕಿತ್ತು. ಇದನ್ನು ಚಿತ್ರಸಹಿತ ಇಲ್ಲಿ ವಿವರಿಸಿರುವೆ.



ಬಡತನದ ವಿಷ ವರ್ತುಲವೆಂದರೆ ಸಾಂಪ್ರದಾಯಿಕ ಕೃಷಿಯಲ್ಲಿ ಬರುವ ಭೂಮಿ, ನೀರು ಕಾರ್ಮಿಕರ

ಕಡಿಮೆ ಉತ್ಪಾದಕತೆ ಇದರಿಂದಾಗಿ ಅಂಶಿಕ ಉದ್ಯೋಗ ತಲೆದೋರಿತ್ತು. (Undermployment) / ಅಂಶಿಕ ಉದ್ಯೋಗದಿಂದಾಗಿ ಕಡಿಮೆ ಆದಾಯ, ಇದರಿಂದಾಗಿ ಕಡಿಮೆ ಉಳಿತಾಯ ಇದರಿಂದಾಗಿ ಕೃಷಿಯಲ್ಲಿ ಕಡಿಮೆ ಬಂಡವಾಳ ತೊಡಗಿಸುವುದು, ಇದರಿಂದಾಗಿ ಕಡಿಮೆ ಇಳುವರಿ ಹೀಗೆ ಒಂದಕ್ಕೊಂದು ಅಂತರಿಕ ಸಂಬಂಧ ಹೊಂದಿ ಚಕ್ರದೋಪಾದಿಯಲ್ಲಿ ಮರುಕಳಿಸುತ್ತಲೇ ಇರುತ್ತವೆ. ಆದ್ದರಿಂದ ಸಾಂಪ್ರದಾಯಿಕ ಕೃಷಿ ರೈತರನ್ನು ದುರ್ಬಲಗೊಳಿಸುತ್ತದೆ. ಸಾಂಪ್ರದಾಯಿಕ ಕೃಷಿಯಲ್ಲಿ ರೈತರ ಬಳಿ ಹೆಚ್ಚಳ ಬಂಡವಾಳ ಸಂಗ್ರಹವಾಗುವುದಿಲ್ಲ. ಹಾಗೆಯೇ ರೈತರ ಬಬ್ಬ ಬದುಕು ಸಹ ಸುಧಾರಿಸುವುದಿಲ್ಲ. ರೈತರ ಜ್ಞಾನ ಸಹ ಸೀಮಿತಗೊಂಡಿರುತ್ತದೆ. ಇದರಿಂದಾಗಿ ಸಾಂಪ್ರದಾಯಿಕ ಕೃಷಿ ರೈತರಿಗಷ್ಟೆ ಶಾಪವಲ್ಲ ಇಡೀ ದೇಶಕ್ಕೆ ಶಾಪವಾಗಿ ಪರಿಣಿಮಿಸುತ್ತದೆ. ಏಕೆಂದರೆ ದೇಶದ ಪ್ರಗತಿ ಸಾಧಿಸಬೇಕಾದರೆ ಕೃಷಿ ವಲಯ ಅಭಿವೃದ್ಧಿಗೊಳ್ಳಬೇಕಾಗುತ್ತದೆ. ಕೃಷಿ ವಲಯ ದೇಶದ ಅಭಿವೃದ್ಧಿಗೆ ಹೇಗೆ ಕಾರಣ ಎಂಬುದನ್ನು ನೋಡೋಣ. ಕೃಷಿ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗಿರುತ್ತದೆ. ಯಾಕೆಂದರೆ ಭಾರತದಲ್ಲಿ ಕೃಷಿ ಬೃಹತ್ ವಲಯ, ಇದು ಜನರಿಗೆ ಆಹಾರವನ್ನಷ್ಟೇ ಒದಗಿಸುವುದಿಲ್ಲ. ಇದು ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನು ಉದ್ಯೋಗ ಸೃಷ್ಟಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರಾಥಮಿಕಾವಸ್ಥೆಯಲ್ಲಿ ಯಾವುದೇ ರಾಷ್ಟ್ರ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಿ ತನ್ನ ವಿದೇಶಿ ವಿನಿಮಯ ಗಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಹಾಗೂ ಇದನ್ನು ಬಂಡವಾಳ ಉತ್ಪನ್ನಗಳ ಆಮದಿಗು ಸಹ ಬಳಸಿಕೊಳ್ಳಲಾಗುತ್ತದೆ. ಇದರಲ್ಲಿ ಪ್ರಮುಖವಾಗಿ ಪರಿಗಣಿಸಬೇಕಾಗಿರುವ ಅಂಶವೆಂದರೆ ರಾಷ್ಟ್ರೀಯ ಆದಾಯಕ್ಕೆ ಕೃಷಿ ವಲಯದ ಕೊಡುಗೆಯನ್ನು ಪರಿಗಣಿಸಿದರೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಮಹತ್ವ ತಿಳಿಯುತ್ತದೆ. ಕೃಷಿ ಪ್ರಾಮುಖ್ಯತೆ ಸ್ವಾಂತ್ರತ್ರ್ಯೋತ್ತರ ಭಾರತದ ಆರಂಭದ ದಿನಗಳಲ್ಲಿ ಸಾಕಷ್ಟು. ಆಂದರೆ 1992-2000 ರ ಅವಧಿಗೆ ಆಂತರಿಕ ಉತ್ಪನ್ನಕ್ಕೆ ಕೃಷಿಯು ಅರ್ಧಕ್ಕರ್ದ

ಕೃಷಿ ರಾಷ್ಟ್ರೀಯ ಆದಾಯಕ್ಕೆ ಕೊಡುಗೆ

ವರ್ಷ	ಆಂತರಿಕ ಉತ್ಪನ್ನದಲ್ಲಿ ಶೇಕಡವಾರು
1950-51	56.10
1960-61	51.20
970-71	50.60
1980-81	42.00
1984-85	36.86
1989 -90	35-00
1997-2000	25.50

ಕಡಿಮೆಯಾಗಿದೆ, ಆದರೆ ಕೃಷಿ ವಲಯದ ಮೇಲೆ ಅವಲಂಬಿತವಾಗಿರುವ ಜನಸಂಖ್ಯೆ ಅಷ್ಟೇ ಪ್ರಮಾಣದಲ್ಲಿ ಉಳಿದಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು ಪ್ರಮುಖ ಕಾರಣವೆಂದರೆ ಕೃಷಿ ಮೇಲೆ ಅವಲಂಬಿತವಾಗಿರುವ ರೈತರು ಕೃಷಿಯೇತರ ಉದ್ಯೋಗದ ಕಡೆಗೆ ನಡೆಯುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದಾಗಿ ಕೃಷಿ ವಲಯ ಆಧುನೀಕರಣ ಗೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಆಧುನಿಕ ಕೃಷಿಯಲ್ಲಿ ಪ್ರಮುಖವಾಗಿ ಬರುವ ಅಂಶಗಳೆಂದರೆ ಯಂತ್ರೀಕರಣ, ನೀರಾವರಿ ಸಸ್ಯ ಸಂರಕ್ಷಣಾ ರಾಸಾಯನಿಕಗಳು ಬಳಸುವುದು, ಸಾಲ, ಗ್ರಾಮೀಣ ವಿದ್ಯುಚ್ಛಕ್ತಿ, ರಸಗೊಬ್ಬರಗಳ ಬಳಕೆ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಈಗ ನೀರಾವರಿಯ ಬಗ್ಗೆ ಪರಿಶೀಲಿಸೋಣ. ನೀರಾವರಿ : ಆಧುನಿಕ ಕೃಷಿಯಲ್ಲಿ ನೀರಾವರಿ ಮುಖ್ಯ ಪಾತ್ರ ವಹಿಸುತ್ತದೆ. ಭಾರತದ ಕೃಷಿಕಗೆ ಶಾಪವಾಗಿರುವುದೆಂದರೆ ಮಳೆ ಆಧಾರಿತ ಕೃಷಿ, ಮಳೆ ಆಧಾರಿತ ಕೃಷಿಯಿಂದಾಗಿ ರೈತರು ಪ್ರಕೃತಿಯ ಜೊತೆ ಜೂಜಾಡಬೇಕಾಗುತ್ತದೆ. ಮಳೆ ಕೈ ಕೊಟ್ಟರೆ ರೈತರು ನಷ್ಟ ಅನುಭವಿಸಿ ಬೀದಿಗೆ ಬರಬೇಕಾಗುತ್ತದೆ. ಏಕೆಂದರೆ ಶೇ. 70 ರಷ್ಟು ಕೃಷಿ ಭೂಮಿ ಮಳೆಯಾಧಾರಿತವಾಗಿದೆ ಹೀಗೆ ಮಳೆಯಾಧಾರಿತವಾಗಿರುವುದರಿಂದ ಅನಿಶ್ಚಿತತಯಿಂದ ಪಾರು ಮಾಡಲು ನೀರಾವರಿ ಯೋಜನೆಗಳ ಮತ್ತು ವ್ಯವಸ್ಥಿತವಾಗಿ ಜಾರಿ ಮಾಡಬೇಕಾಗಿದೆ. ಭಾರತದಲ್ಲಿ ನೀರಾವರಿ ಎಷ್ಟು ಪ್ರದೇಶಗಳಿಗೆ ವ್ಯಾಪಿಸಿದೆ, ಎಂಬುದು ಕೆಳಕಂಡ ನೀರಾವರಿ ಕ್ಷೇತ್ರದ ಬಗ್ಗೆ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ತಿಳಿಯುತ್ತದೆ.

ಸಮಗ್ರ ಬಿತ್ತನೆ ಮಾಡಿದ ಪ್ರದೇಶದಲ್ಲಿ ಅಳವಡಿಕೆಯಾಗಿರುವ ನೀರಾವರಿ ಸೌಲಭ್ಯ

(ದಶಲಕ್ಷ ಹಕ್ಟೇರುಗಳಲ್ಲಿ)

ವರ್ಷ	ಸಮಗ್ರ ಬಿತ್ತನೆ ಮಾಡಿದ ಪ್ರದೇಶ	ಸಮಗ್ರ ನೀರಾವರಿ ಕ್ಷೇತ್ರ	ಶೇಕಡಾವಾರು ನೀರಾವರಿಯಾದ ಸಮಗ್ರ ಬಿತ್ತನೆ ಕ್ಷೇತ್ರ
1950-51	131.9	22.6	17.10
1960-61	152.8	28.0	18.4
1970-71	165.8	38.0	22.9
1980-81	172.6	54.1	31.6
1990-91	182.5	70.8	38.8
1996-97	190.0	80.7	42.5

ಮೂಲ : Agriculture Statistics at a glance and ninth five year palns

ಈ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಸಮಗ್ರ ಬಿತ್ತನೆ ಮಾಡಿದ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ. ಈ ಕ್ಷೇತ್ರದಲ್ಲಿ ನೀರಾವರಿಗೆ ಒಳಪಟ್ಟ ಕ್ಷೇತ್ರದ ಪ್ರಮಾಣವೂ ಸಹ ಹೆಚ್ಚಾಗುತ್ತಿದೆ. 1950-51 ರಲ್ಲಿ 131.9 ದಶಲಕ್ಷ ಹೆಕ್ಟೇರುಗಳಲ್ಲಿ ಸಮಗ್ರ ಬಿತ್ತನೆ ಕ್ಷೇತ್ರ. ಸಮಗ್ರ ನೀರಾವರಿ ಕ್ಷೇತ್ರ 22.6 ದಶಲಕ್ಷ ಹೆಕ್ಟೇರುಗಳು ಇದು ಹಾಗೆಯೇ ಸ್ಥಗಿತವಾಗಿಲ್ಲ. ಇದು ಪ್ರತಿ ದಶಕದಲ್ಲೂ ಹೆಚ್ಚಾಗಿದೆ. ಯಾಕೆಂದರೆ ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲೂ ನೀರಾವರಿಯನ್ನು ಆದ್ಯತಾ ವಲಯವನ್ನಾಗಿ ಪರಿಗಣಿಸಿ, ಹೆಚ್ಚು ಹೆಚ್ಚು ಬಂಡವಾಳವನ್ನು ಹಂಚಲಾಗಿದೆ. ಮೇಲಿನ ಅಂಕಿ ಅಂಶಗಳ ಪ್ರಕಾರ 1950-51 ರಲ್ಲಿ ಶೇ. 17.10 ರಷ್ಟಿದ್ದ ನೀರಾವರಿ ಕ್ಷೇತ್ರ 1996-97 ರಷ್ಟರಲ್ಲಿ ಶೇ. 42.5 ರಷ್ಟು ಆಗಿದ್ದು, ಕೃಷಿ ಕ್ಷೇತ್ರ ನೀರಾವರಿ ವ್ಯಾಪ್ತಿಗೆ ಒಳಪಡುವ ಪ್ರಕ್ರಿಯೆಗಳು ತೀವ್ರ ಗತಿಯಲ್ಲಿ ನಡೆಯುತ್ತಿದೆ. ಕೃಷಿ ಆಧುನೀಕರಣಗೊಳ್ಳಲು ನೀರಾವರಿ ಅತಿ ಮುಖ್ಯವಾಗುತ್ತದೆ. ಏಕೆಂದರೆ ನೀರಾವರಿಯಲ್ಲಿ ಅಧಿಕ ಇಳುವರಿ ತಳಿಗಳು ರಸಗೊಬ್ಬರಗಳು ಹಾಗೂ ಯಂತ್ರಗಳನ್ನು ಬಳಸಲು ಉತ್ತಮ ಅವಕಾಶಗಳು ಇವೆ. ಆದ್ದರಿಂದ ನೀರಾವರಿ ಕೃಷಿಯ ಆಧುನೀಕರಣ ಪ್ರಮುಖ ಪಾತ್ರ ವಹಿಸಿದೆ.

ನೀರಾವರಿಯ ಮೂಲಗಳು

ದಶಲಕ್ಷ ಹೆಕ್ಟೇರುಗಳಲ್ಲಿ

ಮೂಲಗಳೂ	1950-51	1960-61	1970 -71	1980-81	1990-91
ಸರಕಾರಿ ನಾಲೆಗಳು	7.2	9.2	11.9	14.5	16.4
ಖಾಸಗಿ ನಾಲೆಗಳಿಂದ	1.1	1.2	0.9	0.8	0.5
ಕೆರೆಗಳು (Tanks)	3.6	4.7	4.1	3.2	3.2
ಬಾವಿ ಮತ್ತು ಕೊಳವೆ ಬಾವಿಗಳು	5.9	7.2	11.9	17.2	24.2
ಬೇರೆ ಮೂಲಗಳಿಂದ	3.0	2.4	2.3	2.5	3.1
ನಿವ್ವಳ ನೀರಾವರಿಗೊಂಡ ಕ್ಷೇತ್ರ	20.8	24.7	31.1	38.7	47.4

Source : Economic Strategy 1990-91

ಮೇಲಿನ ಅಂಕಿ ಅಂಶಗಳ ಮೂಲಕ ನಾವು ತಿಳಿಯುವುದೇನೆಂದರೆ ಒಟ್ಟು ನೀರಾವರಿಯಲ್ಲಿ ಬಾವಿ ಮತ್ತು ಕೊಳವೆ ಬಾವಿಗಳಿಂದ 24.2 ಮಿಲಿಯನ್ ಹೆಕ್ಟೇರುಗಳು ನೀರಾವರಿಗೊಳಪಟ್ಟಿದೆ. ಬೇರೆಲ್ಲ ನೀರಾವರಿಗಿಂತ ಬಾವಿ ಹಾಗೂ ಕೊಳವೆ ಬಾವಿಗಳ ಮೂಲಕ ನೀರಾವರಿ ಮಾಡುವುದು ರೈತರಲ್ಲಿ ಮೂಡಿರುವುದು ಆಧುನಿಕ ಕೃಷಿ ತಂತ್ರ ಜ್ಞಾನವನ್ನು ಅಳವಡಿಸಿಕೊಂಡಿದ್ದರಿಂದ ಎಂಬುದು ಸ್ಪಷ್ಟವಾಗುತ್ತದೆ. ಹೈಬ್ರಿಡ್ ಭತ್ತ ಗೋಧಿ ಜೋಳ, ಮುಸುಕಿನ ಜೋಳ ಮುಂತಾದ ಬೆಳೆಗಳಿಗೆ ಅಧಿಕ ನೀರುಣಿಸಬೇಕಾಗಿರುವುದು ಅವಶ್ಯ. ಹೀಗೆ ಅಧಿಕ ನೀರುಣಿಸಲು, ನಾಲೆ, ಕೆರೆ ಇಲ್ಲದ ಕಡೆ ರೈತರು

ಕೊಳವೆ ಬಾವಿಗಳನ್ನು ತೆಗೆಸಿ, ಅದರ ಮೂಲಕ ಬೆಳೆಗಳಿಗೆ ನೀರು ಕೊಡುತ್ತಿರುವುದು ರೈತರ ತಂತ್ರಜ್ಞಾನ, ಜ್ಞಾನ ಹಾಗೂ ಕೃಷಿಯ ನಿರ್ವಹಣೆಯಲ್ಲದ ಬದಲಾವಣೆಗಳನ್ನು ತೋರಿಸುತ್ತದೆ. ಇಂತಹ ಬದಲಾವಣೆಗಳಿಂದಾಗಿ ಹೆಚ್ಚು ಹೆಚ್ಚು ರೈತರು ಅಧಿಕ ಇಳುವರಿ ತಳಿಗಳನ್ನು ಹೆಚ್ಚು ಹೆಚ್ಚು ರಸಗೊಬ್ಬರಗಳನ್ನು ಬಳಸುತ್ತಿದ್ದಾರೆ.

ಡಾ. ನೌಲ್ಸ್ (Dr. Knowles)ಎಂಬ ವಿದ್ವಾಂಸರು ನೀರಾವರಿಯ ಬಗ್ಗೆ ಹೀಗೆ ಹೇಳಿದ್ದಾರೆ. ನೀರಾವರಿ ರೈತರ ಜೀವನ ಭದ್ರತೆಯನ್ನು ಕಲ್ಪಿಸಿದೆ. ಇದು ಇಳುವರಿಯನ್ನು ಹೆಚ್ಚಿಸಿದೆ. ಭೂಮಿಯ ಮೌಲ್ಯವನ್ನು ಹೆಚ್ಚಿಸಿದೆ, ಭೂಮಿಯಿಂದ ಬರುವ ಆದಾಯವನ್ನು ಸಹ ಹೆಚ್ಚಿಸಿದೆ. ಇದರ ಜೊತೆಗೆ ಸರಕಾರಕೈಗೊಳ್ಳಬೇಕಾದ ಬರಗಾಲದ ವೆಚ್ಚವನ್ನು ಕಡಿತಗೊಳಿಸದೆ, ಕೃಷಿ ವಲಯದಿಂದ ಸರಕಾರಕ್ಕೆ ಬರುವ ಆದಾಯವನ್ನು ಹೆಚ್ಚಿಸಿದೆ.

ಈ ಹೇಳಿಕೆಯಿಂದ ಕಂಡು ಬರುವ ಅಂಶವೆಂದರೆ ಜಲಾಶಯಗಳಿಂದ ನಾಲೆಗಳ ಮೂಲಕ ಹರಿದು ಬರುವ ನೀರಾಗಲಿ, ಕೊಳವೆ ಬಾವಿಗಳ ಮೂಲಕ ರೈತರು ಕೈಗೊಳ್ಳುವ ನೀರಾವರಿ, ಭೂಮಿಗಿಂತ ಅತ್ಯಮೂಲ್ಯವಾದದ್ದು, ಏಕೆಂದರೆ ನೀರಾವರಿ ಸೌಲಭ್ಯವಿಲ್ಲದ ಭೂಮಿ, ಕೃಷಿಯನ್ನು ಆಧುನೀಕರಿಸುವ ಯಾವುದೇ ಅವಕಾಶಗಳಿಗೆ ತೆರೆದುಕೊಳ್ಳುವುದಿಲ್ಲ. ಇದರಿಂದಾಗಿ ಭೂಮಿಯ ಉತ್ಪಾದಕತೆ ಆಧಾಯ ಇತ್ಯಾದಿಗಳು ಹೆಚ್ಚುವುದಿಲ್ಲ. ಆದರೆ ಕೃಷಿಯ ಆಧುನೀಕರಣಕ್ಕೆ ಅವಶ್ಯವಾಗಿ ಬೇಕಾದ ಸಂಪನ್ಮೂಲ. ನೀರಾವರಿ ಇದ್ದರೆ ಆ ರೈತರನ್ನು ಸ್ವಾಭಾವಿಕವಾಗಿಯೇ ಸುಸ್ಥಿಯ ರೈತರು ಎಂದು ಪರಿಗಣಿಸಲಾಗುತ್ತದೆ. ನೀರಾವರಿ ಇಲ್ಲದೆ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗದು. ವಾಣಿಜ್ಯ ಬೆಳೆಗಳನ್ನು ಬೆಳೆಯಲು ನೀರಾವರಿ ಅವಶ್ಯವಾಗಿ ಬೇಕಾಗಿದೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಭೂಮಿಗೆ ಹೆಚ್ಚಿನ ಮೌಲ್ಯವು ಇರುತ್ತದೆ. ಆದರೆ ಒಣ ಭೂಮಿಯನ್ನು ತೆಗೆದುಕೊಂಡರೆ ರೈತರು ಬಡವರಾಗಿರುತ್ತಾರೆ ಮತ್ತು ಜೀವನಾವಶ್ಯಕ ಕೃಷಿಯಲ್ಲಿ ತೊಡಗಿರುತ್ತಾರೆ. ಇವರಿಗೆ ಭೂಮಿಯಿಂದ ಬರುವುದು ಅಲ್ಪ ಆದಾಯ. ಆದ್ದರಿಂದ ಇವರು ಹೆಚ್ಚು ಹೆಚ್ಚಾಗಿ ಕೃಷಿ ಕೂಲಿಗಳಾಗಿ ನೀರಾವರಿ ರೈತರ ಜಮೀನಿನಲ್ಲಿ ದುಡಿಯುತ್ತಾರೆ. ಆದ್ದರಿದ ನೀರಾವರಿ ರೈತರನ್ನು ಸಾಪೇಕ್ಷವಾಗಿ ಸಂಪದ್ಭರಿತ ರೈತರೆಂದರೆ ಅತಿಶಯೋಕ್ತಿಯೆನಿಸಲಾರದು.

ಅಲ್ಪಾವಧಿಯಲ್ಲಿ ಹೆಚ್ಚು ಇಳುವರಿ ಪಡೆಯಬೇಕೆಂಬುದರ ನೀರಾವರಿ ಅಮೂಲ್ಯವಾದ ಸಂಪನ್ಮೂಲ. ರೈತರು ಉಪಯೋಗಿಸುವ ಆಧುನಿಕ ಸಂಪನ್ಮೂಲಗಳಾದಂತಹ ಅಧಿಕ ಇಳುವರಿ ತಳಿಗಳು, ರಸಗೊಬ್ಬರಗಳು, ಯಂತ್ರೋಪಕರಣಗಳು ಇತ್ಯಾದಿ ಉತ್ಪಾದಕವಾಗಬೇಕಾದರೆ ನೀರಾವರಿ ಅತ್ಯವಶ್ಯ. ಬೆಳೆಗಳಿಗೆ ನೀರಿನ ಅವಶ್ಯಕತೆ ಮಣ್ಣಿನ ವಿಧ, ತಳಿಗಳ ವಿಧ, ವಾತಾವರಣ ಸಂಪನ್ಮೂಲಗಳನ್ನು ಉಪಯೋಗಿಸುವ ವಿಧಾನದ ಮೇಲೆ ನೀರಾವರಿ ಬಳಕೆ ನಿಂತಿರುತ್ತದೆ. ಮರಳು ವಿಧದ ಮಣ್ಣಿಗೆ

ಜಾಸ್ತಿ ನೀರು ಬೇಕಾಗುತ್ತದೆ. ಏಕೆಂದರೆ ಇವು ನೀರು ಹಿಡಿದಿಡುವ ಗುಣ ಅಲ್ಪವಾಧಿಯಾದದ್ದು ಆದರೆ ಸಣ್ಣ ಸಣ್ಣ ಕಣಗಳುಳ್ಳ ಮಣ್ಣಿಗೆ ನೀರಿನ ಅವಶ್ಯಕತೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಏಕೆಂದರೆ ಈ ಮಣ್ಣಿಗೆ ನೀರನ್ನು ದೀರ್ಘಾವಧಿಯವರೆಗೂ ಹಿಡಿದಿರುವ ಗುಣವಿರುತ್ತದೆ. ಬೆಳೆಗಳ ತಳಿಗಳ ವಿಧಗಳನ್ನು ತೆಗೆದುಕೊಂಡರೆ ಭತ್ತದ ಬೆಳೆಗೆ ಹೆಚ್ಚು ನೀರು ಬೇಕಾಗುತ್ತದೆ. ಹಾಗೆಯೇ ನೆಲಗಡಲೆ ಬೆಳೆಗೆ ಕಡಿಮೆ ಪ್ರಮಾಣದ ನೀರಿನ ಅವಶ್ಯಕತೆ ಇರುತ್ತದೆ. ಕೆಳಗಿನ ಕೋಷ್ಟಕದಲ್ಲಿ ವಿವಿಧ ಬೆಳೆಗಳು ಉಪಯೋಗಿಸುವ ನೀರನ್ನು ಕೊಡಲಾಗಿದೆ.

ಮುಖ್ಯ ಬೆಳೆಗಳಿಗೆ ಬೇಕಾಗುವ ನೀರಿನ ಅವಶ್ಯಕತೆ

ಬೆಳೆ	ಬೆಳೆಯ ಅವಧಿ (ದಿನಗಳಲ್ಲಿ)	ಒಟ್ಟು ನೀರಿನ ಅವಶ್ಯಕತೆ (ಎಕರೆ - ಇಂಚುಗಳಲ್ಲಿ)	ದಿನವಹಿ ನೀರು ಅವಶ್ಯಕತೆ (ಎಕರೆ - ಇಂಚುಗಳಲ್ಲಿ)
ಭತ್ತ	98	41.7	0.43
ಗೋಧಿ	88	14.8	0.17
ಕಬ್ಬು	365	95-00	0.26
ಹತ್ತಿ	202	42.2	0.21
ನೆಲಗಡಲೆ	124	26.1	0.21
ಜೋಳ	114	25.7	0.23
ಆಲೂಗಡ್ಡೆ	88	26.7	0.30

ಈ ಕೋಷ್ಟಕದಲ್ಲಿ ತಿಳಿಯುವುದೇನೆಂದರೆ ಭತ್ತ ಕಬ್ಬು, ಹತ್ತಿ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಉಪಯೋಗಿಸುತ್ತೇವೆ ಗೋಧಿ, ಜೋಳ ಆಲೂಗಡ್ಡೆಯಂತಹ ಬೆಳೆಗಳಿಗೆ ಕಡಿಮೆ ನೀರಿನ ಅವಶ್ಯಕತೆ ಆದ್ದರಿಂದ ಕೃಷಿ ಆಧುನೀಕರಣಗೊಂಡಲ್ಲಿ ಹೆಚ್ಚು ನೀರು ಬಳಕೆ ಮಾಡುವ ಬೆಳೆಗಳನ್ನು ರೈತರು ಬಳಸುತ್ತಾರೆ. ಹೀಗೆ ಕೃಷಿ ವಾಣಿಜ್ಯೀಕರಣಗೊಳುತ್ತದೆ.

ವಾತಾವರಣ ಸಹ ನೀರಿನ ಬಳಕೆಯ ಮೇಲೆ ಪ್ರಭಾವ ಬೀರುತ್ತದೆ. ಒಣಹವೆ, ಗಾಳಿಯಿಂದ ಕೂಡಿದ ವಾತಾವರಣ ವಿರುವ ಪ್ರದೇಶದಲ್ಲಿ, ನೀರು ಆವಿಯಾಗಿ ಹೋಗುವುದರಿಂದ ಹೆಚ್ಚಿನ ನೀರಿನ ಪ್ರಮಾಣದ ಅವಶ್ಯಕತೆ ಇದೆ, ಅದೆ ತಂಪಾದ ಸಣ್ಣ ಸಣ್ಣ ಕಣಗಳಲ್ಲಿ ಮಣ್ಣು ಗಿಡ ಮರಗಳಲ್ಲಿ ವಾತಾವರಣದಲ್ಲಿ ನೀರಿನ ಅವಶ್ಯಕತೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದ್ದರಿಂದ ಅಂತರ್ಜಲ ಹೆಚ್ಚಾಗಿರುವ ಪ್ರದೇಶದಲ್ಲಿ ನೀರಿನ ಬಳಕೆ ಪ್ರಮಾಣ ಕಡಿಮೆ ಇರುತ್ತದೆ. ಭೂಮಿಯನ್ನು ಸರಿಯಾಗಿ ಉಳುಮೆ ಮಾಡಿ ನೀರಾವರಿಗೆ ಬೇಕಾಗಿರುವ ಸಾಲೆಗಳನ್ನು ನಿರ್ಮಿಸದಿದ್ದರೆ ನೀರು ಪೋಲಾಗುವ ಸಾಧ್ಯತೆಗಳೇ ಹೆಚ್ಚು.

ಸರಕಾರ ಜಲಾಶಯಗಳನ್ನು ನಿರ್ಮಿಸಿ, ನೀರಾವರಿ ನೀಡುವ ಪ್ರದೇಶಗಳಲ್ಲಿ ತಾನು ಜಲಾಶಯಗಳನ್ನು ನಿರ್ಮಿಸುವ ವೆಚ್ಚ ಮಾಡಿದ ಹಣವನ್ನು ವಾಪಸ್ಸು ಪಡೆಯಲು ನೀರಿನ ಕರವನ್ನು ಹಾಕುತ್ತದೆ. ಇದು ನೀರಾವರಿ ಇಲಾಖೆಗೆ ಜವಾಬ್ದಾರಿಯನ್ನು ನೀಡಲಾಗಿದೆ. ಇದು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಗೊಳ್ಳುತ್ತದೆ. ಆದ್ದರಿಂದ ಕೆಲವು ರಾಜ್ಯಗಳಲ್ಲಿ ರೈತರು ಬಳಸಿದ ಒಟ್ಟು ನೀರಿನ ಪ್ರಮಾಣದ ಮೇಲೆ ನೀರಿನ ಕರವನ್ನು ವಿಧಿಸಿದರೆ, ಕೆಲವು ರಾಜ್ಯಗಳಲ್ಲಿ ಎಕರೆವಾರು ಬಳಕೆಯ ಮೇಲೆ ನೀರಿನ ಕರವನ್ನು ವಿಧಿಸುತ್ತಾರೆ. ಇನ್ನು ಕೆಲವು ರಾಜ್ಯಗಳಲ್ಲಿ ಬೆಳೆಯುವ ಬೆಳೆಗಳ ಮೇಲೆ ನೀರಿನ ಕರವನ್ನು ವಿಧಿಸುತ್ತಾರೆ. ಹೀಗೆ ನೀರಿನ ಧರಗಳನ್ನು ನಿಗದಿಪಡಿಸುತ್ತಾರೆ.

ಕೃಷಿ ಯಂತ್ರೀಕರಣ : ಕೃಷಿ ಆಧುನೀಕರಣ ಗೊಂಡಂತಲ್ಲಿ ಕೃಷಿ ಯಂತ್ರಗಳ ಉಪಯೋಗ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

ಟ್ರಾಕ್ಟರ್ ಗಳು ಮತ್ತು ಪವರ್ ಟಿಲರ್ ಗಳು ಉತ್ಪಾದನೆ ಮತ್ತು ಮಾರಾಟ.

(ಸಂಖ್ಯೆ ಸಾವಿರಗಳಲ್ಲಿ)

ವರ್ಷ	ಉತ್ಪಾದನೆ		ಮಾರಾಟ	
	ಟ್ರಾಕ್ಟರ್	ಪವರ್ ಟಿಲ್ಲರ್	ಟ್ರಾಕ್ಟರ್	ಪವರ್ ಟಿಲ್ಲರ್
1991-92	151.7	7.6	150.6	7.5
1992-93	147.0	8.6	144.3	8.6
1995-94	137.4	9.0	138.8	9.0
1994-95	164.00	8.3	164.8	8.3
1995-96	190.00	10.2	191.5	10.00

ಈ ಮೇಲಿನ ಅಂಕಿ ಅಂಶಗಳ ಪ್ರಕಾರ 1992-93 1993-94 ರಲ್ಲಿ ಟ್ರಾಕ್ಟರುಗಳ ಉತ್ಪಾದನೆಯಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದು ಬಿಟ್ಟರೆ ಉಳಿದ ವರ್ಷಗಳಲ್ಲಿ ಟ್ರಾಕ್ಟರುಗಳ ಉತ್ಪಾದನೆಯಲ್ಲಿ ಹೆಚ್ಚಳ ಕಂಡಿದೆ . ಈ ಹೆಚ್ಚಳಕ್ಕೆ ಕಾರಣವೆಂದರೆ ಗ್ರಾಮೀಣ ಪ್ರದೇಶದ ರೈತರು ವರ್ಷದಿಂದ ವರ್ಷಕ್ಕೆ ಟ್ರಾಕ್ಟರ್ ಹಾಗೂ ಪವರ್ ಟಿಲ್ಲರ್ ಗಳ ಬಳಕೆ ಹೆಚ್ಚಾಗಿರುವುದು, ಭಾರತ ಕಾರ್ಮಿಕರ ಹೆಚ್ಚಳದಿಂದ ಕೂಡಿದೆ ಎಂದು ಹೇಳಿದರು. ಕೆಲವು ಋತು ಮಾನಗಳಲ್ಲಿ ಒಂದೆ ಬಾರಿಗೆ ಬೆಳೆಗಳನ್ನು ಬಿತ್ತುವುದು, ಇನ್ನಿತರ ಕೃಷಿ ಚಟುವಟಿಕೆಗಳು ನಡೆಯುವುದರಿಂದ, ಕಾರ್ಮಿಕ ಕೊರತೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ರೈತರ ನೆರವಿಗೆ ಬರುವುದು ಕೃಷಿ ಯಂತ್ರೋಪಕರಣಗಳು ಇದರೆ ಜೊತೆಗೆ ಕೃಷಿಯಲ್ಲಿ ಯಂತ್ರೋಪಕರಣಗಳನ್ನುಬಳಸುವುದರಿಂದ ಸಮಯಕ್ಕೆ ಸರಿಯಾಗಿ ಕೃಷಿ ಕಾರ್ಯವನ್ನು

ಮುಗಿಸುವುದರಿಂದ ಉತ್ಪಾದಕತೆ ಜಾಸ್ತಿಯಾಗುತ್ತದೆ, ಎಂಬ ಅಭಿಪ್ರಾಯವನ್ನು ನೀಡಿದ್ದಾರೆ. ಆದರೆ ಕೃಷಿ ವಲಯ ನೀರಾವರಿ ಅಧಿಕ ಇಳುವರಿ ತಳಿಗಳಿಂದ ಹಾಗೂ ರಸಗೊಬ್ಬರ ಗಳ ಬಳಕೆಯಿಂದ ಬಂಡವಾಳ ಪೌಷ್ಟೀಕರಣಗೊಳ್ಳುವ ಪ್ರಕ್ರಿಯೆಯ ಭಾಗವಾಗಿ ಕೃಷಿ ಯಂತ್ರೀಕರಣ ನಡೆದಿದೆ. ದೊಡ್ಡ ಹಿಡುವಳಿದಾರರೆ ಪ್ರಮುಖವಾಗಿ ಕೃಷಿಯನ್ನು ಯಂತ್ರೀಕರಿಸುತ್ತಿರುವುದು. ಇವರ ಕೃಷಿ ಬಂಡವಾಳ, ಹೆಚ್ಚಳದಿಂದ ನಡೆಯುವ ಕೃಷಿಯನ್ನೇ ನಾವು ಆಧುನಿಕ ಕೃಷಿಯೆಂದು ಕರೆಯುವದು. ಏಕೆಂದರೆ ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸಬೇಕಾದ ಅಧಿಕ ಬಂಡವಾಳವನ್ನು ಹೂಡಬೇಕಾಗುತ್ತದೆ. ಕೃಷಿ ಯಂತ್ರಗಳಿಗೆ ರೈತರು ಅಳವಡಿಸಿಕೊಳ್ಳಲು ಸರಕಾರ ಉತ್ತೇಜಿಸುತ್ತಿರುವ ನೀತಿಗಳು ಸಹಾಯಧನ ಎಲ್ಲವನ್ನು ಈ ಮೇಲ್ಪದರು ರೈತರು ಬಳಸಿಕೊಳ್ಳುತ್ತಿದ್ದಾರೆ ಶೇ. 80 ಕ್ಕಿಂತ ಅಧಿಕ ಸಣ್ಣ ಅತಿ ಸಣ್ಣ ಹಾಗೂ ಅತಿ ಮಧ್ಯಮ ಹಿಡುವಳಿದಾರರಿರುವ ಭಾರತದಲ್ಲಿ ಕೃಷಿಯನ್ನು ಯಂತ್ರೀಕರಿಸುವ ಜರೂರು ಇಲ್ಲ. ಏಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಹೇರಳವಾಗಿರುವ ಕಾರ್ಮಿಕ ಶಕ್ತಿಯನ್ನು ಬಳಸಿಕೊಂಡು ಉದ್ಯೋಗ ಸೃಷ್ಟಿಸಬಹುದು, ಆದರೆ ಸದ್ಯದ ಕೃಷಿ ನೀತಿಗಳಿಂದಾಗಿ, ದೊಡ್ಡ ಹಿಡುವಳಿದಾರರು ಕೃಷಿಯನ್ನು ಯಂತ್ರೀಕರಿಸಲು ಮುಂದಾಗಿದ್ದಾರೆ. ಇದು ಕೃಷಿಕರನ್ನು ಬಂಡವಾಳಷಾಹಿಗೊಳಿಸುವ ಪ್ರಕ್ರಿಯೆ. ಅಲ್ಲದೆ ಮತ್ತೇನು ಅಲ್ಲ. ಇವು ಶ್ರಮ ಸಾಂಧ್ರಕೃಷಿಯಿಂದ ಬಂಡವಾಳ ಸಾಂಧ್ರ ಕೃಷಿಯೆಡೆಗೆ ನಡೆಯುವ ಪ್ರಕ್ರಿಯೇ ಆದರೆ ಕೃಷಿ ಯಂತ್ರೋಪಕರಣ ಪರವಾಗಿ ವಾದಿಸುತ್ತಿರುವ ತಜ್ಞರ ಪ್ರಕಾರ ಇದು ಶೇ. 60 ರಷ್ಟು ಇಳುವರಿಯನ್ನು ಹೆಚ್ಚಿಸುತ್ತದೆ ಎಂಬ ಅಭಿಪ್ರಾಯವ್ನ ಪಡುತ್ತಾರೆ.,ಆದರೆ ಕೃಷಿ ಯಾಂತ್ರೀಕರಣ ಬಂಡವಾಳಷಾಹಿ ರೈತರಿಗೆ ಮಾತ್ರ ಪ್ರಯೋಜನ ಕಾರಿಯಾದದ್ದು, ಆಧುನಿಕ ಕೃಷಿಯಲ್ಲಿ ಮಾತ್ರ ಬಳಸಲು ಸಾಧ್ಯ. ಬಂಡವಾಳ ಶಾಹಿ ರೈತರು ಕಡಿಮೆ ಪ್ರಮಾಣದಲ್ಲಿ ಕೃಷಿ ಕಾರ್ಮಿಕರ ಮೇಲೆ ಅವಲಂಬಿತರಾಗಿರಬೇಕಾಗುತ್ತದೆ. ಆದ್ದರಿಂದ ಕೃಷಿ ಯಂತ್ರೋಪಕರಣ ಶ್ರೀಮಂತರ ಕೈಗುಟುವಂತೆ ಮಾಡಿದೆ. ಇದೇ ಆಧುನಿಕ ಕೃಷಿಯ ಲಕ್ಷಣ

ಕೃಷಿ ಆಧುನೀಕರಣದಲ್ಲಿ ರಸಗೊಬ್ಬರಗಳ ಪಾತ್ರ : ರಸಗೊಬ್ಬರ ಕೃತಕ ಗೊಬ್ಬರಗಳು, ಇವುಗಳಲ್ಲಿ ಮೂರು ವಿಧಗಳಿಗೆ ಮೊದಲನೆಯದಾಗಿ ಸಾರಜನಕ ರಸಗೊಬ್ಬರಗಳು, ಎರಡನೆಯದಾಗಿ ರಂಜಕ ರಸಗೊಬ್ಬರಗಳು ಮೂರನೆಯದಾಗಿ ಪೊಟ್ಯಾಷ್ ರಸಗೊಬ್ಬರ, ಇವು ನೀರಾವರಿಗೆ ಹಾಗೂ ಅಧಿಕ ಇಳುವರಿ ತಳಿಗಳೊಂದಿಗೆ ಸೇರಿ ಒಟ್ಟಾರೆ ಇಳುವರಿಯನ್ನು ಹೆಚ್ಚಿಸುತ್ತವೆ. ಭೂಮಿಯ ಉತ್ಪಾದಕತೆಯನ್ನು ಸಹ ಹೆಚ್ಚಿಸುತ್ತದೆ. ನೀರಾವರಿ ಹಾಗೂ ಸುಧಾರಿತ ತಳಿಗಳಲ್ಲದಿದ್ದರೆ ರಸಗೊಬ್ಬರಗಳನ್ನು ಬಳಸುವುದು ವ್ಯರ್ಥ. ಏಕೆಂದರೆ ಹಸಿರು ಕ್ರಾಂತಿ ತಂತ್ರಜ್ಞಾನವೆಂದರೆ ಈ ಎಲ್ಲ ಅಂಶಗಳನ್ನೊಳಗೊಂಡ ಒಂದು ವ್ಯವಸ್ಥಿತ ಗುಚ್ಛ ಆದ್ದರಿಂದ ರಸಗೊಬ್ಬರಗಳನ್ನು ನೀರಾವರಿ ಇಲ್ಲದ, ಸುಧಾರಿತ ತಳಿಗಳನ್ನು ಉಪಯೋಗಿಸದ ಭೂಮಿಗೆ ಉಪಯೋಗಿಸಿದರೆ ಏನು ಪ್ರಯೋಜನವಿಲ್ಲ, ಆದ್ದರಿಂದ ಇದನ್ನು ಇನ್ನಿತರ ಸಂಪನ್ಮೂಲಗಳ

ಜೊತೆಯೇ ಉಪಯೋಗಿಸಬೇಕು. ಭತ್ತ ಹಾಗೂ ಇನ್ನಿತರ ಏಕದಳ ಬೆಳೆಗಳನ್ನು ತೆಗೆದುಕೊಳ್ಳಬಹುದು ಭತ್ತದಲ್ಲಿ ರಾಸಾಯನಿಕ ಗೊಬ್ಬರಗಳ ನಿರ್ವಹಣೆ ಇದೀಗ ಹಲವಾರು ಹೆಚ್ಚು ಇಳುವರಿ ಕೊಡುವ ಭತ್ತದ ತಳಿಗಳು ಬಳಕೆಯಲ್ಲಿವೆ. ಇವು ರಾಸಾಯನಿಕ ಗೊಬ್ಬರಗಳನ್ನು ಹೆಚ್ಚು ಸಮರ್ಪಕವಾಗಿ ಉಪಯೋಗಿಸಿಕೊಳ್ಳಬಲ್ಲವು. ಇದರಿಂದಾಗಿ ಈ ತಳಿಗಳ ಬೇಸಾಯದಿಂದ ಬರುವ ಇಳುವರಿ ಸಹ ನಮ್ಮ ಸ್ಥಳೀಯ ತಳಿಗಳಿಗಿಂತ ಹೆಚ್ಚು ಈ ಹೆಚ್ಚು ಇಳುವರಿ ಕೊಡುವ ತಳಿಗಳಿಗೆ ಯಾವ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಒದಗಿಸಿದರೂ ಅವು ನಮ್ಮ ಸ್ಥಳೀಯ ತಳಿಗಳಿಗಿಂತ ಉತ್ತಮವಾಗಿ ಇಳುವರಿ ಕೊಡಬಲ್ಲವು. ಬೇಸಾಯ ಕ್ರಮಗಳ್ನನು ಸರಿಯಾದ ರೀತಿಯಲ್ಲಿ ಅನುಸರಿಸದಿದ್ದಲ್ಲಿ ರಸಗೊಬ್ಬರಗಳನ್ನು ಕೊಡುವುದರಿಂದ ಮಾತ್ರವೇ ಹೆಚ್ಚು ಇಳುವರಿ ಕೊಡುವ ತಳಿಗಳಿಂದ ಉತ್ತಮ ಇಳುವರಿ ಪಡೆಯಲಾಗುವುದಿಲ್ಲ. ಒಂದು ಪ್ರದೇಶದಲ್ಲಿ ಬರುವ ಇಳುವರಿಯು ಹೆಚ್ಚಾಗಿ ಆ ಪ್ರದೇಶದಲ್ಲಿರುವ ತೆನೆಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ತೆನೆಗಳು ಸರಿಯಾದ ರೀತಿಯಲ್ಲಿ ಬರಬೇಕಾದಲ್ಲಿ ಸಾರಜನಕ ಪೂರೈಕೆ ಅವಶ್ಯ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.ಆದ್ದರಿಂದ ಭತ್ತದ ಬೆಳೆ ನಿರ್ವಹಣೆಯಲ್ಲಿ ಪ್ರತಿ ಪೈರಿನಲ್ಲೂ ಹೆಚ್ಚತು ಇಲುಕುಗಳು ಬೆಳೆಯುವಂತೆ ಮಾಡುವುದು ಮುಖ್ಯ ಅಂಶ ಆಗ ಮಾತ್ರ ಹೆಚ್ಚು ಇಳುವರಿ ನಿರೀಕ್ಷಿಸಲು ಸಾಧ್ಯ.

ಸಾರಜನಕ ಅಂಶ ಪೋಲಾಗಲು ಮುಖ್ಯ ಕಾರಣ : ನೀರು ಹೆಚ್ಚಾಗಿ ನಿಂತಿರುವ ಪ್ರದೇಶಗಳಲ್ಲಿ ಸಾರಜನಕದ ಅಂಶ ಪೋಲಾಗುವುದು ಖಚಿತವಾದದ್ದು, ಬೇಸಾಯದ ದೃಷ್ಟಿಯಿಂದ ನಾಲ್ಕು ವಿಧದಲ್ಲಿ ಸಾರಜನಕ ಪೋಲಾಗುತ್ತದೆ. 1) ಹರಿದು ಹೋಗುವುದು 2) ಮರಳು ಮಿಶ್ರಿತ ಮಣ್ಣಿನಲ್ಲಿ ಇಂಗಿ ಹೋಗುವುದು 3) ಯೂರಿಯಾ ಗೊಬ್ಬರವನ್ನು ಮಣ್ಣಿನ ಮೇಲೆ ಉದುರಿಸಿದಾಗ ಅದರಲ್ಲಿ ಸ್ವಲ್ಪ ಭಾಗ ಅಮೋನಿಯ ಸಾರಜನಕವಾಗಿ ರೂಪಾಂತ ಹೊಂದಿ ಆವಿಯಾಗುವುದು. 4) ನೈಟ್ರೇಟ್ ರಹಿತವಾಗುವುದು.

ಸಾರಜನಕ ವನ್ನು ಒದಗಿಸುವ ಕಾಲ : ಪ್ರತಿ ಹೆಕ್ಟೇರಿಗೆ ಬರುವ ಇಳುವರಿ ಹೆಚ್ಚಾಗಬೇಕಾದಲ್ಲಿ ಪ್ರತಿ ಕಿ.ಗ್ರಾಂ ಸಾರಜನಕದಿಂದಲೂ ಸಿಗುವ ಉತ್ಪತ್ತಿಯ ಕಡೆಗೆ ಗಮನ ಕೊಡುವುದು ಅಗತ್ಯ ಭತ್ತದ ಬೆಳೆಗೆ ಕೊಡಬೇಕಾದ ಸಾರಜನಕ ರಸಗೊಬ್ಬರಗಳನ್ನು ಒಂದೇ ಬಾರಿ ಕೊಡುವುದಕ್ಕೆ ಬದಲು ಎರಡು ಮೂರು ಬಾರಿ ಕೊಡುವುದುರಿಂದ ಬೆಳೆಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಬೆಳೆಗೆ ಬೇಕಾದಷ್ಟು ಪ್ರಮಾಣದ ಸಾರಜನಕವನ್ನು ಒದಗಿಸಿದಂತಾಗುವುದರ ಜೊತೆಗೆ ಪೋಲಾಗುವ ಸಾರಜನಕವನ್ನು ಕಡಿಮೆ ಮಾಡಬಹುದು. ಈ ರೀತಿ ಎರಡು ಮೂರು ಬಾರಿ ಕೊಡುವುದರಿಂದ ಪೈರೆಲ್ಲವೂ ಒಂದೇ ಸಮನಾಗಿ ಏರು ಪೇರಿಲ್ಲದೆ ಬೆಳೆಯಲು ಸಾಧ್ಯವಾಗುತ್ತದೆ. ಒಂದು ವೇಳೆ ಸಾರಜನಕವನ್ನು ಒಂದೇ ಬಾರಿ ಬೆಳೆಗೆ ಒದಗಿಸಿದಲ್ಲಿ ಕೆಲವು ಕಡೆ ಚೆನ್ನಾಗಿ ಬೆಳೆದು, ಇನ್ನು ಕೆಲವು ಕಡೆ ಸಾರಜನಕದ ಕೊರತೆಯ ಲಕ್ಷಣವನ್ನು ತೋರುತ್ತದೆ.

ಭತ್ತದ ಪೈರಿನ ಬೆಳವಣಿಗೆ ಕಾಲದಲ್ಲಿ ಮತ್ತು ತೆನೆ ಬರುವುದಕ್ಕೆ ಮೊದಲು ಎರಡು ಬಾರಿ ಸಾರಜನಕ ಅತ್ಯವಶ್ಯಕವಾಗಿ ಕೊಡಬೇಕು. ಜೊತೆಗೆ ಮಣ್ಣಿನ ಗುಣ ಮತ್ತು ತಳಿಗಳನ್ನು ಅವಲಂಬಿಸಿ ಕೊಡಬೇಕಾದ ಸಾರಜನಕದ ಪ್ರಮಾಣ ಮತ್ತು ಕಾಲವನ್ನು ನಿರ್ಧರಿಸಬೇಕಾಗುತ್ತದೆ.

ಭತ್ತದ ಇಳುವರಿ ಹೆಚ್ಚಿಸಬೇಕಾದಲ್ಲಿ ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಕಾಳುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಎರಡನೆಯದಾಗಿ ಪ್ರತಿ ತೆನೆಯಲ್ಲಿಯೂ ಇರುವ ಕಾಳುಗಳ ಸಂಖ್ಯೆ ಹೆಚ್ಚಾಗಬೇಕು. ಕೊನೆಗೆ ಕಾಳು ಜೊಳ್ಳಾಗದೆ ಗಟ್ಟಿಕಾಳಾಗಬೇಕು. ಒಂದು ಪ್ರದೇಶದಲ್ಲಿ ಬರುವ ತೆನೆಗಳ ಸಂಖ್ಯೆ ಆ ಪ್ರದೇಶದಲ್ಲಿ ಪ್ರತಿ ಪೈರಿನಲ್ಲೂ ಬಂದಿರುವ ಇಲುಕುಗಳ ಸಂಖ್ಯೆಯನ್ನು ಅವಲಂಬಿದೆ. ಆದ್ದರಿಂದ ಇಲುಕುಗಳು ಬರುವ ಸಮಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾರಜನಕವನ್ನು ಒದಗಿಸುವುದು. ಬಹು ಮುಖ್ಯ ಅಂಶ 0.9 ಚ.ಮೀ. ಮಧ್ಯಮಾವಧಿ ತಳಿಗಳಲ್ಲಿ 900 ಕ್ಕೂ ಹೆಚ್ಚು ಇಲುಕುಗಳು ಇರುವುದಾದಲ್ಲಿ ಉತ್ತಮ ಬೆಳೆ ಎನ್ನಬಹುದು.

ಸಾರಜನಕವನ್ನು ಒದಗಿಸುವ ಸಮಯ ಮತ್ತು ಪ್ರಮಾಣವನ್ನು ನಿರ್ಧರಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಡೆ

1. ಪೈರಿನ ಬೆಳವಣಿಗೆಯ ಪ್ರಾರಂಭದಲ್ಲಿ ಸಾರಜನಕವನ್ನು ಒದಗಿಸುರುದರಿಂದ ಇಲುಕುಲುಗಳು ಚೆನ್ನಾಗಿ ಬರುತ್ತವೆ.
2. ತಡವಾಗಿ ಸಾರಜನಕ ಒದಗಿಸುವುದರಿಂದ ಇಲುಕಿನ ಬೆಳವಣಿಗೆಯಾಗುವುದಿಲ್ಲ ಇದರಿಂದ ಬರುವ ತೆನೆಗಳಲ್ಲಿ ಮಾತ್ರ ಸರಿಯಾದ ಪ್ರಮಾಣದಲ್ಲಿ ಕಾಳು ಕಟ್ಟುತ್ತದೆ.
3. ತಡವಾಗಿ ಹಾಗೂ ತೆನೆ ಬರುವುದಕ್ಕೆ ಮೊದಲು ಹೆಚ್ಚಿನ ಪ್ರಮಾಣದಲ್ಲಿ ಸಾರಜನಕವನ್ನು ಒದಗಿಸಿದ್ದಲ್ಲಿ ಕಾಳಿನಲ್ಲಿರುವ ಸಾರಜನಕದ ಅಂಶ ಹೆಚ್ಚುತ್ತದೆ. ಆದ್ದರಿಂದ ತಡವಾಗಿ ಸಾರಜನಕ ವನ್ನು ಒದಗಿಸುವುದು ಸರಿಯಾದ ಪದ್ಧತಿಯಲ್ಲಿ ಇದರಿಂದ ಬೆಳೆ ಇಳುವರಿ ಹೆಚ್ಚಾಗಲಾರದು.

ಸಾರಜನಕ ಪ್ರಮಾಣ : ಹೆಚ್ಚು ಇಳುವರಿ ಕೊಡುವ ತಳಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಒದಗಿಸಿದಾಗ ಮಾತ್ರ ಅಧಿಕ ಇಳುವರಿ ಕೊಡುತ್ತವೆ. ಎಂಬ ಅಭಿಪ್ರಾಯ ಆಧಾರ ರಹಿತವಾದದ್ದು. ಈ ಹೆಚ್ಚು ಇಳುವರಿ ಕೊಡುವ ತಳಿಗಳು, ಸಾಧಾರಣ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಕೊಟ್ಟಾಗಲು ನಮ್ಮ ಸ್ಥಳೀಯ ತಳಿಗಳಿಗಿಂತ ಹೆಚ್ಚು ಇಳುವರಿ ಕೊಡುತ್ತವೆ. ಭತ್ತದ ಬೆಳೆಯಲ್ಲಿ ಒದಗಿಸುವ ಸಾರಜನಕ, ರಾಸಾಯನಿಕ ಗೊಬ್ಬರದ ಪ್ರಮಾಣಕ್ಕಿಂತ ಅನುಸರಿಸುವ ಬೇಸಾಯ ಕ್ರಮಗಳು ಮುಖ್ಯ. ಇಂದಿನ ಗೊಬ್ಬರ ದುಬಾರಿ ಬೆಲೆಯ ಪರಿಸ್ಥಿತಿಯಲ್ಲಿ ರಾಸಾಯನಿಕ ಗೊಬ್ಬರಗಳ ಪ್ರಮಾಣವನ್ನು ಕಡಿಮೆ ಮಾಡಿ ಉತ್ತಮ ಬೇಸಾಯ ಕ್ರಮಗಳನ್ನು ಅನುಸರಿಸುವುದರ ಕಡೆ ನಮ್ಮ ಗಮನ ಹರಿಸಬೇಕು. ಮಳೆಗಾಲದಲ್ಲಿ ಬೆಳೆಗೆ ಹೆಕ್ಟೇರಿಗೆ 100 ಕಿ.ಗ್ರಾಂ ಸಾರಜನಕ ಒದಗಿಸಿದರೆ

ಸಾಕು. ಒಳ್ಳೆ ಬೆಳೆ ಬರುತ್ತದೆ.

ಸಿಂಪರಣೆಯ ಮೂಲಕ ಸಾರಜನಕ ವನ್ನು ಒದಗಿಸುವುದು. ಭತ್ತದ ಬೆಳೆಗೆ ಸಿಂಪರಣೆ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಸಾರಜನಕವನ್ನೆ ಒದಗಿಸಬಹುದಾದರೂ ಇದುವರೆಗೂ ಬಂದಿರುವ ಫಲಿತಾಂಶಗಳ ಆಧಾರದ ಮೇಲೆ ಹೆಚ್ಚಿನ ಪ್ರದೇಶಗಳಿಗೆ ಸಿಂಪರಣೆ ಮೂಲಕ ಸಾರಜನಕವನ್ನು ಒದಗಿಸುವ ವಿಧಾನವವನ್ನು ಕಾರ್ಯರೂಪಕ್ಕೆ ತರುವುದು ಸುಲಭವಲ್ಲ. ಆದರೆ ಇದರಿಂದ ಹಲವು ಉಪಯೋಗಗಳಿವೆ ಮರಳು ಮಿಶ್ರಿತ ಮಣ್ಣಿನ ಸಾರಜನಕವ್ನನು ಸೇರಿಸಿದಲ್ಲಿ ಇಂಗಿ ಪೋಲಾಗುವುದೇ ಹೆಚ್ಚು. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಸಾರಜನಕ ಗೊಬ್ಬರಗಳನ್ನು ಚೆಲ್ಲಿದಾಗ ಹೆಚ್ಚಿನ ಭಾಗ ನೀರಿನಲ್ಲಿ ಕರಗಿ ಹರಿದು ಹೋಗುತ್ತಿವೆ. ಸಿಂಪರಣೆ ಮೂಲಕ ಒದಗಿಸುವುದು ಇಂತಹ ಸಂದರ್ಭದಲ್ಲಿ ಪರಿಣಾಮಕಾರಿ.

ರಂಜಕ ಮತ್ತು ಪೊಟ್ಯಾಷ್ ಗಳ ಬಳಕೆ : ಸಾರಜನಕವನ್ನು ಪೈರು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ಮಣ್ಣಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಂಜಕವೂ ಇರಲೇಬೇಕು ರಂಜಕದ ಕೊರತೆ ಇರುವಲ್ಲಿ ಸಾರಜನಕ ಮತ್ತು ಪೊಟ್ಯಾಷ್ ಒದಗಿಸುವುದರಿಂದ ನಿರೀಕ್ಷಿಸಿದಷ್ಟು ಉಪಯೋಗ ಪಡೆಯಲಾಗುವುದಿಲ್ಲ. ಸದಾ ಕಾಲದಲ್ಲಿಯೂ ನೀರು ನಿಲ್ಲುವ ಪ್ರದೇಶಗಳಲ್ಲಿ ಪೈರಿಗೆ ಒದಗಬಹುದಾದ ರಂಜಕ ಪ್ರಮಾಣ ಕೇಂದ್ರೀಕೃತವಾಗುತ್ತದೆ. ಆದ್ದರಿಂದ ನಾಲೆಯ ಸಮಯದಲ್ಲಿ ಸಾಕಷ್ಟು ಪ್ರಮಾಣದಜಲ್ಲಿ ಸಾರಜನಕವನ್ನು ಒದಗಿಸುವುದರಿಂದ ಉತ್ತಮ ಮಟ್ಟದಲ್ಲಿ ರಂಜಕದ ಉಪಯೋಗ ಪಡೆಯಬಹುದು. ಭತ್ತದ ಪೈರು ಪ್ರಾರಂಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಂಜಕವನ್ನು ಬಳಸುತ್ತದೆ. ಪೈರು ಸಾರಜನಕ ಮತ್ತು ರಂಜಕಕ್ಕಿಂತಲೂ ಮರಳು ಮಣ್ಣಿನ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಪೊಟ್ಯಾಷಿಯಂ ಬಳಸುತ್ತದೆ. ಇದನ್ನು ಬೆಳೆಯ ಪ್ರಾರಂಭದಲ್ಲಿಯೇ ರಂಜಕದ ಜೊತೆಯಲ್ಲಿ ಒದಗಿಸಬೇಕು. ಬೆಳೆಗೆ ಕೊಡಬೇಕಾದ ರಂಜಕ ಮತ್ತು ಪೊಟ್ಯಾಷಿಯಂ ಪ್ರಮಾಣವನ್ನು ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ನಿರ್ಧರಿಸಿ.

ತಳಿಯ ಹೆಸರು	ಅವಧಿ (ದಿನಗಳು)	ರಸಗೊಬ್ಬರಗಳು (ಕೆ. ಜಿ. ಹೆಕ್ಟೇರಿಗೆ) 100:50:50	ಇಳುವರಿ ಕ್ವಿಂಟಾಲ್ / ಹೆಕ್ಟೇರಿಗೆ
ಜಯ	140-145		55-60
ಮಂಡ್ಯ ವಿಜಯ	140-145		50-55
ಐ.ಆರ್ -20	150-135		45-50
ಪುಷ್ಪ	130-135		45-50
ಎಂ.ಟಿ.ಯು 1001	130-135		45-50

ಈ ಮೇಲಿನ ಕೋಷ್ಟಕದಲ್ಲಿ ನೀಡಿರುವ ಅಂಕಿ ಅಂಶಗಳು ಭತ್ತದ ಉತ್ಪಾದನೆಯ ಪ್ರತಿ ಎಕರೆಗೆ ರಸಗೊಬ್ಬರಗಳು ಹಾಗೂ ಇನ್ನಿತರ ಆತ್ಯಾಧುನಿಕ ಸಂಪನ್ಮೂಲಗಳನ್ನು ಬಳಕೆ ಮಾಡುವುದರಿಂದ ಉತ್ಪಾದನೆಯ ಹೆಚ್ಚಳವಾಗಿರುವುದನ್ನು ಕಾಣಬಹುದಾಗಿದೆ. ಸ್ಥಳೀಯ ತಳಿಗಳ ಈ ಇಳುವರಿಯಲ್ಲಿ ಕಾಲು ಭಾಗವು ನೀಡುವುದಿಲ್ಲ. ಎಂಬುದು ಸ್ಪಷ್ಟ. ಆದ್ದರಿಂದ ಆಧುನಿಕ ಕೃಷಿಯಲ್ಲಿ ಉಪಯೋಗಿಸುವ ಸುಧಾರಿತ ತಳಿಗಳು, ಇವುಗಳ ಅವಧಿ ಮತ್ತು ಇಳುವರಿ ಒಂದಕ್ಕೊಂದು ಅಂತರಿಕ ಸಂಬಂಧವನ್ನು ಹೊಂದಿವೆ ಎಂಬುದು ಸ್ಪಷ್ಟವಾಗಿದೆ. ಇದ್ದು ಫಾರ್ಮಾ ಹಂತದಲ್ಲಿ ನಡೆಯುವ ಪ್ರಕ್ರಿಯೆ ಅಂದರೆ ಒಂದು ಎಕರೆಯಲ್ಲಿ ಜಯ ಎನ್ನುವ ಸುಧಾರಿತ ಭತ್ತದ ತಳಿ 140 ದಿವಸಗಳಲ್ಲಿ55-60 ಕ್ವಿಂಟಾಲ್ ಪ್ರತಿ ಎಕರೆಗೆ ಇಳುವರಿ ನೀಡುತ್ತದೆ. ಹೀಗೆ ತೆನೆ ತೆನೆ ಗೂಡಿ ರಾಷ್ಟ್ರ ಮಟ್ಟದಲ್ಲಿ ಭತ್ತ ಹಾಗೂ ಇನ್ನಿತರ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಗುತ್ತದೆ. ಆಧುನಿಕ ಕೃಷಿ ತಂತ್ರಜ್ಞಾನವನ್ನು ಅನುಸರಿಸುತ್ತಿರುವುದರಿಂದಲೇ ಭಾರತದ ಜನಸಂಖ್ಯೆ ಬೆಳವಣಿಗೆಯಿಂದ ಉಂಟಾಗಿರುವ ಆಹಾರ ಧಾನ್ಯಗಳ ಹೆಚ್ಚಿದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಿರುವುದು.

ಋತುಮಾನದನ್ವಯ ಆಹಾರ ಧಾನ್ಯಗಳ , ಇಳುವರಿ, ಮತ್ತು ಸರಾಸರಿ ಇಳುವರಿ ಹೆಕ್ಟೇರುವಾರು.

ವರ್ಷ	ಕ್ಷೇತ್ರ ದಶಲಕ್ಷ ಹೆಕ್ಟೇರುಗಳಲ್ಲಿ	ಉತ್ಪಾದನೆ ದಶ ಲಕ್ಷ ಟನ್‌ಗಳು	ಇಳುವರಿ ಕಿ.ಗ್ರಾಂ / ಹೆಕ್ಟೇರು
1967 -68	121.42	95.05	783
1977-78	127.52	126.41	991
1987 -88	119.69	140.35	1173
1997-98	123.85	192.26	1552
2000-2001	123.06	208.87	1697

ಮೂಲ: ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ ಮಿನಿಸ್ಟ್ರಿ ಆಫ್ ಅಗ್ರಿಕಲ್ಚರಲ್ ನ್ಯೂಡೆಲ್ಲಿ

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಹಸಿರು ಕ್ರಾಂತಿ ಪ್ರಾರಂಭವಾದ ವರ್ಷದಲ್ಲಿ ಅಂದರೆ 1967 - 68 ರಲ್ಲಿ 121.42 ದಶಲಕ್ಷ ಹೆಕ್ಟೇರುಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲಾಗಿತ್ತು. ಇದರಲ್ಲಿ 95.05 ದಶಲಕ್ಷ ಟನ್ ಗಳಷ್ಟು ಆಹಾರ ಧಾನ್ಯ ಉತ್ಪಾದನೆಯನ್ನು ಮಾಡಲಾಯಿತು. ಉತ್ಪಾದಕತೆ ಅಂದರೆ ಪ್ರತಿ ಹೆಕ್ಟೇರಿಗೆ ಆಹಾರ ಧಾನ್ಯಗಳ ಇಳುವರಿ 783 ಕಿ.ಗ್ರಾಂ ಗಳು ಇತ್ತು. ಹಸಿರು ಕ್ರಾಂತಿ ಪ್ರಾರಂಭವಾದ ವರ್ಷದಲ್ಲೇ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಿನ ಮಟ್ಟಿಗೆ ಸಾಧನೆಯನ್ನೇನು

[illegible]

[illegible]

[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]

[illegible]

ಮಾಡಿಲ್ಲ. ಉತ್ಪಾದಕತೆಯೂ ಸಹ ಕಡಿಮೆ ಪ್ರಮಾಣದಲ್ಲಿ ಇದೆ. ಆಗಿನ ಸಂದರ್ಭದಲ್ಲಿ ರಾಷ್ಟ್ರ ಆಹಾರ ಧಾನ್ಯಗಳ ಕೊರತೆಯನ್ನೆದರಿಸುತ್ತಿತ್ತು. ಆದ್ದರಿಂದಲ್ಲಿ ಅಂದಿನ ಸರಕಾರ ಹಸಿರು ಕ್ರಾಂತಿಯ ಪರಿಕಲ್ಪನೆಯನ್ನು ರೂಪಿಸಿದ್ದು. ಇದಾದ ಹತ್ತು ವರ್ಷಗಳಲ್ಲಿ ಅಂದರೆ 1977 - 78 ರಲ್ಲಿ ಆಹಾರ ಧಾನ್ಯಗಳನ್ನು ಒಳಗೊಂಡ ಕ್ಷೇತ್ರ 127.52 ದಶಲಕ್ಷ ಹೆಕ್ಟೇರುಗಳು ಅಂದರೆ ಆಹಾರ ಧಾನ್ಯಗಳನ್ನೊಳಗೊಂಡ ಕ್ಷೇತ್ರ ಅಲ್ಪ ಪ್ರಮಾಣದಲ್ಲಿ ಹೆಚ್ಚಳಗೊಂಡಿತ್ತು. ಆಹಾರ ಧಾನ್ಯಗಳ ಉತ್ಪಾದನೆ 126.61 ದಶಲಕ್ಷ ಟನ್ ಗಳಾಯಿತು. ಅಂದರೆ ಇಲ್ಲಿ ಕ್ಷೇತ್ರ ವಿಸ್ತರಣೆ ನಡೆದಿದ್ದರಿಂದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ ಕಂಡು ಬಂದಿದೆ ಎಂಬ ವಿಚಾರಕ್ಕೆ ಬಂದರು ಪ್ರತಿ ಹೆಕ್ಟೇರುವಾರು ಇಳುವರಿ 1967 - 68 ರಲ್ಲಿ 783 ಕಿ.ಗ್ರಾಂ ಇದ್ದದ್ದು 991 ಕಿ.ಗ್ರಾಂ ಆಯಿತು. ಕ್ಷೇತ್ರ ವಿಸ್ತರಣೆ ಮತ್ತು ಉತ್ಪಾದಕತೆ ಜೊತೆ ಜೊತೆಯಲ್ಲಿ ಹೆಚ್ಚಳಗೊಂಡಿದ್ದರಿಂದ ಆಹಾರ ಧಾನ್ಯಗಳ ಉತ್ಪಾದನೆ 1977 - 78 ರಲ್ಲಿ 126.41 ದಶಲಕ್ಷ ಟನ್ನುಗಳಾಗಲು ಸಹಾಯಕವಾಯಿತು. ಆದರೆ 1987 - 88 ರಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಕ್ಷೇತ್ರ 119.69 ದಶಲಕ್ಷ ಹೆಕ್ಟೇರುಗಳಿಗೆ ಕುಸಿಯಿತು. ಆದರೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ 140.35 ದಶಲಕ್ಷ ಟನ್ ಗಳಿಗೆ ಏರಿತು, ಇದೇ ಸಂದರ್ಭದಲ್ಲಿ ಆಹಾರ ಧಾನ್ಯಗಳ ಬೆಳೆಯುವ ಕ್ಷೇತ್ರ ಕುಸಿದಿದೆ ಆದರೂ ಹೆಕ್ಟೇರುವಾರು ಉತ್ಪಾದಕತೆ ಹೆಚ್ಚಳದಿಂದಾಗಿ, ಅಂದೆರ ಅವಧಿಯಲ್ಲಿ ಪ್ರತಿ ಹೆಕ್ಟೇರಿಗೂ 1173 ಕೆ.ಜಿ.ಗಳಷ್ಟು ಆಹಾರ ಧಾನ್ಯ ಉತ್ಪಾದಕತೆ ಹೆಚ್ಚಾಗಿದೆ. ಇದರಿಂದಾಗಿ 1987 -88 ರಲ್ಲಿ ಆಹಾರ ಧಾನ್ಯಗಳ ಬೆಳೆಯುವ ಕ್ಷೇತ್ರ ಕುಗ್ಗಿದರು, 140.35 ದಶಲಕ್ಷ ಟನ್ ಗಳಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸಲಾಯಿತು. 1997 - 98 ರಲ್ಲಿ 2000-01 ರಲ್ಲಿ ಈ ದಶಕದ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಳವಣಿಗೆಯ ಕ್ಷೇತ್ರ ಹೆಚ್ಚಾಗಲಿಲ್ಲ 1967 - 68 ಕ್ಕೆ ಹೋಲಿಸಿದರೆ ಈ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಳೆಯುವ ಕ್ಷೇತ್ರ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿದ್ದರ 40 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಳವಣಿಗೆಯ ಕ್ಷೇತ್ರ ಹೆಚ್ಚಾಗಲಿಲ್ಲ 1967 - 68 ಕ್ಕೆ ಹೋಲಿಸಿದರೆ ಈ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಳೆಯುವ ಕ್ಷೇತ್ರ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿದ್ದರು 40 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದಕತೆ ಎರಡು ಪಟ್ಟು ಹೆಚ್ಚಾಗಿದೆ. ಆಗ 783 ಕೆಜಿಗಳಷ್ಟು ಉತ್ಪಾದಕತೆ 2000-01 ರ ಸಾಲಿಗೆ 1697 ಕೆ.ಜಿ.ಗಳಷ್ಟು ಹೆಚ್ಚಾಗಿದೆ. ಆದ್ದರಿಂದಲೇ ಆಗ 95.05 ದಶಲಕ್ಷ ಟನ್ ಗಳಷ್ಟಿದೆ ಆಹಾರ ಧಾನ್ಯ ಉತ್ಪಾದನೆ 208.87 ದಶಲಕ್ಷ ಟನ್ ಗಳಿಗೆ ಏರಿರುವುದು. ಈ ನಿಟ್ಟಿನಿಂದ ಕೃಷಿ ಆಧುನೀಕರಣ ಫಲ ನೀಡಿದೆ. ಅಧಿಕ ಇಳುವರಿ ತಳಿಗಳು ರಸಗೊಬ್ಬರ ಯಾಂತ್ರೀಕರಣ ಹಾಗೂ ನೀರಾವರಿ ಬಳಕೆಯ ಹೆಚ್ಚಳದಿಂದಾಗಿ ಈಗ ನಾವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಆಗಿದೆ. ಒೀಗೆ ಸ್ವಾವಲಂಬನೆ ಸಾಧಿಸುವುದು. ಸ್ವಾತಂತ್ರ್ಯೋತ್ತರ ಆರಂಭದ ದಿನಗಳಲ್ಲಿ ಆದ್ಯತೆ ಗುರಿಯಾಗಿತ್ತು.

ಅಧ್ಯಾಯ-9

ಪರಿಸರದ ಮೇಲೆ ರಸಗೊಬ್ಬರಗಳ ಪರಿಣಾಮಗಳು

ಪ್ರಸಕ್ತ ಸಾವಿರಾರು ರಾಸಾಯನಿಕಗಳನ್ನು ಕೃಷಿಯಲ್ಲಿ ಉಪಯೋಗಿಸಲಾಗುತ್ತಿದೆ. ಈ ರಾಸಾಯನಿಕಗಳು ಜೈವಿಕ ವಲಯದ ಜೊತೆ ನಕಾರಾತ್ಮಕವಾದ ಪರಿಣಾಮಗಳನ್ನು ಬೀರುತ್ತವೆ. ಬೇಕಾಬಿಟ್ಟಿಯಾಗಿ ರಾಸಾಯನಿಕಗಳನ್ನು ಕೃಷಿಯಲ್ಲಿ ಬಳಸುವುದು. ಪರಿಸರ ವ್ಯವಸ್ಥೆ (Eco System) ಅಪಾಯಕಾರಿ ಪರಿಣಾಮಗಳನ್ನು ಬೀರುವುದರಲ್ಲಿ ಸಂದೇಹವಿಲ್ಲ ಅದರಲ್ಲೂ ಇತ್ತೀಚಿಗೆ ರಾಸಾಯನಿಕಗಳು ಪರಿಸರ ವ್ಯವಸ್ಥೆ ಹಾಗೂ ಮನುಷ್ಯರ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ಚರ್ಚಿಸಲಾಗುತ್ತದೆ. ಇದು ಪರಿಸರವನ್ನು ಕಲುಷಿತ ಗೊಳಿಸುವುದು ಪರಿಸರ ಮಾಲಿನ್ಯ ಮುಂತಾದವುಗಳಿಗೆ ಎಡೆ ಮಾಡಿಕೊಡುವುದು ಸ್ಪಷ್ಟವಾಗಿದೆ. ಪರಿಸರ ಅದರಲ್ಲೂ ಮಣ್ಣಿನ ವಲಯ. ಸಸ್ಯಗಳ ವಲಯಕ್ಕೆ ರಾಸಾಯನಿಕಗಳು ಹೆಚ್ಚಿನ ಪ್ರಮಾಣದಲ್ಲಿ ಹಾನಿಯುಂಟು ಮಾಡುತ್ತಿವೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಇವುಗಳಲ್ಲಿ ಮುಖ್ಯವಾದ ಕಾರಣಗಳೆಂದರೆ, ಕೃಷಿ ಉತ್ಪಾದಕತೆಯ ನ್ನು ಹೆಚ್ಚಿಸಲು ಬಳಸುವ ರಾಸಾಯನಿಕ ರಸಗೊಬ್ಬರಗಳು. ರಾಸಾಯನಿಕ ಗೊಬ್ಬರಗಳು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುತ್ತವೆ. ಜೊತೆಯಲ್ಲೇ ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತವೆ ಎಂಬ ಅಂಶ ಬೆಳಕಿಗೆ ಬಂದಿದೆ. ಏಕೆಂದರೆ ಬೆಳೆಯುತ್ತಿರುವ ಜನಸಂಖ್ಯೆ ಗನುಗುಣವಾಗಿ ಆಹಾರವನ್ನು ಪೂರೈಸಲು ಇರುವಂತಹ ಭೂಮಿಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳಬೇಕಾಗಿದೆ. ಏಕೆಂದರೆ ಭೂಮಿಯ ವಿಸ್ತರಣೆ ಹೆಚ್ಚುವುದಿಲ್ಲ. ಆದ್ದರಿಂದ ಪರ್ಯಾಯ ಮಾರ್ಗಗಳಿಲ್ಲದೆ , ರಾಸಾಯನಿಕ ರಸಗೊಬ್ಬರಗಳನ್ನು ಬಳಸಬೇಕಾಗಿದೆ. ಈ ರಾಸಾಯನಿಕ ರಸಗೊಬ್ಬರಗಳು ಉತ್ಪಾದಕತೆಯನ್ನು ಹೆಚ್ಚಿಸುತ್ತವೆ. ಜೊತೆಯಲ್ಲೇ ಮಣ್ಣು, ನೀರು ಸಸ್ಯ ಜಗತ್ತಿಗೆ ಅಪಾಯಕಾರಿಯಾಗಿ ಪರಿಣಮಿಸಿವೆ. ಆದ್ದರಿಂದ ಪರ್ಯಾಯ ಕೃಷಿಯ ಬಗ್ಗೆ ಇತ್ತೀಚಿಗೆ ಮಾತುಗಳು ಕೇಳಿ ಬರುತ್ತಿವೆ. ಆದರೆ ಇಂದಿಗೂ ಶೇ. 90- 95 ರಷ್ಟು ನಮ್ಮ ರೈತರು ರಾಸಾಯನಿಕ ರಸಗೊಬ್ಬರಗಳ ಮೊರೆ ಹೋಗಿದ್ದಾರೆ. ಇದು ಆಧುನಿಕ ಕೃಷಿಯ ಒಂದು ಭಾಗವೆಂದರೆ ಅತಿಶಯೋಕ್ತಿಯಾಗಲಾರದು.

ಇತ್ತೀಚಿನ ವರದಿಗಳ ಪ್ರಕಾರ ಕೃಷಿಯಲ್ಲಿ ಉಪಯೋಗಿಸುವ ರಾಸಾಯನಿಕಗಳು ವಿಶೇಷವಾಗಿ ರಾಸಾಯನಿಕ ರಸಗೊಬ್ಬರಗಳು, ಪರಿಸರ ಅವನತಿಗೆ (Degradation) ಹಾದಿ ಮಾಡಿಕೊಟ್ಟಿದೆ. ಇವು ಸಸ್ಯಗಳನ್ನು ಮಣ್ಣಿನ ವಲಯವನ್ನು ನೀರನ್ನು ಓಜೋನ್ ಪದರುಗಳ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತವೆ ಎಂಬುದು ಖಚಿತವಾಗಿದೆ.

ಕೃಷಿ ರಾಸಾಯನಿಕಗಳು ಮಣ್ಣಿನ ವಲಯದ ಮೇಲೆ ಬೀರುವ ಅಪಾಯಕಾರಿ ಪರಿಣಾಮಗಳು : ಆಹಾರ ಉತ್ಪಾದನೆಯನ್ನು ಹೆಚ್ಚಳ ಮಾಡಲು ವೈವಿಧ್ಯಮಯ ರಾಸಾಯನಿಕಗಳನ್ನು

ಕೃಷಿಯಲ್ಲಿ ಬಳಸಲಾಗುತ್ತಿದೆ. ಈ ರಾಸಾಯನಿಕಗಳು ರಸಗೊಬ್ಬರಗಳಾದಂತ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ನಿಂದ ಹಿಡಿದು ಕೀಟನಾಶಕ ಕಳೆ ನಾಶಕಗಳನ್ನೊಳಗೊಂಡಿರುತ್ತದೆ. ಇದರಲ್ಲಿ ರಂಜಕ ಹಾಗೂ ಸಾರಜನಕ ರಸಗೊಬ್ಬರಗಳು ಮಣ್ಣು ಮತ್ತು ನೀರಿನ ವಲಯದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ. ಸರ್ವೇ ಸಾಮಾನ್ಯವಾಗಿ ರೈತರು ಕೃಷಿಯಲ್ಲಿ ಬಳಸುವ ರಾಸಾಯನಿಕ ರಸಗೊಬ್ಬರಗಳು ಈ ಕೆಳಕಂಡಂತೆ ಇವೆ.

ಪೋಷಕಾಂಶಗಳು	ರಸಗೊಬ್ಬರಗಳು
ಸಾರಜನಕ	ಅಮೋನಿಯಂ ಕ್ಲೋರೈಡ್
	ಅಮೋನಿಯಂ ಸಲ್ಫೈಡ್
	ಅಮೋನಿಯಂ ನೈಟ್ರೇಟ್
	ಯೂರಿಯ
	ಕ್ಯಾಲ್ಸಿಯಂ ಸೈನಮೈಡ್
	ಗಂಧಕ ಲೇಪಿತ ನಿಧಾನವಾಗಿ ಬಿಡುಗಡೆಯಾಗುವ ರಸಗೊಬ್ಬರ ಅಮೋನಿಯಂ, ಗ್ಯಾಸ್ ಲಿಕ್ಕರ್, ಏನ್ ಐಡ್ರಸ್ ಅಮೋನಿಯಂ
ರಂಜಕ	ಸಿಂಗಲ್ ಸೂಪರ್ ಫಾಸ್ಫೇಟ್
	ಟ್ರಿಪಲ್ ಸೂಪರ್ ಪಾಸ್ಫೇಟ್
	ಮಾನೋ ಅಮೋನಿಯಂ ಪಾಸ್ಫೇಟ್
	ಡೈ ಅಮೋನಿಯಂ ಫಾಸ್ಫೇಟ್
	ಬೇಸಿಕ್ ಸ್ಲಾಗ್
	ರಾಕ್ ಫಾಸ್ಫೇಟ್
ಪೊಟಾಶಿಯಂ	ಮೂರೇಟ್ ಆಫ್ ಪೊಟಾಷ್
	ಸಲ್ಫೇಟ್ ಆಫ್ ಪೊಟ್ಯಾಷ್
	ಪೊಟ್ಯಾಷಿಯಂ ನೈಟ್ರೇಟ್
	ಮುಂತಾದವುಗಳು

ಜಾಗತಿಕ ರಸಗೊಬ್ಬರಗಳ ಬಳಕೆಯಲ್ಲಿ ಕಳೆದ 30 ರಿಂದ 40 ವರ್ಷಗಳು ಶೇ. 900 ರಷ್ಟು ಹೆಚ್ಚಾಗಿದೆ. ಲೆಕ್ಕಾಚಾರದ ಪ್ರಕಾರ ಆಸ್ಟ್ರೇಲಿಯಾದಲ್ಲಿ ರಾಕ್ ಫಾಸ್ಫೇಟ್ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತಿರುವ ಕ್ಯಾಡಿಮಿಯಂ (Ca) ಎಂಬ ಲೋಹ , ಮಣ್ಣಿಗೆ ಹಾಗೂ ಸಸ್ಯ ಜಗತ್ತಿಗೆ

ಅಪಾಯಕಾರಿಯಾದಂತಹದು, ಇದು ಕಳೆದ 90 ವರ್ಷಗಳಲ್ಲಿ 6000 ಟನ್ ಗಳಷ್ಟು ಮಣ್ಣಿಗೆ ಸೇರಿದೆ. ಆದ್ದರಿಂದ ಭೂಮಿಯು ಬರಡಾಗಿ ವಿಷಮಯವಾಗಿದೆ. ಮೊದ ಮೊದಲು ಅಂದರೆ 20 ನೇ ಶತಮಾನದ ಆಧಿ ಭಾಗದಲ್ಲಿ ಕೈಗಾರಿಕಾ ರಾಷ್ಟ್ರಗಳು ಹೆಚ್ಚು ಹೆಚ್ಚು ರಸಗೊಬ್ಬರಗಳನ್ನು ಬಳಸುತ್ತಿದ್ದವು ಆದರೆ ಶತಮಾನದ ಮಧ್ಯ ಭಾಗದಲ್ಲಿ ಅಭಿವೃದ್ಧಿ ಶೀಲ ರಾಷ್ಟ್ರಗಳು ರಸಗೊಬ್ಬರ ಬಳಕೆಯಲ್ಲಿ ಮುಂತಾದವು, ಕಳೆದ ಇದಕ್ಕೆ ಪ್ರಮುಖ ಕಾರಣವೆಂದರೆ ಆಹಾರ ಧಾನ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ಕೈಗೊಂಡ ಹಸಿರು ಕ್ರಾಂತಿಯ ನೀತಿ, ಈ ಹಸಿರು ಕ್ರಾಂತಿಯ ನೀತಿ ಸಂಕರಗೊಂಡ ತಳಿಗಳ ಜೊತೆ ಹೆಚ್ಚು ಹೆಚ್ಚು ರಸಗೊಬ್ಬರಗಳು ಬಳಸುವುದು ಲಾಭದಾಯಕ ಎಂಬುದು ಕಂಡುಕೊಂಡರು. ಇವು ದೂರಗಾಮಿಯಾಗಿ ಮಣ್ಣು ಸಸ್ಯಜಗತ್ತು ಹಾಗೂ ನೀರಿನ ವಲಯದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಹೆಚ್ಚು ಯೋಚಿಸಲಿಲ್ಲ. ಇದರಿಂದಾಗಿ ರಸಗೊಬ್ಬರಗಳು ಸುದೀರ್ಘ ಅವಧಿಯವರೆಗೂ ಬಳಸಿದರೆ ಮಣ್ಣಿನ ಗುಣಮಟ್ಟ ಕುಸಿಯುತ್ತದೆ. ಮಣ್ಣಿನಲ್ಲಿರುವ ಸೂಕ್ಷ್ಮಜಂತುಗಳು, ಎರೆಹುಳುಗಳು ಇತ್ಯಾದಿ ಜೈವಿಕ ವರ್ಗದ ಮೇಲೆ ರಸಗೊಬ್ಬರಗಳು ದುಷ್ಪರಿಣಾಮ ಬೀರಿ, ಮಣ್ಣಿನ ಫಲವತ್ತತೆಯನ್ನು ನಾಶ ಪಡಿಸುತ್ತವೆ. ಮಣ್ಣುಗಳು ಆಮ್ಲೀಯ ಹಾಗೂ ಕ್ಷಾರಯುಕ್ತ ಮಣ್ಣುಗಳಾಗಿ ಪರಿವರ್ತಿತಗೊಳ್ಳುತ್ತವೆ. ಇದಕ್ಕೆ ಕಾರಣವೆಂದರೆ ರಸಗೊಬ್ಬರಗಳನ್ನು ಬಳಸುತ್ತಿದ್ದ ರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತಿದ್ದ ಸೂಕ್ಷ್ಮ ಜೀವಿಗಳು, ಎರೆಹುಳ ಹಾಗೂ ಇನ್ನಿತರ ಜೈವಿಕ ಜಗತ್ತನ್ನು ನಾಶಪಡಿಸುತ್ತವೆ, ಆದ್ದರಿಂದ ಮಣ್ಣಿನ ಫಲವತ್ತತೆ ಅವನತಿಯ ಅಂಚನ್ನು ತಲುಪುತ್ತದೆ. ಇದರಿಂದಾಗಿ ಬಹಳಷ್ಟು ವರ್ಷಗಳ ಕಾಲ ರಾಸಾಯನಿಕಗಳನ್ನು ಬಳಸುತ್ತ ಬಂದರೆ, ಇವು ಮಣ್ಣನ್ನು ಬರಡುಗೊಳಿಸುತ್ತವೆ, ನೀರನ್ನು ಮಾಲಿನ್ಯ ಗೊಳಿಸುತ್ತವೆ. ವಾತಾವರಣವನ್ನು ಕಲುಷಿತಗೊಳಿಸುತ್ತವೆ.

ಮಣ್ಣು ಬಹು ಪಾಲು ಕೃಷಿ ರಾಸಾಯನಿಕಗಳ ಶೇಖರಿಸುವ ಪಾತ್ರೆ ಇದ್ದಂತೆ, ರಾಸಾಯನಿಕಗಳನ್ನು ನೇರವಾಗಿ ಹಾಕಲಿ ಅಂದರೆ ನೇರವಾಗಿ ಮಣ್ಣಿಗೆ ಸೇರಿಸುವುದು, ಸಸ್ಯಗಳಿಗೆ ಸಿಂಪರಿಸುವುದು ಅಥವಾ ಪರೋಕ್ಷವಾಗಿ ಅಂದರೆ ಸಿಂಪರಣೆ ಮೂಲಕ ಹೀಗೆ ಮಾಡುವುದರಿಂದ ಮಣ್ಣಿನ ವಾತಾವರಣದಲ್ಲಿ ಈ ರಾಸಾಯನಿಕಗಳು ಅಡಕಗೊಳ್ಳುತ್ತವೆ. ಇವುಗಳಲ್ಲಿ ಬಹು ಮುಖ್ಯವಾದದೆಂದರೆ ರಾಸಾಯನಿಕ ರಸಗೊಬ್ಬರಗಳು ಹಾಗೂ ಕೀಟನಾಶಕಗಳು, ರಾಸಾಯನಿಕ ರಸಗೊಬ್ಬರಗಳಲ್ಲಿ ಹೆಚ್ಚು ಹೆಚ್ಚಾಗಿ ನೈಟ್ರೇಟ್ ಹಾಗೂ ಫಾಸ್ಪೇಟ್ ರಸಗೊಬ್ಬರಗಳನ್ನು ಉಪಯೋಗಿಸುವುದು, ಮಣ್ಣಿನ ಮೇಲ್ಪದರದಲ್ಲಿ (Surface) ಹಾಗೂ ಮಣ್ಣಿನ ಅಂತರ್ಜಲದಲ್ಲಿ (Ground water) ನನ್ನು ಕಲುಷಿತಗೊಳಿಸುತ್ತವೆ. ಸಾರಜನಕ ರಸಗೊಬ್ಬರಗಳನ್ನು ಮಣ್ಣಿನ ಭೌತಿಕ ರಾಸಾಯಸಿಕ ಮತ್ತು ಜೈವಿಕ ಅಂಶಗಳು ಒಂದರ ಜೊತೆ ಒಂದು ಅಂತರ್ ಪ್ರತಿಕ್ರಿಯಿಸುತ್ತವೆ.

ರಾಸಾಯನಿಕ ರಸಗೊಬ್ಬರಗಳು ಸಸ್ಯಗಳು ಹಾಗೂ ಪ್ರಾಣಿಗಳು ಮೇಲೆಳೆದುಕೊಳ್ಳುವುದು (Up-take) ಮಣ್ಣಿನಲ್ಲೇ ವಿನಿಮಯವಾಗಿ ಅಂತರ್ಜಲದಲ್ಲಿ ಸೇರಿಕೊಳ್ಳುವುದು, ಆವಿಯಾಗಿ ಅನಿಲ ರೂಪದಲ್ಲಿ ವಾತಾವರಣದಲ್ಲಿ ಸೇರಿಕೊಳ್ಳುವುದು. ಮಣ್ಣಿನ ಮೇಲ್ಪದರದಲ್ಲಿ ಹರಳುಗಳಾಗಿ ಸಂಗ್ರಹಗೊಳ್ಳುವುದು. ಇವುಗಳಲ್ಲಿ ಪ್ರಮುಖ ಪೋಷಕಾಂಶವಾದಂತಹ ಸಾರಜನಕ ಬಹಳಷ್ಟು ವೇಳೆ ಕಾಲುವೆ ನೀರಿನಲ್ಲಿ ಕಾಣಸಿಗುತ್ತದೆ, ಇಲ್ಲಿ ರೈತರು ಜಮೀನಿಗೆ (Drainage Water) ಹಾಕಿದ ರಸಗೊಬ್ಬರಗಳಲ್ಲಿ 15 ರಿಂದ 150 ಕೆ.ಜಿ. / ಹೆಕ್ಟೇರ್‌ಗೆ ವ್ಯರ್ಥವಾಗಿ ಹರಿದು, ನಷ್ಟಗೊಳ್ಳುತ್ತದೆ, ರಂಜಕ 1 ಕೆ.ಜಿ. /ಹೆಕ್ಟೇರ್‌ಗಿಂತ ಕಡಿಮೆ ವ್ಯರ್ಥವಾಗುತ್ತದೆ. ಸಾರಜನಕ ರಸಗೊಬ್ಬರ ಗಳು ಸೋರಿಕೆ (leaching) ಸಾಮಾನ್ಯವಾಗಿ ಗಲೆ ಮೇಲ್ಪದರುಳ್ಳ (Coarse tenured) ಮತ್ತು ಒಳ್ಳೆ ಅಂತರ ಕಾಲುವೆ (Neutrained) ಮುಳ್ಳು ಮಣ್ಣಿನಲ್ಲಿ ಇದು ಹೆಚ್ಚಾಗಿ ಸಂಭವಿಸುತ್ತದೆ. ನಿಸ್ಸಾರ ಜನಕೀಕರಣ (De Nitrification) ಮೂಲಕ ಮೃದುವಾದ , ನೀರು ನಿಂತ ಮತ್ತು ಅರೆ ಬರೆಗಾಳಿಯಾಡುವ ಮಣ್ಣುಗಳಲ್ಲಿ ಜಾಸ್ತಿ, ಪರಿಸರ ಕಲುಷಿತಗೊಳ್ಳುವ ಸಮಸ್ಯೆಯಲ್ಲಿ ಸಾರಜನಕದ ಸೋರಿಕೆ ಇತ್ತೀಚಿಗೆ ಪ್ರಮುಖವಾಗುತ್ತಿರುವ ಸಮಸ್ಯೆ.

ರಂಜಕ, ಗಂಧಕ , ನೈಟ್ರೇಟ್ ಮತ್ತು ಕ್ಲೋರೈಡ್ ಗಳ ಕಣಗಳು (anions) ರಸಗೊಬ್ಬರಗಳ ಮೂಲಕ ಮಣ್ಣನ್ನು ಸೇರುತ್ತವೆ. ಇವುಗಳಲ್ಲಿ ಕೆಲವು ಕಣಗಳು ಮಣ್ಣಿನ ಮೇಲ್ಪದರು ನೀರಿನಲ್ಲಿ (surface water) ಮತ್ತು ಅಂತರ್ಜಲದಲ್ಲಿ ಸೇರಿ ಕಲುಷಿತಗೊಳಿಸುತ್ತವೆ. ಇದರ ಜೊತೆಗೆ ಬ್ಯಾಕ್ಟೀರಿಯಾ , ಪ್ರೋಟೋಜೋವ ಮುಂತಾದ ಸೂಕ್ಷ್ಮಾಣುಗಳು ಸಂಗ್ರಹಗೊಳ್ಳುತ್ತವೆ. ಇದರ ಜೊತೆಗೆ ಋಣಾತ್ಮಕ ಕಣಗಳು (anions) ಗಳಾದ ಗಂಧಕ, ರಂಜಕ ಇವು ಮಣ್ಣಿನ ಕಣಗಳಿಗೆ ಅಂಟಿಕೊಂಡು (adsorption) ಮಣ್ಣಿನ ಮೇಲ್ಪದರು ನೀರು ಮತ್ತು ಅಂತರ್ಜಲವನ್ನು ಮಲಿನಗೊಳಿುತ್ತವೆ. ನೀತಿ ರೂಪಕರು, ವಿಜ್ಞಾನಿಗಳು ಹಾಗೂ ಪರಿಸರದ ರಸಗೊಬ್ಬರ ಬಳಸುವುದು ಆತಂಕ ಸೃಷ್ಟಿಸಿದೆ, ಏಕೆಂದರೆ ರಸಗೊಬ್ಬರ ಬಳಕೆಯಿಂದ ವಾಯು, ನೀರು ಮತ್ತು ಮಣ್ಣಿನ ಮಾಲಿನ್ಯತೆಯನ್ನು ಹೆಚ್ಚಿಸಿ ನಮ್ಮ ಜೈವಿಕ ವೈವಿದ್ಯತೆಗೆ ಹಾಗೂ ಪರಿಸರ ವ್ಯವಸ್ಥೆಗೆ (ecosystem) ಅಪಾಯಕಾರಿಯಾಗಿವೆ. ನಾವು ಕುಡಿಯುವ ನೀರು ಸಹ ರಸಗೊಬ್ಬರಗಳ ಬಳಕೆಯಿಂದ, ನೈಟ್ರೇಟ್ ಅಂಶವನ್ನೊಳಗಗೊಂಡು ವಿಷಯುಕ್ತವಾಗಿದೆ, ನಾವು ಸೇವನೆ ಮಾಡುವ ಗಾಳಿಯು ಸಹ ರಸಗೊಬ್ಬರಗಳ ರಾಸಾಯನಿಕ ಪ್ರಕ್ರಿಯೆಯಲ್ಲಿ ಅನಿಲವಾಗಿ ಮಾರ್ಪಟ್ಟು ವಿಷಯುಕ್ತವಾಗಿದೆ. ಇದರಲ್ಲಿ ಪ್ರಮುಖವಾದದೆಂದರೆ ಮಣ್ಣಿಗೆ ಹಾಕಿದ ರಸಗೊಬ್ಬರಗಳು ಸೋರಿಕೆ, ಹೀಗೆ ರಸಗೊಬ್ಬರಗಳ ಸೋರಿಕೆಯಿಂದ ಇವು ಪರಿಸರದ ಮೇಲೆ ಹೆಚ್ಚು ದುಷ್ಪರಿಣಾಮಗಳನ್ನು ಬೀರುತ್ತವೆ. ಭಾರಲೋಹ (Heavy Metals) ವಾದಂತ ಕ್ಯಾಡಿಮಿಯಮ್ (Cadmium) ಗಳು ಮಣ್ಣಿನಲ್ಲಿ ಸೇರಿಕೊಂಡು ಮಣ್ಣನ್ನು ವಿಷಯುಕ್ತಗೊಳಿಸುತ್ತವೆ. ಇಲ್ಲಿ ಮಣ್ಣಿನ ಮೇಲ್ಪದರಿನ ಮೇಲೆ ಗಟ್ಟಿಯಾದ ಪದರಗಟ್ಟುತ್ತವೆ. ಇದಕ್ಕೆ ಕಾರಣ ರಸಗೊಬ್ಬರಗಳ ಬಳಕೆಯೇ ಎಂದು ಹೇಳಬಹುದು. ಹೀಗೆ ಮಣ್ಣಿನ

ಮೇಲೆ ಗಟ್ಟಿ ಪದರುಗಟ್ಟುವುದರಿಂದ ಮಣ್ಣಿನ ಸ್ವಾಭಾವಿಕ ಗುಣ ಹಾಳಾಗಿ, ಮುಂದೆ ಬೆಳೆ ಬೆಳೆಯಲು ಆಗದಂತ ವಾತಾವರಣ ನಿರ್ಮಿಸುತ್ತವೆ. ಹಾಗೂ ಬೆಳೆಯುವ ಬೆಳೆಗಳಿಗೆ ಹಾನಿಕಾರಕವಾಗಿ ಪರಿಣಮಿಸುತ್ತವೆ. ಹೀಗೆ ಹಾನಿಕಾರವಾದ ಬಾರಿ ಲೋಹ ಗಳಾದ ಕ್ಯಾಡ್ಮಿಯಮ್, ಪಾದರಸ (Hg) ಮುಂತಾದವುಗಳು ರಸಗೊಬ್ಬರಗಳ ಬಳಕೆಯಾದ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡಿ, ಪರಿಸರದ ಮೇಲೂ ವ್ಯತಿರಿಕ್ತ ಪರಿಣಾಮ ಗಳನ್ನು ಬೀರುತ್ತವೆ, ಆದ್ದರಿಂದ ರಸಗೊಬ್ಬರಗಳ ಬಳಕೆ ಪರಿಸರದ ಒಂದು ಅಂಗವಾದ ಮಣ್ಣಿನ ಮೇಲೆ ಅಲ್ಲಿ ನೀರು, ಗಾಳಿ ಹಾಗೂ ಜೀವ ಜಗತ್ತಿಗೆ ಹಾನಿಕಾರವಾಗಿ ಪರಿಣಮಿಸಿದೆ.

ರಾಸಾಯನಿಕ ರಸಗೊಬ್ಬರಗಳನ್ನು ಉಪಯೋಗಿಸುವುದರಿಂದ ಮಣ್ಣಿನ ಆಮ್ಲತೆ ಹೆಚ್ಚಾಗುತ್ತವೆ ಇದು ಆಸ್ಟ್ರೇಲಿಯಾದಲ್ಲಿ ಮನಸ್ಸಿಗೆ ಬಂದಂತೆ ರಸಗೊಬ್ಬರಗಳನ್ನು ಬಳಸಿರುವುದರಿಂದ ಇಂತಹ ಸಮಸ್ಯೆ ಗಂಭೀರವಾಗಿ ಉಲ್ಬಣಿಸಿದೆ. ದ್ವಿದಳ ಧಾನ್ಯಗಳಲ್ಲಿ ಲೆಗ್ಯೂಮ್ (Legume) ಸಸ್ಯಗಳು ವಾತಾವರಣದಿಂದ ಸಾರಜನಕವನ್ನು ಸಸ್ಯಗಳಲ್ಲಿ ಸ್ಥಿರೀಕರಿಸುವ (fixed) ಸ್ವಾಭಾವಿಕ ಗುಣ ಹೊಂದಿವೆ. ಆದರೆ ಈ ಸಸ್ಯಗಳು ವಾತಾವರಣದಿಂದ ಸ್ಥಿರೀಕರಿಸುವ ಸಾರಜನಕ, ಈ ಸಸ್ಯಗಳಿಗೆ ಸಾಲುವುದಿಲ್ಲ, ಇದರಿಂದಾಗಿ ರಾಸಾಯನಿಕ ಸಾರಜನಕ ರಸಗೊಬ್ಬರಗಳನ್ನು ಈ ಸಸ್ಯಗಳು ಬೆಳೆಯುವ ಭೂಮಿಗೆ ರೈತರು ಹಾಕುತ್ತಾರೆ. ಇದರಿಂದಾಗಿ ಈ ಭೂಮಿಯೂ ಸಹ ಆಮ್ಲೀಕರಣ ಗೊಂಡಿದೆ ಎಂಬುದು ಹಲವು ಅಧ್ಯಯನಗಳ ಮೂಲಕ ತಿಳಿದು ಬಂದಿದೆ.

ಸಾರಜನಕ ರಸಗೊಬ್ಬರಗಳನ್ನು ಮೂರು ವಿಧಧಲ್ಲಿ ಸಸ್ಯಗಳು ತೆಗೆದುಕೊಳ್ಳುತ್ತವೆ. ನೈಟ್ರೇಟ್ ರೂಪದಲ್ಲಿ (NO_3) ಅಮೋನಿಯಂ ರೂಪದಲ್ಲಿ (NH_3^+) ಅಥವಾ ಸಮಸ್ಥಿತಿರೂಪದಲ್ಲಿ (Neutral) N_2) ಇವುಗಳನ್ನು ಸಸ್ಯಗಳು ಹೀರಿಕೊಳ್ಳಬೇಕಾದರೆ ಅನೇಕ ರಾಸಾಯನಿಕ ಪ್ರಕ್ರಿಯೆಗಳು ಸಸ್ಯ ಹಾಗೂ ಮಣ್ಣಿನಲ್ಲಿ ನಡೆಯುತ್ತವೆ. ಈ ಪ್ರಕ್ರಿಯೆಗಳಿಂದಾಗಿ, ಸಸ್ಯದ ಬೇರುಗಳಿಂದ H^+ OH^+ ರಾಸಾಯನಿಕಗಳು ಭೂಮಿಯಲ್ಲಿ ಬಿಡುಗಡೆಗೊಳ್ಳುತ್ತವೆ. ಈ ರಾಸಾಯನಿಕಗಳು ಮಣ್ಣಿನಲ್ಲಿ ಬಿಡುಗಡೆಗೊಳ್ಳುವುದರಿಂದ ಇವು ಮಣ್ಣಿನ ಗುಣವನ್ನು ಮಾರ್ಪಾಡುಗೊಳಿಸುತ್ತವೆ. ಮಣ್ಣಿನ ಫಲವತ್ತತೆಯನ್ನು ನಾಶಗೊಳಿಸುತ್ತವೆ. ಹೀಗೆ ನಾಶಗೊಳಿಸುವುದರಿಂದ, ಭೂಮಿಯ ಆಮ್ಲೀಕರಣ ಗೊಳ್ಳುತ್ತದೆ. ಭೂಮಿಯ ಆಮ್ಲೀಕರಣಕ ಹೆಚ್ಚಾಗಿ ಸಾರಜನಕ ರಸಗೊಬ್ಬರಗಳನ್ನು ಬಳಸುವುದೇ ಪ್ರಮುಖವಾಗುತ್ತದೆ. ಈಗಾಗಲೆ ಸಾರಜನಕ ರಸಗೊಬ್ಬರಗಳು ಬಳಸುವುದರಿಂದ ಭೂಮಿ ಆಮ್ಲೀಕರಣಗೊಳ್ಳುತ್ತದೆಂಬುದನ್ನು ತಿಳಿದೆವು. ಇದರ ಜೊತೆಗೆ ರಂಜಕ ರಸಗೊಬ್ಬರಗಳನ್ನು ಬಳಸುವುದರಿಂದಲೂ ಸಹ ಭೂಮಿ ಆಮ್ಲೀಕರಣಗೊಳ್ಳುತ್ತದೆ. ಸೂಪರ್ ಫಾಸ್ಫೇಟ್ ನಲ್ಲಿ ಮಾನೋ ಕ್ಯಾಲ್ಸಿಯಂ ಫಾಸ್ಫೇಟ್ ಆಗಿ ಪರಿವರ್ತನೆ ಗೊಂಡು ಫಾಸ್ಫರಿಕ್ ಆಮ್ಲವನ್ನು ಬಿಡುಗಡೆ ಮಾಡುತ್ತದೆ. ಇದು ಫಾಸ್ಫೇಟ್ (ions) ಕಣಗಳು ಹಾಗೂ ಜಲಜನಕ ಕಣಗಳು

(ions) ಆಗಿ ಪರಿವರ್ತಿತಗೊಂಡು ಮಣ್ಣಿನ ಕಣಗಳಿಗೆ ಗಟ್ಟಿಯಾಗಿ ಅಂಟಿಕೊಳ್ಳುತ್ತವೆ. ಹೀಗೆ ಗಟ್ಟಿಯಾಗಿ ಅಂಟಿಕೊಳ್ಳುವುದರ ಮೂಲಕ ಇವು ಭೂಮಿಯನ್ನು ಆಮ್ಲೀಕರಿಸುತ್ತವೆ. ಆಮ್ಲೀಕರಣಗೊಂಡ ಭೂಮಿ, ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಬೆಳೆ ಬೆಳೆಯಲು ನಿರುಪಯುಕ್ತವಾಗುತ್ತದೆ. ಆದ್ದರಿಂದ ಹೆಚ್ಚು ಹೆಚ್ಚು ಸಾರಜನಕ, ಹಾಗೂ ರಂಜಕ ರಸಗೊಬ್ಬರಗಳನ್ನು ಬಳಸುವುದರಿಂದ ಮಣ್ಣು ಫಲವತ್ತುಗೊಂಡು ಇಳುವರಿ ಹೆಚ್ಚಾಗುವುದರೊಂದಿಗೆ ದೀರ್ಘಾವದಿಯಲ್ಲಿ ಮಣ್ಣಿನ ಫಲವತ್ತತೆ ನಾಶಗೊಳ್ಳುತ್ತದೆ. ಕೊನೆಗೆ ಸಮಸ್ಯಾತ್ಮಕ ಮಣ್ಣಾಗಿ ಪರಿವರ್ತಿತ ಗೊಂಡು ಯಾವುದೆ ಉಪಯುಕ್ತ ಬೆಳೆ ಇಲ್ಲದಂತಾಗುತ್ತದೆ.

ಮಣ್ಣಿಗೆ ಹಾಕಿದ ಸಾರಜನಕ ರಸಗೊಬ್ಬರಗಳು ಶೇ. 35-60 ರಷ್ಟು ಬೆಳೆಗಳು ಉಪಯೋಗಿಸಿಕೊಳ್ಳುತ್ತವೆ. ಇನ್ನು ಉಳಿದ ಶೇ. 15 - 25 ರಷ್ಟು ಸಾರಜನಕ ಅನಿಲವಾಗಿ ಅಥವಾ ದ್ರವವಾಗಿ ಆವಿಯಾಗಿ ವಾತಾವರಣದಲ್ಲಿ ಸೇರಿಕೊಂಡು ಗಾಳಿಯನ್ನು ಮಾಲಿನ್ಯಗೊಳಿಸುತ್ತವೆ. ವಾಯು ಮಾಲಿನ್ಯ ದಿಂದಾಗಿ, ಜನಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದ್ದರಿಂದ ರಾಸಾಯನಿಕ ರಸಗೊಬ್ಬರಗಳ ಬಳಕೆ ಮಣ್ಣು ನೀರು ಗಾಳಿ ಒಟ್ಟಾರೆಯಾಗಿ ವಾತಾವರಣವನ್ನು ಕಲುಷಿತಗೊಳಿಸುತ್ತದು

ಜಲಮಾಲಿನ್ಯ : ಕೆರೆ, ಕುಂಟೆ ಜಲಾಶಯಗಳಲ್ಲಿ ನೀರಿನಲ್ಲಿ ರಾಸಾಯನಿಕ ರಸಗೊಬ್ಬರಗಳು ಬೆರೆತು, ನೀರು ಪೋಷಕಾಂಶಗಳ ಹೆಚ್ಚಳದಿಂದ ಹಸಿರು ಪಾಚಿ (Algae) ಇನ್ನಿತರ ಜಲ ಸಸ್ಯಗಳು ದಷ್ಟ ಪುಷ್ಟವಾಗಿ ಬೆಳೆದು ವಾತಾವರಣದಲ್ಲಿರುವ ಆಮ್ಲಜನಕವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ಜಲಚರಗಳಿಗೆ ಜೀವನ ಚಕ್ರದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ. ಮೇಲೆ ಹೇಳಿರುವ ನೀರು ಸಂಗ್ರಹ ಕೆರೆ ಜಲಾಶಯ ಇತ್ಯಾದಿಗಳಿಗೆ ಹೊಲ ಗದ್ದೆ ಗಳಿಂದ ಹರಿದು ಬರುವ ನೀರಿನೊಂದಿಗೆ ರಾಸಾಯನಿಕ ರಸಗೊಬ್ಬರಗಳು ಬಿಡುಗಡೆಗೊಳಿಸುವ ಫಾಸ್ಪೇಟ್, ನೈಟ್ರೇಟ್ ಸಲ್ಫೇಟ್ ಮುಂತಾದವುಗಳು ನೀರನ್ನು ಸೇರಿ ಉಪಯುಕ್ತವಾಗದಂತೆ ಮಾಡುತ್ತವೆ. ಇಂತಹ ವಿಷಯುಕ್ತವಾದಂತಹ ನೀರನ್ನು ಕುಡಿಯುವ, ನೀರಾವರಿಗೆ ಪ್ರಾಣಿಗಳಿಗೆ ಬಳಸುವುದರಿಂದ ಅವುಗಳಲ್ಲಿ ರೋಗಗಳು ಬರಬಹುದು ಮನುಷ್ಯರಲ್ಲಿ ಮಲಬದ್ಧತೆ, ತಲೆ ನೋವು ಮಂಪರು ಬರುವಿಕೆ ಮುಂತಾದ ರೋಗಗಳು ಕಾಣಿಸುತ್ತವೆ. ಪಾದರಸ, (arsenic), ಲೆಡ್ (Lead) ನಂತರ ರಾಸಾಯನಿಕಗಳು ನರದೌರ್ಬಲ್ಯಕ್ಕೆ ಕಾರಣವಾಗುತ್ತವೆ. ರೋಗಗಲು ಶ್ವಾಸಕೋಶ, ಕ್ಯಾನ್ಸರ್ ಚರ್ಮದ ಕ್ಯಾನ್ಸರ್ ಮುಂತಾದ ರೋಗಗಳು ಕಾಣಿಸಿಕೊಳ್ಳುತ್ತವೆ. ಲೆಡ್ ಅನಿಮೀಯಾ ಕೀಲು ನೋವುಗಳಿಗೆ ಕಾರಣವಾಗುತ್ತದೆ. ಆದ್ದರಿಂದ ನೈಟ್ರೇಟ್ ಮತ್ತು ಫಾಸ್ಪೇಟ್ ಗಳು ಬಿಡುಗಡೆಗೊಳಿಸುವ ಭಾರದ ಲೋಹಗಳಾದ ಪಾದರಸ, ಕ್ಯಾಡ್ಮಿಯಮ್ ಮುಂತಾದವುಗಳು ಮನುಷ್ಯರಲ್ಲಿ ಹಲವಾರು ರೋಗ ರುಜಿನಗಳಿಗೆ ಕಾರಣವಾಗುತ್ತವೆ. ಇವು ಜಲಚರಗಳ ವ್ಯವಸ್ಥೆಯನ್ನು ಏರುಪೇರುಗೊಳಿಸುತ್ತವೆ ಹಾಗೂ ಅನೇಕ ರೋಗ ರುಜಿನಗಳಿಗೂ ಕಾರಣವಾಗುತ್ತವೆ.

ಅಧ್ಯಾಯ-10

ಸಾರ ಲೇಖನ ಮತ್ತು ನೀತಿ ಶಿಫಾರಸ್ಸುಗಳು

ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ರಸಗೊಬ್ಬರಗಳ ಬಳಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಹಾಗೆಯೇ ಪೂರೈಕೆಯನ್ನು ಸರಿದೂಗಿಸಲು ರಸಗೊಬ್ಬರ ಕಾರ್ಖಾನೆಗಳಲ್ಲಿ ಉತ್ಪಾದನೆಯೂ ಏರುತ್ತಲೆ ಇದೆ. ಆದರೆ ಉತ್ಪಾದನೆ ಏರುತ್ತಿರುವುದರಿಂದ ರೈತರು ಬಳಸುವ ರಸಗೊಬ್ಬರಗಳ ಬೇಡಿಕೆಯೂ ಪೂರೈಕೆಯನ್ನು ಮೀರಿ ಬೆಳೆಯುತ್ತಿದೆ. ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಕಂಡು ಕೊಂಡ ಅಂಶಗಳೆಂದರೆ ರೈತರಿಗೆ ರಸಗೊಬ್ಬರಗಳು ಸರಬರಾಜಿನಲ್ಲಿ ವಿಳಂಬ ಆಗುತ್ತಿರುವುದು. ಈ ರೀತಿ ವಿಳಂಬವಾಗುವುದರಿಂದ ಕೃಷಿ ಉತ್ಪಾದನೆ ಋತುವಮಾನ ಅವಲಂಬಿಯಾಗಿರುವುದರಿಂದ ರೈತರು ತಜ್ಞರು, ಶಿಫಾರಸ್ಸು ಮಾಡಿರುವ ಪ್ರಮಾಣದಷ್ಟು ರಸಗೊಬ್ಬರಗಳನ್ನು ಬಳಸಲು ಸಾಧ್ಯವಾಗದಿರುವುದು. ಇದರಿಂದ ಕೃಷಿ ಉತ್ಪಾದಕತೆಗೆ ಹೊಡೆತ ಬಿದ್ದಿದೆ ; ವಿದೇಶಗಳ ಉತ್ಪಾದಕರ ಜೊತೆ ಹೋಲಿಸಿ ನೋಡಿದರೆ, ಭಾರತದಲ್ಲಿ ಕೃಷಿ ಉತ್ಪತ್ತಿ ಕಡಿಮೆಯೆ ಆದ್ದರಿಂದ ಉತ್ಪಾದಕತೆ ಹೆಚ್ಚಿಸಬೇಕಾದರೆ ರಸಗೊಬ್ಬರಗಳನ್ನು ಬಳಕೆ ಅತ್ಯವಶ್ಯಕವಾಗಿ ರೈತರು ತಜ್ಞರು ಶಿಫಾರಸ್ಸು ಮಾಡಿರುವ ಪ್ರಮಾಣಕ್ಕನುಗುಣವಾಗಿ ಬಳಸಬೇಕಾಗಿದೆ. ಇದು ಜೈವಿಕ ಕೃಷಿ, ಸ್ವಾಭಾವಿಕ ಕೃಷಿ, ವಲಯದಲ್ಲಿ ಸಂಶೋಧನೆಗಳ ಅಪೂರ್ಣವಾಗಿ ನಡೆದಿರುವುದರಿಂದ ರೈತರು ತಮ್ಮ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಲು ರಸಗೊಬ್ಬರಗಳ ಬಳಕೆಗೆ ಜೋತು ಬಿಟ್ಟಿರುವುದು ಅನಿವಾರ್ಯ

ಹಿಡುವಳಿಗನುಗುಣವಾಗಿ ರಸಗೊಬ್ಬರಗಳ ಬಳಕೆಯನ್ನು ಗಮನಿಸಿದಾಗ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಗಾತ್ರದ ಹಿಡುವಳಿಗಳನ್ನು ಹೊಂದಿರುವಂತಹ ರೈತರು ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸುತ್ತಿರುವುದು ದೊಡ್ಡ ಹಿಡುವಳಿಯ ರೈತರು ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸುತ್ತಿರುವುದು ಉಂಟು ಇದಕ್ಕೆ ಕೆಲವು ಸಲಹೆಗಳಿವೆ. ಸಣ್ಣ ಮತ್ತು ಅತಿ ಸಣ್ಣ ರೈತರು ತಂತ್ರಜ್ಞಾನದಿಂದ ವಂಚಿತರಾಗಿ , ಇಳುವರಿ ಹೆಚ್ಚಿಸಲು ರಸಗೊಬ್ಬರಗಳೇ ಕಾರಣ ಎಂದು ನಂಬಿ ಕುಳಿತಿರುವುದು. ಆದ್ದರಿಂದ ಅಧಿಕ ಇಳುವರಿ ತಳಿ ಬೀಜಗಳು ಉಪಯೋಗಿಸದೆ ನೀರಾವರಿ ಸಾಕಷ್ಟು ಉಪಯೋಗಿಸದೆ, ಬರಿ ರಸಗೊಬ್ಬರಗಳನ್ನು ಜಾಸ್ತಿ ಪ್ರಮಾಣದಲ್ಲಿ ಉಪಯೋಗಿಸುವುದರಿಂದ ಇಳುವರಿ ಹೆಚ್ಚಿಸಬಹುದು ಎಂಬ ನಂಬಿಕೆ ರೈತರಲ್ಲಿದೆ. ಆದರೆ ಇಲ್ಲಿ ರೈತರು ಮಾಡಬೇಕಾಗಿರುವುದೇನೆಂದರೆ ಅಧಿಕ ಇಳುವರಿ ತಳಿಗಳ ಮತ್ತು ನೀರಾವರಿ ಬಳಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿದರೆತಜ್ಞರ ಶಿಫಾರಸ್ಸಿನ ಪ್ರಮಾಣದ ರಸಗೊಬ್ಬರಗಳನ್ನು ಬಳಸಿದರೆ ಸಣ್ಣ ಹಿಡುವಳಿಗಳಿಗೆ ಹೆಚ್ಚಿನ ಇಳುವರಿ ಪಡೆಯಬಹುದು ಎಂಬ ಅಂಶ ಸರಿಯಾದ ತೀರ್ಮಾನವಾಗುತ್ತದೆ.

ರಸಗೊಬ್ಬರಗಳನ್ನು ಕೊಳ್ಳುವಲ್ಲಿ ಬಹಳಷ್ಟು ರೈತರು ಸಾಲಕ್ಕೆ ಮೊರೆ ಹೋಗುತ್ತಾರೆ, ಸಹಕಾರ ಸಂಘಗಳಿರಬಹುದು ಖಾಸಗಿಯವರಿಂದ ಕೊಳ್ಳಬಹುದು-ಯಾವುದೇ ಮೂಲವಾದರ ಶೇ. 70 ಕ್ಕಿಂತ ಹೆಚ್ಚು ರೈತರು ಸಾಲಕ್ಕೆ ಮೊರೆಹೋಗುತ್ತಾರೆ. ಹೀಗೆ ಸಾಲ ಮಾಡಿತಂದ ರಸಗೊಬ್ಬರಗಳನ್ನು ಬಳಸುತ್ತಿರುವುದರಿಂದ ರೈತರ ಉತ್ಪಾದನೆಯೂ ಹೆಚ್ಚದೆ,ಉತ್ಪನ್ನದಿಂದ ಲಾಭವು ದಕ್ಕದೇ ಸಾಲಗಾರರಾಗಿ ಬಿಡುತ್ತಾರೆ. ರೈತರು ಆತ್ಮಹತ್ಯೆಗಳಿಗೆ ಕೃಷಿ ಸಂಪನ್ಮೂಲಗಳನ್ನು ಕೊಳ್ಳಲು ಮಾಡುವ ಸಾಲವನ್ನು ತೀರಿಸಲಾಗದೆ ಇರುವುದು ಎಂಬ ಕಾರಣ ಸ್ಪಷ್ಟ. ಆದರೆ ಕೃಷಿ ಸಂಪನ್ಮೂಲಗಳಿಗೆ ಮಾಡುವ ಸಾಲ, ರೈತರಿಗೆ ಹೊರೆ ಇದ್ದಂತೆ, ಆದ್ದರಿಂದ ರೈತರು ಮಾಡುವ ಸಾಲಕ್ಕೆ ಇತಿ ಮಿತಿಗಳಿರಬೇಕು. ಇದರ ಜೊತೆಗೆ ಕೃಷಿ ಸಂಪನ್ಮೂಲಗಳಿಗೆ ಕೃಷಿ ಇಲಾಖೆ , ಸಹಕಾರಿ ಸಂಘಗಳು ನೀಡುವ ಸಹಾಯಧನದ ಬಗ್ಗೆ ಬಹಳಷ್ಟು ರೈತರಿಗೆ ಅರಿವೆ ಇಲ್ಲ, ಇದರಿಂದಾಗಿ ಸರಕಾರವು ಹಾಕಿ ಕೊಂಡಿರುವ ಅನೇಕ ಕಲ್ಯಾಣ ಯೋಜನೆಗಳು ರೈತರಿಗೆ ತಲುಪದೆ ಹೋಗಿವೆ. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ರೈತರಿಗೆ ಸಹಾಯಧನ ತಲುಪುವಂತೆ ಗ್ರಾಮಾಡಳಿತ ಮಾಡಬೇಕಾಗಿದೆ. ಹೀಗೆ ಸಹಾಯಧನ ಆಡಳಿತ ಸರಿಯಾಗಿ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಂಡರೆ ರೈತರ ಸಬಲೀಕರಣ ಆಗಬಹುದು ಎಂಬುದೇ ನನ್ನ ತೀರ್ಮಾನ.

ನಾನು ಅಧ್ಯಯನಿಸಿದ ಗ್ರಾಮಗಳಲ್ಲಿ ವರ್ಷದಿಂದ ವರ್ಷಕ್ಕೆ ಕೊಳವೆ ಬಾವಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಬಹಳಷ್ಟು ರೈತರು ಮುಂದಾಗಿದ್ದಾರೆ. ಹೀಗೆ ಕೊಳವೆ ಬಾವಿಗಳನ್ನು ಹೆಚ್ಚು ಹೆಚ್ಚು ನಿರ್ಮಿಸುತ್ತ ಹೋದರೆ, ಅಂತರ್ಜಲ ಪಾತಾಳಕ್ಕಿಳಿಯುವ ಸಂದರ್ಭ ಬರಬಹುದು. ಹೀಗೆ ಅಂತರ್ಜಲ 1000 ಅಡಿಗಳು ಅಗೆದರೂ ಸಿಗದಿದ್ದರೆ, ಮುಂದಿನ ದಿನಗಳಲ್ಲಿ ರೈತರಿಗೆ , ನೀರಿನ ಒರತೆಗಳೆ ಇಲ್ಲದೆ ಇಡೀ ಕೃಷಿ ವ್ಯವಸ್ಥೆ ಕುಸಿಯುವ ಸಾಧ್ಯತೆ ಇದೆ. ಆದ್ದರಿಂದ ರೈತರು ಸ್ವಯಂ ಪ್ರೇರಿತರಾಗಿ ಗ್ರಾಮಗಳಲ್ಲಿರುವ ಕೆರೆಗಳನ್ನು ಹೂಳೆತ್ತಬೇಕಾಗಿದೆ. ಜೊತೆಗೆ ತಮ್ಮ ಹೊಲಗಳಲ್ಲಿ ಹೊಂಡಗಳನ್ನು ನಿರ್ಮಿಸಿಕೊಳ್ಳಬೇಕಾಗಿದೆ. ಹೀಗೆ ಮಾಡುವುದರಿಂದ ಗ್ರಾಮಗಳಲ್ಲಿ ಅಂತರ್ಜಲವನ್ನು ಕಾಯ್ದುಕೊಂಡು ಹೋಗಬಹುದು. ಇದಕ್ಕೆ ರೈತರಷ್ಟೇ ಅಲ್ಲ, ಸ್ವಯಂ ಸೇವಾ ಸಂಸ್ಥೆಗಳು ಗ್ರಾಮ ಪಂಚಾಯ್ತಿ ಮುಂತಾದ ಸಂಸ್ಥೆಗಳು ಮುಂದಾಗಬೇಕಿದೆ. ಇದರಿಂದಾಗಿ ಗ್ರಾಮದ ಅಂತರ್ಜಲವನ್ನು ಕಾಯ್ದಿಟ್ಟುಕೊಳ್ಳುವದು ಕೃಷಿ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಬಳಕೆ ವ್ಯವಸ್ಥೆಗೂ ಸಹಾಯಕವಾಗಲಿದೆ , ಆದರೆ ನಾನು ಅಧ್ಯಯನಿಸಿದ ಗ್ರಾಮಗಳಲ್ಲಿ ಇನ್ನೂ ಈ ಚಿಂತನೆ ಮೊಳಕೆಯೊಡೆದಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ರೈತರಿಂದ ಹಿಡಿದು ಇನ್ನಿತರ ಸಂಘ ಸಂಸ್ಥೆಗಳು ಮುಂದಾಗಬೇಕಾಗಿದೆ.

ನಂತರ ಇನ್ನಿತರ ಅಂಶಗಳೆಂದರೆ ರೈತರು ಬಳಸುವ ರಸಗೊಬ್ಬರಗಳ ಗುಣಾತ್ಮಕತೆ ಕಳಪೆ ಮಟ್ಟದಲ್ಲಿರುವುದು. ಈ ಗುಣಾತ್ಮಕತೆಯನ್ನು ಸುಧಾರಿಸಬೇಕಾದರೆ ಕೃಷಿ ಇಲಾಖೆ ಇಲ್ಲಿ ಜವಾಬ್ದಾರಿ

ಪಾತ್ರವನ್ನು ವಹಿಸಬೇಕಾಗಿದೆ. ಈ ಜವಾಬ್ದಾರಿ ಪಾತ್ರವೆಂದರೆ ನಿಯಮಿತವಾಗಿ ರಸಗೊಬ್ಬರ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಗುಣಾತ್ಮಕತೆಯಲ್ಲಿ ಸರಿಯಾಗಿವೆಯೇ ಅಥವಾ ಇಲ್ಲವೆ ಎಂಬುದನ್ನು ದೃಢಪಡಿಸಿಬೇಕಾಗಿದೆ. ಆಗ ಅಮಾಯಕ ರೈತರು ರಸಗೊಬ್ಬರ ಮಾರಾಟದಾರರಿಂದ ಮೋಸ ಹೋಗುವ ಸಂದರ್ಭ ಬರಲಾರದು. ಯಾಕೆಂದರೆ ನಾನು ಅಧ್ಯಯನಕ್ಕೆ ಹೋಗಿದ್ದ ಗ್ರಾಮಗಳಲ್ಲಿ ಬಹಳಷ್ಟು ರೈತರು, ರಸಗೊಬ್ಬರಗಳ ಗುಣಮಟ್ಟದ ಬಗ್ಗೆ ದೂರುಗಳನ್ನು ಹೇಳಿದರು, ರಸಗೊಬ್ಬರಗಳಲ್ಲಿ ಮಣ್ಣು, ಕಲ್ಲು, ಇತ್ಯಾದಿ ವಸ್ತುಗಳನ್ನು ಕಲಮಿಶ್ರಿತ ಮಾಡಿ ರೈತರಿಗೆ ಮಾರಾಟ ಮಾಡಲಾಗುತ್ತದೆ. ತಾವು ಕೊಟ್ಟ ದುಡ್ಡಿಗೆ ಗುಣಮಟ್ಟದ ರಸಗೊಬ್ಬರಗಳು ದಕ್ಕದಿದ್ದರೆ, ರೈತರು ಬೆಳೆಗಳಿಗೆ ಹಾಕಿದರು ಉತ್ಪಾದನೆ ಹೆಚ್ಚುವುದಿಲ್ಲ. ಆದ್ದರಿಂದ ರೈತರು ಬೆಳೆ ಕಳೆದುಕೊಂಡು ಈ ಕಡೆ ಉತ್ಪಾದನಾ ವೆಚ್ಚವು ಸಿಗದಿದ್ದರೆ ರೈತರ ಆರ್ಥಿಕ ಸ್ಥಿತಿಗೆ ದೊಡ್ಡ ಹೊಡೆತೆ ಬೀಳುವುದರಲ್ಲಿ ಸಂದೇಹವಿಲ್ಲ. ಈಗಿನ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳ ಕಲುಷಿತ ರೈತರ ಆರ್ಥಿಕತೆಗೆ ಶಾಪವಾಗಿ ಪರಿಣಮಿಸಿದೆ. ಆದ್ದರಿಂದ ಕೃಷಿ ಇಲಾಖೆ ಅಧಿಕಾರಿಗಳು ಈ ನಿಟ್ಟಿನಲ್ಲಿ ವಿದ್ಯುಕ್ತರಾಗಿ ರೈತರಿಗೆ ಸಹಾಯ ಮಾಡಬೇಕಾಗಿದೆ, ಆದರೆ ರೈತರು ಸಹ ತಮಗೆ ರಸಗೊಬ್ಬರಗಳ ಗುಣಮಟ್ಟದ ಬಗ್ಗೆ ಸಂಶಯ ಬಂದರೆ ಕೂಡಲೆ ಕೃಷಿ ಇಲಾಖೆ ಅಧಿಕಾರಿಗಳ್ನನು ಸಂಪರ್ಕಿಸಿ ದೂರು ಸಲ್ಲಿಸಬೇಕಾಗಿದೆ, ಆದ್ದರಿಂದ ಈ ನಿಟ್ಟಿನಲ್ಲಿ ರೈತರು ಕೃಷಿ ಇಲಾಖೆ ಅಧಿಕಾರಿಗಳು ಪರಸ್ಪರ ಅರ್ಥ ಮಾಡಿಕೊಳ್ಳುವ ಮೂಲಕ ಕೆಲಸ ಮಾಡಬೇಕಾಗಿದೆ.

ನಾನು ಸಮೀಕ್ಷೆ ಮಾಡಿದ ಗ್ರಾಮಗಳಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದವರೂ, ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಅಪಾರ ಪ್ರಮಾಣದಲ್ಲಿದೆ. ಇದಕ್ಕೆ ಕಾರಣವೆಂದರೆ, ಅಕ್ಷರತೆ ಹೊರಗಿನ ಪ್ರಪಂಚದ ಆಗುಹೋಗುಗಳನ್ನು ತಿಳಿದುಕೊಳ್ಳಲು ಸಹಾಯವಾಗಬಹುದು. ಆದರೆ ಕೌಶಲ್ಯ, ಜ್ಞಾನ ಹೆಚ್ಚಿಸುವಲ್ಲಿ ವಿಫಲಗೊಂಡಿದೆ. ಬರಿ ಅಕ್ಷರಸ್ಥರಾಗಿದ್ದ ಮಾತ್ರಕ್ಕೆ ಇವರು ಸಣ್ಣ ಕೈಗಾರಿಕೆ , ಗುಡಿ ಕೈಗಾರಿಕೆ, ಮುಂತಾದವುಗಳನ್ನು ಕೈಗೊಳ್ಳಲು ಸಾದ್ಯವಿಲ್ಲ. ಇಂತಹ ಅಕ್ಷರಸ್ಥ ರೈತರಿಗೆ ಉದ್ಯಮಶೀಲತೆ ನಿರ್ವಹಣೆ ಲೆಕ್ಕಪತ್ರ, ಹಣಕಾಸು ಇತ್ಯಾದಿ ವಲಯಗಳಲ್ಲಿ ಸರಕಾರ ತರಬೇತಿ ನೀಡಬೇಕಾಗುತ್ತದೆ. ಹೀಗೆ ತರಬೇತಿ ನೀಡುವುದರಿಂದ ಗ್ರಾಮೀಣ ಜನರಲ್ಲಿ ಉದ್ಯಮ ಶೀಲತೆ ಬರುತ್ತದೆ. ಇವರ ಕಡೆಗೆ ಕೃಷಿಯಲ್ಲಿ ಅದೇ ರಾಗಿ, ಭತ್ತ, ಬೆಳೆಯುವುದು ಬಿಟ್ಟು ಆಧುನಿಕಕೃಷಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಅಕ್ಷರಸ್ಥರಾದರೆ ಕೌಶಲ್ಯಗಳಿಗೆ ಜ್ಞಾನ ಸಂಗ್ರಹಕ್ಕೆ ಅನುಕೂಲಕರವಾಗುತ್ತದೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿ ಆಡಳಿತ ಗ್ರಾಮಸ್ಥರಿಗೆ ತರಬೇತಿ ಶಿಬಿರಗಳನ್ನು ಕಾರ್ಯಾಗಾರಗಳನ್ನು ಸಂಘಟದ ಬೇಕಾಗುತ್ತದೆ. ಆದರೆ ಇಂತಹ ಚಿಹ್ನೆಗಳು ನಾನು ಸಮೀಕ್ಷೆ ಮಾಡಿದ ಗ್ರಾಮಗಳಲ್ಲಿ ಕಂಡು ಬರುವುದಿಲ್ಲ. ಆದರೂ ಅಕ್ಷರಸ್ಥ ರೈತರು ತಾವೆ ಕೃಷಿ ಇಲಾಖೆ, ಸಣ್ಣ ಕೈಗಾರಿಕೆ, ರೇಷ್ಮೆ ಇಲಾಖೆ, ಮುಂತಾದವುಗಳಿಗೆ ಭೇಟಿ ಕೊಡುವ ಅಭ್ಯಾಸವೂ ಇಲ್ಲ, ಇದರಿಂದಾಗಿ ಇವರು ಅಕ್ಷರಸ್ಥರಾದರು ಉದ್ಯಮಶೀಲತೆ ಬೆಳೆಸಿಕೊಳ್ಳುವುದರಲ್ಲಿ

ವಿಫಲವಾಗಿದ್ದಾರೆ ಇದನ್ನು ಗ್ರಾಮ ಪಂಚಾಯಿತಿ ಗುರುತಿಸಿ, ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕಾಗಿದೆ ಇಲ್ಲದೇ ಹೋದರೆ ರೈತರು ಅಕ್ಷರಸ್ಥರಾದರೂ ಬಡತನ, ನಿರುದ್ಯೋಗ, ಕೆಲಸಕ್ಕೆ ವಲಸೆ ಹೋಗುವ ವಿಷ ವರ್ತುಲದಿಂದ ಹೊರಬರಲಾರರು, ಆದ್ದರಿಂದ ಉದ್ಯಮಶೀಲತೆಯನ್ನು ಬೆಳಸಬಹುದಾಗಿದೆ.

ಮಾರ್ಜೇನಹಳ್ಳಿಯಲ್ಲಿ ಉಳಿದ ಗ್ರಾಮಗಳಲ್ಲಿ ಸ್ವಸಹಾಯ ಹಾಗೂ ಸ್ತ್ರೀ ಶಕ್ತಿ ಸಂಘಗಳು ಕೆಲಸ ಮಾಡುತ್ತಿವೆ. ಕುರಿ ಸಾಕಾಣಿಕೆ, ದಿನಸಿ ಅಂಗಡಿಗಳು, ಟೈಲರಿಂಗ್ ಸಣ್ಣ ಪ್ರಮಾಣದ ಕೋಳಿ ಸಾಕಾಣಿಕೆ ಇತ್ಯಾದಿ ಕಸುಬುಗಳನ್ನು ಸ್ವಸಹಾಯ ಸಂಘಗಳ ಸದಸ್ಯರು ಮಾಡುತ್ತಿದ್ದಾರೆ. ಈ ಸ್ವಸಹಾಯ ಹಾಗೂ ಸ್ತ್ರೀ ಶಕ್ತಿ ಸಂಘಗಳು ಗಮನಾರ್ಹ ರೀತಿಯೇ ಕೆಲಸ ಮಾಡುತ್ತಿವೆ, ಬಡತನ ರೇಖೆಗಿಂತ ಕೆಳಗಿರುವವರನ್ನು ಮಹಿಳೆಯರನ್ನು ಆರ್ಥಿಕ ಸಬಲೀಕರಣ ಗೊಳಿಸಲು ಇವು ಸಹಾಯಕವಾಗಿವೆ, ಹೀಗೆ ಸಹಾಯಕವಾಗುವುದರಿಂದ, ಆರ್ಥಿಕ ಶಕ್ತಿಯನ್ನು ತುಂಬುತ್ತಿವೆ, ಇಲ್ಲಿ ಮಹಿಳೆಯರು ಮನೆಗಳಲ್ಲಿ ಕೋಳಿ ಸಾಕಾಣಿಕೆ, ಬುಟ್ಟಿ ಹೆಣೆಯುವ ಇತ್ಯಾದಿ ಕೆಲಸಗಳನ್ನು ಮಾಡಿ ಸ್ತ್ರೀ ಶಕ್ತಿ ಸಂಘಗಳಿಗೆ ಒದಗಿಸುವ ಅಲ್ಪ ಮೊತ್ತದ ಹಣವನ್ನು ಪ್ರತಿವಾರಕ್ಕೊಮ್ಮೆ ಇಮ್ಮಡಿಗೊಳಿಸುತ್ತಾರೆ. ಆದ್ದರಿಂದ ಈ ಪರಿಕಲ್ಪನೆ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಚೈತನ್ಯ ಗೊಳಿಸಲು ಸಹಾಯವಾಗಿವೆ. ಆದರೆ ಈ ಸಂಘಗಳು ರಾಜಕೀಕರಣ ಗೊಳ್ಳುವ ಹಾದಿಯಲ್ಲಿ ನಡೆದಿರುವುದು ಶೋಚನೀಯ. ಆದ್ದರಿಂದ ರಾಜಕೀಯಕರಣದಿಂದ ಈ ಸಂಘಗಳು ಮುಕ್ತಕವಾಗಬೇಕಾಗಿದೆ. ಸ್ತ್ರೀ ಶಕ್ತಿ ಹಾಗೂ ಸ್ವಸಹಾಯ ಸಂಘಗಳನ್ನು ರಾಜಕಾರಣಿಗಳು ಪೋಷಿಸುವುದು. ಚುನಾವಣೆ ಸಂದರ್ಭದಲ್ಲಿ ತಮ್ಮ ತಮ್ಮ ಪಕ್ಷಗಳಿಗೆ ಮತ ಹಾಕುವಂತೆ ಪ್ರಚೋದಿಸುತ್ತಿರುವ ಅಂಶ ನಾನು ಗ್ರಾಮಗಳಿಗೆ ಅಧ್ಯಯನ ಕೈಗೊಂಡಾಗ ಕಂಡು ಬಂತು. ಆದರೆ ಇದನ್ನು ಯಾರೂ ಸಹ ಪ್ರಶ್ನಿಸುತ್ತಿಲ್ಲ. ಆದ್ದರಿಂದ ಗ್ರಾಮೀಣ ಆರ್ಥಿಕ ವ್ಯವಸ್ಥೆಗೆ ಆಶಾದಾಯ ಕವಾಗಿರುವ ಈ ಸಂಘಗಳು ಆರ್ಥಿಕ ದೃಷ್ಟಿಯಿಂದ ಕ್ರಿಯಾ ಶೀಲಗೊಳ್ಳಬೇಕಾದರೆ ಹಾಗೂ ರಾಜಕೀಯ ವ್ಯಕ್ತಿಗಳಿಂದ ದೂರ ಉಳಿಯಬೇಕಾಗಿದೆ. ಹೀಗೆ ರಾಜಕೀಯ ವ್ಯಕ್ತಿಗಳಿಂದ ದೂರ ಉಳಿಯುವವರ ಮೂಲಕ ಮೌಲ್ಯರೂಪದ ಆರ್ಥಿಕ ಸಬಲೀಕರಣ ಗೊಳ್ಳುವುದು. ರಸಗೊಬ್ಬರಗಳ ಬೇಡಿಕೆ ಪೂರೈಕೆಯನ್ನು ಕರ್ನಾಟಕ ರಾಜ್ಯದ ಜಿಲ್ಲಾವಾರು ವಿಶ್ಲೇಷಣೆಗೆ ತೆಗೆದುಕೊಂಡರೆ ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ ಜಿಲ್ಲೆಯಲ್ಲಿ ಬೇಡಿಕೆಗಿಂತ ಪೂರೈಕೆಯೇ ಜಾಸ್ತಿ ಇದೆ. ಆದರೆ ಅಧ್ಯಯನದ ಸಂದರ್ಭದಲ್ಲಿ ಕಂಡು ಬಂದ ಅಂಶವೇ ಬೇರೆ, ಕೃಷಿ ಇಲಾಖೆ ನೀಡುವ ಅಂಕಿ ಸಂಖ್ಯೆಗಳೆ ಬೇರೆಯಾಗಿ ಗೋಚರಿಸುತ್ತದೆ; ಅಧ್ಯಯನ ಸಂದರ್ಭದಲ್ಲಿ ರೈತರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅಂಕಿ ಸಂಖ್ಯೆಗಳಿಗೆ ಹೋಲಿಸಿದರೆ ತದ್ವಿರುದ್ಧವಾಗಿವೆ. ಏಕೆಂದರೆ ಬಹಳಷ್ಟು ರೈತರು ಉತ್ಪಾದನಾ ಅವಧಿಯಲ್ಲಿ ರಸಗೊಬ್ಬರಗಳ ಕೊರತೆಯನ್ನು ಅನುಭವಿಸುತ್ತಿದ್ದಾರೆ, ಆದರೆ ಕೃಷಿ ಇಲಾಖೆ ನೀಡಿರುವ ಅಂಕಿ ಸಂಖ್ಯೆಗಳ ಪ್ರಕಾರ ಬೇಡಿಕೆಗಿಂತ ಪೂರೈಕೆಯೇ ಅಧಿಕವಾಗಿದೆ. ಬೇಡಿಕೆ ಬೆಂಗಳೂರು ನಗರದ ವ್ಯಾಪ್ತಿಯ ರೈತರಲ್ಲಿ ಪೂರೈಕೆಗಿಂತ ಕಡಿಮೆ ಇದೆ ಹಾಗಯೇ ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ

ಬೇಡಿಕೆಗಿಂತ ಪೂರೈಕೆ ಅಧಿಕವಾಗಿದೆ. ಈ ಎಲ್ಲಾ ಅಂಶಗಳ ಪರಿಗಣಿಸಿ ತೆಗೆದುಕೊಳ್ಳುವ ತೀರ್ಮಾನವೆಂದರೆ ಅಂಕಿ ಸಂಖ್ಯೆಗಳು ಏನೆ ಹೇಳಲಿ ರೈತರ ಸಮಸ್ಯೆಗಳನ್ನು ವಸ್ತು ಸ್ಥಿತಿ ದೃಷ್ಟಿಕೋನದಲ್ಲಿ ಅಭ್ಯಸಿಸಿ ಅವನ್ನು ಪರಿಹರಿಸುವ ದಾರಿಯಲ್ಲಿ ನಡೆಯಬೇಕಾಗಿದೆ. ಆದ್ದರಿಂದ ರೈತರ ಸಮಸ್ಯೆಗಳನ್ನು ಅರಿಯಲು ಇಲಾಖೆಯಲ್ಲಿ ಕೃಷಿ ವಿಜ್ಞಾನಿಗಳನ್ನೊಳಗೊಂಡ ತಂಡವನ್ನು ರಚಿಸಬೇಕಿದೆ. ಕೇವಲ ವಿಸ್ತರಣೆಯನ್ನಷ್ಟೇ ಮಾಡದೆ ವಿಸ್ತರಣೆಯ ಜೊತೆಗೆ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಸ್ಪಷ್ಟವಾಗಿ ಅರ್ಥೈಸಿ ಪರಿಹಾರ ಒದಗಿಸಬೇಕಾಗಿದೆ. ಬರೀ ವರದಿಗಳಲ್ಲಿ ರೈತರ ಸಮಸ್ಯೆ ಬಗೆಹರಿದಿದೆ ಎಂದು ಹೇಳುವುದಕ್ಕಿಂತ, ವಸ್ತು ಸ್ಥಿತಿಯನ್ನು ಗಮನಿಸುವುದು ಸರಕಾರಿ ನಿರ್ಲಕ್ಷ್ಯ ತೋರದಿರುವುದು ಆಗಬೇಕಾಗಿದೆ. ವರದಿಗಳಲ್ಲಿ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಇದ್ದರೂ, ಗ್ರಾಮಗಳ ಅಧ್ಯಯನ ಸಂದರ್ಭದಲ್ಲಿ ಬಹಳಷ್ಟು ರೈತರು ರಸಗೊಬ್ಬರಗಳ ಪೂರೈಕೆಯ ಕೊರತೆಯ ಬಗ್ಗೆ ದೂರುಗಳನ್ನು ನೀಡಿದ್ದಾರೆ, ಅದ್ದರಿಂದ ಈ ನಿಟ್ಟಿನಲ್ಲಿ ಸರಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ರಸಗೊಬ್ಬರಗಳ ಉತ್ಪಾದನೆಗೆ ಸಂಬಂಧಿಸಿದಂತೆ ಸರಕಾರ ನೀಡುವ ಸಹಾಯಧನದ ಬಗ್ಗೆ ಈಗ ನೋಡೋಣ, ಸರಕಾರ ರಸೊಗಬ್ಬರಗಳಿಗೆ ನೀಡುವ ಸಹಾಯಧನವನ್ನು ರದ್ದುಪಡಿಸಬೇಕೆಂದು ಡಬ್ಲ್ಯೂ.ಟಿ.ಓ ಹೇಳುತ್ತಿದೆ. ಇದರಿಂದ ಕೃಷಿ ಉತ್ಪನ್ನಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ಸಹಜವಾಗಿ ಸ್ಪರ್ಧಾತ್ಮಕ ಬೆಲೆಗಳಿಲ್ಲದೆ, ಅನವಶ್ಯಕವಾಗಿ ಆರ್ಥಿಕ ವ್ಯಾಪಾರ ಹದಗೆಡುತ್ತದೆ. ಆದರೆ ಕೃಷಿ ಸಂಪನ್ಮೂಲಗಳಿಗೆ ಸಹಾಯಧನ ನೀಡಬೇಕೋ ಅಥವಾ ಕೃಷಿ ಉತ್ಪನ್ನಗಳಿಗೆ ಸಹಾಯಧನ ನೀಡಬೇಕೋ ಎಂಬ ಚರ್ಚೆಯನ್ನು ಮಾಡಿರುವುದುಂಟು. ಕೃಷಿ ಉತ್ಪನ್ನಗಳಿಗೆ ಸಹಾಯಧನ ನೀಡಿದರೆ ಅದು ರೈತರಿಗೆ ತಲುಪದೆ ಹೋಗಬಹುದು. ಬಹುತೇಕವಾಗಿ ರೈತರ ಉತ್ಪನ್ನಗಳ ಮಾರುಕಟ್ಟೆ ಬೆಲೆಗಿಂತ ಕಡಿಮೆ ಪ್ರಮಾಣದಲ್ಲಿ ಕನಿಷ್ಠ ಬೆಂಬಲ ಬೆಲೆ ಇರುತ್ತದೆ. ಆದ್ದರಿಂದ ಈ ರೀತಿ ಉತ್ಪನ್ನ ನಿರ್ದಿಷ್ಟ ಸಹಾಯಧನದಿಂದ ರೈತರಿಗೇನೂ ಉಪಯೋಗವಿಲ್ಲ. ಇದನ್ನು ಪರಿಗಣಿಸಿಯೇ ಕೃಷಿ ಸಂಪನ್ಮೂಲಗಳಾದ ರಸಗೊಬ್ಬರಗಳಿಗೆ ಅದರಲ್ಲೂ ಕಾರ್ಖಾನೆಯ ಹಂತದಲ್ಲಿ ಕಾರ್ಖಾನೆ ಮಾಲೀಕರಿಗೆ ಸಹಾಯಧನ ನೀಡಲಾಗುತ್ತದೆ. ಆದರೆ ಈ ಸಹಾಯಧನ ರೈತರಿಗೆ ಮುಟ್ಟುವಲ್ಲಿ ಬಹಳಷ್ಟು ವಿಫಲವಾಗಿದೆ ಎಂಬುದೆ ನನ್ನ ತೀರ್ಮಾನ.

ಚಿಲ್ಲರೆ ವ್ಯಾಪಾರಿಗಳ ಅಧ್ಯಯನ ಸಂದರ್ಭದಲ್ಲಿ ಬಹಳಷ್ಟು ವ್ಯಾಪಾರಸ್ಥರು ಚೀಲದ ಮೇಲೆ ನಮೂದಿಸಿರುವ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ ಎಂಬ ಅಂಶವನ್ನು ಕಂಡುಕೊಳ್ಳಲಾಯಿತು. ಆದರೆ ಸರಕಾರ ನೀಡುವ ಸಹಾಯಧನ ಕಾರ್ಖಾನೆ ಮಾಲೀಕರಿಗೆ ಲಾಭದಾಯಕವಲ್ಲ ಎಂಬುದು ನನ್ನ ಅಭಿಪ್ರಾಯ. ಹಾಗಂತ ಸಹಾಯಧನ ತೆಗೆದರೆ, ರಸಗೊಬ್ಬರಗಳ ಬೆಲೆಗಳು

